1931-38

Regd.No.B.2304

1931

Kumt... No ...31

ಕರ್ನಾಟಕ ಧುರೀಣ

THE KARNATAK LEADER.

೧೯೧೯ ರಲ್ಲಿ ಪ್ರಾರಂಭಿಸಲ್ಪಟ್ಟಿತು.

ಪ್ರತಿ ಮಂಗಳವಾರವೂ ಪ್ರಕಟವಾಗುವ ಉಜ್ವಲ ರಾಷ್ಟ್ರಪಕ್ಷದ ವಾರ ಪತ್ರಿಕೆ.

ಸಂಪಾದಕ:—ಗಣೇಶ ರಾಮ ಯಾಜಿ. (*Editor*:—G. R. YAJI.)

ವಾರ್ಷಿಕ ವರ್ಗಣಿ ಮೆ. ಖ.ಸೇರಿ ೩–೦–೦. | ನಿಸರ್ಗದಿರಾಮೆ ಕಸ್ತೂರಿಲಸಮಾರೋಪ ಸುಕೃತಿ ॥ ಕೃತಿಮಾಲಾಕಾರೊ ಕಸ್ತೂರಿಲಮಪಿ ಕೃತ್ರಾಪಿ ನಿಕ್ಷೇ ॥ | ಗಂಡಿ ಸಂಜಿಕೆಗೆ ೧ ಆಣೆ ಪೈಸೆ.
ಕೈಂ ಕೋ ಜಾನೀತೆ ಯತ್ರಯಮಿಹ ಕೋಣಾನ್ತಗತೊ ॥ ಜಗಜ್ಜಾಲೆ ಕರ್ತಾ ಕುಸುಮಭರಸೌಂಭ್ಯಭರಿತಮ್ ॥

ಪರ್ಯಾಯ Vol 13 | ಕುಮಟಾ—ಮಂಗಳವಾರ, ತಾರೀಕು ೭ ನವಂಬರ ೧೯೩೧ನೇ ಇಸವಿ. | ಸಂಚಿಕೆ ೦೭ No. 17

'ಝಿನಿಥ್' ದ್ರಾಕ್ಷಾಸವ.

24-12]

ಈ ದ್ರಾಕ್ಷಾಸವವು ಪ್ರಸಿದ್ಧ ಆಯುರ್ವೇದಿಕ ಪದ್ಧತಿಯಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ಶ್ರಥಪಾವಸ್ಥೆಯಲ್ಲಿರುವ ಕ್ಷಯವೂ, ಪಮ್ಮು, ಕೆಮ್ಮು ಇತ್ಯಾದಿ ಎದೆಯ ವಿಕಾರಗಳೂ ಶೈತ್ಯ, ನೆಗಡಿ, ಅರುಚಿ, ಅಪಚನ, ಮಲಬದ್ಧತೆ, ಹುಳತೇಗು ಬರೋಣ, ಅವ್ಯವಸ್ಥಿತ್ತ, ವಾಂತಿ, ಕಂಠರೋಗ ಇತ್ಯಾದಿ ವಿಕಾರಗಳೆಲ್ಲಾ ಸಂಪೂರ್ಣವಾಗಿ ನಾಶ ಹೊಂದುವವು. ಸಣ್ಣ ಹುಡುಗರ ನಾಯಿಕೆಮ್ಮಿನ ಮೇಲೆ ಇದರ ಉತ್ತಮ ಉಪಯೋಗವಾಗುತ್ತದೆ. ಇದು ಸೇವಿಸಲಿಕ್ಕಾದರೂ ಮಧುರವಾಗಿದ್ದು ಇದರ ನಿಯಮಿತ ಸೇವನೆಯಿಂದ ಮಲಶುದ್ಧಿಯಾಗಿ ಜನ್ನಾಗಿ ಹಸಿವೆಯಾಗುವದು. ಪಚನಶಕ್ತಿಯು ಬೆಳೆದು ಬಾಯಿಗೆ ರುಚಿಯುಂಟಾಗುವುದು. ರಾತ್ರಿ ಮಲಗುವ ಸಮಯದಲ್ಲಿ ಈ "ಝೀನಿಥ್ ದ್ರಾಕ್ಷಾಸವ" ವನ್ನು ಉಪಯೋಗಿಸಿದರೆ ನಿದ್ದೆ ಜನ್ನಾಗಿ ಹತ್ತುವುದಲ್ಲದೆ ಬೆಳಿಗ್ಗೆ ಎದ್ದಮೇಲೆ ಕೆಲಸಮಾಡುವ ಉತ್ಸಾಹವೂ, ಚುರುಕುತನವೂ ಪ್ರಾಪ್ತವಾದದ್ದು ಕಂಡುಬರುವದು.

೧೫ ಪೌಂಡಿನ ಕ್ರಯ ೧–೧೫–೦, ೧ ಪೌಂಡಿನ ಕ್ರಯ ೧–೪–೦, ಅರ್ಧ ಪೌಂಡಿನ ಕ್ರಯ ೦–೧೫–೦. ವ್ಹಿ. ಪಿ. ಖರ್ಚು ಪ್ರತ್ಯೇಕ.

ವಿಳಾಸಃ— The Zenith Chemical Works,
1-11 B.] Arab Building, BOMBAY, No. 2.
ಎಸ್. ಎಲ್. ಧಾಕಪ್ಪ ಎಂಡ್ ಬ್ರದರ ಕೆಮಿಸ್ಟ್ಸ ಎಂಡ್ ಡ್ರಗಿಸ್ಟ್ಸ ಸಿಸಿ.

ಪ್ರೋತ್ಸಾಹಿಸಿರಿ. ಸ್ವದೇಶೀ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ!

ಅಖಿಲ ಕ. ಸ್ವದೇಶಿ ಸಭಾ ಧಾರವಾಡ ಇವರಿಂದ ಸರ್ಟಿಫಿಕೇಟು ಪಡೆದ

ಕರ್ನಾಟಕ ಸೋಪ್ ವರ್ಕ್ಸ, ಉಡುಪಿ.

ಎಂಬ ಶುದ್ಧ ಸ್ವದೇಶೀ ಸಂಸ್ಥೆಯವರಿಂದ ತಯಾರಿಸಲ್ಪಟ್ಟ ಸಾಬೂನುಗಳು.

"ತಕ್ಲಿ ಬಾರ್ಸ್" "ತಕ್ಲಿ ಟೇಬ್ಲೆಟ್ಸ್" "ಕರ್ನಾಟಕ ಬಾರ್ ಸೋಪು" "ಡಂಬೆಲ್ಸ್ ಬಾರ್ ಸೋಪು"
"ಸ್ವಾನ್ ಬ್ರೌಂಡ್ ಪೇಲ್ ಸೋಪು" "ಲಕ್ಷ್ಮೀ ವಿಲಾಸ ಬ್ರೌನ್ ವಿಂಡ್ಸರ ಸೋಪು"
"ಟರ್ಕಿಶ್ ಬಾರ್" "ಕರ್ನಾಟಕ ಕೃಷ್ಣ ಬೊರಿಕ್ಸ್ ಸೋಪು" "ಕರ್ನಾಟಕ ಬೊರೇಕ್ಸ್ ಟೇಬ್ಲೆಟ್ಸ್"
"ಕರ್ನಾಟಕ ವೊಶ್ ಸೋಪು" ಇತ್ಯಾದಿ.

ಈ ಸಾಬುನುಗಳಲ್ಲಿ ಕ್ಯಾಜೆಗಳ ಕೊಬ್ಬು ಮೊದಲಾದ
24-12] ಯಾವ ಹಾನಿಕರ ಪದಾರ್ಥಗಳೂ ಮಿಶ್ರವಾಗಿಲ್ಲ.

ಒಮ್ಮೆ ತರಿಸಿ ವಿದೇಶೀಯ ಸೋಪುಗಳೊಡನೆ ಹೋಲಿಸಿ ನೋಡಿರಿ.

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮ ಕರ್ನಾಟಕ ಕೃಷ್ಣಾ ಬೊರೆಕ್ಸ್ ಸೋಪಿಗೆ ಶುತ್ತಿದರಿಸಿರುಗಳನ್ನು ಕೆಳಗಿನ ವಿಳಾಸದವರಿಗೆ ತಂದುಕೊಟ್ಟರೆ ನಮ್ಮ ಸುಪ್ರಸಿದ್ಧ ತಕ್ಲಿ ಟೇಬ್ಲೆಟ್ಸ್ ಎರಡನ್ನು ಇನಾಮಾಗಿ ಕೊಡಲಾಗುವದು.

ಹೆಚ್ಚಿನ ಮಾಹಿತಿ ಮತ್ತು ಕಿಮ್ಮತ್ತು ಪಟ್ಟಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

KARNATAKA SOAP WORKS, UDIPI(South Kanara)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಹೆಡ್ ಆಫೀಸು—ಉಡುಪಿ.

ಬ್ರಾಂಚ ಆಫೀಸುಗಳು—ಬ್ರಹ್ಮಾವರ, ಕುಮಟಾ ಮತ್ತು ಕಾರವಾರ.

ನಿರಖು ಠೇವಣಾತಿಗಳು ಮತ್ತು ಬಡ್ಡಿದರ

೩	ತಿಂಗಳಿಂದ	೬ ತಿಂಗಳ ವರೆಗೆ	೫-೮-೦
೬	,,	೯ ,,	೬-೦-೦
೯	,,	೧೨ ,,	೬-೮-೦
೧೨	,,	೧೮ ,,	೬-೧೨-೦
೧೮	ತಿಂಗಳ ಮೇಲೆ		೭-೦-೦

ಮೇಲೆ ಕಾಣಿಸಿದ ಬಡ್ಡಿಯಿಂದ ನಿರಖು ಠೇವಣಾತಿಗಳು ಅಂಗೀಕರಿಸಲ್ಪಡುತ್ತವೆ ಇತರ ವಿಷಯಗಳ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ

Kumta, 1-9-31 — A. S. Kini. Agent, The Canara Industrial & Banking Syndicate, Ltd, KUMTA.

ಕರ್ಣಿಕ

ಎಗ್ಯುಮಿಕ್ಶ್ಚರ್.

ಮಲೇರಿಯಾ, ಇನ್‌ಫ್ಲುಯೆಂಝಾ, ನಡುಕಜ್ವರಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಬೆವರು ಬಂದು, ಜ್ವರವು ಬಿಡುತ್ತದೆ. ಬೆಲೆ ಬಾಟ್ಲಿ ಒಂದಕ್ಕೆ ೧ಳ ಆಣೆ. ಟಪಾಲ ಖರ್ಚು ಬೇರೆ.

ಕರ್ಣಿಕ ಬ್ರದರ್ಸ,
56, ಗಿರಗಾಂವ, ಮುಂಬಯಿ.
ಶಿರ್ಕಿಯಲ್ಲಿ ಏಜಂಟರು:— [25-11
ಎಸ್. ಎಲ್. ಧಾಕಪ್ಪ ಎಂಡ್ ಬ್ರದರ್ಸ್.

ರೀತಿ ಕಸರು ಆಗುವುದು ಸ್ವಾಭಾವಿಕವೇ ಸರಿ. ಈ ರಸ್ತೆಗೆ ಒಳ್ಳೇ ತರದ ಮಣ್ಣನ್ನೂ ಹಾಕುವಂತೆ ತೋರಲಿಲ್ಲ. ರಸ್ತೆಯ ಎಡಬಲದ ಗಟಾರಿಂದಲೇ ಕೆಟ್ಟಮಣ್ಣು ತೆಗೆದು ಅದನ್ನೆ ಹರವಿಬಿಡುವುದು ಕಂಡುಬರುತ್ತಿದೆ ಅದರಿಂದ ತುಸು ಮಳೆ ಬಿತ್ತೆಂದರೆ ವಾಹನಗಳು ಅಡ್ಡಾಡುವುದೂ ಜನರು ತಿರುಗಾಡುವುದೂ ಬಹು ಕಷ್ಟವಾಗುತ್ತದೆ. ವಾಹನಗಳು ಹುಗಿದು ಬೀಳುತ್ತಿವೆ. ಕೆಲವು ದಿನಗಳ ಹಿಂದೆ ಒಂದು ಮೋಟರು ಲಾರಿಯು ಈ ದಾರಿಯಿಂದ ಹೋಗುತ್ತಿರುವಾಗ ೨-೩ ಕಡೆಗೆ ಜಾರಿ ಗಟರಿನಲ್ಲಿ ಬಿದ್ದುದು ನಮಗೆ ತಿಳಿದುಬಂದಿದೆ. ಇಂಜಿನಿಯರ ಖಾತೆಯವರು ಈ ರಸ್ತೆಯನ್ನು ಹೀಗೆ ದುರ್ಲಕ್ಷಿಸಿರುವುದು ಕೋಜನೀಯವು. ಸಿರ್ಸಿಯು ಅಡಿಕೆ ವ್ಯಾಪಾರದ ಕೇಂದ್ರವಾಗಿದ್ದು ಸ್ವಾದಿ, ಭರತನಳ್ಳಿ, ಯಲ್ಲಾಪುರ ಮೊದಲಾದ ಕಡೆಗಳಿಂದ ಹೆಂಗಾಮಿನಲ್ಲಿ ನೂರಾರು ಗಾಡಿಗಳು ತಿರುಗಾಡುತ್ತಿರುವವು ಇಂತಹ ರಸ್ತೆಯಲ್ಲಿ ಗಾಡಿಗಳನ್ನು ನಡಿಸುವುದು ಕಷ್ಟ ಸಾಧ್ಯವೇ ಸರಿ. ಮೊದಲೇ ಏನು ಇಳಕಲು ಉಳ್ಳ ಇಕ್ಕಟ್ಟಾದ ರಸ್ತೆ. ಮೇಲೆ ಹುಡಿಬಿದ್ದಾಗ ವಿಪರೀತ ಕಸರು, ಬಿಸಿಲು ಬಿದ್ದಾಗ ವಿಪರೀತ ಧೂಳು. ಇಂತಹ ರಸ್ತೆಯಲ್ಲಿ ವ್ಯವಹಾರ ನಡಿಸಬೇಕಾದ ಜನರ ಹಾಗೂ ವಾಹನಗಳ ಕಷ್ಟವನ್ನು ಪ್ರತ್ಯಕ್ಷ ನೋಡಿಯೇ ಅನುಭವಿಸಬೇಕು. ಸಿರ್ಸಿ ಸಿದ್ದಾಪುರ ರಸ್ತೆಯನ್ನು ಒಳ್ಳೆಯ ಸ್ಥಿತಿಗೆ ಕಂದಂತೆ ಈ ರಸ್ತೆಯನ್ನೂ ಹದುಪುಡಿಕ್ಕೆ ಇಂಜಿನಿಯರ ಖಾತೆಯವರು ಲಕ್ಷ್ಯಪೂರೈಸುವರೇ?

ಜುಣುಂಚುಮಿಣುಂಕು!!

ದಿ ಪೀಪಲ್ಸ ಹಿನ ಪ್ರೊವಿಡೆಂಟ ಮತ್ತು ಜನರಲ್ ಇನ್ಶೂರನ್ಸ ಎಂಬ ವಿಮಾಕಂಪನಿಯು ಈ ಚೆಗೆ ಕೆಲವು ವರ್ಷಗಳಿಂದ ಹುಟ್ಟಿಕೊಂಡು ಜನರನ್ನು ತನ್ನ ಬೇರೆ ಬೇರೆ ಆಶ್ವಾಸನಗಳಿಂದ ಮರುಳು ಮಾಡಿತು. ಶಾಖೋಪಶಾಖೆಗಳನ್ನು ಹುಟ್ಟಿಸಿತು. ಜನರಿಂದ ಲಕ್ಷಾಂತರ ರೂ. ಗಳನ್ನು ಸೆಳಕೊಂಡಿತು. ಕೊನೆಗೆ ಅದರ ನಿಜ ರೂಪವು ಬೈಲಿಗೆ ಬಂತು. ಆ ಪರಿ ಚಾಲಕರು ಪಂಚೆಕರ ಕೂಟದವರೆಂದು ಗೊತ್ತಾಯಿತು. ಅವರ ಮೇಲೆ ಖಟ್ಲೆಯಾಯಿತು. ವಿಚಾರಣೆಗಾಗಿ ಶ್ರೀ. ಗುಂಡಿಲ ಜನಾರ್ದನ ರಾಯರು ಜಜ್ಜರಾಗಿ ನೇಮಿಸಲ್ಪಟ್ಟರು.

* * *

ವಿಚಾರಣೆಯು ೨೩ ಸಾಕ್ಷಿಗಳು ತಕ್ಕೊಳ್ಳಲ್ಪಟ್ಟವು. ಜಜ್ಜರು ೧೪೪ ಪುಟಗಳ ದೀರ್ಘವಾದ ತೀರ್ಪನ್ನು ಬರೆದು ಆರೋಪಿತರನ್ನು ದಂಡನೆಗೆ ಗುರಿಮಾಡಿದರು. ಆರೋಪಿಗಳಿಗೆ ೩ ವರ್ಷಗಳ ವರೆಗೆ ಶಿಕ್ಷೆಯೂ ಮೂರು ಸಾವಿರ ರೂ. ಗಳ ವರೆಗೆ ದಂಡವೂ ವಿಧಿಸಲ್ಪಟ್ಟಿತು. ಆರೋಪಿಗಳಲ್ಲಿ ಪೇಕರು ಸುಶಿಕ್ಷಿತರಾದ ನಕಲಿಲರೂ ಪದವೀಧರರೂ ಇದ್ದಾರೆ ಜಜ್ಜರು ಆರೋಪಿತರ ಅಪರಾಧವನ್ನು ಕಠೋರವಾಗಿ ಟೀಕಿಸಿ ಇಂತಹ ಕಂಪನಿಗಳ ಪಿಡುಗನ್ನು ಕಾಯಿದೆಯಿಂದ ಶಾಶ್ವತಂಧಿಸಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈ ತೀರ್ಪಾದದಿಂದ ಜನರು ಜಾಗೃತರಾಗಿ ಇಂತಹ ಕಂಪೆನಿಗಳ ಕೂಟಗಳಿಗೆ ಮೋಸ ಹೋಗದಂತೆ ಎಚ್ಚರಿಕೆಯಿಂದಿರಬೇಳು!

* * *

ಇಂಗ್ಲಂಡದಲ್ಲಿ ಶ್ರೀಮತಿ ಸರೋಜಿನಿ ದೇವಿಯವರು ಮಾಡಿದ ಒಂದು ಭಾಷಣದಲ್ಲಿ ಅಂದದ್ದು:— "ಹಿಂದುಸ್ಥಾನವು ನಿರ್ವೀರ್ಯವಾಗುವುದಕ್ಕೆ ಬ್ರಿಟಿಷರೇ ಕಾರಣ. ಸೈನ್ಯ ಮತ್ತು ಆರ್ಥಿಕ ವಿಷಯಗಳಲ್ಲಿ ಸ್ವಾಯತ್ತತೆಯಿಲ್ಲದಿದ್ದರೆ, ಯಾವ ರಾಷ್ಟ್ರವೂ ಬಲಿಯಿತ್ತಲಾರದು. ಹಿಂದುಸ್ಥಾನದ ಮೂಲ ಖನಿಜವು ಹಾಗೂ ಬ್ರಿಟಿಷರ ವಂಚನೆ ಇವೇ ಇಂಗ್ಲಂಡವು ಹಿಂದುಸ್ಥಾನವನ್ನಾಳುವದಕ್ಕೆ ಕಾರಣ. ಇಂಗ್ಲಂಡ ಹಿಂದುಸ್ಥಾನಗಳ ಸಂಬಂಧದಿಂದ ಹಿಂದುಸ್ಥಾನದ ಸೈನಿಕ ಅಧಃಪಾತವೂ ಇಂಗ್ಲಂಡದ ಕೀಳುತನವೂ ವ್ಯಕ್ತವಾಗುತ್ತದೆ. ಇನ್ನು ಮುಂದೆ ಹಿಂದುಸ್ಥಾನವು ಇಂಗ್ಲಂಡಕ್ಕೆ ತಲೆಬಗ್ಗಿಸುವಂತಿಲ್ಲ."

* * *

'ಹಿಂದೀಯರು ಅನುಸರಿಸಿದ ಶಾಂತಿ ಮಾರ್ಗವು ಹೇಡಿಗಳ ಮಾರ್ಗವಲ್ಲ. ಹಿಂದೀಯರು ಹೇಡಿಗಳಲ್ಲ, ಅವರು ತಮ್ಮ ರಕ್ತವನ್ನು ಚೆಲ್ಲಲು ಸಿದ್ಧರಿದ್ದಾರೆ. ತಮ್ಮ ಹೃದಯದಲ್ಲಿ ಉರಿಯುತ್ತಿರುವ ಸ್ವಾತಂತ್ರ್ಯದ ಜ್ಯೋತಿಯನ್ನು ತಮ್ಮ ರಕ್ತದಿಂದ ಉರಿಸಲು ಅವರು ಸಿದ್ಧರಾಗಿರುವರು.' ಎಂದು ಶ್ರೀಮತಿಯವರು ನುಡಿದಿದ್ದಾರೆ. "ಹಿಂದುಸ್ಥಾನವು ಶಾಶ್ವತಿಕ ಶಕ್ತಿಯು ಬೇಡೆಯಾಗಿರಕೂಡದು ಹಿಂದುಸ್ಥಾನದಲ್ಲಿ ರಕ್ತರಾಶವಾಗಬಾರದೆಂದು ಮಹಾತ್ಮರು ಇಂಗ್ಲಂಡಕ್ಕೆ ಮತ್ತೊಂದು ಸಂಧಿಯನ್ನು ಕೊಟ್ಟಿದ್ದಾರೆ." ಎಂದೂ ದೇವಿಯವರು ಎಚ್ಚರಿಕೆ ಹೇಳಿದ್ದಾರೆ.

* * *

ಬಂಗಾಲ ಪ್ರಾಂತದ ಹಿಜಲಿ ಎಂಬ ಜೈಲಿನ ಕ್ಷುದ್ರ ರಾಜಕೀಯ ಕೈದಿಗಳ ಮೇಲೆ ಪೋಲಿಸರು ಗುಂಡು ಹಾರಿಸಿ ಅನೇಕರನ್ನು ಗಾಯ ಪಡಿಸಿ ಕೆಲವರನ್ನು ಕೊಂಡರು, ಸರಕಾರವೂ ಅದನ್ನು ಸಮರ್ಥಿಸಿಕೊಡಗಿತು ಅದರಿಂದ ಬಂಗಾಲದಲ್ಲಿ ಕೋಲಾಹಲವುಂಟಾಯಿತು. ಕವಿ ರವೀಂದ್ರರಂತಹರೂ ಕಣ್ಣೀರ್ಗರೆದರು. ಕೊನೆಗೆ ಸರಕಾರದವರು ಒಂದು ವಿಚಾರಣಾ ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯು ಪೋಲಿಸರ ಕ್ರೂರಕೃತ್ಯವನ್ನು ಪ್ರಕಟಪಡಿಸಿದೆ. ಪೋಲೀಸರು ನಿಷ್ಕಾರಣವಾಗಿ ಗುಂಡುಹಾರಿಸಿದರು. ಪೋಲಿಸರ ಅಂಬೋಣವು ಸುಳ್ಳು ಎಂದು ಮುಂತಾಗಿ ಕಮಿಟಿಯು ಪೋಲಿಸರ ಮೇಲೆ ಉಗ್ರ ಅರೋಪಗಳನ್ನು ಹೊರಿಸಿರುವುದು. ಕೈದಿಗಳ ಮೇಲೆ 'ಇಂತಹ ಅತ್ಯಾಚಾರ ನಡಿಸಿದ ಪೋಲಿಸರನ್ನು ಸರಕಾರವು ಯಾವ ರೀತಿಯಿಂದ ದಂಡಿಸುವುದೋ ನೋಡಬೇಕು!

* * *

ಸಿಂಧವನ್ನು ಸ್ವತಂತ್ರ ಪ್ರಾಂತವಾಗಿ ಮಾಡಬೇಕೆಂದು ಮುಸಲ್ಮಾನರ ಆಗ್ರಹ. ಈ ಕುರಿತು ಒಂದು ಕಮಿಟಿ ನೇಮಿಸಲ್ಪಟ್ಟಿತ್ತು. ಆ ಕಮಿಟಿಯು ಸಿಂಧವನ್ನು ಬೇರೆ ಮಾಡಿದರೆ ಪ್ರತಿವರ್ಷ ೧೯೦ ಲಕ್ಷ ರೂ. ಪರಿಗೆ ಕೋಟೆ ಬರುವುದು. ೨೬ ಕೋಟಿ ರೂಪಾಯಿಗಳ ಸಾಲಕ್ಕೆ ಸಿಂಧವ ಮೇಲೆ ಬರುವುದು ಸಕ್ಕರೆದ ಆಜ್ಞೆ ಕಟ್ಟಿನ ಬಗ್ಗೆ ೨೬ ಕೋಟಿ ರೂ. ವೆಚ್ಚ ಮಾಡಿದರೂ ಇನ್ನು ೩೦ ವರ್ಷದ ಮೇಲಾದರೂ ೨೪ ಲಕ್ಷ ರೂ. ನಿಕ್ಕಿ ಲಾಭ ಬೀಳಿಯುವುದೇ ಹೇಗೆಂಬ ಸಂದೇಹವಿದೆ. ಸಿಂಧದ ವೆಚ್ಚಕ್ಕಾಗಿ ಈಗ ಪ್ರತಿವರ್ಷ ೧ ಕೋಟಿ ರೂ. ಮುಂಬೈ ಇಲಾಖೆಯ ತಲೆಯ ಮೇಲೆ ಬೀಳುತ್ತಿದೆ.' ಎಂಬುದು ಅಭಿಪ್ರಾಯ ಪಟ್ಟಿದೆ. ಮುಸಲ್ಮಾನರು ಸಿಂಧದ ಈ ಅಪಚಿಂತನೆಯನ್ನು ಹೇಗೆ ಹೊರಪಡಿಸುವರೋ!

* * *

ಇಂಗ್ಲಂಡದಲ್ಲಿ ಮಿ॥ ಮೆಕಡನಾಲ್ಡರು ಹೊಸ ರಾಷ್ಟ್ರೀಯ ಮಂತ್ರಿ ಮಂಡಲವನ್ನು ರಚಿಸಿದರು. ಹಳೇ ಮಂತ್ರಿ ಮಂಡಲದಲ್ಲಿ ೧೦ ಜನ ಮಂತ್ರಿಗಳಿದ್ದರು. ಈಗ ಇಪ್ಪತ್ತು! ಮೊದಲು ಮಿ॥ ಸ್ನೋಡೆನ್ರವರು ಭಾಂಡಾರ ಮಂತ್ರಿಗಳಾಗಿದ್ದರು. ಈಗ ಆ ಸ್ಥಾನಕ್ಕೆ ಮಿ॥ ನೆವಿಲ್ ಚೆಂಬರ್ಲೇನರು. ಲಾರ್ಡ ರೀಡಿಂಗರ ಬದಲು ಸರ್ ಸಾಯ್ಮನ್ರವರು ಪರರಾಷ್ಟ್ರಮಂತ್ರಿಗಳು ಸರ್ ಸ್ಯಾಮ್ಯುಅಲ್ ಹೋರೇರ ಭಾರತ ಮಂತ್ರಿಗಳು. ಲಾರ್ಡ ಪೆಲ್ಹಾಮರು ಯುದ್ಧಮಂತ್ರಿಗಳು. ಮಿ. ಡಾಲ್ಟನ್ರವರು ಕೌನ್ಸಿಲಿನ ಅಧ್ಯಕ್ಷರು. ಸರ್ ಹರ್ಬರ್ಟ್ ಸ್ಯಾಮ್ಯುಅಲ್ಲರು ಗೃಹಮಂತ್ರಿಗಳು ಮಿ. ಸ್ನೋಡೆನ್ರವರು ಲಾರ್ಡ ಪ್ರಿವ್ಹಿ ಸೀಲರಾಗಿ ನೇಮಿಸಲ್ಪಟ್ಟಿದ್ದಾರೆ.

* * *

ಈ ಹೊಸ ಮಂತ್ರಿಮಂಡಲದಲ್ಲಿ ಕಾನ್ಸರವೇಟಿವ್ಸ ಪಕ್ಷದವರು ೧೧, ಲಿಬರಲ್ಲರು ೫, ರಾಷ್ಟ್ರೀಯ ಕೂಲಿಕಾರ ಪಕ್ಷದವರು ೪, ಹೀಗೆ ಮೂರು ಪಕ್ಷಗಳ ಸಮಾವೇಶವಾಗಿದೆ. ಮಂತ್ರಿಮಂಡಲದಲ್ಲಿ ಕಾನ್ಸರವೇಟಿವರ ಪ್ರಾಬಲ್ಯವೇ ಬಹಳವೆಂಬುದು ಈ ಅಂಕೆಯಿಂದ ವ್ಯಕ್ತವಾಗುತ್ತದೆ. ಲಾರ್ಡ ರೀಡಿಂಗ, ಲಾರ್ಡ ಕ್ರೂ, ಲಾರ್ಡ ಎಮಿಲರೀ ಹಾಗೂ ಸರ್ ಆಸ್ಟನ್ ಚೆಂಬರಲೇನ ಇವರು ಈ ಹೊಸ ಮಂತ್ರಿಮಂಡಲದಲ್ಲಿ ಸೇರಿ ಬಯಸಲಿಲ್ಲ. ಈ ಮಂತ್ರಿಮಂಡಲವು ೬ ತಿಂಗಳಿಗಿಂತ ಹೆಚ್ಚಿಗೆ ಕಾಲ ಬಾಳಲಿಕ್ಕಿಲ್ಲೆಂಬಂ ಮುಂದೆ ಕಾನ್ಸರವೇಟಿವರ ಮಂತ್ರಿಮಂಡಲವನ್ನು ಆಳ್ವಿಕೆಗೆ ಬರಬಹುದೆಂದೂ ಅಂದಾಜಿದೆ.

* * *

ಮಿ. ಗಾರ್ಡನ್ನರು ಬಾಡೋಲೀ ಚೌಕಶಿಯನ್ನು ನಡಿಸಿದ್ದರು. ಸರಕಾರೀ ಕಾಗದಪತ್ರಗಳನ್ನು ಕವಿಟಿಯು ಮುಂದೆ ತಂದೀಕೆಂದು ಕಾಂಗ್ರೆಸ್ ಪಕ್ಷೀಯರ ಪರವಾಗಿ ಶ್ರೀ ಭುಲಾಭಾಯಿ ದೇಸಾಯಿಯವರು ಆಗ್ರಹ ಮಾಡಿದರು. ಆದರೆ ಮಿ ಗಾರ್ಡನ್ನರು ಆ ಕಾಗದಪತ್ರಗಳನ್ನು ಕವಿಟಿಯು ಮುಂದೆ ತರಲು ಬರಲಾರದೆಂದು ನಿರ್ಣಯ ಕೊಟ್ಟುದರಿಂದ ಕಾಂಗ್ರೆಸ್ ಪಕ್ಷದವರೂ ವಕೀಲರಾದ ಶ್ರೀ ಭುಲಾಭಾಯಿ ದೇಸಾಯಿಗಳೂ ಕವಿಟಿಗೆ ಬಹಿಷ್ಕಾರ ಹಾಕಿದರು. ಅಂತೂ ಆತ್ಮ ವಿಲಾಯತಿಯಲ್ಲಿ ಠೌಂಡಬೇಬಲ್ ಕಾನಫರೆನ್ಸನ್ನು ಮುಂದಿಟ್ಟು ಹೋಗುತ್ತಿದ್ದುದರ ದೆವ್ವು ಇಶ್ಟ ಜಾರ್ಡೋಲೀ ಚೌಕಶಿಗೂ ಬಡಿದಂತೆ ಕಾಣುತ್ತಿದೆ.

* * *

ಕಳೆದ ೩ ಕೈ ಬಕಿಂಗಹಾಮ ಅರಮನೆಯಲ್ಲಿ ಅರಸರ ಔತಣ. ಮಹಾತ್ಮರು ಆಹ್ವಾನಿತರು. ಅವರು ತಮ್ಮ ಪಾಡಿಕೆಯು ಉಡುಪಿನಲ್ಲಿ ಬರೆ ತಲೆಯಿಂದ ಅರಮನೆಗೆ ನಡೆದಿದ್ದರು. ಅವರು ಅರಮನೆಯನ್ನು ಪ್ರವೇಶಿಸಿ ರಾಜಾಂಜೆಯರ ಪಸ್ತಾಂಡೋಲನ ಮಾಡಿದರು. ಯುವರಾಣರೂ ಈ ೧೫ ನಾರಂಭಕ್ಕೆ ಲಿವರ್ಪೂಲಿನಿಂದ ವಿಮಾನದಿಂದ ಬಂದಿದ್ದರು ೬೦ ವರ್ಷದ ಹಿಂದೆ ದಕ್ಷಿಣಾಫ್ರಿಕೆಗೆ ಜಾರ್ಜ ಬಾದಶಹರು ಹೋದಾಗ ಮಹಾತ್ಮರು ಅವರಿಗೆ ಭೆಟ್ಟಿಯಾಗಿದ್ದರು. ಬಾದಶಹರು ಅರ್ಧಬತ್ತಲೆಯ ಫಕೀರನನ್ನು ಈ ರೀತಿ ಗೌರವಿಸಿದ್ದನ್ನು ಕಂಡು ಮಿ. ಚರ್ಚಿಲ್ಲರ ಹೊಟ್ಟೆಯುರಿ ಎಷ್ಟು ದೊಡ್ಡಬುರಿ ಹಬ್ಬುರುವುದೋ!

* * *

ಮುಸಲ್ಮಾನ ಜಾತಿವಾದಿಗಳ ಬೇಡಿಕೆಯು ಬಾಲವು ಬೆಳೆಯುತ್ತ ನಡೆದಿದೆ ಅವರ ಹದಿನಾಲ್ಕು ಮುದ್ದೆಗಳೊಡನೆ ಮತ್ತೆ ಮೂರು ಮುದ್ದೆ. ೧. ಸಂಸ್ಥಾನಗಳ ಕಾಯಿದೆ ಮಂಡಲ ಹಾಗೂ ಸ್ಥಾನಿಕ ಸಂಸ್ಥೆಗಳಲ್ಲಿ ಮುಸಲ್ಮಾನರಿಗೆ ೪ ಸ್ಥಳಗಳನ್ನು ಕಾದಿಡಬೇಕು. ೨ ಸಂಸ್ಥಾನಗಳ ಮುಸಲ್ಮಾನರ ಸಂರಕ್ಷಣ ಮಾಡುವುದಕ್ಕಾಗಿ ಸಂಸ್ಥಾನ ಮಂತ್ರಿ ಮಂಡಲದಲ್ಲಿ ಒಬ್ಬ ಬ್ರಿಟಿಷ ಅಧಿಕಾರಿಯನ್ನು ನೇಮಿಸಬೇಕು. ಸಂಸ್ಥಾನಗಳಿಂದ ಫೆಡರಲ್ ಕಾಯಿದೆ ಮಂಡಲಗಳಿಗೆ ಕಳುಹಿಸಲ್ಪಡುವ ಪ್ರತಿನಿಧಿಗಳಲ್ಲಿ ೪ ಜನರು ಮುಸಲ್ಮಾನರಿರಬೇಕು. ಇವು ಅವರ ಹೊಸ ಮುದ್ದೆಗಳು ಈ ಮುದ್ದೆಗಳು ಎಲ್ಲೆಲ್ಲಿ ಉರುಳಾಡುವುವೋ ನೋಡಬೇಕು!

* * *

ಮಹಾತ್ಮರು ಲಂಡನ್ನಿನಲ್ಲಿ ಮಾಡಿದ ಒಂದು ಭಾಷಣದಲ್ಲಿ ಸಂಸ್ಥಾನಿಕರ ವಿಷಯವಾಗಿ ಅಂದಿರುವುದೇನೆಂದರೆ ಕಾಶ್ಮೀರದಲ್ಲಿ ಹಿಂದೂ ಮುಸಲ್ಮಾನರು ಪ್ರೇಮದಿಂದ ಇರದಿರುವುದಕ್ಕೆ ಬ್ರಿಟಿಷರೇ ಜವಾಬದಾರರು ಪಡದೆಯು ಹಿಂಭಾಗದಲ್ಲಿ ನಡೆದಿರುವ ಕಾರಸ್ಥಾನವೇ ಕಾರಣ. ಸಂಸ್ಥಾನಿಕರಿಗೆ ಬಿರುದಿತ್ತ ಮಾಲೆಯಿದ್ದರೂ ೨೧ ತೋಪಿನ ಸಲಾಮಿದ್ದರೂ ಅವರು ಅರಮನೆಯಲ್ಲಿನುವ ಕೈದಿಗಳು ಸಂಸ್ಥಾನದ ಸೈನ್ಯದ ಮೇಲೆ ಬ್ರಿಟಿಷ ಸರಕಾರದ ಬಲವಾದ ನಿಯಂತ್ರಣ ಬಿರುವುದರಿಂದ ಸಂಸ್ಥಾನಿಕರು ಅರಕಾಯರು ಮಹಾತ್ಮರು ಸಂಸ್ಥಾನಿಕರಿಗೆ ಕೊಟ್ಟ ಈ ಸರ್ಟಿಫಿಕೇಟನ್ನು ಎಲ್ಲರೂ ಮನನ ಮಾಡುವಂತಿದೆ!

* *

ತಾ ೯ ಕ್ಕೆ ಮಹಾತ್ಮರು ಲಂಡನ್ನಿನಲ್ಲಿ ನಾಡಿದ ಒಂದು ಭಾಷಣದಲ್ಲಿ ೭೦ ಮಿ. ಟೇ ಕಾನಫರೆನ್ಸು ಆಪಯಶಸ್ವಿಯಾಗುವ ಬಗ್ಗೆ ತೋರುತ್ತಿದೆ ಇದಕ್ಕೆ ಕಾರಣವೇನು? ಕಾನಫರೆನ್ಸಿನ ಪ್ರತಿನಿಧಿಗಳು ಹಿಂದೀ ರಾಷ್ಟ್ರದ ನ್ಯಾಯವಾದ ಪ್ರತಿನಿಧಿಗಳಲ್ಲ ಹಿಂದುಸ್ಥಾನದ ಹೊಸ ರಾಜ್ಯಾಂಗಾಭರಣದ ಹೊರೆಯನ್ನು ಹೊರಲು ಕಾಂಗ್ರೆಸ್ಸು ಸಿದ್ಧವಿದೆ. ಸಾನುವಿಂದ ಅದು ಸಿಕ್ಕಿದಿದ್ದರೆ ಆತ್ಮತ್ಯಾಗ ಮಾಡಿ ಅದನ್ನು ದೊರಕಿಸಬೇಕಾಗುವುದು. ನಾವು ಆ ಬಗ್ಗಾಗಿ ಸ್ವಾರ್ಥತ್ಯಾಗ ಮಾಡಿದ್ದೇವೆ ನಾವೇ ಹಿಂದೀ ರಾಷ್ಟ್ರದ ನ್ಯಾಯವಾದ ಪ್ರತಿನಿಧಿಗಳು. ಅದರಿಂದಲೇ ಲಾರ್ಡ್ ಇರ್ವಿನರು ಇಪ್ಪತ್ತೊಂದು ಕೈದಿಗಳನ್ನು ಬಿಡುಗಡೆ ಮಾಡಿ ಸಮ್ಮತಿಸಿ ಸಂಧಾನ ಮಾಡಿಕೊಂಡರು' ಎಂದು ನುಡಿದಿದ್ದಾರೆ.

* *

ಇನ್ನೊಂದು ಭಾಷಣದಲ್ಲಿ ಮಹಾತ್ಮರು ೭೦ ಮಿ. ಟೇ ಬಲ್ ಕಾನಫರೆನ್ಸಿನಲ್ಲಿ ಪ್ರತ್ಯಕ್ಷವಾಗಿ ಬಾಗ ತಕ್ಕೊಳ್ಳುವು ದಕ್ಕಿಂತ ಜೈಲಿನ ಹಿಂದೆ ಕುಳಿತು ಸಂಧಾನ ಮಾಡಿಕೊಳ್ಳು ವುದು ಹೆಚ್ಚು ಸುಲಭವೆಂದು ನಾನು ತಿಳಿಯುತ್ತೇನೆ. ಈ ಸಂಧಾನದಿಂದ ಹಿಂದಿಯರಿಗೆ ಸ್ವಾತಂತ್ರ್ಯವನ್ನು ದೊರಕಿಸು ವಲ್ಲಿ ಯಶಸ್ಸು ಸಿಕ್ಕಿದಿದ್ದರೆ ಪುನಃ ಶಾಯಿದೆಭಂಗ ಮಾಡಿ ಜನ್ನ ಬಂಧು ಭಗಿನಿಯರಿಗೆ ಉಪದೇಶಿಸುವೆನು. ಹಾಗೂ ಈ ಸ್ವಾತಂತ್ರ್ಯ ಯುದ್ಧದಲ್ಲಿ ೧೦ ಲಕ್ಷ ಜನರ ಅಹುತಿಯನ್ನು ಆನಂದದಿಂದ ಕೊಡುವೆನು' ಎಂದು ನುಡಿದು ಮಹಾತ್ಮರು ತಮ್ಮ ವೀರ ವ್ಯಕ್ತಿಯನ್ನು ವ್ಯಕ್ತಪಡಿಸಿದ್ದಾರೆ

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ ॥

ಕರ್ಣಾಟಕ ಧುರೀಣ

ಶಕೆ ೧೮೫೩ನೇ ಪ್ರಜಾಪತಿ ಸಂ॥ ಪ
ಕಾರ್ತಿಕ ಕು॥ ೪ ಮಂಗಳವಾರ.

ನಿರಾಶಾಮಯ ವಾತಾವರಣ.

ಅಂತೂ ಮಹಾತ್ಮಾ ಗಾಂಧಿಯವರೂ ಇತರ ಹಿಂದೀ ಪ್ರತಿನಿಧಿಗಳೂ ಕಳೆದ ಎರಡು ತಿಂಗಳ ವರೆಗೆ ಮಾಡಿದ ಪ್ರಯತ್ನವು ಫಲಿಭೂತಗಣ ಹೋಮವಾಗಿ ಪರಿಣಮಿಸಿದ್ದು ಅವರು ಕೇವಲ ನಿರಾಶೆಯಿಂದ ತಿರುಗಿ ಬರುವ ಪರಿಸ್ಥಿತಿಯುಂಟಾಗಿರುವುದು ಕಂಡು ಬರುತ್ತಿದೆ. ಪ್ರತ್ಯಕ್ಷದ ಇಂಗ್ಲಂಡದಲ್ಲಿ ಮಂತ್ರಿ ಮಂಡಲವು ಹಿಂದೀಯರ ಕುತ್ತಿಗೆಗೆ ಪ್ರಾಂತಿಕ ಸ್ವರಾಜ್ಯದ ಹಳಸಿದ ಕಡಬವನ್ನು ಕಟ್ಟಿ ಕಳುಹಿಸಬೇಕೆಂದು ಹೊಂಚುಹಾಕಿರುವುದು ಪ್ರತ್ಯಕ್ಷವಾಗಿ ಕಂಡು ಬರುತ್ತಿದೆ. ಅದಕ್ಕೆ ಇಂಗ್ಲಂಡದಲ್ಲಿರುವ ಅಲ್ಪ ಸಂಖ್ಯಾಕರ ಪ್ರತಿನಿಧಿಗಳ ಸಮ್ಮತಿಯೆನ್ನು ತಕ್ಕೊಂಡು ಬ್ರಿಟಿಷ ಮುತ್ಸದ್ದಿಗಳು ತಮ್ಮ ಕೈಯ್ಯನ್ನು ಬಲಪಡಿಸಿಕೊಂಡಿರುವರು. ಜಾತಿವಾದೀ ಮುಸಲ್ಮಾನರೂ ಡಾ॥ ಅಂಬೇಡಕರರೂ ಅಂಗ್ಲೋ ಇಂಡಿಯನ್ ಪ್ರತಿನಿಧಿಗಳೂ ಒಂದು ಕೂಟ ಮಾಡಿಕೊಂಡು ೧೧ ಬೇಡಿಕೆಗಳು ಎಂಬ ಶಿರೋ ಲೇಖದಲ್ಲಿ ಅತ್ಯಂತ ಪ್ರತಿಗಾಮಿಯಾದ ಒಂದು ಯೋಜನೆಯನ್ನು ಮುಂದಿಟ್ಟಿದ್ದಾರೆ. ಮುಖ್ಯ ಮಂತ್ರಿ ಮಿ॥ ಮೆಕಡನಾಲ್ಡ ಸಾಹೇಬರೂ ಅದನ್ನು ಸ್ವೀಕರಿಸಿ ಅಲ್ಪ ಸಂಖ್ಯಾಕರ ಬೆನ್ನು ತಟ್ಟಿದ್ದಾರೆ. ಈ ಯೋಜನೆಯನ್ನು ರಾಷ್ಟ್ರೀಯತ್ವದ ಕರಣ ಬಿದ್ದ ಯಾವಾತನೂ ಕನ್ನೆತ್ತಿ ನೋಡಲಿಕ್ಕಿಲ್ಲ. ಆದಾಗ್ಯೂ ಮಿ॥ ಮೆಕಡನಾಲ್ಡರು ಅದು ೧೧೦ ಕೈಳ್ಳ ರವನ್ನು ಹಿಂದೀಯರ ಅಭಿಪ್ರಾಯವೆಂದು ಮುದ್ರಿಸಿಟ್ಟು ಅದನ್ನು ಸ್ವೀಕಾರ ಮಾಡಿದ್ದಾರೆ. ಇದರ ನೇರಲಿಂದ ಮಿ॥ ಮೆಕಡನಾಲ್ಡರ ಕಲ್ಮಷವಾದ ಹೇತುವು ವ್ಯಕ್ತವಾಗುವಂತಿದೆ. ಈ ಯೋಜನೆಯು ತಿರಸ್ಕರಣೀಯವಾಗಿದ್ದು, ಮಹಾತ್ಮಾ ಗಾಂಧಿಯವರು ಇಂತಹ ಯೋಜನೆಯನ್ನು ಸ್ವೀಕರಿಸುವುದಕ್ಕಿಂತ ಅರಣ್ಯವಾಸನೇ ಲೇಸೆಂದೂ ಆ ಯೋಜನೆಯಿಂದ ಸ್ವಾತಂತ್ರ್ಯದ ನೃಪ್ತಿ ವು ಎಂದೂ ಬೆಳೆಯಲಾರದೆಂದೂ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿಗೆ ಬ್ರಿಟಿಷ ಮುತ್ಸದ್ದಿಗಳು ಇಂತಹ ಪ್ರತಿಗಾಮಿಗಳಾದ ಸ್ವಾರ್ಥ ಸರಾಯಣರ ಬೆಂಬಲ ತಕ್ಕೊಂಡು ಹಿಂದೀಯರ ಪ್ರಾಂತಿಕ ಸ್ವರಾಜ್ಯದ ಒಂದು ಕಂತು ಕೊಟ್ಟು ಕಳುಹಿಸಬೇಕೆಂದು ಕಾರಸ್ಥಾನೆ ಹೂಡಿರುವರು. ಆದರೆ ಈ ಕಂತು ಯಾರಿಗೂ ಬೇಕಿಲ್ಲ. ಹಾಗೂ ಇದಕ್ಕೆ ಯಾರೂ ನೋಸ ಹೋಗಲಾರರು. ಮಧ್ಯವರ್ತಿ ಸರಕಾರದಲ್ಲಿ ಜವಾಬ್ದಾರಿಯು ದೊರೆತ ಹೊರತು ಪ್ರಾಂತಿಕ ಸ್ವರಾಜ್ಯವು ಎಂದೂ ಸುರಸ್ಪೆತವಾಗಿ ಬಾಳಲಾರದು. ಸರ್ ಸಪ್ರು, ಶಾ॥ ಶಾಸ್ತ್ರಿ ಮತ್ತು ಶ್ರೀ॥ ಜಯಕರ ಇವರೂ ಸಹ ಹೀಗೇ ಅಭಿಪ್ರಾಯಪಟ್ಟಿದ್ದಾರೆ. ಮಹಾತ್ಮಾ ಗಾಂಧಿಯವರಂತೂ ಇಂತಹ ಪ್ರಾಂತಿಕ ಸ್ವರಾಜ್ಯವನ್ನು ಮುನ್ಸಿಸಿವಾಲಿಟಿಗಳಂತಹ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೋಲಿಸಿದ್ದಾರೆ. ಹಿಂದೀಯರು ರೌಂ. ಟೇ. ಕಾನಫರೆನ್ಸಿಗೆ ಪ್ರಾಂತಿಕ ಸ್ವರಾಜ್ಯದ ಅಲ್ಪ ಭಿಕ್ಷೆಯನ್ನು ಬೇಡುವುದಕ್ಕೆ ಹೋಗಿಲ್ಲ. ಹಿಂದೀಯಂಗೆ ಮಧ್ಯವರ್ತಿ ಸರಕಾರದಲ್ಲಿ ಸಂಪೂರ್ಣ ಜವಾಬ್ದಾರಿಯೂ ಮಹಾತ್ಮರು ಅಂದಿರುವಂತೆ ಸೈನ್ಯ ಮತ್ತು ಭಾಂಡಾರಗಳ ಮೇಲಿನ ಸ್ವಾಮಿತ್ವವೂ ದೊರೆತರೇನೇ ಹಿಂದೀಯಂಗೆ ಸಮಾಧಾನವಾಗುವುದು ಶಕ್ಯವಿದೆ. ಮಹಾತ್ಮರು ಬ್ರಿಟಿಷರ ಪ್ರಾಮಾಣಿಕತನವನ್ನು ಪರೀಕ್ಷಿಸುವುದಕ್ಕೆಂದು ಕೂಡಲೇ ಸಂಪೂರ್ಣ ಪ್ರಾಂತಿಕ ಸ್ವರಾಜ್ಯವನ್ನು ಕೊಡಿರಿ ಇವ್ಲು ಒಂಭತ್ತು ತಿಂಗಳೊಳಗಾಗಿ ಮಧ್ಯವರ್ತಿ ಸರಕಾರಕ್ಕೆ ಸಂಪೂರ್ಣ ಜವಾಬ್ದಾರಿಯನ್ನು ಕೊಡಿರಿ ಎಂದು ಮಾಡಿದ ಸೂಚನೆಯನ್ನು ತಮ್ಮ ಬೇಟೆಯಲ್ಲಿ ತೊಡಗಿರುವ ಬ್ರಿಟಿಷ ಮುತ್ಸದ್ದಿಗಳು ಮನ್ನಿಸಿದಂತೆ ತೋರಲಿಲ್ಲ. ಒಟ್ಟಿಗೆ ರೌಂಡ ಟೇಬಲ್ ಕಾನಫರೆನ್ಸಿನ ವಾತಾವರಣವು ದಿನ ದಿನಕ್ಕೂ ಕಾರ್ಮೋಡದಿಂದ ಮುಚ್ಚುತ್ತ ನಡೆದಿದ್ದು ಮಹಾತ್ಮಾ ಗಾಂಧಿಯವರು ಬರಿ ಕೈಯಿಂದ ಬರಬೇಕಾದ ಸಂಭವನೇ ಪ್ರಕಟವಾಗಿ ಕಾಣಿಸುತ್ತಿದೆ. ಪ್ರಾಂತಿಕ ಸ್ವರಾಜ್ಯದ ಒಂದು ಇಲಿಯನ್ನು ಹಿಂದೀಯರ ಉಡಿಯಲ್ಲಿ ಹಾಕುವುದಕ್ಕೆ ಕಾನಫರೆನ್ಸಿನಂತಹ ಒಂದು ಗುಡ್ಡವನ್ನು ಅಗಿದು, ಹಣ, ಕಾಲ, ಶ್ರಮಗಳ ವ್ಯಯ ಮಾಡಿದ ಬ್ರಿಟಿಷ ಮುತ್ಸದ್ದಿಗಳ ಕಾರಸ್ಥಾನವು ತೀರಹಾಸ್ಯಾಸ್ಪದವಿದೆ. ಬ್ರಿಟಿಷ ಮುತ್ಸದ್ದಿಗಳು ಕೆಲವು ಪರಮ ಸ್ವಾರ್ಥಿಗಳನ್ನು ಉಬ್ಬಿಸಿ ಎಬ್ಬಿಸಿ, ನೆಪ ನಿಮಿತ್ತಗಳನ್ನು ಮುಂದೊಡ್ಡಿ ಹಿಂದೀ ರಾಷ್ಟ್ರವನ್ನು ನಿರಾಶೆಗೊಳಿಸುತ್ತಿರುವುದರಿಂದ ಹಿಂದುಸ್ಥಾನ ಪಾಕಾವರಣದಲ್ಲಿ ಕೋಲಾಹಲವುಂಟಾಗದೆ ಇರದು. ಬಲಿಷ್ಠವಾದ ಪಕ್ಷದ ಬೆಂಬಲದಿಂದ ಇಂಗ್ಲೆಂಡದ ಮಂತ್ರಿ ಮಂಡಲವು ಹಿಂದೀಯರ ನ್ಯಾಯವಾದ ಬೇಡಿಕೆಯನ್ನು ಧಿಕ್ಕರಿಸತೊಡಗಿದಂತೆ ಕಾಣುತ್ತಿದೆ ಆದರೆ ಅವರ ಈ ದರ್ಪಕ್ಕಾಗಿ ಶಶ್ವತ್ತಾಗಿ ಬರುವ ದಿನಗಳು ಬಾರದೆ ಇರಲಿಕ್ಕಿಲ್ಲೆಂದು ತಿಳಿಯುತ್ತೇನೆ

ವಾರ್ತಾವಾಹಿನೀ.

ಕುಮಟಾ:—

ಕಳೆದ ೨೨ ದಿನಗಳಿಂದ ಮಳೆಯಿಲ್ಲ ಭೂಚರಗಾಳಿಯು ಬೀಸುತ್ತಿದೆ ಭತ್ತದ ಕೊಯ್ಲು ಮುಗಿಯುವ ಬಂದಿದೆ. ಅಡಿಕೆಯು ಧಾರಣೆ ಇಂತು ಕೊಡಗಿದೆ. ಧಾರಣೆ ಈ ಕೆಳಗಣಂತೆ ಇದೆ

ರಾಶಿ ಚೆಟ್ಟಿ ಧರ	೯೧—೯೫—೧೦೧
ಗೋಟು ಧರ	೪೫ -೪೫—೬೫
ಚಾಲಿ ಧರ	೫೫—೬೫

ಕಳೆದ ಗುರುವಾರ ಸಾಯಂಕಾಲ ೫ ಘಂಟೆಗೆ ಇಲ್ಲಿಯ ಮ್ಯೂನಿಸಿಪಾಲಿಟಿಯ ಬ್ರಹ್ಮಜ್ಞಾನಿ ದೇವಧರ ಇವರ ಅಧ್ಯಕ್ಷತೆಯಲ್ಲಿ ಕಾರವಾರ ದಲ್ಲಿ ಸೇರುವ ಸಾಹಿತ್ಯ ಸಮ್ಮೇಲನ ವಿಷಯವಾಗಿ ಸಭೆಸೇರಿತು. ನಾಗರಿಕರಲ್ಲಿ ಹಲವರು ಸೇರಿದ್ದರು. ಸಾಹಿತ್ಯ ಸಮ್ಮೇಲನದ ಸ್ವಾಗತ ಮಂಡಲದ ಕಾರ್ಯದರ್ಶಿಗಳಾದ ಶ್ರೀ. ಪೋತದಾರ, ಬಿ ಎ, ಯವರು ಸಮ್ಮೇಲನದ ವಿಷಯವಾಗಿ ಮಾಡಬೇಕಾಗಿ ಕಾರ್ಯವನ್ನು ವಿವರಿಸಿದರು. ಶ್ರೀ ಯಾಜಿ ಹಾಗೂ ಶ್ರೀ. ರಾಮಕೃಷ್ಣ ಶಾಸ್ತ್ರಿ ಇವರ ಭಾಷಣಗಳೂ ಆದುವು. ಶ್ರೀ. ದೇವಧರರು ತಮ ಸಮಾರೋಚಿತ ಭಾಷಣದಲ್ಲಿ ಮಾತೃಭಾಷೆಯನ್ನು ಪೋಷಿಸಿ, ಬೆಳಿಸಿ ಅದನ್ನು ಉನ್ನತಿಗೆಯ್ಯುವುದು ಪ್ರತಿಯೊಬ್ಬನ ಕರ್ತವ್ಯವೆಂದೂ ಸಾಹಿತ್ಯ ಸಮ್ಮೇಲನಕ್ಕೆ ತನುಮನಧನಗಳಿಂದ ಸಹಾಯ ಮಾಡಬೇಕೆಂದೂ ಸುಡಿದರು.

ಕಳೆದ ಗುರುವಾರ ಇಲ್ಲಿಯ ಮ್ಯೂನಿಸಿಪಾಲಿಟಿಯು ಇತರ ಅಧಿಕಾರಿಗಳ ಚುನಾವಣೆ ನಡೆಯಿತು. ಮಿ. ಮಹಮದೂದ ಸಾಹೇಬ ಇವರು ಉಪಾಧ್ಯಕ್ಷರು, ಶ್ರೀ. ಆರ್. ಎಸ್. ಕಾಮತ ಇವರು ಮ್ಯಾನೇಜಿಂಗ ಕಮಿಟಿಯು ಚೆಯರಮನ್ನಾ ಹಾಗೂ ಶ್ರೀ. ಪುಂಡ್ಲಿಕ ಶೇಷಗಿರಿ ಶಾನಭಾಗ ಇವರು ಡಿಸ್ಪೆನ್ಸರೀ ಕಮಿಟಿಯು ಚೆಯರಮನ್ನರಾಗಿ ಆರಿಸಲ್ಪಟ್ಟರುವರು.

ಕಳೆದ ೭ ನೇ ತಾರೀಖಿನ ದಿವಸ ಶೇಷಕೇ ಪಾಠಕರು ತಿರಿಕ್ಷರರು ಬಂದಿದ್ದರು ಆ ವಿಮಿತ್ತ ಇಲ್ಲಿಯ ಬೇಸಾಯದ ಫಾರ್ಮಿನಲ್ಲಿ ಪ್ರಾರ್ಥನೆಯು ನಡೆಯಿತು. ಬೇಸಾಯ ಪಾಠಕರು ಶ್ರೀ ಹೆಬ್ಬಾರ, ಶ್ರೀ ಗೋಕರ್ಣ, ಶ್ರೀ. ಹಿಗಡೆಕಟ್ಟೆ ಇವರು ಬೇರೆ ಬೇರೆ ವಿಷಯಗಳಿಗೆ ವಿಷಯವಾಗಿ ಭಾಷಣ ಮಾಡಿದರು. ಮಂಜೆ ವಿಷ್ಣು ಭಟ್ಟ, ಶ್ರೀ. ಜಟ್ಟಿಪ್ಪ ಶಾನಭಾಗ, ಶ್ರೀ. ಗಂಗೆಳ್ಳಿ ಎಂ. ಎಲ್ ಸಿ, ಶ್ರೀ ಗಣೇಶ ಹೆಗಡೆ ಇವರು ರೈತರಿಗೂ ಬೇಸಾಯಕ್ಕೂ ಇರುವ ಅನುಕೂಲಗಳನ್ನು ವಿವರಿಸಿದರು. ತಿರಿಕ್ಷರ ಸಾಹೇಬರು ರೈತರ ಅಭಿವೃದ್ಧಿಗಳ ವಿಷಯವಾಗಿ ವಿಚಾರ ಮಾಡುವೆನೆಂದೂ ಶೇಕಕೇ ಸುಧಾರಣಾ ಸಂಘ ಶಂಥ ಸಂಸ್ಥೆಗಳಿಂದ ಹೆಚ್ಚಿನ ಪ್ರಯೋಜನವಾಗುವುದೆಂದೂ ಮುಂತಾಗಿ ಭಾಷಣ ಮಾಡಿದರು.

ಭಟ್ಕಳದಿಂದ ಹಲವು ಸಜ್ಜನರುಗಳ ಸಹಿಯುಳ್ಳ ಹಂದು ಪತ್ರ ಬಂದಿದ್ದು ಅದರ ಅಶಯವು ಹೇಗೆಂದರೆ.— ತಾ ೯—೧೧—೧೯೩೧ ನೆ ಕಾನಡಾ ವ್ಯಕ್ತಿಯವರ ಬಗ್ಗೆ ಕೊಟ್ಟ ವಾರ್ತೆಯು ವಸ್ತುಸ್ಥಿತಿಗೆ ವಿಪರ್ಯಾಸವಾಗಿದೆ. ಈ ಶಿಕ್ಷಣಕೆಯರು ಬಂದಂದಿನಿಂದ ಅವರ ಪರಿಶ್ರಮದಿಂದಲೂ ಊರ್ಜಾಹದಿಂದಲೂ ಶಾಲೆಯು ಸ್ಥಿತಿಯು ಸುಧಾರಿಸಿರುವುದು. ಪರೀಕ್ಷೆಯ ಪರಿಣಾಮವೂ ಈ ವರ್ಷ ಚೆನ್ನಾಗಿ ಆಗಿದೆ ಹೀಗಿದ್ದರೂ ಅವರನ್ನು ದೂರುವುದು ಯುಕ್ತವಲ್ಲ.

ತಿರ್ಪಿ:— (೧೪—೧೧—೧೯೩೧)

ತಾ. ೪-೧೧-೧೯೩೧ ಕ್ಕೆ ಇಲ್ಲಿಯ ಮುನ್ಸಿಪಾಲಿಟಿಯ ಸಭೆಸೇರಿ ಅಧ್ಯಕ್ಷರ ಚುನಾವಣೆಯಾಯಿತು. ಶ್ರೀ. ವಾಸುದೇವರಾವ ಧಾಳಪ್ಪ ಇವರು ಅಧ್ಯಕ್ಷ ಹಾಗೂ ಶ್ರೀ ವೋಟೆಸರ ತಿಮ್ಮಣ್ಣಹೆಗಡೆ ಇವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರುತ್ತಾರೆ.

ತಾ. ೩೧—೧೦—೧೯೩೧ ಕ್ಕೆ ಇಲ್ಲಿಯ ಮಾರಿಕಾಂಬಾ ಹಾಯಸ್ಕೂಲಿನ ವಾರ್ಷಿಕ ಸಮ್ಮೇಲನವು ಪ್ರಪ್ಪಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ರಾವ ಶ್ರೀ. ವಕೀಲ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೇರೆ ಬೇರೆ ಆಟಿಗಳ ಪಂದ್ಯಾವಳಿಗಳಿಕೆಯು ಪ್ರದರ್ಶನವೂ ಜರುಗಿತು. ರಾತ್ರಿ ವೀರೇಶ್ವರಿ ಎಂಬ ನಾಟಕವು ಅಭಿನಯಿಸಲ್ಪಟ್ಟಿತು ನಾಟಕವು ಮನೋರಂಜಕವಾಗಿತ್ತಲ್ಲದೆ ಸ್ವಾತಂತ್ರ್ಯಪ್ರೇಮ, ದೇಶಪ್ರೇಮಗಳಿಂದ ಕೂಡಿತ್ತು ಶಿವಾಜಿ, ಬಾಜಿ ಮುಂತಾದ ಪಾತ್ರಗಳು ಚೆನ್ನಾಗಿ ಅಭಿನಯಿಸಲ್ಪಟ್ಟವು. ತಾ. ೧—೧೧—೩೧ ನೇ ದಿನ ವಿದ್ಯಾರ್ಥಿಗಳಿಗೆ ಬಹುಮಾನ ಹಂಚುವ ಸಮಾರಂಭ ನಡೆದು ಕೊನೆಗೆ ಉಲಹಾರವಾಗಿ ಸಮ್ಮೇಲನವು ಕೊನೆಗಂಡಿತು.

ಈಚೆಗೆ ಮಾನ ಳಪ್ಪ ದರೋಡೆಗಳು ಪ್ರಾರಂಭವಾಗಿವೆ. ಲ ದಿನಗಳ ಹಿಂದೆ ಕಾನಗೋಡಿನ ಒಬ್ಬ ಹೆಂಗಸು ಒಬ್ಬ ಅಳಿವಿಂಡನೆ ನಿರ್ಸ ಆಸ್ಪತ್ರೆಗೆ ತಂದ ಎಮ್ಮೆಯನ್ನು ತಿರುಗಿ ಒಯ್ಯುತ್ತಿರುವಾಗ ದಾರಿಯಲ್ಲಿ ಅವರ ಮೇಲೆ ಕಳ್ಳರು ಬಿದ್ದರು. ಅಳು ಒಡಿ ಹೋದನು. ಕಳ್ಳರು ಹೆಂಗಸಿನ ಮೈ ಮೇಲಿದ್ದ ಆಭರಣವನ್ನು ಕಸುಕೊಂಡು ಹೋದರು ಕಳ್ಳರ ಪತ್ತೆಯಾಗಿಲ್ಲ.

ನಾಲ್ಕಾರು ದಿನಗಳ ಹಿಂದೆ ಬೆಟ್ಟಕೊಪ್ಪದಲ್ಲಿ ಕಳ್ಳರು ಒಳನುಗ್ಗಿ ನೆಲ ಅಗೆಗು ೫೦೦ ರೂ. ಗಳ ಆಭರಣಗಳನ್ನು ಎತ್ತಿಕೊಂಡು ಹೋದರು ಈ ಕಳವಿನ ಪತ್ತಾಲು ಹೊನ್ನಾವರದವರೆಗೆ ನಿಶ್ಚಿತವಾಯಿದಂ ತೆ. ಕಳ್ಳರ ಪತ್ತೆಯಾಗಿಲ್ಲ.

ಹೊಂಡಾಡಿಯಲ್ಲಿ ೧೫ ದಿನಗಳ ಹಿಂದೆ ಒಬ್ಬ ವಿಧವೆಯು ಖೂನಿಯಾಗಿರುವುದು. ಕೊಲೆಗಡಕರ ಪತ್ತೆಯಾಗಿಲ್ಲ.

ಕಳೆದ ಗುರುವಾರ ಇಲ್ಲಿಯ ಶ್ರೀ॥ ಜೇಮಶೆಟ್ಟಿ ಮಂಜಾವಳ್ಳನವರು ತಮ್ಮ ಕೋಟೆಕೈ ಹೋಗಿ ತಿರುಗಿ ಮನೆಗೆ ಬರುವಾಗ ನಿರ್ಸಿಗೆ ಒಂದು ಫಲಾರಂಗಿಸಲ್ಲಿ ಇಬ್ಬರು ದರೋಡೆಕೋರರು ಬಂದು ಕತ್ತಿಯನ್ನು ತೋರಿಸಿ ಅವರ ಕೈಯ್ಯಲ್ಲಿದ್ದ ರೂ ಸ್ವಾಹಾಮಾಡಿ, ಜಂ ರೂ.ಬೆಲೆಯ ಬಂಗಾರದ ಸರಪಳಿ, ೧೫ ಕೆಜಿಲೆಯ ಲಿಂಗದ ಕರಡಿಗೆಗಳನ್ನು ಅಪಹರಿಸಿಕೊಂಡು ಹೋಗಿರುವರು. ಪೋಲಿಸರು ಸಂಶಯದ ಮೇಲೆ ಒಬ್ಬನನ್ನು ಕೈದು ಮಾಡಿದ್ದಾರೆ.

ಶ್ರೀ ನಾರಾಯಣ ರಾವ ಜೋಶಿ ಹಾಗೂ ಶ್ರೀ॥ ಕರಮರಕರ ಇವರು ನಿರ್ಸ-ಶಿದ್ದಾಪುರ ಕಾಲೂಕಿನ ಅವೇಳ ಹಳ್ಳಿಗಳನ್ನು ಸಂಚರಿಸಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯು ನಿರೀಕ್ಷಿಸಿದಂತೆ ವಿಚಾರಣೆ ನಡೆಸಿದರು.

ಸ್ವರ್ನವಲ್ಲಿ— ಸ್ವರ್ಣವಲ್ಲೀ ಮಠದ ಮಹಾ ಮಂಡಲದ ಸಭೆಯು ಅಕ್ಟೋಬರ್ ತಾ ೩೧ ರಂದ ನಾಲ್ಕು ದಿನಗಳ ವರೆಗೆ ನಡೆದು ತಾ. ೩ ಕ್ಕೆ ಸಮಾಪ್ತವಾಯಿತು. ಸಭೆಗೆ ಶಿಷ್ಟಮಂಡಲದ ಶ್ರೀ ಮುಖರೂ ಶಿಷ್ಯರನೇಕರೂ ಸೇರಿದ್ದರು. ಮಠದ ಸರ್ವಾಧಿಕಾರಿಗಳಾದ ಶ್ರೀ. ವೆಂ. ರಾ. ಹೆಗಡೆ ಇವರು ರಾಜಿನಾಮೆ ಕೊಟ್ಟಿದ್ದಾರೆ. ಹೊಸ ಸರ್ವಾಧಿಕಾರಿಗಳನ್ನು ನೇಮಿಸಬೆ ಅಡಳಿತ ಕಮಿಟಿಯು ಇದೇ ಕಾರ್ಯನಿರ್ವಾಹ ಮಾಡಬೇಕೆಂದು ಗೊತ್ತಾಗಿದೆ. ಹೊಸ ಅಡಳಿತ ಕಮಿಟಿಯು ಆರಿಸಲ್ಪಟ್ಟಿದೆ. ಶ್ರೀಗಳು ತರುಣರೂ ತೇಜಃಪುಂಜರೂ ಶಾಂತರೂ ಊತ್ಸಾಹಿಗಳೂ ಆಗಿದ್ದು ಇವರ ನೇತೃತ್ವದಲ್ಲಿ ಸಮಾಜದ ತರುಣರು ಮುಂದೆಬಂದು ಸಮಾಜೋದ್ಧಾರ ಕಾರ್ಯವನ್ನು ಕೈಕೊಳ್ಳುವರೆಂದು ಆಶೆಯಿದೆ.

ಭಟ್ಕಳ:—

ತಾ. ೧೫ ಕ್ಕೆ ಇಲ್ಲಿಯ ಮುನ್ಸಿಪಾಲಿಟಿಯಲ್ಲಿ ಜನರಲ್ ವಿಷಿಟಿಂಗ್ ಕೊಡಿತು. ಉತ್ತರ ಕನ್ನಡ ಜಿಲ್ಲಾ ಸ್ವಾನಿಕ ಸ್ವರಾಜ್ಯ ಆರಿಷತ್ತಿಗೆ ಇಲ್ಲಿಂದ ಪ್ರೆಸಿಡೆಂಟರಾದ ಮಾ! ಸಿದ್ದೀಕರನ್ನು ಆರಿಸಲಾಯಿತು. ಆಲ್ಲಿ ನಡೆಯುವ ಚರ್ಚೆಯಲ್ಲಿ ಆಲ್ಲಲ್ಲಿಯ ಶಾಲೆಗಳ ಅಡಳಿತವು ಬೋರ್ಡಿಗೆ ಸೇರುವ ಮೊದಲು ಯಾವರೀತಿ ಸ್ಥಳೀಯ ಮುನ್ಸಿಪಾಲಿಟಿಯ ವಶದಲ್ಲಿತ್ತೋ ಅದರಂತೆ ಮುಂದೆ ಸಹ ಸಮ್ಮೆಲ್ಲಿಯ ಶಾಲೆಗಳು ಮುನ್ಸಿಪಾಲಿಟಿಯು ಕೈಯ್ಯಲ್ಲೇ ಬರಬೇಕಾಗಿಯೂ ಮತ್ತು ಲೋಕಲ್ಬೋರ್ಡಿನವರು ನಮ್ಮಲ್ಲಿಯ ಆಸ್ಪತ್ರಿ ಬಗ್ಗೆ ಕೊಡಬೆಕ್ಕ ಗ್ರೇಂಟನ್ನು ಹೆಚ್ಚಿಸಬೇಕಾಗಿಯೂ ತರಾವನ್ನಿ ಡಬೇಕಾಗಿ ಸೂಚನೆಯಾಗಿ ಸಭೆಯು ವಿಸರ್ಜನೆಯಾಯಿತು.

ನಮ್ಮ ಜಿಲ್ಲಾಧಿಕಾರಿಗಳು ಮುಂಡೇಶ್ವರದೇವಸ್ಥಾನವನ್ನು ಸಂಡರ್ಶಿಸಿ ಈ ದೇವಸ್ಥಾನದ ಬಗ್ಗೆ ರನ್ನ ಕಡೆಗೆ ಬಂದಿರುವ ಅರ್ಜಿಯನ್ನು ಚಾರಿತ್ರಿ ಮಾಡಿ ತನ್ನಿಂದಾಗಬಹುದ್ದು ಸಹಾಯಮಾಡುವೆನಾಗಿ ಅಶ್ವಾಸನೆಯಿತ್ತಿರುವರಂತೆ.

ಶಿರ್ಸಿ ಡಿವಿಜನ ಪ್ರಾಂತ ಸಾಹೇಬರ ಸ್ವಾರಿಯು ನಮ್ಮ ಭಟ್ಕಳ ಸರಹದ್ದಿಗೆ ಈ ತಿಂಗಳ ಆಂತ್ಯವಾರದಲ್ಲಿ ಬಿತ್ತೈಸುವರಿದೆಯಾಗಿ ತಿಳಿಯುವ ಪ್ರದೆ.

ಇಲ್ಲಿಯ ಕೋಟೆಗರು ಇದೇ ಕಳೆದ ತೀರ್ವೆಯ ವ್ಯಾಜೆ ಕಾಲಕ್ಕೆ ಜಯಘಾಳು ಸರಕಾರಕ್ಕೆ ತಮ್ಮ ಆರ್ಥಿಕ ಪರಿಸ್ಥಿತಿಯು ಕುರಿತು ತೀರ್ವೆಮಾಫಿ ಬಗ್ಗೆ ಅರ್ಜಿ ಮಾಡಿಕೊಂಡಿದ್ದರು. ಅದಕ್ಕೆ ತೀರ್ವೆ ವಸೂಲಿ ಕಾಲವು ವರೆಗೂ ಉತ್ತರ ಬಂದೀತೆಂಕ ಇಣಕಿ ಮೋಡಿ ಬೇಸತ್ತು ತೀರ್ವೆಕಾಲಕ್ಕೆ ತಮ್ಮ ಹೆಂಗಸರ ಮೈನೆಲಿನ ಯಾವತ್ತೂ ಚಿನ್ನಾಭರಣಗಳನ್ನು ಅಡವಿಟ್ಟು ೧೦೦ ಕ್ಕೆ ೧೮ ರಿಂದ ೨೪ ರ ವರೆಗೂ ಬಡ್ಡಿಕೊಟ್ಟು ಹಣತಂದು ತೀರ್ವೆ ತುಂಬಿದರು. ಆದರೆ ಈ ವರುಷದ ಸ್ಥಿತಿಯು ಅದಕ್ಕಿಂತ ಕೆಟ್ಟದಿದೆ ಕಳೆದ ವರುಷ ಮಾಲಿಗೆ ಬರಲಿಲ್ಲದಿದ್ದರೂ ಬೆಳೆಯು ಸಾಧಾರಣ ಬಂದಿತ್ತು. ಈ ವರುಷ ಮಾತ್ರ ಬೆಳೆಯೂ ನಾಸ್ತಿ! ದರವೂ ಸೊನ್ನೆ!! ಹೀಗಿರುವಾಗ ಕಳೆದ ವರ್ಷ ಅಡವಿಟ್ಟ ಯಾವತ್ತೂ ಮಾಲುಗಳನ್ನು ಬಿಡಿಸಿ ತರಲಿಕ್ಕೆ ಅವರ ಕಡೆಗೆ ಹಣವಿಲ್ಲದೆ ಮಾಲು ಮುಂಳುಗಿತು. ಈ ವರುಷವೂ ಸರಕಾರದವರು ಅವರಿಗೆ ಸರಿಯಾದ ಸಹಾಯ ಮಾಡದಿದಿರೆ ಮಾಲು ಅಡವಿಟ್ಟು ಹಣಾ ಗಳಿಸಲಿಕ್ಕೆ ಮೂಲಿಲ್ಲ ಆಸ್ತಿ ಮನೆಗಳನ್ನು ಒತ್ತೆ ಕೊಟ್ಟು ಹಣಾ ಸಂಪಾದಿಸಿ ತೀರ್ವೆ ತೆರಲಿಕ್ಕೆ ಮುದ್ದಿಗೆ ಪಂಚೀರಿನಂತೆ ಆಸ್ತಿ ಮನೆ ಕೇಳುತ್ತಾರೆ. ಚೌಕಶಿ ಮಾಡಿದರೆ ತಮ್ಮಳಕೆಗೆ ಹಣವಿಲ್ಲವಾಗಿ ಹೇಳುತ್ತಾರೆ. ಒಟ್ಟಾರೆ ಇಲ್ಲಿಯ ಬಡತೋಟಿಗರು ಹಾಗೂ ಕೆಟ್ಟೆರು ಹೀಗೂ ಕೆಟ್ಟರು. ಇಂಧ ಕಷ್ಟಕಾಲದಲ್ಲಿ ಈ ಬಡಕೈತರ ಕೈ ಎತ್ತಿ ಹಿಡಿಯುವುದು ಸರಕಾರದ ಅದ್ಯ ಕರ್ತವ್ಯವಲ್ಲವೇ?

ಮುಂಡಗೋಡ ಪೇಠಾ—

ಇಲ್ಲಿಯ ಮಹಾಜನರಲ್ಲಿ ಅಫೀಸ ಕಾರಕೂನ ಮಿ। ಎಸ್. ಎಸ್. ಜೋಶಿಯವರು ಕುಮಟಾ ನಮೂ ಮುನೀದಾರ ಕಚೇರಿಗೆ ಶಿರಸ್ತೇದಾರರಾಗಿ ನೇಮಿಸಲ್ಪಟ್ಟಿದ್ದರಿಂದ, ಇವರು ಕಳೆದ ತಿಂಗಳ ಆನೇ ತಾರೀಖಿಗೆ ಇಲ್ಲಿಂದ ಹೊರಟು ಹೋದರು. ಇವರು ಇಲ್ಲಿ ಜನಪ್ರಿಯರಾಗಿದ್ದು ಹೊರಹೊಮ್ಮುವಾಗ ಪೇಠಾ ಜನರ ನಾನಾ ವಿಧ ಮಾನ-ಮನ್ನೆಗೆ ಗುರಿಯಾದರು.

ಮುಂಡಗೋಡ ಆಸಾಮಿ ಪಾಟೀಲ ರುದ್ರಪ್ಪ ಗೌಡಾ ಇವರು ಮುಂಡಗೋಡಕ್ಕೆ ತೀರ ಸಮೀಪ ಇರುವ ಕರಡಿನ ಕೊಪ್ಪದ ಪಾಟೀಲಿಯನ್ನು ಈಗ ೨-೩ ವರ್ಷದಿಂದ ಕಾನೂನೀ ಪೂರ್ವಕ ಮಾಡುತ್ತಿದ್ದಾರೆ. ಇದರಿಗೆ ಕರಡಿನ ಕೊಪ್ಪದವರಿಂದ ಸರಕಾರಿ ತೀರ್ವೆಯ ಜವಿನು ಇರುವದಲ್ಲದೆ, ಇವರು ಯಾವ ರೀತಿ ಸ್ಥಿತಿಯಿಂದಲೂ ಯೋಗ್ಯರಿರುತ್ತಾರೆ. ಇಂಥ ವರನ್ನು ಈಗ ಕೆಲವು ದಿವಸದ ಮುಂಚೆ ನಿಷ್ಠಾವಂತರಾಗಿ ಪೇಠಾ ಅಧಿಕಾರಿಗಳು ಈ ಕರಡಿನ ಕೊಪ್ಪದ ಪಾಟೀಲಿಯಿಂದ ತಪ್ಪಿಸಿ, ಅನ್ಯ ಗ್ರಾಮದ ದೈವಜ್ಞ ಮೆಂಕಟ್ರಮಣ ಶೆಟ್ಟಿ ಎಂಬವರನ್ನು ಅಕ್ರಮ್ಮಾರ್ಕ ರೀತಿಯಿಂದ ಕಾಯಂ ಪಟೇಲಿಗೆ ನೇಮಿಸಿರುವರು. ಈ ಮೂಲಕ ಕರಡಿನ ಕೊಪ್ಪದ ರಹವಾಸಿಗಳ ಮನಸ್ಸು ಕೆಟ್ಟು ಈ ಹೊಸ ಪಾಟೇಲರನ್ನು ನೇಮಿಸಬಾರದಾಗಿ ಸರಕಾರಕ್ಕೆ ಅರ್ಜಿ ಬರಕೊಂಡಿದ್ದಾರೆಂದು ತಿಳಿಯುತ್ತದೆ. ಈ ಅಕ್ರಮ್ಮಾರ್ಕ ನೇಮಣೂಕೆಯಿಂದ ಎಷ್ಟೋ ಜನರಿಗೆ ಅಶ್ಚರ್ಯವೂ, ಇನ್ನೆಷ್ಟೋ ಜನರಿಗೆ ಅಶ್ಚರ್ಯವೂ ತಂದಿದೆ.

ಮುಂಡಗೋಡ ಪೇಠಾದಲ್ಲಿ ಈಚೆಗೆ ಕಳವಿನ ಗುಮ್ಮೆಗಳ ಸುಗ್ಗಿ ಮಾತ್ರ ಅಭಾವವಿದೆಯಂದು ಹೇಳಿಯಲಾರಂಭಿಸಿವೆ. ಆದರೆ ಅಪ್ಪಗಳಲ್ಲಿ ಒಂದಾದರೂ ಈ ವರೆಗೆ ತಪಾಸು ಮಾಡಿದ್ದು ಕೇಳಿಬರುವದಿಲ್ಲ!

ಗ್ರಾಮಗಳ ಕೆಲಸ ಸುಸೂತ್ರವಾಗಿ ಮಾಡಲಿಕ್ಕೆ ಕೈಂಕರ್ಯ ಸರಕಾರದವರು ಶ್ಯಾನಭೋಗರನ್ನು ನೇಮಿಸಿರುವರಷ್ಟೇ! ಆದರೆ ಎಷ್ಟೋ ಶಾನಭೋಗರು ಈ ಈಚೆಗೆ ಅಲಕ್ಷ್ಯ ಮಾಡಿ ಆವರಿವರ ಖಾಸಗಿ ನೋಂದಣಿ ದಸ್ತೈವು ಬಗ್ಗೆರೆ ಮತ್ತು ಬರೆದು ಹಣ ಗಳಿಸುವ ಹೊಡಾಟದಲ್ಲಿ ಪೇಚಾಡಿ ಹೊತ್ತುಗಳೆಯುತ್ತಾರೆ. ಈ ಮೂಲಕ ಗ್ರಾಮದ ಕೆಲಸಗಳಲ್ಲಿ ಬಹಳ ಅಜಾಗ್ರತೆ ಆಗುತ್ತದೆ ಎಂಬ ಈ ಎಲ್ಲ ಸಂಗಗಳು ಮೊ। ಕಾರವಾರ ಜಿಲ್ಲಾ ಕಲೆಕ್ಟರ ಸಾ। ಎಸ್ ಅವಿಸಿದ್ದೀನೆ, ಅಯ್ಯೋ. ಸಿ. ಎಸ್. ಇವರ ನಜರಿಗೆ ಬಂದು ಅವರು ಇಷ್ಟು ಮುಂದೆ ಶಾನಭೋಗರು ತಮ್ಮ ಸರಕಾರಿ ಕೆಲಸದಲ್ಲಿ ಅಲಕ್ಷ್ಯಮಾಡಿ ಖಾಸಗಿ ನೋಂದಣಿ ದಸ್ತೈವು ಬಗ್ಗೆರೆ ಬರೆಯುವ ಕೆಲಸದಲ್ಲಿ ಜೆಚ್ಚಾಗಿ ಕೈ ಹಾಕಬಾರದೆಂಕ ಇಡೀ ಕಾರವಾರ ಜಿಲ್ಲಾ ಶಾನಭೋಗರ ಪೂರ್ತಾ ಸಭ್ಯ ಕ್ಕೊಂದು ಎಚ್ಚರಿಕೆ ಹುಕುಮನ್ನು ಹೊರಡಿಸಿದ್ದಾರೆ.

ಪೊಳಲಿ—ದ. ೫. ತಾ. ೨—೧೧—೧೯೩೧ ರಷ್ಟಿ ಶ್ರೀ ಬಿ. ತಿಮ್ಮಪ್ಪ ಶೆಣೈ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಮಿಟಿಯ ಸಭೆಸೇರಿ ಕಾರ್ಯಕಾರೀ ಮಂಡಲದ ಸಭೆಯು ಆರಿಸಲ್ಪಟ್ಟಿತು. ಶ್ರೀ. ಬಿ ಎಸ್. ಹರಮೇಶ್ವರಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಕಾ ನಿ. ಮಂಡಲದವರು ಕಾಂ. ಮೆಂಬರರನ್ನು ಹುರುಪಿನಿಂದ ಕೂಡಿಸಬೇಕೆಂದು ಗೊತ್ತಾಗಿದೆ. ಕಾಂಗ್ರೆಸ್‌ಪಕ್ಷಿ ಸೇರಿಸಲಿಕ್ಕೂ ಖಾದೀ ಪ್ರಚಾರ ಮಾಡಲಿಕ್ಕೂ ಉಪಕಮಿಟಿಗಳು ನೇಮಿಸಲ್ಪಟ್ಟಿವೆ.

ಇದೇ ತಾ. ೫—೧೧—೩೧ರಲ್ಲಿ ದೆಮ್ಮಲೆ ವಕ್ಕಲ ತಿಮ್ಮು ಕೊಬ್ಬಾರಿ ಎಂಬವನಿಗೆ ಮೇರ ಮುಜ್ಜಿ ಗುಡ್ಡೆದಾರನು ಮೇರೆ ತಪ್ಪಿಸಿ ಕಡಿಸಿದ್ದರಿಂದ ಕತ್ತಿ ಲೆಯೆಜ್ಜಿ ಮನೆಗೆ ಬರುವಾಗ ಅವಸ ಮನೆ ಬಳಿ ಕಜ್ಜನ ಸೇತುವೆಯಿಂದ ಕೆಳಗೆ ಬಿದ್ದು ಸತ್ತು ಹೋದನು

ಇತ್ತೀಚೆರೂ ಕುದುರೆಯು ಕುಡಿದು ಡಾಂಬರ್ಲಿ ಬಿದ್ದು ಸಾಯುವಾರದಾಗಿ ಕುದುರೆ ಮಹಾಶಯರಿಂಗೊಂದು ಪೊಳಲಿ ಶಾಂಗೆಸ್ಸು ಕಮಿಟಿಯುವರೊಂದು ವಿನಂತಿ.

ಸಿದ್ದಾಪುರ:— (೧೪—೧೧—೩೧೧)

ಈ ತಾಲೂಕಿನ ಮುಂಬ್ಳಿ ಬೆಳಿಗಳು ಅಡಿಕೆ, ಭತ್ತ, ಯಾಲಕ್ಕಿ, ಮೆಣಸು. ಈ ವರ್ಷ ಈಗಲೂ ಮಳೆ ಜೋಡಿಯುತ್ತಿರುವದರಿಂದ ಅಡಿಕೆ ಕೊಯ್ಯಲಿಕ್ಕೆ ಬರದ್ದರಿಂದ ಬೆಳೆದು ಹಣ್ಣಾಗಿ ಗೋಟಿಗಿ ಬೆಲೆಬಾಳದಾಗುವ್ದು. ಕೊಯಿಡದ್ದು ಒಣಗಿಸಬಾರದೇ ಮುಗ್ಗುತ್ತಿದೆ. ಭತ್ತ ಜೂಜುವಿ ಕೊಯ್ದದ್ದು ಮುಗ್ಗುತ್ತಿದೆ. ಮಳೆ ಬಿದ್ದು ಹೊಲದಲ್ಲಿ ನೀರು ನಿಕ್ಕ ಕಾಳು ಜಳ್ಳಾಗಹತ್ತಿದೆ. ಮೆಂತೆಸಿ ನಕರೆ ಹೂವು ಮಿಡಿ ಕಾಳು ಉದುರುತ್ತಿರುವುವು. ಹಣ್ಣಾದ ಯಾಲಕ್ಕಿ ಬಿಸಿಲಿಲ್ಲದ್ದರಿಂದ ಒಣಗಿಸಲಾಗದ್ದರಿಂದ ತೋಟಿಬಲ್ಲೇ ಕೊಳೆಯುತ್ತಿದೆ. ಒಂದು ಬದಿಗೆ ಕೊಳೆಯು ಉಪದ್ರವದಿಂದ ಅಡಿಕೆ ಮೊಡಲೇ ಉದುರಿದೆ. ಸರಕಾರ ತೀರ್ವೆ ಕುಂಬುವದು ಈ ಸ್ಥಿತಿಯಲ್ಲಿ ಹ್ಯಾಗೆಂದು ರೈತರು ಗೋಳಾಡುತ್ತಿರುವರು ಜೋರ ವರುಷ ಸರಕಾರದವರು ಕಂಗಾಲಾದವರಿಗೆ ತೀರ್ವೆ ಸೂಟ ಬಡದೆ ತಗಾಯಿ ಕೊಟ್ಟು ತೀರ್ವೆ ವಸೂಲ ಮಾಡಿಕೊಂಡರು. ಈಗ ಶ್ಯಾನಭೋಗರು ಮಾರ್ಗಶೀರ ಸುದ್ದ ೧೫ರೊಳಗಾಗಿ ತಗಾಯಿ ವಸೂಲ ಕೊಡದಿದ್ದರೆ ಅಗದಂದು ವತ್ತಾಯಪಡಿಸುತ್ತಿರುವರು. ಇದಲ್ಲದೆ ೨೦—೨೫ ಸಾವಿರ ಪೋಟಿಹಿಸಾ ಪೋಜಿಜ ಖರ್ಚು ಬೇರೆ. ಈ ವರ್ಷ ವಸೂಲಿಯಾಗಬೇಕಂತೆ. ಅಂಥೂ ರೈತರ ಗೋಳು ಹೇಳಲಿಬದಳ. ಒಟ್ಟಿಗೆ ರೈತರು ದೈವ ಮತ್ತು ರಾಜಕೀಯ ಆಪತ್ತುಗಳಿಗೆ ಗುರಿಯಾಗಿ ಕಂಗೆಟ್ಟಿರುವರು ಇಂಯಲಿಕ್ಕೆ ಶ್ರೀ ಪತಿ ಸೃಷ್ಟಿಪತಿಗಳೇ ಸಮರ್ಥರು.

ಡಾ. ಮಹಿಷಿಯವರ ಎಲ್ಲ ಬಗೆಯ ಔಷಧಗಳು

ಭಟ್ಕಳದಲ್ಲಿ ರಾಮಕೃಷ್ಣ ನಾಗಪ್ಪ ಹೆಬ್ಬಾರ ಇವರಲ್ಲಿ

ಮಾರಾಟಕ್ಕೆ ಸಿಕ್ಕುತ್ತವೆ.

ಯಾಜಿ ಭ್ರಾತೃ ಸೋಲ್ ಏಜಂಟ್, ಉ. ಕ.

ಫೋ. ಕುಮಟಾ

ಮಹಾತ್ಮಾ ಗಾಂಧಿಯವರ ಖಂಡತುಂಡ ಮಾತುಗಳು.

ಕಾಮನ್‌ವೆಲ್ಥ ಆಫ್ ಇಂಡಿಯಾ ಲೀಗ ಎಂಬ ಸಂಸ್ಥೆಯವರ ಔತಣಕ್ಕೆ ಒಪ್ಪಿ ಮಹಾತ್ಮರು ಲಂಡನ್ನದಲ್ಲಿಯ ವೆಸ್ಟ ಮಿನಿಸ್ಟರದ ಒಂದು ಸಭಾಮಂಟಪದಲ್ಲಿ ಒಂದು ಉದ್ಬೋಧಕವಾದ ಭಾಷಣವನ್ನು ಮಾಡಿರುವರು. ಕೂಲಿಕಾರ ಪಕ್ಷದ ಮಿ। ಹೊರಾ ಬಿನ್ ಎಂಬುವರು ಅಧ್ಯಕ್ಷರಾಗಿದ್ದರು. ಎಷ್ಟೋ ಜನ ಪ್ರಮುಖರು ಭಾಷಣವನ್ನು ಕೇಳಲಿಕ್ಕೆ ಹೋಗಿದ್ದರು. ಅದನ್ನು ಸಂಕ್ಷೇಪವಾಗಿ ಕೆಳಗೆ ಬರೆದದೆ.

"ಹಿಂದುಸ್ಥಾನದ ಸಂಬಂಧವಾಗಿ ಇಲ್ಲಿ ಅ ಜ್ಞಾನವು ಬಹಳವಾಗಿದೆ. ಇಂಗ್ಲಿಷ ಜನರಿಗೆ ಸದೋಷವಾದ ಬ್ರಿಟಿಷರೇ ಬರೆದ ಇತಿಹಾಸದಿಂದ ನಿಜಸ್ಥಿತಿಯು ತಿಳಿದಿರುವದಿಲ್ಲ. ಕಲಕತ್ತೆಯ ಕತ್ತಲೆ ಕೋಣೆಯ ಉದಾಹರಣವನ್ನು ತೆಗೆದು ಕೊಂಡರೆ ತಿಳಿಯುವದು. ಈ ಕೋಣೆಯಲ್ಲಿ ಅಷ್ಟು ಜನರನ್ನು ಒತ್ತಟ್ಟಿಗಿಟ್ಟಿದ್ದರೂ ಅವರು ಅದರಲ್ಲಿ ಹಿಡಿಸುವದು ಅಸಾಧ್ಯವು. ಈ ವಿಷಯವು ತೀರ ಕಾಲ್ಪನಿಕವೆಂದು ಹಿಂದೀ ಇತಿಹಾಸಕಾರರು ಸಿದ್ಧವಾಡಿರುವರು. ಇಂಥ ಎಷ್ಟೋ ವಿಷಯಗಳಿರುವವು. ಅವುಗಳನ್ನು ಕಾಮನ್ ವೆಲ್ಥ ಸಂಸ್ಥೆಯು ಲಕ್ಷಕ್ಕೆ ತರಬೇಕು.

ಚಿತಗಾಂಗದಲ್ಲಿ ಒಬ್ಬ ಯುವಕನು ಒಬ್ಬ ಅಧಿಕಾರಿಯನ್ನು ಕೊಂದನು. ಅದಕ್ಕೆ ಆ ಸಣ್ಣ ದಲ್ಲಿ ಲೂಟಿಯು ಮೇಲೆ ಲೂಟಿಯೂ ಕೊಲೆಗಳ ಮೇಲೆ ಕೊಲೆಗಳೂ ಆದವು ಗುಡಿಸಲಿನಲ್ಲಿ ಕೂಡ್ರುವ ಕವಿವರ್ಯ ರವೀಂದ್ರನಾಥರಂತಹವರಿಗೂ ಸಿಟ್ಟು ಉಕ್ಕೇರಿತು. 'ಡೆಟೆನ್ಯೂ' ಅಂದರೆ ವಿಚಾರವಿಲ್ಲದವಲೇ ಬೇಕಾದಷ್ಟು ಕಾಲದ ವರೆಗೆ ಸೆರೆಮನೆಯಲ್ಲಿರಿಸಲ್ಪಡುವ ವ್ಯಕ್ತಿಯು. ಕೇವಲ ಸಂಶಯದ ಮೇಲೆ ಅವನನ್ನು ಹಿಡಿಯುವರು. ಇಂಥ ಅನೇಕರು ಚಿತಗಾಂಗದಲ್ಲಿರುವರು, ಹಿಜಲಿಯಲ್ಲಿರುವರು. ಇವರ ನಡಾವಳಿಯು ನೆಟ್ಟಗಿಲ್ಲೆಂಬ ನೆವದಿಂದ ಸರಕಾರವು ಅವರಲ್ಲಿ ಕೆಲವರನ್ನು ಗುಂಡುಹಾರಿಸಿ ಕೊಂದಿರುವದು. ಕೆಲವರಿಗೆ ಗಾಯವಾಗಿದೆ. ಇದನ್ನು ಟಾಗೋರ ಮುಂತಾದ ಸದ್ಗೃಹಸ್ಥರು ದೂಷಿಸಿರುವರು. ಅದರ ಬ್ರಿಟಿಷ ಪತ್ರಗಳಲ್ಲಿ ಹಿಜಲಿಯ ಸೆರೆಯಾಳುಗಳು ಕೆಟ್ಟವರಿದ್ದರೆಂದು ಬರೆಯಲ್ಪಟ್ಟಿರುವದು. ಡನ್ನೋ ಮತ್ತು ವಿಲಿಯರ್ಸರ ಕೊಲೆಯಾಗಿ ನೀವು ಗಲಭೆಯನ್ನೆಬ್ಬಿಸಿರುವಿರಿ. ನನಗೂ ಕೆಡಕಿನಿಸುತ್ತದೆ ಆದರೆ ನೀವು ಹಿಜಲಿ ಚಿತಗಾಂಗುಗಳ ಅತ್ಯಾಚಾರವನ್ನು ಅವ್ವೇ ಉದ್ವೇಗದಿಂದೇಕೆ ನಿಷೇಧಿಸುವದಿಲ್ಲ? ಸರಕಾರವು ದಬ್ಬಾಳಿಕೆಯನ್ನು ಹೂಡಿರುವದು ತಮಗೆ ಗೊತ್ತುಂಟು. ಅದರಿಂದ ಕೆಲ ಜನರ ತಲೆತಿರುಗಿರುವದು ಅವರು ಮುಯ್ಯನ್ನು ತೀರಿಸಿಕೊಳ್ಳಲು ತ್ರಾಸವನ್ನು ಕೊಡಲ್ಪು ನಿಶ್ಚಯಿಸಿರುವರು.

ಅತ್ಯಾಚಾರಗಳನ್ನು ನನ್ನಷ್ಟು ಯಾರೂ ಧಿಕ್ಕರಿಸಿರುವದಿಲ್ಲ. ಅತ್ಯಾಚಾರದಿಂದ ನನ್ನ ಮತಿಯು ಕುಂಠಿತವಾಗುವದು. ಈ ಯುವಕರು ಕಾಂಗ್ರೆಸದವರಿಲ್ಲದಿದ್ದರೂ ಕಾಂಗ್ರೆಸವು ತನ್ನ ವರ್ಚಸ್ಸನ್ನು ಅವರ ಮೇಲೆ ಕೆಡವಿಲ್ಲವೆಂದು ಹೇಳುವರು.

ಹಿಜಲಿ ಚಿತಗಾಂಗದಂಥ ಅತ್ಯಾಚಾರವು ಬೇರೆ ರಾಷ್ಟ್ರಗಳಲ್ಲಿ ಜರಿದ್ದರೆ ಅಲ್ಲಿ ಬಂಡಾಯವೇಳಬಹುದಾಗಿತ್ತು. ಆದರೆ ನಮ್ಮ ದೇಶದಲ್ಲಿ ಅಷ್ಟೆ ತೀವ್ರತೆಯು ಉಳಿದಿರುವುದಿಲ್ಲ ಕಳೆದ ೧೦ ವರ್ಷಗಳ ನಮ್ಮ ಅಂದೋಲನದಿಂದ ಅತ್ಯಾಚಾರದ ಶಕ್ತಿಯು ಕುಂಠಿತವಾಗುತ್ತ ನಡೆದಿರೆಯೆಂದು ಹೇಳುವ ನನ್ನಲ್ಲಿ ವಿಶ್ವಾಸವನ್ನಿಡಿ. ಶಾಂತಿಮಯವಾದ ಮಾರ್ಗದಿಂದ ಜನರಲ್ಲಿ ಜಾಗೃತೆಯಾಗಿದೆ. ಆದ್ದರಿಂದಲೇ ಇಲ್ಲಿ ಪತ್ರಕಾರರೇ ಮುಂತಾದವರು ಜನಜಾಗ್ರತಿಯನ್ನು ಕಂಡುಹಿಡಿಯಲಾರರು. ಪತ್ರಕಾರರು ನಿಜ ಸ್ಥಿತಿಯನ್ನು ವರ್ಣಿಸಕಕ್ಕದ್ದು. ಆದರೆ ಬ್ರಿಟಿಷ ಪತ್ರಗಳು ಹಾಗೆ ಮಾಡದೆ ಸುಳ್ಳು ಸುದ್ದಿಗಳನ್ನು ಹರಡುತ್ತಿರುವುವು.

'ಆರ್ಡಿನನ್ಸ ಎಂಬುವುದು ತಮಗೆ ಗೊತ್ತುಂಟೋ? ಕಾಯದೆ ಮಂಡಲದ ಸಹಾಯವಿಲ್ಲದೆ ವೈಸರಾಯರಿಂದ ಹೊರಡಿಸಿದ ಕಾಯಿದೆಗೆ ಆರ್ಡಿನನ್ಸು ಎಂದು ಕರೆಯುವರು. ಅಂಥದೊಂದು ಆರ್ಡಿನನ್ಸು ಹೊರಟು ಅದರ ಬಲದಿಂದ ಪೋಲೀಸರು ಬೇಕಾದವರನ್ನು ಸಂಶಯದ ಮೇಲೆ ಹಿಡಿದು ಸೆರೆಮನೆಯಲ್ಲಿರಿಸಬಹುದು. ಇಂಥ ಪರಿಸ್ಥಿತಿಯು ನಿಲ್ಲತಕ್ಕದ್ದು. ದೇವರ ಮನಸ್ಸಿಗೆ ಬಂದರೆ ಕೊಡಲಾರದ ಕೈಯಿಂದ ಸ್ವಾತಂತ್ರ್ಯವನ್ನು ತಮಗೆ ಕಸಿದುಕೊಳ್ಳಬೇಕಾಗಿದೆ. ಉತ್ತಮ ಇಂಗ್ಲಿಷ ಗೃಹಸ್ಥರು ಸ್ಥಾಪಿಸಿದ ಸುಸ್ಥಿತಿಯು ವೈಪ್ರದಲ್ಲಿಯೇ ಲಯವಾಗಬಹುದು. ನಾವು ದುಃಖದ ಪರದಾವಧಿಗೆ ತಲ್ಪಿರುವೆವು. ಸೆರೆಮನೆಯಿಂದ ಹೊರಬಿದ್ದು ವೈಸರಾಯರ ಕೂಡ ಮಾತುಕತೆಗಳಾಗಿದ್ದರಿಂದ ನಾನಿಲ್ಲಿ ಬಂದಿರುವೆನು. ಹಾಗೆ ಮಾಡದಿದ್ದರೆ ತಪ್ಪಾಗುತ್ತಿತ್ತು.

ಹಿಂದುಸ್ಥಾನದಲ್ಲಿಯ ಪರಿಸ್ಥಿತಿಯು ನಿಲ್ಲತಕ್ಕದ್ದು. ಉತ್ತಮ ಪರಿಸ್ಥಿತಿಯು ಉತ್ಪನ್ನವಾಗುವಷ್ಟ ನಾವು ದುಃಖವನ್ನು ಸಹಿಸಲಿಕ್ಕಿಲ್ಲ. ಇದಕ್ಕೂ ಹೆಚ್ಚು ಸಹಿಸಲಿಕ್ಕೆ ನಾನು ಹಿಂಜರಿಯುವುದಿಲ್ಲ. ಚಿತಗಾಂಗ ಹಿಜಲಿಗಳು ನಪಗಂಡೂ ದೀಪಸ್ತಂಭಗಳಾಗಿವೆ ಅವು ನಾನು ಹಿಂದುಸ್ಥಾನಕ್ಕೆ ಹೊರಡಬೆ ತೆಂದು ಹೇಳುವ ಪತ್ರಿಕೆಗಳಾಗಿವೆ ಸಿಟ್ಟಿಗೆದ್ದು ನಾನು ಸರಿಪತ್ತನ್ನು ಬಿಟ್ಟು ಹೋಗುವದಿಲ್ಲ. ನಾನು ಸಿಟ್ಟಿಗೇಳಲಾರೆನಂತಕ್ಕ. ಸಿಟ್ಟು ನುಂಗಿಕೊಳ್ಳುವಷ್ಟು ಶಕ್ತಿಯಷ್ಟೆ ದೇವನು ನನಗೆ ಕೊಟ್ಟಿರುವನು. ಆದ್ದರಿಂದ ನಾನು ಇಲ್ಲಿ ನಿಂತು ದಾರೀ ನೋಡುವೆನು, ನಿರೀಕ್ಷಿಸುವೆನು., ಪ್ರತಿಭಿಸುವೆನು ಮತ್ತು ಕಾಂಗ್ರೆಸ್ಸಿನ ಕರ್ತವ್ಯವನ್ನು ಜರುಗಿಸುವೆನು. ಪ್ರಸಂಗವು ಒದಗಿ ಬಂದೆ ನಾವು ಹಿಂಜರಿಯಲಾರೆವು. ಆದ್ದರಿಂದ ಕಾಂಗ್ರೆಸ್ಸು ಚಿತಗಾಂಗ ಮತ್ತು ಹಿಜಲಿಗಳಂದರೆನ್ನನ್ನವದರಲ್ಲೇ ಲಕ್ಷಕ್ಕೆ ತನ್ನಿರಿ. ಮರಣಕ್ಕೆ ಯಾರೂ ಅಂಜಿರುವದಿಲ್ಲ ಚಿತಗಾಂಗ ಹಿಜಲಿಗಳ ಅತ್ಯಾಚಾರಗಳು ನಿಲ್ಲಬೇಕಾದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಬೇಕು. ಹಿಂದುಸ್ಥಾನವು ತಪ್ಪು ಮಾಡಬಹುದು. ನೀವು ತಪ್ಪುಗಳನ್ನು ಮಾಡುವಿರಿ ನೀವು ಹಿಂಮನಾನದಲ್ಲಿ ಅವ್ಯವಸ್ಥೆಯನ್ನು ಮಾಡಿ ಬಿಟ್ಟಿರುವಿರಿ. ಹಿಂದುಸ್ಥಾನವು ನಿಮ್ಮ ಸೆರೆಯಾಳಾಗಿರುವುದಿಲ್ಲ. ಸೆರೆಯಾಳುಗಳು ನಿಯಮವನ್ನು ಸರಿಸಬೇಕಾದರೆ ಜೇಲರನು ಕೆಲವು ನಿಯಮಗಳನ್ನವು ಸರಿಸಬೇಕಾಗುವದನ್ನು ಮರೆಯಕೂಡದು ಅದರ ಲೆಕ್ಕವನ್ನು ಕೊಡಬೇಕಾಗುವುದು.

ನಿಜಸಂಗತಿಗಳನ್ನ ಹಿಂದುಸ್ಥಾನದಿಂದ ಪರಿಕಾಮನ್‌ವೆಲ್ಥ ಸಂಸ್ಥೆಯು ಪರಡಕಕ್ಕದ್ದು. ಈ ವರೆಗೆ ನಿಮ್ಮ ಈ ಸಂಸ್ಥೆಯು ಮಾಡಿದ ಕಾರ್ಯಕ್ಕಾಗಿ ನಾನು ಕುಂಬಾ ಋಣಿಯಾಗಿರುವೆನು.

ಕಾಂಗ್ರೆಸ್ಸು ಜಾತಿ ವಿಷಯಕ ಪ್ರಶ್ನೆವನ್ನು ಬಿಡಿಸಿದೆ ಆದರೆ ಸರಕಾರವು ಅದನ್ನ ತಿರುಗಿ ಒಗೆಯುತ್ತಲಿದೆ. ಹಿಂದೂ ಮುಸಲ್ಮಾನರ ಪಡುವೆ ಸರಕಾರವು ಒಂದುಗೂಡಿಸಲಾರದೆ ಅಶಕ್ತಿಯಾಗುವುದು ಈ ಜನರು ಜುನಾವಿ ಸಿದವರಲ್ಲ. ಅಂದಮೇಲೆ ಪರಿಷತ್ತು ಅಪಯಶಸ್ವಿಯಾಗುವದರಲ್ಲಿ ಆಶ್ಚರ್ಯವೇನಿರುವುದು?

ಹಿಂದುಸ್ಥಾನದಿಂದ ನಿಜವಾದ ಸಂಗತಿಗಳು ಬೇಕಾಗಿದ್ದರೆ ಪುಕ್ಕಟೆಯಾಗಿ ಅವುಗಳನ್ನು ತರಿಸಿಕೊಡಬಹುದು. ಅವುಗಳನ್ನು ನೀವು ಪರೀಕ್ಷಿಸಿ ನಂಬಬಹುದು. ಪರೀಕ್ಷೆಗಾಗಿ ಚಿತಗಾಂಗ ಹಿಜಲಿಗಳ ನಿಜಸಂಗತಿಯನ್ನು ತರಿಸಿಕೊಡುವೆನು. ಅದನ್ನು ಬ್ರಿಟಿಷ ಪತ್ರಕಾರರು ಪ್ರಸಿದ್ಧಿಸಬೇಕು. ಹೀಗಾದ ಪಕ್ಷದಲ್ಲಿ ಇಲ್ಲಿಯ ಪತ್ರಗಳಿಗೆ ಹಿಂದುಸ್ಥಾನದ ನಿಜಸ್ಥಿತಿಯನ್ನ ತಿಳಿಸಲು ಪುಕ್ಕಟೆಯಾಗಿ ಸುದ್ದಿಯು ಕೊಡಲ್ಪಡುವುದು. ಅವುಗಳಿಗಾಗಿ ತಂತಿಗಳನ್ನು ಏಸಲಾಗಿರಬಹುದು.

ಕರ್ನಾಟಕ.

ಅಖಿಲ ಭಾರತೀಯ ಶಿಕ್ಷಣ ಪರಿಷತ್ತು ಬರುವ ಡಿಸೆಂಬರ ತಿಂಗಳ ೨೪—೨೫—೨೬ ನೇ ಬೆಂಗಳೂರಲ್ಲಿ ಸೇರಿಸುವುದು.

ಗದಗಿನಲ್ಲಿ ಪರದೇಶೀ ವಸ್ತ್ರದ ಏಕಟಿಂಗು ದೋರಿನಿಂದ ನಡೆದಿದೆ.

ಧಾರವಾಡ ಜಿಲ್ಲಾ ಕಲೆಕ್ಟರರ ಅಪ್ಪಣೆಯಂತೆ ಅ ಜಿಲ್ಲೆಯ ಪೋಲಿಸ ಪಾಟೇಲರದೊಂದು ಸಭೆ ಸೇರಿತ್ತಂತೆ ಪಾಟೇಲರಿಗೆ ತಮ್ಮ ಕರ್ತವ್ಯವನ್ನು ತಿಳಿಸಿ ಕೊಡುವುದೇ ಸಭೆಯ ಉದ್ದೇಶವಾಗಿದ್ದಿತಂತೆ.

ಭದ್ರಾವತಿ ಕಾರಖಾನೆಗೆ ೨ ಕೋಟಿ ೪೦ ಲಕ್ಷ ರೂ. ಖರ್ಚಾಗಬಹುದು ಹಾಕಲ್ಪಟ್ಟಿದೆ. ಬಿದ್ದೀ ಹಿಡಿದು ಈಗ ಅದು ೪ ಕೋ ೫೦ ರೂ. ಆಗುವುದು

ಮೈಸೂರು ಗಂಧದ ಕಾರ್ಖಾನೆಯ ಅದಾಯ ಕಡಿಮೆಯಾಗಿರುವದೆಂದೂ ಕೃಷ್ಣರಾಜೇಂದ್ರ ನಿಧಿಯ ಸಾಲ ೧೬ ಲಕ್ಷದ ವರೆಗೆ ಹೆಚ್ಚಿರುವದೆಂದೂ ತಿಳಿಯುತ್ತದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ೧೬ ಜನ ಸಭಾಸದರು ಸೇರಿ ಒಂದು ಸ್ವತಂತ್ರ ಪಕ್ಷವನ್ನು ಸ್ಥಾಪಿಸಿದ್ದಾರೆ.

ಬಾಗಲಕೋಟೆ ಮ್ಯುನಿಸಿಪಾಲಿಟಿಯು ನಿಲ್ಲಿಸಲ್ಪಟ್ಟಿದೆ

ಶ್ರೀ ಪಂಜ ಮಂಗೇಶರಾಯರು ವಿಜಾಪುರದಲ್ಲಿ ಅಧುನಿಕ ಕನ್ನಡ ಸಾಹಿತ್ಯ ಎಂಬ ವಿಷಯದ ಮೇಲೆ ಭಾಷಣ ಮಾಡಿದರು

ಮೈಸೂರು ದುರ್ಗಾಬಾಜರು ತಮ್ಮ ಖಾಸಗಿ ಭಂಡಾರದಿಂದ ೨ ಲಕ್ಷ ರೂ ಗಳನ್ನು ಸರಕಾರದ ವಿದ್ಯಾರ್ಥಿಗಳಿಗಾಗಿ ಕೊಟ್ಟಿರುವರಂತೆ ತಿಳಿಯುತ್ತದೆ.

ಮೈಸೂರು ಸರಕಾರದವರು ೪೦ ರಿಂದ ೧೦೦ ರ ವರೆಗೆ ೧೦೦ ಕ್ಕೆ ೩, ೧೦೦ ರಿಂದ ೨೫೦ ರ ವರೆಗೆ ೧೦೦ ಕ್ಕೆ ೭೫, ೨೫೦ ರಿಂದ ಮೇಲೆ ೧೦೦ ಕ್ಕೆ ೧೦ ರಂತೆ ಸಂಬಳವನ್ನು ಕಟ್ಟಳೆಯೆಂದು ಅಪ್ಪಣೆ ಕೊಡಿಸಿದ್ದಾರೆ.

ಚಿಕ್ಕಾಡಿಪಂಪಯ್ಯ ಶ್ರೀ ರಾ ಶಿವಜಿ ವಕೀಲರ ಅಧ್ಯಕ್ಷತೆಯಲ್ಲಿ "ಕೊಲ್ಲ ಬಲಸಂಪದ್ಧಕ್ಷ ವ್ಯಾಯಾಮ ಮಂಡಲ" ವೆಂಬ ಸಂಸ್ಥೆಯು ಸ್ಥಾಪಿತವಾಗಿದೆ.

ಬೆಂಗಳೂರಲ್ಲಿ ಹಿಂದೆ ಪ್ಲೇಗು ಮಿಶನರಿಯಾಗಿದ್ದ ಫಾದರ ಹಾಮಿಂಗಟರಿನಾ ತವಪತ್ನಿಯು, ೧೪ ತಿಂಗಳ ಮೇಲೆ, ಅಸ್ಥಿಗಳನ್ನು ಪಾಂಡಿಚೇರಿಗೆ ಕಳುಹಿಸುವುದಕ್ಕೆಂದು, ಅಗಿದು ತೆಗೆಯಲಾಗಿ ಶವವು ಯಾವ ರೀತಿಯಿಂದಲೂ ಕೆಡದೆ ದುರ್ವಾಸನೆ, ಕ್ರಿಮಿ ಕೀಡೆಗಳಿಗಳೂ ಇಲ್ಲದೆ ಇದ್ದ ಹಾಗೇ ಇದ್ದಿತು.

ಮೈಸೂರಿನ ಶ್ರೀ ಮಾಗಿಲಿ ರಾಮಣ್ಣನವರು ತಮ್ಮ ಮೃತ ಪುತ್ರನ ಹೆಸರಲ್ಲಿ ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ೪ ಸಾವಿರ ರೂ ಗಳನ್ನು ದಾನ ಮಾಡಿದ್ದಾರೆ.

ಬಳ್ಳಾರಿಯಲ್ಲಿ ೧೦೦ ಕ್ಕೆ ೪೦ ರಂತೆ ಜನರು ಕನ್ನಡ ಮಾತಾಡುವರು ಆದರೆ ಕನ್ನಡ ಶಾಲೆಗಳು ಬರೇ ೪, ತೆಲುಗು ಶಾಲೆಗಳು ೧೪ ಇವೆ ೨ ತೆಲಗು ಕನ್ನಡ, ೨ ತೆಲಗು ತಮಿಳು ೨ ಉರ್ದು ಶಾಲೆಗಳಿವೆ ಎಷ್ಟೋ ಭಾಗದಲ್ಲಿ ಜನರು ಕನ್ನಡ ಮಾತಾಡುತ್ತಿದ್ದರೂ ಶಾಲೆಗಳು ತೆಲಗು ಆಗಿವೆ.

ದಕ್ಷಿಣ ಕನ್ನಡ ಜಿಲ್ಲಾ ಆಂಗ್ಲ ವೈದ್ಯರ ಸಮ್ಮೇಲನವು ಇದೇ ಬರುವ ೨೨ ನೇ ತಾರೀಖಿಗೆ ಮಂಗಳೂರಲ್ಲಿ ಸೇರಲಿರುವುದು

ಸಾಂಗಲೀ ಸಂಸ್ಥಾನದಲ್ಲಿ ಆಕಳುಗಳನ್ನು ಕಟುಕರಿಗೆ ಮಾರಿದರೆ ೩ ತಿಂಗಳು ಕಠಿಣ ಶಿಕ್ಷೆ ಜಫಮಾ ೧೦೦ ರೂ. ದಂಡವಿಧಿಸಲ್ಪಟ್ಟಿದೆ.

ಸಂಯುಕ್ತ ಪ್ರಾಂತದ ಕ್ರಿಸ್ತೀಯರ ಪರಿಷತ್ತಿನಲ್ಲಿ ಸಂಯುಕ್ತ ಮತದಾರ ಸಂಘಕ್ಕೆ ಬೆಂಬಲ ಕೊಡಲ್ಪಟ್ಟಿದೆ.

ಈವರೆಗೆ ೧೧ ಕ್ಕೆ ಬೇರೆ ಬೇರೆ ಕಡೆಗೆ ಮಹಾಯುದ್ಧ ಶಾಂತಿಯ ದಿನವು ಆಚರಿಸಲ್ಪಟ್ಟಿತು

ಕೊಲಾರದ ಚಿನ್ನದ ಖಾಣಿಯಲ್ಲಿ ಈವರೆಗೆ ಒಂದು ಪಕ್ಷ ಪಡ್ಡಿ ಎರಡು ಅಪಘಾತಗಳಾಗಿ ೬ ಜನರು ಮರಣ ಹೊಂದಿದರು.

ಮೈಸೂರ ಸಂಸ್ಥಾನದ ಹುಮಚಳಿರಿಲ್ಲಿ ಕೆರೆ ಅಂಗಡಿಗಳ ಏಲಿಟಿಂಗು ಜೋರಿನಿಂದ ನಡೆದಿದ್ದು ೩೨ ಜನ ಸ್ವಯಂಸೇವಕರ ಮೇಲೆ ಏಟ್ಲಿಗರಾಗಿವೆ ಶ್ರೀ ರಂಗ ಅಯ್ಯಂಗಾರ್, ಶ್ರೀ ಸೆಟ್ಟ್ಯಾರು ಹಾಗೂ ಶ್ರೀ ಸುಬ್ರಹ್ಮಣ್ಯಂ ಈ ಮೂವರು ಎಡ್ವೋಕೇಟರಿಗೆ ೧೫೪ ನೇ ಕಲಮಿನಂತೆ ನೋಟೀಸು ಕೊಡಲ್ಪಟ್ಟಿದೆ

ಹಿಂದುಸ್ಥಾನ.

ತ್ರಾವಣಕೋರ ಯುವಪಾಡರು ಕಳೆದ ೬ ನೇ ತಾರೀಖಿಗೆ ಪಟ್ಟಾಭಿಷೇಕ ನಡೆದು ಸಿಂಹಾಸನವನ್ನೇರಿದರು. ಈ ಸದವಾರಂಭದ ಕಾಲಕ್ಕೆ ೩೦ ವರ್ಷ ಕೈದಿಗಳನ್ನು ಜೈಲಿಂದ ಬಿಡುಗಡೆ ಮಾಡಿ ಜಾಏಿಸಲು ಆಡಳಿತದ ಖರ್ಚಾಂಕಿಗೆ ೧ ಲಕ್ಷ, ಅಶಕ್ತ ಪೋಷಕ ಸಂಘಕ್ಕೆ ಅರ್ಧ ಲಕ್ಷ ರೂ. ಕೊಟ್ಟಿದ್ದಾರೆ.

ಡಾ॥ ಅನಿಬಿಸೆಂಟಮ್ಮನವರು ಅಸ್ವಸ್ಥರಾಗಿದ್ದು ಅವರ ಪ್ರಕೃತಿ ಬಹಳ ಕ್ಷೀಣವಾಗಿದೆ.

ಕಲಕತ್ತೆಯ ಸ್ವತಂತ್ರ ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ. ಭಗತ ಮಿತ್ರ ಇವರಿಗೆ ಜಂತಿ ಜಾತಿಗಳಲ್ಲಿ ವೈಮನಸ್ಯವನ್ನುಂಟು ಮಾಡಿದರೆಂದು ೪ ತಿಂಗಳು ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ.

ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ತ್ರಾವಣಕೋರ ಸಂಸ್ಥಾನದ ದಿವಾಣರಾಗಿ ನೇಮಿಸಲ್ಪಟ್ಟಿರುತ್ತಾರೆ.

ಬಂಗಾಲದಲ್ಲಿ ನಡೆದಿರುವ ಕ್ರಾಂತಿಕಾರಿ ಚಳವಳಿಯನ್ನು ಬಗ್ಗು ಬಡಿಯುವದಕ್ಕೆ ಬಂಗಾಲ ಸರಕಾರವು ಬೇಗನೆ ಉಗ್ರವಾದ ಉಪಾಯವನ್ನು ಕೈಕೊಳ್ಳುವರೆಂದು ಮಿ॥ ವ್ಹಿಲಿಯರ್ಸ (ಯುರೋಪಿಯನ್ ಸಂಘದ ಅಧ್ಯಕ್ಷ) ರು ಆಡಿದ್ದಾರೆ

ಬಂಗಾಲ ಪ್ರಾಂತದಲ್ಲಿ ಹೊಸ ಆರ್ಡಿನೆನ್ಸನಂತೆ ಹಲವರು ಸೆರೆ ಹಿಡಿಯಲ್ಪಟ್ಟಿದ್ದಾರೆ.

ಮುಂಬೈ ಪ್ರಾ ಕಿ ಕಾಂಗ್ರೆಸ್ ಕಮಿಟಿಯವರು ಮುಂಬೈ ಕಾರ್ಪೋರೇಶನ್ನಿನ ಚುನಾವಣೆಗೆ ೪೨ ಜನ ಅಭ್ಯರ್ಥಿಗಳನ್ನ ನಿಲ್ಲಿಸಿದ್ದಾರೆ.

ಡಾಕಾದ ಮ್ಯಾಜಿಸ್ಟ್ರೇಟರಾದ ಮಿಗ್ ಡುಸ್ಕೋ ಇವರ ಮೇಲೆ ನಡಿಸಿದ ಅತ್ಯಾಚಾರದ ನಿಮಿತ್ತ ಡಾಕಾದಲ್ಲಿ ೬೪ ಜನರನ್ನು ಕೈದುಮಾಡಿದ್ದಾರೆ.

ಮುಂಬೈಯ್ಯಲ್ಲಿ ಪ್ರಕಟವಾಗುತ್ತಿದ್ದ ಭಗವಾಧ್ವಜ ಡಾ ಪತ್ರಿಕೆಯ ಸಂಪಾದಕರಾದ ಶ್ರೀ ದೇಸಾಯಿ ಇವರನ್ನು ಭಗತಸಿಂಗ ಪದಗಳನ್ನು ಪ್ರಕಟಿಸಿದ್ದಕ್ಕಾಗಿ ಕೈದು ಮಾಡಿದ್ದಾರೆ.

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸೆಕ್ರೆಟರಿಗಳಾದ ಶ್ರೀ ರಿ ಮಣಿರೇಸ್ಕರ ಜೋಶಿ ಇವರಿಗೆ ೬ ತಿಂಗಳು ಕಠಿಣ ಶಿಕ್ಷೆ, ೨೦೦ ರೂ. ದಂಡ ವಿಧಿಸಲ್ಪಟ್ಟಿದೆ.

ದಿವಾಣ ಗಂಗಾಚಾರ್ಯರು ಅಸ್ವಸ್ಥರಾಗಿರುವದರಿಂದ ಲೇ ಎಸೆಂಬ್ಲಿಯ ರಾಷ್ಟ್ರೀಯ ಪಕ್ಷದ ಮುಖಂಡತ್ವಕ್ಕೆ ರಾಜಿನಾಮೆ ಕೊಟ್ಟಿದ್ದಾರೆ

ಸಿಂಧ ಪ್ರಾಂತವನ್ನು ಮುಂಬೈ ಇಲಾಖೆಯಿಂದ ಬೇರೆ ಮಾಡಿದರೆ ಅದಕ್ಕೆ ಬೆಚ್ಚಲ್ಲಿ ತೋಟೆ ಬರುವುದೆಂದು ದಿವಾಣ ಬೇಹಾದೂರ ಸಿಂಧ ವಿಚಾರಣಾ ಮಂಡಲದವರು ಅಭಿಪ್ರಾಯ ಪಟ್ಟಿದ್ದಾರೆ

ಸಂಯುಕ್ತ ಪ್ರಾಂತದ ಭತ್ತೇಪುರ ಜಿಲ್ಲೆಯ ಒಬ್ಬ ಜಮೀನುದಾರನಿಗೂ ಅವನ ರೈತರಿಗೂ ಕಲಹವುಂಟಾಗಿ ಜಮೀನುದಾರನನ್ನು ಕೊಂದು ಹಾಕಿದ್ದಲ್ಲದೆ, ಆತನ ಮಿತ್ರರನ್ನು ಗಾಯ ಪಡಿಸಿದ್ದಾರೆ.

ಶ್ರೀ. ಸುಭಾಸಚಂದ್ರ ಬೋಸರು ಡಾಕ್ಟರ್ಕೆ ಹೋಗಬೇಕೆಂದು ಸೂರಟಿಗೆ ಬಂದಾಗ ಅವರ ಮೇಲೆ ೧೪೪ ನೇ ಕಲಮಿನಅನ್ವಯವು ಎಸೆಯಲ್ಪಟ್ಟಿತು. ಆದಾಗ್ಯೂ ಅವರು ಅಲ್ಲಿಗೆ ಹೋದುದರಿಂದ ಅವರನ್ನು ಸೆರೆ ಹಿಡಿದು ಡಾಕಾ ಸೆಂಟ್ರಲ್ ಜೈಲಿಗೆ ಕಳಿಸಿದರು.

ಮುಂಬೈ ವಿಶ್ವವಿದ್ಯಾಲಯದ ಎಲ್. ಎಲ್. ಬಿ. ಪರೀಕ್ಷೆಯ ಫಲಿತಾಂಶವು ಪ್ರಕಟವಾಗಿರುವುದು.

ಶ್ರೀ. ಟಿ. ಎಸ್ ರಾಮಸ್ವಾಮಿ ಅಯ್ಯರ ಇವರು ಮದ್ರಾಸ್ ಕಾರ್ಪೊರೇಶನ್ನಿನ ಅಧ್ಯಕ್ಷರಾಗಿ ಸರ್ವಾನು ಮತದಿಂದ ಆರಿಸಲ್ಪಟ್ಟಿದ್ದಾರೆ.

ಹಿಂದುಸ್ಥಾನಕ್ಕೆ ಜವಾಬ್ದಾರಿ ರಾಜ್ಯ ಪದ್ಧತಿಯನ್ನು ಕೊಡುವಿದ್ದರೆ ಹಿಂದುಸ್ಥಾನದ ಕಾಂತತೆಯು ಕೆಟ್ಟುಹೋಗುವುದೆಂದು ಸರ್ ಹರೀಸಿಂಗ ಗೌರ ಇವರು ಮಿ॥ ಮೆಕಡನಾಲ್ಡರಿಗೆ ತಿಂಕಯನ್ನು ಕಳುಹಿಸಿದ್ದಾರೆ.

ಸಂಯುಕ್ತ ಪ್ರಾಂತದಲ್ಲಿಯ ತೆರಿಗೆ ವಸೂಲಿಯ ವಿಷಯದಲ್ಲಿ ಅಲ್ಲಿಯ ಸರಕಾರದಿಂದ ಪಂ॥ ಜವಾಹರಲಾಲ ನೆಹರು ಹಾಗೂ ಮಿಃ ಶಂವಾನಿ ಇವರಿಗೆ ಪತ್ರ ಬಂದಿದೆ. ಈ ಉತ್ತರವನ್ನು ಕುರಿತು ವಿಚಾರ ಮಾಡಲು ಸಂ. ಪ್ರಾಂ. ಕಾಂಗ್ರೆಸ್ ಕಮಿಟಿಯು ಕಳೆದ ೧೫ ನೇ ತಾರೀಖಿ ಸೇರಿದೆ.

ಕಲಕತ್ತೆಯ ಯುರೋಪಿಯನ್ ಸಂಘದ ಅಧ್ಯಕ್ಷರಾದ ಮಿ॥ ವಿಲ್ಲಿಯರ್ಸ ಇವರು ಮೇಲೆ ಗುಂಡುಹಾರಿಸಿದ ವಿಮಲ ಶಾಸ್ತಾರದಾಸ ಗುಪ್ತನಿಗೆ ೧೦ ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿದೆ.

ಶ್ರೀ. ಎಮ್. ಎನ್. ರಾಯರವರು ಬಹಳ ಅಕಕ್ಕರಾಗಿದ್ದ ಕಾರಣ ಜೈಲನಲ್ಲೇ ವಿಚಾರಣೆ ನಡೆದು ಜಾರ್ಜ ಪತ್ರಿಕೆಯು ಓದಿ ಹೇಳಲ್ಪಟ್ಟಿದೆ.

ಪರದೇಶ.

ರಷಿಯದವರು ತಮ್ಮ ಹತ್ಯಿಯನ್ನು ಯುರೋಪಿನ ಬಾಜಾರಕ್ಕೆ ಕಳುಹಿಸತಕ್ಕವರಿದ್ದಾರೆ.

ಲಾರ್ಡ ಇರ್ವಿನ್ನರು ರೌಂ. ಟೇ. ಕಾನಫರನ್ಸಿನ ಸ್ವಪ್ರತಿನಿಧಿಗಳಿಗೆ ಒಂದು ಔತಣವನ್ನಿತ್ತರು.

ಇಂಗ್ಲಂಡಿನ ಪಾರ್ಲಿಮೆಂಟಿನ ಕೂಲಿಕಾರ ಪಕ್ಷಕ್ಕೆ ಮಿ. ಲಾನ್ಸಬರಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಇಂಗ್ಲಂಡಿನ ಖಜಿಕೂಲಿಕಾರರ ಮುಖಂಡರಾದ ಮಿ ಶಿಂಕ್ ಇವರು ಮರಣ ಹೊಂದಿದರು.

ಇಂಗ್ಲಂಡಿನ ಮುಖ್ಯ ಮಂತ್ರಿ ಮಿ. ಮೆಕಡನಾಲ್ಡರು ಮಂಡಿನಿವರ್ಷ ಮುಖ್ಯ ಮಂತ್ರಿಪದವನ್ನು ಬಡಬೇಕಾಗುವುದೆಂದೂ ಅವರನ್ನು ಆರ್ಡಿನರನ್ನಾಗಿ ಮಾಡಿ ಹಿಂದುಸ್ಥಾನದ ವಾಯ್ಸರಾಯರನ್ನಾಗಿ ನೇಮಿಸುವರೆಂದೂ ಸುದ್ದಿಯಿದೆ.

ಅಂಕೋಲಾ ತಾಲೂಕ ರೈತರ ದುರವಸ್ಥೆ.

ಅಂಕೋಲಾ ತಾಲೂಕ ಜಾರವಾಡಾ ಗ್ರಾಮದ ನಿವಾಸಿಗಳಾದ ರೈತರು ಕಲೆಕ್ಟರ ದೊರೆಗಳ ಕಡೆಗೆ ಈ ಕೆಳಗಣಂತೆ ಅರ್ಜಿ ಮಾಡಿಕೊಂಡಿದ್ದಾರೆ.

ಇದೇ ಸಾಲ ಅಂದರೆ ೧೯೩೧-೧೯೩೨ ನೇ ಸಾಲಕ್ಕೆ ಸರಿಯಾದ ಪ್ರಮೋದ ಸಂವತ್ಸರದ ಭತ್ತದ ಪೈರನ್ನು ಈ ಹೊತ್ತಿಗೆ ಬಿತ್ತಿ ೬ ತಿಂಗಳಿಗೆ ಮಿಸ್ಸೆತು. ೪-೫ ತಿಂಗಳೊಳಗಾಗಿ ಕೊಯಿಲು ಮಾಡಿ ದಾಸ್ತಾನ ಮಾಡಿಕೊಳ್ಳಬೇಕಾಗಿತ್ತು. ಬೆಳೆ ಅಜಮಾಸಲು ಆಣೆ ಪೀಕು ಬಂದಿತ್ತು. ಆದರೂ ಬೆಚ್ಚಿದ ಬದಿಯ ಹೊಲಗಳೂ ಹಾಗೂ ಹೊಂಡದ ಭೂಮಿಯೂ ಕೂಡಾ ಕಾಡುಪ್ರಾಣಿಗಳ ಹಾಗೂ ಕಾಡಾನೆಗಳ ಬಾಯಿಂದ ತಪ್ಪಿ ಉಳಿದದ್ದು ಮೇಘರಾಜನ ಕಾಟಕ್ಕೆ ಈಡಾಗಿ ೫-೪ ಆಣೆ ಬೆಳೆಯಾದರೂ ರೈತರ ಕೈಗೆ ಸಿಕ್ಕುವದೋ ಇಲ್ಲೋ ಎಂಬ ವ್ಯವಸನವಡುತ್ತಲಿದ್ದೇವೆ ಮತ್ತೆಯು ಈಗಲೂ ಸಹ ಬೀಳುತ್ತಿರುವದರಿಂದ ಭತ್ತ ಹುಲ್ಲು ಕೂಡಾ ಭೂಮಿ ನೀರಿನ ಪಾಲಿಗೇ ಆಗಿ ರೈತರು ಬರಿಗೈಯವರಾಗುವರೆಂಬ ಚಿಂತೆಯುಂಟಾಗಿದೆ. ಇನ್ನ ೪-೧೦ ದಿವಸಗಳ ವರೆಗೆ ಇದೇ ರೀತಿ ಮಳೆ ಬೀಳುತ್ತಿದ್ದರೆ ಕಟಾವ ಸಹ ಮಾಡದೇ ಹಾಗೇ ಬಿಡುವ ಯೋಗವು ಕೆಲವು ಭೂಮಿಗೆ ಬರಬಹುದಾಗಿ ತೋರುತ್ತದೆ. ಹೀಗೆ ಕಠಿಣ ಸ್ಥಿತಿಯಲ್ಲಿ ಬಳಲುತ್ತಿರುವ ಈ ರೈತರು ಗೇಣಿ ತೀರ್ನೆ, ಸಾಲಗಾರರ ಸಾಲ, ರೈತರ ಉದರನಿರ್ವಾಹ ಇತ್ಯಾದಿಗಳಿಗೆ ಒಂದು ಔತಣವನ್ನಿತ್ತರು.

ಇಂಗ್ಲಂಡಿನ ಪಾರ್ಲಿಮೆಂಟಿನ ಕೂಲಿಕಾರ ಪಕ್ಷಕ್ಕೆ ಮಿ. ಲಾನ್ಸಬರಿಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಇಂಗ್ಲಂಡಿನ ಖಜಿಕೂಲಿಕಾರರ ಮುಖಂಡರಾದ ಮಿ ಶಿಂಕ್ ಇವರು ಮರಣ ಹೊಂದಿದರು.

ಇಂಗ್ಲಂಡಿನ ಮುಖ್ಯ ಮಂತ್ರಿ ಮಿ. ಮೆಕಡನಾಲ್ಡರು ಮಂಡಿನಿವರ್ಷ ಮುಖ್ಯ ಮಂತ್ರಿಪದವನ್ನು ಬಡಬೇಕಾಗುವುದೆಂದೂ ಅವರನ್ನು ಆರ್ಡಿನರನ್ನಾಗಿ ಮಾಡಿ ಹಿಂದುಸ್ಥಾನದ ವಾಯ್ಸರಾಯರನ್ನಾಗಿ ನೇಮಿಸುವರೆಂದೂ ಸುದ್ದಿಯಿದೆ.

ಅಂಕೋಲಾ ತಾಲೂಕ ರೈತರ ದುರವಸ್ಥೆ.

ಅಂಕೋಲಾ ತಾಲೂಕ ಜಾರವಾಡಾ ಗ್ರಾಮದ ನಿವಾಸಿಗಳಾದ ರೈತರು ಕಲೆಕ್ಟರ ದೊರೆಗಳ ಕಡೆಗೆ ಈ ಕೆಳಗಣಂತೆ ಅರ್ಜಿ ಮಾಡಿಕೊಂಡಿದ್ದಾರೆ.

ಇದೇ ಸಾಲ ಅಂದರೆ ೧೯೩೧-೧೯೩೨ ನೇ ಸಾಲಕ್ಕೆ ಸರಿಯಾದ ಪ್ರಮೋದ ಸಂವತ್ಸರದ ಭತ್ತದ ಪೈರನ್ನು ಈ ಹೊತ್ತಿಗೆ ಬಿತ್ತಿ ೬ ತಿಂಗಳಿಗೆ ಮಿಸ್ಸೆತು. ೪-೫ ತಿಂಗಳೊಳಗಾಗಿ ಕೊಯಿಲು ಮಾಡಿ ದಾಸ್ತಾನ ಮಾಡಿಕೊಳ್ಳಬೇಕಾಗಿತ್ತು. ಬೆಳೆ ಅಜಮಾಸಲು ಆಣೆ ಪೀಕು ಬಂದಿತ್ತು. ಆದರೂ ಬೆಚ್ಚಿದ ಬದಿಯ ಹೊಲಗಳೂ ಹಾಗೂ ಹೊಂಡದ ಭೂಮಿಯೂ ಕೂಡಾ ಕಾಡುಪ್ರಾಣಿಗಳ ಹಾಗೂ ಕಾಡಾನೆಗಳ ಬಾಯಿಂದ ತಪ್ಪಿ ಉಳಿದದ್ದು ಮೇಘರಾಜನ ಕಾಟಕ್ಕೆ ಈಡಾಗಿ ೩-೪ ಆಣೆ ಬೆಳೆಯಾದರೂ ರೈತರ ಕೈಗೆ ಸಿಕ್ಕುವದೋ ಇಲ್ಲೋ ಎಂಬ ವ್ಯವಸನವಡುತ್ತಲಿದ್ದೇವೆ ಮತ್ತೆಯು ಈಗಲೂ ಸಹ ಬೀಳುತ್ತಿರುವದರಿಂದ ಭತ್ತ ಹುಲ್ಲು ಕೂಡಾ ಭೂಮಿ ನೀರಿನ ಪಾಲಿಗೇ ಆಗಿ ರೈತರು ಬರಿಗೈಯವರಾಗುವರೆಂಬ ಚಿಂತೆಯುಂಟಾಗಿದೆ. ಇನ್ನ ೪-೧೦ ದಿವಸಗಳ ವರೆಗೆ ಇದೇ ರೀತಿ ಮಳೆ ಬೀಳುತ್ತಿದ್ದರೆ ಕಟಾವ ಸಹ ಮಾಡದೇ ಹಾಗೇ ಬಿಡುವ ಯೋಗವು ಕೆಲವು ಭೂಮಿಗೆ ಬರಬಹುದಾಗಿ ತೋರುತ್ತದೆ. ಹೀಗೆ ಕಠಿಣ ಸ್ಥಿತಿಯಲ್ಲಿ ಬಳಲುತ್ತಿರುವ ಈ ರೈತರು ಗೇಣಿ ತೀರ್ನೆ, ಸಾಲಗಾರರ ಸಾಲ, ರೈತರ ಉದರನಿರ್ವಾಹ ಇತ್ಯಾದಿಗಳ ಹೊಟ್ಟೆ ಇಪ್ಪೆಲ್ಲ ಕಷ್ಟಕ್ಕೆ ಒಳಗಾಗಿದ್ದು ಮೆಹರ್ಬಾನವರು ಚೌಕಶಿ ನಡಿಸಿ ರೈತರನ್ನು ಕಾಪಾಡುವ ಯೋಜನೆ ನಮಗೆ ಸೂಚಿಸಲಿಕ್ಕೆ ಬೇಡುತ್ತೇವೆ.

ಒಬ್ಬ ಬಡ ರೈತ.

ಮಾಧ್ಯಮಿಕ ಶಾಲೆಗಳ ಗ್ರಾಂಟು ಕತ್ತರಿಸಬಾರದು.

(ಬರಿದು ಬಂದದ್ದು.)

ಕರ್ನಾಟಕದ ಮಾಧ್ಯಮಿಕ ಶಾಲೆಗಳ ಮುಖ್ಯಾಧ್ಯಾಪಕರೊಂದು ಸಭೆಯು ವಿಜಾಪುರದಲ್ಲಿ ಸೇರಿತು. ಧಾರವಾಡದ ಬಿ. ಎಂ. ಹಾಯಸ್ಕೂಲಿನ ಮುಖ್ಯಾಧ್ಯಾಪಕರಾದ ಮಿ॥ ಎ. ವಿ. ಮೆಥ್ಯುರವರು ಅಧ್ಯಕ್ಷರಾಗಿದ್ದರು. ಶ್ರೀ. ಕೆ. ಜಿ ವರ್ಟಿಯವರು ಮಾಧ್ಯಮಿಕ ಶಾಲೆಗಳ ಆರ್ಥಿಕ ಸ್ಥಿತಿಯನ್ನು ಕುರಿತು ವಿವರಿಸಿ ಸರಕಾರದವರು ೧೦೦ ಕ್ಕೆ ೫೦ ರಂತೆ ಗ್ರಾಂಟು ಕಡಿಮೆ ಮಾಡಬೇಕೆಂದು ಯೋಚಿಸಿದ್ದರಿಂದ ಶಾಲೆಗಳನ್ನು ಯೋಗ್ಯಸ್ಥಿತಿಯಲ್ಲಿಡಲು ಕಷ್ಟವಾಗುವುದೆಂದು ನುಡಿದರು. ಈ ಸಭೆಯು ಈ ಕೆಳಗಣ ಠರಾವು ಮಾಡಿದೆ.

"ಗ್ರಾಂಟನ್ನು ಕಡಿಮೆ ಮಾಡುವ ಸುದ್ದಿ ಕೇಳಿ ನಮ್ಮ ಮೇಲೆ ಸಿಡಿಲು ಬಿದ್ದಂತಾಗಿದೆ. ಈ ಕಾಟ ಕಸರಿನ ಯೋಜನೆಯಿಮ್ದ ಜಾರಿಯಲ್ಲಿ ತಂದ ಬಳಿಕ ಶಾಲೆಗಳು ತಮ್ಮ ಖರ್ಚು ಕಡಿಮೆ ಮಾಡಬೇಕಾಗುವುದು. ಆದರಿಂದ ಶಿಕ್ಷಕರನ್ನಾಗಲೀ ಅವರ ಸಂಬಳವನ್ನಾಗಲೀ ಕಡಿಮೆ ಮಾಡಬೇಕಾಗುವುದು ಅದರಿಂದ ಶಾಲೆಗಳ ಸ್ಥಿತಿಯನ್ನು ಯೋಗ್ಯ ರೀತಿಯಲ್ಲಿ ಕಾಪಿಡುವುದು ಕಷ್ಟವಾಗುವುದು. ಕೆಲವು ಶಾಲೆಗಳಿಗೆ ಕೇವಲ ವಿಚ್ಛಿದಪ್ಪೇ ಮಾತ್ರ ಉಳ್ಪನ್ನವಿದ್ದು ಅವು ಕಷ್ಟದಿಂದ ಬದುಕುತ್ತಿವೆ. ಅಂತಹ ಶಾಲೆಗಳು ಈ ಕಾಟಕಸರಿನ ಮೂಲಕ ಬಾಧಿಲು ಇಕ್ಕಬೇಕಾಗುವುದು. ಅದರಿಂದ ಶಿಕ್ಷಣ ಪ್ರಸಾರಕ್ಕೆ ತಡೆಯುಂಟಾಗುವುದು ಅದರಿಂದ ಈ ಕಾಟಕಸರು ರಾಷ್ಟ್ರೀಯ ಮತ್ತು ಶಿಕ್ಷಣ ಪ್ರಸಾರದ ದೃಷ್ಟಿಯಿಂದ ಘಾತಕವಾಗಿದ್ದು ಇದು ಅನಪೇಕ್ಷಿತವಾಗಿದೆ ಆದರಿಂದ ಈ ಪ್ರಶ್ನೆಯ ಕುರಿತು ಪುನರ್ವಿಚಾರ ಮಾಡಬೇಕೆಂದು ಕಾಟಕಸರು ಕಮಿಟಿಗೆ ವಿನಂತಿಯಿದೆ."

ಪುಣೆ ಕರ್ನಾಟಕ ಸಂಘಕ್ಕೆ ನಾ॥ ಕಂಬಳಿಯವರ ಭೇಟ್ಟಿ.

ಪುಣೆಯಲ್ಲಿರುವ ಕರ್ನಾಟಕ ಸೋಶಲ್ ಕ್ಲಬ್ಬಿನ ಉಪಾಧ್ಯಕ್ಷರು ತಿಳಿಸುವುದೇನಂದರೆ —

ಬೇಸಾಯ ಖಾತೆಯ ಮಂತ್ರಿಗಳಾದ ನಾ. ದಿ. ಬ ಕಂಬಳಿಯವರು ಕರ್ನಾಟಕ ಸೋಶಲ್ ಕ್ಲಬ್ಬನ್ನು ತಾ. ೬—೧೧—೧೯೩೧ ಕೆ ಸಂದರ್ಶಿಸಿದರು. ಪ್ರೊ. ಪಟವರ್ಧನರವರು ಕ್ಲಬ್ಬಿನ ಸಭಾಸದರ ಪರಿಚಯ ಮಾಡಿಕೊಟ್ಟರು. ನಾ. ಕಂಬಳಿಯವರು ಮಹಾರಾಷ್ಟ್ರದ ಹೃದಯದಲ್ಲಿ ಈ ಸಂಘವನ್ನು ಸ್ಥಾಪಿಸಿದ್ದಕ್ಕಾಗಿ ಸಭಾಸದರನ್ನು ಅಭಿನಂದಿಸಿ ತಮ್ಮ ಬಂಧುಗಳನ್ನು ಪ್ರೀತಿಸಬೇಕೆಂದೂ ವಿಶ್ವಪ್ರೇಮ ಮತ್ತು ಸಹಕಾರ ಭಾವನೆಗಳನ್ನು ಬೆಳೆಸಬೇಕೆಂದೂ ಕರ್ನಾಟಕದ ತರುಣ ವರ್ಗಕ್ಕೆ ಸಹಾಯ ಮಾಡಬೇಕೆಂದೂ ಉಪದೇಶಿಸಿದರು.

ಅತಿಥಿಗಳಿಗೆ ಚಹಾ ಮತ್ತು ತಾಂಬೂಲಗಳು ಅರ್ಪಿಸಲ್ಪಟ್ಟ ಬಳಿಕ ಸಭಾ ವಿಸರ್ಜನೆಯಾಯಿತು.

ಹಿಂದೀ ಪ್ರಚಾರ.

ಈ ವರ್ಷ ದಕ್ಷಿಣ ಹಿಂದುಸ್ಥಾನದ ಬೇರೆ ಬೇರೆ ಪ್ರಾಂತದಲ್ಲಿ ನಡೆದ ಹಿಂದೀ ಭಾಷಾ ಪರೀಕ್ಷೆಗೆ ಒಟ್ಟಿಗೆ ೨೪೯೮ ಜನ ಉಮೇದ್ವಾರರು ಕುಳಿತಿದ್ದರು ಅವರಲ್ಲಿ ೧೭೬೬ ಜನ ಉಮೇದ್ವಾರರು ಉತ್ತೀರ್ಣರಾಗಿರುತ್ತಾರೆ. ಅವರಲ್ಲಿ ಪ್ರಾಥಮಿಗ ತರಗತಿಯಲ್ಲಿ ೧೩೮೨ ಮಧ್ಯಮ ತರಗತಿಯಲ್ಲಿ ೨೫೨, ರಾಷ್ಟ್ರಭಾಷಾ ತರಗತಿಯಲ್ಲಿ ೧೩೨ ಜನ ಉಮೇದ್ವಾರರು ಉತ್ತೀರ್ಣರಾಗಿರುವರು. ಬೇರೆ ಬೇರೆ ಪ್ರಾಂತಗಳಲ್ಲಿ ಈ ಕೆಳಗಣಂತೆ ಪರೀಕ್ಷಾ ಕೇಂದ್ರಗಳಿದ್ದುವು. ಆಂಧ್ರ ೧೩೩, ತಮಿಳುನಾಡು ೧೭, ಕೇರಳ ೩೩, ಕರ್ನಾಟಕ ೧೪, ಮೈಸೂರು ೧, ಹೈದ್ರಾಬಾದ ೧, ಬ್ರಹ್ಮದೇಶ ೧.

ರಾಷ್ಟ್ರಭಾಷಾ ತರಗತಿಯಲ್ಲಿ ಬೆಂಗಳೂರ ಶ್ರೀಮತಿ ಗಿರಿಜಾ ದೇವಿಯವರಿಗೆ ಮೊದಲನೇ ಬಹುಮಾನವು ದೊರೆತಿದೆ

ಜಯಕರ್ನಾಟಕ.

೧೦ನೇ ವರ್ಷದ ಮೊದಲನೇ ಸಂಚಿಕೆ.

ಈ ಸಂಚಿಕೆಯಲ್ಲಿ ಡಾ॥ ರಾಮಶಾಸ್ತ್ರಿ, ಶ್ರೀ ಗುರುರಾವ ಮಾಳಸೇಕರ, ಪಂಜೆ ಮಂಗೇಶರಾಯರು, ಶ್ರೀಮತಿ ಕಪಲಾವತಿ, ಶ್ರೀ॥ ಕೆ ವಿ. ಅಯ್ಯರ ಇವರೇ ಮೊದಲಾದ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಿಕೆಯರ ಉತ್ಕೃಷ್ಟ ಲೇಖನಗಳೂ, ಅನೇಕ ಚಿತ್ರಗಳೂ ಪ್ರಕಟವಾಗುವುವು. ಸಂಚಿಕೆಯು ಪ್ರತಿಫಲಕ್ಕೆಂಕ ೧॥ ಮಡಿ ದೊಡ್ಡದಾಗುವುದು. ಬಿಡಿ ಸಂಚಿಕೆಯ ಬೆಲೆ ೧ ರೂ. ಇರುವುದು.

ಕಾರ್ಯದರ್ಶಿ, ಜಯಕರ್ನಾಟಕ,
ಧಾರವಾಡ

ಶ್ರೀ॥ ಭಕ್ರಿಯವರಿಗೆ ಸನ್ಮಾನ.

ಹಳಿಯಾಳ ಮ್ಯುನಿಸಿಪಾಲಿಟಿಯವರಿಂದ

ಬರೆದು ಬಂದಿರುವುದೇನಂದರೆ—

ಹಳಿಯಾಳ ಮ್ಯುನಿಸಿಪಾಲಿಟಿಯ ಮೊದಲನೆಯ ಸಭೆಯು ಕಳೆದ ನೇ ತಾರೀಕಿಗೆ ಸೇರಿ ಹಿಂದಿನ ಬೋರ್ಡಿನ ಅಧ್ಯಕ್ಷರಾದ ಶ್ರೀ॥ ಭಕ್ರಿಯವರು ಮಾಡಿದ ಸೇವೆಯನ್ನು ಅಭಿನಂದಿಸುವ ನಿರ್ಣಯ ಮಾಡಿದ್ದಲ್ಲದೆ ಅವರ ಭಾವಚಿತ್ರವನ್ನು ಮ್ಯುನಿಸಿಪಾಲಿಟಿಯ ಕಚೇರಿಯಲ್ಲಿಡಬೇಕೆಂದು ನಿರ್ಣಯಿಸಿ ಆ ಬಗ್ಗೆ ೩೫೦ ರೂ ಗಳನ್ನು ಮಂಜೂರು ಮಾಡಿದೆ ಸಭೆಯ ಕೊನೆಗೆ ಶ್ರೀ॥ ಭಕ್ರಿಯವರಿಗೆ ತಾಂಬೂಲ ಸಮರ್ಪಣೆ ಮಾಡಲ್ಪಟ್ಟಿತು.



ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸೇವೆಕರಲ್ಲಿ ವಿಜ್ಞಾಪನೆ.

ನಮ್ಮ ಜಿಲ್ಲೆಯಲ್ಲಿ ಕರ್ನಾಟಕ ಸಾಹಿತ್ಯ ಸಮ್ಮೇಲನವು ಸೇರಿ ಹತ್ತಿರುವುದು ಇದೇ ಮೊದಲನೆಯ ಬಾರಿ. ನಮ್ಮ ಜಿಲ್ಲೆಯಲ್ಲಿ ಅಲ್ಲಲ್ಲಿ ಸಾಹಿತ್ಯ ಸೇವಕರಿದ್ದರೂ ಅವರ ಪರಿಚಯವು ಸಾರ್ವತ್ರಿಕವಾಗಿ ಇರುವುದಿಲ್ಲ. ಆದರಿಂದ ಅವರ ಎಲ್ಲ ಪರಿಚಯವನ್ನು 'ಕರ್ನಾಟಕ ಧರ್ಮೋದಯ' ಪತ್ರಿಕೆಯ ದ್ವಾರಾ ಮಾಡಿ ಕೊಡಬೇಕೆಂದು ನಿಶ್ಚಯಿಸಿದ್ದೆವೆ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕನ್ನಡ ವಾಙ್ಮಯ ಸೇವಕ ಲೇಖಕ ಕವಿಗಳ, ವಯಸ್ಸು ಜಾತಿ, ವೃತ್ತಿ, ಈ ಮೇರೆಗೆ ಬೇರೆ ಬೇರೆ ರೀತಿಯಿಂದ ಮಾಡಿದ ವಾಙ್ಮಯ ಸೇವೆ ಮುಂತಾದವುಗಳನ್ನೊಳಗೊಂಡ ಚಿತ್ರ ಚರಿತ್ರೆಯನ್ನು ನಮ್ಮ ಕಡೆಗೆ ಕಳುಹಿಸಿಕೊಟ್ಟರೆ ಅವುಗಳನ್ನು ವಾರವಾರಕ್ಕೂ ಧರ್ಮೋದಯದಲ್ಲಿ ಪ್ರಕಟಿಸಿ ನಮ್ಮ ಸೇವೆಯನ್ನು ಮಾಡುವೆವು. ಆದುದರಿಂದ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯ ಸೇವಕರೆಲ್ಲರೂ ತ್ವರೆಮಾಡಬೇಕಾಗಿ ಪ್ರಾರ್ಥನೆಯಿದೆ.

ಸಂಪಾದಕ,
ಕರ್ನಾಟಕ ಧರ್ಮೋದಯ

ರಾಷ್ಟ್ರ ಸೂತ್ರಧಾರರಾದ

ವೀರ ವಲ್ಲಭಭಾಯಿ ಪಟೇಲರು.

ಲೇಃ—ಶ್ರೀ॥ ಚಿಕ್ಕೋಡಿ ಅನಂತರಾಯರು.

ದೇ ಭ. ಗಂಗಾಧರರಾಯರ

ಉಪೋದ್ಘಾತವಾದ ಪ್ರಸ್ತಾವನೆ.

ತುಂಟೆರ ತಂಡ (ಸಾಹಿತ್ಯ ಸೇವಾಮಂಡಲ) ದವರು ಪ್ರಕಟಿಸುತ್ತಿರುವ 'ಒಂದಾಣೆ ಮಾಲೆ' ಯ ಕಾಣಿಕೆಯು ಪುಷ್ಪವಾದ ವೀರ ವಲ್ಲಭಭಾಯಿಯವರ ಚರಿತ್ರೆಯು ಇದೇ ನವರಾತ್ರಿಯ ನಾಡಹಬ್ಬದಲ್ಲಿ ಪ್ರಸಿದ್ಧವಾಗಿದೆ. ಪುಸ್ತಕವು ಕ್ರೌನ್ ಅಕಾರದ ೧೦೦ ಪುಟಗಳಿಗೂ ವಿಸ್ತೃತವಿದೆ. ನುಣುಪಾದ ಕಾಗದದಗಳ ಮೇಲೆ ಮುದ್ದು ಮುದ್ದಾಗಿ ಮುದ್ರಿತವಾಗಿದೆ. ಮುಖಪೃಷ್ಠವು ಸುಂದರವಾದ ಎರಡು ಬಣ್ಣಗಳಲ್ಲಿ ಅಚ್ಚಾಗಿದ್ದು ಸರದಾರರ ಸುಂದರ ಚಿತ್ರವಿದೆ. ದೇ. ಭ. ಗಂಗಾಧರರಾಯರು ತಮ್ಮ ಅಧಿಕಾರಯುಕ್ತವಾದ ಮುನ್ನುಡಿಯಲ್ಲಿ ವಲ್ಲಭಭಾಯಿಯವರ ಚರಿತ್ರೆಯ ರಹಸ್ಯವನ್ನು ಸರ್ವೋತ್ಕೃಷ್ಟವಾಗಿ ವಿಶದ ಮಾಡಿದ್ದಾರೆ. ಪ್ರತಿಯೊಬ್ಬ ಕನ್ನಡಿಗನೂ ಈ ಪುಸ್ತಕವನ್ನು ಓದಿಯೇ ತೀರಬೇಕು. ದೇಶಭಕ್ತರ ಚರಿತ್ರೆ ಗೊತ್ತಿಲ್ಲದೆ ದೇಶಸೇವೆ ಸಾಧ್ಯವಿಲ್ಲ. ಇಂದಿನ ರಾಷ್ಟ್ರಪತಿಗಳಾದ ಸರದಾರ ವಲ್ಲಭಭಾಯಿಯವರ ಚರಿತ್ರೆಯು ಕನ್ನಡಿಗರಿಗೆ ಅವಶ್ಯವಾಗಿ ಗೊತ್ತಿರಬೇಕು

ವೀರ ಶೈಲಿಯಿಂದ ಪರಿಪೂರ್ಣವಾಗಿ ಈ ಕರ್ಮಯೋಗಿಯ ಚರಿತ್ರೆಯನ್ನು ಓದುವ ಸಂಧಿಯನ್ನು ಕಳೆದುಕೊಳ್ಳಬೇಡಿರಿ. ಎಲ್ಲರಿಗೂ ಸುಲಭವಾಗಬೇಕೆಂದು ಪುಸ್ತಕದ ಬೆಲೆಯನ್ನು ತೀರ ಕಡಿಮೆಯಾಗಿ ಹತ್ತಾಣೆ ಮಾತ್ರ ಇಟ್ಟಿದ್ದೇವೆ

ಹಿಂದೀ ಪರೀಕ್ಷೆಯ ಪರಿಣಾಮ.

ದಕ್ಷಿಣ ಭಾರತ ಹಿಂದೀ ಸಭೆಯು ಪರವಾಗಿ ಅಂಕೋಲೆಯಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಈ ಕೆಳಗಣಂತೆ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ

ಮಧ್ಯಮ ಪರೀಕ್ಷೆ.

೧ ಪನ್ನಿ ಕೃಷ್ಣಭಟ್ಟ (೨ನೇ ವರ್ಗ)

ಪ್ರಥಮ ಪರೀಕ್ಷೆ. (೧ನೇ ವರ್ಗ)

೧ ಎಸ್. ಜಿ ಭಟ್ಟ
೨ ಎಮ್. ಜಿ. ತೆಟ್ಟ
೩ ಕೆ. ಆರ್. ಪ್ರಭು
೪ ಜಿ. ಪ್ಹಿ. ಕಸಬೇಕರ
೫ ಕೆ ಯು. ನಾರ್ವೇಕರ
೬ ಎನ್. ಎಸ್. ಪ್ರಭು
೭ ಪ್ಹಿ. ಆರ್. ಬೆ ನಾಯಿ
೮ ಪ್ಹಿ. ಎಸ್. ಗ ಮತೊಂಡೆ
೯ ಎಸ್. ಎಸ್ ನುಹಾಲೆ
೧೦ ಎಮ್ ಆರ್ ಭಟ್ಟ
೧೧ ಎಸ್. ಕೆ. ನಾಯಕ
೧೨ ಎಮ್ ಎಸ್. ಭಟ್ಟ
೧೩ ಎ. ಎಮ್. ನಾಡಕರ್ಣಿ
೧೪ ಎಸ್. ಎಮ್. ಕಾಮತ
೧೫ ಪ್ಹಿ. ಬಿ. ನಾಯಕ
೧೬ ಪ್ಹಿ ಜೆ ಕಣೆ
೧೭ ಡಿ. ಪಿ. ಅಂಕೋಲಾ
೧೮ ಕುಮಾರಿ ಲಕ್ಷ್ಮಿ ಫಾತರಪೇಕರ
೧೯ ,, ಕೇಶರ ಫಾತರಪೇಕರ
೨೦ ,, ಪ್ರೇಮಾ ಫಾತರಪೇಕರ
೨೧ ,, ಕಮಲಾ ಕಸಬೇಕರ
೨೨ ,, ಅಪ್ಪಿ ನಾರ್ವೇಕರ
೨೩ ,, ಜನಸೂಯಾ ಡಾಂಗಿ

ಪ್ರಥಮ ಪರೀಕ್ಷೆ. (೨ನೇ ವರ್ಗ)

೧ ಜೋಗಿ. ಬಿ. ನಾಯಕ
೨ ಪಿ ಪ್ಹಿ. ಗಾಯತೊಂಡೆ
೩ ಕೆ. ಪ್ಹಿ ಶೇಜ್ವೆ
೪ ಪಿ ಎಸ್. ಜೋರಕರ
೫ ಆರ್. ಪಿ ಪ್ರಭು
೬ ಡಿ. ಎಸ್. ಶೇವ
೭ ಸಿ. ಆರ್. ದೇಸಾಯಿ
೮ ಎನ್. ಎಸ್. ಫಾತರಪೇಕರ
೯ ಎಮ್. ಪ್ಹಿ. ಗಾಯತೊಂಡೆ
೧೦ ಜಿ. ಆರ್. ನಾಯಕ
೧೧ ಎ. ಜಿ. ಮಹಾಲೆ
೧೨ ಪಿ. ಎಸ್. ಪ್ರಭು
೧೩ ಪ್ಹಿ. ಎ. ನೇತ್ರಾವಳಿ
೧೪ ಎನ್. ಬಿ. ಸ್ವಳೇಕರ
೧೫ ಎನ್. ಆರ್ ಹೆಗಡೆ
೧೬ ಪ್ಹಿ ಎನ್. ಶೆ ಟಗಿರಿ
೧೭ ಪ್ಹಿ ಎಲ್. ಭಟ್ಟ
೧೮ ಟಿ. ಆರ್. ನಾಯಕ
೧೯ ಜೆ. ಪ್ಹಿ. ಉಪಾಧ್ಯಾಯ
೨೦ ಟಿ ಆರ್. ನಾಡಕರ್ಣಿ
೨೧ ಎಮ್. ಎಮ್. ನಾಡಕರ್ಣಿ
೨೨ ಜಿ. ಎ. ಭಟ್ಟ
೨೩ ಕುಮಾರಿ ಶಾಂತಾಬಾಯಿ ಗಾಯತೊಂಡೆ
೨೪ ,, ಪ್ರಮಿಳಾಬಾಯಿ ತೇಲಂಗ

ಬಾಲಜೀವನ.

ಈ ಔಷಧವು ಗ್ರಾಣಿ (Rickets) ಬಾಲಪೀಡೆ, ಅಸ್ಥಿಜ್ವರ, ಥಂಡಿ, ಶಫ, ನಾಯಿಗೆಮ್ಮು, ಕಾಳಜನೋವು, (Pain in the liver) ಅಂಡವಾಯು (Hernia) ಹೊಟ್ಟೆನೋವು, ಮಲಬದ್ಧತೆ, ರಕ್ತಕೊರತೆ, ಎಲುಬುಗಳ ರೋಗ, ಕ್ಷಯ, ಅಸಹ್ಯಾರ, ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ದಿವ್ಯೌಷಧವಾಗಿರುತ್ತದೆ ಈ ಔಷಧವು ಒಂದು ತಿಂಗಳ ತಿಂಬುವಿರುವಾಗ ಉಪಯೋಗ ಮಾಡುತ್ತಿದ್ದಲ್ಲಿ ಕಾಲಿಜರೋಗ (Liver complaint) ಆಗುವ ಸಂಭವವಿರುವುದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈಕಾಲುಗಳು ಕ್ಷೀಣವಾಗುವುದು, ತಲೆಯು ಯಾವಾಗಲೂ ಬೆವರಿ ಬಲಹೀನರಾಗುವುದು, ಹಲ್ಲು ಬರುವಾಗ ಅತಿಸಾರ, ಬಾಲಗ್ರಹ ಈ ಎಲ್ಲ ತರದ ರೋಗಗಳನ್ನು ನಾಶಮಾಡಿ ಮಕ್ಕಳುಗಳಿಗೆ ಈ "ಬಾಲಜೀವನ" ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ. ಬಾಟ್ಲಿ ಕ್ರಯ ೧-೮-೦ ಟಿ. ಖ. ಬೇರೆ.

ಡಲ್‌ಸೆಟ್ ಎಂಡ್ ಕೋ.,
ಪೋ. ಕುಮಟಾ, (ಉ. ಕಾನಡಾ)

ಪರೀಕ್ಷೆಗೆ ಕುಳಿತವರು. ಉತ್ತೀರ್ಣರಾದವರು.
ಮಧ್ಯಮ ೧ ೧
ಪ್ರಥಮ ೫೪ ೪೭
ಎಂಟು ಮಂದಿ ಮಹಿಳೆಯರು ಪರೀಕ್ಷೆಗೆ ಕುಳಿತಿದ್ದರು. ಎಲ್ಲರೂ ಉತ್ತೀರ್ಣರಾಗಿದ್ದಾರೆ.

ಎಸ್. ಡಿ. ದೇಸಾಯಿ,
ಗೌರವ ಕಾರ್ಯದರ್ಶಿ, ಹಿಂದೀ ಪ್ರೇಮಿ ಸಭಾ
ಅಂಕೋಲಾ

ಸಿದ್ದಾಪುರದ ವಾರ್ತೆ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಅಡಿಕೆ ಕೊನೆ ಕೆಲಸವು ಭರದಿಂದ ಸಾಗಿದೆ. ಮಳೆಯು ಮಾತ್ರ ತೆರಪಿಲ್ಲದೆ ಸುರಿಯುತ್ತದೆ. ಕಾರಣ ರೈತರು ಬಹಳ ಚಿಂತೆಯೊಳಗೆ ಬಿದ್ದಿರುತ್ತಾರೆ.

ಶರದರಲ್ಲಿ ಎನ್ಮೆಗಳಿಗೆ ಮಾತ್ರ ಗುರ್ಕಿರೋಗ ಬಂದು ಇಪ್ಪತ್ತಿಪ್ಪತ್ತಕ್ಕೆ ೧೫—೨೦ ಎಮ್ಮೆಗಳು ಸತ್ತು ಹೋದವು. ಇದಲ್ಲದೆ ಕ್ಯಾದ್ಗಿ, ದೊಡ್ಡಮನೆ ಪ್ರಾಂತ ಪಲ್ಲಿ ಧನಕರುಗಳ ಉಪದ್ರವದಿಂದ ಸೂರಾರು ಧನಕರುಗಳು ಸತ್ತುಹೋದವು. ಹೇರೂರು, ಹೊಸತೋಟೆ ಕಡೆಗೆ ಹುಲಿಯ ಉಪದ್ರವವು ನಡೆದೇ ಅದೆ. ಇತ್ತ ಸರಕಾರದವರು ಹೀಗೆ ಅಲಕ್ಷ್ಯ ಮಾಡಿದರೆ ರೈತರು ಮುಂದೇನು ಮಾಡಬೇಕು?

ಈ ೬ನೇ ದಿನ ಮುಂಬಯಿ ಪ್ರಾಂತದ ಎಗ್ರಿಕಲ್ಚರ ಡೈರೆಕ್ಟರ ಸಾಹೇಬರು ಜೋಗಿಗೆ ಹೋಗಲು ಬಂದಿದ್ದರು. ಆಗ ತಾಲೂಕಾ ಕಚೇರಿಯಲ್ಲಿ ರೈತರು ಸೇರಿ ಸದರಿ ಸಾಹೇಬರ ಹತ್ತರ ತಮ್ಮ ಈ ಕೆಳಗಿನ ದೂರುಗಳನ್ನು ಸಾಹೇಬರ ಮುಂದಿಟ್ಟು ತಿಳಿಸಿರುವರು.

ಇತ್ತಯ ಮುಖ್ಯ ಬೆಳೆಯು ಅಡಿಕೆ, ಯಾಲಕ್ಕಿ, ಮೆಣಸು, ಭತ್ತ, ಕಬ್ಬು. (೧) ಈ ಇಪ್ಪತ್ತು ಸಾಮಗ್ರಿಗಳನ್ನು ಕಡಾಂಸಲು ಸೊಪ್ಪಾ ಗೂಟ ದನ್ಗೈರಿಗಳ ಅವಶ್ಯಕತೆಯು ಹೆಚ್ಚಿ ಇರುವುದು. ಇದಕ್ಕೆ ಫಾರೆಸ್ಟ ಖಾತೆಯವರ ನಿಬಂಧನೆಯು ಕಿಚ್ಚುಗಿರುವದು. (೨) ಸಾಕಷ್ಟು ಬಂಡೂಕುಗಳ ಲಾಯಸನ್ಸು ಕೊಡದ್ದರಿಂದಲೂ ಮತ್ತು ಹಾಲೀ ಕೊಟ್ಟ ಬಂಡೂಕುಗಳು ಕೆಲಸಕ್ಕೆ ಬಾರದ್ದರಿಂದಲೂ ಕಾಡುಅವೆ, ಕಾಡುಕೋಣ, ಚಿಗರಿ, ಹಂದಿ, ಮಂಗ ದನ್ಗೈರೆ ಕಾಡುಪ್ರಾಣಿಗಳಿಂದ ಬೈರು ನಾಶವಾಗುತ್ತದಾಗಿಯೂ (೩) ಧನಕರುಗಳಿಗೆ ಮೈಯಿಉಲಿಕ್ಕೆ ಸಾಕಷ್ಟು ಪಾಯಿನರು ಇಂಗಲ ಇಲ್ಲವಾಗಿಯೂ ಇದ್ದ ಇಂಗಲದಲ್ಲಿ ಮುಟ್ಟಿದ ಮುಟ್ಟಿದೆಯು ಬೆಳೆದದ್ದು ಹೊಗಿಯೂ [೪] ಈಗ ೪—೫ ವರುಷಗಳಿಂದ ಕೊಳೆರೋಗವು ಹುತ್ತಿಹೊರಿ ಬಗಲು ಬ್ರಾರಂಭವಾಗಿದೆಯಾಗಿಯೂ (೫) ಪ್ರತಿ ಊರ ಸುತ್ತಲೂ ಇರುವ ಕುಮರಿಯು ಕಡಿಯಲು ಹಿಂದೆ ಪರವಾನಗಿ ಇತ್ತಾಗಿಯೂ ಇತ್ತೀಚೆಗೆ ೧೦—೧೫ ವರ್ಷಗಳಿಂದ ಬಂದಾಗಿರುವದರಿಂದ ಅರಣ್ಯವು ಬೆಳೆದು ಮರಗಳ ಸೊಪ್ಪು ಕೊಳೆತು ಸಾರು, ಹವೆಯೂ ಕೆಟ್ಟು ಮಲೇರಿಯ ಉತ್ಪನ್ನವಾಗಿ ಈ ಮೇಲೆ ತಾಡಿಸಿದ ಕಾರಣಗಳಿಂದ ಜನರು ಬೇಸತ್ತು ಬೇಸತ್ತು ಊರು ಬಿಟ್ಟು ಮೈಸೂರು ಸೀಮೆಗೆ ಹೋಗಿದ್ದಾರಾಗಿಯೂ ಮಲೇರಿಯಾದಿಂದ ಜನಸಂಖ್ಯೆಯು ಕಡಿಮೆಯಾಗಿದೆಯಾಗಿಯೂ ಈಗ ಪಾಲ್ಮ್ಯ ಅರು ವರುಷಗಳಿಂದ ರೈತರು ಹೊಟ್ಟೆಗೆ ತಿನ್ನುವ ಮುಂಡಿ ಸರಕಾರವ ಪೆದರಿಕೆಗೆ ಸರಕಾರ ಹಣ ಕೊಟ್ಟರಾಗಿಯೂ ಈ ವರ್ಷ ಕೆಲವರು ಮನೆಯೊಳಗೆ ಇಡ್ಡ ಬಂಗಾರ ಬೆಳ್ಳಿ ವಗ್ಗೆರೆಗಳನ್ನು ಮಾರಿ ಕೊಟ್ಟರಾಗಿಯೂ ಇನ್ನೂ ಕೆಲವರು ಜಸ್ತಿ ಕ್ರಮಗಳಿಗೆ ಗುರಿಯಾಗಿ ತಗಾವೆ ಕಹಕೊಬಿ ಪಡೆದ್ದು ಮಳೆಗಾಲದಲ್ಲಿ ಹೊಟ್ಟಿಗಿಲ್ಲದೆ 'ರಿಲೀಫ್' ಅಕ್ಕಿಯ ಮೇಲೆ ಜೀವನ ನಡಿಸಿರುವರಾಗಿಯೂ ತಿಳಿಸಿದರು ಕಾರಣ ಮೇಲೆ ತಾಡಿಸಿದ ಸವಲತ್ತು ದೂರಯದಿದ್ದಲ್ಲಿ ಈ ಊರು ಬಿಟ್ಟು ಹೋಗುವದು ಉಳಿದದೆ. ತಿನ್ನುವ ಬೇರೆ ಮಾರ್ಗವು ದೊರೆಯದಾಗಿದೆಯಾಗಿಯೂ ತಿಳಿಸಿದರು. ಆದರೆ ಸಾಹೇಬರು ಬಂಡೂಕುಗಳ ಬಗ್ಗೆ ಕಲೆಕ್ಟರರಿಗೆ ಅರ್ಜಿ ಮಾಡಿರೆಂದು ತಿಳಿಸಿದರು. ಆಗ ರೈತರು ತಾವು ಈ ಎಲ್ಲ ಸವಲತ್ತುಗಳ ಬಗ್ಗೆ ಅರ್ಜಿಮಾಡಿ ಬೇಸತ್ತಿವಾಗಿಯೂ ತಮ್ಮುಂದಲೇ ಈ ಕೆಲಸವಾಗಬೇಕಾಗಿಯೂ ತಿಳಿಸಿ ಹೇಳಿದರು ನಂತರ ಸಾಹೇಬರು ತಮ್ಮ ಕೈಲಾಪಸ್ಪು ಮಾಡುವೆವಾಗಿ ತಿಳಿಸಿದರು.

ಹೋದ ವರ್ಷ ಕೊಟ್ಟ ಸರಕಾರದ ತಗಾವೆ ಹಣಕ್ಕೂ ತಹಕೂಬಿ ಹಣಕ್ಕೂ ಗ್ರಾಮಸ್ಥರು ರೈತರಿಗೆ ಸೂಡನೆ ಕೊಡಲು ಪ್ರಾರಂಭ ಮಾಡಲು ಸುರುಮಾಡಿರುವರು. ಏನೆಂದರೆ, ಹಣಮಾಡಿ ಇಟ್ಟುಕೊಳ್ಳಿರಿ, ನಾವು ಬಂದ ಕೂಡಲೇ ಕೊಡಬೇಕು ಇಲ್ಲವಾದರೆ ಸತ್ತಿಕ್ರಮಗಳಿಗೆ ಗುರಿಯಾದೀರಿ.

ಇದೇ ತಿಂಗಳ ೪ ನೇ ತಾರೀಕಿನ ದಿವಸ ಸಾಗರದಿಂದ ಶಿರಸಿಗೆ ಹೋಗುವ ನ್ಯೂ ದೇವೀದಾಸ ಮೋಟಾರವು ಸಿದ್ದಾಪುರದ ಹತ್ತಿರ ಬರುವಾಗ ಸಂತೆಗೆ ಬರುವ ಜನರ ಪೈಕಿ ಮೆಣಸಿಕೇರಿಯ ಕೊಡಸಿಯ ಹಳೇಪೈಕ ಹುತ್ತುಗನು ಅಕಸ್ಮಾತ್ ಮೋಟಾರ ಕೆಳಗೆ ಸಿಕ್ಕಿ ಸತ್ತನು.

ಕೊಳೆರೋಗ.

ಬರೆದವರು:-ವೆ. ಸು. ಹೆಗಡೆ, ತೋಟಗಾರರು, ಶಿರ್ಸಿ

(ತಾ. ೨೦-೧೦-೨೧ನೇ ಸಂಚಿಕೆಯಿಂದ ಮುಂದರಿದಷ್ಟು)

ಲೇಪಾಂಕ ೨.

ಸೊಪ್ಪಿನ ದೋಷದಿಂದ ಗೊಬ್ಬರವು ಕೆಟ್ಟು ಅಡಿಕೆ ಮರದ ಬೇರುಗಳು ಶಿಥಿಲವಾಗಿ ಕೊಳೆರೋಗ ಬರುವುದೆಂಬುದನ್ನು ತಿಳಿದ ಮಟ್ಟಿಗೆ ಹಿಂದೆ ಹೇಳಲಾಗಿದೆ ಮಣ್ಣಿನ ದೋಷದಿಂದ ಸಹ ಕೊಳೆರೋಗವು ಬರುತ್ತದೆ. ನಮ್ಮ ಪೂರ್ವಜರು ತೋಟಕ್ಕೆ ಹಾಕಲು ಬೇರೆ ಮಣ್ಣನ್ನೇ ಕಾದಿಡುತ್ತಿದ್ದರು. ಮಣ್ಣು ಫಲವತ್ತಾಗಿರಬೇಕು ಆ ಮಣ್ಣಿನ ಸತ್ವವನ್ನು ಅಡವಿಯ ಮರಗಳ ಬೇರುಗಳು ಹೀರಿಬಿಟ್ಟರೆ ಆ ಮಣ್ಣು ಏನೂ ಉಪಯೋಗವಾಗಲಾರದು. ಗಾಣದೊಳಗೆ ಕೊಟ್ಟು ಕಬ್ಬು ನಿಸ್ಸತ್ವವಾಗುವಂತೆಯೇ ಬೇರುಗಳು ಹೀರಿದ ಮಣ್ಣು ನಿಸ್ಸತ್ವವಾಗುತ್ತದೆ. ಅದರಿಂದ ಸತ್ವಶಾಲಿ ಮಣ್ಣನ್ನು ಪುನಃ ಪುನಃ ಹಾಕಿ ಅಡಿಕೆ ಮರವು ಫಲವತ್ತಾಗುವಂತೆ ಮಾಡುತ್ತೇವೆ. ಅದರೆ ಈಗಿತ್ತ ನಿಸ್ಸತ್ವವಾದ ಬೆಟ್ಟದ ಮಣ್ಣನ್ನೇ ಪುನಃ ಪುನಃ ಹಾಕುವದರಿಂದ ಮಣ್ಣು ಕೊಳೆತು ಅಡಿಕೆ ಮರದ ಬೇರು ಲಡ್ಡಾಗಿ ಅಲ್ಲಿಂದ ಕೊಳೆರೋಗವು ಆರಂಭವಾಗುವುದು. ಹಿಂದಿನವರು ಬೈಲು ಪ್ರದೇಶದಲ್ಲಿ ಸ್ಥಳವನ್ನಿಟ್ಟು ಅಲ್ಲಿ ಹೊಂಡ ತೆಗೆದು ತಗ್ಗಿನ ಮಣ್ಣನ್ನೇ ತಂದು ಹಾಕುತ್ತಿದ್ದರು. ಅದಕ್ಕೆ ಆಗ ಮಣ್ಣುಗುಳಿ ಎಂತ ಹೇಳುವ ಪರಿಪಾಠವಿತ್ತು. ಈ ತರದ ಮಣ್ಣನ್ನು ತೆಗೆಯಲು ಪ್ರತ್ಯೇಕ ಸ್ಥಳಗಳನ್ನು ಕಾದಿಡಲು ಹಿಂದೆ ರಾಜಾಶ್ರಯವು ಕೊಡಲ್ಪಟ್ಟಿತ್ತು. ಆದರೆ ಈಗ ಸರಕಾರವು ಈ ರೀತಿ ಮಣ್ಣು ಕುಳಿಯನ್ನು ತೆಗೆಯಲು ಅತಂಕವಡಿಸಿ ಬೈಲು ಪ್ರದೇಶಗಳಲ್ಲೆಲ್ಲ ಜಂಗಲು ಬೆಳೆಸಿದ್ದರಿಂದ ಆ ರೀತಿ ಮಾಡುವುದು ನಿಂತು ತಮ್ಮ ತಮ್ಮ ತೋಟಗಳ ಹತ್ತರ ಇದ್ದ ಬೆಟ್ಟದ ಮಣ್ಣನ್ನೇ ಹಾಕುವ ಪರಿಪಾಠವು ಬಿದ್ದಿದೆ. ಈ ಮಣ್ಣಿನಲ್ಲಿ ಸತ್ವವಿರುವುದಿಲ್ಲ.

ಅಡಿಕೆ ಮರದ ಬುಡಕ್ಕೆ ನಾಲ್ಕು ವರ್ಷಕ್ಕೆ ಒಂದು ಸಲ ಮಣ್ಣು ಹಾಕಲೇಬೇಕು. ಇದರಿಂದ ಫಲವತ್ತಾದ ಮಣ್ಣು ದೊರೆತು ಬೇರಿಗೆ ಪುಷ್ಟಿ ಸಿಕ್ಕುವುದು. ಈ ರೀತಿ ಮಣ್ಣು ಹಾಕುವಾಗ ಹಳೇ ಮಣ್ಣನ್ನು ಅರ್ಧ ಭೂಮಿಗೆ ತನಕ ಆಗೆದು ಆ ಮೇಲೆ ಹೊಸ ಮಣ್ಣನ್ನು ೨—೩ ಅಡಿಯಷ್ಟು ಎತ್ತರವಾಗಿ ಏರಿಸಿ ಹಾಕುತ್ತ ಹೋಗುವರು. ಈ ಹೊಸ ಮಣ್ಣನ್ನು ಒಂದೇ ವರ್ಷ ಹೆರಡದೆ ವರ್ಷ ಬಿಟ್ಟು ವರ್ಷಕ್ಕೆ ಅದನ್ನು ಅಡಿಕೆ ಮರದ ಬುಡಕ್ಕೆ ಹಾಕುತ್ತ ಹೋಗುವರು. ಇದರಿಂದ ಪ್ರತಿವರ್ಷವೂ ಅಡಿಕೆ ಮರಕ್ಕೆ ಫಲವತ್ತಾದ ಮಣ್ಣು ಸಿಗುತ್ತ ಹೋಗುವದು. ಇದಲ್ಲದೆ ಪ್ರತಿ ಸರತಿ ಹೊಸ ಮಣ್ಣನ್ನು ಹಾಕುವ ಕಷ್ಟವೂ ಆಗುವುದಿಲ್ಲ. ಅದರೆ ಈಗ ನಮ್ಮಲ್ಲಿಯ ರೈತರು ತೀರ ನಿಕೃಷ್ಟವಸ್ಥೆಗೆ ಬಂದುದರಿಂದ ಈ ರೀತಿ ಮಾಡಿಸಲು ಅಸಮರ್ಥರಾಗಿ ನಾಲ್ಕು ವರ್ಷಕ್ಕೊಮ್ಮೆ ಹೊಸ ಮಣ್ಣನ್ನು ಹಾಕಿಸುವದಿರಲಿ, ೧೦ ವರ್ಷಕ್ಕೊಮ್ಮೆಯಾದರೂ ಹಾಕಿಸುವುದಿಲ್ಲ. ಇದರಿಂದ ಅಡಿಕೆ ಮರದ ಬೇರಿಗೆ ಫಲವತ್ತಾದ ಮಣ್ಣು ಸಿಗುವದಿಲ್ಲವಷ್ಟೇ ಅಲ್ಲ, ತೋಟದಲ್ಲಿಯ ಮಣ್ಣು ಸಹ ಜವಳು ಹಿಡಿದು ಏನೂ ಸಾರವಿಲ್ಲದಂತಾಗಿರುವುದು.

ಈ ರೀತಿ ಹಾಕಿನ ಮಣ್ಣು ಮಳೆಯು ನೀರಿನಿಂದ ಕೊಯ್ದು ತೊಳೆದು ಹೋಗಬಾರದೆಂದೂ ಮತ್ತು ಲಡ್ಡಾಗಬಾರದೆಂದೂ ಆ ಮಣ್ಣನ್ನು ತೆರಕು ಬಾಳೆಯ ದಿವರಿ ಮುಂತಾದವುಗಳಿಂದ ಮಳೆಗಾಲ ಪ್ರಾರಂಭವಾಗುವುದರೊಳಗೆ ಮುಚ್ಚುವರು. ಮತ್ತು ಆವನ್ನು ಅಡಿಕೆ ಕೊನೆಯಷ್ಟನ್ನು ಕೊಯಿಸುವ ಹೊತ್ತಿಗೆ ಜೊಕ್ಕಟವಾಗಿ ತೆಗೆಯುತ್ತಾರೆ. ಯಾಕಂದರೆ ಅದನ್ನು ಅಲ್ಲೇ ಇರಗೊಟ್ಟರೆ ಮಣ್ಣು ಲಡ್ಡಾಗಿ ಜವಳು ಬರುವುದು. ಈ ರೀತಿ ಪ್ರತಿವರ್ಷ ಮಾಡುತ್ತಿರಬೇಕು. ಅಂದರೆ ಕೊಳೆರೋಗಕ್ಕೆ ಅವ್ಕಾಶವಿಲ್ಲದೆ ಫಲವು ಸಹ ಸಮೃದ್ಧಿಯಾಗುವುದು.

ಬೆಟ್ಟದ ವಿಷಯದಲ್ಲಿ ಮೊದಲು ರಾಜಾಶ್ರಯವಿದ್ದಂತೆ ಈಗ ಇಲ್ಲ. ಈಗ ಸರಕಾರದವರು ಬಿಟ್ಟುಕೊಟ್ಟ ಬೆಟ್ಟವಲ್ಲಿ ಸೊಪ್ಪಿನ ಮರವು ಸಾಕಷ್ಟಿಲ್ಲ. ಅಥವಾ ಕಲ್ಲರೆಯ ಪ್ರದೇಶವಿರುವುದು. ಅದರಿಂದ ತೋಟಗಳು ಬೆಟ್ಟದಲ್ಲಿ ಸಿಕ್ಕ ಕಾಡು ಜಾತಿಯ ಗಿಡಗಳ ಸೊಪ್ಪನ್ನೇ ತಂದು ಹಾಕಬೇಕಾಯಿತು ಇದರಿಂದ ಅಡಿಕೆ ಮರಕ್ಕೆ ಪುಷ್ಟಿ ಸಿಕ್ಕದೆ ಮತ್ತು ತೋಟದಲ್ಲಿದ್ದು ಮಣ್ಣು ಕೆಟ್ಟು ಕೊಳೆರೋಗವು ಬರುವುದು.

ಇನ್ನು ನೀರಿನ ವಿಷಯ ನೀರಿನಲ್ಲಿ ಅನೇಕ ದೋಷಗಳು ಕಂಡುಬರುವವು. ನೀರಿನ ದೋಷದಿಂದ ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಂದು ವಸ್ತುವಿಗೂ ವಿನಾಶಕರವಾದ ಅನೇಕ ಆಘಾತಗಳು ಬರುತ್ತವೆಂಬುದು ಪ್ರತಿ ಒಬ್ಬನಿಗೂ ಗೊತ್ತಿದ್ದ ಸಂಗತಿ. ನೀರಿನ ದೋಷದಿಂದಲೇ ಮನುಷ್ಯನಿಗೆ ಮಲೇರಿಯಾ ಮುಂತಾದ ಅನೇಕ ರೋಗಗಳು ಉತ್ಪನ್ನವಾಗುವುವು. ಆದರಂತೆ ಅಡಿಕೆ ಮರಕ್ಕೆ ಸಹ ನೀರಿನ ದೋಷವು ಕೊಳೆ ಮುಂತಾದ ರೋಗಗಳಿಗೆ ಕಾರಣವಾಗದಿರಲಿಲ್ಲ ಬೇಕು. ಇನ್ನು ಅಡಿಕೆ ಮರಕ್ಕೆ ಕೊಳೆರೋಗವು ನೀರಿನ ದೋಷದಿಂದ ಬರುವುದಿಲ್ಲ. ಯಾಕಂದರೆ ಅಡಿಕೆ ಮರಕ್ಕೆ ಬೇಕಾದ ನೀರು ಹೊಳೆಯ ನೀರಿನಿಂದ ಪೂರೈಸಲ್ಪಡುತ್ತದೆ. ಹೊಳೆಯ ನೀರು ಸ್ವಚ್ಛವಾಗಿರುವುದು. ಈ ನೀರಿನ ದೋಷದಿಂದ ಎಂದೆಂದೂ ಕೊಳೆರೋಗ ಬರುವುದಿಲ್ಲ ಎಂದು ಯಾರಾದರೂ ಹೇಳಬಹುದು. ಅದರೆ ನೀರಿನ ದೋಷದಿಂದಲೂ ಕೊಳೆರೋಗವು ಬರುವುದೆಂದು ನಾನು ನಿರ್ಧಾರವಾಗಿ ಹೇಳುತ್ತೇನೆ. ಹಿಂದೆ ಎಲ್ಲಿ ತರಿ ತೋಟ ಮುಂತಾದ ಜವಿಹುಗಳು ಇರುವವೋ ಅಲ್ಲಿ ಅಂದರೆ ಅದರ ಮೇಲ್ಬದಿಯಲ್ಲಿ ನೀರಿನ ಆಶ್ರಯವು ಇರುತ್ತಿತ್ತು. ಆ ಕೆರೆಯಿಂದ ತೋಟದ ಅಡಿಕೆ ಮುಂತಾದ ಗಿಡಗಳಿಗೆ ನೀರನ್ನು ಪೂರೈಸಿಕೊಳ್ಳುತ್ತಿದ್ದರು. ಮತ್ತು ತೋಟದೊಳಗೆ ಬಿದ್ದ ಮಳೆಗಾಲದ ನೀರು ತೋಟದೊಳಗೆ ಕಾಲಿನ ಮಾರ್ಗವಾಗಿ ತೋಟದ ಹೊರಗೆ ಏನೂ ಅತಂಕವಿಲ್ಲದೆ ಹೋಗಿ ಬೀಳುತ್ತಿತ್ತು. ಇದಲ್ಲದೆ ಆ ಕೆರೆಯನ್ನು ಯಾವಾಗಲೂ ಮನುಷ್ಯನಿಗೆ ಕುಡಿಯಲು ಅರ್ಹವಾಗುವಂತೆ ಸ್ವಚ್ಛವಾಗಿಡುತ್ತಿದ್ದರು. ಈ ಕೆರೆಗೆ ಮಳೆಗಾಲದಲ್ಲಿ ಬೆಟ್ಟದ ನೀರು ಬರದಂತೆ ತಕ್ಕ ವ್ಯವಸ್ಥೆಯನ್ನು ಮಾಡಿಡುತ್ತಿದ್ದರು. ಮತ್ತು ಬೆಟ್ಟದ ನೀರು ತೋಟಕ್ಕೆ ಸಹಜವಾಗಿ ಬರದಂತೆ ಮಾಡುತ್ತಿದ್ದರು. ತೋಟದ ಹೊರ ಬದಿಯಲ್ಲಿ ಕಾಲುವೆಯನ್ನು ಅಗಿದಿಡುತ್ತಿದ್ದರು. ಇಷ್ಟೇ ಅಲ್ಲ, ಕೆರೆಯ ನೀರು ಸಹ ಮಳೆಗಾಲದಲ್ಲಿ ತೋಟಕ್ಕೆ ಬಾರದಂತೆ ವ್ಯವಸ್ಥೆಯಿಡುತ್ತಿದ್ದರು. ಹೊಳೆಯ ನೀರೂ ಸಹ ದೋಷಯುಕ್ತವಾಗಿರುವುದೆಂಬುದನ್ನು ಲಕ್ಷಗಳಲ್ಲಿಡತಕ್ಕದ್ದು.

ಇನ್ನು ಕೆರೆಯ ನೀರನ್ನು, ನಾವು ತೋಟದಲ್ಲಿ ಹಾಯಿಸಿ ಅಡಿಕೆ ಮರಕ್ಕೆ ಹಾಕಿದರೂ ಕೊಳೆ ರೋಗ ತಪ್ಪುವದಿಲ್ಲ. ಅದಕ್ಕೇನು ಪ್ರಾಯುವೇತ ಕೆಲವು ಜನರು ಕೇಳಬಹುದು? ಅದರೆ ಈಗಿನ ಕೆರೆಯ ನೀರೆಂದರೆ ಹೊಳೆಯ ನೀರಿನಷ್ಟೇ ಸಾಡಾಗಿರುವದು. ಈಗ ಮೊದಲಿನಂತೆ ಕೆರೆಯು ಸ್ವಚ್ಛವಾಗಿಡುವದಿಲ್ಲ. ಒಂದೊಂದು ಕಡೆಯಲ್ಲಿ ಕೆರೆಯಿದ್ದದ್ದು ಸಹ ಕಾಣದಷ್ಟಾಗಿ ಬಿಟ್ಟಿದೆ ಅಂದರೆ ಕೆರೆಯಿದ್ದ ಸ್ಥಳವು ನೆಲದವನಾಗಿ ಜಡ್ಡು ಬೆಳೆದು ಹೋಗಿದೆ! ಇಷ್ಟಲ್ಲದೆ ಈ ಕೆರೆಗೆ ಹೊಳೆಯಂತೆ ಮಳೆಗಾಲದಲ್ಲಿ ಬೆಟ್ಟದ ನೀರೆಲ್ಲ ಒಂದು ಕೂಡುವನು. ಅಂದ ಮೇಲೆ ಇಂಥ ನೀರನ್ನು ತೋಟಕ್ಕೆ ಹಾಯಿಸಿದರೆ ಪ್ರಯೋಜನವೇನು? ಅದರಲ್ಲೂ ಕೆಲವು ಕಡೆಗಳಲ್ಲಿ ಕೆರೆಯ ನೀರೆಂದರೆ ರಾತ್ರಿ ನೀರಿನಂತೆಯೇ ಇರುವದು. ಸ್ವಚ್ಛವಾದ ನೀರೇ ಇರುವದಿಲ್ಲ. ಇಂಥ ಕೆರೆಯ ನೀರನ್ನೇ ತೋಟಕ್ಕೆ ಹಾಯಿಸಿ ಅಡಿಕೆ ಮರಕ್ಕೆ ಹಾಕಿದರೆ ಕೊಳೆರೋಗಕ್ಕೆ ನಾವು ಪುಟ ಕೊಟ್ಟಂತಾಗುವದಿಲ್ಲವೇ?

ಈ ರೀತಿ ಮಣ್ಣಿನ ದೋಷ, ಗೊಬ್ಬರದ ದೋಷ, ನೀರಿನ ದೋಷ, ಸೊಪ್ಪಿನ ದೋಷ, ಈ ನಾಲ್ಕರಲ್ಲಿ ಈಗ ದೋಷಗಳೇ ಕಂಡುಬರುವಷ್ಟೇ ದೊರತು ಒಂದೂ ದೋಷವಿಲ್ಲದ್ದು ಕಂಡುಬರುವುದಿಲ್ಲ. ಅಣಲೆ, ಮತ್ತಿ, ವಸೆ, ಹೊನೆ, ದೊನಗಲು ಮುಂತಾದ ಅಡಿಕೆ ಮರಕ್ಕೆ ಬೇಕಾದ ಸಪ್ಪುಗಳನ್ನೇ ನಾವು ತಂದು ಹಾಕಿದರೂ ಕೊಳೆ ರೋಗವು ನಿಲ್ಲುವದಿಲ್ಲವೆಂಬ ಕೆಲವರು ಹೇಳಬಹುದು. ಆದರೆ ಮಣ್ಣಿನ ದೋಷ, ನೀರಿನ ದೋಷ, ಇವೆರಡು ದೋಷಗಳಿಂದಾದರೂ ಕೊಳೆ ರೋಗ ಬಂದೇ ಬರುವದು. ಈ ನಾಲ್ಕು ದೋಷಗಳಲ್ಲಿ ಮಣ್ಣು ನೀರು ಇವೆರಡರ ದೋಷಗಳು ಬಹು ಭಯಂಕರವಾಗಿವೆ. ಈ ಮಣ್ಣು, ನೀರು, ಇವೆರಡರಲ್ಲಿ ಅಲ್ಪ ಸ್ವಲ್ಪ ದೋಷವೇನಾದರೂ ಸೇರಿತೆಂದರೆ ಸರಿ. ಎಂಥ ಫಲವತ್ತಾದ ತೋಟವಿದ್ದರೂ, ಅದಕ್ಕೆ ಕೊಳೆರೋಗದ ಬಾಧೆ ಬರುವದು ನಿಶ್ಚಯ.

ಹೊಸ ಪುಸ್ತಕ! ಉತ್ತಮ ಮಾಹಿತಿ!!

ಒಕ್ಕಲಿಗರ ಕೈಪಿಡಿ
ಮಾರಾಟಕ್ಕೆ ಸಿದ್ಧವಾಗಿದೆ.

ರೈತರಿಗೆ ಬಹು ಉಪಯುಕ್ತವಾದುದು. ವ್ಯವಸಾಯದ ಸಂಬಂಧದ ವಿವಿಧ ವಿಷಯಗಳನ್ನೊಳಗೊಟ್ಟ ಒಕ್ಕಲಿಗರ ಕೈಪಿಡಿಯ ೨ನೇ ಮುದ್ರಣವು ಇದೀಗ ಅಚ್ಚಿನಿಂದ ಹೊರಬಿದ್ದಿರುವದು.

ಬೆಲೆ ೧ ಅಣೆ ಮಾತ್ರ.

'ಒಕ್ಕಲಿಗ'
C/o ಕರ್ನಾಟಕ ಧುರೀಣ ಆಫೀಸ,
4-] ಕುಮಟಾ (ಉ. ಕ.)

ಪ್ರತಿನಿಧಿ ಸಭೆಯೂ. ಪ್ರಜಾಸಾಮಾನ್ಯವೂ.

ಮೈಸೂರು ಪ್ರಜಾಪ್ರತಿನಿಧಿ ಸಭೆಯು ಆವ ತರಹ ಈಗ್ಗೆ ೫೦ ವರ್ಷಗಳಾದುವು. ಈ ಪ್ರಾರ್ಥನಾ ಮಂದಿರವು ಸರ್ವತೋಮುಖವಾಗಿ ಯೂ ಭಕ್ತಿ ಸಾಮ್ರಾಜ್ಯದ ಕೆಗ್ಗುರುತಿಗಿ ಕಾಲ ಕಳೆಯುತ್ತಾ ನುಂದರಿದಿದೆ. ವಯಸ್ಸಾದ, ಪ್ರಾಪ್ತವಯಸ್ಸಿಗೆ ಮಿಂದಿರವ ಮಂದಿರದ ಜೀರ್ಣೋದ್ಧಾರವಾಗಬೇಕೆ? ಪ್ರಾರ್ಥನೆಯನ್ನು ನೆರವೇರಿಸುವ ಭಾವಿಕ ಜನರ ಶುದ್ಧಾಂತಃಕರಣವೇನೋ ಒಡೆದು ಮೂಡುತ್ತಲಿತ್ತು. ಪ್ರಾರ್ಥನೆಯನ್ನು ಕೈಕೊಂಬ ದೇವತೆ ಮಾತ್ರ ಶುದ್ಧಶಿಲಾ ಪ್ರತಿಮೆಗಳು ಆ ಪ್ರತಿಮೆಗಳನ್ನು ಪ್ರತಿಷ್ಠೆಮಾಡುವಾಗ ಕಲಾವೈದ್ಧಿ ಜೋಮವನ್ನು ಧಲಿವಾ ಆ ಸಂಬಂಧ ಕರ್ಮವನ್ನು ಯಥಾವಿಧಿಯಾಗಿ ಮಾಡಲಿಲ್ಲವೋ ಏನೋ? ಬೇರೆಯಾಗಿ ಋತ್ವಿಕ್ಕುಗಳು ಸೇರಿ ಪ್ರತಿಷ್ಠೆ ಮಾಡಬೆಯೋ ಹಾಗೂ ಕರ್ಮಬದ್ಧವಾಗಿ ಪ್ರತಿಷ್ಠೆ ಮಾಡಬೆಯೋ ಲೌಕಿಕ ಸಂಪ್ರದಾಯದಿಂದ ಶಿಲಾವಿಗ್ರಹಗಳ ನ್ನು ಯಾರೋ ನಿಲ್ಲಿಸಿ ಇರಬಹುದೋ ಎಂಬ ಅನುಮಾನ ಬರುತ್ತಲಿದೆ. ಆ ವಿಗ್ರಹಗಳಲ್ಲಿಯೂ ಪದ್ಧತಿ ಶಿಲ್ಪ ಕಲಾವಿಧಾನ ಪ್ರಕಾರ ದೋಷಗಳೂ ಕಾಣಬರುತ್ತಲಿದೆ. ಶಿಲಾವಿಗ್ರಹಗಳು ಪ್ರಸನ್ನತೆಯಿಂದ ವರವನ್ನು ಕೊಡುವ ಪದ ರೂಪ ಪ್ರತಿನಿಧಿ ಪ್ರತಿಮೆಗಳು ಪ್ರಸನ್ನ ವದನೆಯಿಂದ ಅಭಯಹಸ್ತವನ್ನು ನೀಡಿಲ್ಲ. ಇಂಧನೋದು ದೇಗುಲದ್ದು ಈಗ್ಗೆ ೫೦ ವರ್ಷದಿಂದ ಪ್ರಾಣ ಪ್ರತಿಷ್ಠೆ ನಡೆಯಿತು. ಆದರೇನು ಕಲ್ಲು ದೇವರ ಮುಂದೆ ಕಾಯಿಡನ ಪ್ರಾರ್ಥನೆಯಂತೆ ಆಗಿ ಹೋಯಿತು. ಪ್ರತಿಮೆಗಳಿಗೆ ಚಲನ ಶಕ್ತಿ ಮಾತ್ರ ಬಂದಿದೆ. ವರವನ್ನು ಕೊಡುವ ದಾನವೂ ಭಾವಿಕರಿಗೆ ಬಾಧೆಯಾಗುವ ವರಗಳೇನೋ ಆಗಾಗ್ಗೆ ಆಗುತ್ತಲೇ ಬಂದಿವೆ. ಈ ಮಂದಿರದ ಅಧಿಷ್ಠಾನ ದೇವತೆಗಳೇನೋ ನೈವೇದ್ಯವನ್ನು ಸಂಪೂರ್ಣವಾಗಿ ಸ್ವೀಕರಿಸುವುದರಲ್ಲಿ ಕಡಮೆಯಾಗಿಲ್ಲ. ಈ ರೀತಿ ನೈವೇದ್ಯ ಭಕ್ಷಕರಾದ ತ್ರಿಮೂರ್ತಿಗಳು ಅಥವಾ ಕೆಲಸಮಯದಲ್ಲಿ ಚತುರ್ಮೂರ್ತಿಗಳೇ ಈ ಮೇಲೆ ವಿವರಿಸಿದ ಶಿಲಾಶ್ರಮೆಗಳಾಗಿವೆ. ಈ ಪ್ರತಿಮೆಗಳಿಗೆ ಅಭಯ ಹಸ್ತವೂ, ಶಾಂತಿ ಮುದ್ರೆಯೂ ಇಲ್ಲದ್ದರಿಂದ ಭಾವಿಕರಿಗೆ ಇಷ್ಟಾರ್ಥವನ್ನು ಕೊಡಲಾರದೆ ಅನಿವಾರ್ಯದಲ್ಲಿ ಕಲ್ಲಾಗಿಯೂ ನೈವೇದ್ಯವನ್ನು ತಿಂದು ತೇಗಿ ಭಕ್ತರಿಗೆ ಭಂಗ ಕೊಡುವಾಗ ದೇಹಧಾರಿಗಳಾದ ಮನುಷ್ಯ ಪ್ರತಿಮೆಗಳಾಗಿಯೂ ಪರಿಣಮಿಸುತ್ತಲಿದೆ. ಈ ಪ್ರತಿಮೆಗಳೇ ನಮ್ಮ ಮೈಸೂರು ಸರಕಾರದ ಹೆಸರನ್ನು ಹೊತ್ತುಕೊಂಡಿರುವ ಮಂತ್ರಿಮಂಡಲ! ಈ ಪ್ರಾರ್ಥನಾ ಮಂದಿರದ ಅಧಿಷ್ಠಾನದೇವತೆಗಳು!! ಪ್ರತಿನಿಧಿಗಳೇ ಭಾವಿಕರು. ಅಧವಾ ಭಕ್ತರು! ರಾಜಕೀಯ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯಗಳನ್ನೊಳಕೊಂಡ ಪ್ರಾರ್ಥನೆಯೇ ಈ ಮಂದಿರದ ಸ್ತಾದ!

ಈ ಮಂದಿರಕ್ಕೆ ಮೊದಲು ದೇವತೆಗಳಿಂದ ನೇಮಕವಾದ ಭಕ್ತರೇ ಬರಬೇಕಾಗಿತ್ತು. ಈ ಜಿಗೆ ೭-೮ ವರ್ಷದಿಂದ ಸಾಮಾನ್ಯ ಪ್ರಜೆಗಳಲ್ಲಿ ಕೆಲವರು ಮಾತ್ರ ಭಾವಿಕ ವೃಂದವನ್ನು ನೇಮಿಸುವ ವರವೂ ಆನ.ಗ್ರಹವೂ ಪ್ರಾಪ್ತವಾಗಿದೆ. ಈ ಸ್ವಕಾಲದ ಪ್ರಾರ್ಥನಾ ಮಂದಿರವಾಗಿ ಪರಿಣಮಿಸಿದ ಪ್ರತಿನಿಧಿ ಸಭೆಗೆ ಪ್ರಜೆಗಳು ಪ್ರತಿನಿಧ್ವನ್ನು ಸ್ವಭಾವಸಿದ್ಧವಾಗಿಯೂ ತಮ್ಮ ಇಚ್ಛೆಯಂತೆ ನೇಮಿಸುವ ಸ್ವಾತಂತ್ರ್ಯವೇ ಇಲ್ಲದ ಈ ಕಾಲದಲ್ಲಿಯೂ ಇದು ಪ್ರತಿನಿಧಿ ಸಭೆಯಾಗುವುದೆಂತು! ಪ್ರತಿನಿಧಿಗಳೆಂದು ಹೋಗುವವರು ಹೋಗುತ್ತಾ ತೆಗೆದುಕೊಂಡು ಹೋದ ನೈವೇದ್ಯವನ್ನು ತಿನ್ನುವುದಕ್ಕಾಗಿ ಹೂಡಿದ ಈ ಮಂದಿರದಲ್ಲಿ ಪ್ರಜೆಗಳಿಗೇನೂ ಎಷ್ಟರ ಮಟ್ಟಿಗೂ ವರಪ್ರದಾನ ಆಗಲು ಶಕ್ಯವೇ ಇಲ್ಲ ಈ ಗಿನ ಪ್ರತಿನಿಧಿಗಳು ಭ್ರಾಮಕರಾಗಿ ವಸ್ತುಸ್ಥಿತಿಯನ್ನು ಅರಿಯದೆ ಮೋಸ ಹೋಗುವರಲ್ಲದೆ ಚುನಾಯಿಸಲು ಅರ್ಹತೆ ಇಲ್ಲವೆಂದು ಈ ಮಂದಿರದ ಅಧಿದೇವತೆಗಳಿಂದ ನಿಶ್ಚಿತವಾದ ಹೆಜ್ಜೆನೆ ಪ್ರಜೆಗಳ ವಿಷಯದಲ್ಲಿ ಮನಃಪೂರ್ವಕವಾಗಿ ತಪ್ಪಿಲ್ಲದ ಕಠಿಣ ಪಾಷಾಣ ವೃತ್ತಿಯವರು ಸೇರಬಹುದಾದ ದೇಗುಲವೆಂದರೆ ಈ ಪ್ರತಿನಿಧಿ ಮಂದಿರವಾಗಿದೆ. ಪ್ರಾರ್ಥನೆಯಲ್ಲಿ ಪಕ್ಷಾಂತರ ವಹಿಸಿರುವ ನಾನಾ ಶಾಖೆಯವರು ತಮ್ಮ ಪ್ರಾರ್ಥನೆಯನ್ನು ರೂಪಕಗೊಳಿಸುವುದರಲ್ಲಿ ತಮ್ಮ ತಮ್ಮ ಅವರ್ಣವ ಸ್ವತಂತ್ರತಾ ಇಚ್ಛೆಯ ಖಂಡನಮಂಡನೆ ಎಂದೂ, ಪ್ರಾರ್ಥನೆ ಎಂಬುದು ಕೇವಲ ಅದೃಷ್ಟವಶತಭಾವನೆ ಎಂದೂ ಹೇಳಿಕೊಳ್ಳುವುದಾದರೂ ಫಲದಲ್ಲಿ ಅಧವಾ ಕಾರ್ಯಕ್ಷೇತ್ರದ ಕ್ರಿಯಾಸಿದ್ಧಿಯಲ್ಲಿ ಅತಿಲೋಭವಾಗಿ ನಿರಾಶಾಜನಕವಾಗಿ ಪರಿಣಮಿಸುತ್ತಲಿದೆ.

ಇನ್ನಾದರೂ ತಮ್ಮ ಪ್ರತಿನಿಧಿಗಳೆಂದು ಅಲ್ಲಿ ಹೋಳಿ ಘರ್ಜಿಸಿಕೊಳ್ಳುವವರು ತಮ್ಮ ಭಕ್ತಿಯೋಗವನ್ನು ಈ ಮಂದಿರದಲ್ಲಿ ಅನುಷ್ಠಾನ ಮಾಡಿದ ವಿಶಾಲವಾದ ಬಾಹ್ಯ ಪ್ರಪಂಚದಲ್ಲಿ ದರಿದ್ರ ನಾರಾಯಣರಿರುವವರು ಆ ದೇವತೆಗಳನ್ನು ಆರಾಧಿಸುವ ಕರ್ತವ್ಯವನ್ನು ಕೈಕೊಳ್ಳಿ. ಇಂಧ ಸುಂದರವಾದ ಪ್ರಾರ್ಥನಾ ಮಂದಿರದಲ್ಲಿ ಒಮ್ಮನಸ್ಸಿನಿಂದ ನಿರ್ಮಲಾಂತಃಕರಣರಾಗಿ ಸೇರಿ, ಶಾಂತಿ ಭಿಕ್ಷೆಯನ್ನು ಬೇಡಿ. ಆದರಿಂದಲೇ ಸೃಷ್ಟಿಕರ್ತೃರಾಗುತ್ತೀರೆಂದು ಪ್ರಜಾಸಾಮಾನ್ಯದ ನಂಬುಗೆಯಾಗಿದೆ. ಪ್ರತಿನಿಧಿಪ್ರಾರ್ಥನಾಮಂದಿರದ ಜೀರ್ಣೋದ್ಧಾರಜ ಹವ್ಯಾಸವು ಪ್ರತಿನಿಧಿಗಳಾದ ನಿಮಗೆ ಬೇಡ. ಇಷ್ಟೇ ನಮ್ಮ ಅರಿಕೆ

ಮೈಸೂರು ಮೊಕ್ಕಾಂ
೨೯—೧೦—೩೧

ತೀರ್ಥಹಳ್ಳಿ ಕಾಳಿಂಗಯ್ಯನ ರಾಘವೇಂದ್ರರಾವ್

ನ್ಯಾಶನಲ್ ಇನ್ಶ್ಯೂರೆನ್ಸ ಕಂಪನಿ, ಲಿಮಿಟೆಡ್.
ಕಲಕತ್ತಾ.
(ಸ್ಥಾಪನೆ—೧೯೦೬.)

ಹೆಡ್ ಆಫೀಸ್:—೭, ಕೌನ್ಸಿಲ್ ಹೌಸ್ ಸ್ಟ್ರೀಟ್, ಕಲಕತ್ತಾ.

ದೇಶೀಯರಿಂದ ನಡೆಸಲ್ಪಟ್ಟ ಕಂಪನಿಗಳಲ್ಲಿ ಪ್ರಧಾನವಾದದ್ದು.

೧೯೩೦ ನೇ ಸಾಲಿನ ರಿಪೋರ್ಟು.

೧೯೩೦ ನೇ ಸಾಲಿನಲ್ಲಿ ಪೂರ್ತಿಯಾದ ಹೊಸ ವಿಮಾ ರೂ.		೧,೧೩,೫೫,೦೬೯
೧೯೩೦ ನೇ ಸಾಲಿನಲ್ಲಿ ಏರಿದ ವಿಮಾ ಧನ	,,	೧೧,೫೧,೬೧೩
ಪ್ರೀಮಿಯಂ ವರಮಾನ	,,	೩೦,೮೨,೯೫೬
೧೯೩೦ ನೇ ಸಾಲಿನಲ್ಲಿ ಬಂದ ಬಡ್ಡಿ ವರಮಾನ	,,	೭,೪೭,೬೦೮
ಒಟ್ಟು ಧನವಾಳ	,,	೧,೬೦,೦೦,೦೦೦
೧೯೩೦ ನೇ ಸಾಲಿನಲ್ಲಿ ಒಟ್ಟು ವಿಮಾ	,,	೬,೫೫,೭೦,೯೧೬

ಕಡಿಮೆ ಜರದ ಕಂತುಗಳು, ಉದಾರವಾದ ಶರ್ತುಗಳು, ಎಲ್ಲ ವಿಧವಾದ ಜೀವವಿಮೆಯನ್ನು ಈ ಕಂಪನಿಯಲ್ಲಿ ತೆಗೆಯಬಹುದು. ಕಂಪನಿಯ ಎಜಂಟರಾಗತಕ್ಕವರಿಗೆ ಒಳ್ಳೇ ಸಮಯ. [11-5

ಬ್ರಾಂಚ್ ಆಫೀಸ್ ಆಲಿಸ್ ಬಿಲ್ಡಿಂಗ್ಸ್, ಹೊರ್ನ್‌ಬಿ ರೋಡ್ } ಆರ್. ಜಿ. ದಾಸ ಎಂಡ್ ಕಂಪನಿ, ಮ್ಯಾನೇಜರ್ಸ್

ಜಾಹೀರ ನೋಟೀಸು.

ಶ್ರೀ ಶಕೆ ೧೮೫೩ನೇ ಪ್ರಜೋತ್ಪತ್ತಿ ಸಂ। ದ ಆಶ್ವೀಜ ಶು। ೧೦ರಲ್ಲು ತೀರ್ಥಹಳ್ಳಿ ತಾಲೂಕು ಶಿವಳ್ಳಿ ಸಿರ್ಕಾರ್ ಹೆಗಡೆಕಟ್ಟೆಯಲ್ಲಿ ಇರುವ ಹೊಸಮನೆ ಗಣಪಯ್ಯಹೆಗಡೆ ಬಿನ್ ದೇವಪ್ಪಹೆಗಡೆ ಈತನು ಈ ಜಾಹೀರ ನೋಟೀಸು ಮೂಲಕ ತಿಳಿಸುವ ದೇವಂದರೆ— ನಾನು ಹೆಗಡೆಕಟ್ಟೆ ಸೊಸಾಯಟಿಗೆ ರೂ. ೨೦೦ ಕೊಡತಕ್ಕ ಸಾಲ ಮಾತ್ರ ಬಾಕಿ ಉಂಟು. ಹೊರತು ಬೇರೆ ಯಾವ ತರದ ದೇನೆಮಾಡಿದ್ದಾಗಲೀ ಲೇಖೋಜರಕೊಟ್ಟದ್ದಾಗಲೀ ಇರುವದಿಲ್ಲ ಈ ತಿವ್ಯಾ ಇನ್ನು ಮುಂದೆ ಸಹಿ ಸಾಲ ತಕ್ಕೊಳ್ಳುವ ಗರ್ಜು ಬೀಳಲಿಕ್ಕಿಲ್ಲ ಕದಾಚಿತ್ ಇಷ್ಟರಲ್ಲಿ ಅಧವಾ ಇನ್ನು ಮುಂದೆ ಸಹಿ ಸಾಲ ತಕ್ಕೊಂಡ ಬಗ್ಗೆ ಕರಾರ ಲೇಖೋ ವಗೈರೆ ಹಾಜರಾದರೆ ಅದು ಸೃಷ್ಟಿಕೆದೆಂತ ತಿಳಿಯತಕ್ಕದ್ದು. ಇಷ್ಟು ಮುಂದೆ ಸಾಲಬೇಕಾದರೆ ಹೆಗಡೆಕಟ್ಟೆನ ಸೊಸಾಯಟಿಯಲ್ಲಿ ಮಾತ್ರ ತಕ್ಕೊಂಡೇನು. ಅದರ ಹೊರತಾಗಿ ಬೇರೆ ಯಾರಿಂದಲೂ ತಕ್ಕೊಳ್ಳಲಿಕ್ಕಿಲ್ಲ. ಇನ್ನ ಯಂತರ ಬೇರೆ ಯಾರಾದರೂ ನನ್ನ ಲೇಖೀ ನಾನು ಸಾಲಾ ತಕ್ಕೊಂಡೆ ಎಂತ ಬಂದರೆ ಅದು ರದ್ದು

ಗಣಪಯ್ಯಹೆಗಡೆ ದೇವಪ್ಪಹೆಗಡೆ ರುಜು

ತಗಡೂರು ಸತ್ಯಾಗ್ರಹಾಶ್ರಮಕ್ಕೆ ೫ ರಾಷ್ಟ್ರ ಮುಖಂಡರುಗಳ ಸಹಾನುಭೂತಿ.

ಮೈಸೂರು ಸಿಟಿ ಕಾಂಗ್ರೆಸ್ಸಿನವರು ಟಿವರ್ ಹಾಲಿವರ್ಡ ತಗಡೂರು ಸತ್ಯಾಗ್ರಹಾಶ್ರಮಕ್ಕೆ ಸಹಾನುಭೂತಿಯನ್ನು ವ್ಯಕ್ತಪಡಿಸುವ ಸಲುವಾಗಿ ತಾ. ೩೪—೧೦—೩೧ ರಲ್ಲಿ ಒಂದು ಬಹಿರಂಗ ಸಭೆಯನ್ನು ನೇರಿಸಿದ್ದರು. ಆ ಸಭೆಗೆ ಮೈಸೂರಿನ ಸುಪ್ರಸಿದ್ಧ ವಕೀಲರಾದ ಮಾ॥ ಪಿ. ನೀಕಾರಾಯಣಯ್ಯನವರು ಅಧ್ಯಕ್ಷರಾಗಿದ್ದರು. ಶ್ರೀ॥ ಗಳಾಡ ಜೊಸಕೊಪ್ಪ ಕೃಷ್ಣರಾಯರವರೂ, ಜಂಗಲ್ಲರಾಯ ರೆಡ್ಡಿಯವರೂ, ಸತ್ಯನಾರಾಯಣ ನೆಟ್ಟೆರವರೂ, ಬೇಲೂರು ಶ್ರೀನಿವಾಸ ಅಯ್ಯಂಗಾರವರೂ, 'ವಿಶ್ವ ಕರ್ನಾಟಕ' ಪತ್ರಿಕೆಯ ಸಂಪಾದಕರಾದ ಟಿ. ಕೆ. ಶರ್ಮರವರೂ ಸತ್ಯಾಗ್ರಹಾಶ್ರಮಕ್ಕೆ ಬೆಂಕಿ ಹಾಕಿ ಸುಟ್ಟು ಭಸ್ಮ ಮಾಡಿದ ದುಷ್ಕೃತ್ಯವನ್ನು ಖಂಡಿಸಿ ಆಶ್ರಮಕ್ಕೂ ಆದರ ನಿವಾಸಿಗಳಿಗೂ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

೨೫—೧೦—೩೧ ನೇ ಭಾನುವಾರದ ದಿವಸ ಶ್ರೀ॥ ಗಳಾಡ ಜೊಸಕೊಪ್ಪ ಕೃಷ್ಣರಾಯರವರೂ ಬೇಲೂರು ಸತ್ಯನಾರಾಯಣ ನೆಟ್ಟೆರವರೂ, ಅಡ್ವೋಕೇಟರುಗಳಾದ ಬೇಲೂರು ಶ್ರೀನಿವಾಸಯ್ಯಂಗಾರವರೂ, ಪಿ. ನೀಕಾರಾಯಣಯ್ಯನವರೂ ಮತ್ತು ಎಸ್. ಕೃಷ್ಣಸ್ವಾಮಿ ರಾಯರವರೂ, ಮೈಸೂರು ಸಿಟಿ ಮತ್ತು ಡಿಸ್ಟ್ರಿಕ್ಟಿನ, ಬೆಂಗಳೂರು ಸಿಟಿ ಮತ್ತು ಡಿಸ್ಟ್ರಿಕ್ಟಿನ ಕಾಂಗ್ರೆಸ್ ಕಮಿಟಿಗಳ ಕಾರ್ಯದರ್ಶಿಗಳೂ, ಕಾಯಿನಾಡು ಪತ್ರಿಕೆಯ ಸಂಪಾದಕರುಗಳಾದ ಪಿ. ಆರ್. ರಾಮಯ್ಯನವರೇ ಮುಂತಾದ ಅನೇಕ ಜನ ರಾಷ್ಟ್ರಭಕ್ತರುಗಳು ತಗಡೂರಿಗೆ ದಯಮಾಡಿಸಿದ್ದರು. ಸ್ಥಳ ಪರಸ್ಥಳಗಳಿಂದ ಬಹಳ ಜನರು ಬಂದು ಸೇರಿದ್ದರು. ಶ್ರೀ॥ ಜೊಸಕೊಪ್ಪ ಕೃಷ್ಣರಾಯರವರಿಂದ ರಾಷ್ಟ್ರಿಯ ಧ್ವಜಾರೋಹಣವಾಯಿತು. ಎಲ್ಲರೂ ರಾಷ್ಟ್ರೀಯ ಧ್ವಜ ವಂದನೆಯನ್ನು ಮಾಡಿದರು. ನಂತರ ಸುಟ್ಟು ಭಸ್ಮವಾಗಿದ್ದ ಸತ್ಯಾಗ್ರಹಾಶ್ರಮದ ಎರಡು ಕಟ್ಟಡಗಳನ್ನೂ ಹಾಲಿ ಈಗ ಆಶ್ರಮವಾಸಿಗಳು ವಾಸವಾಗಿರುವ ಪರ್ಣ ಶಾಲೆಯನ್ನೂ ನೋಡಿದರು ಮತ್ತು ಪ್ರದಕ್ಷಿಣೆಯನ್ನು ಮಾಡಿಕೊಂಡು ಗ್ರಾಮದ ಸಮಗ್ರ ಭಾಗಗಳನ್ನೂ ಲಕ್ಷ್ಮೀರಮಣ ಸ್ವಾಮಿಯ ದೇವಾಲಯದಲ್ಲಿ ಸಭೆಯು ಸೇರಿತು. ಆ ದಿವಸದ ಸಭೆಗೆ ಶ್ರೀ॥ ಜೊಸಕೊಪ್ಪ ಕೃಷ್ಣರಾಯರವರು ಅಧ್ಯಕ್ಷರಾಗಿದ್ದರು. ರಾಷ್ಟ್ರ ಮುಖಂಡರುಗಳೂ, ನಕೇಲರುಗಳೂ ಭಾಷಣ ಮಾಡಿದರು ಮುಂಡಿಯ ಲಿಂಗಾಯತರುಗಳು ಆಶ್ರಮವನ್ನು ಸುಟ್ಟ ವಿಷಯವಾಗಿ ಖಿ. ತಗಡೂರು ರಾಮಚಂದ್ರರಾಯರು ಪ್ರಸಿದ್ಧ ಪಡಿಸಿರುವ ಹಸ್ತ ಪತ್ರಿಯಲ್ಲಿ ನಮ್ಮ ದೇವಿಯು ಒಂದರ ಮೇಲೆ ಅರೋಪಣೆಯನ್ನು ಹೊರಿಸಿರುತ್ತಾರೆ. ಆದರಿಂದ ನಮ್ಮ ಮನಸ್ಸಿಗೆ ಬಹಳ ದುಃಖವಾಗುತ್ತದೆ. ನಮ್ಮೊಳಿನವರೇ ಬೆಂಕಿ ಹಾಕಿರಬೇಕೆಂಬುದರಲ್ಲಿ ಸಂದೇಹವಿಲ್ಲ ಎಂಬುದಾಗಿ ಹೇಳಿದರು. ಅಧ್ಯಕ್ಷರವರು ಸಭೆಯವರಲ್ಲಿ ಬೆರ್ಜಿಸಿ ಕಳೆಯಲ್ಪಟ್ಟು ಕಳೆದು ಹೋಯಿತು. ಮುಂಡಿಯ ಲಿಂಗಾಯತರುಗಳ ಮನಸ್ಸಿಗೆ ಬಹಳ ದುಃಖವುಂಟಾಗಿರುವುದರಿಂದ ಆ ಬರಪಣಿಗೆಯನ್ನು ತಗಡೂರು ರಾಮಚಂದ್ರರಾಯರು ವಾಪಸ ತೆಗೆದುಕೊಳ್ಳಬೇಕೆಂದೂ, ಮುಂಡಿಯ ಲಿಂಗಾಯತರು ಇನ್ನು ಮುಂದೆ ಈ ಆಶ್ರಮಕ್ಕೆ ಸಹಾಯ, ಸಹಾನುಭೂತಿ ಬೆಂಬಲಗಳನ್ನು ಕೊಟ್ಟು ಆಶ್ರಮವನ್ನು ನಡೆಸಬೇಕೆಂದೂ ತೀರ್ಮಾನಿಸಿತ್ತರು. ಅದರಂತೆ ಉಭಯತರೂ ನಡೆದುಕೊಳ್ಳುವುದಾಗಿ ಸಭೆಯಲ್ಲಿ ಭರವಸೆಯನ್ನು ಕೊಟ್ಟರು. ಸಭೆಯ ಕೆಲಸ ಕಾರ್ಯಗಳು ಸಂತೋಷದಿಂದಲೂ, ಶಾಂತಿಯಿಂದಲೂ ನಡೆದುವು. ಎಲ್ಲ ಕೋಮಿನ ಜನರೂ ಪೂರ್ಣ ಸಹಾಯ ಮಾಡಿ ಕಟ್ಟಡದ ಕೆಲಸ ಕಾರ್ಯಗಳನ್ನು ಮುಗಿಸಿ ಕೊಡುವುದಾಗಿ ಭರವಸೆ ಕೊಟ್ಟರು. ಪಂಕರ ಸಭೆಯು ಭರವಸ್ತಾಯಿತು.

ತಗಡೂರು ರಾಮಚಂದ್ರ ರಾವ್.

ORIENTAL
GOVERNMENT SECURITY
LIFE ASSURANCE COMPANY, LTD.

INCORPORATED IN INDIA 1874

1930 RESULTS

New Business: 26, 481 Policies assuring Rs. 544 akhs.
Net Interest Income; Rs. 52 Lakhs.
Total Premium Income: Rs. 179 Lakhs.
Claims Paid; 3281 for Rs. 81 Lakhs,
Loans to Policyholders: 8013 for Rs. 32 Lakhs.
Funds Increased to nearly Rs. 10½ Crores
Policies in Force: 1,78,322 assuring with Bonuses Rs. 38 Crores.

ALL THE OPERATIONS INVOLVED IN THE ABOVE CONDUCTED AT THE LOW EXPENSE RATIO OF 22 4% OF THE PREMIUM INCOME

THE MAGNITUDE OF THIS GREAT INDIAN COMPANY' OPERATIONS CAN BE JUDGED BY THESE FIGURES, AS CAN ALSO ITS ECONOMICAL AND EFFICIE..T MANAGEMENT

ON ITS PAST RECORD AND ITS FUTURE P: OSPE TS ALIKE THE ORIENTAL CLAIMS THE INCREASING SUPPORT OF ALL PATRIOTIC INDIANS WHO DESIRE TO SEE AN INDIAN LIFE ASSURANCE COMPANY numbered among the GREAT INSUR ANCE INSTITUTIONS of the WORLD

Applications for further information should be addressed to —

Cawasjee Jamsetjee & Co.,
Chief Agents for the Deccan,
EAST STREET, POONA.

H. EDWIN JONES, F F.A., A. I. A.
Manager,
11-11] ORIENTAL BUILDINGS, BOMBAY

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯ ಎಸ್ ಕೆ ರಾಜಪೂತ ಇವರ ಸ್ವದೇಶಿ ಔಷಧಗಳು ಗುಣ ಬಾರದಿದ್ದರೆ] ೧೦೦೦ ರೂ. ಇನಾಮು [ಜಣ ಪರತ.

ಪುರುಷತ್ವ ಸಂಜೀವಿನೀ ಚೂರ್ಣ. [ರಜಿಸ್ಟರ್ಡ್

ಈ ಚೂರ್ಣದಿಂದ ಸ್ವಪ್ನದಲ್ಲಿ ಹಾಗೂ ಮುಖತ್ರದ್ವಾರಾ ಹೋಗುವ ವೀರ್ಯವು ಕೂಡಲೇ ಬಂದಾಗುವದು ಸರವಿ ಪದಾರ್ಥಂದಾದ ಉಷ್ಣತಾ. ಮುಷ್ಠಿ ವೈಥ-ಸವಂದ ಧಾತು ಕ್ಷೀಣತೆ, ಅಶಕ್ತತೆ. ಶೀಘ್ರಪ್ರಾತುಪತನ ಇವೆಲ್ಲ ರೋಗಗಳು ನಾಶವಾಗಿ ರತ್ತ ಶುದ್ಧಿಯಾಗುತ್ತದೆ. ಮತ್ತು ವೀರ್ಯವು ಗಟ್ಟಿಯಾಗಿ ಗರ್ಭಧಾರಣಕ್ಕೆ ಯೋಗ್ಯವಾಗುತ್ತದೆ. ಮುಖ್ಯ ಸರ್ಟಿಫಿಕೇಟು—ಮಾ ರಾ ಪ್ಲಿ ಎಸ್ ಅಗಡೆ, ಡ್ಯಾಜಿಸ್ಟೇಟು, ಸಾತಾರಾ—ಈ ಚೂರ್ಣದಿಂದ ಪತಿಗೆ ಆಶ್ಚರ್ಯಕಾರಕ ಗುಣವಾಯಿತು. ಅನೇಕ ತರದ ಅವಿಚಾರದಿಂದ ದುಷ್ಪವಾದ ವೀರ್ಯ ಹಾಗೂ ರಕ್ತವು ಇದರಿಂದ ಸತೇಜವಾಗಿ ಪ್ರಕೃತಿಯು ನೆಟ್ಟಗಾಗದೆ ಇರದು.' ೨೧ ದಿವಸ ಸಾಕಾಗುವಷ್ಟು ಡಬ್ಬಿಗೆ ಕಿಮ್ಮತ್ತು ರೂ. ೩. ಟಿ ಪಿ. ಆಣೆ ೮

ಸ್ತ್ರೀಧರ್ಮಸಂಜೀವಿನೀ ಚೂರ್ಣ. (ರಜಿಸ್ಟರ್ಡ್)

ಈ ಚೂರ್ಣವು ಕೆಂಪು, ಬಿಳಿ ತರಗಿಗೆ ಕತ್ತುವಾಗಿರುವುದು. ಅತಿಯಮಿತ ತಡೆಯಿಂದ ಮುಟ್ಟಾಗುವಿಕೆ, ಕ್ಲೇಶ, ಮೈಯೆಲ್ಲ ನೋವು, ಉಷ್ಣತೆ, ಕ್ಷೀಣತೆ, ಗರ್ಭಾಶಯದಲ್ಲಿಯ ದೋಷ, ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭ ಪತನವಾಗೋಣ, ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವುದು. ಮಕ್ಕಳಾಗುವದಿಲ್ಲೆಂದು ೨ ನೇ ಲಗ್ನವಾಡಿಕೊಳ್ಳುವ ಮೊದಲು ಗೃಹದವತೆಯೂದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯಕೊಡಿರಿ. ಮುಖ್ಯ ಸರ್ಟಿ ಫಿಕೇಟು, ಮಾ. ರಾ. ಎ. ಎಸ್. ಇನ್ಸಪೆಕ್ಟರ ವೆಳಗಾಂವ—ಈ ಚೂರ್ಣದಿಂದ ಪತ್ನಿ ಶುಟಿಂಬದ ಹೊಟ್ಟೆಯೊಳಗಿನ ರತ್ತ ಗುಲ್ಮದ ನಾಮುಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಚೇಷವಾದವು. ಪತ್ನಿ ವಿಪ್ರನ ಹೆಂಡತಿಯು ರತ್ತ ಮತ್ತು ಬಿಳಿ ತರಗು ಇಲ್ಲದಂತಾದವು. ೨೧ ದಿವಸದ ಡಬ್ಬಿಯ ಕಿಮ್ಮತ್ತು ರೂ. ೩. ಟಿ ಪಿ. ಆಣೆ ೮

ಸಂತತಿ ಪ್ರತಿಬಂಧಕ ಚೂರ್ಣ. [ರಜಿಸ್ಟರ್ಡ್]

ಬಹಳ ಬಾರಿ ಹಡಿಯುವದರಿಂದ ಹೆಂಗಸರಿಗೆ ಅತಿಶಯ ಆಶಕ್ತಿಯಾಗುತ್ತದೆ. ಬಹಳ ಒಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದ ಅಥವಾ ಬೇರೆ ಕಾರಣಗಳಿಂದ ಮಕ್ಕಳು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇವುದಂತೆ ಆಗುತ್ತಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೆ ಗರ್ಭಧಾರಣವಾಗುವುದು. ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೆ ಪೂರಾ ವಿಚಾರಮಾಡಿ ಔಷಧ ಕೊಡಿರಿ. ಮುಖ್ಯ ಸರ್ಟಿಫಿಕೇಟು ವೈದ್ಯ ಆರ್. ಬಿ ಚಾ.ಗದೇವ ಪೂರ್ನಾ ಖಾನದೇಶ—ಈ ಚೂರ್ಣದಿಂದ ಯಾವ ತರದ ಅಪಾಯವಿಲ್ಲ. ಗದೆ ಗರ್ಭಧಾರಣವಾಗುವುದಿಲ್ಲ.' ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ೪ ರೂ. ೫. ಪಿ. ಆಣೆ ೪.

ಸೂಚನೆ:— ಯಾವದಾದರೂ ೨ ಡಬ್ಬಿಗೆ ಟಿ. ಪಿ. ವಾಪಿ. ನಮ್ಮಿಂ ಈ ರಿಜಿಸ್ಟರ್ಡ್ ಔಷಧದ ತದ್ದತ್ ನಕಲು ಕೈಕೂಟಿದೆ. ಪೂರ್ಣ ವಿಚಾರಮಾಡಿ ತರಿಸಿಕೊಳ್ಳಿರಿ. ಈ ಸರ್ಟಿಫಿಕೇಟು ಬೊಟ್ಟೆಯಿದೆ. ಎಂದು ನಿಶ್ಚಯಮಾಡುವವರಿಗೆ ೧೦೦೦ ರೂಪಾಯಿ ಇನಾಮು 12-10

ವಿಳಾಸ—ಸಂಜೀವಿನೀ ಔಷಧಾಲಯ, ಮುಂ. ಪೋ. ಮಿರಜ, S.M.C.

Shimoga Dist, Karnatak[illegible] State, INDIA

Recognised by the Department of Public Instructions in Mysore & recommended to all the Middle, High and Normal Schools in the State

Reg. No. M. 2713. 1932 ವಾ. ವರ್ಗಣಿ ೧೯೩೨.

ಉದಯಭಾರತ, ಮೈಸೂರು

ಸಂಪುಟ ೪ | ಶ್ರೀ. ಆಂಗೀರಸ - ಶ್ರಾವಣ ಪೌರ್ಣಮಿ 1932 | ಸಂಚಿಕೆ ೧

ವಿವಂಗತ ಶ್ರೀಮತ್ ಗಾನವಿಲಾಸದ-ಬಿ. ಕೃಷ್ಣಪ್ಪನವರು.

ಇವರು ಅಖಿಲ ಭಾರತದಲ್ಲಿ ಸ್ವಯಂಸಿದ್ಧವಿದ್ವಾಂಸರೆಂದು ಪ್ರಸಿದ್ಧಿಪಡೆದು, ಮೈಸೂರು ಮಹಾರಾಜರ ಆಸ್ಥಾನ ಸಂಗೀತ ವಿದ್ವಾಂಸರಾಗಿದ್ದರು. ಜನ ಸಾಮಾನ್ಯರಿಗೆಲ್ಲಾ ಇವರಲ್ಲಿ ಅಭಿರುಚಿ ಹುಟ್ಟುವಂತೆ ಮಾಡಿ, ಕರ್ನಾಟಕವೇ ತಾಯೂರೆಂದು ಜಯಘೋಷ ಬಾರದ, ಕರ್ನಾಟಕ ಮಾತೆಯ ಗಾನಕಲಾವೀಧರರಾದ ಏಕ ಮಾತ್ರ ಪುತ್ರರು. ಪೂರ್ವದ ಭಗವದ್ಭಕ್ತಿಯಾದ ಶ್ರೀ ತ್ಯಾಗರಾಜ ಸ್ವಾಮಿಗಳು, ಪುರಂದರದಾಸ, ಕನಕದಾಸ, ಜಗನ್ನಾಥ ದಾಸರೇ ಮೊದಲಾದ ಭಕ್ತಿರೋಪಾಸಕರುಗಳು ರಚಿಸಿ ಸತ್ಪ್ರಯೋಜನವಾದ ಪ್ರಾಚೀನ ಕೀರ್ತನೆಗಳಲ್ಲಿರುವ ಜಗವದ್ಭಕ್ತಿ, ನೀತಿ, ನೈಧ್ಯಾತ್ಮಾದಿಗಳನ್ನು ಮತ್ತೊಮ್ಮೆ ಜನಗಳ ಸ್ಮೃತಿಪಥಕ್ಕೆ ತಂದು ಕೊಟ್ಟ ಮಹಾ ಮಹಿಮರು. ಇವರ ಆತ್ಮಕ್ಕೆ ಚಿರಶಾಂತಿಯಾಗಲಿ.!

ರಾಷ್ಟ್ರಬಂಧು ನಿತ್ಯ ಪತ್ರಿಕೆ ಬೆಲೆ ೧ ಸ್ಯ

ಯಥಾ ದೇವಶೇ ಭಕ್ತಿಃ । ಯಥಾತ್ಮನಿ ಸ್ವಭಾವಃ ॥ -ಸತ್ಯ

ರಾಷ್ಟ್ರಬಂಧು

ಸಂಪಾದಕರು:— ಮಂಗಳವೇಢೆ ರಾಜೇರಾಯರೆ ಮಕ್ಕಳಾದ ಶ್ರೀನಿವಾಸರಾಯರು

ನೋಮುವಾರದ ಹೊರತಾಗಿ ಪ್ರತಿನಿತ್ಯವೂ ಪ್ರಕಟಿಸಲ್ಪಡುವದು

ಪರ್ಯಾಯ ಬಾಗಲಕೋಟೆ—ಮಂಗಳವಾರ ಪುಷ್ಯ ಶುದ್ಧ ೫ ಶಕೆ ೧೮೫೩ ತಾರೀಖು ೧೪—೧—೩೨ [ಸಂಚಿಕೆ ೧೦೯

ಕಸ್ತೂರಿಬಾಯಿಯವರನ್ನು ಹಿಡಿದರು

ಕರಾಚಿಯಲ್ಲಿ ಲಾಠಿ ಹಲ್ಲೆ. ೩೦ ಜನರಿಗೆ ಗಾಯ.

ಕಾನಪುರದಲ್ಲಿ ೪೧ ಜನರಿಗೆ ಶಿಕ್ಷೆ.

(ಸ್ಪೇಶಲ್ ತಂತಿಯವರ ತೆ. ಮುಂಬಯಿ ತಾ ೧೧)

ಕಸ್ತೂರಿಬಾಯಿ ಗಾಂಧಿ, ಪಂಡಿತ ಜವಾಹರಲಾಲ ನೆಹರು, ಶ್ರೀಮತಿ ಸರೋಜಿನಿ ನಾಯ್ಡು ಇವರ ಬಾಳಿಗೆ ಬಹುವರ್ಷದ ಜೊತೆಗಾರರಾದ ಶೇಖ ಅಬ್ದುಲ್ಲಾ ಇವರನ್ನು ಶ್ರೀನಗರದಲ್ಲಿ ಬಂಧಿಸಲ್ಪಟ್ಟಿದ್ದಾರೆ.

ಈ ಬಿಡುಗಡೆ ಪೋಲೀಸರು ಮೆರವಣಿಗೆ ಮಾಡುವ ಸ್ಥಳಗಳಲ್ಲಿ ಅಡ್ಡಿಮಾಡಿ ಜನರನ್ನು ಚದರಿಸಿ ಹಾಕಿದ್ದರಿಂದ ೩೦ ಜನರಿಗೆ ಗಾಯಗಳಾಗಿವೆ. ೧೫ ಜನರನ್ನು ಸೆರೆಹಿಡಿಯಲ್ಪಟ್ಟಿದ್ದಾರೆ.

ಕಾನಪುರದಲ್ಲಿ ಕಳ್ಳಭಟ್ಟಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ್ದಕ್ಕಾಗಿ ೪೧ ಜನರಿಗೆ ಶಿಕ್ಷೆ ಆಗಿದೆ

ಬಂಬಯಿಯಲ್ಲಿ ಸಭೆ ಮೊಪಲಾಯಿಸುವುಗಳಿಂದ ಬಿಡಿ

ಮುಂಬಯಿಯಲ್ಲಿ ಭೀ ವೆ ಬಂಗೆ ಮೊದಲಾದವುಗಳು ಜರುಗಲಿಲ್ಲವಾಗಿ ನಿಳ ನೆಲವಿನಂತೆ ಬಲೆ ಮಾಡಲಾಗಿದ್ದ ಪೊಲೀಸರನ್ನು ಹಿಂತೆಗೆದುಕೊಳ್ಳಲಾಗಿದೆ.

ಗವರ್ನರ ಹುದ್ದೆಗೆ ವ್ಯಾಪಾರಕ್ಕಿಳಿದ ಜಿಚೆ

ಮುಂಬಯಿ ಗವರ್ನರಾಗಿ ಇವತ್ತಿನ ದಿವಸ ಇಲ್ಲಿಯು ಕೆಲವು ಬೈಸಿಕಲ್ ಅಂಗಡಿಗಳ ಮುಂದಾಳುಗಳೊಡನೆ ಇದ್ದರೆಂಬಂಥವಾರ ವಿಚಾರ ಏನಿರಬಹುದೆಂಬ ಸಂಗತಿ.

ಕಲಕತ್ತೆಯಲ್ಲಿ ೨೧ ಜನರಿಗೆ ಕೈದು

ಕಲಕತ್ತೆಯಲ್ಲಿ ೨೧ ಜನರಿಗೆ ಕೈದು ಆಗಿದೆ.

ಮುಂಬಯಿಯಲ್ಲಿ ಪಾಯಿರೋಪಿಟನ್ ಅಂಗಡಿಗಳ ಪಿಕೆಟಿಂಗ.

ಸುಳ್ಯಜಿಲ್ಲೆಯ ಮಂಗಳವಾಡ ಮಾರ್ಕೆಟಿನ ಪಿಕೆಟಿಂಗ ಮಾಡುತ್ತಿದ್ದ ದೇಶಸೇವಿಯರು ಪಿಕೆಟಿಂಗ ಕಾರ್ಯವನ್ನು ಜೋರಿನಿಂದ ಸಾಗಿಸಿದ್ದು ಕೆಲವು ಕಳ್ಳಭಟ್ಟಿಯ ಕೆಲವು ಯುರೋಪಿಯನ್ ಅಂಗಡಿಗಳು ಮುಂದೆಯೂ ಪಿಕೆಟಿಂಗ ಹಿಡಿದಿದೆ

ಕರ್ಮವೀರ ದಿವಾಕರರನ್ನು ಹಿಡಿದರು.

ಕರ್ಮವೀರ ಕಚೇರಿಯನ್ನು ಜಪ್ತು ಮಾಡಿದರು.

ಶ್ರೀಲ ಶ್ರೀ ಗಾಂಧೀಧಾರವಾಡ ತಾಲೂಕಾ ಸತ್ಯಾಗ್ರಹ ಪತ್ರಿಕೆಯಾ ಸಂಪಾದಕರಾದ ಆದರಣೀಯ ಎಸ್ ಬಿ ದಿವಾಕರರವರನ್ನು ಇವತ್ತಿನ ಮಧ್ಯಾಹ್ನ ೩ ಗಂಟೆಯಲ್ಲಿ ಸೆರೆಹಿಡಿದು ತಾಲೂಕಾ ಕಛೇರಿಗೆ ಕರೆದುಕೊಂಡು ಹೋದರು.

ಪೋಲೀಸ ಅಧಿಕಾರಿಗಳು ನಿನ್ನೆಯ ದಿವಸ ಮದ್ರಾಸಿನಲ್ಲಿ ಸಹಿಸಿದ ಕರ್ಮವೀರ ಕಛೇರಿಯನ್ನು ಝಡ್ತಿಮಾಡಿ ಅವರ ತನ್ನ ಸಶಕ್ತಿ ತೆಗೆದು ಹಾಕಿದೆ, ಸ್ವಯಂಸೇವಕ ಪಿಕೆಟಿರವು ಇಲ್ಲಿರುವದೆಂದು ಜಬರ್ದಸ್ತಿಂದ ಪೋಲೀಸರು ಕೆಲವು ಪತ್ರಿಕೆಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

(ಕಂ ಪ ವಾರ್ತೆ ಮುಂಬಯಿ ತಾ ೧೧)

ಗುಜರಾಥಿ ವಿದ್ಯಾಪೀಠದ ಪ್ರೊಫೆಸರನ್ನು ಹಿಡಿದರು.

ಗುಜರಾತಿ ವಿದ್ಯಾಪೀಠದ ಪ್ರೊಫೆಸರರು ವಿದ್ಯಾಪೀಠವನ್ನು ಬಿಟ್ಟು ಹೋಗಲು ನಿರಾಕರಿಸಿದ್ದರಿಂದ ಅವರನ್ನು ಹಿಡಿದು ಮಾಡಲ್ಪಟ್ಟಿದ್ದಾರೆ.

ಅನುಕ್ರಮಣಿಕೆ.

		ಪುಟ.
1.	ಕಿ॥ ತರಗತಿಗಳಿಗೆ ಪುರಾಣ ಕಥೆಗಳಿಗಿಂತ 'ಅಜ್ಜಿ ಕಥೆಗಳೇ' ಉತ್ತಮವಾಗಿವೆ—	1.
2.	ಕಳ್ಳನ ಹೇಳಿಗೆ .. .. .. —	7.
3.	ಶಾಲಾ ಪರೀಕ್ಷಕರು .. .. .. —	8.
4.	ಅತಿಯಾಶೆಯ ಫಲ .. .. .. —	11.
5.	ಕನ್ನಡ ಬೋಧನೆಯಲ್ಲಿ ಪ್ರಥಮ ಹೆಜ್ಜೆ .. .. —	13.
6.	ಕೇವಲ ವಿನೋದ .. .. .. —	21.
7.	ಚಿತ್ರಗಾರನಾರ್ .. .. .. —	25.
8.	ಭಾಷಾ ಬೋಧನೆಯಲ್ಲಿ ಡೈರೆಕ್ಟ್ ಮೆತಡ್ ಮಾಡಿರುವ ಅನಾಹುತ —	26.
9.	ಕೊಡಗಿನ ಪೂರ್ವದ ಅರಸರು .. .. —	37.

ಶಾರದಾ.

ಪ್ರಕಾಶಕರು

ಕೊಡಗು ನಿಖಿಲ ಉಪಾಧ್ಯಾಯರ ಸಂಘ,

ಮಡಿಕೇರಿ.

[ರೂ. ೧—೦—೦.

ವಾರ್ಷಿಕ ಚಂದಾ]

ವರ್ಷಕ್ಕೆ ಮೂರಾವರ್ತಿ ಪ್ರಕಟನಾಗುವ ಪತ್ರಿಕೆ.

SHARADA.

ಶಾ ರ ದಾ.

ಸಂಪುಟ ೨]　　೧೯೩೨ ನೇ ಇಸವಿ ಸೆಪ್ಟಂಬರ್.　　[ಸಂಚಿಕೆ ೩

೬॥ ತರಗತಿಗಳಿಗೆ ಪುರಾಣ ಕಥೆಗಳಿಗಿಂತ "ಅಜ್ಜಿ ಕಥೆಗಳೇ" ಉತ್ತಮವಾಗಿವೆ.

(ಕೆ. ಮಂಜಪ್ಪ, ಮೋಡಲ್ ಸ್ಕೂಲ್, ವೀರಾಜಪೇಟೆ).

ಶಾಲೆಗೆ ಒಂದು ಮಗುವಿಗೆ ಜ್ಞಾನ ಹುಟ್ಟಿ ಓಡ್ಯಾಡುವ ಸ್ಥಿತಿಗೆ ಬರುವ ಮುಂಚೆಯಾ, ಬಂದನಂತರ ತನ್ನ ಸುತ್ತಮುತ್ತಲಿನ ಅಂದರೆ ಬಾಹ್ಯ ವಸ್ತುಗಳ ಮೇಲೆ ತನ್ನ ಇಂದ್ರಿಯಗಳನ್ನು ಚಲಿಸಿ, ಅಂಥಾ ವಸ್ತುಗಳ ಪರಿಚಯವನ್ನು ಮಾಡಿಕೊಳ್ಳಲು ಬಹಳ ಕುತೂಹಲಪಡುತ್ತದೆ. ಈ ಕಾಲದಲ್ಲಿ ಹೆತ್ತ ತಾಯಿಯು ಪ್ರಥಮ ಉಪಾಧ್ಯಾಯನಿಯಾಗಿ ಅಂಥಾ ವಸ್ತುಗಳ ಪರಿಚಯವನ್ನು ಮಾಡಿಕೊಡಲು ಭಾಷಾರೂಪದಲ್ಲಿ ಅವುಗಳನ್ನು ತೋರಿಸಿಯೋ, ಕೈಯಲ್ಲಿ ಹಿಡಿಸಿಯೋ, ಮೂಸಿ ನೋಡಿಸಿಯೋ, ತಿನ್ನಲಿಕ್ಕೆ ಕೊಟ್ಟೋ ಯಾ, ಇತ್ಯಾದಿಗಳಿಂದ ಮಗುವಿನ ಮನಸ್ಸಿಗೆ ಅನುಭವ ಮಾಡಿಸುವಳು. ಇದೂ ಸಾಲದೆ ಪದೇ ಪದೇ ಅವುಗಳ ಹೆಸರುಗಳನ್ನು ಹೇಳಿಕೊಡುವಳು. ಮಗು ವಸ್ತುಗಳನ್ನು ದೃಷ್ಟಿಸುತ್ತಾ, ಅವುಗಳ ಹೆಸರುಗಳನ್ನು ಆಲಿಸುತ್ತಾ ಕ್ರಮೇಣ ತನ್ನ ತೊದಲು ಮಾತುಗಳಿಂದ ಮುದ್ದುಮುದ್ದಾಗಿ ಉಚ್ಚರಿಸ ತೊಡಗುವುದು. ಈ ಕಾಲದಲ್ಲಿ ಮಗುವಿಗೆ ಭಯ, ಭೀತಿ, ಎಂಬದು ಗೊತ್ತೇ ಇರುವುದಿಲ್ಲ. ಆ ಮಗುವು ಸಿಕ್ಕಿ ಸಿಕ್ಕಿದ ವಸ್ತುಗಳನ್ನು ಹಿಡಿಯಲು ಪ್ರಯತ್ನಿಸುತ್ತದೆ.

ವಿಷಯ ಸೂಚಿಕೆ.

೧.	ಕಲೆಗೆ	....	ಶ್ರೀ॥ ಕೃಷ್ಣಮೂರ್ತಿ ಪುರಾಣೋಕ್ತ.
೨.	ಹುಣ್ಣಿಮೆ	....	ಶ್ರೀ॥ ಪರಮೇಶ್ವರ ಭಟ್ಟ.
೩.	ಮುಂಗಾರು	....	ಶ್ರೀ॥ ಪರಮೇಶ್ವರ ಭಟ್ಟ.
೪.	ಅಗಸ್ತ್ಯ ಮಹರ್ಷಿಗಳು	....	ಶ್ರೀ॥ ಎ ಯ್ಕ. ಸುಬ್ಬರಾವ್.
೫.	ಚಿತ್ರಕಲೆ	....	ಶ್ರೀ॥ ಎ. ಎಸ್. ಸುಬ್ಬರಾವ್.
೬.	ಹಿಂದುಸ್ಥಾನದ ಬಡತನಕ್ಕೆ ಕಾರಣವೇನು?	....	ಶ್ರೀ॥ ಎಂ. ಯಲ್. ಎ. ಮತ್ತು ಎ. ಯಸ್. ಯ್ಕ.
೭.	ಟಟಿಯನ್		ಶ್ರೀ॥ ಜಿ. ಶ್ರೀನಿವಾಸರಾವ್, ಬಿ.ಎ.ಬಿ.ಎಲ್.
೮.	ಕಲಾ ಸ್ವರೂಪ	....	ಶ್ರೀ॥ ವೀರಕೇಸರೀ ಎಂ. ಸೀತಾ ರಾಮಶಾಸ್ತ್ರಿಗಳು.
೯.	ವಿಗ್ರಹಗಳನ್ನು ಮಾಡುವ ವಿಧಾನ	....	ಶ್ರೀ॥ ಎಂ. ಸುಬ್ರಹ್ಮಣ್ಯಶಾಸ್ತ್ರಿ.
೧೦.	ಕನಬು ಮತ್ತು ಕಲೆ	....	ಶ್ರೀ॥ ಜಯರಾಮ ವೆಂಕಟಾಚಾರ್ಯರು.
೧೧.	ಪ್ರಪಂಚ-ಪರಿಚಯ ಮತ್ತು ವಿಮರ್ಶೆ.	....	ಸಂ॥
೧೨.	ಕವಿತಾ ಚಿತ್ರ	....	ಶ್ರೀ॥ ಬಿ. ನರಹರಿ ಶಾಸ್ತ್ರಿಗಳು.
೧೩.	ಪ್ರೀತಿಯ ಪುಸ್ತಕದ ಹಾಳೆ.		

ಭಿನ್ನಹ ಮತ್ತು ವ್ಯಾವಹಾರಿಕ ಸೂಚನೆ

ಹಿಂದಿನವರುಷದಲ್ಲಿ ಸಹಾಯಮಾಡಿದವರಿಗೆ ವಂದನೆಗಳನ್ನು ಸಮರ್ಪಿಸಿ ಮುಂದಿನ ಸಹಾಯಕ್ಕಾಗಿ ವ್ಯಾಖ್ಯಿಸುವೆವು.

ಎರಡನೆಯಸಂಪುಟವನ್ನು ಬೇಗೆ ಪ್ರೆಸ್ಸಿನಲ್ಲಿ ಛಾಪಿಸಬೇಕೆಂದು ಕೆಲವು ತಿಂಗಳ ಹಿಂದೆ ನಿಶ್ಚಯಿಸಿದ್ದಂತೆ ಈಸಾರಿ ನುರೀಶಾ ಪ್ರೆಸ್ಸಿನಲ್ಲಿ ಅಚ್ಚಾಗಿದೆ. ಸ್ವಂತ ಮುದ್ರಣಾಲಯವಿಲ್ಲದವರ ಕಷ್ಟ ನಮಗೂ ಇದ್ದೇ ಇದೆ. ಆದುದರಿಂದಲೇ ಈ ಪ್ರಥಮ ಸಂಚಿಕೆಯೂ ಕಾಲಾತೀತವಾಗಿ ಹೊರಬಿದ್ದಿದೆ. ಮಿತ್ರರೊಬ್ಬರು "ಪೆಜ್ಜು ಪುಟ, ಹೆಜ್ಜು ಚಿತ್ರವತಗಳು, ಕಾಲಕ್ಕೆ ಸರಿಯಾಗಿ ಹೊರಡುವುದು ಇವು ಅವಶ್ಯಕ" ಎಂದು ಉತ್ತಮ ಸಲಹೆಯಿತ್ತರು. ಇನ್ನೂ ಮಿತ್ರರನೇಕರು ಅನೇಕ ಉಪಯುಕ್ತ ಸಲಹೆಗಳನ್ನಿತ್ತಿರುವರು. ಸಂಪಾದಕರು ಇಂತಹ ಉಪಯುಕ್ತ ಮಾರ್ಪಾಟು ಮಾಡಲು ಆತುರವಹಿಸುತ್ತಿರುವರು. ಆದರೆ ಇವೆಲ್ಲವೂ ಧನವನ್ನಾಶ್ರಯಿಸಿವೆ. ದ್ರವ್ಯಾನುಕೂಲ ಒದಗಿದಂತೆಲ್ಲಾ ಈ ಬದಲಾವಣೆಗಳನ್ನು ಮಾಡಲಾಗುವುದು. ಮಾರ್ಚಿ ತಿಂಗಳು ವರ್ಷಾರಂಭವಾದುದು ನಾನಾಬಗೆಯ ತೊಂದರೆಗೆ ಕಾರಣವೆಂದು ಮಿತ್ರರನೇಕರು ಬರೆದಿರುವರು. ಆದುದರಿಂದ ಈ ಎರಡನೆಯ ಸಂಪುಟವನ್ನು ಜೂನ್ ತಿಂಗಳಿಗೆ (೪ ತಿಂಗಳು) ಪೂರ್ತಿಮಾಡಿ ಜುಲೈ ತಿಂಗಳಿಂದಲೇ ಮೂರನೆಯ ಸಂಪುಟವನ್ನು ಆರಂಭಿಸಬೇಕೆಂದೂ, ಚಂದಾ ಮೂಲಕ ತಿಂಗಳುಗಳ ಪ್ರಮಾಣಕ್ಕನುಸಾರವಾಗಿ ಹಂಚಬೇಕೆಂದೂ ಇರುವೆವು. ಈ ಭಾಗದಲ್ಲಿ ಚಂದಾದಾರರು ಒಪ್ಪಿಗೆ ಕಳುಹಿಸಬೇಕಾಗಿ ವ್ಯಾಪ್ತಿಸೆ.

ಈ ಎರಡನೆಯ ಸಂಪುಟದಿಂದ ಪತ್ರಿಕೆಯನ್ನು ಮತ್ತಷ್ಟು ಉಪಯುಕ್ತವಾಗುವಂತೆ ನಡೆಸಲು ಮುಂದೆ ಕಂಡ ಸಹಾಯಕ ಸಭೆಯೊಂದು ಏರ್ಪಡಿಸಲಾಗಿದೆ.

ಶ್ರೀ॥ ಡಿ. ವೆಂಕಟರಾಮಯ್ಯ, ಬಿ.ಎ.ಎಲ್.ಟಿ.	ಶ್ರೀ॥ ಪಿ. ಆರ್. ರಾಮಯ್ಯನವರು, ಬಿ.ಎಸ್ಸಿ.
ಶ್ರೀ॥ ಎಸ್. ಜಿ. ಶಾಸ್ತ್ರಿಗಳು, ಎಂ.ಎಸ್.ಸಿ.	ಶ್ರೀಮತಿ ರಂಗಮ್ಮ, ಬಿ.ಎ.
ಶ್ರೀ॥ ಜಿ. ಶ್ರೀನಿವಾಸರಾವ್, ಎಂ.ಎಸ್.ಸಿ.	ಆಸ್ಥಾನವಿದ್ವಾನ್ ಜಯರಾಮವೆಂಕಟಾಚಾರ್.
ಶ್ರೀ॥ ಸಿ. ಕೆ. ವೆಂಕಟರಾಮಯ್ಯ, ಎಂ.ಎ. ಎಲ್ಎಲ್.ಬಿ.	ಶ್ರೀ॥ ಜಿ. ಶ್ರೀನಿವಾಸರಾವ್, ಬಿ.ಎ.ಬಿ.ಎಲ್.
ಶ್ರೀ॥ ವೀರಕೇಸರೀ ಸೀತಾರಾಮಶಾಸ್ತ್ರಿಗಳು.	ಶ್ರೀ॥ ಪೆಂಪಪ್ಪು ನರಸಿಂಹಶಾಸ್ತ್ರಿಗಳು, ಎಂ.ಎ.
	ಶ್ರೀ॥ ಕೆ. ಕೆ. ಎಂಬಯ್ಯನವರು, ಕಲಾವಿದರು.

ಎ. ಎಸ್. ಸುಬ್ಬರಾವ್, ಸಂಪಾದಕ.

ಮಹಿಷಾಸುರ ಮರ್ದಿನಿ.

ಬೇಲೂರು ಚಲುವ ಚನ್ನಿಗರಾಯನ ದೇವಾಲಯದಲ್ಲಿರುವ ಮೂರ್ತಿ.

ಪಾರ್ವತಿ.

ಈ ಮೂರ್ತಿಯು ಈಗ ಕೋರ್ಪಹೋರ್ಗ ನ್ಯಾಷನಲ್ ಮ್ಯೂಸಿಯಮ್ಮಿನಲ್ಲಿದೆ. ಬಲಗೈಯ್ಯಿನಲ್ಲಿ ಹಿಡಿದುಕೊಂಡಿದ್ದ ಕಮಲದ ಮೊಗ್ಗು ಕಳೆದು ಹೋಗಿದೆ. ಇದು "**ಸಿಂಹಕರಂಡ**" ಮುದ್ರೆ. ಮೂರ್ತಿಯು ಕಾಶ್ಯಪೆಯದ ಸೂತ್ರಕ್ಕನುಸಾರವಾಗಿದೆ.

ಈ ವಿಗ್ರಹವು ಹತ್ತನೆಯ ಶತಮಾನದಲ್ಲಿ ತಯಾರಾಗಿರಬಹುದೆಂದು **ಮಾ| ಒ. ಸಿ. ಗಂಗೂಲಿಯವರು** ಅಭಿಪ್ರಾಯ ಪಡುವರು.

"ಕಲಾ"

ಲಲಿತಕಲಾ, ಉದ್ಯೋಗ ಮತ್ತು ವಿದ್ಯಾ ಸಂಬಂಧ ಮಾಸಪತ್ರಿಕೆ.

ಸಂಪುಟ ೨	ಮಾರ್ಚಿ ೧೯೩೧.	ಸಂಚಿಕೆ ೧.

ಹುಣ್ಣಿಮೆ.

ನಭದಿಂ ಮೂಡಿ |
ಗಾಳಿಯ ಕೂಡಿ |
ಚಂದಿರ ಬಂದ |
ಕೌಮುದಿ ತಂದ |
ತಿರೆಗವ ಶೀತಲ ಕಿರಣದಿ ಮಜ್ಜನ ಮಾಡಿಸಿದ |
ತಿಂಗಳ ಬೆಳಕಲಿ ಲೋಗರ ನೆಲ್ಲರ ಮೋಹಿಸಿದ || ೧ ||

ಬೃಂದಾವನದಿ |
ಪೆಂಗಳು ಮುದದಿ |
ತುಳಸಿಗೆ ಬೆಳಗಿದ |
ನಂತರ ಇರಿಸಿದ |
ಸೊಡರಿನ ಕುಡಿಯದು ತಿಂಗಳಬೆಳಕಲಿ ಸುಳಿಯುತಿದೆ
ತಿಂಗಳ ಬೆಳಕಿಗೆ ತಲೆಯನು ಬಾಗಿಸಿ ಮಣಿಯುತಿದೆ || ೨ ||

ಬೀದಿಯ ಬಳಿಯೆ |
ತಿಂಗಳು ನಲಿಯೆ |
ತುರುಗಳು ಮಲಗಿ |
ತಿಂಗಳು ಕರಗಿ |
ಧಾರೆಯ ಪರಿಯಲಿ ಬೀಳುವ ತಿಂಗಳ ಮೀಯುತಿವೆ |
ಸುಗ್ಗಿಯ ಸೊಲ್ಲನ ಕೊಳಲಿನ ಮುದವನು ಜರಿಯುತಿವೆ || ೩ ||

ತಿಂಗಳ ಬರವು |
ಹುಣ್ಣಿಮೆ ಇರವು |
ಶಾಂತಿಯ ಕುರುಹು |
ನಾಕದ ನೆನಹು |
ಲೋಕಕೆ ನಾಕದ ಶಾಂತಿಯ ನೀಡುತೆ ಹಿಮಕರನೆ |
ಶೀತಲ ಕಿರಣದಿ ಜಗವನು ಬೆಳಗೈ ಸುಖಕರನೆ || ೪ ||

ಶ್ರೀ॥ ವಿ॥ ಪರಮೇಶ್ವರ ಭಟ್ಟ.

ಮುಂಗಾರು.

ಎತ್ತನೋಡಲೊಂದು ಬಗೆಯ ಶಾಂತಿ ಧರೆಯ ಜನಕೆ ಮೂಡೆ |
ಕಪ್ಪು ಮುಗಿಲು ಹೆಪ್ಪುಗಟ್ಟಿ ಬಾನಿನಲ್ಲಿ ತೇಲಿ ಕೂಡೆ |
ಗುಡುಗು ಮಿಂಚಿನೊಡನೆ ಗಾಳಿಯಾಳ್ವ ಬೀಸಿ ನಭದಿ ಮೂಡೆ |
ಮುಂಗಾರು ನೀರ ಕಾರಿತು ನೋಡವಡೆದು ಪನಿಯು ಉದಿರಿತು |
ನೋಡಲೊಂದು ಎರಡು ಎನ್ನುವಂತೆ ಉದಿರಿತು ||

ಸುಡುವತಪನು ಹುಡುಕಿ ತಡಕಿ ನೋಡದೊಡತಿ ಮುಡಿಯ ಸೇರಿ |
ಒಡತಿ ಬೆದರಿ ತಪನು ಮುಡಿಯ ಸುಡುವನೆಂದು ಹೆದರಿ ಚೀರಿ |
ಒಡನೆ ಮುಗಿಲು ಮುರಿಗಳೆಲ್ಲ ಸೇರಿ ವರ್ಷಧಾರೆ ಬೀರೆ |
ಮುಂಗಾರು ನೀರ ಕಾರಿತು-ತಪನ ತಾಪ ವಡಗಿ ಪೋಯಿತು |
ತಪನ ತಪ್ಪಿಗಾಗಿ ಮುಗಿಲು ಮಳೆಯ ಕರೆಯಿತು ||

ಕದನ ಕುದುರೆ ಗೊರಸ ಪುಟದ ದನಿಯ ಕೊಡುತ ಪನಿಯು ಬೀರೆ |
ಬಂದ ನೀರ ನೆಲ್ಲ ಹೀರಿ ಮಾತು ನೆನೆಯೆ ಮಿಕ್ಕಧಾರೆ |
ಮಾಡಿನಿಂದ ಹರಿದು ಬಂದು ಸೂರಿನಿಂದ ನೆಲಕೆ ಹಾರೆ |
ಮುಂಗಾರು ನೀರ ಕಾರಿತು—ಒಡನೆ ಭುವಿಯು ನೀರ ಹೀರಿತು |
ಪೊಡವಿ ಮಳೆಯ ಸೆಂಪಿನಿಂಪಿನಿಂದ ನಲಿಯಿತು ||

ಬಾನ ದೇವಿ ಕಂಠಹಾರ ಸಡಲು ಉದುರಿದಾಣಿ ಮುತ್ತು
ಸಗ್ಗದೊಡತಿ ಹೊಲವನುಳುವ ನಾಡಯೋಗಿಗಿತ್ತ ತುತ್ತು
ಎಂಬ ತೆರದಿ ಮಳೆಯ ಮುಗಿಲು ಹೊಲದ ಬಳಿಗೆ ನೀರ ಹೊತ್ತು |
ಮುಂಗಾರು ನೀರ ಕಾರಿತು—ವರ್ಷಧಾರೆ ಸುರಿಸಿ ಮೆರೆಯಿತು |
ಹರ್ಷದಿಂದ ರೈತ ಹೊನಲ ಕಂಡು ನಲಿವನು ||

ತರುಗಳೆಲ್ಲ ಮಳೆಯ ನೀರ ನೋದದಿಂದ ಮೀಯುತಿರಲು |
ತುರುಗಳೆಲ್ಲ ನೆನೆದು ನಡುಗಿ ಗೊಲ್ಲನೊಡನೆ ಮನೆಗೆ ಬರಲು !
ವಿಹಗ ಗಡಣ ವೋದ ಗರಿಗಳಿಂದ ಹನಿಯು ಹಾದು ಬರಲು |
ಮುಂಗಾರು ನೀರ ಕಾರಿತು—ನೋಡ ಗುಡುಗಿ ಮಳೆಯ ಕರೆಯಿತು |
ನೂಡ ನೊಡ್ಡಿ ಗೊಲ್ಲದೊಡ್ಡಿಗಾಗಿ ಬಂದನು ||

ಶಂ॥ ವಿ॥ ಪರಮೇಶ್ವರ ಭಟ್ಟ.

ಅಗಸ್ತ್ಯ ಮಹರ್ಷಿಗಳು



ಹಿಂದು ಸ್ಥಾನದ ಪ್ರಾಚೀನ ಸಂಸ್ಕೃತಿಯನ್ನು ವಿಮರ್ಶಿಸಿ ನೋಡುವುದಾದರೆ ಎರಡು ದೊಡ್ಡ ವಿಭಾಗಗಳಿದ್ದುದು ಸ್ಪಷ್ಟವಾಗಿ ಕಂಡುಬರುವುದು. ವಿಂಧ್ಯಪರ್ವತಕ್ಕೆ ಉತ್ತರ ಮತ್ತು ದಕ್ಷಿಣದೇಶದ ನಿವಾಸಿಗಳ, ನಡೆನುಡಿ, ಆಚಾರವ್ಯವಹಾರಗಳು, ದೈಹಿಕವೈಲಕ್ಷಣ, ಭಾಷೆ, ಮತ ಮುಂತಾದ ಅನೇಕ ವಿಷಯಗಳಲ್ಲಿ ಈ ವ್ಯತ್ಯಾಸವು ಚನ್ನಾಗಿ ವ್ಯಕ್ತವಾಗುತ್ತಿದ್ದವು. ಆದರೆ, ಇಂದು ಆ ವಿಧವಾದ ಭೇದಗಳು ಬೆರೆತು ಎಲ್ಲಿಯೋ ಅಲ್ಪಸಲ್ಪ ವ್ಯತ್ಯಾಸಗಳು ಹೊರ್ತು,ಉಳಿದ ವಿಷಯಗಳಲ್ಲಿ ಸಾಮರಸ್ಯವು ಕಂಡು ಬರುವುದು.

ಉತ್ತರ ಹಿಂದುಸ್ಥಾನದ ಆಗಿನ ಸಂಸ್ಕೃತಿಯನ್ನು ಆರ್ಯಸಂಸ್ಕೃತಿಯೆಂದು ಕರೆದರೆ; ದಕ್ಷಿಣ ಹಿಂದುಸ್ಥಾನದ ಸಂಸ್ಕೃತಿಯನ್ನು ದ್ರಾವಿಡಸಂಸ್ಕೃತಿಯೆಂದು ಕರೆಯಬಹುದು. ಈಗಿನ ಚರಿತ್ರಕಾರರಲ್ಲಿ ಅನೇಕರು ದ್ರಾವಿಡ ಸಂಸ್ಕೃತಿಗನ್ನು ಪ್ರಕಾಶಗೊಳಿಸಿದ ಅಗಸ್ತ್ಯರ ಕಾಲವನ್ನು ಕ್ರಿ. ಪೂ:-೧೦೦೦ ವರುಷಗಳೆಂದು ಊಹಿಸುವರು. ರಾಮಾಯಣಗ್ರಂಥಾನುಸಾರ ನೋಡಿದರೆ, ಅಗಸ್ತ್ಯರ ಕಾಲವು ಇನ್ನೂಬಹು ಹಿಂದಕ್ಕೆ ಹೋಗುವುದೆಂಬುದರಲ್ಲಿ ಸಂದೇಹವಿಲ್ಲ. ಅಂತೂ ಅಗಸ್ತ್ಯರು ಆರ್ಯ ಸಂಸ್ಕೃತಿಯನ್ನು ಉತ್ತರ ಹಿಂದು ಸ್ಥಾನದಿಂದ, ವಿಂಧ್ಯಪರ್ವತದ ಮಾರ್ಗವಾಗಿ ದಕ್ಷಿಣಹಿಂದುಸ್ಥಾನಕ್ಕೆ ತಂದು ಹರಡಿದುದು ಮಾತ್ರವಲ್ಲದೆ; ಇಲ್ಲಿಯೇ ನಿಂತು ಅನೇಕ ಮಹತ್ಕಾರ್ಯಗಳನ್ನು ಮಾಡಿರುವರೆಂಬುದನ್ನು ಎಲ್ಲರೂ ಒಪ್ಪುವರು.

ತಮಿಳು ರಾಜ್ಯಗಳಾದ ಚೇರ, ಚೋಳ ಮತ್ತು ಪಾಂಡ್ಯ ಈ ರಾಜ್ಯಗಳು ಕ್ರಿಸ್ತ ಪೂರ್ವ ೧೦೦೦ ವರುಷಗಳ ಹಿಂದೆಯೇಇದ್ದುವು. ಮತ್ತು ನಾಗರೀಕತೆಯಲ್ಲಿಯೂ ಮುಂದುವರಿದಿದ್ದುವು. ಆದರೆ ಆ ನಾಗರೀಕತೆಯು ಉತ್ತರ ಹಿಂದುಸ್ಥಾನದ ನಾಗರೀಕತೆಗೆ ತೀರವ್ಯತ್ಯಾಸ ವಾಗಿದ್ದಿತು. ಉತ್ತರದ ಸಂಸ್ಕೃತಿಯನ್ನೂ ಸಂಸ್ಕೃತ ಭಾಷೆಯನ್ನೂ ತಾವುಸ್ವೀಕರಿಸಿ, ಮತ, ಭಾಷೆ, ವ್ಯವಹಾರ ಮತ್ತು ಕಲೆ ಇವುಗಳಲ್ಲಿ ಹೊಸ ಮಾರ್ಪಾಟಗಳನ್ನು ಆಚರಣೆಗೆ ತಂದುಕೊಂಡರು.

ಅಗಸ್ತ್ಯರ ಮುಂದಾಳುತ್ವದಲ್ಲಿ ಆರ್ಯರು ದಕ್ಷಿಣಹಿಂದುಸ್ಥಾನದಲ್ಲಿ ಮೊದಲು ವಿಂಧ್ಯ ಪರ್ವತದ ಸುತ್ತಲೂಇದ್ದ ಮಹಾಕಾಂತಾರವೆಂಬ ಅರಣ್ಯವನ್ನು ಪ್ರವೇಶಿಸಲು ಉಪಕ್ರಮಿಸಿದರು. ಮತ್ತು ಇಲ್ಲಿನ ಜನರ ಸಹಾಯದಿಂದ ಕಾಡುಕಡಿದು, ವ್ಯವಸಾಯಕ್ಕೆ ಸೌಕರ್ಯ ಕಲ್ಪಿಸಿಕೊಂಡರು. ಈ ಅಗಸ್ತ್ಯರು ರಾಮಾಯಣದಲ್ಲಿನ ಅಗಸ್ತ್ಯರಾಗಲಿ, ಬೇರೊಬ್ಬರಾಗಲಿ ; ಅಂತೂ ಅಗಸ್ತ್ಯರು ತಮಿಳು ಭಾಷೆಗೂ ಕಲೆಗೂ ದೊಡ್ಡ ಉಪಕಾರ ಮಾಡಿರುವರು. ಪಾಣಿನಿಯುಸಂಸ್ಕೃತಕ್ಕೆ ವ್ಯಾಕರಣವನ್ನು ಬರೆದಂತೆ ತೆಲುಗು ಭಾಷೆಗೆ ಅಗಸ್ತ್ಯರು ವ್ಯಾಕರಣಬರೆದಿರುವರು. ವೈದ್ಯ, ಜ್ಯೋತಿಷ, ಶಾಸ್ತ್ರ, ಕಲೆ ಮುಂತಾದ ನಾನಾ ವಿಷಯಗಳನ್ನೇಲೆಯೂ ಗ್ರಂಥಗಳನ್ನು ಬರೆದಿರುವರೆಂದು ಹೇಳುವರು. ದಕ್ಷಿಣ ಹಿಂದುಸ್ಥಾನದ ಅನೇಕ ಪ್ರದೇಶಗಳನ್ನು ಅಗಸ್ತ್ಯ ಮಹರ್ಷಿಗಳ ದೇಶವೆಂದೂ, ಅಗಸ್ತ್ಯರನ್ನು ತಮಿಳು ರುಷಿಯೆಂದೂ ಈಗಲೂ ಕರೆಯುವರು. ಅಗಸ್ತ್ಯರ ಕಾಲಕ್ಕೆ ಮೊದಲು ತಮಿಳು ಅಕ್ಷರಗಳೂ,

ಭಾಷೆಯು ಇದ್ದಿತು; ಆದರೆ ಅಗಸ್ತ್ಯರು ಸಂಸ್ಕೃತದಮೇಲು ಪಂಜ್ತ್ಯನ್ನನುಸರಿಸಿ ತಮಿಳು ವ್ಯಾಕರಣವನ್ನು ರಚಿಸಿರುವರು. ಕ್ರಮೇಣ ಇವರನ್ನು ಹಿಂಬಾಲಿಸಿ ಬುದ್ಧರ ಪಂಗಡಗಳೂ ಬರಲಾರಂಭಿಸಿದವು. ಈ ಬಗೆಯ ಹೊಸ ಸಂಸ್ಕೃತಿಯ ಸಂಯೋಗದಿಂದ ನಾನಾ ಮಾರ್ಪಾಟಗಳಾದುವು. ಇಲ್ಲಿನ ಪ್ರಾಚೀನವಾದ ಪೂರ್ವಾಚಾರ್ಯಗ್ರಂಥ ಮತ್ತು ಕಥೆಗಳನ್ನು ಉತ್ತರ ಹಿಂದುಸ್ಥಾನದ ಆರ್ಯ ಗ್ರಂಥಗಳು ಆಚಾರವ್ಯವಹಾರಗಳು, ಪುರಾಣಗಳು ಆಕ್ರಮಿಸುತ್ತಾ ಬಂದವು. ಇಲ್ಲಿದ್ದ ದೇವರುಗಳ ಹೆಸರು ಕೂಡ ಬದಲಾಯಿತು. ಪಿಡಾರಿ ಮತ್ತು ಅಯ್ಯನಾರ್ ದೇವಾಲಯಗಳೇ ಪಾರ್ವತಿ ಮತ್ತು ಶಿವದೇವಾಲಯಗಳಾಗಿ ಮಾರ್ಪಾಟು ಹೊಂದಿದವು. ಶಿವ ಮತ್ತು ಸ್ಕಂದನನ್ನು ಪೂಜಿಸುವ ಪಂಥವಾದ ಶೈವ ಪದ್ಧತಿಯ ನಾಗರೀಕತೆಯು ಆರ್ಯಪದ್ಧತಿಯೊಡನೆ ಬೆರೆತುಹೋಯಿತು. ಆದರೂ ಪ್ರಾಚೀನಕಾಲದ ಕೆಲವು ಆಚಾರಗಳು ಅವರಲ್ಲಿ ಈಗಲೂ ಕಂಡುಬರುತ್ತವೆ.

ಅಗಸ್ತ್ಯ ಮಹರ್ಷಿಗಳ ಪತ್ನಿಯಾದ ಲೋಪಾಮುದ್ರೆಯ ವರ್ಣನೆಯು ಅವರಿಗಿದ್ದ ಕಲಾಭಿಮಾನಕ್ಕೆ ಒಂದು ನಿದರ್ಶನವೆನ್ನಬಹುದು. ಸೃಷ್ಟಿಯಸೌಂದರ್ಯವಸ್ತುಗಳ ಸೌಂದರ್ಯಸಂಗ್ರಹಣದಿಂದಲೇ ಈಕೆಯು ನಿರ್ಮಾಣಹೊಂದಿ, ಅದ್ವಿತೀಯ ರೂಪಲಾವಣ್ಯದಿಂದೊಡಗೂಡಿದ್ದಳೆಂದು ವರ್ಣಿತವಾಗಿದೆ—.ಇವರಿಗಿದ್ದ ಪತ್ನಿಪ್ರೇಮವೂ ಇದೇ ಬಗೆಯಲ್ಲಿ ಬಣ್ಣಿಸಲ್ಪಟ್ಟಿದೆ.

ರುಷಿಗಳೆಂದರೆ ಸೌಂದರ್ಯಾಭಿರುಚಿಯಿಲ್ಲದ, ಕಾಡುಜನರೆಂಬ ಭಾವವು ಅನೇಕರಲ್ಲಿ ನೆಲೆಗೊಂಡಿರಬಹುದು. ಸರಿಯಾಗಿ ವಿಚಾರಮಾಡಿ, ಅವರ ಜೀವಿತವನ್ನು ತಿಳಿಯುವುದಾದರೆ ಅವರ ಕಲಾಭಿಮಾನವೂ, ಸೌಂದರ್ಯೋಪಾಸನಾಕ್ರಮವೂ, ತಿಳಿದುಬರುವುದು. ಅಗಸ್ತ್ಯರ ಕಾವ್ಯಗಳಲ್ಲಿ ಸ್ಮೃತಿ ಚಂದ್ರಿಕಾ, ಅಗಸ್ತ್ಯ ಸಂಹಿತಾ, ಅಗಸ್ತ್ಯ ಗೀತಾ, ಇವು ಪ್ರಸಿದ್ಧಿ ಪಡೆದಿವೆ. ಹೊಸದಾಗಿ ಬೆಳಕಿಗೆ ಬಂದಿರುವ " ಶಿಲ್ಪ ಶಾಸ್ತ್ರ " ವೆಂಬ ಪುಸ್ತಕವೂ ಅಗಸ್ತ್ಯರೇ ಬರೆದುದೆಂದು ತಿಳಿದುಬರುವುದು. ಅಗಸ್ತ್ಯ " ಸಕಲಾಧಿಕಾರ " ಎಂಬ ಗ್ರಂಥವು ಕಲೆಗೆ ನಿಕಟ ಸಂಬಂಧ ವುಳ್ಳದಾಗಿರುವುದು. ಅಗಸ್ತ್ಯರ ಈ ಗ್ರಂಥದಲ್ಲಿ ಆರ್ಯ ಸಂಬಂಧದಿಂದ ಬೆಳೆದ ದ್ರಾವಿಡಕಲೆಯ ಬೆಳವಳಿಕೆಯ ವಿಷಯವು ವ್ಯಕ್ತವಾಗುವುದು.

ವಿಗ್ರಹ ನಿರ್ಮಾಣದಲ್ಲಿ ಅಧಿಕಾರವಾದ ಈ " ಸಕಲಾಧಿಕಾರ ಗ್ರಂಥವು ತಂಜಾವೂರು ಲೈಬ್ರರಿಯಲ್ಲಿ ಮಾತ್ರ ಒಂದು ಪ್ರತಿಯುಂಟು. ಇದು ತಾಳೆಯ ಪತ್ರದ ಪ್ರತಿ. ಗ್ರಂಥದಮೇಲೆ " ಶಿಲ್ಪ ಕಲಾಧೀಪಿಕ " ಎಂದು ಗುರುತು ಹಾಕಲ್ಪಟ್ಟಿದೆ. ಈ ಗ್ರಂಥದ ೧೧ ಅಧ್ಯಾಯಗಳಲ್ಲಿಯೂ ಕೆಲಸದ ಕ್ರಮವನ್ನು ಮಾತ್ರ ಹೇಳುವದಲ್ಲದೆ ಗ್ರಂಥಕರ್ತರ ವಿಷಯವನ್ನೇನೂ ತಿಳಿಸುವುದಿಲ್ಲ. ಈ ಪುಸ್ತಕದಲ್ಲಿರುವ ಮುಖ್ಯ ಅಧ್ಯಾಯಗಳು ಈ ರೀತಿಯಲ್ಲಿರುವುವು :—

೧. ಮಾನ ಸಂಗ್ರಹ.	೬. ವೃಷಭ ವಾಹನ ಲಕ್ಷಣ.
೨. ಉತ್ತಮ ದಶ ತಾಲ.	೭. ನಟೇಶವಿಧಿ.
೩. ಮಧ್ಯಮ ದಶ ತಾಲ.	೮. ಶೋಡಶಪ್ರತಿಮಾ ಲಕ್ಷಣ.
೪. ಅಧಮ ದಶ ತಾಲ.	೯. ದಾರು ಸಂಗ್ರಹ.
೫. ಪ್ರತಿಮಾಲಕ್ಷಣ.	೧೦. ಮೃತ್ ಸಂಸ್ಕಾರ.

೧೧. ವರ್ಣ ಸಂಸ್ಕಾರ.

ಈ ಗ್ರಂಥದಲ್ಲ ಅನೇಕ ತಪ್ಪುಗಳೂ, ಬೆರಿಕೆಯಾದ ಪದಗಳೂ ದೊರೆಯುವುದರಿಂದ ಸ್ಮೃತಿ ಚಂದ್ರಿಕಾದಿ ಗ್ರಂಥಗಳನ್ನು ರಚಿಸಿದ ಅಗಸ್ತ್ಯರೇ ಇದರ ಗ್ರಂಥ ಕರ್ತರೋ ಮತ್ತಾರಾದರೂ ಇದನ್ನು ರಚಿಸಿದರೋ ಹೇಳುವುದು ಕಷ್ಟವಾದ ವಿಷಯ. ಅಂತೂ ಅಗಸ್ತ್ಯರ ಅಥವ ದಕ್ಷಿಣದಲ್ಲಿ ಆರ್ಯರ ಪ್ರಾಬಲ್ಯವುಂಟಾದಕಾಲದಲ್ಲಿ ಆಚರಣೆಗೆಬಂದಿದ್ದ ಶಿಲ್ಪ ಪದ್ಧತಿಯನ್ನು ಈ ಗ್ರಂಥವು ವಿವರಿಸುವುದು.

ಅಗಸ್ತ್ಯ ಮಹರ್ಷಿಗಳ ಮಹತ್ವದ ವಿಷಯದಲ್ಲಿ ಅನೇಕ ಕಥೆಗಳೂ ಹೇಳಲ್ಪಡುತ್ತವೆ. ಅಗಸ್ತ್ಯರು ದಕ್ಷಿಣ ಹಿಂದುಸ್ಥಾನಕ್ಕೆ ಬರುವವೇಳೆಯಲ್ಲಿ ವಿಂಧ್ಯಪರ್ವತವು ಅಡ್ಡಕಟ್ಟಿತೆಂದೂ ಇವರ ಕೋಪಾಗ್ನಿಗೆ ತುತ್ತಾಗಲಾರದೆ, ನಮ್ರತೆಯಿಂದ ತಗ್ಗಿ ಬಗ್ಗಿ ದಾರಿಮಾಡಿ ಕೊಟ್ಟತೆಂದು ಒಂದು ಕತೆಯುಂಟು. ಮತ್ತೊಂದುವೇಳೆ ಅಗಸ್ತ್ಯರು ಸಮುದ್ರವನ್ನೇ ಅಪೋಶನವಾಗಿ ತೆಗೆದುಕೊಂಡರೆಂದು ಒಂದು ಕತೆಯುಂಟು. ಈ ಬಗೆಯ ಕತೆಗಳು ಅನೇಕವಾಗಿಯುಂಟು. ಅಂತೂ ಅಗಸ್ತ್ಯ ಮಹರ್ಷಿಗಳು ದಕ್ಷಿಣ ಹಿಂದುಸ್ಥಾನದಲ್ಲಿ ಸರ್ವತೋ ಮುಖವಾದ ಸಂಸ್ಕೃತಿಯನ್ನು ಬೆಳಸಿ ; ಕಲೆಗೆ ಮಹದುಪಕಾರ ಮಾಡಿರುವರು. ಗ್ರಂಥಗಳಿಂದ ತಿಳಿದು ಬರುವಂತೆ ದಕ್ಷಿಣ ಹಿಂದುಸ್ಥಾನದಲ್ಲಿ ಅಗಸ್ತ್ಯರೇ ಪ್ರಾಚೀನ ಕಲಾ ಪದ್ಧತಿಗೆ ಒಂದು ಗೊತ್ತಾದ ರೂಪಕೊಟ್ಟವರು.



SCALE 0 1 2 3 4 1 2 FEET

ಗಂಡಬೇರುಂಡ ಪಕ್ಷಿಯಿಂದೊಡಗೂಡಿದ ನಮೂನೆ.

ಚಿತ್ರ ಕಲೆ.

ಚಿತ್ರಕಲೆಯು ಸಂಸ್ಕಾರಬಲದಿಂದಲೇ ಬರತಕ್ಕ ವಿದ್ಯವೆಂಬ ನಂಬಿಕೆಯು, ಎಲ್ಲೆಲ್ಲಿಯೂ ಹರಡಿದೆ. ಹಿಂದೂ ಜನರಲ್ಲಿ ಮಾತ್ರವಲ್ಲದೆ ಕೆಲವು ಪಾಶ್ಚಿಮಾತ್ಯರಲ್ಲಿಯೂ ಈ ನಂಬಿಕೆಯುಂಟು. ಈ ತಪ್ಪು ಭಾವನೆಯಿಂದ ಮಕ್ಕಳಿಗೆ ಮಾತ್ರವಲ್ಲದೆ, ಕಲೆಗೇ ದೊಡ್ಡ ಅನ್ಯಾಯವಾಗಿದೆ ವಿದ್ಯಾಭ್ಯಾಸದಲ್ಲಿ ಅತಿ ಮುಖ್ಯಸ್ಥಾನಪಡೆದ ಕಲಾಭ್ಯಾಸವು, ತರುಣರಿಗೆ ಇಲ್ಲವಾಗಿ ಹೋಗಿದೆ. ಅನೇಕರು "ತಮಗೆ ಪೂರ್ವ ಸಂಸ್ಕಾರವಿಲ್ಲದುದರಿಂದ ತಾವು ಎಷ್ಟು ಕಲಿತರೂ ತಮಗೆ ಕಲೆಯ ಕೌಶಲ್ಯ ಬಾರದು" ಎಂದು ತಿಳಿದು ಅಲ್ಲಗೇ ಕೈಬಿಟ್ಟು ಕುಳಿತುಕೊಳ್ಳುವರು. ಮಕ್ಕಳು ಹೇಗಾದರೂ ಯೋಚಿಸಲಿ. ದೊಡ್ಡವರೇ ಈ ರೀತಿ ಹೇಳಿ ಹೇಳಿ ಮಕ್ಕಳ ಮನಸ್ಸಿನಲ್ಲಿ "ನಾವು ಕಲಿಕಲಿಯಲು ಅನರ್ಹರು; ನಮಗೆ ಇದು ಬಾರದು" ಎಂಬ ಭಾವವನ್ನುಂಟುಮಾಡುವರು. ಇಂತಹ ತಂದೆ ತಾಯಿಗಳೂ, ಉಪಾಧ್ಯಾರೂ, ಕಲಾ ದ್ರೋಹಿಗಳೆಂದು ನನ್ನ ಭಾವನೆ.

ಚಿತ್ರ ಲೇಖನವು ಬರವಣಿಗೆಗಿಂತಲೂ ಸುಲಭವಾದುದು. ಬರವಣಿಗೆಯಲ್ಲಿ ನಾವು ಬರೆಯುವ ಅಕ್ಷರಗಳಿಗೂ ವಸ್ತುಗಳಿಗೂ ಯಾವ ರೂಪದಲ್ಲಿಯೂ ಸಂಬಂಧವಿರುವುದಿಲ್ಲ. "ಮಾವಿನ ಮರದಲ್ಲಿ ಹಣ್ಣುಗಳು ಜೋಲಾಡುತ್ತಿರುವುವು. ಗಿಣಿಗಳ ತಂಡವು ಹಾರಿಬಂದಿತು" ಎಂದು ಬರವಣಿಗೆಯಲ್ಲಿ ಬರೆಯುವುದಾದರೆ, ನಮ್ಮ ಮನದಲ್ಲಿರುವ ಭಾವನಿಗಳಿಗೂ ಬರವಣಿಗೆಗೂ ಯಾವ ರೂಪಸಾದೃಶ್ಯವೂ ಕಂಡುಬರಲಾರದು. ಚಿತ್ರಕಲೆಯಲ್ಲಿ ಇದೇ ಮಾವಿನಮರವನ್ನು ಗಿಳಿಗಳ ಹಿಂಡನ್ನೂ ಚಿತ್ರಿಸಿದರೆ ಅವುಗಳಲ್ಲಿನ ಸರಿತಪ್ಪುಗಳನ್ನು ಹೋಲಿಸಿ ತಿಳಿಯಲು, ರೂಪದ ಸೌಕರ್ಯವುಂಟು—. ಮಗುವು ಬೆಕ್ಕು ಹಾಲು ಕುಡಿಯುವುದನ್ನು ನೋಡಿ ಚಿತ್ರಿಸುವಾಗ, ಅದರ ಕತ್ತನ್ನು ಮೇಲಕ್ಕೆತ್ತಿ ಒರೆಯಲು ಪ್ರಯತ್ನಿಸಲಾರದು. ಅನೇಕವೇಳೆಗಳಲ್ಲಿ ಇದೇ ವಿಷಯವನ್ನು ಭಾಷೆಯಲ್ಲಿ ವ್ಯಕ್ತಗೊಳಿಸುವುದು ಮತ್ತೂ ಕಷ್ಟವಾಗುವುದು. ಅಕ್ಷರದ ಜೋಡಾಣಿಕೆಯಲ್ಲಿ ತಪ್ಪುಗಳು ಕಂಡು ಬರಬಹುದು. ಮಾಡಿದ ತಪ್ಪುಗಳನ್ನು ತಾವೇ ಹೋಲಿಸಿ ನೋಡಿ ತಿದ್ದಿಕೊಳ್ಳಲು ಸಹಾಯ ದೊರೆಯಲಾರದು.

ರೂಪಪ್ರಧಾನವಾದ ವಾಸ್ತವಿಕ ಚಿತ್ರಗಳಲ್ಲಂತೂ, ಅನೇಕ ಸೌಕರ್ಯಗಳುಂಟು. ಈ ಬಗೆಯ ಚಿತ್ರಗಳಲ್ಲಿ ಪ್ರವಿಣ್ಯತೆಯನ್ನು ಹೊಂದಲು ಯಲ್ಲರಿಗೂ ಸಾಧ್ಯ.

ಹೊಸಹೊಸ ಪ್ರಪಂಚವನ್ನು ಮನದೊಳಗೆ ಕಂಡು ತನ್ನ ಆನಂದವನ್ನು ಭಾಷಾರೂಪದಲ್ಲಿ ಹೊರಚಲ್ಲುವ ಕವಿಯಂತೆ; ಹೊಸಪರಿಯ ಸೌಂದರ್ಯದ ಆನಂದಾನುಭವ ಮಾಡಿ ಆ ಅನುಭವಕ್ಕೆ ರೂಪ ಕೊಟ್ಟು ತೋರಿಸುವ; ತೋರಿದ ರೂಪದಿಂದ ಆ ದಿವ್ಯಾನಂದವನ್ನನುಭವಿಸುವಂತೆ ಮಾಡುವ ಸಾಮರ್ಥ್ಯವು ಯಲ್ಲರಿಗೂ ದೊರೆಯದಿರಬಹುದು. ಈ ಬಗೆಯ ಭಾವನಾ ಪ್ರಪಂಚದಲ್ಲಿ ಮುಂದರಿದು "ಆ ದರ್ಶಕ ಚಿತ್ರಗಳನ್ನು ಬರೆಯುವುದಲ್ಲಿ ಸರ್ವರೂಪಪಾಂಡಿತ್ಯವನ್ನು ಸಂಪಾದಿಸುವುದು ಸಾಧ್ಯವಾಗದಿರಬಹುದು. ಆದರೆ ಇಂತಹ ಸಾಮರ್ಥ್ಯಕ್ಕೆ ಬರಿಯ ಸಂಸ್ಕಾರ ಬಲಿಯ ವೊಂದೇ ಎಂದು ಯಾರೂ ತಿಳಿಯಬಾರದು. ನಿಗುಢಿನ ಮನದೊಳಗೆ ಹುದುಗಿರುವ ಶಕ್ತಿಗಳನ್ನು ವಿಕಾಸ ಗೊಳಿಸುವ ದಾರಿ

ಯಿಲ್ಲದೆ, ಇದರ ಗುಟ್ಟು. ಅದುದರಿಂದ ಸಂಸ್ಕಾರವಿಲ್ಲದೆ ಕಲೆಯನ್ನು ಕಲಿಯಲಾಗುವುದಿಲ್ಲವೆಂಬ ಸಿದ್ಧಾಂತಕ್ಕೆ ಮಹತ್ವವೀಯದೆ, ಕಲಾ ವ್ಯಾಸಂಗಕ್ಕಾರಂಭಿಸಬೇಕು. ಸಂತತ ಪ್ರಯತ್ನದಿಂದ ಬಹುಟ್ಟಿಗೆ ಕಲೆಯನ್ನು ಸಾಧಿಸಬಹುದು. ಮಗುವಿನ ಪೂರ್ವಸಂಸ್ಕಾರವು ಕೂಡ ಈ ಬಗೆಯ ಪ್ರಯತ್ನದಿಂದಲೇ ಬೆಳಕಿಗೆ ಬರಬೇಕಾಗಿದೆ. ಪೂರ್ವ ಸಂಸ್ಕಾರವಿಲ್ಲವೆಂದುಕ್ಕೊಂಡು ತರುಣರಿಗೆ ಕಲಾ ವ್ಯಾಸಂಗವಿಲ್ಲದಂತೆ ಮಾಡಿದರೆ, ಕಲೆಯೊಂದನ್ನು ಮಾತ್ರವಲ್ಲದೆ, ಅತ್ಯವಶ್ಯಕವಾದ ಅನೇಕ ಸದ್ಗುಣಗಳನ್ನು ವಂಚಿಸಿದಂತಾಗುವುದು. ಆದುದರಿಂದ ಚಿತ್ರಪಾಠವು ಸರ್ವರಿಗೂ ಆತ್ಯವಶ್ಯಕವಾಗಿ ನಡೆಯಿಸ ಬೇಕಾದ ಪಾಠ.

ಚಿತ್ರಕಲೆಯೆಂಡೊಡನೆಯೇ ಅನೇಕರಿಗೆ ಕಲಾವಿದರಿಂದ ರಚಿತವಾದ ಪ್ರೌಢಿಮೆಯ ಚಿತ್ರಗಳು ಕಣ್ಣೆದುರಿಗೆ ಬಂದು ನಿಲ್ಲುವುವು. ಆದರೆ ಮಕ್ಕಳ ಶಿಕ್ಷಕನಾದವನಿಗೆ ಈ ಬಗೆಯ ಭಾವನೆಯಿರಬಾರದು. ಅವರ ವಯೋನುಗುಣವಾದ ವಾಸ್ತವಿಕ ಚಿತ್ರಗಳನ್ನು :—ಅಂದರೆ ವಸ್ತುಗಳನ್ನು ತೋರಿಸಿ ಅದರ ಹೊರಮ್ಯೈಯ್ಯ ಚಿತ್ರಗಳನ್ನೇ ಪ್ರಾರಂಭದಲ್ಲಿ ಹೆಚ್ಚಿಗೆ ಕಲಿಸ ಬೇಕು. ಈ ಬಗೆಯ ಚಿತ್ರಪಾಠಗಳನ್ನೇ ಮುಂದಿನ ಎಲ್ಲ ಕಲೆಗೂ ಅಡಿಗಲ್ಲಾಗಿ ಮಾಡಿಕೊಳ್ಳ ಬೇಕಾಗುವುದು.

ಎಲ್ಲ ಮಕ್ಕಳಿಗೂ ಒಂದೇ ಬಗೆಯಲ್ಲಿ, ಒಬ್ಬರೇ ಉಪಾಧ್ಯಯರು ಬೋಧಿಸುತ್ತಿದ್ದರೂ ಕೆಲವರು ಹೆಚ್ಚು ಕುಶಲತೆಯನ್ನು ತೋರ್ಪಡಿಸುವರು, ಮತ್ತೆ ಕೆಲವರು ಹಿಂದೆಬೀಳುವರು. ಇದನ್ನು ಸಂಸ್ಕಾರಕ್ಕೆ ಗಂಟು ಹಾಕುವರು. ಇಲ್ಲಿ ಸಂಸ್ಕಾರಕ್ಕಿಂತಲೂ ಮಕ್ಕಳ ಮನಶಕ್ತಿಗಳನ್ನು ಬೆಳಿಸುವುದರ ರೀತಿಯೂ, ಅವರ ಸನ್ನಿವೇಶ ಸೌಕರ್ಯಗಳೂ ಅತಿ ಮುಖ್ಯ. ಕಲೆಯ ಗಂಧವನ್ನೇ ಅರಿಯದೆ ಅನೇಕ ಮನೆತನದ ಮಕ್ಕಳೊಡನೆ ಉಪಾಧ್ಯಾಯ ವೃತ್ತಿಯನ್ನು ನಡೆಸುವ ಸುಯೋಗವು ನನಗೆ ದೊರೆತಾಗ ಈ ವಿಷಯವು ಚನ್ನಾಗಿ ವ್ಯಕ್ತವಾಯಿತು. ಚಿತ್ರವನ್ನೇ ಕಂಡು ಕೇಳದ ಅನೇಕ ಬಾಲಕರು ಒಂದೆರಡು ವರುಷಗಳು ಕಲೆಯ ವಾತಾವರಣದಲ್ಲಿ ವ್ಯಾಸಂಗಮಾಡಿ ಪ್ರೌಢಿಮೆ ತೋರಿಸಿದ ಅನೇಕ ಉದಾಹರಣೆಗಳು ನನ್ನ ಅನುಭವದಲ್ಲಿವೆ. ಕ್ರಮವಾದ ಚಿತ್ರಕಲೆಗೆ ಮೊದಲನೆಯ ಹಂತವೆಂದರೆ ಮಕ್ಕಳಿಗೆ ಸುತ್ತಮುತ್ತಿನ ವಸ್ತುಗಳಲ್ಲಿಯೂ ಪ್ರಕೃತಿಸೌಂದರ್ಯದಲ್ಲಿಯೂ ಅಭಿರುಚಿಯನ್ನುಂಟು ಮಾಡುವುದು.

ಎರಡನೆಯದೆಂದರೆ ಮಕ್ಕಳ ಮನವು ಚುರಕಾಗಿದ್ದು ನಾನಾ ಬಗೆಯ ಕಾರ್ಯಗಳನ್ನು ಮಾಡುವಂತೆ ಪ್ರೇರಿಸಬೇಕು. ಮಾಡುವ ಕೆಲಸಕಾರ್ಯಗಳನ್ನೆಲ್ಲ ಅಂದವಾಗಿ ಮಾಡಬೇಕೆಂಬ ನಿರ್ಬಂಧವು ಮಕ್ಕಳಿಗಿಲ್ಲದಿದ್ದರೂ, ಮಕ್ಕಳ ದೃಷ್ಟಿಗೆ ಗೋಚರವಾಗುವ ವಸ್ತುಗಳೆಲ್ಲವೂ ಅಂದವಾಗಿ, ಆಚ್ಚುಕಟ್ಟಾಗಿ ಜೋಡಿಸಿ, ಹೊಂದಿಸಿರಬೇಕು. ಅಂದರೆ ಅವರು ವಾಸಿಸುವ ಸನ್ನಿವೇಶವು ಸೌಂದರ್ಯದ ನೆಲೆಯಾಗಿರುವಂತೆ ನೋಡಿಕೊಳ್ಳಬೇಕು.

ಮೂರನೆಯ ಮಹತ್ವದ ವಿಷಯವೆಂದರೆ, ಮನಮುಟ್ಟಿ ಕೆಲಸಮಾಡುವುದನ್ನು ಕಲಿಸುವುದು. ಇದರಲ್ಲಿ ಮಕ್ಕಳ ಮಾನಸಿಕ ಶಕ್ತಿಯೊಂದಲ್ಲದೆ ಉಪಾಧ್ಯಾಯನ ಚತುರತೆ, ವರ್ಣನಾಕೌಶಲ, ಸನ್ನಿವೇಶದ ಸೊಬಗು, ನಾನಾ ಬಗೆಯ ಬಣ್ಣಗಳ ಕಾಂತಿ, ಶಾಂತಯುತ ವಾತಾವರಣ, ಉತ್ತಮವಾದ ಗಾಳಿಬೆಳಕು, ಅನುಕೂಲಿಸುವ ಉಪಕರಣಗಳು, ಇವೆಲ್ಲವೂ ಸಾಧಕಗಳಾಗುವುವು.

ತೋಟದಲ್ಲಿ ಹೊಸದಾಗಿ ಅರಳಿದ ಕುಸುಮದೊಳಗಿನ ಮಧುವನ್ನು ಕುಡಿದು ಆನಂದದಿಂದ ಗಾನಮಾಡುವ ದುಂಬಿಯ ಝೇಂಕಾರವನ್ನು ಕೇಳಿ ಆನಂದಿಸಿರುವ ಮಗುವಿಗೆ ಉಪಾಧ್ಯಾಯರ ವರ್ಣನೆಯೂ, ಬಣ್ಣದ ಸುಣ್ಣಗಳೂ, ಚಿತ್ರಬರೆಯುವ ದಪ್ಪ ಕಾಗದದ ಪುಸ್ತಕವೂ, ಕೆಲಸಕ್ಕೆ ಉತ್ಸಾಹವನ್ನೀಯುವುವು ಬಣ್ಣದ ಧ್ವಜಪತಾಕೆಗಳಿಂದಲೂ, ನಾನಾ ಬಗೆಯ ಅಲಂಕಾರದಿಂದಲೂ ಒಪ್ಪುವ ಊರ ತೇರನ್ನು ನೋಡಿಬಂದ ಮಗುವು ಅದನ್ನು ಬರೆಯಲು ಪ್ರಯತ್ನಿಸುವುದು ಸಹಜವಾಗಿಯೇ ಇದೆ. ಈ ಬಗೆಯ ಮಕ್ಕಳ ಉತ್ಸಾಹವನ್ನ ಸರಿಯಾಗಿ ಉಪಯೋಗಿಸಿಕೊಂಡು, ಅವರಿಗೆ ಬೇಕಾದ ಉಪಕರಣಗಳನ್ನು ಒದಗಿಸಿ ಸುಲಭದಾರಿಯನ್ನು ತೋರಿಸಿಕೊಡುವುದಾದರೆ ಖಂಡಿತವಾಗಿಯೂ ಮಕ್ಕಳು ಉತ್ತಮ ಚಿತ್ರ ಬರೆಯಲು ಸಮರ್ಥರಾಗುವರು. ಯಲ್ಲಕಿಂತಲೂ ಮೊದಲು ಮನೆಯಲ್ಲಿ ಮಕ್ಕಳೊಂದಿಗಿರುವವರು ಮಾರ್ಗದರ್ಶಕರಾಗಿ, ಸ್ಥಿರ ಬುದ್ಧಿಯಿಂದ ಹಿಡಿದ ಕೆಲಸವನ್ನು ಕಡೆತನಕ ಸಾಧಿಸಿ, ಅಂದವಾಗಿ ಕೆಲಸ ಕಾರ್ಯಗಳನ್ನು ಮಾಡುವ ಸ್ವಭಾವದವರಾದರೆ ; ಮಕ್ಕಳಲ್ಲಿಯೂ ಈ ಸದ್ಗುಣಗಳು ನಲೆಯಾಗುತ್ತ ಬರುವುವು.

ಮತ್ತೊಂದು ಮುಖ್ಯ ವಿಷಯವೆಂದರೆ ಮಕ್ಕಳ ವಯಸ್ಸಿಗನುಗುಣವಾದ ಅಭ್ಯಾಸಗಳನ್ನೀಯಲು ಅವಕಾಶಕಲ್ಪಿಸುವುದು. ಒಂದೇ ವಿಷಯವನ್ನು ಬೇರೆಬೇರೆ ಅಂತಸ್ತಿನವರು ಅಭ್ಯಾಸಮಾಡಿದರೂ ಅವರವರ ಅಂತಸ್ತಿಗೆ ತಕ್ಕಂತೆ ಚಿತ್ರಿಸುವುದನ್ನು ತೋರಿಸಿ ಕೊಡಬೇಕಾಗುವುದು. ಕಲಾವಿದರೂ ಮನುಷ್ಯನ ಚಿತ್ರ ಬರೆಯಬಹುದು. ಮಕ್ಕಳ ತರಗತಿಯಲ್ಲಿನ ಮಗುವೂ ಅದೇ ಚಿತ್ರವು ಬರೆಯಬಹುದು. ಮಗುವು ತಲೆಯಗೆ ಒಂದು ಸೊನ್ನೆಯನ್ನಿಟ್ಟು ಕೈಯ್ಯಿ ಕಾಲು ಮತ್ತು ಹೊಟ್ಟೆಯನ್ನು ಒಂದೊಂದು ಗೆರೆಯಲ್ಲಿ ತೋರಿಸಬಹುದು. ಇದನ್ನು ತಪ್ಪೆಂದು ಹೇಳಲಾಗುವುದಿಲ್ಲ. ಇದೇರೀತಿಯಲ್ಲಿ ದೊಡ್ಡಹುಡಗರು ಬರೆಯುವದರಲ್ಲಿ ಅರ್ಥವಿಲ್ಲ. ಕಲಿತವರು ಬರೆಯುವುದಾದರೆ ಅಂಗಾಂಗಗಳ ಪ್ರಮಾಣ, ಹೋಲಿಕೆ, ಹೊಂದಿಕೆ ಇವೆಲ್ಲವೂ ಸರಿಯಾಗಿರಬೇಕಾಗುವುದು. ಅಂದರೆ ವಯಸ್ಸು ಮತ್ತು ಅನುಭವಕ್ಕೆ ತಕ್ಕಂತೆ ಚಿತ್ರದ ಅಂತಸ್ತೂ ಹೆಚ್ಚುತ್ತಾ ಬರಬೇಕಾಗುವುದು. ಮುಂದೆ ಈ ಕಾರ್ಯಕ್ಕೆ ಅನುಕೂಲಿಸುವಂತೆ, ಮಕ್ಕಳ ತರಗತಿಯಲ್ಲಿ ನಡೆಯಬೇಕಾದ ಚಿತ್ರ ಪಾಠವನ್ನು ಅಂತಸ್ತುವಾರಾಗಿ ತಿಳಿಸಲಾಗಿದೆ.

ಮಕ್ಕಳ ತರಗತಿಯ ಚಿತ್ರಪಾಠಗಳು.

ಮಕ್ಕಳ ತರಗತಿಯ ಚಿತ್ರಪಾಠಗಳನ್ನು :— i ಮುದ್ದೆ ಚಿತ್ರಗಳು. ii ರೇಖಾಚಿತ್ರಗಳು. ಎಂಬ ಎರಡು ದೊಡ್ಡ ಪಂಗಡಗಳಾಗಿ ವಿಂಗಡಿಸಬಹುದು. ಪ್ರತಿಭಾಗದಲ್ಲಿಯೂ, (೧) ಬಳಕೆಯ ವಸ್ತುಗಳು (ಅ) ಸಸ್ಯವರ್ಗ, (ಇ) ಪ್ರಾಣಿವರ್ಗ. (೪) ದೃಶ್ಯಗಳು (ಈ) ಚಿತ್ರ ಪರಿಹಾಸ್ಯ. ಎಂಬ ಉಪ ಪಂಗಡಗಳಾಗಿ ವಿಂಗಡಿಸಬಹುದು. ದೊಡ್ಡವರ ಚಿತ್ರ ಪಾಠವನ್ನೂ ಸ್ವಲ್ಪ ಹೆಚ್ಚು ಕಡಿಮೆ ಈ ಮಾರ್ಗಹಿಡಿದೇ ವಿಭಾಗಿಸಬಹುದು.

ಮುದ್ದೆ ಚಿತ್ರಗಳು (MASS DRAWING)

ಚಿತ್ರಕ್ಕೆ ಆಧಾರವು ಬಿಂದು. ಬಿಂದುವು ಬೆಳೆದೇ ರೇಖೆಯುತ್ಪನ್ನವಾಗುವುದು. ರೇಖೆಯೇ ಚಿತ್ರದ ದೇಹ. ಆದುದರಿಂದ ರೇಖೆಯ ಪೂರ್ಣಜ್ಞಾನವನ್ನುಂಟುಮಾಡಿಕೊಡುವುದು ಚಿತ್ರಪಾಠದ

ಮಕ್ಕಳ ತರಗತಿಯ ಮುದ್ದೆ ಚಿತ್ರಗಳು.



ಮಕ್ಕಳು ಪ್ರಾರಂಭದಲ್ಲಿ ಮೃದುವಾದ ಬಣ್ಣವ ಸುಣ್ಣಗಳಿಂದ ವೃತ್ತಾಕಾರವಾಗಿಯೂ, ಮೊಟ್ಟೆಯ ಆಕಾರದಲ್ಲಿಯೂ, ಸರಳ ರೇಖೆಗಳ ರೀತಿಯಲ್ಲಿಯೂ ಬರೆಯಲು ಅನುಕೂಲಿಸುವ ಕೆಲವು ಸಾಧನೆಗಳು.

ಮಕ್ಕಳ ತರಗತಿಗೆ ಅನುಕೂಲಿಸುವ ಮುದ್ದೆ ಚಿತ್ರಗಳು.

ಮಕ್ಕಳಿಗೆ ಬಳಕೆಯಲ್ಲಿರುವ ಮಾದರಿಗಳನ್ನು ಮುಂದಿಟ್ಟು ಅವುಗಳ ವಿಷಯದಲ್ಲಿ
ಸಂಭಾಷಿಸಿ ನಂತರ ಬರೆಸಲು ಕೊಟ್ಟಿರುವ ಕೆಲವು ಅಭ್ಯಾಸಗಳು.

ಮೊದಲನೆಯ ಹಂತ, ವಸ್ತುವಿನ ಪರಿಧಿಯ ಪರಿಮಿತಿಯನ್ನು ಗುರ್ತಿಸುವುದೇ ರೇಖಾಚಿತ್ರದ ರೀತಿ. ರೇಖೆಯ ಪೂರ್ಣಾನುಭವ ಮಾಡಿಕೊಡುವುದು ಅಗತ್ಯವಾದರೂ; ಕೇವಲ ಬಾಲ್ಯಾವಸ್ಥೆಯಲ್ಲಿ ರೇಖಾಚಿತ್ರಗಳು ಕೊಂಚ ಕಷ್ಟವಾಗಿ ಪರಿಣಮಿಸುವುದು. ಮಗುವು ವಸ್ತುವನ್ನು ನೋಡಿ ಅದರ ಆಕಾರ, ಬಣ್ಣ, ಮುಂತಾದ ಎಲ್ಲ ವಿಷಯಗಳ ಅನುಭವವನ್ನೂ ಪಡೆಯುವುದು. ಅವರು ತಮ್ಮ ಚಿತ್ರಗಳಲ್ಲಿ ಇವೆಲ್ಲವನ್ನೂ ತೋರ್ಪಡಿಸಲು ಪ್ರಯತ್ನಿಸುವರು. ಎಲ್ಲವನ್ನೂ ಕ್ರೋಡೀಕರಿಸಿ ವಸ್ತುವಿನ ಪರಿಧಿಯನ್ನು ಮಾತ್ರ ಗುರ್ತಿಸುವ ಚಿತ್ರವು ಪ್ರಾರಂಭದಲ್ಲಿ ಕಷ್ಟವಾಗಿಕಂಡುಬರುವುದು. ಆದುದರಿಂದ ಚಿತ್ರಬರೆಸಲು ಬಿಂದು ಮತ್ತು ರೇಖೆಗಳಿಂದಾರಂಭಿಸಿದರೂ ವಸ್ತುವಿನ ಮಯ್ಯನ್ನೆಲ್ಲಾ ತೋರಿಸುವಂತಹ ಮುದ್ದೆಚಿತ್ರಗಳಿಂದಲೇ ಮಕ್ಕಳ ತರಗತಿಗಳಲ್ಲಿನ ಚಿತ್ರವು ಆರಂಭವಾಗುವುದು. ಇದನ್ನೇ ಮುದ್ದೆಚಿತ್ರಗಳಿಂದು (**ಮಾಸ್ ಡ್ರಾಯಿಂಗ್**) ಕರೆಯುವೆವು.

ಈ ಚಿತ್ರಗಳಲ್ಲಿ ಮಗುವು ಮೃದುವಾದ ಸೀಮೆಯ ಸುಣ್ಣವನ್ನು ತೆಗೆದುಕೊಂಡು, ವಸ್ತುವಿನ ಮಧ್ಯವನ್ನು ತೋರಿಸುವ ಒಂದು ಚುಕ್ಕೆಯನಿಟ್ಟು ಆ ಚುಕ್ಕೆಯ ಸುತ್ತಲೂ ಮಂಡಲಾಕಾರ ಅಥವ ಮೊಟ್ಟೆಯ ರೂಪದಲ್ಲಿ ಸುತ್ತುತ್ತಾ ಪ್ರಮಾಣವನ್ನು ಬೆಳೆಸುವುದು. ಕೊನೆಗೆ ಪದಾರ್ಥದ ಪೂರ್ಣ ಆಕಾರವನ್ನು ಚಿತ್ರಿಸಿ, ಕೆಲವು ಗೆರೆಗಳಿಂದ ಉಳಿದ ಸಣ್ಣಪುಟ್ಟ ಭಾಗಗಳನ್ನು ತೋರಿಸುವುದು. ಈ ಪಾಠದಲ್ಲಿಯೂ ಮಕ್ಕಳು, ಒಂದುಕ್ರಮ ಮತ್ತು ಸಿಸ್ತನ್ನನುಸರಿಸಿ ಕೆಲಸ ಮಾಡುವುದನ್ನು ಕಲಿಸಬೇಕು. ಅದರೂ ಯಲ್ಲರೂ ಚಿತ್ರಗಳನ್ನು ನಮ್ಮ ಮನವೊಪ್ಪುವಂತೆ ಚಿತ್ರಿಸುವರೆಂದು ನೆನೆಯಬಾರದು. ಮಕ್ಕಳ ಕೈಯ್ಯಲ್ಲಿನ ಮಾಂಸಖಂಡಗಳಿಗೆ ಸಾಕಾವಷ್ಟು ಅಭ್ಯಾಸ ದೊರೆತಿರುವುದಿಲ್ಲ. ಕಣ್ಣು ಅಷ್ಟು ಚುರುಕಾಗುವುದಿಲ್ಲ. ಪದಾರ್ಥಗಳ ಜ್ಞಾನವೂ ಸರಿಯಾಗಿ ಉಂಟಾಗಿರುವುದಿಲ್ಲ, ಇವೆಲ್ಲವನ್ನೂ ಬಲ ಪಡಿಸುವುದೇ ಈ ಚಿತ್ರಗಳ ಮುಖ್ಯಗುರಿ. ಆದುದರಿಂದ ಮಕ್ಕಳು ಬರೆದಿರುವ ಚಿತ್ರಗಳಲ್ಲಿ ಇವು ಎಷ್ಟೆಷ್ಟು ಮಟ್ಟಿಗೆ ಬಲಪಡುತ್ತಬಂದಿವೆ ಎಂಬುವದನ್ನು ಮಾತ್ರ ಗಮನಿಸಬೇಕು.

ಈ ಮುದ್ದೆಚಿತ್ರಗಳ ಆದಿಪಾಠಗಳನ್ನು ತೋರಿಸಿಕೊಡಲು ಎರಡು ಮುದ್ದೆಚಿತ್ರಗಳ ವೃಂದವು ಕೊಡಲಾಗಿದೆ. ಪ್ರಾರಂಭದಲ್ಲಿ ಮಕ್ಕಳು ಮೃದುವಾದ ಬಣ್ಣದ ಸುಣ್ಣಗಳನ್ನು ತೆಗೆದು ಕೊಂಡು ಕರಿಯ ಹಲಗೆ ಅಥವ ಕೈರೊಟ್ಟನಮೇಲೆ ಬರೆಯುವ ಅಭ್ಯಾಸವು ತೋರಿಸಲಾಗಿದೆ. ಮೊದಲು ಬಿಂದುವನ್ನಿಡುವಂತೆ ಹೇಳಿ ಅವರೆನುರಿಗಿರುವ ಬಣ್ಣಬಣ್ಣದ ಮಣಿಗಳ ಆಕಾರ ಮತ್ತು ಗಾತ್ರಕ್ಕೆ ಬೆಳೆಸುವ ರೂಢಿಮಾಡಿಸಬಹುದು. ಇಲ್ಲಿ ತೋರಿಸಿರುವ ಪಾಠಗಳು ಉಪಾಧ್ಯಾಯರ ಪಾಠದ ಸಿದ್ಧತೆ. ಮಕ್ಕಳೂ ಇದನ್ನನುಸರಿಸಬಹುದು. ಅಗವ ಸೌಕರ್ಯಕಂಡ ಮತ್ತಾವುದಾದರೂ ರೀತಿಯನ್ನು ಹೊಂದಿಸಬಹುದು. ಅಂತೂ ಮೊದಲಿನ ಸಾಧನೆಗಳು ಕಠಿಣವಾದುವಾಗಿರಬಾರದು. ಎರಡನೆಯ ವೃಂದದಲ್ಲಿ ಬಳಕೆಯಿಲ್ಲಿರುವ ಕೆಲವು ವಸ್ತುಗಳ ಚಿತ್ರಗಳು ಇವೆ. ಉಪಾದ್ಯಾಯರು ಅಂತಸ್ತುವಾರಾಗಿ ಕಲಿಸಿಕೊಡಲು ಬರೆದುಕೊಂಡ ಕೆಲವು ಚಿತ್ರಗಳು. ಆದರೆ ಇವೆಲ್ಲವನ್ನೂ ಒಂದೇ ದಿನದಲ್ಲಿ ಬರಿಸಬೇಕೆಂದು ತಿಳಿಯಬಾರದು. ಈ ಎರಡು ವೃಂದದಚಿತ್ರಗಳನ್ನು ಬರಿಸಿ ಪೂರೈಸಲು ಕೆಲವ್ರತಿಂಗಳಾದರೂ ಅಡ್ಡಿಯಿಲ್ಲ. ಮಕ್ಕಳಿಗೆ ಈ ಪದಾರ್ಥಗಳ ಜ್ಞಾನವಾಗಿ ಸ್ವತಂತ್ರವಾಗಿ ಬರೆಯುವುದು ಬರಬೇಕು.

ಹಿಂದೂಸ್ಥಾನದ ಬಡತನಕ್ಕೆ ಕಾರಣವೇನು ?

ಬೊಂಬಾಯಿ ಸ್ವದೇಶೀಲೀಗ್''ಯವರ ಕೈಪಿಡಿಯಿಂದ ಎತ್ತಿ ಬರದುದು.

(ಸಂಗ್ರಹಕಾರರು : —ಎಂ. ಎಲ್. ಎನ್. ಮತ್ತು ಎ. ಯಸ್. ಯ್.)

ಇತ್ತೀಚಿಗೆ ರಾಜಕೀಯ ಚಳವಳಿಯು ಪ್ರಾಬಲ್ಯದಿಂದ ಹಿಂದೂಸ್ಥಾನದಲ್ಲಿ ಎಲ್ಲೆಲ್ಲಿಯೂ ಜನಜಾಗೃತಿಯುಂಟಾಗ ಹತ್ತಿದೆ. 'ತನ್ನ ಕರ್ಮ' 'ತಾನು ಮಾಡಿದ ಫಲ' ಎಂದುಕೊಂಡು ತನ್ನ ಸ್ಥಿತಿಯು ಎಷ್ಟೇ ಅಧೋಗತಿಯಲ್ಲಿದ್ದರೂ, ಅದರಲ್ಲೇ ಒಂದು ಬಗೆಯ ತೃಪ್ತಿಯನ್ನು ಪಡೆದು, ಯಾರ ಗೋಜಿಗೂ ಹೋಗದೆ ತಮ್ಮ ಕಾಲವನ್ನು ಕಳೆಯುವ ಹಳ್ಳಿಯವರೂ ಸಹ; ಸುಖ ಸಮೃದ್ಧಿಯಿಂದ ತುಂಬಿ ತುಳುಕಾಡುತ್ತಿದ್ದ ಈ ನಾಡಿನಲ್ಲಿ, ಒಪ್ಪತ್ತು ಹೊಟ್ಟೆತುಂಬ ಉಣಲಿಕ್ಕೆ ಕೂಡ ಇಲ್ಲದೇ ಹೋಗಲು ಏನು ಕಾರಣ! ಎಂದು ಕುತೂಹಲದಿಂದ ವಿಮರ್ಶೆ ಮಾಡಲು ತೊಡಗಿರುತ್ತಾರೆ. ಈ ಬಡತನಕ್ಕೆ ಮೊಟ್ಟನೊದಲು ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗತಿಗಳೆಲ್ಲವೂ ಕಾರಣಗಳಾಗಿರುವುದರಿಂದ ಈ ಪ್ರಶ್ನೆಗೆ ಒಂದೆರಡು ಮಾತುಗಳಲ್ಲಿ ಸಮಂಜಸವಾದ ಉತ್ತರಗಳನ್ನು ಕೊಡುವುದು ಸಾಧ್ಯವಲ್ಲ. ಆದರೂ, ಸ್ವಲ್ಪಮಟ್ಟಿಗಾದರೂ ಸಾಮಾನ್ಯ ಜನರಿಗೆ ತಿಳುವಳಿಕೆಯನ್ನುಂಟುಮಾಡ ಬೇಕೆಂಬ ಉದ್ದೇಶದಿಂದ ಈ ಚಿಕ್ಕ ಲೇಖನವು ಬರೆಯಲ್ಪಟ್ಟಿರುತ್ತೆ.

ಹಿಂದೂಸ್ಥಾನವು ಬಡತನದ ಹೊನ್ನಿನನಾಡು! ಆಶ್ಚರ್ಯವೇ ಸರಿ. ಆದರೆ ಈ ಒಂದು ನುಡಿಯಲ್ಲಿ ಈ ಸಿರಿನಾಡಿನ ನಿಜಸ್ಥಿತಿಯು ಅಡಗಿದೆ. ಹಿಂದೂಸ್ಥಾನದ ಐಶ್ವರ್ಯಕ್ಕೆ ಎಣೆಯಿಲ್ಲ. ಇಲ್ಲಿನ ರೈತರು ಚಿನ್ನವನ್ನೇ ಬೆಳೆಯುವರೆಂದರೆ ಅಡ್ಡಿಯಿಲ್ಲ. ಆದರೇನು! ಇದರ ಫಲವು ಅವರಿಗಿಲ್ಲದೆ ಹೋಗಿದೆ. ಹಿಂದೂಸ್ಥಾನದ ಐಶ್ವರ್ಯವನ್ನು ಕೇಳಿ, ಪರದೇಶಗಳಿಂದ ಲೂಟಿಮಾಡಲಿಕ್ಕೂ ವ್ಯಾಪಾರ ಮಾಡಲಿಕ್ಕೂ ಬಂದವರು ಎಷ್ಟು ಮಂದಿಯೋ!

ಹಿಂದೂಸ್ಥಾನದ ವಿಸ್ತೀರ್ಣವು ೧೮೦ ಸಾವಿರ ಚದರ ಮೈಲಿ, ಇದರಲ್ಲಿ ೧೧೦ ಸಾವಿರ ಚದರ ಮೈಲಿ ಬ್ರಿಟಿಷ್ ಹಿಂದೂಸ್ಥಾನಕ್ಕೆ ಸೇರಿದ್ದು. ಒಟ್ಟು ಪ್ರಜಾ ಸಂಖ್ಯೆ ೩೨ ಕೋಟಿ. ದಕ್ಷಿಣೋತ್ತರ ೨೦೦೦ ಮೈಲಿ ಆಗಲ, ಪೂರ್ವ ಪಶ್ಚಿಮ ೨೫೦೦ ಮೈಲಿ ಉದ್ದ. ಸಮುದ್ರತೀರದ ವಿಸ್ತೀರ್ಣ ೫೦೦೦ ಮೈಲಿ, ಎಂದರೆ ಒಟ್ಟಿನಲ್ಲಿ ಭಾರತ ವರ್ಷವು ಗ್ರೇಟ್ ಬ್ರಿಟನ್ನಿಗಿಂತ ವಿಸ್ತೀರ್ಣದಲ್ಲಿ ೧೫ ಪಾಲಿನಷ್ಟು ಅಧಿಕ. ಹಿಂದೂ ದೇಶವು ಒಂದು ದೊಡ್ಡ ಖಂಡವೇ ಸರಿ. ಸೃಷ್ಟಿಯು ಹಿಂದುಸ್ಥಾನಕ್ಕೆ ಯಾವ ವಿಧವಾದ ಕೊರತೆಯನ್ನೂ ಉಂಟುಮಾಡಿಲ್ಲ. ಪ್ರಪಂಚದಲ್ಲೆಲ್ಲ ಅತ್ಯಂತ ಉನ್ನತವಾದ ಹಿಮಾಲಯಾ ಪರ್ವತವೂ, ಪವಿತ್ರವಾದ ಗಂಗಾ, ಯಮುನ, ಸಿಂಧು, ಗೋದಾವರಿ, ತುಂಗಭದ್ರ ನೊದಲಾದ ಮಹಾ ನದಿಗಳೂ, ಹಿಂದೂಸ್ಥಾನದ ಯಶಸ್ಸನ್ನು ಸಾರುತ್ತಿವೆ. ಸಸ್ಯಗಳಲ್ಲೂ, ಧಾನ್ಯಗಳಲ್ಲೂ, ಖನಿಜಗಳಲ್ಲೂ ಹಿಂದೂಸ್ಥಾನಕ್ಕೆ ಸರಿಯೇ ಇಲ್ಲ. ಪ್ರಪಂಚದಲ್ಲಿ ಬೆಳೆಯಾಗುವ ಭತ್ತದಲ್ಲಿ ಶೇಕಡ ೪೦ ಭಾಗವು ಹಿಂದೂಸ್ಥಾನದಲ್ಲಿ ಬೆಳೆಯುತ್ತೆ. ಇಲ್ಲಿ ಬೆಳೆಯುವಷ್ಟು ತೆಂ ಎಲೆಯು (ಟೀ ಸೊಪ್ಪು) ಪ್ರಾಯಶಃ

[ಕರಾಚಿಯ ಕ್ರಾಂಗ್ರೆಸ್ಸಿನ ನೆನಪಿಗಾಗಿ

ಕಲಾ ಪತ್ರಿಕೆಯ ಕಾಣಿಕೆ]

ರಾಷ್ಟ್ರೀಯ ಧ್ವಜ.



ನಮ್ಮ ದೇಶದಲ್ಲಿ ಮಹಾತ್ಮರ ಮುಂದಾಳುತ್ವದಲ್ಲಿ ಎತ್ತಿಹಿಡಿಯಲ್ಪಟ್ಟಿರುವ ರಾಷ್ಟ್ರೀಯಧ್ವಜ.
ಇದು ಪ್ರತಿ ಭಾರತೀಯನಿಗೂ ಪೂಜ್ಯವಸ್ತು ; ಇದರ ಗೌರವವನ್ನು ಕಾಪಾಡುವುದು ಅವನ ಪವಿತ್ರ ಕಾರ್ಯ.

ರಾಷ್ಟ್ರೀಯ ಧ್ವಜ.

ಎಲ್ಲಾ ಜನಾಂಗಗಳಿಗೂ ಒಂದೊಂದು ರಾಷ್ಟ್ರೀಯ ಧ್ವಜವುಂಟು. ಜನಾಂಗವೆಲ್ಲವೂ ತಮ್ಮ ರಾಷ್ಟ್ರಧ್ವಜವನ್ನು ಅತ್ಯಂತ ಪವಿತ್ರವಾದುದೆಂದು, ಗೌರವಿಸುವುದನ್ನು ಪ್ರಪಂಚದ ಎಲ್ಲ ಭಾಗದಲ್ಲಿಯೂ ನೋಡಬಹುದು. ಹಿಂದೂಸ್ಥಾನದ ರಾಷ್ಟ್ರೀಯಧ್ವಜದಲ್ಲಿ ಎಲ್ಲಕ್ಕಿಂತಲೂ ಹೆಚ್ಚಿನ ಮಹತ್ವವುಂಟು. ಈ ಧ್ವಜವು ಮತಮತಾಂತರಗಳ ಐಕಮತ್ಯ, ಸರ್ವಸಮತೆ, ಶಾಂತತೆ, ಅಹಿಂಸೆ ಮತ್ತು ಆರ್ತರಿಗಭಯ, ಮುಂತಾದ ಉದಾತ್ತ ಗುಣಗಳ ಮೂರ್ತಿಸ್ವರೂಪ. ಆದುದರಿಂದಲೇ ಮಹಾತ್ಮರ ಮುಂದಾಳುತ್ವದಲ್ಲಿ ಎತ್ತಿ ಹಿಡಿಯಲ್ಪಟ್ಟಿರುವ, ಸ್ವತಂತ್ರ ಭಾರತದ ಈ ರಾಷ್ಟ್ರೀಯ ಧ್ವಜವು ಇಡೀಭಾರತದಲ್ಲಿ ಮಾತ್ರವಲ್ಲದೆ ಪ್ರಪಂಚದಲ್ಲೆಲ್ಲಾ ಅಗ್ರಸ್ಥಾನ ಪಡೆದಿರುವುದು.

ನೂತನ ಚೈತನ್ಯದಿಂದ ಸ್ಫೂರ್ತಿಹೊಂದಿದ ನವಯುಗದ ತರುಣ ತರುಣಿಯರು ಈ ರಾಷ್ಟ್ರಧ್ವಜದ ಗೌರವನ್ನು ಕಾಪಾಡುವುದು ಮಾತ್ರವಲ್ಲದೆ, ನಮ್ಮ ಜನಾಂಗದ ಕುರುಹಾದ ಈ ಧ್ವಜದ ರಚನಾಕ್ರಮವನ್ನೂ ತಿಳಿಯಬೇಕಾದುದು ಅವರ ಪವಿತ್ರಕರ್ತವ್ಯ.

ರಾಷ್ಟ್ರೀಯ ಧ್ವಜ ರಚನೆ.

ಉತ್ತಮವಾದ ಕಾಗದದ ಮಧ್ಯದಲ್ಲಿ ಆರು ಅಂಗುಲ ಉದ್ದ, ನಾಲ್ಕು ಅಂಗುಲ ಅಗಲ, ಅಥವ ಇದೇ ಪ್ರಮಾಣದಲ್ಲಿ ಬೇರೇ ಅಳತೆಯ ಒಂದು ಆಯವನ್ನು ಬರೆದುಕೊಳ್ಳಿ.

ಅನಂತರ ಅಡ್ಡದಲ್ಲಿ ಮೂರು ಭಾಗಮಾಡಿ ಸಮಾನ ಅಂತರದ ಸರಳರೇಖೆಗಳನ್ನೆಳೆಯಿರಿ.

ಬಳಿಕ ದೊಡ್ಡದಾದ ಚರಕ ವೊಂದನ್ನು ಬರೆಯಿರಿ. (ಚರಕದ ಚಕ್ರವು ಇಲ್ಲಿರುವಂತೆ ಬಲದಲ್ಲಿರುವುದಕ್ಕಿಂತ ಎಡದಲ್ಲಿದ್ದರೆ ಮತ್ತಷ್ಟು ಅಂದವಾಗಿ ಕಾಣುವುದು.)

ನಂತರ ತಳಭಾಗದ ಆಯಕ್ಕೆ ಪ್ರಕಾಶವಾದ ಕೆಂಪು ಬಣ್ಣವನ್ನು ಹಾಕಿ. ಇದರ ಮೇಲಿನ ಚೌಕದಲ್ಲಿ ಹಸರುಬಣ್ಣವನ್ನುಹಾಕಿ. ಈ ಮೂರು ಬಣ್ಣಗಳೂ ಹಿಂದು, ಮಹಮ್ಮದೀಯ ಮತ್ತು ಇತರ ಮತಗಳಲ್ಲಿ ಪವಿತ್ರವಾದುವೆಂದು ತಿಳಿಯಲ್ಪಟ್ಟಿವೆ. ಈ ಬಣ್ಣಗಳು ಅಹಿಂಸೆ, ಸತ್ಯ, ಮತ್ತು ಪಾರಿಶುದ್ಧತೆ ಎಂಬ ಸದ್ಗುಣಗಳನ್ನು ತೋರಿಸುವುದು. ಧ್ವಜದ ಮಧ್ಯದಲ್ಲಿರುವ ಚರಕವು ಬಡವರಿಗಭಯವೀಯುವ ಭಾಗ್ಯದೇವತೆಯ ಕುರುಹು. ಹಿಂದೂಸ್ಥಾನದಲ್ಲಿ ವಾಸಿಸುವ ಪ್ರತಿ ಬಾಲಕನೂ ಇಂತಹ ಸಣ್ಣ ಪುಟ್ಟ ಬಾವುಟಗಳನ್ನು ತಯಾರಿಸಿ, ಇದನ್ನು ಪೂಜ್ಯ ವಸ್ತುವೆಂದು ತಿಳಿಯಬೇಕು. ಹೆಮ್ಮೆಯಿಂದ ಧರಿಸಬೇಕಲ್ಲದೆ ಇದರ ಗೌರವಕ್ಕೆ ಹಾನಿ ಬಾರದಂತೆ ನೋಡಿಕೊಳ್ಳಬೇಕು.

ಮಿತ್ರರೇ! ಕಲಾ ಪತ್ರಿಕೆಗೆ ಚಂದಾದಾರರಾಗಿರಿ. ವಾರ್ಷಿಕ ಚಂದ ೩—೮—೦ ಮಾತ್ರ. ಇದು ಪ್ರಥಮ ಸಂಚಿಕೆಯ ಕಾಣಿಕೆ. ಹಿಂದಿನ ವರುಷದ ಸಂಪುಟವು ಬೈಂಡಾಗಿ ಕ್ರಯಕ್ಕೆ ಸಿದ್ಧವಾಗಿದೆ. ಕ್ರಯ ೪ ರೂ. ಮಾತ್ರ.
ಕಲಾಕಾರ್ಯಾಲಯ, ಕಲಾಮಂದಿರಂ, ಬೆಂಗಳೂರು ಸಿಟಿ.

ಪ್ರಪಂಚದಲ್ಲಿ ಮತ್ತೆಲ್ಲಿಯೂ ಬೆಳೆಯಲಾರದು. ಸೆಣಬಿನ ತವರೂರು ಹಿಂದೂಸ್ಥಾನ. ಇದಲ್ಲದೆ ರಾಗಿ, ಬೇಳೆ, ಹತ್ತಿ, ಎಣ್ಣೆಬೀಜಗಳು, ಗೋಧಿ, ಜೋಳ, ದ್ವಿದಳ ಧಾನ್ಯಗಳು, ಕಾಫಿ, ತೆಂಗು, ಅಡಕೆ, ಹೊಗೇಸೊಪ್ಪು, ರಬ್ಬರ್ ಇತ್ಯಾದಿ ಬೆಳೆಗಳಿಲ್ಲವೂ ಹಿಂದೂಸ್ಥಾನದಲ್ಲಿ ಬೆಳೆಯುತ್ತವೆ.

ಇವುಗಳಲ್ಲದೆ ಭರತಖಂಡದಲ್ಲಿ ತನ್ನ ಕೈಗಾರಿಕೆಗಳಿಗೆ ಬೇಕಾಗುವ ಎಲ್ಲ ಬಗೆಯ ಖನಿಜಗಳೂ ಹೇರಳವಾಗಿವೆ ಎಂದು ಶಾಸ್ತ್ರಸಂಶೋಧಕರು ತಿಳಿಸಿರುತ್ತಾರೆ. ಬ್ರಿಟಿಷ್ ಸರ್ಕಾರದವರಿಂದ ೧೯೧೮ ರಲ್ಲಿ ನೇಮಿಸಲ್ಪಟ್ಟ ಇಂಡಸ್ಟ್ರಿಯಲ್ ಕಮಿಷನ್ ಯವರೇ ಈ ರೀತಿ ಅಭಿಪ್ರಾಯ ಪಟ್ಟಿರುತ್ತಾರೆ. ಈ ನಮ್ಮ ಹಿಂದೂಸ್ಥಾನದಲ್ಲಿ ಕಲ್ಲಿದ್ದಲು, ಕಬ್ಬಿಣ, ಸೀಸ, ತವರ, ಮ್ಯಾಗನಿಸ್, ಕ್ರೋಮೈಟ್, ಟಿನ್, ಮೈಕಾ, (ಕಾಗೆ ಭಂಗಾರ) ಅಂಬರ್, ಗ್ರಾಫೈಟ್, ಸ್ಲಾಟಿನಂ, ಜಿಪ್ಸಂ ಮತ್ತು ಉಪ್ಪು ಇಷ್ಟು ಖನಿಜಗಳೂ ದೊರೆಯುತ್ತವೆ. ೩೨ ಕೋಟಿ ಟನ್ ಕಲ್ಲಿದ್ದಲು ವರ್ಷವರ್ಷ ಗಣಿಗಳಿಂದ ಉತ್ಪತ್ತಿಯಾಗುತ್ತಿದೆ. ಇಂಗ್ಲೆಂಡಿನ ಐಶ್ವರ್ಯಕ್ಕೆ ಆ ದೇಶದ ಕಲ್ಲಿದ್ದಲೂ ಕಬ್ಬಿಣವೂ ಆಧಾರ ಭೂತವಾದ್ದು. ಹೀಗಿರುವಲ್ಲಿ ನಮ್ಮಲ್ಲಿ ಮೇಲೆ ಹೇಳಿದಷ್ಟು ಖನಿಜಗಳಿದ್ದಾಗ್ಯೂ ಅದು ಭೂಮಿಯಲ್ಲೇ ಹುಗಿದುಕೊಂಡು ನಮ್ಮ ದಾರಿದ್ರವನ್ನು ಶಮನಮಾಡಲಾರದಂತಾಗಿದೆ. ಇದು ಯಾವ ದೌರ್ಭಾಗ್ಯ! ಇದಕ್ಕೇನು ಕಾರಣ ? ವಿದ್ಯುಚ್ಛಕ್ತಿಯನ್ನು ಜನನ ಮಾಡಿಕೊಳ್ಳಲೂ ಸಹ ನಮ್ಮಲ್ಲಿ ಬೇಕಾದಷ್ಟು ಸೌಲಭ್ಯಗಳಿವೆ.

ನೈಸರ್ಗಿಕವಾಗಿ ಇಷ್ಟು ಐಶ್ವರ್ಯವು ಹಿಂದುಸ್ಥಾನದಲ್ಲಿ ಇದ್ದಾಗ್ಯೂ, ಐಶ್ವರ್ಯಯುಕ್ತವಾದ ಹಿಂದೂಸ್ಥಾನವು ; ದೌರ್ಭಾಗ್ಯದ ಅಧಿದೇವತೆಯ ನಿವಾಸ ಸ್ಥಾನವಾಗಿದೆ. ಬ್ರಿಟೀಷ್ ಸರ್ಕಾರದಿಂದ ನೇಮಿಸಲ್ಪಟ್ಟ ಸೈಮ್ಯ ಸಮಿತಿಯೂ ಸಹ ಹಿಂದೂ ನಿವಾಸಿಗಳ ಸರಾಸರಿ ಆದಾಯವು ಸಾಲಿಯಾನಾ ೧೧೦ ರೂ. ಎಂದರೆ ತಿಂಗಳಿಗೆ ಹತ್ತು ರೂಪಾಯಿಗಳಿಗಿಂತಲೂ ಕಡಮೆ ಎಂದು ಪರಿಗಣಿಸಿರುತ್ತಾರೆ. ಕೋಟ್ಯಾಧೀಶ್ವರರ ಐಶ್ವರ್ಯವೂ ಪರಿಗಣನೆಗೆ ತೆಗೆದುಕೊಳ್ಳಲ್ಪಟ್ಟಿದ್ದಾಗ್ಯೂ ತಲಾ ಹತ್ತು ರೂಪಾಯಿ ಎಂದರೆ, ಒಂದು ರೂಪಾಯಿಗಿಂತಲೂ ಕಡಮೆಯಾದ ಆದೀಕ. ಒಂದು ಬಿಡಿ ಕಾಸೂ ವರಮಾನವಿಲ್ಲದವರ ಸಂಖ್ಯೆಯು ಎಷ್ಟು ಲಕ್ಷಗಳಿರಬೇಕು ? ಎರಡು ಹೊತ್ತು ಊಟಲಿಕ್ಕೇ ತಿಂಗಳಿಗೆ ಹತ್ತು ರೂಪಾಯಿ ಬೇಕೆಂದರೆ ಎಷ್ಟು ಮಂದಿ ಬೆತ್ತಲೆಯಾಗಿ ಛಳಿಗಾಳಿಯಲ್ಲಿ ಮನೆ ಮಠಗಳಿಲ್ಲದೆ ಅಲೆಯುತ್ತಿದ್ದಾರೆ. ನಮ್ಮ ಹಿತಕ್ಕಾಗಿ, ನಮ್ಮ ಉದ್ಧಾರಕ್ಕಾಗಿ ರಾಜ್ಯಪರಿಪಾಲನೆ ಮಾಡುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಆಂಗ್ಲೇಯ ಪ್ರಭುಗಳೇ, ಈ ದಾರಿದ್ರದ ದುರವಸ್ಥೆಯನ್ನು ಈ ರೀತಿ ಬಣ್ಣಿಸಿರುತ್ತಾರೆ. " ೭೦ ಕೋಟಿ ಮಂದಿ ಹಿಂದೂಸ್ಥಾನದಲ್ಲಿ ಹಸಿವಿನಿಂದ ಬಳಲುತ್ತಿರುತ್ತಾರೆಂದು " ವಿಲಿಯಂ ಡಿಗ್ಬಿ ಎಂಬ ಆಂಗ್ಲೇಯ ಗ್ರಂಥಕಾರನೂ " ಭರತ ಖಂಡದ ಸಕಲೈಶ್ವರ್ಯವೂ ಎಲ್ಲರಿಗೂ ಹಂಚಲ್ಪಟ್ಟಾಗ್ಯೂ, ಮನುಷ್ಯನಿಗೆ ಅತ್ಯವಶ್ಯಕವಾದ ಆಹಾರ ಬಟ್ಟೆಗಳನ್ನು ಕೂಡ ಒದಗಿಸಿಕೊಡಲು ಶಕ್ಯವಿಲ್ಲವೆಂದು" ಮಿ|| ಜ್ಹಾ. ಎಚ್. ಮೋರ್‌ಲ್ಯಾಂಡ್‌ಯವರು ಬರೆದಿರುತ್ತಾರೆ. ಹಿಂದೂಸ್ಥಾನದ ಬಡತನವು ಇಷ್ಟು ಭೀತಕ ಮಾತ್ರವಲ್ಲದೆ ಹಿಂದೂದೇಶಿಯರ ಸರಾಸರಿ ವರಮಾನವು ಪ್ರಪಂಚದಲ್ಲೆಲ್ಲಾ ಅತ್ಯಂತ ಕನಿಷ್ಟವಾಗಿದೆ.

ಟಿಟಿಯನ್.

ಜಿ. ಶ್ರೀನಿವಾಸ ರಾವ್, ಬಿ.ಎ., ಬಿ.ಯಲ್.

ಇಟಲೀ ದೇಶವು ಪಾಶ್ಚಿಮಾತ್ಯ ಕಲೆಯ ತೌರುಮನೆಯಾಗಿ, ಪುರಾತನ ಚಿತ್ರಕಾರರ ಚಿತ್ರಗಳಿಂದ ತುಂಬಿ ತುಳುಕುತ್ತಿರುವ ಖನಿಯಾಗಿದೆ. ಆ ದೇಶದ ಮುಖ್ಯ ಪಟ್ಟಣಗಳೂ ಸದಾ ತಮ್ಮ ತಮ್ಮ ಗೌರವಕ್ಕೆ ತಕ್ಕಂತೆ ಕಲಾಭಿಜ್ಞರಿಗೆ ಉತ್ತೇಜನ ಕೊಟ್ಟು ಅವರುಗಳ ಚಿತ್ರಗಳನ್ನು ಶೇಖರಿಸಿ ಅಚಂಬ್ರಾರ್ಕವಾದಕೀರ್ತಿಯನ್ನು ಪಡೆದಿವೆ. ಇವುಗಳಲ್ಲಿ " ಏಡ್ರಿಯಾಟಿಕ್ ಸಮುದ್ರದ ರಾಣಿ " ಎಂಬ ಬಿರುದು ಹೊಂದಿರುವ ವೆನಿಸ್ ನಗರವು ಒಂದು ಸಣ್ಣ ಸಂಸ್ಥಾನದ ರಾಜಧಾನಿಯಾಗಿದ್ದುದಲ್ಲದೆ, ಅನೇಕ ಲೋಕ ಪ್ರಸಿದ್ಧ ಕಲಾಭಿಜ್ಞರ ಚಿತ್ರಗಳನ್ನು ಶೇಖರಿಸಿಟ್ಟಿರುವುದಲ್ಲಿ ಪ್ರಖ್ಯಾತವಾಗಿದೆ. ಇದೂ ಅಲ್ಲದೆ ನೀರಿನಮೇಲೆ ಕಟ್ಟಿರುವ ಈ ಪಟ್ಟಣವು ದೂರದಲ್ಲಿರುವ ಗುಡ್ಡಗಳ ಶ್ರೇಣಿಗಳಿಂದಲೂ ನೀರಿನ ಮೇಲೆ ಬೀಳುತ್ತಿರುವ ಸೌಧಗಳ ಛಾಯೆಯಿಂದಲೂ ಮನವನ್ನು ಆಕರ್ಷಿಸಿ ಪ್ರಪಂಚದಲ್ಲೆಲ್ಲಾ ಸುಂದರವಾದ ಪಟ್ಟಣವೆಂದು ಹೆಸರು ಪಡೆದು ನೆರೆಯುತ್ತಿದೆ.

ವೆನಿಸ್ ನಗರದ ಕಲೆಗೆ ಔನ್ನತ್ಯವನ್ನು ಕೊಟ್ಟು ತನ್ನ ಪಟ್ಟಣದ ಕಲಾ ಕೀರ್ತಿಯನ್ನು ಯೂರೋಪಿನಲ್ಲೆಲ್ಲಾ ಹರಡಿದ ಟಿಟಿಯನ್ನನು, ವೆನಿಸ್ ನಗರದ ಹತ್ತಿರವಿರುವ ಇಟಲೀ ದೇಶದ ಮಲೆ ನಾಡಿನಲ್ಲಿರುವ ಕ್ಯಾಡೋರ್ ಎಂಬ ಊರಿನಲ್ಲಿ ೧೪೭೭ರಲ್ಲಿ ಹುಟ್ಟಿ, ಚಿಕ್ಕಂದಿನಿಂದಲೂ ತನ್ನ ಊರಿನ ಸುತ್ತು ಮುತ್ತಲಿರುವ ಬೆಟ್ಟ ಗುಡ್ಡಗಳಲ್ಲಿ ಸುತ್ತಾಡಿ ಆಲ್ಪ್ಸ್ ಬೆಟ್ಟಗಳ ಮೇಲಿರುವ ಗಿಡಗಳನ್ನು ಬೆಟ್ಟ ಗುಡ್ಡಗಳ ಶ್ರೇಣಿಗಳನ್ನೂ, ಆಗಾಗ ಕಂಡುಬರುವ ಸಂಧ್ಯಾ ಕಾಲಗಳನ್ನೂ ನೋಡಿ ಸಂತೋಷಿಸಿ ಪ್ರಕೃತಿಯನ್ನು ಪ್ರೀತಿಸಲಾರಂಭಿಸಿದನು. ಈತನು ಚಿಕ್ಕಂದಿನಲ್ಲಿ ಬೆಟ್ಟ ಗುಡ್ಡಗಳಲ್ಲಿಯೂ ಕಾಡಿನಲ್ಲಿಯೂ ಸುತ್ತಾಡುತ್ತಿದ್ದದುರಿಂದ ದೃಢಕಾಯನಾದುದಲ್ಲದೆ ಮನವೊಪ್ಪುವ ಪ್ರಕೃತಿಯ ವಿಲಾಸಗಳು ಈತನ ಮನಸ್ಸಿನಲ್ಲಿ ನಾಟಿ, ಕಡೆಗೆ ಈತನು ಚಿತ್ರಿಸಿರುವ ಚಿತ್ರಗಳಲ್ಲಿಯೂ ಕಂಡುಬಂದಿರುವುವು. ಆಗಾಗ್ಯೆ ಪ್ರಕೃತಿಯಲ್ಲಿ ಸೂರ್ಯ ರಶ್ಮಿಗಳು ವಿವಿಧ ವರ್ಣಗಳಿಂದ ಲೀಲೆಯಾಡುವಿಕೆಯು ಈತನ ದೃಷ್ಟಿಗೆ ಬಿದ್ದು ವರ್ಣಗಳ ನಿಜವಾದ ಕ್ರಮವು ಇವನ ಮಂದಟ್ಟಿಗೆ ಬಂತು ವರ್ಣಗಳ ಉಪಯೋಗದಲ್ಲಿ ಈತನು ಅಗ್ರಗಣ್ಯನಾಗಿರುತ್ತಾನೆ. ಈತನಿಗೆ ಹತ್ತು ವರ್ಷ ಕಳೆಯುವದರಲ್ಲಿಯೇ ಈತನ ತಂದೆಯು ಈತನ ಮನೋಭಿಪ್ರಾಯವನ್ನು ತಿಳಿದು ಕಲಾ ವ್ಯಾಸಂಗಕ್ಕಾಗಿ ವೆನಿಸ್ ನಗರಕ್ಕೆ ಕಳುಹಿಸಿದನು. ಟಿಟಿಯನ್ನನು ಕೊಂಚ ದಿವಸಗಳು ಮಾತ್ರ ಜೊಕೇಟೋ ಎಂಬ ಕಲಾವಿದನಲ್ಲಿ ಅಭ್ಯಾಸ ಮಾಡಿ ಆಮೇಲೆ ಆತನನ್ನು ಬಿಟ್ಟು, ಜೆಂಟೈಲ್ ಎಂಬ ಕಲಾಭಿಜ್ಞನೊಡನೆ ಕಲಾಭ್ಯಾಸವನ್ನು ಮಾಡಿದನು. ಪ್ರಸಿದ್ಧಿಯಾಗಿರುವ ಗರ್ಗಾಯಿನ್ ಬಳಿಯಲ್ಲಿಯೂ ಈತನು ಕೊಂಚ ದಿವಸ ಕಲಾವ್ಯಾಸಂಗ ಮಾಡಿದನು. ಟಿಟಿಯನ್ನನ ಬಾಲ್ಯದಲ್ಲಿ ಜಂಟೈಲ್ ಬೆಲ್ಲನಿ, ಗವಾಯನಿ ಬೆಲ್ಲನಿ ಎಂಬಿಬ್ಬರು ವೆನಿಸ್ ನಗರದ ಚಿತ್ರಕಾರರಲ್ಲೆಲ್ಲಾ ಪ್ರಮುಖರೆಂದು ಹೆಸರು ಪಡೆದು ವೆನಿಸ್ ನಗರದ ಅನೇಕ ರಾಜಭವನಗಳಲ್ಲಿ ಚಿತ್ರಗಳನ್ನು ಬರೆಯುತ್ತಿದ್ದರು. ವೆನಿಸ್ ನಗರದ ಪ್ರಮುಖರು ತಮ್ಮ ನಗರದ ಚಿತ್ರಕಾರರಿಗೆ ಉತ್ತೇಜನ ಕೊಡ

ಬೇಕೆಂದು ಬೆಲ್ಲನಿಗೆ ವಿಶೇಷವಾಗಿ ಕೆಲಸವನ್ನು ಕೊಟ್ಟು ಆತನಿಗೆ ಧನ ಸಹಾಯ ಮಾಡುತ್ತಿದ್ದರು. ವೃದ್ಧಾಪ್ಯದಲ್ಲಿಯೂ ಆತನಿಗೆ ವಿರಾಮ ಕೊಡದೆ ಅವನ ಕೈಲಾಗದಷ್ಟು ಚಿತ್ರಕೆಲಸವನ್ನು ಆತನ ತಲೆಯಮೇಲೆ ಹೊರಿಸಿ; ಅವನ ಸಹಾಯಕ್ಕೆ ಬಣ್ಣ ಹಾಕಲು ಅನೇಕ ಜನ ಕೂಲಿ ಕಾರರನ್ನು ನಿಯಮಿಸಿದರು. ಅಂಥಹ ಕೂಲಿಕಾರರಲ್ಲಿ ಟಿಟಿಯನ್ನನು ಒಬ್ಬನು! ಈತನ ಬಾಲ್ಯ ಯೌವನ ಮುಂತಾದುವುಗಳ ವಿಚಾರವಾಗಿ ಹೆಚ್ಚು ವಿಷಯಗಳು ತಿಳಿದು ಬಂದಿಲ್ಲ. ಈತನು ಸೆಸೀಲಿಯಾ ಎಂಬ ಯುವತಿಯನ್ನು ಮದುವೆಯಾಗಿ ಕೊಂಚಕಾಲ ಸಂಸಾರ ಸುಖವನ್ನು ಅನುಭವಿಸಿ ಎರಡು ಗಂಡು ಮಕ್ಕಳನ್ನೂ ಒಬ್ಬ ಮಗಳನ್ನೂ ಪಡೆದನು. ಈತನು ಹೆಸರುವಾಸಿಯಾದ ಹಾಗೆಲ್ಲಾ ಧನವೂ ಬರಲಾರಂಭಿಸಿದುದರಿಂದ ಈತನು ತನ್ನ ಗೌರವಕ್ಕೆ ತಕ್ಕ ಒಂದು ಭವನದಲ್ಲಿ ವಾಸಿಸುವು ದಕ್ಕೆ ಪ್ರಾರಂಭಿಸಿ ಅಲ್ಲಿ ಅತ್ಯಂತ ಠೀವಿಯಿಂದ ಜೀವಿಸಲಾರಂಭಿಸಿದನು. ಆಗಿನ ಕಾಲದಲ್ಲಿ ಈತನ ಗೃಹಕ್ಕೆ ಬಂದು ಈತನೊಡನೆ ಕೊಂಚ ಹೊತ್ತು ಮಾತನಾಡುವುದೇ ಒಂದು ಭಾರೀ ಗೌರವ ವೆಂದೆಣಿಸಲ್ಪಟ್ಟು ಆತನ ಭವನಕ್ಕೆ ಅನೇಕ ರಾಜರೂ ಶ್ರೀಮಂತರೂ ಬಂದು ಈತನ ಕೈಯ್ಯಲ್ಲಿ ಚಿತ್ರಗಳನ್ನು ಬರೆಸಿ ಉತ್ತೇಜನ ಕೊಡುತ್ತಿದ್ದರು. ಟಿಟಿಯನ್ನನಾದರೋ ತನ್ನ ಅತಿಥಿ ಗಳಿಗೆ ಸತ್ಕಾರ ಮಾಡಲು ಹಿಂಜೆಗೆಯದೆ ಬಂದವರಿಗೆಲ್ಲಾ ಅನುಚಿತವಾಗಿ ಮರ್ಯಾದೆ ಮಾಡಿ ಕಳುಹಿಸುತ್ತಿದ್ದನು. ಈತನ ಕೀರ್ತಿಯು ಸುತ್ತ ಮುತ್ತು ಪ್ರದೇಶಗಳಲ್ಲೆಲ್ಲಾ ಹರಡಿ ಕಡೆಗೆ ಈತನು ೧೫೧೬ ನೇ ಇಸವಿಯಲ್ಲಿ ವೆನಿಸ್ ನಗರದ ಆಸ್ಥಾನದ ಚಿತ್ರಕಾರನಾದನು. ೧೫೩೦ ನೇಯ ಇಸವಿಯಲ್ಲಿ ಸ್ಪೇನ್ ದೇಶದ ರಾಜನಾಗಿದ್ದ ಐದನೆಯ ಛಾರ್ಲೆಸ್ ಧೊರೆಯಿಂದ ಆಹ್ವಾನ ಬಂತು. ಈತನು ಧೊರೆಯ ಆಸ್ಥಾನಕ್ಕೆ ಪ್ರಯಾಣ ಮಾಡಿ ಆಗ್ಸ್ ಬರ್ಗ್‌ನಲ್ಲಿ ಛಾರ್ಲಸ್ಸಿನ ಭಾವ ಚಿತ್ರವನ್ನು ಬರೆದು ಆತನಿಗೆ ಅರ್ಪಿಸಿದನು. ಇದನ್ನು ನೋಡಿ ಧೊರೆಗೆ ಬಹಳ ಸಂತೋಷವಾಗಿ ಈತನಿಗೆ ವಿಶೇಷವಾಗಿ ಧನವನ್ನು, ಕೊಟ್ಟು ಈತನನ್ನು ತನ್ನ ರಾಜ್ಯದ ಶ್ರೀಮಂತನನ್ನಾಗಿ ಮಾಡಿ ದುದಲ್ಲದೆ ಮುಂದೆ ಮತ್ಯಾವ ಚಿತ್ರಕಾರರಿಂದಲೂ ಚಿತ್ರಗಳನ್ನು ಬರೆಸುವುದಿಲ್ಲವೆಂದು ಶಪಥ ಮಾಡಿ ಕೊಂಡನು. ಟಿಟಿಯನ್ನನು ಸ್ಪೇನ್ ದೇಶದ ರಾಜನ ಆಶ್ರಯದಲ್ಲಿ ಕೆಲಸ ಮಾಡಿ ಆತನಿಗೆ ಬಹಳ ಚಿತ್ರಗಳನ್ನು ಬರೆದು ಕೊಟ್ಟಿದ್ದಾನೆ. ಕ್ರೈಸ್ತರ ಗುರುವಾದ ಪೋಪನು ಟಿಟಿಯನ್ನನನ್ನು ೧೫೨೬ ರಲ್ಲಿ ರೋಮ್ ನಗರಕ್ಕೆ ಕರೆಸಿಕೊಂಡು ತನ್ನ ಚಿತ್ರವನ್ನು ಬರೆಸಿಕೊಂಡನು. ಈ ಕಾಲದಲ್ಲೇ ಈತನಿಗೆ ಮೈಕೇಲ್ ಆನ್‌ಜೆಲೋವಿನ ಭೇಟಿಯು ಆಯಿತು. ಟಿಟಿಯನ್ನಿಗೆ ೧೫೪೦ ನೇ ಇಸವಿಯಲ್ಲಿ ಪತ್ನಿ ವಿಯೋಗವಾಗಲು ಈತನು ವಿಯೋಗದ ದುಃಖವನ್ನು ತಾಳಲಾರದೆ ದೇಶಾಟನೆಗೆ ಆರಂಭಿಸಿ ಅನೇಕ ದೇಶಗಳಲ್ಲಿ ತಿರುಗಾಡಿ ಅಲ್ಲಲ್ಲೇ ಅನೇಕ ಚಿತ್ರಗಳನ್ನು ಚಿತ್ರಿಸಿ, ತನ್ನ ನಗರಕ್ಕೆ ಪುನಃ ಬಂದು ಅಲ್ಲಿಯೇ ತನ್ನ ಮರಣ ಕಾಲದವರೆಗೂ ಅವಿಚ್ಛಿನ್ನವಾಗಿ ಕೆಲಸ ಮಾಡಿ ಲೋಕ ಪ್ರಖ್ಯಾತವಾದ ಅನೇಕ ಚಿತ್ರ ಗಳನ್ನು ಬರೆದನು. ಈತನ ಚಿತ್ರಗಳಲ್ಲಿ ನೂರಾರು ಇನ್ನೂ ಇವೆ. ಇವುಗಳಲ್ಲನೇಕವು ವೆನಿಸ್ ಮ್ಯಡ್ರಿಡ್ ನಗರಗಳ ಪ್ರದರ್ಶನ ಶಾಲೆಗಳಲ್ಲಿಯೂ ಮತ್ತೆ ಕೆಲವು ವಿಯನ್ನ, ಪಾರಿಸ್, ಮುಂತಾದ ಐರೋಪ್ಯ ದೇಶಗಳ ರಾಜಧಾನಿಗಳಲ್ಲಿಯೂ ಇವೆ. ಇವನ ಚಿತ್ರಗಳಲ್ಲಿ "ಬೇಕನ್ ಮತ್ತು ಅರಿಯಾನೆ," ವೆನಿಸ್ ನಗರದ ಶಾಂತಾ ಮೇರೀಯಾ ದೇವಾಲಯದಲ್ಲಿರುವ "ಅಸಂಷನ್", ಈತನು ೧೫೩೪ ನೇ ಇಸವಿಯಲ್ಲಿ ಚಿತ್ರಿಸಿದ 'ವೀನಸ್ ಮತ್ತು ಅಡೋನಿಸ್', ೧೫೩೫ ನೇ ಇಸವಿಯಲ್ಲಿ ಬರೆದ "ಡಯೊನಾ ಮತ್ತು ಕ್ಯಾಲಿಯಿಷ್ಟೊ," "ಸೇಕ್ರೆಡ್ ಮತ್ತು ಪ್ರೊಫೆನ್ ಲವ್"

(Sacred and Profane love) "ಎಂಬ ಚಿತ್ರಗಳು ಬಹಳ ಪ್ರಖ್ಯಾತವಾಗಿವೆ. ಭಾವಚಿತ್ರಗಳಲ್ಲಿ ಅರಿಯೋಸ್ಟೋ ಫ್ಲೋರ (Flora)", ಮ್ಯಾಗ್ಡಾಲೀನ್ (Magdalene) ಐದನೇಯ ಚಾರ್ಲ್ಸ್ ಮುಂತಾದುವು ಬಹಳ ಪ್ರಖ್ಯಾತವಾಗಿವೆ. ಟಿಟಿಯನ್ನನು ತೊಂಭತ್ತೊಂಭತ್ತನೆಯ ವರ್ಷದ ವರೆಗೂ ಧೃಢ ಕಾಯವಾಗಿ ದೇಹಾರೋಗ್ಯವನ್ನು ಅನುಭವಿಸಿ ಎಲ್ಲರಿಂದಲೂ ಗೌರವಿಸಲ್ಪಟ್ಟು ೧೫೭೬ ನೆಯಇಸವಿ ಆಗಷ್ಟು ೨೭ರಲ್ಲಿ ವೆನಿಸ್ ನಗರದಲ್ಲಿ ಪ್ಲೇಗಿನಿಂದ ಮೃತ ಪಟ್ಟನು. ಆಗಿನ ಕಾಲದಲ್ಲಿ ಪ್ಲೇಗಿನಿಂದ ಸತ್ತವರನ್ನು ದೇವಾಲಯಗಳಲ್ಲಿ ಹೂಳುತ್ತಿರಲಿಲ್ಲ. ಆದರೂ ಕೃತಜ್ಞತಾ ಪರರಾದ ವೆನಿಸ್ ನಗರದ ಪ್ರಮುಖರು ಈತನ ಶವಕ್ಕೆ ತಕ್ಕ ಮರ್ಯಾದೆಗಳನ್ನು ಮಾಡಿ ಇವನ ಭಕ್ತಿಗೆ ಪಾತ್ರವಾಗಿದ್ದ ಶಾಂತಾ ಮೇರಿಯಾ ಎಂಬ ದೇವಸ್ಥಾನದಲ್ಲಿ ಲೋಕ ಪ್ರಸಿದ್ಧವಾದ ಈತನ "ಅಶಂಪ್ಷನ್" ಎಂಬ ಚಿತ್ರದ ಸವಿಾಪದಲ್ಲಿಯೇ ಈತನ ಶವವನ್ನು ಮಣ್ಣು ಮಾಡಿ ಇವನ ಅತ್ಮತೃಪ್ತಿ ಮಾಡಿದರು.

ವೆನಿಸ್ ನಗರದ ಚಿತ್ರಕಾರರೆಲ್ಲರೂ ವರ್ಣಗಳಲ್ಲಿ ಬಹಳ ಪ್ರಖ್ಯಾತಿಯನ್ನು ಪಡದಿದ್ದಾರೆ. ಬರೆದಿರುವ ಚಿತ್ರಗಳಲ್ಲೆಲ್ಲಾ ಇವರು ಪ್ರಕಾಶಮಾನವಾದ ಬಣ್ಣಗಳನ್ನು ಉಪಯೋಗಿಸಿರುವುದಲ್ಲದೆ ಎಲ್ಲಾ ಚಿತ್ರಗಳಲ್ಲಿಯೂ ಹೇಮವರ್ಣವನ್ನು (Golden Colour) ವಿಶೇಷವಾಗಿ ಉಪಯೋಗಿಸಿ ಚಿತ್ರಗಳು ಮನಮೋಹಿಸುವಂತೆ ಮಾಡಿದ್ದಾರೆ. ಈ ಚಿತ್ರಕಾರರೆಲ್ಲರೂ ಅನೇಕ ವಿಧವಾದ ಬಣ್ಣಗಳನ್ನು ಉಪಯೋಗಿಸದೆ ಕೊಂಚ ವರ್ಣಗಳಿಂದಲೇ ಹೃದಯಾಗಮವಾಗುವರೀತಿಯಿಂದ ಚಿತ್ರಿಸಿ ವಿಖ್ಯಾತರಾಗಿದ್ದಾರೆ. ಎಲ್ಲರಂತೆಯೇ ಟಿಟಿಯನ್ನನೂ ತನ್ನ ಚಿತ್ರಗಳಲ್ಲಿ ತರಹೇವಾರಿ ಬಣ್ಣಗಳನ್ನು ಉಪಯೋಗಿಸದೆ ಕೊಂಚ ಬಣ್ಣಗಳನ್ನೇ ಉಪಯೋಗಿಸಿ, ಅವುಗಳಲ್ಲೆ ಪರಿಪೂರ್ಣವಾದ ಸೊಬಗುಂಟಾಗುವಂತೆ ಮಾಡಿದ್ದಾನೆ. ಈತನು ಕೆಲವು ಚಿತ್ರಗಳಲ್ಲಿ ಆರು ಬಣ್ಣಗಳಿಗಿಂತ ಹೆಚ್ಚಾಗಿ ಉಪಯೋಗಿಸಿಲ್ಲ. "ಕ್ರೌನಿಂಗ್ ವಿತ್ ಥಾರನ್ಸ್" ಎಂಬ ಚಿತ್ರವನ್ನು ಬರೆಯುವಾಗ ಈತನು ನಾಲ್ಕೇ ತರಹ ಬಣ್ಣಗಳನ್ನು ಉಪಯೋಗಿಸಿದನಂತೆ !

ಕೊರಿಜಿಯೋ, ವೆರೋನೀಸ್, ರೂಬೆನ್ಸ್, ರೆಂಬ್ರೆಂಟ್ ಮುಂತಾದ ಚಿತ್ರಗಾರರಂತೆಯೇ ಈತನು ತನ್ನ ಚಿತ್ರಗಳಲ್ಲಿ ವಿಶೇಷವಾಗಿ ಗೆರೆಗಳನ್ನು ತೋರಿಸದೆ ವರ್ಣಗಳ ಮಚ್ಚೆಗಳಿಂದಲೇ ವ್ಯಕ್ತಿಗಳನ್ನು ಒಂದರಿಂದ ಮತ್ತೊಂದಕ್ಕೆ ಪ್ರತ್ಯೇಕಿಸಿದ್ದಾನೆ. "ಡಯಾನಾ ಮತ್ತು ಕ್ಯಾಲಿಯಿಸ್ಟೋ ಅಥವಾ ಬೇಕಸ್" ಮತ್ತು ಅರಿಯಾನೆಯನ್ನು ನೋಡಿದರೆ ವ್ಯಕ್ತಿಗಳು ಒಂದೊಂದೂ ಮತ್ತೊಂದರಿಂದ ವರ್ಣಗಳ ಮಚ್ಚೆಗಳಿಂದ ವಿಭಾಗಿಸಲ್ಪಟ್ಟವೆಯೇಹೊರತು ಗೆರೆಗಳಿಂದ ಪ್ರತ್ಯೇಕಿಸಲ್ಪಟ್ಟಂತೆ ಕಾಣುವುದಿಲ್ಲ.

ಈತನ ಚಿತ್ರರಚನೆಯ ಕ್ರಮವು ಬಹಳ ವಿಚಿತ್ರ ವಾದದ್ದು. ಅನೇಕ ವ್ಯಕ್ತಿಗಳನ್ನು ಜೋಡಿಸಿ ಅನುರೂಪವಾದ ಚಿತ್ರವನ್ನು ರಚಿಸುವುದರಲ್ಲಿ ಟಿಟಿಯನ್ನನೇ ಅದ್ವಿತೀಯನಾದವನು. ಈತನ 'ವೀನಸ್ ಮತ್ತು ಅಡೋನಿಕ್' ಎಂಬ ಚಿತ್ರದ ಕ್ರಮವು ಅನೇಕ ನಕ್ಷತ್ರ ರೂಪಗಳನ್ನೊಳಗೊಂಡ ಮೊಟ್ಟೆಯಂತಿದೆ. ಮೊಟ್ಟೆಯಾಕಾರವು ಚಿತ್ರದ ಮುಖ್ಯ ಪಾತ್ರಗಳನ್ನೆಲ್ಲಾ ಒಳಗೊಂಡು ಎಲ್ಲವನ್ನೂ ಏಕೀಕರಿಸಿ ನಮ್ಮ ದೃಷ್ಟಿಯು ಚಿತ್ರದಮೇಲಿರುವಂತೆ ಮಾಡುತ್ತದೆ. ಈ ಗೋಳದ ಒಳಗಡೆ ಯಿರುವ ನಕ್ಷತ್ರ ರೂಪಗಳು ದೃಷ್ಟಿಯನ್ನು ಚದುರಿಸಿ ಒಂದು ವ್ಯಕ್ತಿ ಯಿಂದ

ಮತ್ತೊಂದಕ್ಕೆ ಓಡಿಸಿ ದೃಷ್ಟಿಯು ಎಲ್ಲಾ ವ್ಯಕ್ತಿಗಳ ಮೇಲೆ ಬೀಳುವಂತೆ ಮಾಡುತ್ತವೆ. ಈ ರೀತಿಯಿಂದ ಟಿಟಿಯನ್ನನು ತನ್ನ ಚಿತ್ರಗಳಲ್ಲಿರುವ ವಿಶೇಷ ವ್ಯಕ್ತಿಗಳಿಗೆ ಪರಸ್ಪರ ಸಂಬಂಧವನ್ನುಂಟುಮಾಡಿ ಎಲ್ಲಾ ವ್ಯಕ್ತಿಗಳೂ ಅತ್ಯವಶ್ಯಕವಾಗಿರುವಂತೆ ಮಾಡಿ ವ್ಯಕ್ತಿಗಳಿಂದ ತುಂಬಿತುಳುಕತ್ತಿರುವ ಚಿತ್ರಗಳಿಗೆ ತನ್ನ ಹೊಂದಿಕೆಯನ್ನು ತಂದಿರುತ್ತಾನೆ. ಈತನ 'ಡಯಾನಾ ಮತ್ತು ಕ್ಯಾಲಿಯಸ್ಟೋ' ಚಿತ್ರವೂ ಹೀಗೆಯೇ ಇದೆ.

ಈತನ "ಬೇಕಸ್ ಮತ್ತು ಅರಿಯಾನೆ" ಎಂಬ ಚಿತ್ರವು ಇನ್ನೂ ವಿಚಿತ್ರವಾಗಿದೆ. ಈ ಚಿತ್ರದಲ್ಲಿ ಮ್ಲೇಚ್ಛ ದೇವತೆಯಾದ ಬೇಕಸ್ಸನು ತನ್ನ ಪರಿವಾರಗಳಿಂದೊಡಗೂಡಿ ಅರಿಯಾನೆಯನ್ನು

ಬೇಕಸ್ ಮತ್ತು ಅರಿಯಾನೆ.

ಸಮಾಧಾನ ಪಡಿಸಲಿಕ್ಕೆ ಹೊರಟಂತೆ ತೋರಿಸಿದೆ. ಈ ಚಿತ್ರದ ಅನೇಕ ವ್ಯಕ್ತಿಗಳು ಬಾಗಿದ ಬಿಲ್ಲಿನ ಕ್ರಮದಲ್ಲಿ ಜೋಡಿಸಲ್ಪಟ್ಟು ಪರಸ್ಪರ ಸಂಬಂಧವುಳ್ಳವುಗಳಾಗಿವೆ. ಈ ಬಿಲ್ಲಿನ ರೇಖೆಯು ಅರಿಯಾನೆಯ ಎಡಕೈಯ್ಯಿಂದ ಹೊರಟು ಬೇಕಸ್ಸಿನ ಎಡಭುಜದ ಮೇಲಿರುವ ವಸ್ತ್ರದ ಮೇಲೆ ಹರಿದು ತಮಟೆಯನ್ನಿಟ್ಟುಕೊಂಡು ನರ್ತಿಸುತ್ತಿರುವ ಹೆಣ್ಣು ವ್ಯಕ್ತಿಯ ಮೂಲಕ ಹರಿದು ಕರುವಿನ ಕಾಲನ್ನು ಹಿಡಿದುಕೊಂಡು ಬಲಗಡೆ ಕುಣಿಯುತ್ತಿರುವ ವ್ಯಕ್ತಿಯ ಕಡೆಗೆ ಬರುತ್ತದೆ. ಕೆಳಭಾಗದಲ್ಲಿ ಅರಿಯಾನೆ ಬಲಪಾದದಿಂದ ಹೊರಟ ರೇಖೆಯು ರಥದಿಂದ ಧುಮುಕುತ್ತಿರುವ ಬೇಕಸ್ಸಿನ ಒಲ ಅಂಗುಷ್ಟಕ್ಕೆ

ತಗಲಿ ಅಲ್ಲಿಂದ ಬಲಗಡೆಯಿರುವ ವ್ಯಕ್ತಿಗಳ ಮಾರ್ಗವಾಗಿ ಕೆಳಕ್ಕೆ ಬರುತ್ತದೆ. ಅದೂ ಅಲ್ಲದೆ ನೊಟ್ಟಿಯಂತಿರುವ ಮತ್ತೊಂದು ರೇಖೆಯು ಅರಿಯಾನೆ ಬಲಪಾದದಿಂದ ಕೆಳಗೆ ಬಿದ್ದಿರುವ ವಸ್ತ್ರ ಮತ್ತು ಅದರ ಪಕ್ಕದಲ್ಲಿ ಬೊಗಳುತ್ತ ನಿಂತಿರುವ ನಾಯಿಯ ಮಾರ್ಗವಾಗಿ ಹರಿದು ಕೆಳಗೆ ಬಿದ್ದಿರುವ ಬಳ್ಳಿಗಳನ್ನು ಅನುಸರಿಸಿ ಸರ್ಪಾಲಂಕಾರಮಾಡಿಕೊಂಡಿರುವ ವ್ಯಕ್ತಿಯ ಎರಡು ಪಾದಗಳನ್ನು ಮುಟ್ಟಿ ಕರುವಿನ ಕಾಲನ್ನು ಹಿಡಿದಿರುವ ಎಡಪಾದದಿಂದ ಚಿತ್ರದ ಹೊರಗೆ ಹೊರಟು ಪುನಃ ಅದೇ ವ್ಯಕ್ತಿಯ ಬೆನ್ನಿನ ಮೂಲಕ ಚಿತ್ರದೊಳಕ್ಕೆ ಹರಿದು ತಮಟೆಯೆನ್ನು ಬಾರಿಸುತ್ತಿರುವ ಹೆಂಗಸಿನ ತಲೆಯ ಮೇಲೆ ಬಂದು ಬೇಕಸ್ಸಿನ ಭುಜದ ಮೇಲಿರುವ ವಸ್ತ್ರಗಳ ಸುಕ್ಕುಸುಗಳ ಮಾರ್ಗವಾಗಿ ಆತನ ತಲೆಯನ್ನು ಆವರಿಸಿ ಅರಿಯಾನೆಯ ತಲೆಯನ್ನು ಸೇರಿ ಅಲ್ಲಿಂದ ಹೊರಟು ಪುನಃ ಅವಳ ಬಲಹಿಮ್ಮಡಿಗೆ ಬಂದು ಒಂದು ದೊಡ್ಡ ಗೋಳವನ್ನು ರಚಿಸಿ ಚಿತ್ರದ ವ್ಯಕ್ತಿಗಳನ್ನೆಲ್ಲಾ ಏಕೀಕರಿಸುತ್ತದೆ. ಜುಗುಪ್ಸೆಯನ್ನು ಹೋಗಲಾಡಿಸುವುದಕ್ಕಾಗಿ ಈತನು ಗೋಳದಿಂದ ಎರಡು ಮರಗಳು ತಲೆಯತ್ತಿಕೊಂಡಂತೆ ತೋರಿಸಿ ಆಗಬ ಹುದಾಗಿದ್ದ ಜುಗುಪ್ಸೆಯನ್ನು ಮರೆಮಾಚಿದ್ದಾನೆ. ಚಿತ್ರದಲ್ಲಿ ಒಂದು ಕಾಲು ವಿನಹ ಮತ್ತೆಲ್ಲವೂ, ಚಲನೆಯನ್ನು ತೋರಿಸಿ ಬೇಕಸ್ಸಿನ ವಿಹಾರವನ್ನು ವಿವರವಾಗಿ ತೋರಿಸುತ್ತವೆ. ಅರಿಯಾನೆಯಾದರೋ ಬೇಕಸ್ಸಿನ ಲೀಲೆಗಳಿಗೆ ನಾಚಿ ಅತ್ತಕಡೆ ತಿರುಗಿರುತ್ತಾಳೆ. ಚಿತ್ರದ ಮಧ್ಯದಲ್ಲಿ ನೆಟ್ಟಗಿರುವ ಕಾಲಾದರೋ ನಡೆಯುತ್ತಿರುವ ಮ್ಲೇಚ್ಛನರ್ತನವನ್ನು ಮಿತಿಮೀರದಂತೆ ಹಿಡಿದು ನಿಲ್ಲಿಸಿ ನಾಟ್ಯವು ಎಲ್ಲೆಯಲ್ಲಿರುವಂತೆ ಮಾಡಿ ಪ್ರೇಕ್ಷಕರಿಗೆ ಸಮಾಧಾನವನ್ನುಂಟುಮಾಡುತ್ತದೆ. ಈ ಕಾಲು ಮಾತ್ರ ನೆಟ್ಟಗಿಲ್ಲದೆ ಹಾರಾಡುವಂತೆ ತೋರಿಸಿದ್ದರೆ ವ್ಯಕ್ತಿಗಳೆಲ್ಲವೂ ಅಲ್ಲೋಲಕಲ್ಲೋಲವಾದಂತೆ ಕಂಡು ಚಿತ್ರದ ಮುಖ್ಯ ಉದ್ದೇಶವೇ ಪ್ರೇಕ್ಷಕರ ಮನಸ್ಸಿಗೆ ಬಾರದೆ ನೋಡುವುದಕ್ಕಸಾಧ್ಯವಾಗುತ್ತಿತ್ತು. ಮೇಲೆಯೇ ಹೇಳಿದಂತೆ ಈ ಚಿತ್ರದಲ್ಲಿರುವ ವ್ಯಕ್ತಿಗಳೆಲ್ಲವೂ ಚಲನೆಯಲ್ಲಿವೆ. ಮಾನುಷ ವ್ಯಕ್ತಿಗಳು ಮಾತ್ರವಲ್ಲದೆ ಅದರಲ್ಲಿರುವ ಜೀವಜಂತುಗಳೂ ಪ್ರಕೃತಿಯೂ (Nature) ಚಲನೆಯಲ್ಲಿದ್ದಂತಿವೆ. ಚಿತ್ರದ ಕೆಳಪಾರ್ಶ್ವದಲ್ಲಿ ಇರುವ ಮಗುವನ್ನು ನೋಡಿ ಆನಂದದಿಂದ ನಲಿಯುತ್ತಲಿರುವ ಮಗುವು ತನ್ನ ಕೈಯಲ್ಲಿ ಹಿಡಿಡುಕೊಂಡಿರುವ ದಾರದ ಮೂಲಕ ಅದರ ಕೊನೆಯಲ್ಲಿರುವ ಕರುವಿನ ರುಂಡವನ್ನು ಎಳದುಕೊಂಡು ಆ ರುಂಡಕ್ಕೂ ಚಲನೆಯನ್ನು ಕೊಟ್ಟಂತೆ ಮಾಡುತ್ತದೆ. ಹೀಗೆಯೇ ಬಗುಳುತ್ತಿರುವ ನಾಯಿಯೂ, ಮಿನುಗುಟ್ಟುತ್ತಿರುವ ಚಿರತೆಗಳೂ ಮನುಷ್ಯನಮೇಲೆ ಹರಿದಾಡುತ್ತಿರುವ ಸರ್ಪಗಳೂ ಚಲನೆಯನ್ನು ತೋರಿಸುತ್ತವೆ. ಎಡಗಡೆ ಅಂತರಿಕ್ಷದಲ್ಲಿ ತೇಲಾಡುವ ಮೇಘಗಳೂ ಬಲಗಡೆಯಲ್ಲಿ ಅಲ್ಲಾಡುತ್ತಿರುವ ಗಿಡಬಳ್ಳಿಗಳೂ ತಮ್ಮ ತಮ್ಮ ಚಲನೆಯಿಂದ ಪ್ರಕೃತಿಯೂ ಸಹಾ ಈ ನರ್ತನದಲ್ಲಿ ಭಾಗಿಯಾಗಿದ್ದಂತೆ ತೋರಿಸುತ್ತವೆ. ಕೆಳಗೆ ಬಿದ್ದಿರುವ ಸೋಪಾನವ ಬಟ್ಟಲುಗಳಿಗೆ ಚಲಿಸುವ ಬಟ್ಟಿಯಮೇಲೆ ಬಿದ್ದು ತಾನೂ ಉರುಳಾಡುವಂತೆ ಕಾಣುತ್ತದೆ.

ಈ ಚಿತ್ರದಲ್ಲಿ ಅರಿಯಾನೆ ಬೇಕಸ್ಸುಗಳೇ ಮುಖ್ಯ ವ್ಯಕ್ತಿಗಳು. ಅದರಲ್ಲೂ ಚೇಕಸ್ಸೇ ಬಹು ಮುಖ್ಯವಾದವನು. ಚಿತ್ರದಲ್ಲಿರುವ ವ್ಯಕ್ತಿಗಳೆಲ್ಲವೂ ಮರಗಿಡಗಳೂ ಆತನ ಕಡೆಗೆ ಓರೆಯಾಗಿ ನಮ್ಮ ದೃಷ್ಟಿಯನ್ನು ಆತನ ಕಡೆಗೆಳೆಯುತ್ತವೆ. ಬೇಕಸ್ಸಿನಮೇಲೆ ಬಿದ್ದ ಗಮನವು ಅವನ ನೋಟದ ಮೂಲಕ ಎಡಗಡೆಯಲ್ಲಿರುವ ಅರಿಯಾನೆಯ ಕಡೆಗೆ ಬೀಳುತ್ತದೆ. ಅರಿಯಾನೆಯ ಮುಂಡಿಯ ರೀತಿಯನ್ನು ನೋಡಿ. ಅದು ಮುಖ್ಯ ವ್ಯಕ್ತಿಯ ಕಡೆಗೆ ನಮ್ಮ ದೃಷ್ಟಿಯನ್ನೆಳೆದು ಪುನಃ ಅವನ ನೋಟದ ಮೂಲಕವೂ ಆತನ ಬಾಗುವಿಕೆಯ ಲಕ್ಷಣದಿಂದಲೂ ಅವಳಮೇಲೆ ಬೀಳುವಂತೆ ಮಾಡುತ್ತದೆ.

ಹೀಗೆ ನೋಟವು ಅರಿಯಾನೆಯಿಂದ ಬೇಕಸ್ಸಿಗೂ, ಬೇಕಸ್ಸಿನಿಂದ ಅರಿಯಾನೆಗೂ ಪರಸ್ಪರಬಿದ್ದು ಅವ ರಿಬ್ಬರಿಗೆ ಪ್ರಾಮುಖ್ಯತೆಯನ್ನು ಕೊಡುತ್ತದೆ. ಬೇಕಸ್ಸಿನ ಮೂರ್ತಿಯು ಬಹು ಸುಂದರವಾದದ್ದು. ಈತನ ಸುಂದರವಾದ ಮುಖದ ಸುತ್ತಲೂ ಗುಂಗುರು ಗುಂಗುರಾದ ಕೂದಲಿರುವಂತೆಯೂ ಆತನ ಭುಜಗಳ ಪಾರ್ಶ್ವದಲ್ಲಿಯೂ ಮತ್ತು ಬಲಾಢ್ಯವಾದ ಕೈಗಳಸುತ್ತಲೂ ಬಟ್ಟೆಯಿರುವಂತೆಯೂ ತೋರಿಸಿ ಈತನ ಸುಂದರವಾದ ರೂಪವನ್ನು ವಿಂಗಡಿಸಿ ಬೇಕಸ್ಸಿನಸೌಂದರ್ಯವು ನೋಟಕರ ಹೃದಯಂಗಮ ವಾಗುವಂತೆ ಚಿತ್ರಕಾರನು ಬಹು ಚಮತ್ಕಾರವಾಗಿ ಈತನನ್ನು ಚಿತ್ರಿಸಿದ್ದಾನೆ. ಅರಿಯಾನೆಮೇಲೆ ಕನಿಕರದಿಂದ, ಸುದಾರಿಸಲು ಹಾರಿಬರುತ್ತಿರುವ ಈತನ ಬಲಗಾಲು ಬಹಳ ಚಮತ್ಕಾರದಿಂದ ಚಿತ್ರಿಸ ಲ್ಪಟ್ಟಿದೆ. ಈತನ ಪಾದವು ಈಗ ಕಾಣಬರುವ ಸ್ಥಳದಲ್ಲಿರದೆ ಕೊಂಚ ಮೇಲಕ್ಕಿದ್ದಿದ್ದರೆ ಗಾಡಿಯ ಚಕ್ರದಮೇಲೆ ಬೇಕಸ್ಸನು ನಿಂತುಕೊಂಡಿದ್ದಂತೆ ಕಂಡು ಈತನು ಹಾರಿಬರುವ ರಭಸವನ್ನೇ ಹೋಗಲಾ ಡಿಸುತ್ತಿತ್ತು. ಅಥವಾ ಕಾಲನ್ನು ಇನ್ನೂಕೆಳಗೆ ಬರದಿದ್ದರೆ ಚಕ್ರದ ಕುಂಭದಮೇಲೆ ಈತನು ನಿಂತಿ ದ್ದಂತೆ ಕಂಡು ಚಿತ್ರದ ಲಕ್ಷಣವನ್ನೇ ಹಾಳುಮಾಡುತ್ತಿತ್ತು. ಈತನ ಹರಡಿರುವ ಕೈಗಳೂ ಹಾರಿ ಬರುವ ಕಾಲುಗಳೂ, ಬಾಗಿದ ತಲೆಯೂ, ಪೋರೆಯಾಗಿರುವ ಈತನ ಶರೀರವೂ ಈತನು ಕುತೂಹಲ ದಿಂದ ಅರಿಯಾನೆ ಕಡೆಗೆ ಹಾರಿಬರುತ್ತಿರುವುದನ್ನು ವಿಶದವಾಗಿ ತೋರಿಸುತ್ತವೆ. ಈತನ ಎಡಗೈ ಹಿಂದಕ್ಕೆ ತೋರಿಸುತ್ತಾ ನಮ್ಮ ದೃಷ್ಟಿಯನ್ನು ಹಿಂದಕ್ಕೆ ಮರಗಳ ಮೇಲೆ ಯಳೆದು ನಮ್ಮ ದೃಷ್ಟಿಯು ಬೇಕಸ್ಸಿನಿನಮೇಲೆ ನಿಲ್ಲದಂತೆ ಹಿಂದೆ ಕಾಣಬರುವ ಪ್ರದೇಶಗಳ ಕಡೆಗೆ ಎಳೆಯುವಂತೆ ಕಾಣು ತ್ತದೆ. ಆದರೆ ಈ ಆಭಾಸವನ್ನು ಹೋಗಲಾಡಿಸುವುದಕ್ಕಾಗಿ ಚಿತ್ರಕಾರನು ಬೇಕಸ್ಸಿನ ಭುಜದಮೇಲೆ ಹಾರಾಡುತ್ತಿರುವ ವಸ್ತ್ರವನ್ನು ಸೇರಿಸಿ ದೃಷ್ಟಿಯು ವಸ್ತ್ರದ ಸುಳಿಗಳ ಮೂಲಕ ಚಿತ್ರದ ಮುಖ್ಯವ್ಯಕ್ತಿ ಗಳ ಮೇಲೆ ಬೀಳುವಂತೆ ಮಾಡಿರುತ್ತಾನೆ. ಈ ವಸ್ತ್ರದ ಸುರುಳಿಗಳೆಲ್ಲವೂ ಬಾಗಿ ಕೆಳಗಿರುವ ವ್ಯಕ್ತಿಗಳ ಕಡೆ ತಿರುಗಿರುವಂತೆ ಮಾಡಿರುವುದಲ್ಲದೆ ಚಿತ್ರಕಾರನು ಆ ವಸ್ತ್ರಕ್ಕೆ ವಿಜೃಂಭಣೆಯಿಂದ ಬಣ್ಣಗಳನ್ನು ಹಾಕಿ ಮನಸ್ಸು ಅಲ್ಲಿಯೇ ನಿಲ್ಲುವಂತೆ ಮಾಡಿರುತ್ತಾನೆ. ಹೀಗೆಯೇ ಅರಿಯಾನೆಯೂ ಬಹುಚಮತ್ಕಾರದಿಂದ ಚಿತ್ರಿಸಲ್ಪಟ್ಟಿದ್ದಾಳೆ. ಬೇಕಸ್ಸಿನ ವಿಲಾಸಗಳಿಗೆ ನಾಚಿಕೆಪಟ್ಟು ಆತನ ದೃಷ್ಟಿ ಯಿಂದ ಮತ್ತೊಂದು ಕಡೆಗೆ ಓರೆಯಾಗುವ ಹೆಂಗಸನ್ನು ಎಷ್ಟು ಚೆನ್ನಾಗಿಚಿತ್ರಿಸಿದೆ! ಅವಳ ಬೆನ್ನಿನ ಮೇಲೆ ಬಿದ್ದಿರುವ ಸುರುಳಿಗಳೆಲ್ಲವೂ ಅವಳು ಶರೀರವನ್ನು ತಿರುಗಿಸುತ್ತಿರುವ ರಭಸವನ್ನು ತೋರಿಸಿ ಅವಳ ನಾಚಿಕೆಯನ್ನು ವ್ಯಕ್ತಪಡಿಸುತ್ತವೆ. ಈ ಸುರುಳಿಗಳ ಮೂಲಕವೇ ಬೇಕಸ್ಸಿನ ದೃಷ್ಟಿಪಥವು ಇವಳನ್ನು ಮುಟ್ಟಿ ತೊಡೆಯಮೇಲೆ ಹರಿದು ಎಡಗೈ ಮೂಲಕ ತಲೆಯನ್ನು ತಲಪಿ ಅವಳ ಶರೀರ ವನ್ನೆಲ್ಲಾ ಆವರಿಸುತ್ತದೆ. ಅವಳ ರಭಸವನ್ನು ತೋರಿಸುವ ಕಾಲೂ, ಅವಳತಿರುಗುವಿಕೆಯ ರೀತಿ ಯನ್ನು ವ್ಯಕ್ತಪಡಿಸುವ ಬಲ ಹಸ್ತವೂ ಬಹು ಚಮತ್ಕಾರವಾಗಿವೆ.

ಇನ್ನು ಉಳಿದ ವ್ಯಕ್ತಿಗಳ ವಿಷಯವಾಗಿಯೂ ಚಿತ್ರದಲ್ಲಿ ತೋರಿಸುವ ವಿವಿಧ ಪದಾರ್ಥ ಗಳ ವಿಷಯವಾಗಿಯೂ ಹೇಳಬೇಕಾಗಿದೆ. ಚಿತ್ರದಲ್ಲಿ ಕಾಣಬರುವ ರಥವೂ ಅದಕ್ಕೆ ಕಟ್ಟಿರುವ ಚಿರತೆಗಳೂ ಸ್ವಲ್ಪವಾರೆಯಾಗಿದ್ದಂತೆ ಕಾಣುತ್ತವೆ. ಈ ರೀತಿ ಅವ್ಯಗಳಿಲ್ಲದಿದ್ದರೆ ಅವುಗಳಿಗೆ ಅನು ಚಿತವಾದ ಪ್ರಾಮುಖ್ಯತೆ ಬಂದಿರುವುದಲ್ಲದೆ ರಥದ ಚಕ್ರಗಳು ಚಿತ್ರದ ಮಧ್ಯಕ್ಕೆ ಸರಿಯಾಗಿಕಂಡು ಚಿತ್ರದ ಮಧ್ಯದಲ್ಲಿ ಒಂದು ದೊಡ್ಡರಂಧ್ರವಿದ್ದಂತೆ ಕಂಡು ನೋಡಲಸಹ್ಯವಾಗುತ್ತಿತ್ತು. ಚಿತ್ರದಲ್ಲಿ ಕಾಣಬರುವ ಹುಡುಗನೂ ಅವನೆದುರಾಗಿರುವ ನಾಯಿಯೂ ಚಕ್ರದ ಅನುಚಿತವಾದ ಭಾಗಗಳನ್ನು

ನೋಟಕರ ದೃಷ್ಟಿಯಿಂದ ಮುಚ್ಚಿ ಚಿತ್ರವು ಸಮರ್ಪಕವಾಗಿರುವಂತೆ ಮಾಡುತ್ತವೆ. ಸುತ್ತಮುತ್ತಲಿರುವ ವ್ಯಕ್ತಿಗಳ ಕೈಗಳಲ್ಲಿರುವ ತಮಟೆಯೂ, ತಾಳಗಳೂ, ಸರ್ಪಗಳೂ ಕರುವಿನರಂಡ ಅದರ ತೊಡೆಯೂ ಸುರಾಪಾನದ ಬಟ್ಟಲ್ಲಲ್ಲವೂ ಮ್ಲೇಚ್ಛದೇವತೆಗಳ ಕ್ರೀಡಾ ಸಾಮಗ್ರಿಗಳನ್ನು ವಿಶದವಾಗಿ ತೋರಿಸುತ್ತವೆ. ಹಿಂದುಗಡೆ ಕಾಣಬರುವ ಗಿಡಗಳ ಕೊಂಬೆಗಳೂ ಅಂತರಿಕ್ಷದಲ್ಲಿ ತೇಲಾಡುತ್ತಿರುವ ಮೇಘಗಳೂ ಚಿತ್ರದಲ್ಲಿ ಕಾಣಬರುವ ವ್ಯಕ್ತಿಗಳ ನರ್ತನವನ್ನು ಅನುಮೋದಿಸುವಂತೆ ಕಾಣುತ್ತವೆ. ವ್ಯಕ್ತಿಗಳನ್ನು ಜೋಡಿಸುವುದರಲ್ಲಿ ಪುರುಷರನ್ನೂ ಸ್ತ್ರೀಯರನ್ನೂ ಒಬ್ಬರಾದಮೇಲೆ ಮತ್ತೊಬ್ಬರನ್ನು ಜೋಡಿಸಿ ಪರಸ್ಪರ ಬೇಧಗಳಿಂದ ಸ್ತ್ರೀಶರೀರದ ಸೌಂದರ್ಯವನ್ನು ಪುರುಷನ ದೃಢಕಾಯತೆಯನ್ನು ತೋರಿಸುವಂತೆ ಮಾಡಿದೆ ಬೆಳಕು ವ್ಯಕ್ತಿಗಳ ಮೇಲೆ ಬಿದ್ದಿರುವದರಲ್ಲಿ ಕೂಡ ವಿಪರೀತ ವ್ಯತ್ಯಾಸವಿದೆ. ಮುಖ್ಯ ವ್ಯಕ್ತಿಯಾದ ಬೇಕಸ್ಸಿನ ಮೇಲೆ ಬಿದ್ದಿರುವಷ್ಟು ಬೆಳಕು ಮತ್ಯಾರಮೇಲೂ ಬೀಳದೆ ಅವುಗಳ ಮೇಲೆಲ್ಲಾ ಅನುಗುಣವಾಗಿ ಬಿದ್ದಿರುತ್ತೆ

ಟಿಟಿಯನ್ನನು ಅನೇಕ ವ್ಯಕ್ತಿಗಳಿಂದ ಮಿಳಿತವಾದ ಚಿತ್ರಗಳನ್ನು ಬರೆದುದಲ್ಲದೆ ಅನೇಕ ಭಾವ ಚಿತ್ರಗಳನ್ನೂ ಬರೆದಿದ್ದಾನೆ. ಇವುಗಳಲ್ಲೆಲ್ಲಾ ಮುಖ್ಯವಾದುವು "ಫ್ಲೋರ (Flora)," "ಮ್ಯಾಗ್ಡಲೀನ್ (Magdalene)," "ಅರಿಯೋಸ್ಟೊ (Ariosto)." ತನ್ನ ಭಾವಚಿತ್ರ ಮತ್ತು ಸ್ಪೇನ್ ದೇಶದ ಫೊರೆಯಾದ ಐದನೇ ಚಾರ್ಲ್ಸ್‌ನ ಭಾವಚಿತ್ರ. ಟಿಟಿಯನ್ನನು ಯಾವಾಗಲೂ ಬಹು ಸುಂದರವಾದ ಪದಾರ್ಥಗಳನ್ನೇ ಬರೆಯುತ್ತಿದ್ದುದರಿಂದ ಈತನು ಬರೆದಿರುವ ಭಾವಚಿತ್ರಗಳಲ್ಲನೇಕವು ಆಗಿನ ಕಾಲದಲ್ಲಿ ಜೀವಿತರಾಗಿದ್ದ ವ್ಯಕ್ತಿಗಳ ಭಾವವನ್ನು ಹೋಲುವುದಿಲ್ಲ. ಹಾಗೆಯೇ ಈತನ "ಫ್ಲೋರ" "ಅರಿಯೋಸ್ಟೊ" "ಮ್ಯಾಗ್ಡಲೀನ್" ಚಿತ್ರಗಳಲ್ಲಿರುವ ವ್ಯಕ್ತಿಗಳು ಈತನ ಮನೋಭಾವದಲ್ಲಿದ್ದ ವ್ಯಕ್ತಿಗಳೇ ಹೊರತು ಆಗಿನ ಕಾಲದಲ್ಲಿದ್ದ ಜನರ ಭಾವಚಿತ್ರಗಳಲ್ಲ. ಆದರೂ ಈತನು ತಾನು ಬರೆದುದ್ದನ್ನೆಲ್ಲಾ ಚೆನ್ನಾಗಿ ಬರೆಯಬೇಕೆಂಬ ಧ್ಯೇಯದಿಂದ ಚಿತ್ರಗಳೆಲ್ಲವನ್ನೂ ಬಹು ಚಮತ್ಕಾರವಾಗಿ ಬರೆದು ಹೆಸರು ಪಡೆದಿದ್ದಾನೆ. 'ಮ್ಯಾಗ್ಡಲೀನ್' ಎಂಬ ಚಿತ್ರದಲ್ಲಿರುವ ವ್ಯಕ್ತಿಯ ಕೇಶಪಾಶಗಳ ಲೀಲೆಯೂ ಕಂಬನಿಗೈಯುತ್ತಿರುವ ಕಣ್ಣುಗಳ ರೀತಿಯೂ ಬಹಳ ವಿಚಿತ್ರವಾಗಿವೆ. ಭಾವಚಿತ್ರಗಳಲ್ಲಿ ಕಂಡದ್ದನ್ನು ಕಂಡಹಾಗೆ ತೋರಿಸುವುದರಲ್ಲಿ ಈತನು ಸ್ಪೇನ್ ದೇಶದ ಕಲಾವಿದನಾದ ವೆಲಾಸ್ಕ್ವೆಜ್‌ಗೆ ಸಮನಾಗಿಲ್ಲದಿದ್ದರೂ ತನ್ನ ಶೈಲಿಯ ವೈಭವದಲ್ಲಿಯೂ ಪರಿಪೂರ್ಣವಾದ ವರ್ಣಗಳ ವಿಲಾಸದಿಂದಲೂ ಈತನು ಪ್ರಪಂಚದ ಭಾವಚಿತ್ರಕಾರರಲ್ಲಿ ಅಗ್ರಗಣ್ಯನೆಂದು ಗಣಿಸಲ್ಪಟ್ಟಿದ್ದಾನೆ.

ವೆನಿಸ್ ನಗರದ ಚಿತ್ರಕಾರರು ಪ್ರಕೃತಿಯ (Landscape) ಚಿತ್ರಗಳಲ್ಲಿ ತಮ್ಮ ಎದುರಿಗೆ ಕಂಡಂತೆ ಕಂಡಹಾಗೆ ಬರೆಯದೆ ಸುಂದರವಾದ ವ್ಯಕ್ತಿಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಚಿತ್ರಗಳು ಸುಂದರವಾಗಿರುವಂತೆ ಮಾಡಿದ್ದಾರೆ. ಟಿಟಿಯನ್ನನೂ ಇದೇ ಪದ್ಧತಿಯನ್ನೇ ಹಿಡಿದು ತಾನು ಬರೆದಿರುವ ಪ್ರಕೃತಿಯ ಚಿತ್ರಗಳಲ್ಲೆಲ್ಲಾ ಸುಂದರವಾಗಿರುವಂತೆ ಗಿಡಬಳ್ಳಿಗಳನ್ನೂ ಮೇಘಗಳನ್ನೂ ಜೋಡಿಸಿ ಮನವಣಿಯುವಂತೆ ಮಾಡಿದ್ದಾನೆ. 'ಬೇಕಸ್ ಮತ್ತು ಅರಿಯಾನೆಯ' ಚಿತ್ರದಲ್ಲಿ ಕಾಣಬರುವ ಗಿಡಬಳ್ಳಿಗಳೂ ಮೇಘಗಳೂ ಚಿತ್ರದಲ್ಲಿ ಕಾಣಬರುವ ವ್ಯಕ್ತಿಗಳ ನರ್ತನಕ್ಕೆ ಅನುರೂಪವಾದ ಸ್ಥಳವನ್ನುಂಟುಮಾಡುವುದಲ್ಲದೆ ತಾವೇ ಬಹಳ ಸುಂದರವಾಗಿದ್ದು ಆನಂದವನ್ನುಂಟುಮಾಡುತ್ತವೆ. ಈ ಚಿತ್ರದಲ್ಲಿ ಕಾಣಬರುವ ಮರಗಳನ್ನು ನೋಡಿ. ಅವುಗಳು ತಮ್ಮ ಸುತ್ತುಮುತ್ತಲೂ ನಡೆಯುತ್ತಿರುವ ನರ್ತನದಲ್ಲಿ ಭಾಗಿಗಳಂತೆ ಸೊಂಟಗಳನ್ನು ಬಂಗಿಸಿಕೊಂಡಿರುವಂತೆ ಕಾಣಬರುತ್ತವೆ. ಉಳಿದ

ಗಿಡಬಳ್ಳಿಗಳೂ ಪೊದೆಗಳೂ ಚಿತ್ರದ ರಚನೆಯನ್ನು ಅನುಮೋದಿಸುವಂತಿವೆ. ಎಡಗಡೆ ಕಾಣಬರುವ ಮೇಘವೂ ಬಲಗಡೆ ಕಾಣಬರುವ ಗಿಡಗಳ ರೂಪವೂ ಒಂದೇ ವಿಧವಾಗಿದ್ದು ಚಿತ್ರಕ್ಕೆ ಸಮತೂಕವನ್ನು ಕೊಡುತ್ತವೆ. ಮೇಘಗಳಲ್ಲಿ ಒಂದೊಂದಕ್ಕೂ ಸಂಬಂಧವನ್ನುಂಟುಮಾಡುವುದಕ್ಕಾಗಿ ಮಾಡಿರುವ ಚಮತ್ಕಾರವು ಬಹು ವಿಚಿತ್ರವಾದುದು. 'ವೀನಸ್ ಮತ್ತು ಅಡೋನಿಸ್,' 'ಡಯಾನಾ ಮತ್ತು ಕ್ಯಾಲಿಯಿಸ್ಟೋ,' 'ಐದನೇ ಚಾರ್ಲ್ಸ್' ಇವುಗಳಲ್ಲಿ ಕಾಣಬರುವ ರೀತಿಯೂ ವಿಜೃಂಭಣೆಯಾಗಿದ್ದು ಚಿತ್ರಗಳಿಗೆ ಅನುಗುಣವಾಗಿವೆ.

"ದಿ ಅಸಂಪ್ಷನ್ ಆಫ್ ದಿ ವರ್ಜಿನ್"

(ಕಲಾವಿದನಾದ ಟಿಟಿಯನ್ನನು ಬರೆದುದು)

ಕಲಾ ಸ್ವರೂಪ.

ವೀರಕೇಸರಿ ಎಂ. ಸೀತಾರಾಮಶಾಸ್ತ್ರಿ.

ಸೃಷ್ಟಿಯಲ್ಲಿ ಸುಹೃದಯ ಹೃದಯಾಹ್ಲಾದಕರವಾದುದೆಲ್ಲಾ ಕಲೆಯೇ ಆಗಿದೆ. ಅದೆಲ್ಲಾ ಸೃಷ್ಟಿಕರ್ತನ ಕಲಾಕೌಶಲ್ಯದ ಆದರ್ಶನಗಳು. ಮಾನವನಲ್ಲಿಯೂ, ಆ ಕಲಾಕೌಶಲ್ಯವು ಸಹಜವಾಗಿ ಬಂದಿದೆ. ಆ ಸಹಜವಾದ ಭಾವದಿಂದಲೇ ಕಲಾಪ್ರೇಮವು ಹುಟ್ಟಿ, ಅದರಿಂದಲೇ ಕಲಾಕೌಶಲ್ಯದ ಚಿತ್ರ ವಿಚಿತ್ರ ಸೃಷ್ಟಿಯನ್ನು ಮಾನವನ್ನು ಮಾಡತೊಡಗುತ್ತಾನೆ. ಅದೂ ಆ ಸೃಷ್ಟಿ ಕರ್ತನ ಅಂಶವೇ !

ಹೀಗೆ ಸಹಜವಾಗಿ ಹುಟ್ಟಿಬಂದ ಕಲಾಶಕ್ತಿಯು ಸೃಷ್ಟಿಸೌಂದರ್ಯವನ್ನು ನಿರ್ಮಾಣ ಮಾಡುತ್ತದೆ. ಕಲೆಯನ್ನು ಕಲಿಯುವ ಪದ್ಧತಿಯೂ ಒಂದುಂಟು ! ಇದೇ ಉದ್ಯೋಗದಲ್ಲಿ ಪರಿಣಮಿಸುವ ಕಲಾಕೌಶಲ್ಯ ! ಸಹಜವಾದ ಕಲಾಶಕ್ತಿಯೇ ನಾಗರೀಕ ಜನಜೀವನದ ಜೀವಾಳ ! ಕಲಾಕೌಶಲ್ಯವೇ ಜೀವನದ ಪ್ರಸಾರ ! ಕೋಗಿಲೆಯ ನಾದವು ಸಹಜವಾದ ಕಲಾ ಶಕ್ತಿಯ ಸ್ವರೂಪ ! ಕೋಗಿಲೆಗೆ ಯಾರೂ ಗಾನವನ್ನು ಕಲಿಸಿ ಕೊಡಲೂ ಇಲ್ಲ ; ಕೋಗಿಲೆಯು ಕಲಿತು ಕೊಳ್ಳಲೂ ಇಲ್ಲ; ಅದು ಮತ್ತೊಬ್ಬರ ಮೆಚ್ಚಿಗೆಗಾಗಿ ಗಾನಮಾಡುವುದಿಲ್ಲ. ತನ್ನ ಆತ್ಮಾನಂದಕ್ಕಾಗಿ ಗಾನಮಾಡುತ್ತದೆ. ಸಂಗೀತಗಾರನು ಗಾನವನ್ನು ಕಲಿಯುತ್ತಾನೆ. ಅವನು ಮತ್ತೊಬ್ಬರ ಆನಂದಕ್ಕಾಗಿ ಹಾಡುತ್ತಾನೆ. ಅದು ಕಲಾ ಕೌಶಲ್ಯದ ಜೀವನ ಪ್ರಸಾರ. ಹಾಗೆಯೇ ಗುಲಾಬಿಯ ಹುವ್ವಿನ ಮನೋಹರವಾದ ಬಣ್ಣ, ಸೊಗಸಾದ ಸುವಾಸನೆ, ಇವು ಸೃಷ್ಟಿ ಕರ್ತನ ಕಲಾಶಕ್ತಿ ! ಚಿತ್ರಗಾರನು ಕೊಡುವ ಬಣ್ಣ, ಸುಗಂಧಕಾರಿಯು ಮಾಡುವ ಸುವಾಸನೆ, ಇವುಗಳು ಕಲಾ ಕೌಶಲ್ಯದ ಪ್ರಸಾರ !

ಜನಾಂಗದಲ್ಲಿ ಕಲಾ ಶಕ್ತಿಯು ಎಷ್ಟು ಬೆಳೆಯುತ್ತದೋ, ಆ ಜನಾಂಗದ ಮನೋಭಾವವು ಅಷ್ಟು ಪರಿಪಕ್ವವಾಗುತ್ತದೆ. ಆ ಕಲಾಶಕ್ತಿ ಮತ್ತು ಮನೋಭಾವದ ಪರಿಣಾಮ ಇವೇ ನಾಗರೀಕತೆಯ ಸ್ವರೂಪ ! ಕಲಾಕೌಶಲ್ಯದ ಪ್ರಸಾರವೇ ನಾಗರೀಕತೆಯ ಬೆಳವಣಿಗೆ. ಯಾವ ಜನಾಂಗದಲ್ಲಿ ಈ ಶಕ್ತಿ ಮತ್ತು ಪ್ರಸಾರವು ಇರುವುದೋ ಅದು ನಾಗರೀಕ ಜನಾಂಗವೆನಿಸಿ ಕೊಳ್ಳುತ್ತದೆ.

ಈ ದೃಷ್ಟಿಯಿಂದ ಹಿಂದೂಸ್ಥಾನದ ನಾಗರಿಕತೆಯನ್ನು ಸರಿಗಟ್ಟುವ ನಾಗರಿಕತೆಯು ಮತ್ತೊಂದಿಲ್ಲ. ಹಿಂದುಸ್ಥಾನದಲ್ಲಿ ಬಡವನ ಸಣ್ಣ ಗುಡಿಸಿಲಿನಿಂದ ಚಕ್ರವರ್ತಿಯ ಅರಮನೆಯವರಿಗೂ ಕಲಾಶಕ್ತಿಯು ಪ್ರವಹಿಸುತ್ತಲಿತ್ತು. ವೇದಾಂತಿಯ ಜ್ಞಾನ ವೈಭವದಲ್ಲಿಯೂ, ಕಾರೀಗಾರನ ವಿಜ್ಞಾನದಲ್ಲಿಯೂ ಕಲಾ ಪ್ರಸಾರವಿತ್ತು.

ಗಾನವು ಮನುಷ್ಯನಲ್ಲಿ ಆವಿರ್ಭವಿಸುವ ಮೊದಲನೆಯ ಕಲೆ ! ಕಾಡಿನಲ್ಲಿ ದನಕಾಯುವವನ ಉಲ್ಲಾಸದ ಗಾನ, ಬೀಡಿನಲ್ಲಿ ಭೂಮಿ ಉಳುವವನ ಶಾಂತಿಯ ಗಾನ ! ಕಷ್ಟ ಜೀವಿಯ ಉತ್ತೇಜಕ ಗಾನ ! ನಟವಿಟಗಾಯಕರ ಜನರಂಜನೆಯ ಸಂಗೀತನಾದ, ವೀರನ ಸಿಂಹನಾದ, ವೇದಾಂತಿಯ

ಭಗವಧ್ಯಾನದ ಭಕ್ತಿನಾದ, ಮಗುವಿನ ನಗುವಿನ ಕಿಲಕಿಲನಾದ, ಹುಡುಗರ ಜಯಧ್ವನಿಯ ಕಲಕಲ ನಾದ, ಎಲ್ಲದರಲ್ಲಿ ಗಾನಕಲೆಯ ಜೀವಾಳವು ತುಂಬಿದೆ.

ಚಿತ್ರಕಲೆಯು ಮತ್ತೊಂದು ಕಲಾವಿರ್ಭಾವದ ಪ್ರಸಾರ! ತೋಟಗಾರನು ಬೆಳೆಯುವ ಹೂವಿನ ತೋಲದಲ್ಲಿ ಈ ಬಣ್ಣಬಣ್ಣದ ಚಿತ್ರಗಳನ್ನು ನಿರ್ಮಾಣ ಮಾಡುವ ಕಲೆಯು ಇದೆ. ಚಿತ್ರಕಾರನು ಬರೆಯುವ ಚಿತ್ರದಲ್ಲಿ ಈ ಕಲೆಯಿದೆ. ಕಾರೀಗಾರನು ತಯಾರುಮಾಡುವ ಪತ್ರಿಯೊಂದು ಪದಾರ್ಥದಲ್ಲಿಯೂ ಅವನು ತನ್ನಲ್ಲಿರುವ ಕಲಾಭಿರುಚಿಯನ್ನು ಪ್ರದರ್ಶಿಸುತ್ತಾನೆ. ಕವಿಯು ತನ್ನ ಕವಿತ್ವದಲ್ಲಿ ಆ ಕಲೆಯನ್ನು ಸೇರಿಸಿಡುತ್ತಾನೆ. ನಟನ ಅಭಿನಯದಲ್ಲಿ ಆ ಕಲೆಯು ಅವಿತು ಕೊಂಡಿದೆ. ಪ್ರಕೃತಿ ಸೌಂದರ್ಯದಲ್ಲಿ ಆ ಚಿತ್ರ ಕಲೆಯ ನಿಜಸ್ವರೂಪವು ಎದ್ದು ಕಾಣುತ್ತದೆ. ವಿಶಾಲವಾದ ಗಗನದಲ್ಲಿ ಆ ಚಿತ್ರಮಯ ಜಗತ್ತು ಪ್ರತಿಬಿಂಬಿಸುತ್ತಿದೆ.

ಹೀಗೆಯೇ ಎಷ್ಟೋ ಕಲಾ ಸ್ವರೂಪವು ನಮ್ಮ ನಾಗರಿಕತೆಯಲ್ಲಿ ಬೆಳೆದು ರೂಪುಗೊಂಡಿದೆ. ಆ ಕಲಾಭಿರುಚಿಯನ್ನು ಬೆಳೆಸುವುದು ಕಲಾ ಕೌಶಲ್ಯ! ಅದನ್ನು ಅರಿತು ಪ್ರೇಮ ಮಾಡುವುದು, ಕಲಾ ಪ್ರೇಮ. ಕಲಾ ಶಕ್ತಿ ಮತ್ತು ಕೌಶಲ್ಯ ಪ್ರಸಾರ ಇವೇ ಕಲಾಸ್ವರೂಪ! ಅದು ನಾಗರಿಕತೆಯ ನಿಜಸ್ವರೂಪ!

"ವಿಗ್ರಹಗಳನ್ನು ಮಾಡುವ ವಿಧಾನ"

ಶ್ರೀ। ಯಂ. ಎಸ್. ಸುಬ್ರಹ್ಮಣ್ಯಶಾಸ್ತ್ರಿ.

[ವಾಚಕರ ಗಮನಕ್ಕೆ:—ಈಗ ನಾವು ಹೇಳುವ ವಿಷಯವು "ಪಾಂಚರಾತ್ರದ" ಕ್ರಿಯಾಪಾದದಲ್ಲಿ ಹೇಳಲಾಗಿದೆ. ಇದು ವಿಷ್ಣುವಿಗೂ, ಬ್ರಹ್ಮನಿಗೂ ನಡೆದ ಸಂವಾದ ರೂಪವಾಗಿರುವುದು; ಈ ವಿಷಯವು ಕಲೆಗೆ ಸಂಬಂಧಪಟ್ಟುದಾದುದರಿಂದ ಇಲ್ಲಿ ಕೊಟ್ಟಿರುತ್ತೇವೆ. ಸಣ್ಣ ಸಣ್ಣ ಬೊಂಬೆಗಳು ಮಾತ್ರವಲ್ಲದೆ ನಾವು ಮಹಾ ವೈಭವದಿಂದ ಪೂಜೆ ಮಾಡುವ ಮೂರ್ತಿಗಳಲ್ಲಿ ಕೆಲವು ಈ ರೀತಿಯಲ್ಲಿ ತಯಾರಾದುವೆಂಬುದನ್ನು ಮರೆಯಬಾರದು.]

ಶ್ಲೋ॥ ಪ್ರಥಮೋ ದಾರುಸಂಘಾತೋ ದ್ವಿತೀಯಂ ರಜ್ಜುವೇಷ್ಟನಂ।
ಮೃದಾಲೇಪ ಸ್ತೃತೀಯಸ್ತು ತುರೀಯಂ ನಾಡಿಬಂಧನಂ ॥ ೧ ॥
ಪಂಚಮೋ ರಜ್ಜುವೇಷ್ಟಸ್ಯಾತ್ ನಾಳಿಕೇರತ್ವಚಾವೃತಃ।
ಮಿಶ್ರಿತಾ ಮೃತ್ತಿಕಾ ಷಷ್ಠೀ ಸಪ್ತಮಂ ರಜ್ಜುವೇಷ್ಟನಂ ॥ ೨ ॥
ಅಷ್ಟಮಂ ಶರ್ಕರಾಲೇಪೋ ನವಮಂ ಪಟಯೋಜ್ಜನಂ।
ಭೂಷಣಂದಶಮಂಪ್ರೋಕ್ತಂ ಏಕಾದಶ ಮತಃ ಪರಂ ॥ ೩ ॥
ಶುಕ್ಲಾಲೇಪನ ಮುದ್ದಿಷ್ಟಂ ದ್ವಾದಶಂ ವರ್ಣಯೋಜನಂ।
ದ್ವಾದಶೈತೇಚ ನಿರ್ದಿಷ್ಟಾಃ ಪ್ರತಿಮಾಕರಣೇಬ್ಜಜ ॥ ೪ ॥

ತಾ॥ "ಎಲೈ ಬ್ರಹ್ಮದೇವನೆ! ಕೇಳು. ಇನ್ನು ವಿಗ್ರಹಗಳನ್ನು ಮಾಡುವ ವಿಧಾನವನ್ನು ಹೇಳುತ್ತೇನೆ. ಮೊದಲು ಮರವನ್ನು ಜೋಡಿಸುವಿಕೆಯೂ, ಎರಡನೆಯದು ಹಗ್ಗವನ್ನು ಸುತ್ತುವಿಕೆಯೂ, ಮೂರನೆಯದು ಮಣ್ಣಿನಿಂದ ಲೇಪಿಸುವುದೂ, ನಾಲ್ಕನೆಯದು ನಾಡಿಗಳನ್ನು ತಿದ್ದುವುದೂ

ಆಗಿರುವುದು. ಐದನೆಯದು ಹಗ್ಗದಿಂದ ಪುನಃ ಸುತ್ತುವುದೂ, ಆರನೆಯದ ಮಣ್ಣಿನಿಂದೊಡಗೊಡಿದ ತೆಂಗಿನ ತೊಗಟೆಯನ್ನು ಸುತ್ತುವುದೂ, ಏಳನೆಯದು ಪುನಃ ಹಗ್ಗದಿಂದ ಸುತ್ತುವುದೂ, ಹೀಗೆ ಹಗ್ಗದಿಂದ ಸುತ್ತಿದಮೇಲೆ ಮರಳಿನಿಂದ ಲೇಪನಮಾಡುವುದು ಎಂಟನೆಯದೂ ಆಗಿರುತ್ತದೆ. ಆಮೇಲೆ ಬಟ್ಟೆಯಿಂದ ಆದನ್ನು ಸುತ್ತುವಿಕೆಯು ಒಂಭತ್ತನೆಯಿದು. ಹತ್ತನೆಯದು ಅಲಂಕಾರಮಾಡುವುದಾಗಿದೆ. ಹನ್ನೊಂದನೆಯ ವಿಧಾನವಾದರೋ ಈ ರೀತಿ ತಯಾರಾದ ಪ್ರತಿಮೆಯನ್ನು ಬಿಳಿಯ ಬಣ್ಣದಿಂದ ಲೇಪಿಸುವುದೂ, ಹನ್ನೆರಡನೆಯದು ಬಣ್ಣಗೆಲಸವನ್ನು ಮಾಡುವುದೂ ಆಗಿರುವುದು. ಹೀಗೆ ಈ ಹನ್ನೆರಡು ವಿಧಾನಗಳೂ ವಿಗ್ರಹಗಳನ್ನು ಮಾಡುವುದರಲ್ಲಿ ಹೇಳಲಾಗಿರುವುದು.

ಶ್ಲೋ॥ ಕಾಲೇನ ವರ್ಷಮಾತ್ರೇಣ ವಸ್ತು ಶುಷ್ಯತಿ ನಾನ್ಯಥಾ ।
ಸಹಸ್ರಂ ವತ್ಸರಂ ಯಾತಿ ಮಾಸೈ ರ್ದ್ವಾದಶಭಿಃ ಕೃತೈಃ ॥ ೫ ॥
ದ್ವಾಭ್ಯಾಮಯುತಮಾಯಿಸ್ಯಾತ್ತ್ರಿಭಿರ್ಲಕ್ಷಂ ಪ್ರತಿಷ್ಠಿತಂ ।
ಹೇಮೇನ ಪೋಷಣಂ ಸರ್ವಂ ವರ್ಣಾನಾಂ ದೀಪ್ತಿಕಾರಕಂ ॥ ೬ ॥

ತಾ॥ ಈ ರೀತಿ ತಯಾರಿಸಿದ ಪ್ರತಿಮೆಯು ಒಂದು ವರ್ಷಮಾತ್ರವಿಟ್ಟಿದ್ದರೆ ಒಣಗುತ್ತದೆ. ಹಾಗಲ್ಲದಿದ್ದರೆ ಒಣಗುವುದಿಲ್ಲ. ಹೀಗೆ ಹನ್ನೆರಡು ತಿಂಗಳುಗಳವರೆವಿಗೂ ಒಣಗಿಸಿದ ಪ್ರತಿಮೆಯು ಒಂದು ಸಾವಿರ ವರ್ಷಗಳವರಿವಿಗೂ ಇರುತ್ತದೆ. ಎರಡು ವರ್ಷಗಳ ಕಾಲ ಒಣಗಿಸಿ ತಯಾರಿಸಿದ್ದೇ ಆದರೆ ಹತ್ತುಸಾವಿರ ವರ್ಷಗಳ ಆಯುಃಪರಿಮಾಣವುಳ್ಳದ್ದಾಗುತ್ತದೆ. ಮೂರು ವರ್ಷಗಳವರೆವಿಗೂ ಒಣಗಿಸಿ ತಯಾರಿಸಿದ ಪ್ರತಿಮೆಯು ಒಂದು ಲಕ್ಷ ಸಂವತ್ಸರಗಳವರೆವಿಗೂ ಇರುತ್ತದೆ. ಬಣ್ಣಗಳೊಡನೆ ಭಂಗಾರವು ಸೇರಿದರೆ ಕಾಂತಿಯನ್ನುಂಟುಮಾಡುತ್ತದೆ.

ಶ್ಲೋ॥ ಆಲೇಖ್ಯೇ ಚ ಪಟೇ ಭಿತ್ತೌ ಲಿಖಿತೇ ಫಲಕೇ ಪಿ ಚ ।
ವರ್ಣಯೋಗ ಸ್ಸಮುದ್ದಿಷ್ಟೋ ದ್ರವ್ಯೋತ್ಪತ್ತಿಸ್ತಥೈವಚ ॥ ೭ ॥

ತಾ॥ ಹಿಂದೆ ಬಣ್ಣಗಳನ್ನು ಸೇರಿಸುವುದೂ, ದ್ರವ್ಯಗಳ ಉತ್ಪತ್ತಿಯೂ ತೋರಲ್ಪಟ್ಟಿದೆ. ಕಾಗದದ ಹಾಳೆಗಳಲ್ಲಿಯೂ, ಬಟ್ಟೆಯಲ್ಲಿಯೂ, ಗೋಡೆ ಮತ್ತು ಬರೆಯುವ ಮರದ ಹಲಿಗೆಯಲ್ಲಿಯೂ ಚಿತ್ರಗಲಸವನ್ನು ಮಾಡಬಹುದು.

ಶ್ಲೋ॥ ಮೂರ್ತೀನಾಂ ಯುಗಭೇದೇನ ವರ್ಣಭೇದೋ ವಿಧೀಯತೇ ।
ಕೃತೇ ವಳಕ್ಷಸ್ತ್ರೇತಾಯಾ ಮರುಣೋ ದ್ವಾಪರೇಪುನಃ ॥ ೮ ॥
ಪೀತಃ ಕಲೌ ಘನಶ್ಯಾಮಃ ವಾಸುದೇವಃ ಪರಃಪುರ್ಮಾ ।
ರಕ್ತಸ್ಸಂಕರ್ಷಣೋ ದೇವಃ ಪ್ರದ್ಯುಮ್ನಃ ಕನಕಪ್ರಭಃ ॥ ೯ ॥
ಶ್ಯಾಮೋನಿರುದ್ಧಃ ಕಥಿತಃ ಕೃತಾದಿಷು ಚತುರ್ಷ್ವಪಿ ।
ಕೇಶವಃ ಕನಕ ಪ್ರಖ್ಯಸ್ಯಾದರ್ಜುನಸಮಾಕೃತಿಃ ॥ ೧೦ ॥

ತಾ॥ ಆಯ್ಯಾ ಕಮಲಾಸನನೇ ! ಕೃತ, ತ್ರೇತ, ದ್ವಾಪರ, ಕಲಿ ಎಂಬ ಯುಗಭೇದಗಳಿಂದ ಮೂರ್ತಿಗಳ ವರ್ಣಭೇದವು ವಿಧಿಸಲ್ಪಡುವುದು. ಪರಮಪುರುಷನಾದ ವಾಸುದೇವನು ಕೃತಯುಗದಲ್ಲಿ ವಳಕ್ಷ ವರ್ಣದವನಾಗಿಯೂ, (ಬಿಳಿಯಬಣ್ಣವಲ್ಲಿನ ಭೇದವಿದು) ತ್ರೇತಾಯುಗದಲ್ಲಿ ರಕ್ತವರ್ಣದ

ಪ್ರಭೇದವಾದ ಅರುಣವರ್ಣದವನಾಗಿಯೂ, ದ್ವಾಪರದಲ್ಲಿ ಪೀತ (ಹಳದಿಯ) ವರ್ಣದವನಾಗಿಯೂ, ಕಲಿಯುಗದಲ್ಲಿ ನೀಲಮೇಘಶ್ಯಾಮಲ ವರ್ಣನಾಗಿಯೂ ಇರುವನು. ಸಂಕರ್ಷಣ ಸ್ವಾಮಿಯು ರಕ್ತ ವರ್ಣನು; ಪ್ರದ್ಯುಮ್ನನು ಚಿನ್ನದ ಕಾಂತಿಯುಳ್ಳವನು; ಅನಿರುದ್ಧನು ಕೃಷ್ಣವರ್ಣದ ಪ್ರಭೇದವಾದ ಶ್ಯಾಮಲವರ್ಣದವನು. ಇವರು ಕೃತಾದಿ ಚತುರ್ಯುಗಗಳಲ್ಲಿಯೂ ಇದೇ ವರ್ಣದವರಾಗಿಯೇ ಇರುತ್ತಾರೆ. ಕೇಶವನು ಭಂಗಾರದ ಬಣ್ಣದವನು; ಇವನ ಆಕೃತಿಯು ಅರ್ಜುನನಿಗೆ ಸಮಾನವಾದುದು.

ಶ್ಲೋ॥ ನಾರಾಯಣ ಶ್ಯಾಮವರ್ಣೋ ಮಾಧವ ಸ್ಫಟಿಕ ಪ್ರಭಃ।
ಗೋವಿಂದಃ ಪದ್ಮಕೆಂಜಲ್ಕ ನಿಭೋವಿಷ್ಣುರುದಾಹೃತಃ ॥ ೧೧ ॥
ಅರುಣಾಂಬುಜ ಸಂಕಾಶೋ ಮಧುಸೂದನ ಉಚ್ಯತೆ।
ತ್ರಿವಿಕ್ರಮಶ್ಶಿಖಿ ನಿಭೋ ವಾಮನೋಬಾಲಸೂರ್ಯವತ್ ॥ ೧೨ ॥
ಶ್ರೀಧರಸ್ಸಿತಪದ್ಮಾಭೋ ಹೃಷೀಕೇಶಸ್ತಟೀತ್ಕ್ಷಭಃ।
ಪದ್ಮನಾಭಶ್ಯಾಮವರ್ಣೋ ಬಂದೂಕ ಕುಸುಮಚ್ಛವಿಃ ॥ ೧೩ ॥
ದಾಮೋದರೋ ದ್ವಾದಶೈತೇ ಕಥಿತಾಃ ಕೇಶವಾದಯಃ।
ವಾಸುದೇವಾದಿಮೂರ್ತೀನಾಂ ಯೋವರ್ಣಃಪೂರ್ವಮೀರಿತಃ ॥ ೧೪ ॥

ತಾ॥ ನಾರಾಯಣನು ಶ್ಯಾಮ ವರ್ಣದವನು; ಮಾಧವನು ಸ್ಫಟಿಕಮಣಿಯ ಕಾಂತಿಯುಳ್ಳವನು. ಗೋವಿಂದನಾದ ವಿಷ್ಣುವು ಕಮಲ ಕೇಸರಗಳ ಬಣ್ಣದವನು; ಮಧುಸೂದನನು ಕೆಂಪು ಕಮಲದ ಕಾಂತಿಯವನೆಂದೂ ಹೇಳಲ್ಪಡುತ್ತದೆ. ಶ್ರೀಧರನು ಬಿಳಿದಾವರೆಯ ವರ್ಣದವನೆಂದೂ ಹೇಳಲ್ಪಡುತ್ತದೆ. ತ್ರಿವಿಕ್ರಮನು ನವಿಲಿನ ವರ್ಣದವನೆಂದೂ, ವಾಮನನು ಬಾಲಸೂರ್ಯನ ವರ್ಣದವನೆಂದೂ, ಹೃಷೀಕೇಶನು ಮಿಂಚಿನ ಬಣ್ಣದವನೆಂದೂ, ಪದ್ಮನಾಭನು ಶ್ಯಾಮವರ್ಣದವನೆಂದೂ, ದಾಮೋದರನು ಬಂದೂಕ ಕುಸುಮ (ಈ ಹೂ ಎಳೆಗೆಂಪುಳ್ಳ ಉದ್ದನಾದ ಗಂಟಿಯ ಆಕಾರವಾಗುವುದು) ಕಾಂತಿಯುಳ್ಳವನೆಂದೂ ಹೇಳಲ್ಪಡುತ್ತದೆ. ಹೀಗೆ ಕೇಶವಾದಿ ದ್ವಾದಶ ಮೂರ್ತಿಗಳು ವರ್ಣಭೇದದಿಂದ ಹೇಳಲ್ಪಟ್ಟಿರುವರು.

ಶ್ಲೋ॥ ಸ ಏವ ವಾಸುದೇವಾದಿ ಚತುರ್ಣಾಂತದ್ವ್ಯೂಹಮಪಿ।
ಶುದ್ಧಸ್ಫಟಿಕಸಂಕಾಶೋ ವಿಜ್ಞೇಯಃ ಪುರುಷೋತ್ತಮಃ ॥ ೧೫ ॥
ಅಧೋಕ್ಷಜಶ್ಯಾಮವರ್ಣೋ ನೃಸಿಂಹೋ ಹೇಮಸನ್ನಿಭಃ।
ಪೀತವರ್ಣೋಚ್ಯುತೋರೇವ ರಕ್ತವರ್ಣೋ ಜನಾರ್ದನಃ ॥ ೧೬ ॥
ಉಪೇಂದ್ರ ಶ್ಯಾಮಲಃ ಪ್ರೋಕ್ತಃ ಹರಿಃ ಪೀತ ನಿಭಸ್ಸ್ಮೃತಃ।
ಕೃಷ್ಣಃ ಕೃಷ್ಣಾಂ ಬುದಪ್ರಖ್ಯ ಶ್ಚತುರ್ವಿಂಶತಿಮೂರ್ತಯಃ ॥ ೧೭ ॥

ತಾ॥ ವಾಸುದೇವನೇ ಮೊದಲಾದ ನಾಲ್ವರಿಗೂ ಹಿಂದೆ ಹೇಳಿದ ನಾಲ್ಕು ವರ್ಣಗಳೇ ಆಗಿರುವುದು. ಪುರುಷೋತ್ತಮನು ನಿರ್ಮಲವಾದ ಸ್ಫಟಿಕಮಣಿಯ ಕಾಂತಿಯುಳ್ಳವನೆಂದು ತಿಳಿಯಬೇಕು. ಅಧೋಕ್ಷಜನು ಕೃಷ್ಣವರ್ಣ ಪ್ರಭೇದವಾದ ಶ್ಯಾಮವರ್ಣದವನು. ನೃಸಿಂಹನು ಚಿನ್ನದ ಕಾಂತಿಯುಳ್ಳವನು. ಅಚ್ಯುತನು ಹಳದಿಯ (ಪೀತ) ವರ್ಣದವನು. ಜನಾರ್ದನನು ಅಚ್ಚಗೆಂಪಿನವನು. ಉಪೇಂದ್ರನು ಶ್ಯಾಮಲ ವರ್ಣದವನೆಂದು ಹೇಳಲ್ಪಟ್ಟಿದೆ. ಹರಿಯು ಹಳದಿಯ ಬಣ್ಣದವನು. ಕೃಷ್ಣನು ಕಾರ್ಮುಗಿಲಿನ ಕಾಂತಿಯುಳ್ಳವನು. ಹೀಗೆ ಇಪ್ಪತ್ತುನಾಲ್ಕು ಮೂರ್ತಿಗಳ ವರ್ಣಗಳು ಹೇಳಲ್ಪಟ್ಟವೆ.

ಕಸಬು ಮತ್ತು ಕಲೆ.

ಒಂದೇ ಗುಲಾಬಿ ಗಿಡದಿಂದ ನಾನಾ ಬಣ್ಣದ ಹೂ ಬಿಡಿಸುವ ಚಮತ್ಕಾರ.

ನಾನಾ ಬಣ್ಣದ ಹೂಗಳನ್ನು ಬಿಡುವ ಗುಲಾಬಿ ಗಿಡಗಳ ನಾಲ್ಕು ಕಡ್ಡಿಗಳನ್ನು (ಹೆಬ್ಬೆರಳು ಗಾತ್ರ, ಒಂದು ಗೇಣುದ್ದ) ಕಡಿದು ತಂದು, ಅವುಗಳನ್ನು ನೆಟ್ಟನೆ ನೆಟ್ಟನೆ ಮಟ್ಟವಾಗಿಯೂ, ಒಳಗಿನ ತಿರುಳು ಹೋಗದಂತೆಯೂ ಸೀಳಿಟ್ಟುಕೊಳ್ಳಬೇಕು. ಬೇರೆಬೇರೆ ಬಣ್ಣದ ಹೂವಿನ ಗಿಡಗಳ ಈ ಹೋಳುಗಳನ್ನು **ನಾಲ್ಕುನಾಲ್ಕನ್ನು** ಸೇರಿಸಿ **ಒಂದೇ ಕಡ್ಡಿ**ಯಾಗುವಂತೆ, **ಜೇನು** ಮುಂತಾದ ಕಶಿ ಮಾಡುವ ವಸ್ತುಗಳಿಂದ ದುಂಡಾಗಿ ಅಂಟಿಸಿ, ಅದರ ಮೇಲೆ ಮೆಲ್ಲಗೆ ನೂಲನ್ನು ಸುತ್ತಿ ಇಟ್ಟುಕೊಳ್ಳಬೇಕು. ನಾಲ್ಕು ಹೋಳು ಸೇರಿ ಒಂದೇ ದುಂಡು ಕಡ್ಡಿಯಾದ ಇವುಗಳಿಗೆ ಮೇಲೆ ಕಳಿಮಣ್ಣು ಸಗಣಿ ಕಲೆಸಿ, ಸುತ್ತಲೂ ತಲೆಗೂ ಕಾಲು ಅಂಗುಲ ಮುಂದಕ್ಕೆ ಲೇಪಮಾಡಿ, ಅದರ ಮೇಲೆ ಬಟ್ಟೆ, ನೂಲುಗಳಿಂದ ಕಟ್ಟಿಯಿಟ್ಟುಕೊಂಡು, ಇವುಗಳನ್ನು ಗೊಬ್ಬರಹಾಕಿದ ಹಸನಾದ ನೆಲ, ಅಥವಾ ಮಣ್ಣುಕುಂಡ ಇವುಗಳಲ್ಲಿ ಒಟ್ಟಲು ಹಾಕಿ ಬೆಳೆಯಿಸಬೇಕು.

ಹೀಗೆ ಬೆಳೆದ ಈ ಗಿಡಗಳು ಆಯಾ ಭಾಗದ ಕೊಂಬೆರೆಂಬೆಗಳಲ್ಲಿ ಬೇರೆಬೇರೇಬಣ್ಣದ ಹೂಗಳನ್ನು ಬಿಡುತ್ತಾ, ಒಟ್ಟು ಒಂದೇ ಗಿಡದಲ್ಲಿ ನಾನಾ ಬಣ್ಣದ ಹೂಗಳು ಬಿಟ್ಟಂತೆ ಆಶ್ಚರ್ಯವಾಗಿ ತೋರುವುವು.

[ಮೊದಲು ಮೊದಲು ಎರಡೆರಡುಕಡ್ಡಿಗಳನ್ನು ಅಂಟಿಗೆಮಾಡಿ, ಅಭ್ಯಾಸವಾದಮೇಲೆ ೨, ೩, ೪, ೫ ರೀತಿಯ ಕಡ್ಡಿಗಳಿಂದ ಒಂದೊಂದು ಗಿಡವನ್ನು ಮಾಡಿ ಬೆಳೆಯಿಸಬಹುದು. **ಮುಖ್ಯ** ಒಳಗಿನ ತಿರಳು ಎಲ್ಲಾ ಕಡ್ಡಿಗಳಿಗೂ ಬರಬೇಕು. ಕಶಿ ಮಾಡುವಾಗ ಮಟ್ಟಸವಾಗಿ ಗಿಡ ಬದುಕುವಂತೆ ಮಾಡಬೇಕು. ಗಿಡ ಬದುಕಿ ಬೆಳೆದಮೇಲೆ ಅದರ ಕೊಂಬೆ ರೆಂಬೆಗಳನ್ನು ಒಂದರೊಳಗೊಂದನ್ನು ಹುದುಗಿಸಿದರೆ ಒಂದೊಂದು ಭಾಗದಲ್ಲಿಯೂ ನಾನಾ ಬಣ್ಣದ ಹೂ ಬಿಟ್ಟಂತೆ ಆಶ್ಚರ್ಯಕರವಾಗಿ ತೋರುವುದು.]

ನೀಲಿ-ಕಪ್ಪು ಶಾಯಿ ಮಾಡುವ ವಿಧಾನ. (Preparation of Blue-Black Ink.)

ಅಳಲೇಕಾಯಿ ಚೂರ್ಣ-ವಸ್ತ್ರಗಾಳಿತ ಮಾಡಿದ್ದು ೧ ಭಾಗ, ಅನ್ನಭೇದಿ ಮುಕ್ಕಾಲು ಭಾಗ, ಗೊಂದಿನಪುಡಿ (ಗೊಬ್ಬಳಿ, ಜಾಲಿ, ದಿಂಡಿಗ ಮುಂತಾದ ಗೊಂದು) ½ ಭಾಗ, ನೀಲಿಬಣ್ಣ (Chinese blue) ೧ ಭಾಗ-ಇವುಗಳ ಚೂರ್ಣವನ್ನು ವಸ್ತ್ರಗಾಳಿತಮಾಡಿ ಹದಕ್ಕೆ ಬರುವಂತೆ ಲವಂಗ ತೈಲವನ್ನು ಹಾಕಿ ಕಲ್ವತ್ತಿನಲ್ಲಿ ಚೆನ್ನಾಗಿ ಮರ್ದಿಸಬೇಕು. ಇದರಲ್ಲಿ ೨ ತೊಲೆ ಚೂರ್ಣವನ್ನು **೨½-೨೫ ತೊಲೆ** ಬಿಸಿ ನೀರಲ್ಲಾಗಲಿ, ತಣ್ಣೀರಲ್ಲಿಯಾಗಲಿ ಸೇರಿಸಿ, ಚೆನ್ನಾಗಿ ಕುಲುಕಿ, ಫ್ಲಾನಲ್‌ಬಟ್ಟೆಯಿಂದ ಶೋಧಿಸಿ ಸೀಸಾಯಿನಲ್ಲಿ ತುಂಬಿಟ್ಟುಕೊಳ್ಳಬೇಕು. ಇದು ಶ್ರೇಷ್ಠವಾದ ನೀಲಿ—ಕಪ್ಪು ಶಾಯಿಯಾಗುವುದು. ಇದರಿಂದ ಬಹು ಲಾಭವನ್ನು ಹೊಂದಬಹುದು, ಅಥವಾ ಪರದೇಶದ ಶಾಯಿಗೆ ಕುಡಿಕೆ ೧ಕ್ಕೆ ಕಾಲು ರೂಪಾಯಿ ತೆರುವುದನ್ನಾದರೂ ತಪ್ಪಿಸಿಕೊಳ್ಳಬಹುದು.

ಪ್ರಪಂಚ ಪರಿಚಯ ಮತ್ತು ವಿಮರ್ಶೆ.

ಲಲಿತಕಲಾ ಸಂಘ (Fine Art Association.)

ಮೈಸೂರಿನಲ್ಲಿ ಇದೇ ಮಾರ್ಚಿ ೩೦ನೆಯ ತಾರೀಖಿನ ದಿವಸ ತರುಣಕಲಾವಿದರಿಂದೊಡ ಗೂಡಿದ ಈ ಸಂಘವು ಆರಂಭವಾಗಿರುವುದು. ಕಲಾವಿದರಾದ ಮ|| ಕೇಶವಯ್ಯನವರೂ, ಮ|| ಟಂಕ ಸಾಲೆಯವರೂ, ಮ|| ಶ್ರೀನಿವಾಸಯ್ಯಂಗಾರ್ಯರೂ, ಮ|| ಚಕ್ರವರ್ತಿ, ಬಿ.ಎ., ಬಿ.ಎಲ್. ಯವರೂ, ಮ|| ವೀರಪ್ಪನವರು ಮುಂತಾದ ಅನೇಕ ಕಲಾವಿದರು ಈ ಸಂಘಕ್ಕೆ ಸಹಾಯಕರಾಗಿರುವರು. ಈಗಾಗಲೇ ಮ|| ನಾಗರಾಜು, ಮ|| ಶಂಕರರಾಜು, ಮ|| ಸ್ವಾಮಿ, ಮ|| ಶೇಷಗಿರಿರಾವ್ ಮುಂತಾದ ಸುಮಾರು ಇಪ್ಪತ್ತು ಮಂದಿ ತರುಣ ಕಲಾವಿದರು ಮುಂದೆ ಬಂದಿರುವರು. ಈ ಸಂಘವನ್ನು ಅಖಿಲ ಕರ್ನಾಟಕಕ್ಕೆಲ್ಲಾ ಅನ್ವಯಿಸುವಂತೆ ಏರ್ಪಡಿಸಬೇಕೆಂಬ ವಿಶಾಲ ದೃಷ್ಟಿಯಿರುವುದಾಗಿ ತಿಳಿಯಬರುವುದು. ಈ ಸಭೆಯು ಧರ್ಮಪ್ರಕಾಶ ಡಿ. ಬನುಮಯ್ಯನವರ ವಿದ್ಯಾಶಾಲೆಯಲ್ಲಿ, ಮ|| ರಾಮಸ್ವಾಮಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಅಂತೂ ಈ ಬಗೆಯ ಅತ್ಯವಶ್ಯಕವಾದ ಸಂಘವನ್ನಾರಂಭಿಸಿದುದಕ್ಕಾಗಿ ವ್ಯವಸ್ಥಾಪಕರನ್ನು ಹೃತ್ಪೂರ್ವಕವಾಗಿ ವಂದಿಸುವೆವು. ಬಾಲ್ಯಾವಸ್ಥೆಯಲ್ಲಿರುವ ಈ ಸಂಘಕ್ಕೆ ಕಲಾವಿದರೂ, ಕಲಾಭಿಮಾನಿಗಳೂ ಮಾತ್ರವಲ್ಲವೆ ಮಹಾ ಜನರೂ, ಸರಕಾರದವರೂ ಸಹಾಯಮಾಡಬೇಕು. ವಿಶಾಲ ದೃಷ್ಟಿಯಿಂದ ಕಾರ್ಯಮಾಡುವುದಾದರೆ ಈ ಸಂಘಕ್ಕೆ ಬಹಳ ಮಹತ್ವವುಂಟೆಂದೂ, ಈ ಸಂಘವು ಕರ್ನಾಟಕದ ಕಲೆಗೊಂದು ಸರಿಯಾದ ಸ್ಥಾನಕೊಡಿಸಬಲ್ಲುದೆಂದೂ ತಿಳಿಸಲು ಆಶಿಸುವೆವು. ಮುಂದೆ ಸಂಘದ ವಿಷಯದಲ್ಲಿ ಕಲೆಯೂ ಯಥಾಶಕ್ತಿ ನೆರವಾಗಿ ತನ್ನ ಸಹಾಯವೀಯಲು ಸಿದ್ಧವಾಗಿರುವುದು.

ಸುಬೋಧದ ಸಂಪಾದಕರಾದ ಎಂ. ರಾಮರಾಯರಿಗೆ ಸತ್ಕಾರ.

ಬೆಂಗಳೂರಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ಆರ್ಟ್ಸ್ ಕ್ಲಬ್ಬಿನವರು, ಶ್ರೀಯುತ ರಾಮರಾಯರು ಸುಬೋಧಕುಸುಮಾಂಜಲಿ ಗ್ರಂಥಮಾಲೆಯನ್ನು ೧೫ ವರುಷಗಳಿಂದ ನಡೆಯಿಸಿಕೊಂಡು ಬಂದು ೧೦೮ ಪುಸ್ತಕಗಳನ್ನು ಪ್ರಕಟಿಸಿದ ಮಹತ್ಕಾರ್ಯದ ಮೆಚ್ಚುಗೆಗಾಗಿ ಒಂದು ಸತ್ಕಾರ ನಡೆಯಿಸಿ

ದರು. ಈ ಸಂತೋಷ ಕೂಟವು 'ಅನ್ನಪೂರ್ಣಾ' ಮಂದಿರದಲ್ಲಿ ಶ್ರೀ|| ಬಿ. ಯಂ. ಶ್ರೀಕಂಠೈಯ್ಯನವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಉಪಹಾರವಾದ ನಂತರ ಶ್ರೀಮತಿ ರಾಜಮ್ಮನವರ ಸುಶ್ರಾವ್ಯವಾದ ವೀಣಾವಾದನವು ಸಭಿಕರನ್ನು ಆನಂದಗೊಳಿಸಿತು. ಬಳಿಕ ಶ್ರೀಯುತ ತಾತ್ಯಾಚಾರ್ಯ ಶರ್ಮರವರು, ಮ|| ಕೆ. ಸಂಪತ್‌ಗಿರಿರಾಯರೂ, ಶ್ರೀ|| ಸಿ. ಕೆ. ವೆಂಕಟರಾಮಯ್ಯನವರೂ, ಬಿ. ನರಹರಿಶಾಸ್ತ್ರಿಗಳೂ, ಅ. ನ. ಕೃಷ್ಣರಾಯರೂ, ರಾಮರಾಯರ ಅಸಾಧಾರಣವಾದ ಭಾಷಾ ಸೇವೆಯನ್ನು ಶ್ಲಾಘಿಸಿ, ಜನಸಾಮಾನ್ಯಕ್ಕೆ ಈ ರಾಯರ ಪುಸ್ತಕಗಳಿಂದ ಆಗಿರುವ ಮಹದುಪಕಾರವನ್ನು ಬಹುವಾಗಿ ಶ್ಲಾಘಿಸಿದರು. ಶ್ರೀಯುತ ಶ್ರೀಕಂಠೈಯ್ಯನವರು ತಮ್ಮ ಆಶೀರ್ವಾದ ಪೂರ್ವಕವಾದ ಪುಷ್ಪಮಾಲಿಕೆಯನ್ನರ್ಪಿಸಿ, ರಾಯರ ಭಾಷಾಭಿಮಾನವನ್ನು ಕೊಂಡಾಡಿದರು. ಬಳಿಕ ಶ್ರೀಯುತ ರಾಮರಾಯರು ವಿನಯದಿಂದ ಸತ್ಕಾರವನ್ನು ಸ್ವೀಕರಿಸಿ, " ಪದವೀಧರರು ನನ್ನಂಥಹ ಸಾಮಾನ್ಯ ಮನುಷ್ಯನಿಗೆ ಮಾಡಿದ ಮರ್ಯಾದೆಯು ನನ್ನದಲ್ಲ ; ಗ್ರಂಥಮಾಲೆಗೆ ಸೇರಿದುದು " ಎಂದು ತಿಳಿಸಿ ; ಗ್ರಂಥಮಾಲೆಯ ಧ್ಯೇಯವನ್ನೂ ಕಾರ್ಯಕ್ರಮವನ್ನೂ ವಿವರಿಸಿದರು. ನಮ್ಮ ಕರ್ಣಾಟಕದಲ್ಲಿಯೂ ಸಾಹಿತ್ಯಸೇವಕರಿಗೆ ಇಂತಹ ಸನ್ಮಾನ ದೊರೆತುದಕ್ಕಾಗಿ ಮ|| ರಾಮರಾಯರನ್ನು ಮಾತ್ರವಲ್ಲದೆ ಈ ಆರ್ಟ್ಸ್ ಕ್ಲಬ್ಬಿನವರನ್ನೂ ಅಭಿನಂದಿಸುವೆವು. ಶ್ರೀಯುತ ರಾಯರು ಸುಸಂಸ್ಕೃತರು. ವಿದ್ಯಾವಂತರು. ಇವರ ಉದಾರತೆಯು, ಇವರು ಬರೆದಿರುವ ಮತಸ್ಥಾಪಕರ ಗ್ರಂಥಗಳಿಂದ ವ್ಯಕ್ತವಾಗುವುದು. ಪ್ರಯತ್ನಪಟ್ಟಲ್ಲಿ ಇವರು ಪೌಢಸಾಹಿತ್ಯವನ್ನೂ ಬರೆಯಬಲ್ಲರು. ಆದರೆ ಅದಕ್ಕಿಂತಲೂ **ಸರಳ ಸಾಹಿತ್ಯವೇ** ನಿಜವಾಗಿಯೂ ಅತ್ಯವಶ್ಯಕವಾದದು. ಇದೇ ಕನ್ನಡ ನಾಡಿನ ಕೀರ್ತಿಯನ್ನು ಬೆಳೆಸುವುದು,ಎಂದರಿತು; ಈ ದಾರಿಯಲ್ಲಿ ಭಾಷಾಸೇವೆಮಾಡುತ್ತಿರುವರು. ಈ ರೀತಿ ಜನಸಾಮಾನ್ಯದ ಭಾಷಾಸೇವೆ ಮಾಡುವವರಿಗೆ ಮರ್ಯಾದೆ ಮಾಡುವುದೂ ಒಂದು ಗೌರವವೇ ಸರಿ ! ಇಂತಹ ಮಹನೀಯರಿಗೆ ಅಭಿನಂದನೆಗಳನ್ನು ಸೂಚಿಸುವ ಭರದಲ್ಲಿ ಕೆಲವರು ಉಪಯೋಗಿಸಿದ ಪದಗಳು ತಕ್ಕುದಲ್ಲವೆಂದು ಹೇಳಲು ವಿಷಾದಿಸುವೆನು. ಎರಡರ್ಥವಾಗುವ ಸಾಮಾನ್ಯರಿಗೆ ತಪ್ಪು ಅರ್ಥವಾಗುವ ಪದಗಳನ್ನು ಉಪಯೋಗಿಸುವದಕ್ಕಿಂತಲೂ, ಸ್ಪಷ್ಟಭಾಷೆಯಲ್ಲಿ ಮನಸ್ಸಿನೊಳಗಿರುವುದನ್ನು ಬಿಚ್ಚಿ ಹೇಳುವುದು ಮೇಲು.

" ಸು "

ಈ ಸಂಘವು ಜನ್ಮತಾಳಿದಾಗ " ಆರ್ಟ್ಸ್ ಕ್ಲಬ್ " ಎಂದು ನಾಮಕರಣವಾಯಿತು. ರಾಯರಿಗೆ ಸತ್ಕಾರ ನಡೆಸುವಾಗ " **ಕಲಾಸಂಘ** "ವೆಂದು ಪ್ರಕಟವಾಗಿದೆ. ಸಂಘಕ್ಕೆ ಈ ಎರಡು ಹೆಸರೂ ಉಂಟೇ ? ಕನ್ನಡಿಗರೊಡನೆ ವ್ಯವಹರಿಸುವಾಗ ಮಾತ್ರ ಈ ಕಲಾಸಂಘವೆಂಬ ಹೆಸರೇ ? ತಿಳಿಸಿದರೆ ಮೇಲು. ಈ ಹನ್ನೆರಡು ವರುಷಗಳಿಂದ ಕಲಾಮಂದಿರವನ್ನು ನಡೆಸಿಕೊಂಡು ಬಂದಿರುವ ಸಂಘಕ್ಕೆ " **ಕಲಾಸಂಘ** " ವೆಂಬ ಹೆಸರುಂಟು. ಒಂದೇ ಊರಿನಲ್ಲಿ ಎರಡು ಹೆಸರಿನ ಒಂದೇ ಬಗೆಯ ಸಂಘಗಳಿದ್ದರೆ ಕೆಲವು ವೇಳೆ, ತೊಂದರೆ ಬರಬಹುದಲ್ಲವೇ ?

" ಸಂ "

ತಾ ಯಿ ನಾ ಡು

ಸಂಪಾದಕರು, **ಪಿ. ಆರ್. ರಾಮಯ್ಯ, ಬಿ ಯಸ್‌ಸಿ.**

ತಾಯಿನಾಡು ಪತ್ರಿಕೆಯು ಜನ್ಮತಾಳಿ ಸುಮಾರು ನಾಲ್ಕು ವರ್ಷಗಳಾಯಿತು. ಈ ನಾಲ್ಕುವರ್ಷಗಳಲ್ಲಿ ಅಸಾಧ್ಯವಾದ ಅಪರಿಮಿತ ಪ್ರಜಾಸೇವೆ ಮಾಡಿ ತನ್ನ ಹೆಸರನ್ನು ಸಾರ್ಥಕ ಮಾಡಿಕೊಂಡಿದೆ. ಅಚ್ಚು ಆಫೀಸಿನ ಅನಿವಾರ್ಯವು ಅನೇಕವಾಗಿದ್ದರೂ, ವರ್ಷಾರಂಭದಿಂದ ಹೊಸದಾದ ಅಚ್ಚು ಮೊಳೆಗಳನ್ನು ತರಿಸಿ, ಅಂದವಾಗಿ ಮುದ್ರಣ ಮಾಡುತ್ತಿರುವರು. ಇದಕ್ಕಾಗಿ ಶ್ರೀ ಲಕ್ಷ್ಮೀ ನರಸಿಂಹಾ ಪ್ರೆಸ್ ಮಾಲೀಕರಾದ ಮ|| ಶಿಂಗ್ಲಾಚಾರ್ಯರನ್ನೂ ಅಭಿನಂದಿಸುವೆವು. ಈ ಸುಸಮಯಕ್ಕೆ ಸರಿಯಾಗಿ ರಾಷ್ಟ್ರೀಯ ಮಹಾ ಸಭೆಯ ಸುದ್ದಿಯನ್ನು ಆಯಾದಿನವೇ ಒದಗಿಸಿಕೊಡಲು, ಸಂಪಾದಕರು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಹೆಚ್ಚು ಪುಟಗಳನ್ನು ಸೇರಿಸಿಕೊಟ್ಟು ಮೈಸೂರಿಗೆ ಮಹದುಪಕಾರಮಾಡಿರುವರು. ಈ ಜನಜಾಗ್ರತೆಯ ನವಯುಗದಲ್ಲಿ, ಜನಾಂಗವು ಎಚ್ಚೆತ್ತು ರಾಷ್ಟ್ರೀಯ ಭಾವನೆಯಿಂದ ವಿರಾಜಿಸುವಾಗ ಈ ಬಗೆಯ ವೃತ್ತಪತ್ರಿಕೆಗಳು, ಜನಾಂಗದ ಜೀವದಂತಿರುವುವು. ಮಹಾಜನರು ಸಂಪಾದಕರ ಕಷ್ಟವನ್ನರಿತು, ಅವರಿಗೆ ಬೇಕಾದ ಮುದ್ರಣಾಲಯ ಮುಂತಾದ ಸೌಕರ್ಯಗಳನ್ನು ಒದಗಿಸಿ ಕೊಡುವುದಾದರೆ ಈ ಬಗೆಯ ಎ ಪಿ. ಐ. ರೂಟರ್, ಮುಂತಾದ ತ್ವರಿತಸಮಾಚಾರಗಳನ್ನು ತರಿಸಿ ಆಯಾ ದಿನವೇ ಜನರಿಗೆ ಒದಗಿಸಿಕೊಟ್ಟು, ಪತ್ರಿಕೆಯನ್ನು ಮತ್ತಷ್ಟು ಉಪಯೋಗಕರವಾಗಿ ನಡೆಸಬಲ್ಲರು ಅಂತೂ ಮ|| ರಾಮಯ್ಯನವರ ಸಾಹಸವೂ ದೇಶಸೇವೆಯೂ ಅಪರಿಮಿತವಾದದು. ಇದಕ್ಕಾಗಿ ಅವರನ್ನು ಅಭಿನಂದಿಸುವೆವು.

ರಾಧೆ:—ಬರೆದವರು:—"**ಕ್ಷೀರಸಾಗರ**" ಕ್ರಯ ೪ ಆಣೆ

ಇದು ರಾಧಾಕೃಷ್ಣರ ಪ್ರಣಯದ ಪುಟ್ಟದೃಶ್ಯ ಈಗಿನಕಾಲದ ನೂತನಸಾಹಿತ್ಯದ ಗುಂಪಿನ ಗದ್ಯರೂಪದ ಪುಟ್ಟಪುಸ್ತಕ. ಭಾಷೆಯು ಸುಲಲಿತವಾಗಿ ಎಲ್ಲರಿಗೂ ತಿಳಿಯುವಂತಿದೆ ಪ್ರಾಚೀನ ಕವಿಗಳ ಸಂವಿಧಾನವನ್ನನುಸರಿಸಿಯೇ ಸುರಸವಾದ ಹೊಸಕಾಲದ ಭಾಷೆಯಲ್ಲಿ ಬರೆದಿರುವರು. ದೃಶ್ಯವೆಲ್ಲವೂ ಶೃಂಗಾರ ರಸದಿಂದ ತುಂಬಿದ್ದರೂ, ಪಾತ್ರಗಳು ಗಂಭೀರವಾಗಿಯೂ, ಉದಾತ್ತವಾಗಿಯೂ, ವರ್ಣಿತವಾಗಿವೆ. ರಾಧೆಯು ಪ್ರೇಮಸಮಾಧಿಯಲ್ಲಿ ಮುಳುಗಿ :—

"ನಾಥ! ಶ್ರೀಕೃಷ್ಣ
ಎಲ್ಲಿ ಮರೆಯಾಗಿರುವೆ?
ಮಲ್ಲಿಗೆಯ ಮನೆಯಲ್ಲಿ?
ಸಂಪಿಗೆಯ ತರುವಿನಲಿ?
ಚಂದ್ರಿಕಾ ಸುಂಟಪದಿ?
ನಾಥ ಶ್ರೀಕೃಷ್ಣ
ಎಲ್ಲಿ ಮರೆಯಾಗಿರುವೆ?
ಬಳಲಿ ಬೆಂಡಾಗಿ
ಚಂದ್ರ ಪೀಠದಮೇಲೆ
ಕುಳಿತು ಮೌನದಲಿ
ಗಾಳಿಯನೆ ದಿಟ್ಟಿಸುತ
ಹರಿಯನೀಕ್ಷಿಸುತ
ಆಗಸವು ಹನಿಯುತಿದೆ
ಅವಳಿಗೆಚ್ಚರವಿಲ್ಲ.
ಹರಿಯಂಕದಲಿ ಕುಳಿತು
ಬಾಹುಪಾಶದಿ ಸಿಲುಕಿ
ಕಮಲ ವಕ್ಷದಿ ನೆರೆವ
ಕೌಸ್ತುಭಾಭರಣವನು
ತುಳಸಿ ಮಾಲೆಯನು
ಕೈಯ್ಯೊಳಾಡಿಸುತ"

ಎಂದು ಕೃಷ್ಣನಲ್ಲಿ ರಾಧೆಯ ಮಾನಸಿಕ ಐಕ್ಯತೆಯನ್ನು ರಸವತ್ತಾಗಿ ಚಿತ್ರಿಸಿರುವರು.

ಈ ಪುಸ್ತಕವು ಸುಬೋಧ ಮುದ್ರಾಣಾಲಯದಲ್ಲಿ ಮುದ್ದಾಗಿ ಮುದ್ರಣವಾಗಿ ಹೊರಬಿದ್ದಿದೆ. ಈ ಪುಟ್ಟಪುಸ್ತಕವು ಕನ್ನಡ ರಸಿಕರ ಆದರಕ್ಕೆ ತಕ್ಕುದಾಗಿದೆ. ಸಾಹಿತ್ಯದೊಡನೆ ಸಂಗೀತವೂ ಬೆರೆತಿದ್ದರೆ ಹಾಲಿನೊಡನೆ ಸಕ್ಕರೆ ಬೆರೆತಂತಾಗುತ್ತಿತ್ತು.

ಕವಿತಾ ಚಿತ್ರ.

೫೫॥ ಬೆಳ್ಳಾವೆ ನರಹರಿಶಾಸ್ತ್ರಿಗಳು.

ಚಿತ್ರಕಾರನು ರೇಖೆಗಳಿಂದಲೂ, ವರ್ಣಗಳಿಂದಲೂ ವಿಧವಿಧ ವಸ್ತುಗಳನ್ನೂ, ನರವಾನರಾದಿ ಜೀವರಾಶಿಗಳನ್ನೂ, ತನ್ನ ಮನದಲ್ಲಿ ಉದಯಿಸಿದ ಭಾವಗಳನ್ನನುಸರಿಸಿ ಹೇಗೆ ಚಿತ್ರಿಸುವನೋ ; ಅದರಂತೆಯೇ ಕವಿಯು ತನ್ನ ಮನಸ್ಸಿನಲ್ಲಿ ಉದಯಿಸಿದ ವಿಧವಿಧವಾದ ಭಾವಗಳನ್ನು ಸಮುಯೋಚಿತ ಶಬ್ದ ಚಾತುರ್ಯದಿಂದಲೂ, ಅಲಂಕಾರ ಭಾವಗಳಿಂದಲೂ, ಕವಿತೆಯ ರೂಪದಲ್ಲಿ ಚಿತ್ರಿಸಿ ಓದುವವರ ಮನಸ್ಸಿನಲ್ಲಿ ತನ್ನ ಭಾವನಾಕೃತಿಗಳು ಗೋಚರವಾಗುವಂತೆ ಮಾಡುವನು. ಅದುದರಿಂದ ಕವಿತೆಯನ್ನು ರಸಿಕರ ಮನಸ್ಸಿಗಾಹ್ಲಾದವನ್ನುಂಟುಮಾಡುವ, ಕವಿಯ ಭಾವಗಳ ಚಿತ್ರವೆನ್ನಬಹುದು. ನಿವಿಧ ವರ್ಣ ಸಾಮಗ್ರಿಗಳೇ ಮೊದಲಾದುವುಗಳಿಂದ ಸ್ಥೂಲ ನೇತ್ರಗಳಿಗೆ ಗೋಚರವಾಗುವಂತೆ ಚಿತ್ರ ಬರೆಯುವುದಕ್ಕಿಂತಲೂ, ಕೇವಲ ಕಲ್ಪನಾಶಕ್ತಿಯಿಂದುಂಟಾದ ಆಕೃತಿಗಳನ್ನು ವಿವಿಧ ಶಬ್ದಪೋಳನ ಮಾತ್ರದಿಂದ ತನ್ನ ಸಂಪೂರ್ಣ ಭಾವಗಳು ಪಾಠಕನ ಮನಶ್ಚಕ್ಷುಸ್ಸಿಗೆ ಸ್ಫುಟವಾಗಿ ಗೋಚರವಾಗುವಂತೆ ಬರೆಯಬಲ್ಲ ಕವಿತಾ ಚಿತ್ರಕಾರನ ಕುಶಲತೆಯು ಕೇವಲ ಸ್ತೋತ್ರಾರ್ಹವಾದುದೆಂಬುದನ್ನು ಎಲ್ಲರೂ ಒಪ್ಪಬಹುದು ಇದರಿಂದಲೇ ಲೋಕದಲ್ಲಿ ಕವಿಗಳಿಗೆ ಗೌರವಸ್ಥಾನವು ದೊರೆತಿರುವುದು. ಮತ್ತು 'ಕವಿಯೇ ಸರ್ವರೊಳುತ್ತಮಂ' 'ಕವಿಯಾಸ್ಥಾನಕೆ ಭೂಷಣಂ'—ಇವೇ ಮೊದಲಾದ ರೀತಿಯಲ್ಲಿ ಪೂರ್ವದ ಮಹನೀಯರು ಕವಿಗಳನ್ನು ಪ್ರಶಂಶಿಸಿರುವರು.

ಪ್ರಕೃತಿ ನೈಚಿತ್ರ್ಯವನ್ನಾಗಲಿ, ಒಂದು ವ್ಯಕ್ತಿಯನ್ನಾಗಲಿ, ವಸ್ತುವನ್ನಾಗಲಿ, ಚಿತ್ರಿಸಲು, ಶಿಲ್ಪಿಯು, ಅದರಂತೆ ಪಾರ್ಥಿವ ಪದಾರ್ಥಗಳಿಂದ ಆಕಾರವನ್ನು ಮಾಡಿಟ್ಟು ಅಥವಾ ಬರೆದಿಟ್ಟು ಬಣ್ಣಗಳಿಂದ ಅದಕ್ಕೆ ಹೆಚ್ಚು ಕಳೆಯನ್ನು ಕೊಡುವನು. ಇದನ್ನು ನೋಡಿದೊಡನೆಯೇ ಸಕಲರಿಗೂ ಆನಂದವಾಗುವುದು. ಆದರೆ ಅದೇ ವಿಷಯಗಳನ್ನೇ ಕವಿತಾ ಚಿತ್ರಕಾರನು ಚಿತ್ರಿಸುವುದಾದರೆ, ಉಚಿತ ಶಬ್ದಮೇಳನ ಚಾತುರ್ಯದಿಂದ ಮಾತ್ರವೇ ತನ್ನ ಭಾವಗಳನ್ನು ತುಂಬಿ ಆ ವಿಷಯಗಳ ನಿಜರೂಪವು ತನ್ನ ಭಾವನೆಯಂತೆ ಪಾಠಕರ ಮನಸ್ಸಿನ ಮೇಲೆ ಪರಿಣಾಮವಾಗುವ ರೀತಿಯಿಂದ ಕವಿತೆಯಲ್ಲಿ ಚಿತ್ರಿಸಿ ತೋರಿಸುವನು. ಆದರೆ ಈ ಕವಿತಾಚಿತ್ರವು ವರ್ಣಚಿತ್ರದಂತೆ ಸ್ಥೂಲನೇತ್ರದಿಂದ ನೋಡಿದೊಡನೆಯೇ ಮನಸ್ಸಿಗೆ ಆನಂದವನ್ನುಂಟುಮಾಡುವುದಕ್ಕೆ ಪ್ರತಿಯಾಗಿ ಅದನ್ನು ಮನಸ್ಸಿನಿಂದ ಗ್ರಹಿಸಿ ರಸಾನುಭವ ಮಾಡುವ ರಸಿಕರಿಗೆ ಮಾತ್ರ ಆನಂದವನ್ನುಂಟುಮಾಡುವುದು. ಇದರಿಂದ ಸಂಗೀತ ಸಾಹಿತ್ಯಗಳಿಗೆ ಯಾವ ವಿಧವಾದ ಸಂಬಂಧವಿರುವುದೋ, ಅದೇ ಬಗೆಯ ಸಂಬಂಧವು ಚಿತ್ರಕಲೆಗೂ ಕವಿತೆಗೂ ಉಂಟೆಂಬುದು ವ್ಯಕ್ತವಾಗುವುದು.

ಹಿಂದೆ ನಮ್ಮಲ್ಲಿ ಅನೇಕ ಚಿತ್ರಲೇಖಕರೂ, ಶಿಲ್ಪಿಗಳೂ ಶಾಶ್ವತವಾಗಿರುವ ಅದ್ಭುತ ಕಾರ್ಯಗಳನ್ನು ಮಾಡಿ ಜಗದ್ವಿಖ್ಯಾತರಾಗಿರುವರು. ಇದರಂತೆಯೇ ಅಸಾಧಾರಣ ಕವಿತಾ ಶಿಲ್ಪಿಗಳೂ, ಕಾವ್ಯಚಿತ್ರಚತುರರೂ, ಕರ್ನಾಟಕದಲ್ಲಿ ಜನ್ಮಧಾರಣಮಾಡಿ, ತಮ್ಮ ಅಸದೃಶ ಪ್ರತಿಭೆಯಿಂದ ಕವಿತಾಕಲೆಗೆ ಜೀವವಿತ್ತರೆಂಬುದು ವ್ಯಕ್ತವಾಗುವುದು. ಈ ಮಹಾ ಕವಿಗಳ ಕಾರ್ಯದಲ್ಲಿ ಅಡಗಿರುವ ಕಲಾಸತ್ವವು ಯಾವ ಜನಾಂಗದ ಸಾಹಿತ್ಯಕ್ಕೂ ಹಿಂದೆ ಬೀಳುವಂತಿಲ್ಲ. ನಮ್ಮ ಕರ್ನಾಟಕ ಕವಿಸಾರ್ವಭೌಮರ ಕಾವ್ಯಗಳನ್ನು ಪ್ರಪಂಚದ ಇತರ ಯಾವ ಜನಾಂಗದ ಕಾವ್ಯದೊಡನೆ ಹೋಲಿಸಿದರೂ

ಭಾಷೆಯೊಂದರಲ್ಲಿ ಮಾತ್ರವಲ್ಲದೆ ಕಲೆಯಲ್ಲಿಯೂ ಹಿಂದುಬೀಳುವಂತಿಲ್ಲ. ಇದನ್ನು ಸಿದ್ಧಮಾಡಿಕೊಡಲು ಸಾವಿರಾರು ನಿದರ್ಶನಗಳನ್ನೀಯಬಹುದು. ಳಿಂ ವರ್ಷಗಳ ಹಿಂದೆ ಇದ್ದು, ಜಗನ್ನಾಥ ವಿಜಯವನ್ನು ಬರೆದ, ರುದ್ರಭಟ್ಟನೆಂಬ ಮಹಾಕವಿಯ ಒಂದು ಪುಟ್ಟ ಕವಿತಾಚಿತ್ರವನ್ನು ಮಾತ್ರ ಇಂದು ವಾಚಕರ ಮುಂದಿಡಲು ಆಶಿಸುವೆನು.

ಶ್ರೀ ಕೃಷ್ಣಪರಮಾತ್ಮನು ನಾರದನು ದೇವಲೋಕದಿಂದ ತನಗೆ ತಂದುಕೊಟ್ಟ ಪಾರಿಜಾತ ಪುಷ್ಪವನ್ನು ರುಕ್ಮಿಣೀದೇವಿಗೆ ಕೊಟ್ಟು; ತನ್ನನ್ನು ಉದಾಸೀನ ಮಾಡಿದನೆಂಬ ವಾರ್ತೆಯನ್ನು ಕೇಳಿ, ಸತ್ಯಭಾಮೆಯು ದುಃಖಿಸುತ್ತಿರುವುದನ್ನರಿತು ; ಕೃಷ್ಣನು ಅಲ್ಲಿಗೆ ಬಂದಾಗ ಅಲ್ಲಿದ್ದ ಭಾಮೆಯ ರೂಪನ್ನು ಕವಿಯು ಈ ರೀತಿ ಬಣ್ಣಿಸಿರುವನು.

ಶ್ಲೋ॥ ಪರಮಕ್ರೋಧಾಧಿದೇವಾರ್ಚನಮೆನೆ ಪರಿದೊಟ್ಟುತ್ತಿಲೀಲಾಬ್ಜಪತ್ರೋ |
ತ್ಕರಮಂ ಚಿಂತಾಲತಾವೃದ್ಧಿಯ ನೊಡರಿಸಲೋರಂತೆ ನೀರ್ಗೊಯ್ವಪಾಂಗಿಂ
ಸುರಿಸುತ್ತಂ ಬಾಷ್ಪಧಾರಾಜಲಪರಿಕರಮಂ ಸ್ನೇಹಶಾಸ್ತ್ರಕ್ಕೆಟೀಕಂ |
ಬರೆಯುತ್ತಿರ್ಪಂದದಿಂದುಂಗುಟದೆ ಬರಿವುತಂಭೂಮಿಯಂ ಭಾಮೆಯಿರ್ದಳ್ ||

ತಾ॥ ಸತ್ಯಭಾಮೆಯು ಕ್ರೋಧಾಧಿದೇವತೆಯನ್ನು ಪೂಜಿಸುತ್ತಿರುವಳೋ ಎಂಬಂತೆ ತನ್ನ ಕೈಯಲ್ಲಿದ್ದ ಕಮಲದ ದಳಗಳನ್ನು ಒಂದೊಂದಾಗಿ ಕಿತ್ತುಹಾಕುತ್ತಲೂ, ದುಃಖನೆಂಬ ಲತೆಯನ್ನು ಇನ್ನೂ ಒಲವಾಗಿ ಬೆಳೆಸುವುದಕ್ಕಾಗಿ ನೀರೆರೆಯುತ್ತಿರುವಳೋ ಎಂಬಂತೆ ಕಣ್ಣೀರು ಧಾರೆಯನ್ನು ಸುರಿಸುತ್ತಲೂ, ಕೃಷ್ಣನಿಗೂ ತನಗೂ ಈರುವ ಸ್ನೇಹಭಾವವನ್ನು ವ್ಯಕ್ತಗೊಳಿಸುವುದಕ್ಕೆ, ಸ್ನೇಹ ಶಾಸ್ತ್ರಕ್ಕೆ ಅರ್ಥಬರೆಯುವಳೋ ಎಂಬಂತೆ ಉಂಗುಟದಿಂದ ನೆಲದಲ್ಲಿ ಬರೆಯುತ್ತಲೂ ನಿಂತಿದ್ದಳು

ಕವಿಯು ಮೇಲಿನ ಭಾವವನ್ನು ಸಮಯೋಚಿತ ಶಬ್ದಪ್ರಯೋಗಗಳಿಂದಲೂ, ಅಲಂಕಾರ ಭಾವಗಳಿಂದಲೂ, ಪದ್ಯರೂಪದಲ್ಲಿ ಚಿತ್ರಿಸಿರುವ ಕ್ರಮವು ಆ ಭಾಮೆಯ ಮನೋಭಾವವನ್ನೂ, ಆಕೆಯ ರೀತಿಯನ್ನೂ, ಆ ಸನ್ನಿವೇಶದಲ್ಲಿನ ರಸಭಾವವನ್ನೂ ಯಾವ ರಸಿಕನ ಮನಸ್ಸಿಗೆ ತಾನೇ ತಾರದಿರುವುದು !

ಈ ಪದ್ಯವನ್ನು ಓದದಿದ್ದರೂ, ಕಥಾ ಭಾಗವನ್ನರಿತ ಚಿತ್ರಗಾರನೊಬ್ಬನು ಇದೇ ಸನ್ನಿವೇಶವನ್ನು ಚಿತ್ರಿಸುವುದಾದರೆ; ಆ ಚಿತ್ರವು, ಈ ಪದ್ಯದಲ್ಲಿನ ವರ್ಣನೆಗೆ ವ್ಯತ್ಯಾಸವಿಲ್ಲದೆ ಹೋಲುವುದು. ಪ್ರಧಾನವಲ್ಲದ ಒಂದೆರಡು ವಿಷಯಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ಚಿತ್ರವನ್ನು ನೋಡುವವನಿಗುಂಟಾಗುವ ಸಂತೋಷಕ್ಕೂ, ಈ ಪದ್ಯವನ್ನು ಓದಿ ಗ್ರಹಿಸಿದ ರಸಿಕನ ಮನಸ್ಸಿನ ಸಂತೋಷಕ್ಕೂ, ವ್ಯತ್ಯಾಸವಿರಲಾರದು. ಆದುದರಿಂದ ಶಿಲ್ಪಿಯ ಕಾರ್ಯವು, ಕವಿಯ ಕಾರ್ಯವೂ ಒಂದೇ ಬಗೆಯ ಮಹತ್ವವುಳ್ಳವೆಂದರೆ ಅತಿಶಯೋಕ್ತಿಯಾಗಲಾರದು ಇಬ್ಬರೂ ಕಲಾವಿದರೆ ! ಇಬ್ಬರೂ ರಸಿಕರೆ !! ಇಬ್ಬರೂ ಸೌಂದರ್ಯೋಪಾಸಕರೇ !!!

ಪ್ರೀತಿಯ ಪುಸ್ತಕದ ಹಾಳೆ.

" ಪ್ರೀತಿಯ ಪುಸ್ತಕದ ಹಾಳೆಗಳನ್ನು ಹೆಚ್ಚಿಸಬೇಕು; ಹೊಸಹೊಸ ತರಹೆಯ ವಿಷಯಗಳನ್ನು ಕೊಡುತ್ತ ಬರಬೇಕು. ನಗುಬರಿಸುವಂತ ಚಿತ್ರಗಳನ್ನೂ ಕುಚೋದ್ಯಗಳನ್ನೂ ಕೊಡುತ್ತ ಬರಬೇಕು "ಎಂದು ಮಕ್ಕಳೇ ಬರೆದಿರುವುದು ಚನ್ನಾಗಿ ನೆನಪಿನಲ್ಲಿದೆ. ಇದನ್ನು ಕಾರ್ಯದಲ್ಲಿ ತೋರಿಸಲು ಹವಣಿಸುತ್ತಿರುವೆವು. ಇಷ್ಟು ಮಾತ್ರವೇ ಅಲ್ಲ. ಈ ಪ್ರೀತಿಯ ಪುಸ್ತಕದ ಭಾಗವನ್ನೇ ಪ್ರತ್ಯೇಕ ಪ್ರತ್ಯೇಕವಾಗಿ ಮಕ್ಕಳ ಕೈಗೆ ಸಿಕ್ಕುವಂತೆ ಮಾಡಲಾಗುವುದು. ಸಾವಕಾಶವಾದಲ್ಲಿ ಕೋಪ ಮಾಡಿಕೊಳ್ಳಬಾರದು.

ಹಾ ರೈಕೆ.

ಬಿ| **ಬಿಟ್ಟಗೇರಿ ಶರ್ಮಾ** ಇವರು ಸಂಗ್ರಹಿಸಿ ಕರ್ನಾಟಕಸಾಹಿತ್ಯ ಪತ್ರಿಕೆಯಲ್ಲಿ ಪ್ರಕಟಿಸಿದುದು.

ಹಸುಗೂಸು ಹುಟ್ಟಲಿ ಹೊಸಪೇಟೆ ಕಟ್ಟಲಿ |
ರಸಬಾಳೆ ಕಬ್ಬು ಬೆಳೆಯಲಿ ||
ರಸಬಾಳೆ ಕಬ್ಬು ಬೆಳೆಯಲಿ ನಮ್ಮೂರ |
ಬಸವಣ್ಣನ ತೇರು ಎಳೆಯಲಿ ||

ತರಕಾರಿಯ ಮಹಾಸಭೆ.



ಈ ಸಭೆಯ ವಿಷಯವು ನಿಮಗೆ ಗೊತ್ತಿರಬಹುದು! ಹಾಗಾದರೆ ಅಲ್ಲಾದ ತೀರ್ಮಾನವೇನು ಹೇಳಿ? ಮುಂದಿನ ಸಂಚಿಕೆಯಿಂದ ಈ ಬಗೆಯ ಅನೇಕ ಚಿತ್ರಗಳು ಬರುವುವು. ನೀವೂ ಕೆಲವನ್ನು ಬರೆದು ಕಳುಹಿಸ ಬಹುದು.

ಏಪ್ರಿಲ್ ಮೊದಲನೆಯ ವಾರದಲ್ಲಿ ಪ್ರಕಟಿಸಲ್ಪಡುವುದು

ಆ ಹು ತಿ

(ವಿಷಾದಾಂತ ಸಾಮಾಜಿಕ ನಾಟಕ)

ಗ್ರಂಥಕರ್ತರು: ಶ್ರೀ|| ಅ. ಸ. ಕೃಷ್ಣರಾಯರು

ನಮ್ಮ ಸಮಾಜದ ಕುಂದುಕೊರತೆಗಳನ್ನರಿತು, ಅವುಗಳನ್ನು ಎದುರಿಸಿ ನಿವಾರಿಸಲು ನಾಡಿಗರು ಕಟಿಬದ್ಧರಾಗಿ ನಿಂತಹೊರತೂ ನಮ್ಮ ನಾಡಿಗೆ ಏಳಿಗೆಯಿಲ್ಲ. ಸಮಾಜದಲ್ಲಿನ ಕುಂದುಕೊರತೆಗಳೂ ಹಾಗೂ ಅವಿವೇಚನೆ, ಕ್ರೌರ್ಯ ಅನಂತಃಕರಣಗಳ ಅಸ್ತಿಭಾರದ ಮೇಲೆ ಬೆಳೆದ ರೂಢಿಯಾಚರಣೆಗಳು ಹೇಗೆ ಅರಿತ ಅರಿಯದವರನ್ನು ಆಹುತಿ ತೆಗೆದುಕೊಳ್ಳುತ್ತವೆಂಬುದನ್ನು ಪರಿಷ್ಕಾರವಾಗಿ ಪೃಥಕ್ಕರಿಸಿರುವ ನಾಟಕ.

"ರಘುವು ಇಂದಿನ ಕಾಲದ ತರುಣ. ಅವನ ಧರ್ಮವು ರೂಢಿಗೆ ತಲೆಬಗ್ಗಿಸಿ ಹೇಡಿಯಂತೆ ನಡೆಯುವುದಲ್ಲ; ಸತ್ಯಕ್ಕೆ ಶರಣು ಹೋಗಿ ಪ್ರೇಮದ ಹಾದಿಯಲ್ಲಿ ನಡೆಯುವುದು. ತಂದೆ ಶ್ರೀಪತಿರಾಯ ರೂಢಿಯ ಮೂಢದಾಸ. ಅತನಿಗೆ ತನ್ನ ಅಕ್ಕನಾದ ಗುಂಡೂ (ವಿಧವೆ) ವನ್ನು ಮೆಚ್ಚಿಸುವುದು ಹಿರಿದೇ ವಿನಾ ಕ್ಷಯರೋಗ ಪೀಡಿತೆಯಾದ ಪತ್ನಿಯನ್ನು ಆದರಿಸುವುದು ಮುಖ್ಯವಲ್ಲ. ರಘುವಿಗೆ ತಾಯಿಯೆಂದರೆ ದೇವರು. ತಾಯಿಗಾಗಿ ತಂದೆಯನ್ನೆದುರಿಸುವನು. ತನ್ನ ಭವಿತವ್ಯವೆಲ್ಲವನ್ನೂ ಬಲಿದಾನ ಕೊಡುವನು. ಸರಳ ಹೃದಯ ರಘುವು ಮಾಧವನಲ್ಲಿ ಪೂರ್ಣ ನಂಬಿಕೆಯನ್ನಿಟ್ಟು, ತನ್ನ ತಾಯಿಗೆ ಚಿಕಿತ್ಸೆಮಾಡಲು ಅತನನ್ನೇ ಗೊತ್ತುಮಾಡಿರುವನು. ಮಾಧವನಿಗೆ ತನ್ನ ವೃತ್ತಿಯ ಮೇಲಿನ ಅಭಿಮಾನಕ್ಕಿಂತಲೂ, ಗುಂಡೂಬಾಯಿಯ ಮಗಳು ಬಾಲವಿಧವೆ ರಾಧೆಯ ಮೇಲೆ ಅಭಿಮಾನ ಹೆಚ್ಚು. ಚಿಕಿತ್ಸೆಯ ನೆಪದಲ್ಲಿ ಆ ಅರಿಯದ ಬಾಲೆಯನ್ನು ತನ್ನ ಕಾಮದ ಬಲೆಯಲ್ಲಿ ಕೆಡಹುವನು. ಸುಶೀಲಾ ಬಾಯಿಯು ಮೃತಿಹೊಂದುವಳು. ರಘುವಿಗೆ ಆಕಾಶವೇ ತಲೆಯಮೇಲೆ ಬಿದ್ದಂತಾಗುವುದು. ಇತ್ತ ತಾಯಿಯನ್ನಗಲಿದ ಮಹದ್ದ್ಯೆಸನ; ಇತ್ತ ತನ್ನೊಲುಮೆಯ ರಾಧೆಗಾದ ವರಿವಾದದ ಬಗ್ಗೆ ತೀಕ್ಷ್ಣಣ ಕ್ರೋಧ. ಈ ಮಧ್ಯೆ ದುಡುಕಿ ವರ್ತಿಸಬೇಡವೆಂದು ಎಚ್ಚರಗೊಡುತ್ತಿದ್ದ ವಿವೇಚನೆಯ ಉಪಟಳ. ರಘುವೂ, ರಾಧೆಯೂ ಮಾಧವನನ್ನು ಬೇಡುವರು—'ತಪ್ಪಿ ನಡೆಯುವುದು ಮಾನವ ಲಕ್ಷಣ. ತಿದ್ದಿಕೊಳ್ಳುವುದು ದೇವತ್ವದ ಚಿನ್ಹೆ'—ಆದರೆ ಹೀನ ಮಾಧವನು ತಿರಸ್ಕರಿಸುವನು. ತನ್ನ ದೋಷವನ್ನು ರಘು ಮೇಲೆಯೇ ಹಾಕಲೆತ್ನಿಸುವನು. ಸಾತ್ವಿಕತೆಯ ಮೂರ್ತಿಯಾಗಿದ್ದ ರಘುವು ರಜಸ್ಸಿನ ರಾಜನಾಗುವನು. ತನ್ನ ಸೂತ್ರಗಳನ್ನೂ ಆದರ್ಶಗಳನ್ನೂ ಜೀವನ ರಂಗದಲ್ಲಿ, ತೋರುವ ಸನ್ನಿವೇಶವಿದೆಂದು ಗ್ರಹಿಸುವನು. ಮಾಧುವಿನ ಕಾಲ್ಗೀಡಿತನವನ್ನು ಧಿಕ್ಕರಿಸಿ, ಅರ್ತೆಯಾದ ರಾಧೆಗೆ ತಾನು ಆಶ್ರಯ ನೀಡುವನು. ಅಕೆಗಾಗಿದ್ದ ಅನ್ಯಾಯವನ್ನು ನಿರಪಡಿಸಲು ತಾನು ಮುಂದುವರಿಯುವನು."

ವಿಷಯ ನಿರೂಪಣದ ಗಾಂಭೀರ್ಯತೆ, ಶ್ರದ್ಧೆ, ಚಮತ್ಕಾರ ಮತ್ತು ಎದೆಗಾರಿಕೆಗಳ ದೃಷ್ಟಿಯಲ್ಲಿ ಈ ಬಗೆಯ ನಾಟಕವು ಈವರೆಗೆ ಬರೆಯಲ್ಪಟ್ಟಿಲ್ಲ.

ಸರಳವಾದ ಶೈಲಿ—ಮರೆಯಲಾಗದಂತಹ ಪಾತ್ರಸೃಷ್ಟಿ—
ಹೃದಯವನ್ನು ಝಲ್ಲೆನಿಸುವ ಸನ್ನಿವೇಶಗಳು—
ಇವುಗಳಿಲ್ಲದರ ಸಮರಸವೆಂದರೆ—" ಆಹುತಿ."

ಬೆಲೆ: ಸುಂದರ ನಾಡಾ ಬೈಂಡಿನ ಪ್ರತಿ ೧ ರೂಪಾಯಿ. ಸುಂದರ ಕ್ಯಾಲಿಕೋ ಬೈಂಡಿನ ಪ್ರತಿ ೧ ರೂ. ೪ ಆಣೆ.

ಪ್ರ ಕಾ ಶ ಕ ರು:

ಪಿ. ಜಿ. ಟಿ. ಜನರಲ್ ಏಜೆನ್ಸಿ,

ಬಳೇಪೇಟೆ, ಬೆಂಗಳೂರು ಸಿಟಿ.

ಜ್ಯೋತಿ ಪವರ್ ಪ್ರಿಂಟಿಂಗ್ ವರ್ಕ್ಸ್, ಶ್ರೀ ನರಸಿಂಹರಾಜರೋಡ್, ಬೆಂಗಳೂರು ಸಿಟಿ

ಎಂ. ವಿ. ಶ್ರೀನಿವಾಸರಾವ್ ವೆಟರಿನರಿ ಇನ್‌ಸ್ಪೆಕ್ಟರ್, ತರೀಕೆರೆ.
ಎಸ್. ವಿ. ರಾಮಸ್ವಾಮಿ ಡಿಟೋ ಸೊರಬ.
ಕೆ. ಎಸ್. ಪಿಳ್ಳೆ ಡಿಟೋ ಯಡತೊರೆ.
ಮಹಮ್ಮದ್ ಬಾವೂದ್ ಡಿಟೋ ಕುಣಿಗಲ್ ಸ್ಟಡ್‌ಫಾರಂ.
ಜೆ. ಮುನಿಯಪ್ಪ ಡಿಟೋ ಬೆಂಗಳೂರು.
ಮಹಮದ್ ಇಬ್ರಾಹಿಂ ಡಿಟೋ ಕಡೂರು.
ಕೆ. ಎಸ್. ಸುಬ್ಬರಾವ್ ಡಿಟೋ ಮೊಬೈಲ್‌ಕೋರ್.
ಎಸ್. ಎಂ. ಕೃಷ್ಣ ಡಿಟೋ ರಾಂಪುರ.
ಕೆ. ಕೆ. ಮೂರ್ತಿ ಡಿಟೋ ಮೊಬೈಲ್‌ಕೋರ್.
ಕೆ. ಎಸ್. ಕೃಷ್ಣಪ್ಪ ಡಿಟೋ ಸಾಗರ.
ಬಿ. ಎಲ್. ಸುಬ್ರಹ್ಮಣ್ಯ ಡಿಟೋ ಜಗಳೂರು.
ಎಂ. ಲಾರೆನ್ಸ್ ಡಿಟೋ ಮೊಬೈಲ್‌ಕೋರ್.
ಪಿ. ವೇದಭಟ್ಟ ಡಿಟೋ ಡಿಟೋ
ಶಾರದಪಾದದಾಸ್ ಡಿಟೋ ಡಿಟೋ

ಸೀರಂ ಇನ್‌ಸ್ಟಿಟ್ಯೂಟ್.

ಪಿ. ಪಾರ್ಥಸಾರಥಿ, ಎಲ್.ಎಂ.ಎಸ್., ಬಿ.ಎಸ್‌ಸಿ., ಎಲ್.ಆರ್.ಸಿ.ಪಿ. ಅಂಡ್ ಎಸ್., ಡಿ.ಟಿ.ಎಲ್., ಡಿ.ಪಿ.ಎಚ್., ಸೂಪರ್‌ಟೆಂಡೆಂಟ್.
ಎಸ್. ಡಿ. ಆಚಾರ್, ಜಿ.ಬಿ.ವಿ.ಸಿ., ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್. (ವೈರಸ್‌ಸೆಕ್ಷನ್).
ಎಸ್. ಆರ್. ಶ್ರೀನಿವಾಸ ಅಯ್ಯಂಗಾರ್, ಜೆ.ಬಿ.ವಿ.ಸಿ., ವೆಟರಿನರಿ ಇನ್‌ಸ್ಪೆಕ್ಟರ್.
ಸಿ. ರಂಗಣ್ಣ, ಜಿ.ಬಿ.ವಿ.ಸಿ., ವೆಟರಿನರಿ ಇನ್‌ಸ್ಪೆಕ್ಟರ್, ಸೀರಂ ಸೆಕ್ಷನ್, ಬೆಟ್ಟಿಹಳ್ಳಿ ಫಾರೆಸ್ಟ್ ಕಾವಲ್.
ಟಿ. ಚಂದು, ಜೆ.ಎಂ.ವಿ.ಸಿ., ಡಿಟೋ ರಿಸರ್ವ್‌ಡಿಪೋ ಚಾರ್ಜಿನಲ್ಲಿ ರುವರು.
ವಿ. ಎಸ್. ಕುಪ್ಪುಸಾಮಿ ಮೊದಲಿಯಾರ್, ವೆಟರಿನರಿ ಇನ್‌ಸ್ಪೆಕ್ಟರ್, ಸೀರಂ ಸೆಕ್ಷನ್.
ಆರ್. ಎಂ. ಪುರುಷೋತ್ತಂ, ಜಿ.ಬಿ.ವಿ.ಸಿ., ಡಿಟೋ ಲ್ಯಾಬೊರೇಟರಿ ಕೆಲಸ.
ಜಿ. ಎಸ್. ಶ್ರೀಕಂಠಯ್ಯ, ಜಿ.ಎಂ.ವಿ.ಸಿ., ಡಿಟೋ ವೈರಸ್ ಸೆಕ್ಷನ್.

ಅಮೃತಮಹಲ್ ಇಲಾಖೆ.

ಬಿ. ಲಕ್ಷ್ಮೀಪತಿ, ಜೆ.ಬಿ.ವಿ.ಸಿ., ಸೂಪರ್‌ಟೆಂಡೆಂಟ್.
ಮಹ್ಮದ್ ಖಾನ್ ಮಿಯೊನಾ, ದರೋಗ, ೧ನೇ ಗ್ರೇಡ್, ಹಾಸನ.
ಯಸ್. ಕೆ. ವೆಂಕಟರಾವ್, ಡಿಟೋ ಡಿಟೋ ಕಡೂರು (ಬನ್ನೂರು ಪಕುಗಳ ಫಾರಂ ಮ್ಯಾನೇಜರಾಗಿ ಹೋಗುವುದರಲ್ಲಿ ರುವರು.)
ಎಸ್. ಪಿ. ಕೇಷಗಿರಿರಾವ್, ಜೆ.ಬಿ.ವಿ.ಸಿ., ದರೋಗ, ೨ನೇ ಗ್ರೇಡ್, ಚಳ್ಳಕೆರೆ.
ಟಿ. ಜೆ. ನರಸೋಜಿರಾವ್, ಡಿಟೋ ಡಿಟೋ ಹೊಳಲ್ಕೆರೆ.
ಎಸ್. ಡಿ. ವೆಂಕಟಕೃಷ್ಣಯ್ಯ, ಡಿಟೋ ಡಿಟೋ ತುಮಕೂರು.
ಸಿ. ವಿ. ನಾರಾಯಣಾಚಾರ್, ಡಿಟೋ ಡಿಟೋ ಅರಸೀಕೆರೆ.
ಡಿ. ಆರ್. ಕಾಳಪ್ಪನಾಯಿಡು, ಕಾವಲ್ ರೇಂಜರ್, ತಿಪಟೂರು (ರಜಾದಲ್ಲಿ ರುವರು).
ಜಿ. ಎಸ್. ತಿಮ್ಮರಾಯಪ್ಪ, ಡಿಟೋ ಹಾಸನ.
ಜಿ. ಎಂ. ಅಬ್ದುಲ್ ಲತೀಫ್, ಡಿಟೋ ಕಡೂರು.
ವಿ. ಎಸ್. ನಾರಾಯಣರಾವ್, ಡಿಟೋ ಸೂಪರ್‌ಟೆಂಡೆಂಟರ ಆಫೀಸು.
ಗಿರಿಧರಸೀಗ್, ಡಿಟೋ ಚಳ್ಳಕೆರೆ.
ಎಚ್. ಟಿ. ಮಿನಾಕ್ಷಯ್ಯ, ಡಿಟೋ ಹೊಳಲಕೆರೆ.
ಫಜಲೂರ್ ರಹಮೂ ಷೆರಿಫ್, ಡಿಟೋ ತುನುಕೂರು (ರಜಾದಲ್ಲಿ ರುವರು).

೧೯೩೧ನೆ ಇಸವಿಯ ಮೈಸೂರು ವ್ಯವಸಾಯದ ಪಂಚಾಂಗ.

೧. ರೈತರಿಗೆ ಬೀಜದ ಗೊಳಿಗಳನ್ನು ಒದಗಿಸಿಕೊಡುವುದು.

ಗ್ರಾಮ ಪಂಚಾಯತಿಗಳ ಮೂಲಕ ಉತ್ತಮ ತಳಿಯ ಬೀಜದ ಗೂಳಿಗಳನ್ನು ಒದಗಿಸಿಕೊಡುವುದಕ್ಕೆ ಸರ್ಕಾರದವರು ಮಾಡಿರುವ ಏರ್ಪಾಡು ಪ್ರಾಯಶಃ ವ್ಯವಸಾಯಗಾರರಲ್ಲಿ ಅನೇಕರಿಗೆ ಗೊತ್ತೇಇದೆ. ಆದರೆ ಈ ಗೂಳಿಗಳನ್ನು ಆರಿಸುವುದರಲ್ಲಿಯೂ ಅನಂತರ ಪಳಗಿಸುವುದರಲ್ಲಿಯೂ ವ್ಯವಸಾಯದ ಇಲಾಖೆಯವರು ಪಡುತ್ತಿರುವ ಶ್ರಮವು ಅನೇಕರಿಗೆ ಗೊತ್ತಿರಲಾರದು.

ಅಮೃತಮಹಲ್ ಸೂಪರ್‌ಇಂಡೆಂಟರು ಮಾಗಿ ಕಾಲದಲ್ಲಿ ಅಮೃತಮಹಲ್ ದನಗಳನ್ನೆಲ್ಲಾ ಗುಂಪುಕೂಡಿಸಿ ಪ್ರತಿಗುಂಪಿನಲ್ಲಿಯು ಮೂರು ವರ್ಷ ಪ್ರಾಯದ, ಲಕ್ಷಣವಾದ ಬೆಣ್ಣೆಕಟ್ಟೂ ಬಣ್ಣವು ಉಳ್ಳ ಎಳೆಯ ಗೂಳಿಗಳನ್ನೆಲ್ಲ ಆರಿಸಿ ಅಜ್ಜಂಪುರದಲ್ಲಿರುವ ದನಗಳ ಕ್ಷೇತ್ರಕ್ಕೆ ಕಳುಹಿಸುತ್ತಾರೆ. ಅಲ್ಲಿ ಈ ಎಳೆ ಗೂಳಿಗಳನ್ನು ಹಗ್ಗಹಾಕಿ ಹಿಡಿದಾಡುವುದಕ್ಕೂ ಕೊಟ್ಟಿಗೆಯಲ್ಲಿ ಮೇವು ತಿನ್ನುವುದಕ್ಕೂ ಒಗ್ಗಿಸುತ್ತಾರೆ. ಈ ರೀತಿಯಲ್ಲಿ ಪಳಗಿಸುವುದಕ್ಕೆ ಸುಮಾರು ಮೂರು ತಿಂಗಳುಕಾಲ ಹಿಡಿಯುತ್ತದೆ. ಅಷ್ಟರಲ್ಲಿ ಸಾಮಾನ್ಯವಾಗಿ ಗೂಳಿಗಳೆಲ್ಲವೂ ಸಾಧುವಾಗುವುವು. ಅನಂತರ ಅವುಗಳನ್ನು ಕೊಂಡುಕೊಳ್ಳಲಪೇಕ್ಷಿಸುವ ಗ್ರಾಮಪಂಚಾಯತಿಗಳ ಪ್ರತಿನಿಧಿಗಳೂ, ಇತರರೂ ತಮಗೆ ಬೇಕಾದ ಗೂಳಿಗಳನ್ನು ಆರಿಸಿಕೊಳ್ಳಬಹುದು.

ಈ ಗೂಳಿಗಳ ಕ್ರಯವು ಸುಲಭವಾಗಿರುವಂತೆ ತಲಾ 200 ರೂಪಾಯಿಗೆಳಂತೆ ಗೊತ್ತುಮಾಡಿದೆ. ಕೊಳ್ಳುವವರಿಗೆ ಮತ್ತೊಂದು ಅನುಕೂಲವುಂಟು. ಒಂದು ವರ್ಷ ಕಾಲ ಗೂಳಿಯನ್ನಿಟ್ಟುಕೊಂಡು ಅದು ಸಮರ್ಪಕವಾಗಿ ಕೆಲಸಮಾಡುವುದಿಲ್ಲವೆಂದು ಕಂಡರೆ ಅದನ್ನು ಇಲಾಖೆಗೆ ಹಿಂದಕ್ಕೆಕೊಟ್ಟು ಅದರ ಬದಲು ಮತ್ತೊಂದನ್ನು ಪಡೆಯಬಹುದು

ಕ್ರಯದ ವಿಷಯದಲ್ಲಿ ಮತ್ತೊಂದು ವಿಷಯ. ಡಿಸ್ಟ್ರಿಕ್ಟು ಬೋರ್ಡಿನವರು ಪುದಾರ ಮನಸ್ಸಿನಿಂದ ಗೂಳಿಯ ಕ್ರಯದ ಅರ್ಧಭಾಗವನ್ನು ತಾವೇ ವಹಿಸಿಕೊಂಡಿದ್ದರಿಂದ ಯಾವ ಗ್ರಾಮ ಪಂಚಾಯತಿಯೂ ಪೂರ್ತಿ ಕ್ರಯಕೂಡಬೇಕಾದ ಸಂದರ್ಭಬಂದಿಲ್ಲ; ಎಂದರೆ, ಪಂಚಾಯತಿಗಳಿಗೆ ನೂರು ರೂಪಾಯಿಗಳ ಬೆಲೆಗೇ ಒಂದೊಂದು ಗೂಳಿ ದೊರೆತಿರುವುದು. ಈ ಏರ್ಪಾಡು ಜಾರಿಗೆ ಬಂದ ಮೊದಲನೆಯ ವರ್ಷದ ಫಲತಾಂಶವು ಸಮರ್ಪಕವಾಗಿಯೇ ಇದೆಯೆನ್ನಬೇಕು. ಕಳೆದ ಸಾಲಿನಲ್ಲಿ ಒಟ್ಟು ೨೯೦ ಗೂಳಿಗಳನ್ನು ಮಾರಿರುವೆವು; ಇದರಲ್ಲಿ ಹತ್ತೊಂಭತ್ತು ಗೂಳಿಗಳನ್ನು ಗ್ರಾಮ ಪಂಚಾಯತಿಗಳು ಕೊಂಡುಕೊಂಡವು. ಈ ಗೂಳಿಗಳ ಕೆಲಸದ ವಿಚಾರದಲ್ಲಿ ಇದುವರೆಗೆ ಒಳ್ಳೆಯ ವರದಿಗಳೇ ಬಂದಿವೆ ಎರಡು ಸಂದರ್ಭಗಳಲ್ಲಿ ಮಾತ್ರ ಗೂಳಿಯನ್ನು ಬದಲಾಯಿಸಿ ಕೊಡಬೇಕೆಂದು ಅಪೇಕ್ಷೆ ಪಟ್ಟಿರುವರು. ಈ ಗೂಳಿಗಳನ್ನು ಗ್ರಾಮದ ದನಗಳ ಜೊತೆಯಲ್ಲಿ ಸ್ವೇಚ್ಛೆಯಾಗಿ ಬಿಡುತ್ತಿರುವರು. ನಮಗೆ ಬಂದಿರುವ ವರದಿಗಳನ್ನು ನೋಡಿದರೆ ಇವುಗಳಿಂದ ರೈತರಿಗೆ ವಿಶೇಷ ಪ್ರಯೋಜನವಾಗುತ್ತಿರುವಂತೆ ಕಾಣುವುದು.

ಇಂಗ್ಲೀಷ್ ತಾರೀಖು		ವಾರಗಳು	ಚಾಂದ್ರಮಾನ ತಿಂಗಳ ದಿನಗಳು	ಸೌರಮಾನ ತಿಂಗಳ ದಿನಗಳು	ತಿಥಿಗಳು ಮತ್ತು ಅವಕ್ಕೆ ಸಲ್ಲುವ ಘಳಿಗೆ ಮತ್ತು ವಿಘಳಿಗೆಗಳು	ನಕ್ಷತ್ರಗಳು ಮತ್ತು ಅವಕ್ಕೆ ಸಲ್ಲುವ ಘಳಿಗೆ ಮತ್ತು ವಿಘಳಿಗೆಗಳು
					ಪ್ರಮೋದೂತ ಸಂವತ್ಸರದ ಪುಷ್ಯ ಶುದ್ಧ.	
ಜ	1	ಗುರುವಾರ ...	12	18	ದ್ವಾದಶಿ 37–42	ಕೃತ್ತಿಕ 31–44
ನು	2	ಶುಕ್ರವಾರ	13	19	ತ್ರಯೋದಶಿ 36–28	ರೋಹಿಣಿ 32–10
ವ	3	ಶನಿವಾರ	14	20	ಚತುರ್ದಶಿ 34—1	ಮೃಗಶಿರ 31–32
	4	ಭಾನುವಾರ	15	21	○ಪೂರ್ಣಿಮೆ 30–39	ಆರಿದ್ರಾ 29–39
					ಪುಷ್ಯ ಬಹುಳ	
	5	ಸೋಮವಾರ	1	22	ಪಾಡ್ಯಮಿ 26–15	ಪುನರ್ವಸು 26–56
	6	ಮಂಗಳವಾರ ...	2	23	ಬಿದಿಗೆ 21–20	ಪುಷ್ಯಮಿ 23–39
	7	ಬುಧವಾರ	3	24	ತದಿಗೆ 15–38	ಆಶ್ಲೇಷ 19–39
	8	ಗುರುವಾರ	4	25	ಚೌತಿ 10—2	ಮಘ 15–44
	9	ಶುಕ್ರವಾರ	5–6	26	ಪಂಚಮಿ 4—16	ಪುಬ್ಬ 11–40
					ಷಷ್ಠಿ 60—0	
	10	ಶನಿವಾರ	7	27	ಸಪ್ತಮಿ 52–39	ಉತ್ತರ 7—30
	11	ಭಾನುವಾರ	8	28	ಅಷ್ಟಮಿ 47–38	ಹಸ್ತ 3—46
	12	ಸೋಮವಾರ	9	29	ನವಮಿ 43–14	ಚಿತ್ತ 0—34
						ಸ್ವಾತಿ 57—5
	13	ಮಂಗಳವಾರ	10	39	ದಶಮಿ 39–53	ವಿಶಾಖ 56 - 9
				ಮಕರ		
ಫ	14	ಬುಧವಾರ	11	1	ಏಕಾದಶಿ 37–18	ಅನೂರಾಧ 55–23
	15	ಗುರುವಾರ	12	2	ದ್ವಾದಶಿ 35–57	ಜೇಷ್ಠ 55–52
	16	ಶುಕ್ರವಾರ	13	3	ತ್ರಯೋದಶಿ 36—0	ಮೂಲ 57–44
	17	ಶನಿವಾರ	14	4	ಚತುರ್ದಶಿ 37–21	ಪೂರ್ವಾಷಾಢ 60 –0
	18	ಭಾನುವಾರ ...	30	5	● ಅಮಾವಾಸ್ಯೆ 39–46	ಪೂರ್ವಾಷಾಢ 1—22
					ಮೋಘ ಶುದ್ಧ.	
	19	ಸೋಮವಾರ	1	6	ಪಾಡ್ಯಮಿ 47–32	ಉತ್ತರಾಷಾಢ 5—37
	20	ಮಂಗಳವಾರ ...	2	7	ಬಿದಿಗೆ 47–59	ಶ್ರವಣ 10–59
	21	ಬುಧವಾರ	3	8	ತದಿಗೆ 53–23	ಧನಿಷ್ಠ 16–56
	22	ಗುರುವಾರ	4	9	ಚೌತಿ 53–53	ಶತಭಿಷ 23–25
	23	ಶುಕ್ರವಾರ	5	10	ಪಂಚಮಿ 60—0	ಪೂರ್ವಾಭಾದ್ರ 29–02
	24	ಶನಿವಾರ	5	11	ಪಂಚಮಿ 4—12	ಉತ್ತರಾಭಾದ್ರ 36—7
	25	ಭಾನುವಾರ	6	12	ಷಷ್ಠಿ 8—49	ರೇವತಿ 41–36
	26	ಸೋಮವಾರ	7	13	ಸಪ್ತಮಿ 12–27	ಅಶ್ವಿನಿ 45–55
	27	ಮಂಗಳವಾರ	8	14	ಅಷ್ಟಮಿ 15–27	ಭರಣಿ 49–28
ಹಿಂ	28	ಬುಧವಾರ	9	15	ನವಮಿ 15–14	ಕೃತ್ತಿಕ 51–12
	29	ಗುರುವಾರ	10	16	ದಶಮಿ 16–18	ರೋಹಿಣಿ 52—6
	30	ಶುಕ್ರವಾರ	11	17	ಏಕಾದಶಿ 14–51	ಮೃಗಶಿರ 52–23
	31	ಶನಿವಾರ	12	18	ದ್ವಾದಶಿ 12–28	ಆರಿದ್ರಾ 50—4

ಯೋಗಗಳು	ಹಬ್ಬಗಳು, ಸರ್ಕಾರಿ ರಜಾ ದಿವಸಗಳು ಮತ್ತು ಮೂಲೆ ನಕ್ಷತ್ರಗಳು ಅವುಗಳ ಪಾದಗಳು	ದನಗಳ ಜಾತ್ರೆ, ದನಗಳ ಪ್ರದರ್ಶನ, ವ್ಯವಸಾಯ ಸಂಬಂಧದ ಪ್ರದರ್ಶನ ಮತ್ತು ಇತರ ಉಪಯೋಗವಾದ ವಿಷಯಗಳು
		ಸೂರ್ಯ ಉದಯ 6 ಘಂ. 44 ನಿಮಿಷ
ಸಾಧ್ಯ	ಕ್ರಿಸ್ತನವರುಷಾರಂಭ ಕ್ರಿಸ್‌ಮಸ್ ರಜ	ಹಾಸನದಲ್ಲಿ ದನಗಳ ಪ್ರದರ್ಶನ
ಶುಭ	ಮುಕ್ಕೋಟಿ ದ್ವಾದಶಿ ಪೂರ್ವಾ	
ಶುಕ್ಲ	ಷಾಢ ಮೂಲೆ 2ನೇ ಪಾದ	
ಬ್ರಹ್ಮ	ಅಂಧಕಾಸುರ ಸಂಹಾರ, ಷಾಟಿಬ	(1) ಶಿವಗಂಗ ನೆಲಮಂಗಲ ತಾಲ್ಲೂಕು.
	ರಾತ್, ಪೂರ್ವಾಷಾಢಮೂಲೆ	(2) ನಾಗಲವಾಡಿಕಿ ಪಾವಗಡದ ತಾ‖
	2ನೇ ಪಾದ	(3) ಹೆಬ್ಬಿಗೆಪುರ ಅನೆಕಲ್ಲು ತಾಲ್ಲೂಕು.
ಐಂದ್ರ		
ವಿಷ್ಕಂಭಂ		
ಪ್ರೀತಿ	ಪೂರ್ವಾಷಾಢ ಮೂಲೆ 4ನೇ ಪಾದ	
ಆಯುಷ್ಮಾನ್	ಚಪ್ಪಲಮ್ಮನಜಾತ್ರೆ, ತೋರ್ನಹಳ್ಳಿ	ಮಲ್ಲೂರು ತಾಲ್ಲೂಕು.
ಸೌಭಾಗ್ಯಂ ಶೋಭನ	ಉತ್ತರಾಷಾಢ ಮೂಲೆ 1ನೇ ಪಾದ	
ಅತಿಗಂಡ		
ಅತಿಗಂಡ, ಸುಕರ್ಮ		ಚುಂಚನಕಟ್ಟೆ ಎಡತೊರೆ ತಾಲ್ಲೂಕು.
ಧೃತಿ		
ಶೂಲ	ಉತ್ತರಾಷಾಢ ಮೂಲೆ 2ನೇ ಪಾದ	
ಗಂಡ	ಉತ್ತರಾಯಣಪುಣ್ಯಕಾಲ ಸರ್ವ	
ವೃದ್ಧಿ [1]	ತ್ರೈಕಾದಶಿ	
ಧ್ರುವ	[1]ಚುಂಚನಕಟ್ಟೆ ರಾಮಸ್ವಾಮಿ ರಥ	
ವ್ಯಾಘಾತ [2]	[2]ರಂಗನಾಥಸ್ವಾಮಿ ರಥ ಶ್ರೀರಂಗ‖	
ಹರ್ಷ [3]	[3]ಉಡುಪಿಯಲ್ಲಿ ರಥೋತ್ಸವ	
	[2] ಉತ್ತರಾಷಾಢ ಮೂಲೆ 3ನೇ ಪಾದ	
	[3] ಸರ್ವತ್ರ ಅಮಾವಾಸ್ಯೆ ಗರುಡ ಜ‖	
	[4] ರಂಜಾನ್ ಪ್ರಾರಂಭ ಉತ್ತರಾಷಾಢ	
ವಜ್ರ [4]	ಮೂಲೆ 4ನೇ ಪಾದ	
ಸಿದ್ಧಿ	[5]ಶ್ರವಣಮೂಲೆ 1ನೆ ಪಾದ ರಂಗನಾಥ	ಶಿರಾ ತಾಲ್ಲೂಕು ತಾವರೆಕೆರೆ
ವ್ಯತೀಪಾತ	ಸ್ವಾಮಿ ರಥ ತಾವರೇಕೆರೆ	
ವರೀಯಾನ್	[6] ಸುಬ್ರಹ್ಮಣ್ಯಸ್ವಾಮಿ ರಥ	ಚಿತ್ರಾವತಿ ಹೊನ್ನೇನಹಳ್ಳಿ ದೊಡ್ಡಬಳ್ಳಾಪುರ ತಾ‖
ಪರೀಘ [5]	[7]ರಥಸಪ್ತಮಿ, [1] ಶ್ರೀ ರಂಗನಾಥಸ್ವಾ	[7] 1 ಹೇಮಗಿರಿ ಕೃಷ್ಣರಾಜಪೇಟೆ ತಾ‖
ಶಿವ	ಮಿ ರಥ, [2] ರಂಗನಾಥಸ್ವಾಮಿ	2 ಆಗಲಾಪುರ
ಸಿದ್ಧ [6]	ರಥ, [3] ಗೋಪಾಲಸ್ವಾಮಿ ರಥ,	3 ಕ್ಯಾಮೇನಹಳ್ಳಿ, ಕೆಂಪಗೌರಿ ತಾ‖
ಸಾಧ್ಯ [7]	[4] ಯೋಗಾನರಸಿಂಹಸ್ವಾಮಿ ರಥ	4 ಗೊರೂರು 4ಳ್ಳಿ ದನಗಳ ಪ್ರದರ್ಶನ
ಶುಭ	ಶ್ರವಣಮೂಲೆ 2ನೇ ಪಾದ	ಹಾಸನ ಟರ್ಫ್
ಶುಕ್ಲ	ಮಧ್ವನವಮಿ	
ಬ್ರಹ್ಮ	ಮಲ್ಲಿಕಾರ್ಜುನ ಸ್ವಾಮಿ ರಥ, ಗಂಗ	ಮುಸುಕತೆ ಬಯಲಲ್ಲಿ 19-1-30ರಿಂದ
ಮಹೇಂದ್ರ	ಮ್ಮನಜಾತ್ರೆ	15 ದಿವಸಗಳ ದನಗಳ ಪ್ರದರ್ಶನ
ವೈಧೃತಿ [8]	ಶ್ರ‖ ಮೂಲೆ 3ನೇ ಪಾದ, ಭಿಷ್ಟೈಕಾ	ಶಿವಸಮುದ್ರ
	ದಶಿ [5] ರಂಗನಾಥಸ್ವಾಮಿ ರಥ	

ಜನವರಿ.

ಮಾಸವಾರ್ತೆ:—

ಹಿಂಗಾರು ಮಳೆಗಳಿಂದ ಕೆರೆಗಳಿಗೆ ಚೆನ್ನಾಗಿ ನೀರು ಬಂದಿರುವ ಕಡೆಗಳಲ್ಲಿಯೂ ಧಾವಿಗಳ ಆಸರೆ ಇರುವ ಕಡೆಗಳಲ್ಲಿಯೂ ಪೈಶಾಖ ಅಥವಾ ಬೇಸಗೆಯ ಭತ್ತನನ್ನು ಬಿತ್ತಬೇಕು. ಗದ್ದೆಯಲ್ಲೆಲ್ಲಾ ಬೀಜವನ್ನು ಸುಮ್ಮನೆ ಚೆಲ್ಲುವುದಕ್ಕೆ ಬದಲಾಗಿ ಪೈರನ್ನು ನಾಟಿ ಹಾಕುವುದು ಉತ್ತಮ. ಒಂದೊಂದುಕಡೆ ಅನೇಕ ಸಸಿಗಳನ್ನು ನಾಟುವುದ ಕ್ಕಿಂತ ಎರಡು ಅಥವಾ ಮೂರು ಸಸಿಗಳನ್ನು ಮಾತ್ರ ನಾಟುವುದರಿಂದ ಬಿತ್ತನೆಯ ಬೀಜದ ಖರ್ಚು ಬಹಳವಾಗಿ ಕಡಿಮೆಯಾಗುವುದು. ಕೆರೆಗಳಲ್ಲಿರುವ ನೀರು ಬೇಸಗೆಯಲ್ಲಿ ಬಹಳವಾಗಿ ಆವಿಯ ರೂಪವಾಗಿ ಹೋಗುವುದಾದ್ದರಿಂದ ಮೇಲೆ ಹೇಳಿದಂತೆ ಪೈರನ್ನು ನಾಟಿ ಹಾಕುವುದರಿಂದ ನೀರನ್ನು ಸಾಧ್ಯವಾದಮಟ್ಟಿಗೆ ಕಡಿಮೆಯಾಗಿ ಉಪಯೋಗಿಸಿ ಕೊಳ್ಳಲು ಸಾಧ್ಯವಾಗುವುದು. ಬಹಳ ಆಳದಿಂದ ನೀರನ್ನು ಎತ್ತಿ ಉಪಯೋಗಿಸಬೇಕಾ ಗಿರುವ ಸ್ಥಳಗಳಲ್ಲಂತೂ ಹೀಗೆ ಮಾಡುವುದರಿಂದಾಗುವ ಲಾಭವು ಬಹಳ ಮುಖ್ಯವಾಗಿ ಗಮನಿಸತಕ್ಕದ್ದಾಗಿರುವುದು. ಇದೂ ಅಲ್ಲದೆ ಬೀಜವನ್ನು ಚೆಲ್ಲುವುದಕ್ಕಿಂತಲೂ ಪೈರನ್ನು ನಾಟಿಹಾಕುವುದರಿಂದ ಫಸಲೂ ಹೆಚ್ಚಾಗುವುದು. ಭತ್ತದ ಬೆಳೆಗಾಗಿ ತಯಾರ್ಮಾಡಿರುವ ಉತ್ತಮತರದ ಗೊಬ್ಬರಗಳು ವ್ಯವಸಾಯದ ಇಲಾಖಾ ಇನ್‌ಸ್ಪೆಕ್ಟರುಗಳ ಕೋಠಿಗಳಲ್ಲಿ ದೊರೆಯುತ್ತವೆ. ಇವುಗಳನ್ನು ಉಪಯೋಗಿಸಿ ತುಂಬಾ ಲಾಭವನ್ನು ಹೊಂದಬಹುದು.

ಬೇಸಗೆಯಲ್ಲಿ ದನಗಳಿಗೆ ಒಳ್ಳೆಯ ಮೇವು ಸಿಗುವುದಕ್ಕಾಗಿ ನೀರು ಬಹಳ ಸ್ವಲ್ಪ ವಾಗಿರುವ ಕೆರೆಗಳ ಕೆಳಗೂ, ನೀರು ಇಲ್ಲದೆಯೇ ಇರುವ ಕೆರೆಗಳ ಅಂಗಳಗಳೆಲ್ಲಿಯೂ ಇರುವ ತರಿಯ ಭೂಮಿಗಳಲ್ಲಿ ಬಿಳೀ ಜೋಳವನ್ನು ಬಿತ್ತಬೇಕು. ಖುಷ್ಕಿ ಜಮೀನುಗಳನ್ನು ಚೆನ್ನಾಗಿ ಕೆದರಿ ಮಣ್ಣನ್ನು ಧೂಳುಮಾಡಿ ಈಗಿನಿಂದ ಬೇಸಗೆಯಲ್ಲಿ ಒಂದೆರಡು ಮಳೆ ಬೀಳುವವರಿಗೂ ಹಾಗೆಯೇ ಬಿಟ್ಟಿರಬೇಕು. ಭೂಮಿಯು ಮೆತ್ತುವಾಗಿ ಉಳುವುದು ಸಾಧ್ಯವಾದ ಕಡೆಗಳಲ್ಲೆಲ್ಲಾ ಉಳುವುದೇ ಒಳ್ಳೆಯದು. ಭೂಮಿಯು ಬಹಳ ಗಡುಸಾಗಿ ರುವ ಕಡೆಗಳಲ್ಲಿ ತಚ್ಚೆಯ ಹಲವೆಯನ್ನು ಉಪಯೋಗಿಸಬೇಕು ಮಿಕ್ಕ ವಿವರಗಳಿಗೆ ಡಿಸೆಂಬರು ಮಾಸ ವಾರ್ತೆಯನ್ನು ನೋಡಿ.

ಹೊಸ ಗೂಳಿಗಳು ಕ್ಷಿಪ್ರದಲ್ಲಿಯೇ ಬಿಕರಿಗೆ ಸಿದ್ಧವಾಗುವುವು. ಐವತ್ತಕ್ಕೆ ಮೇಲ್ಪಟ್ಟು ಗೂಳಿಗಳನ್ನಾರಿಸಿ ಅಜ್ಜಂಪುರದಲ್ಲಿ ಗುಂಪು ಸೇರಿಸಿರುವರು. ಮೊದಲು ಮೊದಲು ಕೊಂಡು ಕೊಳ್ಳುವವರಿಗೆ ತಕ್ಕಾಗೆ ಬೇಕಾದವುಗಳನ್ನು ಆರಿಸಿಕೊಳ್ಳುವುದಕ್ಕೆ ವಿಶೇಷ ಅವಕಾಶವುಂ ಟೆಂದು ಹೆಚ್ಚು ಹೇಳಬೇಕಾಗಿಲ್ಲ. ಗ್ರಾಮ ಪಂಚಾಯತಿಗಳಿಗೇ ವಿಕ್ರಯಿಸಬೇಕೆಂಬ ನಿರ್ಬಂಧವೇನೂ ಇಲ್ಲ. ಪರಸ್ಪರ ಸಹಾಯಕ ಸಂಘಗಳೂ ಖಾಸಗಿ ಜನರು ಕೊಂಡು ಕೊಳ್ಳಬಹುದು. ಅರ್ಧ ಕ್ರಯಕ್ಕೆ ಸಿಕ್ಕುವುದೋ ಅಥವಾ ಪೂರ್ತಿ ಕ್ರಯ ಕೊಡಬೇಕಾಗು ವುದೋ ಎಂಬುದು ಡಿಸ್ಟ್ರಿಕ್ಟು ಬೋರ್ಡಿನವರ ದ್ರವ್ಯಸಹಾಯ ಒದಗುವುದೋ ಇಲ್ಲವೋ ಎಂಬುವುದರಮೇಲೆ ಆಧಾರಪಟ್ಟಿರುವುದು. ಗೂಳಿಗಳು ಬೇಕಾದವರು, ಬೆಂಗಳೂರಿನಲ್ಲಿ ರುವ ಲೈವ್‌ಸ್ಟಾಕ್ ಆಫೀಸರಿಗಾಗಲೀ, ಅಮೃತಮಹಲ್ ಸೂಪರಿಂಟೆಂಡೆಂಟರಿಗಾಗಲೀ ಅಥವ ಅವರವರ ಸ್ಥಳದ ವ್ಯವಸಾಯ ಅಥವ ಪಶುವೈದ್ಯ ಇಲಾಖೆಗಳ ಅಧಿಕಾರಿಗಳಿಗಾ ಗಲೀ ತಡಮಾಡದೆ ಬರೆದುಕೊಳ್ಳಬೇಕು. ನಿಮ್ಮ ಗ್ರಾಮದ ದನಗಳನ್ನು ಉತ್ತಮಪಡಿಸಿ ಕೊಳ್ಳುವ ಈ ಅವಕಾಶವನ್ನು ಕಳೆದುಕೊಳ್ಳಬೇಡಿ.

ವ್ಯವಸಾಯಗಾರರಿಗೆ ಸಹಾಯ.

ನಮ್ಮ ದೇಶದ ಈಗಿನ ಆರ್ಥಿಕ ಸ್ಥಿತಿಯು ಎಷ್ಟು ಶೋಚನೀಯವಾಗಿರುವುದೆಂಬ ವಿಷಯವನ್ನು ಈಗಿನ ದವಸಧಾನ್ಯಗಳ ಧಾರಣೆಗಳೇ ಜನರ ಗಮನಕ್ಕೆ ಒತ್ತಾಯವಾಗಿ ತಂದಿರುವುವು. ಕಳೆದ ಡಿಸೆಂಬರಿನಲ್ಲಿ ನಡೆದ ನ್ಯಾಯವಿಧಾಯಕ ಸಭೆಯ ಸಮ್ಮೇಳನದಲ್ಲಿ ಈ ವಿಷಯವಾಗಿ ವಿಶೇಷ ಚರ್ಚೆ ನಡೆಯಿತು. ದವಸಧಾನ್ಯಗಳ ಧಾರಣೆಗಳು ಎಷ್ಟರ ಮಟ್ಟಿಗೆ ಇಳಿದುಹೋಗಿರುವುವೆಂಬ ವಿಷಯವೂ ಇದರಿಂದ ಅನೇಕ ಕಷ್ಟಗಳಿಗೆ ಸಿಕ್ಕಿರುವ ವ್ಯವಸಾಯಗಾರರಿಗೆ ಅದಷ್ಟು ಬೇಗನೆ ತಕ್ಕ ಸಹಾಯವನ್ನು ಕಲ್ಪಿಸಿಕೊಡುವುದು ಬಹಳ ಆವಶ್ಯಕವೆಂಬುದೂ ವಿಶೇಷವಾಗಿ ಒತ್ತಿ ಹೇಳಲ್ಪಟ್ಟವು. ಧಾರಣೆಗಳು ಕೆಲವು ಸಂದರ್ಭಗಳಲ್ಲಿ ಶೇಕಡಾ 50 ಭಾಗವೂ ಮತ್ತೆ ಕೆಲವು ಸಂದರ್ಭಗಳಲ್ಲಿ ಶೇಕಡಾ 75 ಭಾಗವೂ ಇಳಿದಿರುವುದೆಂದು ತಿಳಿದುಬಂದಿದೆ. ನಿರುದ್ಯೋಗದಿಂದ ಅನೇಕ ವಿಧವಾದ ತೊಂದರೆಗಳಿಗೆ ಸಿಕ್ಕಿದ್ದ ನಮ್ಮ ದೇಶವು ಈಗ ಪ್ರಾಪ್ತವಾಗಿರುವ ಧಾರಣೆಗಳ ದುಷ್ಫಲವನ್ನೂ ಅನುಭವಿಸಬೇಕಾಗಿ ಬಂದಿರುವುದೆಂಬ ವಿಷಯವನ್ನು ಜ್ಞಾಪಿಸಿಕೊಂಡರೆ ಪ್ರಕೃತಪರಿಸ್ಥಿತಿಯು ಎಷ್ಟುಕಷ್ಟವಾಗಿರುವುದೆಂಬುವುದು ವ್ಯಕ್ತವಾಗಿರುವುದು.

ಧಾರಣೆಗಳ ಇಳಿತದಿಂದಲೂ, ಅದರಿಂದುಂಟಾಗುವ ಶೋಚನೀಯವಾದ ಆರ್ಥಿಕ ಪರಿಸ್ಥಿತಿಯಿಂದಲೂ ತೊಂದರೆಗಳಿಗೆ ಸಿಕ್ಕಿರುವುದು ವ್ಯವಸಾಯ ವೃತ್ತಿಯೊಂದೇ ಅಲ್ಲ. ಕೈಗಾರಿಕೆ ವ್ಯಾಪಾರಗಳು ಕೂಡಾ ಇದೇ ವಿಧವಾದ ಕಷ್ಟಕ್ಕೆ ಸಿಕ್ಕಿರುತ್ತವೆ. ಆದರೆ ಇಂಥಾ ಸಂದರ್ಭಗಳಲ್ಲೆಲ್ಲಾ ವ್ಯವಸಾಯಗಾರರ ಕಷ್ಟಗಳೇಹೆಚ್ಚು. ಕೈಗಾರಿಕೆಗಳಿಂದ ತಯಾರಾಗುವ ಪದಾರ್ಥಗಳ ಪರಿಮಾಣವನ್ನೂ ಅದಕ್ಕೆ ತಗಲುವ ಖರ್ಚನ್ನೂ ಸಂದರ್ಭಾನುಸಾರ ಹೆಚ್ಚು ಕಡಿಮೆಮಾಡುವುದಕ್ಕೆ ಸಾಧ್ಯ ಆದ್ದರಿಂದ ಕೈಗಾರಿಕೆಗಳಿಂದ ಜೀವನ ಮಾಡುವವರು ತಮ್ಮ ತಮ್ಮ ಕೆಲಸಗಳಲ್ಲಿ ಕಾಲೋಚಿತವಾದ ಬದಲಾವಣೆಗಳನ್ನು ಮಾಡಿ ಕೊಳ್ಳಬಹುದು. ದವಸಧಾನ್ಯಗಳನ್ನು ಉಪಯೋಗಿಸುವ ಜನಸಾಮಾನ್ಯಕ್ಕೂ ಇವುಗ ಳನ್ನು ಬೆಳೆಯುವ ರೈತರಿಗೂ ಮಧ್ಯವರ್ತಿಗಳಾಗಿ ಮಾಸ್ಕ ಕೆಲಸಮಾಡುವ ವ್ಯಾಪಾರಸ್ಥರು ಈ ಆರ್ಥಿಕ ಪರಿಸ್ಥಿತಿಯ ದುಷ್ಪರಿಣಾಮಕ್ಕೆ ಅಷ್ಟು ಹೆಚ್ಚಾಗಿ ಸಿಕ್ಕುವುದಿಲ್ಲ. ಅಲ್ಲದೆ ವ್ಯವ ಸಾಯಗಾರರ ಕೆಲಸಕ್ಕೆ ಒಚ್ಚಾಗಿ ಸಹಾಯಮಾಡುವುದೂ ಹೆಚ್ಚಾಗಿ ಅಡಚಣೆಮಾಡ ವುದೂ ಪ್ರಕೃತಿಯೇ. ರೈತನು ತನ್ನಮನಸ್ಸಿಗೆ ತೋರಿದಾಗ ಕೆಲಸವನ್ನು ಬಿಡುವುದ ಕ್ಕಾಗುವುದಿಲ್ಲ. ಹಾಗೆಮಾಡಿದರೆ ತನ್ನ ಮುಂದಿನ ಜೀವನವನ್ನೇ ಕಳೆದುಕೊಳ್ಳುವನು. ಇದೂ ಅಲ್ಲದೆ ಯಾವುದಾದರೊಂದು ಸೂಕ್ತವಾದ ಸಂಸ್ಥೆಯ ಮೂಲಕ ತನ್ನ ಆಡಳಿತಗ ಳನ್ನು ನಡೆಸಿಕೊಳ್ಳುವ ಸಂದರ್ಭಗಳಲ್ಲದೆ ಮಿಕ್ಕವೇಳೆಗಳಲ್ಲಿ ವ್ಯವಸಾಯಗಾರನು ತನ್ನ

1931

WORLD NEWS PAPER EXHIBITION
NEDUMANGALLI - 577521
Dist. Karanataka State, INDIA
1970

[illegible]

ನಂಬರ ೮ [illegible] - ಬುಧವಾರ [illegible]

ಎಲ್ಲಮ್ಮನವರಿಗೆ ನಮ್ಮ ಶ್ರದ್ಧಾಂಜಲಿಗಳು!

ಮಹಾತ್ಮರ ಅಭಿಪ್ರಾಯಪ್ರಕಾರವೇ ಶಬರಿಯ ಕಾರಭಾರವನ್ನು ಪ್ರಾರಂಭಮಾಡಿತ್ತು. ಒಂದು ಪಕ್ಷದವರು ತಮ್ಮ ಪ್ರಕಾರ ಕಾರಭಾರ ಮಾಡಿದವರು ಕಾರವನ್ನು ಕೊಟ್ಟಿಲ್ಲದಕ್ಕಾಗಿ ಮಹಾತ್ಮರು ಹೊಳಿದಿಗಡನೆ ಅಂಗಾಂಪವಾಸವನ್ನು ಮಾಡಿದರು. ಕಾಲಂಕಾಲಕ್ಕೆ ಸರಿಯಾಗಿ ಶತಪ್ರಯತ್ನ ಮಾಡಿಯೂ ಸಹ ಕಾರಭಾರವನ್ನು ಮಹಾತ್ಮರು ಒಂದುವರ್ಷದಲ್ಲಾ ಕೆಲಸಕ್ಕೆ ಬಾರದೆ ಬಿಟ್ಟರು.

ಇನ್ನು ನಮ್ಮ ಶಬರಿ, ಸಿದ್ಧಾಪುರ ಅಲಂಕಾರಗಳಿಗೆ ಮಹಾತ್ಮರಲ್ಲಿಯೂ ಕಾಂಗ್ರೆಸ್ಸಿನಲ್ಲಿಯೂ ಭಿಪ್ರಾಯಭೇದವಿದ್ದು ಒಂದೇ ಸಮನಾಗಿ ಕೆಲಸಮಾಡಲಾರದೆ ಶಬರಿಯವರು ಕಾರಭಾರವನ್ನು ಬಿಟ್ಟರು. ಆದರೆ ಸಿದ್ಧಾಪುರ ಅಲಂಕಾರಗಳಿಗೆ ಮಹಾತ್ಮರಿಗೂ ಕಾಂಗ್ರೆಸ್ಸಿನವರಿಗೂ ಭಿಪ್ರಾಯಭೇದವಿಲ್ಲದೆ ಒಂದೇ ಸಮನಾಗಿ ಕೆಲಸಮಾಡಿ ಸಿದ್ಧಾಪುರ ಅಲಂಕಾರಗಳಿಗೆ ಮಹಾತ್ಮರಿಗೂ ಕಾಂಗ್ರೆಸ್ಸಿನವರಿಗೂ ಭಿಪ್ರಾಯಭೇದವಿಲ್ಲದೆ ಒಂದೇ ಸಮನಾಗಿ ಕೆಲಸಮಾಡಿ

ಇದರಿಂದ ನಮ್ಮಲ್ಲಿಯಷ್ಟೇ ಅಲ್ಲದೆ ಬೇರೆ ಕಡೆಯವರಿಗೂ ವ್ಯಕ್ತವಾಗುತ್ತದೆ. ನಮ್ಮ ಶಬರಿಗೆ ಮಹಾತ್ಮರೂ ಕಾಂಗ್ರೆಸ್ಸಿನವರೂ ಮೂಲಪುರುಷರಾಗಿದ್ದು ಅವರಿಬ್ಬರು ಒಂದೇ ಸಮನಾಗಿ ಶ್ರಮಿಸಿ ಕೆಲಸಮಾಡಿದರೆ ಶಬರಿಯವರಿಗೆ ಸಹಾಯವಿರುತ್ತದೆ. ಆದರಂತೆ ಶ್ರೀ ರಂಗನಾಥಶಿವಾಚಾರ್ಯರವರು ಸಿದ್ಧಾಪುರ ಮಹಾತ್ಮರಿಗೂ ಕಾಂಗ್ರೆಸ್ಸಿನವರಿಗೂ ಭಿಪ್ರಾಯಭೇದವಿಲ್ಲದೆ ಒಂದೇ ಸಮನಾಗಿ ಕೆಲಸಮಾಡಿ ಸಿದ್ಧಾಪುರ ಅಲಂಕಾರಗಳಿಗೆ ಮಹಾತ್ಮರಿಗೂ ಕಾಂಗ್ರೆಸ್ಸಿನವರಿಗೂ ಭಿಪ್ರಾಯಭೇದವಿಲ್ಲದೆ ಒಂದೇ ಸಮನಾಗಿ ಕೆಲಸಮಾಡಿ ಸಿದ್ಧಾಪುರ ಅಲಂಕಾರಗಳಿಗೆ ಮಹಾತ್ಮರಿಗೂ ಕಾಂಗ್ರೆಸ್ಸಿನವರಿಗೂ ಭಿಪ್ರಾಯಭೇದವಿಲ್ಲದೆ ಒಂದೇ ಸಮನಾಗಿ ಕೆಲಸಮಾಡಿ

ನ್ಯಾಯವೂ ನ್ಯಾಯವೂ

ನಿಕ್ಷೇಪಿಸಿಗುವದು. ಶ್ರೀ ನಡೆದಿಗೂ ಪಡಂಕೆಲಂಪು ಜಾತ್ರಿಯಲಂಪುಗಳು

ನಮ್ಮ ಸಿದರಲಕ್ಷ್ಮಿ ಕಾರಣಾಧಿಲ್ಲ.

ಚಾಲಿ ಉಭಯತರ ಅಭಿವಾದ ಡಾಗೂ ಅಭಿಂಯವಚನಗಳನ್ನು ಆಕ್ಷೇಂಡು ಶ್ರೀ ಶಿವಾಚಾರ್ಯರವರಲಂ ಬಿರುವರು

ಶ್ರೀ ಶಿವಾಚಾರ್ಯರಿಗೆ ಕಾಶ್ಮೀರ ತಿಜಿವಾಡಿಂತಲಾಲರಭೇಟ್ಟಿಯೂ ಆಂತಿತು. ಆದರೂ ನಮ್ಮಪ್ರಿಯಶ್ರೀ ವನ್ನು ನಮೆಮೇಂದಿಸಿದ್ದಾರೆ

ಸ ಪಂಯುಕ್ತಪ್ರಾಂತದಲ್ಲಿಯ ಶ್ರೀ ತರನಿಧಿಯಿಂದು ಸಾದಾರಣಾಮ ಪ್ಪಿಗೆ ನಮ್ಮಲ್ಲಿಯಂತೆ ಇರು ವದರಿಂದ ಜಮಾಕಿರಲಾಲರು ಸ್ವ ಕೆಲಸ ನ್ಯಾಮೊಲರಂ ನೆಡೆಸಿಕೊಡ್ಡಿ ಯೂ ಶಿ

కడమే నిరసిస్తూ లంగరికి నలేష్ట
మండలమూ దొరతుమడమూ మ్రా
తిక- కమిటీటియుటరుసేటి
నిడ భారతీకచిటీటియవరు
నిరక్షిలీ నొద్దాపురం అలనగుగళ
ల్లకుంతలనీ నమ్మ తుంశ్చితియ
న్ని శ్రీక్షేమనకండు ముంది.
లిటీటర్ళ అళివలు మ్రోనారుత్రి
కి ఇదల్లదే గుంలరాథ్ మదాధ
త్రీగళ్లు విశేరీమాన్రిదర
కోవే మాడిరువ రుళ్ళగళ అర్థ
కాన్రువన్ను చప్పగిరిలతంథ
శ్రీనిధ్యర్థ ఈన్రజ్ఞరన్నిని
త్రకుంది అదరకడేదిందనె
మ్మర్చి తరజ్రి న్ను వన్థేయన్ను
న్నిలంగే ఇడబేకెందు శ్రీ"దివా
కరరు మూయుత్తి నుత్రిద్దారి.

ముంబంది కొన్నిలో నిం
బరలిగే కూడ శ్రీ దివాకరరు
వమ్మల్లియుతురిన్నిలియన్నుబ
న్నిని తళి నీరువ కారణా వీర్తి
మింబరరు కొన్నిల దల్లియూ శి
ళిమ్మ మేంబర- కెచమిలినర-
గ న్నేనా దరిగుడనే టు కాంతలదల్లి
లుం వమ్మల్లి తరశ్రీన్నిపన్ను
జాతోనువరల్లదే శ్రీత్రి బిగదల
నర్రచువన్ను చ్రేకిగళ్ళ కొడువం
దు అగ్రిద మూడువవం దాగారి.

ఈ ఇన్నిసురదాని ఒందువర్ష
పడిందే డీళ్ళ డినవల్లదే మూ
త్రినాంతమాని యిద్దిద్దవమ్మల్ల
గుట్టినమ ఈన నీవనత్రో
ళిచాగాది. ఇతరకడెయ
ఒ లేబంధవు బందాగారు
కారణా నేతరదకంతూరాగా
క్రేప్రమ నమ్మ ఖ్యరకడిగె కే
ప్రిద బాగిదే. కాంగ్రెస్సిగవరు
బెళ్ళిందద శబరుగళ్ళిన్నం
మూగా మానిలాలకిరుల్లరి

ఇదరి సరకారద మనస్సిగ్ వృత్తియు
ల్లి బదలుగదమ్మ నిజవిలే ఎం
బతరీక్షియు నమ్మ ఖాలుగు
గళల్లుంకిం ఆగతక్కద్దిదేంశ్వరర
దగిరవదవనవు నమ్మబు
ద్ధితరిసెదెదెంకిరుశక్తిద్దిదే కె-
దకుగలు కాపుత్తుచిల్లదంతిల్లి
శిక్షగళ్లదిలగళుత్తరువ, సొల
రల్లముళిసి బళగుత్తరువరీగ
గదల్ల సొంతుత్తరువ-రక్షిస్తి
రిత్తరన్ను సరకారవు తొంగళక్కే మీ
చిక్కుదెంద-బుత్రిండినువదెన్ని
ఇనే ముళ్ళి ప్రశ్నిసుంతిదే. ఇదర
ఉత్తరదల్లిరువాయే దుంటుమో
ళినదుగూ అత్యంతూక్ష్మబదలుకి
శేయ భవిష్యవు అవలంబిసిరుత్త
ది.

నమ్మ తాలూకిన నల్లతావిన్
వనగంటయన్ను- ఇల్లి బత్రివన్ను
రి క్రమగళన్ను నడి బేళ్ళి కర్ణ
ళ్ళి ఇల్లిరిద్దవర్ను తేరు బిసుళ్ళి
న నవకాలదొళగిన నిన్ను కొంతరరు నా
వి యోగ్యవరకాదుదారణ
ద డళగళల్లి తాలూకుగళిందవ
ల్లినకడಲ್ಲಿ ಇವನ್ನು ಕೊಂತರರನ್ನು ನಿ
ర్ణಯಿಸಿ ತಾಂ ನಿರ್ಧರಿಸಿದ್ದಾರೆ. ದಬ್ಬಳಿಕೆ
యదుత్తరు ముంది జూనినమ్మ
కొతరన్ను తాంగళళ్ళి మేట్టిద్దేంద
రి చాలాంతరాతివల్లియూ అవర
నూ మాకుడ అర్హిక్షు ఇల్లవాగువదల్లి
ది దుంటుమోళిన చరిత్రదల్లి
కూడ ఇంథ నిర్ణయవన్ను ఎంళిద
ఎదే యకారిందరి సరకారదలి
ఆ: కారణవు ముద్దాం నిదేంద్రో
ళిల్లందేగ ఎంబుదన్ను కుంది ఆర్థ
కే-ళ్ళిల్లగాణ్ళిల్లదాకే-రైతరుమత్తు
కొట్టు త్రిలాగాది సరకారవు
మొదలాదనంతహంకార ఇదేయందు
ముందుళ్ళర మనదట్టుదరి
దుంటుమోళిన చరిత్రదల్లి గుర్తిసు
వంతే.

రి కాలాచీంకుగవుంతేన్ను క
రతలక్కే ఇగే ఎంది నే ఎళిసిసి
ఇర్థకరల్లి ఇత్రియనుత్తరు నడి
సిద్దాదని నుంగానదిం పరిణయ
ట్టదాని ఆ ఊరిలరు మమ్మక్షేత్రకర
ప్రశ్నేవన్ను చిత్తరిసుదరు కణిసికొం
ప్రన్నే నల్లయగ కాన్యం ఎంబినగి
బడలక్షిల్ల. ఇంథ ఎనుంగదల్లి
కురకారవు తొంతియన్నుబళుద
మంత్యంత ఎచ్చరి ఎరిసిగి
శంపూరాని మ స్థానగళేగు
ఇల్లచో చోకాశీ నుమిక్షిల్ల
న్ను నోయిసి నమ్మ గ్రామగళన్ను
ళిగళ్ళగళేగు ఎంబుదాదాగి
శ్నే వన్ను రైతరు సరకారదవరుం
ది ఇట్టిక్షిద్దారి అన్నలింద గ్రామ
శమర్థవాద నరకారవు బం
ధిందల చక్రిమోదలాద కామ
గళన్ను లద్యక్కే తిల్లిసి ఆకాసి
నడిసువదు అత్యంతరు చర్చనీయ.
తరకారక్కే ఇచ్చే తొగుంది రి ఇంది
నంద తవుగేయుత్తనండుంజ
చతాసలు బరువంతిదే. ఎవన
రవతువ తీరణవిల్లదింథ ఇర్థ
క్షిబ్బనే శ్రీనింగ వల్లి కురకారవ
న్ను తొంతవాగిసిరుత్తకాడ
న్ను ఎల్లచరదల్లి తళ్ళాడువాగుళ
న్ను రైతరు నడిసిరుత్తారే. ం

యనిష్టలవాగుత్తిర్ళరుతిరి.

నిరసిసిద్దా పుతాలాగుసగళు
ళనివచరసిద్ధరుంయనాటిసిరిక
యి కెసార్టరే శ్రీమాతిక కమిటియి
ద నేటిసిన్ను పై కచేరియాయకొం
కరకారద డా నాయకయగా వావకళ్ళ
యుత్తి తుచేసుంచర ఇంకళుతా
గళు తిన్నిశేయంక్షిల్లదవు.



ಸಂಪುಟ ೨೭ ಸಿದ್ದಾಪುರ-ಆ--೩೭-೧೯೭೦ ಬೆಲೆ ೨೦ ಪೈಸೆ

ಕರಬಂದಿ ಚಳವಳಿಯು ರಾಷ್ಟ್ರವ್ಯಾಪ್ತಿ

ಕರಬಂದಿ ಚಳವಳಿಯನ್ನು ಬೆಂಬಲಿಸಿರಿ.

ಕರಬಂದಿ ಚಳವಳಿಯನ್ನು ಪ್ರಸ್ತುತ ಕಾಯುತ್ತ ಕುಲಪಾತದ ಕೆಲವು ಗಣ್ಯವ್ಯಕ್ತಿಗಳನ್ನು ಸ್ಮರಿಸುವುದು ಸಾಕಿದೆ. ಡಾ॥ಯೋಲ ಮೊದಲಾದ ಸ್ವಾ ಕಾ ಯಾಯಿಕುಲದವರು ಕೆಲವು ಸಂವತ್ಸರಗಳ ಹಿಂದೆಯೇ ಸ್ವಾತಂತ್ರ್ಯ ಪಡೆದು ಸಂತೋಷದಿಂದ ಜೀವಿಸುತ್ತಿದ್ದಾರೆ. ಆದರೆ ಅವರ ಸಂತೋಷಕ್ಕೆ ಕಾರಣವಾದ ಮಹಾತ್ಮರಾದ ಜಾರ್ಜ್ ವಾಷಿಂಗ್ಟನ್ ಮತ್ತು ಅಬ್ರಹಾಂ ಲಿಂಕನ್ ಇವರ ಹೆಸರುಗಳನ್ನು ಸ್ಮರಿಸದೆ ಇರಲಾರೆವು. ಅವರು ಸಂಪತ್ತಿಗಾಗಿ ಅಥವಾ ಸಂತೋಷಕ್ಕಾಗಿ ಜೀವಿಸಲಿಲ್ಲ. ಅವರು ಜೀವಿಸಿದ್ದು ಕರ್ತವ್ಯಕ್ಕಾಗಿ. ಅವರು ಸಾಧಿಸಿದ್ದು ಸ್ವಾತಂತ್ರ್ಯ. ಅವರು ಸಾಧಿಸಿದ ಸ್ವಾತಂತ್ರ್ಯವು ಅವರ ಸ್ವಂತಕ್ಕಾಗಿ ಅಲ್ಲ. ಅವರ ಸ್ವಾತಂತ್ರ್ಯವು ಅವರ ಸಂತತಿಯವರಿಗಾಗಿ ಅಲ್ಲ. ಅವರ ಸ್ವಾತಂತ್ರ್ಯವು ಅವರ ಸಮಸ್ತ ದೇಶಬಾಂಧವರಿಗಾಗಿ ಅಲ್ಲ. ಅವರ ಸ್ವಾತಂತ್ರ್ಯವು ಅವರ ಸಮಸ್ತ ಮಾನವಕುಲಕ್ಕಾಗಿ ಅಲ್ಲ. ಅವರ ಸ್ವಾತಂತ್ರ್ಯವು ಅವರ ಸಮಸ್ತ ಮಾನವಕುಲಕ್ಕಾಗಿ ಅಲ್ಲ. ಅವರ ಸ್ವಾತಂತ್ರ್ಯವು ಅವರ ಸಮಸ್ತ ಮಾನವಕುಲಕ್ಕಾಗಿ ಅಲ್ಲ.

ಓಟ್ಟಿನ ಲಾಲಾ ಜಿಮೆಂಟಿನ ಸ್ಟೀವರು ಲಾಮಿನ್ ಹೆಗಡೆಯಾನದೆಂ ನು ಬಿಗ್ಗಲುಬಿಡ್ಡನೆ. ತಿಲಂ-ಬಿಳಿಡ ಸ್ಟೀಳಿಂಡಿಂಡಿನ ಬಾನರ ಅಮೆಸ್ಟ್ ಬಿಗಿಸಿಗೆ ಕೆಲಸಾಡಿದ್ದು ಮ ಸ್ಟೀಳಿಸ್ಟ್ ಸಿಡಿಸ್ಟ್ ಸಿಡಿಸ್ಟ್ ಸಿಡ

ಸಪ್ತಾಹಿಕ ಪತ್ರಿಕೆ

ಪ್ರಭಾತ

PRABHAT

Liberty or Death

ಸಂಪಾದಕರು ॥ ಸಂಪಾದಕ: ಎಸ್. ಕೆ. ನಾಯಕ್. ಪ್ರಕಾಶಕರು ರಾಘವೇಂದ್ರ ಆಚಾರ ಮುದ್ರಕ ಸರ್ವಾಧಿಕಾರಿ ॥ ಜಿಲ್ಲೆಯಲ್ಲಿ

ಅಖಿಲ ಭಾರತೀಯ ಪ್ರಾಮುಖ್ಯತೆಯ ಸಚಿತ್ರ ಉಪಯುಕ್ತ ಮತ್ತು ಶಾಲಾ ಸೇವಾಲಾಭಾರ್ಥಕ

ವಿನಂತಿ:-

ಬಹಿಷ್ಕಾರ ಕಾಯಿದೆ ಭಂಗ ಸಲ್ಲಿಸಿದ್ದಕ್ಕಾಗಿ ಸಂಘ ಕಾರ್ಯಕ್ರಮಗಳಲ್ಲಿ ಬಳಕೆ ಮಾಡಿದ್ದಕ್ಕಾಗಿ ಬಂಧಿತರಾದ ಕಿಕ್ಕೇರಿಯ ಕಾಮಂದಾಯಿಕ ಪಂಚಾಯತ್ ಸದಸ್ಯರ ಸ್ವಾರ್ಥ ಮತ್ತು ಅಜ್ಞಾನವನ್ನು ನಾಕ ಮಾಡುವಂಥಾದ್ದು. ಹಾಗಾಗಿ ಪ್ರಜಾಪ್ರಭುತ್ವ ಸಂಸ್ಥೆಗಳ ಸಚಿವಪದವಿಯನ್ನು ಪಡೆದಿರುವ [illegible] ಸ್ವಾರ್ಥ ತ್ಯಾಗವನ್ನು ಕೊಟ್ಟು ಎರಡನೆಯದು ಸಾರಿಯಾ ಸೇವೆ ಪ್ರಜೆಯನ್ನು ತನ್ನ ಮಾಲನ್ನು ಮಾಡಲಾಗದೆಯೂ [illegible]

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು

ಸಂಘ ದಿನಾಂಕ

ವ್ಯಕ್ತಿಯ ಸಹಿ

ಸಂಪಾದಕರ ಹೆಸರು

ಮ್ಯಾನೇಜರ ಹೆಸರು

ಸಾಮಾನ್ಯ ಸಹಿ

೧೮೫೫ ಆಂಗೀರಸ ಸಂ॥
ವರ್ಷ ೯
ಮೃಗಶಿರ ಬ. ೪
ಶನಿವಾರ

ಶ್ರೀಧರ್ಮಪತ್ರಿಕೆ

1932ನೇ ಇಸವಿ
ದಶಂಬರ ತಾ. 17.
ಸಂಚಿಕೆ ೭-೮-೯

ಆಯುರ್ವೇದ, ಸನಾತನ ವರ್ಣಾಶ್ರಮಧರ್ಮ ವಿಷಯಗಳು ಪ್ರಕಟಿಸಲ್ಪಡುವ ಅತ್ಯುತ್ತಮ ಪಕ್ಷ ಪತ್ರಿಕೆ.

ವ್ಯವಸ್ಥಾಪಕ, ಸಂಪಾದಕ ಮತ್ತು ಪ್ರಕಾಶಕ:—
ಆಯುರ್ವೇದಕಲಾನಿಧೂಷಣ, ವಿದ್ವಾನ್ ಕೆ. ಶೇಷ ಶಾಸ್ತ್ರಿ, ಎ. ವಿ. ಎಸ್., ಬಿ. ಟಿ. ಯು.,
ಸರಸ ಬಾಲಗಣೀಶ ಶ್ರೀಬಾಲವಾಣೀ ಇತ್ಯಾದಿ. ಶ್ರೀ ಭಾರತ ಸನಾತನ ಧರ್ಮಮಂಡಲ ಪ್ರಧಾನಮಂತ್ರೀ,
ಶ್ರೀಶೃಂಗಗಿರಿ ಶ್ರೀಜಗದ್ಗುರು ಸಂಸ್ಥಾನದ ವರ್ಣಾಶ್ರಮಧರ್ಮಪ್ರಚಾರ ವ್ಯವಸ್ಥಾಪಕ, ಶೃಂಗೇರಿ.

ವರ್ಣವ್ಯವಸ್ಥೆ.

(ಆತ್ಮಾಹ್ಲಾದಿನಿಯಿಂದ)

ಸೃಷ್ಟಿಯ ಆರಂಭಕಾಲದಿಂದಲೂ ಜನ್ಮ, ಗುಣ, ಕರ್ಮ ಇವುಗಳ ಆಧಾರದ ಮೇಲೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ವ್ಯವಸ್ಥಿತವಾಗಿರುವುವು. ಅಂದರೆ, ಬ್ರಾಹ್ಮಣ ಸ್ತ್ರೀಯಲ್ಲಿ ಬ್ರಾಹ್ಮಣನಿಗೂ, ಕ್ಷತ್ರಿಯ ಸ್ತ್ರೀಯಲ್ಲಿ ಕ್ಷತ್ರಿಯನಿಗೂ, ವೈಶ್ಯ ಸ್ತ್ರೀಯಲ್ಲಿ ವೈಶ್ಯನಿಗೂ, ಶೂದ್ರ ಸ್ತ್ರೀಯಲ್ಲಿ ಶೂದ್ರನಿಗೂ ಉತ್ಪನ್ನವಾದ ಸಂತಾನವು ಆಯಾ ಗುಣವನ್ನು ಹೊಂದಿ ಆಯಾಯ ಕರ್ಮಗಳಲ್ಲಿ ಪ್ರವೃತ್ತವಾಗಿ ಬ್ರಾಹ್ಮಣನೆಂತಲೂ, ಕ್ಷತ್ರಿಯನೆಂತಲೂ, ವೈಶ್ಯನೆಂತಲೂ, ಶೂದ್ರನೆಂತಲೂ ವ್ಯವಹರಿಸಲ್ಪಡುವುದು.

ಈವಿಷಯದಲ್ಲಿ ಕೆಲವರು ಗುಣಕರ್ಮಗಳಿಂದ ಬ್ರಾಹ್ಮಣಾದಿ ವ್ಯವಹಾರವೇ ಹೊರತು ಜನ್ಮದಿಂದಲ್ಲವೆಂದು ವಾದಿಸುವರು ಇದಕ್ಕೆ ಕೆಲವು ಪ್ರಮಾಣಗಳನ್ನು ಅವರು ಉದಹರಿಸುವರು ಒಬ್ಬ ಬ್ರಾಹ್ಮಣನು ಶೂದ್ರಕರ್ಮದಲ್ಲಿ ನಿರತನಾಗಿ ಸ್ವವರ್ತೋ ಚಿತಕರ್ಮಗಳಲ್ಲಿ ವಿಮುಖನಾದರೆ, ಧಾರ್ಮಿಕನಾದ ರಾಜನು ಅವನನ್ನು ಶೂದ್ರಕರ್ಮದಲ್ಲಿ ನೇಮಿಸಬೇಕೆಂದು ಶಾಸ್ತ್ರವು ಹೇಳುವುದು. ಇತಿಹಾಸಗಳ ಕೆಲವೆಡೆಗಳಲ್ಲಿ ಗುಣಕರ್ಮಗಳನ್ನನುಸರಿಸಿ ವರ್ಣವಿಭಾಗವನ್ನು ತೋರಿಸಿರುವಂತೆ ಭಾಸವಾಗುವುದು ವಿಶ್ವಾಮಿತ್ರನು ಜನ್ಮದಿಂದ ಕ್ಷತ್ರಿಯನಾಗಿದ್ದಾಗ್ಯೂ ಕರ್ಮದಿಂದ ಬ್ರಾಹ್ಮಣನಾಗಿರುವನು. ಆದುದರಿಂದ ಗುಣಕರ್ಮಗಳಿಂದ ವರ್ಣವ್ಯವಸ್ಥೆಯೇ ಹೊರತು ಜನ್ಮದಿಂದಲ್ಲವೆಂದು ಇವರ ಅಭಿಪ್ರಾಯವಾಗಿರುವುದು; ಆದರೂ ಆಚರಣೆಯಲ್ಲಿ ಮಾತ್ರ ಹಾಗಿಲ್ಲ ವಂಶಪರಂಪರೆಯಲ್ಲಿಯೇ ವರ್ಣವ್ಯವಸ್ಥೆಯು ಇರುವುದು ಇದಕ್ಕೆ ಕಾರಣವೇನು? ನಾವು ಇದುವರೆಗಿನ ಆಚಾರದಂತೆ ಜನ್ಮಾನುಸಾರ ಬಾಹ್ಮಣಾದಿಗಳನ್ನು ಒಪ್ಪಬೇಕೆ? ಗುಣಕರ್ಮಗಳಿಗನುಸಾರವಾಗಿ ಒಪ್ಪಬೇಕೆ? ಎಂಬ ಸಂಶಯವು ಸಹಜವಾಗಿಯೇ ಎಲ್ಲರಿಗೂ ಉಂಟಾಗುವುದು.

ಈಗಿನ ಜನಗಳಿಗೆ ಈ ಕಾಲಕ್ಕನುಸಾರವಾಗಿ ಒದಗುವ ಶಿಕ್ಷಾಕ್ರಮಗಳಿಂದ ಮಹರ್ಷಿಗಳ ಧರ್ಮರಹಸ್ಯವು ತಿಳಿದು ಬರುವುದು ಬಹಳ ಕಷ್ಟವಾಗಿದೆ. ಜನ್ಮ, ಗುಣ, ಕರ್ಮ ಇವು ಮೂರನ್ನೂ ಅನುಸರಿಸಿಯೇ ವರ್ಣವ್ಯವಸ್ಥೆಯನ್ನು ಮಾಡಬೇಕು ಇತಿಹಾಸವು ಇದನ್ನೇ ಹೇಳುವುದು. ಇದೇ ಸರ್ವಸಮ್ಮತವಾದುದು ಗುಣಕರ್ಮಗಳ ವಿಷಯದಲ್ಲಿ ಮಾತ್ರ ಸ್ವಲ್ಪ ವಿಚಾರಮಾಡಬೇಕಾದುದು ಅವಶ್ಯಕವು ಈಗಿನ ಕೆಲವರು ಗುಣಕರ್ಮಗಳ ತತ್ವವನ್ನು ಅಂತುಕೊಳ್ಳದೆ ಬ್ರಾಹ್ಮಣ ಗುಣಕರ್ಮಗಳಿದ್ದರೆ ಅವನು ಶೂದ್ರನೇ ಆಗಲಿ, ವಿಧರ್ಮಿಯೇ ಆಗಲಿ ಅವನನ್ನು ಬ್ರಾಹ್ಮಣರಲ್ಲಿ ಸೇರಿಸುತ್ತಾ ಇದೇ ವಾದವನ್ನು ಮಾಡಿಕೊಂಡು ಆನರ್ಥವನ್ನುಂಟುಮಾಡುತ್ತಿರುವರು. ಇದರ ಮೂಲತತ್ವವನ್ನು ವಿಚಾರಮಾಡುವ ವರೆಗೂ ಈ ಭ್ರಾಂತಿಯು ಇವರಿಗೆ ಹೋಗುವುದಿಲ್ಲ ಸಂಶಯವು ಪರಿಹಾರವಾಗುವುದಿಲ್ಲ ಇದರ ಮೂಲತತ್ವವೇನೆಂಬುದನ್ನು ವಿಚಾರ ಮಾಡಬೇಕಾದುದು ಅತ್ಯಾವಶ್ಯಕವಾಗಿರುವುದು.

ಗುಣಕರ್ಮಗಳಿಂದ ಬ್ರಾಹ್ಮಣಾದಿ ವಿಭಾಗವೆಂದು ವಾದಿಸುವವರು ಮೊದಲು ಆ ಗುಣಕರ್ಮಗಳಿಗೆ ಆಧಾರವಾದ ಶರೀರದ ಸ್ಥಿತಿಯನ್ನು ವಿಚಾರಮಾಡಬೇಕಲ್ಲವೆ?

ಮಾತಾಪಿತೃಗಳ ರಜೋವೀರ್ಯಗಳಿಂದ ಈ ಶರೀರವು ನಾಗುವನು-ರಜೋವೀರ್ಯಗಳೊಂದಿಗೆ ಸೇರಿಬರುವ ಕಾರಣ ಸಂಸ್ಕಾರವುಸ್ವಭಾವದಲ್ಲಿ ಕಠಿಣವಾಗುವದು. ಇದೇ ಜನ್ಮವೆಂದು ವ್ಯವಹರಿಸಲ್ಪಡುವದು ಗುಣಕರ್ಮಗಳಿಗಿಂತಲೂ ಇದು ಮುಖ್ಯವಾದುದು. ಏಕೆಂದರೆ- ಈ ಜನ್ಮವಿದ್ದರೆ ಗುಣಕರ್ಮಗಳಿಗೆ ಅವಕಾಶವೇ ಹೊರತು ಅನ್ಯಥಾ ಇಲ್ಲ. ಆದುದರಿಂದ ಜನ್ಮವು ಗೋಡೆಯಂತೆಯೂ, ಗುಣಕರ್ಮಗಳು ಆ ಗೋಡೆಯಲ್ಲಿ ಬರೆಯುವ ಚಿತ್ರದಂತೆಯೂ ಇರುವ ಕಾರಣ ಗೋಡೆ ಇಲ್ಲದಿದ್ದರೆ ಚಿತ್ರವು ಹೇಗೆ ಅಸಂಭಾವಿತವೋ ಹಾಗೆಯೇ ಗುಣಕರ್ಮಗಳೂ ಶರೀರವಿಲ್ಲದಿದ್ದರೆ ಅಸಂಭಾವಿತಗಳಾಗುವುವು ಗುಣವು ಯಾವಾಗಲೂ ದ್ರವ್ಯದಲ್ಲಿ ಇರಬೇಕಾದುದು ಕರ್ಮವು ಸ್ವಯಂಜಡವಾದ ಕಾರಣ ಕರ್ತೃವಿಲ್ಲದೆ ಇರಲಾರದೆಂಬುದೂ ಸಹಾನ್ಯಾಯದ ನಿಯಮವಾಗಿರುವುದು ಆದುದರಿಂದಲೇ ಜಾತಿ ಮತ್ತು ಜಾತಿ ಭೇದವು ವೈದಿಕ ಸಿದ್ಧಾಂತವನ್ನು ಅನುಸರಿಸಿ ಯಜುರ್ವೇದದ ೩೦ನೇ ಅಧ್ಯಾಯದಲ್ಲಿ ವರ್ಣಿತವಾಗಿರುವುದಲ್ಲದೆ ಮನುಸ್ಮೃತಿಯ ೧೦ನೇ ಅಧ್ಯಾಯದಲ್ಲಿಯೂ ವರ್ಣಿತವಾಗಿರುವದು.

ಇದಲ್ಲದೆ ಯಾರು ಗುಣಕರ್ಮಗಳೇ ಪ್ರಧಾನಗಳೆಂದು ಜನ್ಮವನ್ನು ದೂರೀಕರಿಸಿ ವಾದಿಸುತ್ತಲಿರುವರೋ ಆ ಆರ್ಯ ಸಮಾಜದವರ ಮೂಲಪುರುಷರಾದ ಸ್ವಾಮಿ ದಯಾನಂದರು ಆರ್ಯೋದ್ದೇಶ್ಯ ರತ್ನಮಾಲೆಯಲ್ಲಿ ೩೮ನೇ ನಂಬರಿನಲ್ಲಿ ಜಾತಿಯು ಈಶ್ವರಕೃತವೆಂದೂ, ಸತ್ಯಾರ್ಥಪ್ರಕಾಶದ ೪ನೇ ಪುಟದಲ್ಲಿ ಜಾತಿಭೇದವು ಈಶ್ವರಕೃತವೆಂತಲೂ ಒಪ್ಪಿಕೊಂಡಿರುವರು. ಜಾತಿಯೂ ಜಾತಿಭೇದವೂ ಈಶ್ವರ ಕೃತವೆಂದಮೇಲೆ ಒಂದೇ ಜನ್ಮದಲ್ಲಿ ಜಾತಿಪರಿವರ್ತನವಾಗುವುದು ದಯಾನಂದರ ಸಿದ್ಧಾಂತಕ್ಕೂ ವಿರುದ್ಧವಾಗಿರುವುದು. ಸೃಷ್ಟಿಸ್ಪಾರಂಭದಲ್ಲಿ ಜನ್ಮದ ಜತೆಯಲ್ಲಿಯೇ ಬ್ರಾಹ್ಮಣಾದಿ ನಾಮವು ನಿರ್ದಿಷ್ಟವಾಗುವುದು ಹಾಗಿಲ್ಲದಿದ್ದರೆ ಸೃಷ್ಟಿಸ್ಪಾರಂಭದಲ್ಲಿ ಬ್ರಾಹ್ಮಣಾದಿ ಜಾತಿಭೇದದ ಪ್ರಸಂಗವು ವೇದದಲ್ಲಿ ವರ್ಣಿಸಲ್ಪಡುತ್ತಿರಲಿಲ್ಲ ಜನನ ಕಾಲದಿಂದಲೇ ವೇದಾಭ್ಯಾಸವನ್ನು ಮಾಡುವುದಕ್ಕೆ ಅಸಂಭವವಾದುದರಿಂದ ಬ್ರಾಹ್ಮಣ್ಯಕ್ಕೆ ವೇದಭ್ಯಾಸವೇ ಕಾರಣವಲ್ಲ ಇದಲ್ಲದೆ ಅನೇಕ ವೇದಮಂತ್ರಗಳಲ್ಲಿ ದ್ವಿಜ, ದ್ವಿಜನ್ಮಾ ಎಂಬ ಪದಗಳು ಇವೆ. ಈ ಪದಗಳು ಕರ್ಮಕ್ಕಿಂತಲೂ ಜನ್ಮವೇ ಪ್ರಧಾನವೆಂದು ಸೂಚಿಸುತ್ತವೆ. ಹಾಗಲ್ಲದೆ ಜನ್ಮಕ್ಕಿಂತಲೂ ಕರ್ಮಕ್ಕೇನೇ ಪ್ರಾಧಾನ್ಯವಿದ್ದಿದ್ದರೆ ದ್ವಿಕರ್ಮಾ ಎಂಬ ಪದವೂ ಇರುತ್ತಿತ್ತು. ಹಾಗೆ ಯಾವ ವೇದದಲ್ಲಿಯೂ ಹೇಳಿರುವುದಿಲ್ಲ.

ಬ್ರಾಹ್ಮಣ ಲಕ್ಷಣದ ವಿಷಯದಲ್ಲಿ ವ್ಯಾಕರಣ ಮಹಾಭಾಷ್ಯದ ೬ನೇ ಅಧ್ಯಾಯ, ೨ನೇ ಪಾದ, ೬ನೇ ಸೂತ್ರದಲ್ಲಿ "ತಪಶ್ಶ್ರುತಂ ಚ ಯೋನಿಶ್ಚೇತ್ಯೇ ತದ್ಬ್ರಾಹ್ಮಣಕಾರಕಂ। ತಪಶ್ಶ್ರುತಾಭ್ಯಾಂ ಯೋ ಹೀನೋ ಜಾತಿಬ್ರಾಹ್ಮಣ ಏವ ಸಃ" ಎಂದು ತಪಸ್ಸು, ವೇದ, ಜನ್ಮ ಇವು ಮೂರು ಯಾರಲ್ಲಿವೆಯೋ ಅವನು ಉತ್ತಮ ಬ್ರಾಹ್ಮಣನೆಂತಲೂ, ತಪಸ್ಸು, ಶ್ರುತ ಎರಡೂ ಇಲ್ಲದಿದ್ದರೆ ಅವನು ಜಾತಿ ಬ್ರಾಹ್ಮಣನೆಂತಲೂ ಹೇಳಿರುವರಲ್ಲದೆ ೪ನೇ ಅಧ್ಯಾಯ, ೧ನೇ ಪಾದ, ೪೮ನೇ ಸೂತ್ರದಲ್ಲಿಯೂ ಸಹ "ತ್ರೀಣೀ ಯಸ್ಯಾವದಾತಾನಿ ವಿದ್ಯಾ ಯೋನಿಶ್ಚ ಕರ್ಮ ಚ। ವಿತಚ್ಛಿವೇ ವಿಜಾನೀಹಿ ಬ್ರಾಹ್ಮಣಾಗ್ರ್ಯಸ್ಯ ಲಕ್ಷಣಂ" ॥ ಎಂದು ಇದನ್ನು ಪರಿಪೋಷಿಸಿರುವರು. ಆದುದರಿಂದ ಜನ್ಮವು ಬ್ರಾಹ್ಮಣ್ಯಕ್ಕೆ ಮುಖ್ಯ ಕಾರಣವೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. ಬೋಧಾಯನಗೃಹ್ಯದಲ್ಲಿಯೂ ಸಹ "ಬ್ರಾಹ್ಮ ಋಷಿಕಲ್ಪಃ ಚತುರ್ವೇದಾ ಋಷಿಃ ಅತ ಊರ್ಧ್ವಂ ದೇವಃ" ವೇದಾಧ್ಯಯನಾತ್ಪೂರ್ವದಲ್ಲಿ ಜಾತಿಬ್ರಾಹ್ಮಣನೆಂದು ಜನ್ಮದಿಂದ ಬ್ರಾಹ್ಮಣ್ಯವನ್ನು ಹೇಳಿರುವುದು ಹೀಗಿರಲು ಜನ್ಮದಿಂದ ಬ್ರಾಹ್ಮಣ್ಯವೇ ಹೊರತು ಗುಣಕರ್ಮಗಳಿಂದಲ್ಲವೆಂಬುದು ಸರ್ವಋಷಿಸಮ್ಮತವಾಗಿರುವುದು ಇದರ ಮೇಲೆ ಗುಣಕರ್ಮಗಳನ್ನು ವಿಚಾರಮಾಡೋಣ. ಗುಣಕರ್ಮಗಳು ನೈಸರ್ಗಿಕವೆಂತಲೂ, ಸಾಂಸರ್ಗಿಕವೆಂತಲೂ ಎರಡು ವಿಧಗಳಾಗಿರುವುವು ಜಾತಿ ಪರಂಪರೆಯಿಂದ ಯಾವ ಗುಣಗಳು ಜಡಜಂಗಮ ಜೀವಗಳಲ್ಲಿ ಸೇರಿ ಬರುವುವೋ, ಅವುಗಳು ನೈಸರ್ಗಿಕಗಳೆಂದು ಹೇಳಲ್ಪಡುವುವು ಹೇಗೆಂದರೆ— ಸಿಂಹದಲ್ಲಿ ಹಿಂಸೆ ಮತ್ತು ಕೋಪವೂ, ಹಸುವಿನಲ್ಲಿ ಸಾಧುತ್ವ ಮತ್ತು ಅಹಿಂಸೆಯೂ, ಮೆಣಸಿನಲ್ಲಿ ಕಾರವೂ, ಕಬ್ಬಿನಲ್ಲಿ ಮಾಧುರ್ಯವೂ ನೈಸರ್ಗಿಕ ಗುಣಗಳು. ಹೀಗೆಯೇ ಸಂಸರ್ಗ ಅಥವಾ ಸಹವಾಸಾದಿಗಳಿಂದ ಉಂಟಾಗುವ ಗುಣಗಳು ಸಾಂಸರ್ಗಿಕಗಳು. ಹೇಗೆಂದರೆ— ಸಿಂಹವೇ ಮೊದಲಾದುವುಗಳಲ್ಲಿ ಸರ್ಕಸ್ಸಿನವರ ಶಿಕ್ಷೆಯಿಂದ ಕೋಪವೂ ಹಿಂಸೆಯೂ ಕಡಮೆಯಾಗುವುವು. ಮೆಣಸು ಮೊದಲಾದುವುಗಳು ತೀಕ್ಷ್ಣಭಾವವನ್ನು ಬಿಡುವುವು. ಈ ಎರಡು ವಿಧವಾದ ಗುಣಗಳಲ್ಲಿ ನೈಸರ್ಗಿಕ ಗುಣವು ಚಿರಸ್ಥಾಯಿಯಾಗಿಯೂ, ಸಾಂಸರ್ಗಿಕ ಗುಣವು ಸ್ವಲ್ಪ ಕಾಲ ಮಾತ್ರ ಇರುವುದಾಗಿಯೂ ಕಂಡು ಬರುತ್ತದೆ. ನೈಸರ್ಗಿಕ ಗುಣದ ಸ್ವಭಾವವು ಅದನ್ನು ದೂರ ಮಾಡುವುದಕ್ಕೆ ಅಸಂಭವವಿಲ್ಲದಿದ್ದಾಗ್ಯೂ, ಅಸಾಧ್ಯವಾದಷ್ಟು ದೃಢವಾಗಿರುವುದು. ಬ್ರಾಹ್ಮಣತ್ವವು ಜಾತಿ ಪರಂಪರೆಯ ಗುಣಗಳು ನೈಸರ್ಗಿಕಗಳಾದ ಕಾರಣ ಚಿರಸ್ಥಾಯಿಗಳಾಗಿಯೂ, ಆಧುನಿಕ, ದೇಶ, ಕಾಲ, ಸಹವಾಸ ಮೊದಲಾದ ಕಾರಣಗಳಿಂದ ಒಂದೊದಿಗುವ ಸಾಂಸರ್ಗಿಕ ಗುಣಗಳು ಸ್ವಲ್ಪ ಕಾಲ ಮಾತ್ರ ಇರತಕ್ಕವುಗಳಾಗಿಯೂ ಇವೆ. ಈ ಸಾಂಸರ್ಗಿಕ ಗುಣಗಳು ಹೆಚ್ಚಿದರೆ ಸ್ವಾಭಾವಿಕ ಗುಣಗಳನ್ನು ನಿರಾಕರಿಸಬಲ್ಲುದು. ಆದರೆ ನಿಃಶೇಷವಾಗಿ ಹೋಗಲಾಡಿಸಲಾರದು. ಸ್ವಾಭಾವಿಕಗುಣಗಳಾದರೋ ಸಾಂಸರ್ಗಿಕ ಗುಣಗಳನ್ನು ಸುಲಭವಾಗಿಯೇ ನಾಶಮಾಡಬಲ್ಲವು. ಸಾವಿರಾರು ವರ್ಷಗಳಿಂದಲೂ ನಾನಾವಿಧವಾದ ಜಾತಿ, ಧರ್ಮ, ಶಾಸನ, ದೇಶ, ಕಾಲ ಇವುಗಳ ಗುಣದೋಷಗಳ ಪ್ರಭಾವವು ಬ್ರಾಹ್ಮಣಾದಿ ವರ್ಣಗಳ ಮೇಲೆ ಬೀಳುತ್ತಿದ್ದಾಗ್ಯೂ, ಒಬ್ಬ ಮೂರ್ಖ ಬ್ರಾಹ್ಮಣನು ಧಾರ್ಮಿಕ ವಿಚಾರಗಳನ್ನು ತಿಳಿದಿರುವಂತೆ ಇತರನು ತಿಳಿದಿರಲಾರನು. ಹಾಗೆಯೇ ದೀನನಾಗಿಯೂ, ದುರ್ಬಲನಾಗಿಯೂ, ಅಸ್ತ್ರವಿಹೀನನಾಗಿಯೂ ಇರುವ ಕ್ಷತ್ರಿಯನು ಸಾಹಸ ಕೆಲಸಗಳಲ್ಲಿ ಅಧಿಕವಾಗಿ ಪ್ರವೇಶ ಮಾಡುವಂತೆ ತದಿತರರು ಪ್ರವೇಶಮಾಡಲಾರರು ಇಂತಹ ಅವಸ್ಥೆಯಲ್ಲಿ ಸ್ವಾಭಾವಿಕ ವರ್ಣವ್ಯವಸ್ಥೆಯನ್ನು ದೂರವಾಡಿ ಸಾಂಸರ್ಗಿಕ ಗುಣಗಳಿಗೆ ತಕ್ಕಂತೆ ವರ್ಣವ್ಯವಸ್ಥೆಯನ್ನು ಮಾಡುವುದು ಎಂದಿಗೂ ಯುಕ್ತಿಸಂಗತವಲ್ಲವು. ಈ ಅಭಿಪ್ರಾಯದಿಂದಲೇ ಗೀತೆಯಲ್ಲಿ "ಸ್ವಭಾವಪ್ರಭವೈರ್ಗುಣೈಃ" ಎಂದು ನೈಸರ್ಗಿಕಗುಣಗಳನ್ನು ಅನುಸರಿಸಿ ಚಾತುರ್ವರ್ಣ್ಯವು ಸೃಜಿಸಲ್ಪಟ್ಟಿರುವುದೆಂದು ಹೇಳಿರುವರು ಸುಗುಣಗಳಿಗಿಂತಲೂ ದುರ್ಗುಣಗಳ ಪ್ರಭಾವವು ಪ್ರಬಲಗಳೆಂಬಂಶವನ್ನು ಎಲ್ಲರೂ ಒಪ್ಪುವರು. ಈ ವರ್ಣವ್ಯವಸ್ಥೆಯು ಯಜುರ್ವೇದದಲ್ಲಿ ಹೇಳಲ್ಪಟ್ಟಿದೆ. ಅದನ್ನು ಸಾಧಾರಣವಾಗಿ ನೋಡಿದರೆ ಬ್ರಾಹ್ಮಣನು ಈಶ್ವರನ ಮುಖದಿಂದಲೂ, ಕ್ಷತ್ರಿಯನು ಬಾಹುವಿನಿಂದಲೂ, ವೈಶ್ಯನು ತೊಡೆಗಳಿಂದಲೂ, ಶೂದ್ರನು ಪಾದಗಳಿಂದಲೂ ಉತ್ಪನ್ನರಾದರೆಂದು ಅರ್ಥವಾಗುವುದು. ಆದರೆ ಈ ರೂಪಕ

ಯಸ್ಮಿನ್

ಸಂಪುಟ ೫

ಸಂಪಾದಕರ ಹೆಸರು

ಪ್ರಕಾಶಕರ ಹೆಸರು

ಸೌಜನ್ಯ ಕೃಪೆ

ಕರ್ನಾಟಕಾಯುರ್ವೇದ

ಮಂಡಲದ ವಕ್ಷವಾಗಿ ಪ್ರತಿ ತ್ರಯೋದಶಿಗೆ

ಪ್ರಕಟಿಸಲ್ಪಡುವ ಅತ್ಯುತ್ತಮವಾದ

ಕರ್ನಾಟಕಾಯುರ್ವೇದ ಪತ್ರಿಕೆ

ಪ್ರಧಾನ ಸಂಪಾದಕ ಮತ್ತು ವ್ಯವಸ್ಥಾಪಕ:—

ಲಿಂಗಣ್ಣೇಶ: ಆಯುರ್ವೇದಜ್ಞ

ಗುಣ ವಿಶಾಲ್ಯನ್ ಕೆ. ಶೇಷ ರಾವ್ಶ್ರೀ,

ಎ. ವಿ. ಎಸ್., ಶ್ರೀ ಜಾಲ ಸಾಣೇ ಆಯುರ್ವೇದ.

ರತ್ನಂ, ಭಾರತೀ ತೀರ್ಥ ಉಪಾಧ್ಯಾಯ,

ವಿ. ಸಾಹಿತ್ಯ) ಇತ್ಯಾದಿ, ಶೃಂಗೇರಿ

ವಿಭವ ಸಂವತ್ಸರ ಪುಷ್ಯ ಬ. [illegible]

Registered No. M. 2000.

ವಾರ್ಷಿಕ ಚಂದಾ ೨ ರೂಪ್ಯಾ.

KARNATAKA NEWSPAPER EMP...
MALNAD NEWS AGENCY, MEGA...
SHIMOGA D..., MYSORE STATE

ಶ್ರೀ ಧನ್ವಂತರಿ

ಆಯುರ್ವೇದ, ಸನಾತನ ವರ್ಣಾಶ್ರಮ ಧರ್ಮ ವಿಷಯಗಳನ್ನು
ಪ್ರಕಟಿಸಲ್ಪಡುವ ಅಶ್ಯುತ್ತಮ ವೈದ್ಯಪತ್ರಿಕೆಯು.

ಭಗವಾನ್ಧನ್ವಂತರಿಸ್ತಂತಂ ॥ ೧

೧೪೫೪
ಆಂಗೀರಸ

ವರ್ಷ
೯

ಜ್ಯೇಷ್ಠ ಕೃ.
೪
ಬುಧವಾರ

1932
ಸಂವತ್ಸರ

ಸಂಚಿಕೆ
೧-೨

ಕಾರ್ತೀಕ
22
ಜೂನ್

ವ್ಯವಸ್ಥಾಪಕ ಸಂಪಾದಕ ಮತ್ತು ಪ್ರಕಾಶಕರು:— ...ಪತ್ರಿಕಾ ...
ಆಯುರ್ವೇದಕಲಾವಿಭೂಷ್ಣ ... ಸ್ಕೂಲಿನ ಪದವೀಧರ್
ವಿದ್ವಾನ್ ಕೆ. ಶೇಷ ಶಾಸ್ತ್ರಿ, ಎ. ವಿ. ವೈದ್ಯ ... ಸಾರಿಯೂ ಆಯುರ್ವೇದ
ಸರಸ ಬಾಲಗಣೇಶ ಶ್ರೀಬಾಲವಾಣಿ
ಶ್ರೀ ಭಾರತ ಸನಾತನ ಧರ್ಮೋದ್ಧಾರಕ... ಧರ್ಮಲಕ್ಷ್ಮಣ, ಧರ್ಮ...
ಶ್ರೀಶೈಂಗಗಿರಿ ಶ್ರೀಜಗದ್ಗುರು ... ಸಂದ್ರವಾನವರ್ಯರ್ಯಾಶ್ರಿತ ...
... ಕರ್ನಾಟಕ ಧರ್ಮೋಪದೇಶಕ ಶ್ರೀಹರಿ ... ಸ್ಥಿರಪ್ರತಿಷ್ಠಿತವಾಗಿರಲಿ.
... ಸಂಸ್ಥಾಪಕರಾದ ... ಶ್ರೀಮದ್ಧರ್ಮಪ್ರಚಾರಕ್ಕಾಗಿ
... ಪ್ರಾರಂಭಿಸಲ್ಪಟ್ಟಿದೆ

1932
ಆಲುಮರವನಸ್ಕರ ಛಾತಿಲು ಮಲ್ಲಿಗಾ ಬಿಗ

ದಿನಪತ್ರಿಕೆ!

ದಿನ ಪತ್ರಿಕೆಯಚಂದಾ
೧.ವರ್ಷಕ್ಕೆ ೬ರೂ
೬. ತಿಂಗಳಿಗೆತೊರೂ.
೩ ತಿಂಗಳಿಗೆ ೧ರೂ.
೧ ತಿಂಗಳಿಗೆ ೬ ಆ.
ಟ. ಖರ್ಚು ಬೇರೆ.



ರ.ನ ಬಿ ೨೯೭೬

ಮುಂಜಾನೆ ಸಂಪಾದಕ:— ಸ.ಚ.ಮಿರ್ಜಿ ೧೦ ೬೬

ಸಂಪುಟ ೧೧ ವಿಜಾಪುರ-ಬುಧವಾರ ತಾರೀಖು ೬-೧೦-೧೯೩೨ ಸಂಚಿಕೆ ೩೭

ಕಾಂಗ್ರೆಸದ ಮೊದಲನೇ ಡಿಕ್ಟೇಟರರಾದ

ಶ್ರೀ ರಾಜೇಂದ್ರಪ್ರಸಾದರನ್ನು ಹಿಡಿದರು.

ಮುಂಬಯಿಗೆ ಆರ್ಡಿನನ್ಸಗಳು ಅನ್ವಯಿಸಲ್ಪಟ್ಟವು.

ಶ್ರೀ ರಾಜೇಂದ್ರಪ್ರಸಾದರ ಬಂಧನ.

ಬಿಹಾರಪ್ರಾಂತದ ಮುಖಂಡರಾದ ಮತ್ತು ಕಾಂಗ್ರೆಸದ ಮೊದಲನೇ ಡಿಕ್ಟೇಟ್ಟರಾರ ಶ್ರೀ ರಾಜೇಂದ್ರಪ್ರಸಾದರನ್ನು ನಿನ್ನಿನ ದಿನಸ ಮುಂಬಯಿಯಲ್ಲಿ ಬಂಧಿಸಿದರು. ಮುಂದೆ ಅವರನ್ನು ಒಂಕಿಪುರ ಸರಹದ್ದಿನೆಗೆ ಒಯ್ದರು

ಮುಂಬಯಿಗೆ ಆರ್ಡಿನನ್ಸಗಳು ಅನ್ವಯಿಸಲ್ಪಟ್ಟವು.

ಸದ್ಯಚಲ್ಲಿ ನಡೆಯಬೇಕಾಗಿರುವ ಕಾಂಗ್ರೆಸ ಚಳವಳಿಯನ್ನು ಮುರಿಬಡಿಯುವದಕ್ಕಾಗಿ ಹೊಸವಾಗಿ ತೆಗೆಯಲ್ಪಟ್ಟ ಆರ್ಡಿನನ್ಸಗಳು ಮುಂಬಯಿಗೆ ನಿನ್ನಿನ ದಿನಸ ಅನ್ವಯಿಸಲ್ಪಟ್ಟವು.

ಅಲಾಹಾಬಾದದಲ್ಲಿ ೫೦ ಜನರನ್ನು ಹಿಡಿದರು.

ಮಹಾತ್ಮಾ ಗಾಂಧಿಯವರನ್ನು ಬಂಧಿಸಿದ ಬಗ್ಗೆ ಅಲಾಹಾಬಾದಿನಲ್ಲಿ ಮೆರವಣಿಗೆಯನ್ನು ತೆಗೆದ ಕಾಲದಲ್ಲಿ ೫೦ ಜನರನ್ನು ಸರಕಾರವರು ಬಂಧಿಸಿದರೆಂದು ತಿಳಿಯುತ್ತದೆ.

ಕಲಕತ್ತೆಯಲ್ಲಿ ಬಂಧನ.

ನಿನ್ನಿನ ದಿವಸ ಕಲಕತ್ತೆಯಲ್ಲಿ ೧೩ ಜನರನ್ನು ಬಂಧಿಸಿದರೆಂಬ ವಾರ್ತೆ ಇವೆ.

ಮಹಾತ್ಮರನ್ನು ಹದ್ದುಪಾರ ಮಾಡಿರಿ!

ಇಂಗ್ಲಂಡ ಪತ್ರಗಳ ಸೂಚನೆಯು.

ಇಂಗ್ಲಂಡದಲ್ಲಿಯ ಕೆಲವು ವರ್ತಮಾನಪತ್ರಗಳವರು ಮಹಾತ್ಮಾ ಗಾಂಧಿಯವರನ್ನು ಬೇಗ ಹದ್ದುಪಾರಮಾಡಿರಿ: ಎಂದು ಕೂಗಾಡುತ್ತಿರುವರೆಂದು ತಿಳಿಯುತ್ತದೆ

ಏಳು ದಿನಸ ಹರತಾಳ.

ಕಾಂಗ್ರೆಸದ ವಿನಂತಿ.

ಮುಂಬಯಿಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಮಹಾತ್ಮರ ಬಂಧನದ ಬಗ್ಗೆ ಎಲ್ಲ ವ್ಯವಹಾರಗಳನ್ನು ನಿಲ್ಲಿಸಿ ಏಳು ದಿವಸಗಳವರೆಗೆ ಹರತಾಳವನ್ನು ಪಾಲಿಸಬೇಕೆಂದು ವಿನಂತಿ ಮಾಡಿಕೊಂಡಿರುವರು

ಮಹಾತ್ಮರನ್ನು ಬಿಡಿರಿ!

ರವಿಶಂಕರ ಮಹಾರಾಜರ ಸೂಚನೆಯು.

ಇಂಗ್ಲಂಡದಲ್ಲಿಯ ಒಬ್ಬ ಪ್ರಮುಖರಾದ ಪುರುಷರು ಮಹಾತ್ಮರೆಂಬವರು ಅನ್ನುತ್ತಿದ್ದುದೇನೆಂದರೆ:— 'ಹಿಂದುಸ್ತಾನದಲ್ಲಿ ಶಾಂತತೆಯನ್ನುಂಟುಮಾಡಬೇಕೆಂದು ಬ್ರಿಟಿಶ ಸರಕಾರದವರು ನಿಜವಾಗಿ ಬಯಸುತ್ತಿದ್ದಲ್ಲಿ ಕೂಡಲೆ ಮಹಾತ್ಮಾ ಗಾಂಧಿಯವರನ್ನು ಬಿಡುಗಡೆ ಮಾಡಬೇಕು' ಎಂದು ಸ್ಪಷ್ಟವಾಗಿ ಹೇಳಿದರೆಂದು ತಿಳಿಯುತ್ತದೆ

ಹೈದರಾಬಾದದಲ್ಲಿ

೧೨೫ ಜನರ ಬಂಧನ

೧೦೦೦ ಸಂಖ್ಯಾದರ ಬಂಧನ

ಸಿಂಧ ಹೈದರಾಬಾದದಲ್ಲಿ ಜಾ ಸೇ ಕಾಂಗ್ರೆಸಿನದಿನಸ ಬಿಂ ದೂ ಸಂಪಾದಕ ಸುತ್ತು ೧೨೫ ಸತ್ಯಾಗ್ರಹಿಗಳನ್ನು ಬಂಧಿಸಿದ್ದಲ್ಲದೆ ಬಿಟ್ಟೆ ನೆಲಲ್ಲಿ ೧೦೦೦ ಜನರನ್ನು ಬಂಧಿಸಿರುವರು

ಶ್ರೀ. ಲಕ್ಷ್ಮೀಬಾಯಿ ಸೋಹನಿನು ಅಟ್ಟಿಸಿ

ಪೆಗಾಮಾಗಲ್ಲಿ ಚುನಾವಣೆಯಲ್ಲಿ ಭಾಗವಹಿಸುತ್ತಿರುವ ಸ್ತ್ರೀಯ ರಸ್ಥಿಕ ಮುಖಂಡರಾದ ಶ್ರೀ ಲಕ್ಷ್ಮೀಬಾಯಿ ಸೋಹನಿಯವರನ್ನು ಸ್ಥಳೀಯ ಅಧಿಕಾರಿಗಳು ಪಟ್ಟಣದಿಂದ ಹೊರಗೆ ಅಟ್ಟಿಸಿರುವರು

ಹಿಂದೂ ಮುಸಲ್ಮಾನರ ದಂಗೆಯು.

ಬಲಾಪುರ ತಾ|| ಖಂ|| ಮುಬಿದನ್ನೂರ ಎಂಬ ಗ್ರಾಮದ ಸ್ಥಳೀಯ ಸನಾತನ ಹಿಂದೂ ಜನ ಮುಸಲ್ಮಾನರು ಸೋಪಹೆ ಮಾಡಿದ್ದರಿಂದ ಹಿಂದೂ ಮುಸಲ್ಮಾನರ ನಡುವೆ ಸ್ವಲ್ಪ ದ್ವೇಷವು ಬಿಟ್ಟಿತ್ತು ಆ ಗ್ರಾಮದಲ್ಲಿ ಸೋಪಹೆ ಮಾಡುವ ಕಾಲ ಈ ಗ್ರಾಮದಲ್ಲಿ ಇಲ್ಲದ ನಂದು ಒಂದಿಬ್ಬರು ಸೋಪಹೆಕ್ಕೆ ಅಡತಕ ಮಾಡಿದರು ಕೆಟ್ಟ ಚ ಪಟೆ ಏರಡೂ ಸಮಾಜದಲ್ಲಿಯೂ ಜನರು ಕೈಯಲ್ಲಿ ಲಾಟೀ ತೆಗೆದು ಕೊಂಡು ಮಾರಾಮಾರಿ ಆಗಿ ಒಬ್ಬನು ಪ್ರಾಯಶೊಂದಿದರು ಈ ದಂಗೆಯು ಶಾಂತ ಮಾಡಲ್ಪಟ್ಟು ಆ ದಂಗೆಯಲ್ಲಿ ಭಾಗ ತೆಗೆದು ಕೊಂಡ ೧೨ ಜನರನ್ನು ಪೋಲೀಸರು ಬಂಧಿಸಿರುವರು

ಆನೆ-ಇವರಿಗೆ ಲಿಪ್ತ.

ಮಹಾರಾಷ್ಟ್ರ ಪ್ರಸಿದ್ಧ ಮುಖಂಡರಾದ ಶ್ರೀ ಮಾಧವರಾವ ಅಣೆ ಜವರನ್ನು ಈ ಮೊದಲು ಬಂಧಿಸಿದ್ದರಷ್ಟೇ ಅವರ ಬಿಟ್ಟೆಯು ನಿಜಾರಣೆ ಯಾಗಿ ಅವರಿಗೆ ಕ್ರಿ ಲಾ ಆ ಅಕ್ಕೆದ ೧೨ [೧] ಕಲಮಿನ ಪ್ರಕಾರ ೬ ತಿಂಗಳ ತಿಕ್ಷೆಯು ವಿಧಿಸುವದರಲ್ಲಿ ಬಂದಿತು

ಪನ ಭಗಿನಿಯರಿಗೆ ತಿಕ್ಷೆ.

ಮುಂಬಯಿಯ ಚೌಪಟಿಯಲ್ಲಿ ಪಿಕೇಟಿಂಗ ಮಾಡುವ ಸಮಾರಂಭದ ಕಾಲಕ್ಕೆ ೩ ಜನ ಪನೆ ಭಗಿನಿಯರನ್ನು ಬಂಧಿಸಿದ್ದರಷ್ಟೇ. ಅವರ ಬಿಟ್ಟೆಯು ನಿಜಾರಣೆಯಾಗಿ ಪ್ರತಿಬಂಧಕ್ಕೆ ೧ ಪಹಣ ಕಠಿಣ ತಿಕ್ಷೆ ಮತ್ತು ೨೦೦ ರೂ. ಪಡ ದಂಡ ಕೊಡಕೆಂ ಪಡಿವ್ಹರ ಮತ್ತೆ ೪ ತಿಂಗಳ ತಿಕ್ಷೆಯು ವಿಧಿಸಲ್ಪಟ್ಟಿತು

ಪುಣೆ ಲಷ್ಕರ

ಕಾ. ಪಂಚಾಟಿ ಸರ್ವಾಧಿಕಾರಿಗೆ ತಿಕ್ಷೆ.

ಪುಣೆ ಲಷ್ಕರ ಕಾಂಗ್ರೆಸ ಕಮಿಟಿಯ ಐದನೇ ತಿಕ್ಷೆಯ ಶ್ರೀ ಪಂಕ ಜೀ ಪಂಚಾಟಿಯವರು ಕಾನಾಪಿಪುರದಲ್ಲಿ ಭಾಷಣ ಮಾಡಿದ್ದಕ್ಕೆ ಅ ವರ ಮೇಲೆ ಬಿಟ್ಟೆ ಮಾಡಿದವರಲ್ಲಿ ಬಂದಿತ್ತಷ್ಟೇ ಆ ಬಿಟ್ಟೆಯು ೧ ನೇ ತಾರೀಖಿನ ದಿನಸ ನಿಜಾಯಾಗಿ ಅವರಿಗೆ ಕ್ರಿ ಲಾ ಆ ಅಕ್ಕೆದ ೧೨ [೧ ಎ, ೨] ಕಲಮಿನನ್ವಯ ಆರುತ್ತಿಯ ೬ ತಿಂಗಳ ಮತ್ತು ೨ ಪಹಣ ಕಠಿಣ ತಿಕ್ಷೆಯನ್ನು ವಿಧಿಸಿದರು

ವಿಜಾಪುರ.

ವಿಜಾಪುರ ಎನ್ ಸರ್ವಾಧಿಕಾರಿಗಳಾದ ಶ್ರೀ ರಾಮಚಂದ್ರ ಮನ ಗೂಳಿ ಶ್ರೀ ಪಾಣೂರ ಮತ್ತು ಶ್ರೀ ದೀಕ್ಷಿತ ಇವರುಗಳನ್ನು ಕ್ಷೇಮದಿ ಜಿಲ್ಲೆಯಿಂದ ಬಿಟ್ಟುಬಿಟ್ಟಿರು

ಕ.ಸ.ಬಿ ೨೯೬೨

ಪತ್ರಿಕೆ !

ಪತ್ರಿಕೆಯು ಪ್ರಕಟವಾಗುವ ಸ್ಥಳ ಮತ್ತು ದಿನಾಂಕಗಳು.

೨ ತಿಂಗಳಿಗೆ ೧ರೂ.
೧ ತಿಂಗಳಿಗೆ ೬ ಅ.
ಟ. ಖರ್ಚು ಜೇರೆ



ವಾರಪತ್ರಿಕೆಯು ಪ್ರಕಟವಾಗುವ ದಿನಾಂಕಗಳು.

ಚಾಲ್ತಿಯಲ್ಲಿರುವ ಪತ್ರಿಕೆಗಳ ಪೈಕಿ ಇದು ಎಷ್ಟನೆಯದು ಎಂಬುದರ ಸೂಚನೆ.

ಸಂಪಾದಕ:—ಸ.ಚ.ಮಿಚಿ

ಸಂಪುಟ ೧ | ವಿಜಾಪುರ- ಬುಧವಾರ ತಾರೀಖು ೩-೨-೧೯೨೨ | ಸಂಚಿಕೆ ೬೦

ಹೈದರಾಬಾದದಲ್ಲಿನ ವಿಜಿಪುರದವರ ಬಂಧನ

ಸಂಯುಕ್ತ ಪ್ರಾಂತದಲ್ಲಿ ಒಂದೂ ಮುಸಲ್ಮಾನರ ದಂಗೆಯು.

ಶ್ರೀ. ಲಕ್ಷ್ಮೀಬಾಯಿ ಸೋಜನಿನಾ ಇವರ ಬಂಧನ.



೧೯—೫—೧೯೩೩ನೇ ದಿನ ಮುಂಬಯಿ ಪೌರಸಭಾಧ್ಯಕ್ಷರ ನಾ
ವಾದ 'ಶಾಂತಿಸಭೆ' ನಡೆಯಿತು. ಆಗ ಮೌಲಾನಾ ಷೌಕತ
ಎಂದು ಪಲ್ಲವಿ ಹಾಡುತ್ತಿದ್ದವರು, ಕೀಟಲೆಮಾಡಿ, ಕಲಹಪ್ರ
ಯಲ್ಲಿ ಸುಡುಗಾಡು! ಶಾಂತಿಯಂತೆ!! ಇರಲಿ" ಎಂದು ಆ

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ಬೆಂಗಳೂರು

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು _____

ಆರಂಭ ದಿನಾಂಕ _____

ಪ್ರಕಟನಾ ಸ್ಥಳ _____

ಸಂಪಾದಕರ ಹೆಸರು _____

ಮಾಲೀಕರ ಹೆಸರು _____

ರಾಜಕೀಯ ಪಕ್ಷ _____

WORLD NEWS PAPER EXHIBITOR
M. BASAVARAJU - 577524,
INDIA

ನಂ. ೨೦. ೧೬೯೭

ಪ್ರಜಾಮಿತ್ರ

ಪ್ರತಿ ಭಾನುವಾರವೂ ಬೆಂಗಳೂರು ನಗರದಲ್ಲಿ ಹೊರಡುವ

ರಾಷ್ಟ್ರೀಯ ವಾರಪತ್ರಿಕೆ

ಸಂಪಾದಕ

ತಿರುಪುಲಿ ತಾತಾಚಾರ್ಯ ಶಮ್ಮನ್

ಚಂದಾ ರೂ. ೫—೦—೦

ಬಿಡಿ ಪತ್ರಿಕೆ

ಬೆಂಗಳೂರು ನಗರ— ಜೂನ್ ೫೫ ಭಾನುವಾರ ೧೯೫೨

ಶಾಂತಿಯುಲ್ಲ ಸುಡುಗಾಡು! ಶಾಂತಿಯುಂತೆ!!"

ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು.

ಫಾಲ್ಗುಣ ಶುದ್ಧ ಚತುರ್ದಶಿ (28-2-34) ಬುಧವಾರ.

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುಣ ಶುದ್ಧ ಚತುರ್ದಶಿ ಬುಧ (28-2-34) ದಿವಸ ಭರತಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು. ಶ್ರೀ ರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನು ಪರಿಶುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಆ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರ್ದಿಸುತ್ತೇವೆ.

Registered No. B 2

उत्तिष्ठत जाग्रत । प्राप्यवरान्निबोधत ॥

ಪಪ್ಪ ೧

ಅರುಣೋದಯ

ಸಂಪುಟ ೬

ಸಂಪಾದಕರು—ವೆಂಕಟೇಶ ವೆಂಕಟಾಚಲ ಪಂಡಿತ, ಬಿ. ಎ. ಎಲ್. ಎಲ್. ಬಿ.

॥ ಓಂ ॥

ವಾರ್ಷಿಕ ಚಂದಾ
ರೂ. ೧—೦—೦
ಅಂಚೆ ವೆಚ್ಚ
ಸೇರಿ
ರೂ. ೧—೪—೦.

ಕಲಾಚಂದ್ರ

ಕನ್ನಡ ಮಾಸಪತ್ರಿಕೆ.

ಸಂಪಾದಕ— ಆರ್. ಜೆ. ಶೆಣೈ.

ಪುಟ ೩೨

ಬಿಡಿ ಸಂಚಿಕೆ
೦—೧—೬.

ಸಂಪುಟ ೧ | ಶ್ರೀಮುಖ ಕಾರ್ತಿಕ ನವಂಬರ ೧೯೫೯. | ಸಂಚಿಕೆ ೩.

ತಾಲ್ಲೂಕು ಕಾರ ನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು
ಪ್ರಾರಂಭ ದಿನಾಂಕ
ಪ್ರಕಟನಾ ಸ್ಥಳ
ಸಂಪಾದಕರ ಹೆಸರು
ಮ್ಯಾನೇಜರ ಹೆಸರು
ಸೌಜನ್ಯ ಕೈಪೆ

ೀಳು!

ರೆಂಬುವರು
'ಲರು ॥ಪ॥

ದಿವಸಗಳಿಂದ | ಕೂಳಿಲ್ಲದಿರಿ ಎನಗೆ
ಕ್ಕವರ ಕಾಣೆ। ನೀ ಧರೆಯೊಳಗೆ
ಕಾಳು ಜನ್ಮಸ| ಮಣ್ಣು, ಪಾಲುಮಾಡೆಲೊ
[ದೇವ

ತುತ್ತನ್ನಕೆ, ಗತಿ ಇಲ್ಲ। ಅತ್ತು ಬೇಸತ್ತೆನು ೧

ಹೊರೆಯಲಾರೆದೆ ಒಡಲ। ಪಡುತಿರುವೆ ಬಹು ಬನ್ನ
ಸಲಹೆನ್ನ ಬಡತನವ। ಪರಿಹರಿಸಿ ದೇವಾ
ಬಡತನವು ಬರದಿರಲಿ। ಎನ್ನಂತೆ ಅನ್ಯರಿಗೆ
ಕಡುಪಾಪಿ ನಾನಾದೆ। ಜಲಜಾಕ್ಷ ಹರಿಯೇ ೨

..ಗು ಜನ್ಮಕೂ ಬೇಡ| ಈ ತಿರುಕತನವೂ ೩

ಮಡದಿ ಮಕ್ಕಳ ಬಿಟ್ಟು| ಅಲೆದಾಡಿ ಊರೂರು
ದುಡಿಯಲರಿಯದೆ, ಬಡ| ತಿರುಕನಾದೆ
ಕೊಡುವವನು ನೀನಾಗಿ। ಪೊಡವೀಶ ಕಾಯೆನ್ನ
ಶರಬಾಗುವೆನು ನಿನ್ನ। ಅಡಿತಾವರೆಗೆ ನಾ ೪

"ಚಿನಿವಾರ್"

ಡಾ॥ ಶ್ರೀನಿವಾಸ ಕ. ಪಾಟೀಲರು ಬೆಂಗಳೂರು ಇವರಲ್ಲಿಯ ಸಂಗ್ರಹದಿಂದ
ವಿನಯಪೂರ್ವಕ ಸ್ವಾಗತ.

(೧೬)

KARNATAKA UNIVERSITY DHARWAR

ಸೌಂದರ್ಯ ಪ್ರದರ್ಶನ.

ಮೇರಿಯು ಇರುವಳು ಅವಸರದಲ್ಲಿ,
ಭಾರಿಯ ಕೆಲಸಕೆ ಕೈಹಾಕಿಹಳು;
ಯಾರು ಕೇಳಿದರು ಉತ್ತರಗೊಡಳು,
ಚುರುಕಾಗಿಹಳತಿ ಈ ದಿವಸ.

ತಂದೆಯು ಕೈಯ್ಯಲಿ ಹಣವನು ಕೇಳಿ,
ಅಂದೇ ಹೋದಳು ಅಂಗಡಿಗೆ;
ಚಂದದ ರೇಶ್ಮೆಯ ವಸ್ತ್ರವನಾಕೆಯು
ತಂದಳು ಮುದದಿಂದ.

ಮೇರಿಯು ಲಂಗವ ಮಾಡಿಸಿಕೊಳ್ಳಲು
ಕರೆಸಿದಳಾ ಮುದಿ ದರ್ಜಿಯನು;
ಮರುದಿನ ಮಾಡಲು ಹೇಳಿದಳಾಕೆಯು,
ಮಿರುಗುವ ಚೆಂದದ ಲಂಗವನು.

ಮರುದಿನ ಬಂದಿತು ಚಂದದ ಲಂಗವು
ಮೇರಿಯು ಧರಿಸಿದಳದನಂದು;
ಮೋರೆಯ ತೊಳೆಯುವ ಕೆಲಸವು ಮುಗಿಯಲು,
ಕರಿಯ ಕೂದಲನು ಬಾಚಿದಳು.

ಚಿನ್ನದ ಬಳೆಯನು ತೊಟ್ಟುಕೊಂಡಳು,
ಹೊನ್ನಿನ ಹಾರವ ಧರಿಸಿದಳು;
ಬಣ್ಣವ ಹಾಕಿದಳಾ ತುಟಿಗಳಿಗೆ
ಕನ್ನಡಿ ನೋಡುತಲಿ.

1933

॥ ಶ್ರೀಃ ॥

ಧನ್ವಂತರಯೇನಮಃ

ತದೇವಯುಕ್ತಂ ಭೈಷಜ್ಯಂ ಯದಾರೋಗ್ಯಾಯಕಲ್ಪತೆ ।
ಸಜೈವಯುಷಚಾಂಕ್ರೀಷ್ಟಕೋಗೇಭ್ಯೋಯಃ ಪ್ರಮೋಚಯೇತ್ ॥
(ಚರಕಾಚಾರ್ಯಃ)

ಸದ್ವೈದ್ಯ.

ಆರೋಗ್ಯವಿಷಯಗಳನ್ನು ಪ್ರಕಟಿಸುವ ಮಾಸಪತ್ರಿಕೆ.

ಮೈಸೂರು ಆಯುರ್ವೇದ ವೈದ್ಯ ಸಂಘದಿಂದ ಪುರಸ್ಕರಿಸಲ್ಪಟ್ಟಿರುವುದು.

ಸಂಪುಟ ೨	ಶ್ರೀಮುಖನಾಮ ಸಂವತ್ಸರದ ವೈಶಾಖ	ಸಂಚಿಕೆ ೧೦

May 1933

ಸಂಪಾದಕಃ

ಭಿಷಗ್ರತ್ನ ಆಯುರ್ವೇದವಿದ್ವಾನ್ ಬಿ. ವಿ: ಪಂಡಿತ್

ಸದ್ವೈದ್ಯಶಾಲಾ ಪ್ರೊಪ್ರೈಟರರು, ನಂಜನಗೂಡು.

ಪ್ರಕಾಶಕಃ— ಆಯುರ್ವೇದವಿದ್ವಾನ್ ವಿ. ನರದರಿರಾವ್



ಸಂಪುಟ ೨ ಜುಲಾಯಿ, ೧೯೩೩. ಸಂಚಿಕೆ ೧

ಶುಭಸಂದೇಶ.

(ಕವಿಗಳುಃ—ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು.)

ಬಡವರ ಕಷ್ಟಂಗಳ ತಿಳಿ ।
ದೊಡನವುಗಳನೀಗಿಸಲ್ಕೆ ಘನ ಸೂಚನೆಯಂ ॥
ಕೊಡುತಂ-ಸಾಹಸ ಪಡುತಂ ।
ಬಡ ಜನಹಿತನೆನಿಸಿ ಬಾಳು-ಬಡವರ ಬಂಧೋ! ॥ ೧ ॥

ಧನಿಕರ್ ಹಲವರ್ ಬಡವರ ।
ಕುಣಿಸುವರಕಟಕಟ ನುನಕೆ ಬಂದಂದದೊಳಾ ॥
ಗುಣಮುಂ ತೊಲಗಿಸಿ ತಮ್ಮಾ ।
ನುನಮುಂ ಸರಿಗೊಳಿಸುತಿರಲಿ-ಬಡವರ ಬಂಧೋ! ॥ ೨ ॥

ಆರ್ಯಸನಾತನ ಧರ್ಮಾ ।
ಚಾರ್ಯರ್ ತಾವೆಂದು ಕೆಲರು ಬಡ ಹರಿಜನರಂ ॥
ಕ್ರೌರ್ಯಕಲಾಪದೆ ಬಳಲಿಪ ।
ಕಾರ್ಯಕ್ಕಳಿಗಾಲವಿರಲಿ-ಬಡವರ ಬಂಧೋ! ॥ ೩ ॥

ರಾಜಂ ದುಶ್ಶಾಸನದಿಂ ।
ದೀ ಜಗವಾಳ್ವ ಪ್ರಚಂಡ ರೀತಿಯನುಳಿದಾ ॥
ರಾಜಂ ಪ್ರಜಾನುರಂಜನ ।
ತೇಜಂ ತಾನೆನಿಸಿಕೊಳಲಿ-ಬಡವರ ಬಂಧೋ! ॥ ೪ ॥

ನಿಶ್ಶೇಶ್ವನ ಬಲದಿಂದೀ ।
ವಿಶ್ವಜಗತ್ತಿಹುದು-ವಿಶ್ವನೂನವರಿದರೊಳ್ ॥
ವಿಶ್ವಸ್ವಾತಂತ್ರ್ಯಹರ್ ।
ದಾಸ್ಯಕೆ ಬಲಿಯಾಗದಿರಲಿ-ಬಡವರ ಬಂಧೋ! ॥ ೫ ॥

ಬಡವರ ಬಂಧು ಮಹಾತ್ಮರ್ ।
ಪೊಡವಿಯನುದ್ಧರಿಸಿ ಲೋಕಹಿತಮುಂ ಗೈವರ್ ॥
ಸಡಗರದೊಳವರ ಪಥದಲಿ ।
ನಡೆಯುಲಿ ಧಡೆ ಬೆಳಗುತಿರಲಿ-ಬಡವರ ಬಂಧೋ! ॥ ೬ ॥

ಶ್ರೀಶಂ ಶ್ರಿತಜನ ಸುಖದಂ ।
ಕೋಷಂ ಗೌರೀಶನಮಿತ ದುರಿತ ವಿನಾಶಂ ॥
ಕ್ಲೇಶಹರಂ ವಾಣೀಶಂ ।
ಪೋಷಿಸಲನುಗಾಲ-ನಿನ್ನ-ಬಡವರ-ಬಂಧೋ! ॥ ೭ ॥

P. L. Punincha[illegible]ya.



ಶ್ರೀ ಶೈಲ

ಶ್ರೀ ಆದಿ ಜಗದ್ಗುರು ಪಂಚಾಚಾರ್ಯ ಮಹಾ ಸಂಸ್ಥಾನ ಪೀಠದಿಂದ ಹೊರಡುವ

ಕನ್ನಡ ಮಾಸಪತ್ರಿಕೆ

ಸಂಪುಟ ೧] ಪ್ರಜೋತ್ಪತ್ತಿ: ಮಾರ್ಗಶಿರ, ಪುಷ್ಯ - ಜನವರಿ, ಫೆಬ್ರವರಿ: ೧೯೩೨ [ಸಂಚಿಕೆ ೪-೫

ವಿಷಯ ಸೂಚಿಕೆ

ವಿಶ್ವಕೋಶ—	
ಶ್ರೀ ಸ್ವಾಮಿ ಭಕ್ತನಾಥರು—	ಮು|| ಎ. ಟಿ. ಲಕ್ಷ್ಮಣಗೌಡ, ಬಿ. ಎ.
ಮದುವೆಯ ವೆಚ್ಚ—	ಮು|| ಸಿ. ಕೆ. ವೆಂಕಟರಾಮಯ್ಯ, ಬಿ.ಎ.,ಎಲ್.ಎಲ್. ಬಿ.
ಭಗವದ್ಗೀತಾ ಪ್ರಸಂಗ—	ಮು|| ದೊ. ಲೆ. ಚೆನ್ನಿಗರಾಯರು.
ಮಠಾಧಿಪತಿಯ ಕರ್ತವ್ಯ—	" ಳ. ಚ್ಚಾ. ದೀ. "
ತಪ್ಪ ನಾರ—	ಮು|| ವಿದ್ಯಾಭೂಷಣ ಪ. ಕೆ. ಭಾರದ್ವಾಜರು.
ಸೀನುವುದು ಒಳ್ಳೆಯದಕ್ಕೊ, ಕೆಟ್ಟದಕ್ಕೊ ?—	ಮು|| ಪಂಡಿತ ಕೆ. ಪಸುಮುಂತರಾಯರು.
ಗುರುಭಕ್ತಿ—	" ಗುರುಪಂಕರ "
ವಿಜ್ಞಾಪನೆ—	ಮು|| ಎ. ಟಿ. ಲಕ್ಷ್ಮಣಗೌಡ, ಬಿ. ಎ.
ವಿವಿಧ ಪ್ರಕೀರ್ಣಗಳು—	

ಸಂಪಾದಕರು:

ಎಂ. ಸಿ. ಲಿಂಗೇಗೌಡ, ಎಂ ಎಲ್. ಸಿ

ವಾರ್ಷಿಕ ಚಂದಾ ಅಂಚೆ ಮಾಸುಲು ಸೇರಿ ರೂ ೦-೦. ಪ್ರತಿ ಪ್ರತಿ ೦

ನಂ. ಟಿ ೨-೪೯೯-೧೪ ರ ೭೨-೩೫ ಮೈಸೂರು ವಿದ್ಯಾ ಇಲಾಖೆಯವರಿಂದ ಎಲ್ಲಾ ಮಿಡಿಲ್ ಸ್ಕೂಲ್ ಲೈಬ್ರೆರಿಗಳಿಗೂ ಮಂಜೂರಾಗಿದೆ.

ವಾರ್ಷಿಕ ಚಂದಾ ರೂ ೨.

ಸಂಪಾದಕ
ತಿರುಮಲೆ ಗೋಪಾಲಾಚಾರ್ಯ ಶರ್ಮ

ಶ್ರೀಕೃಷ್ಣ

ಸಂಪುಟ ೨] ಜನವರಿ ೧೯ನೇ ತಾ|| ೧೯೩೩

ಶ್ರೀಯುತ ಎಂ. ಮಹಮ್ಮದ್ ಪೀರ್

1933

ಚಂದ್ರಕಲಾಚರ್ಣಾಟಕ ನಾಟಕ ಸಂಘ ಮೈಸೂರು.

ಇವರು ಮೈಸೂರಿನ ಚಂದ್ರಕಲಾ ನಾಟಕ ಮಂಡಳಿಯ ಮಾಲೀಕರು ಸಂಸಾರ ನಾಟಕದಲ್ಲಿನ ಸುಂದರನ ಪಾತ್ರಾಭಿನಯದಿಂದ ಪ್ರೇಕ್ಷಕರ ಕಣ್ಣಿಂದ ಅಶ್ರುಧಾರೆಗಳನ್ನು ಸುರಿಸಿಬಿಟ್ಟಿರು.

ಪ್ರೇಮಲೀಲಾದಲ್ಲಿ ಸೋದರಿ ಸೋಮನಾಥನ ಪಾತ್ರದಲ್ಲಿ ಇವರು ತೋರಿಸುವ ಪರಿಶುದ್ಧ ಹಾಸ್ಯಾಭಿನಯವು ಇವರ ಪ್ರತಿಭೆಯ ವೈವಿಧ್ಯವನ್ನೂ ತೋರಿಸುವುದು. ಇವರು ನಿಜವಾದ ಕಲೋಪಾಸಕರು. ಕಲೆಯೇ ಇವರ ಜೀವನದ ಧ್ಯೇಯ. ಇವರ ಅವಿಶ್ರಾಂತ ಪ್ರಯತ್ನಗಳ ಗುರಿ. ರಂಗಭೂಮಿಯಲ್ಲಿ ಸಂಪೂರ್ಣ ವಿಜಯ ಹೊಂದಲೀ ಬೇಕು. ಇದ್ದಾವಾದರೆ ಜೀವಿತವನ್ನು ಕಲೆಯಲೀಗೆಯಲು ಸ್ಥಿರ ಪ್ರಜ್ಞೆ.

Shri G. Dist Karanji

ಬಿಡಿ ಪತಿಕೆ ಕಾಲಾಣೆ [ವಾಚನಾಲಯಗಳಿಗೂ, ಶಾಲೆಗಳಿಗೂ ಚಂದಾ ರೂ. ೧] ಚಂದಾ ತಿಂಗಳಿಗೆ ೮ ಆಣೆ

1933

ನವಜೀವನ

ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ

NAVAJIVANA—A Kannada Daily

ವರ್ಷ ೫ | ಬೆಂಗಳೂರು ನಗರ 5-7-1933 ಬುಧವಾರ | ಸಂಚಿಕೆ ೩೮೮

ಮದರಾಸು ಸಿ. ಕನ್ನಯ್ಯ ಕಂಪೆನಿಯವರು **ಶ್ರೀಮತ್ ಭಗವತ್ ಗೀತಾ**

ಜೂಲೈ ೧೧ನೇ ತಾ|| ಮಂಗಳವಾರದ ದಿನ ಪಟ್ಟಾಭಿಷೇಕ. ನಾಟಕವನ್ನಾಡಿ ಮರುದಿನವೇ ಪ್ರಯಾಣಮಾಡುತ್ತೇನೆ.

ಕಮ್ಮೀದರ ತೆರಿಗೆಯೊಂದಿಗೆ:—3-0-0, 2-4-0, 1-2-0, 0-12-0, 0-7-9, 0-3 9

ಬೇಕಾಗಿದೆ

ಈ ಕೆಳಗೆ ನಮೂದಾದ ಪ್ರಾಂತ್ಯಗಳಲ್ಲಿ ಅಗರ್ನೈಜಿಂಗ್ ಆಫೀಸ್ಕರುಗಳಾಗಿಯೂ ಏಜಂಟರುಗಳಾಗಿಯೂ ಕೆಲಸ ನಮಾಡಲು ಸಮರ್ಥರಾದ ಮತ್ತು ಜಟುನಟಿಕೆಯುಳ್ಳ ಜನಗಳು ಬೇಕಾಗಿದೆ ಒಳ್ಳೆಯ ಸಂಬಳವೂ ಹೆಚ್ಚಾಗಿ ಸಂ[illegible] ಸೊರೆಗೆ ಇದೆ

ಮೈಸೂರು, ಹಾಸನ ಮತ್ತು ಕಡೆ - ರು ಡಿಸ್ಟ್ರಿಕ್ಟುಗಳು, ತ ಕೊಡಗು ಪಶ್ಚಿಮಕನೆಡ ತಿನವೆಲ್ಲಿಗೆ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳು ತುಮಕೂರು, ಕೋಲಾರ ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳ.

ಇವ್ಯವುಳ್ಳವರು ತಾವಾಗಿಯೆ ಬಂದು ವಿಚಾರಿಸಬಹುದು ಅಥವಾ ಪತ್ರ ವ್ಯವಹಾರ ನಡೆಸಬಹುದು.

ಡಿವಿಜನಲ್ ಮ್ಯಾನೇಜರ್,
ದಿ ಸೌತ್ ಇಂಡಿಯನ್ ಜನರಲ್ ಅಷ್ಯೂರೆನ್ಸ್ ಕಂಪನಿ, ಲಿಮಿಟೆಡ್,
೨೪, ಬ್ರಿಗೇಡ್ ರೋಡ್, ಬೆಂಗಳೂರು ಸಿಟಿ

ತಾಲ್ಲೂಕು ಕರನಿರಾಕರಣ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

16—1— 1962

ಪತ್ರಿಕೆ ಹೆಸರು
ಆರಂಭ ದಿನಾಂಕ
ಪ್ರಕಟನಾ ಸ್ಥಳ
ಸಂಪಾದಕರ ಹೆಸರು
ಮ್ಯಾನೇಜರ ಹೆಸರು
ರಾಜಸ್ವ ಕಛೇರಿ

ಶಾ ೦ ತಾ

ಕಾಫೀ, ಟೀ ಮುಂತಾದ ಬಾಧಕ ಪಾನೀಯಗಳಿಗೆ ಬದಲು ಬೊಂಬಾಯಿಯಲ್ಲಿ ಧಾನ್ಯಗಳಿಂದ ತಯಾರಾದ ರುಚಿದಾಯಕ ಆರೋಗ್ಯಕರ ಪಾನೀಯಗಳಿಗೂ ಒಟ್ಟಾಗಿ ಕರಿಸಿಕೊಳ್ಳಲೆ ಕಮಿಷನ್ ದೊರೆಯುತ್ತದೆ

ಬೆಲೆ ೧ ಡಬ್ಬಿ ರೂ ೧, ಅರ್ಧ ಮತ್ತು ಕಾಲು ಪೌಂಡುಗಳ ಸಣ್ಣ ೦-೮-೦, ೦-೪-೦

ಸಬ್‌ಏಜೆಂಟರು ಬೇಕು

ಎಸ್. ಶ್ರೀನಿವಾಸರಾವ್,
ಮೈಸೂರುದೇವಪ ಏಜೆಂಟರು, ಶ್ರೀ ರಾಮಪುರ,
ಪಾಲ್ಲೇಶ್ವರಂ ಪೋಸ್ಟ್

TO LET

FRONT HALL

Premises No. 2.

ENQUIRE c/o:

'Navajivana' Balepet,

BANGALORE CITY

ಸೂರ್ಯಾ ಬ್ರದರ್ಸ್
ಬೆಂಗಳೂರು.

೩೧, ಟ್ಯಾಂಕ್ ರೋಡು, ಅರಳೇಪೇಟೆ, ಬೆಂಗಳೂರು ಸಿಟಿ.

ಮಕ್ಕಳಿಗೆ ಬೇಕಾದುದು

ಮಕ್ಕಳ ಪುಸ್ತಕ

FOR SALE

BABY AUSTIN 1932 Saloon Model. Bought on 8th June 1932 Owner Driven In excellent condition

Send Postage Stamps for reply.
Apply Box No 9,
c/o NAVAJIVANA
Bangalore City

Wanted

"Wanted for the Country Insurance Co., Ltd, Bangalore Branch one Bill Collector on Rs 20/-per mensem Cash security of Rs 250/- essential. Apply sharp in person to.-

The Manager,
The Country Insurance Co, Ltd,
"PARK VIEW"
Sri Narasimharaja Road,
Bangalore City

Wanted

Wanted for the Country Insurance Co, Ltd, A Manager at Bangalore Branch on Rs 75-10-200 per mensem Cash Security of Rs 2000/-essential

Apply sharp in person to -

The General secretary
(On tour)
The Country Insurance Co, Ltd,
"PARK VIEW"
Sri Narasimha Raja Road,
Bangalore City.

Wanted

"Wanted for the Country Insurance Co, Ltd," Divisional Superinterdents on Rs 70/ plus Rs 30/- towards T A, D A, & postage etc, per mensem Cash security of Rs 1000/- essential Apply sharp in person to —

The Manager,
'The Country Insurance Co, Ltd..'
"Park View",
Sri Narasimharaja Road,
Bangalore city

Advertise in Navajeevana Daily

Registered No. M. 2000

ವಾರ್ಷಿಕ ಚಂದಾ ಅಂಚೆ ವೆಚ್ಚ ಸಹಿತ ರೂ.
ಪೋಷಕರಿಗೆ ರೂ. ೫-೦-೦.

ಧನ್ವಂತರಿ ಜಗದ್ಗುರು

ಶ್ರೀ ಭಾರತ ಸನಾತನಧರ್ಮಾನುಷ್ಠಾನಮಂಡಲದ ಪರವಾಗಿ
ಆಯುರ್ವೇದ, ಸನಾತನ ವರ್ಣಾಶ್ರಮಧರ್ಮ ವಿಷಯಗಳು ಪ್ರಕಟಿಸಲ್ಪಡುವ ಅತ್ಯುತ್ತಮ ಪತ್ರಿಕೆ.

ವ್ಯವಸ್ಥಾಪಕ, ಸಂಪಾದಕ ಮತ್ತು ಪ್ರಕಾಶಕ-
ಆಯುರ್ವೇದ ಕಲಾವಿಭೂಷಣ, ವಿದ್ವಾನ್ ಕೆ. ಶೇಷ ಶಾಸ್ತ್ರೀ, ಬಿ.ವಿ.ಎಸ್., ಬಿ.ಟಿ.ಯು.,
ನವನ ಬಾಲಗಂಧರ್ವ, ಶ್ರೀ ಬಾಲಾಜೀ ಇತ್ಯಾದಿ. ಶ್ರೀ ಭಾರತ ಸನಾತನ ಧರ್ಮ ಮಂಡಲ ಸ್ಥಾಪಕರು,
ಶ್ರೀ ಶೃಂಗಗಿರಿ ಶ್ರೀ ಜಗದ್ಗುರು ಸಂಸ್ಥಾನದ ವರ್ಣಾಶ್ರಮಧರ್ಮಪ್ರಚಾರ ವ್ಯವಸ್ಥಾಪಕ, ಶೃಂಗೇರಿ.

ಸಂಪುಟ ೯ | ಧಾತು ನೇ ಶ್ರೀಮುಖ ಸಂ॥ ಭಾದ್ರಪದ ಕೃ॥ ೪ ಶುಕ್ರವಾರ. 1933 ನೇ ಇಸವಿ ಸೆಪ್ಟೆಂಬರ್ 8 | ಸಂಖ್ಯೆ ೧೦

ವರ್ಣ ವ್ಯವಸ್ಥೆ.

(ಕಳೆದ ಸಂಚಿಕೆಯಿಂದ ಮುಂದುವರಿದಿದೆ.)

ಲೋಕದ ಪುರಾಣ ಸಂಸ್ಕಾರದಿಂದ ಸಂಸ್ಕೃತ ಪ್ರಾಂತಗಳು, ಪಂಪಾಪಯಣ ಮಾಡಿ ಬಂದ ಸಂಸ್ಕಾರ, ನಾಲ್ಕು ವೇದಗಳನ್ನೂ ಓದಿ ಅರ್ಥ ಮಾಡಿಕೊಳ್ಳಲಾರದಂತಾಲೂ ಅವರ ಮನಸ್ಸಿಗೆ ತಕ್ಕಂತೆ ಪಸರಣ ಗೌರವವು ಪಡೆದ ಬ್ರಾಹ್ಮಣರಲ್ಲಿ ಕಳಂಕಿತ ಜನ್ಮದ ಶೂದ್ರರೇ ಎಂಬ ಶ್ಲೋಕವು ಹೇಳುವಂತೆ ಬ್ರಾಹ್ಮಣಜಾತಿಯಲ್ಲಿ ಹುಟ್ಟಿ ''ಸಂಸ್ಕಾರಾತ್ ದ್ವಿಜ ಉಚ್ಯತೇ' ಎಂಬಲ್ಲಿ ದ್ವಿಜ ಶಬ್ದಕ್ಕೆ ''ಮೌಂಜಿ ಬಂಧನಾತ್ ದ್ವಿತೀಯಂ ಮೌಂಜಿಬಂಧನೇ'' ಎಂದು ಮನುಸ್ಮೃತಿಯಲ್ಲಿ ಹೇಳಿರುವಂತೆ ಒಂದನೆಯ ಸಂಸ್ಕಾರವಾದ ಉಪನಯನ ಸಂಸ್ಕಾರವಾದ ಬಳಿಕ ಎರಡನೆಯ ಜನ್ಮವನ್ನು ಸ್ವೀಕರಿಸಿದಂತೆ ಈ ದ್ವಿಜತ್ವವು ಉಪನಯನಕ್ಕೆ ಅರ್ಹರಾಗಿರುವ ಬ್ರಾಹ್ಮಣ ಕ್ಷತ್ರಿಯ, ವೈಶ್ಯ ಈ ಮೂರು ವರ್ಣದವರಿಗೂ ಸಾಮಾನ್ಯವಾದ ಶೂದ್ರನಿಗೆ ಉಪನಯನವಿಲ್ಲ. ಆದ್ದರಿಂದ ಒಂದನೆಯ ಜನ್ಮದ ಒಸ್ಮಾತ್ಯಂಬುದರಿಂದ ಕವಿಯು ಎಂದು ಪಹಾರವಿರುವುದು ಇದೇ ಅರ್ಥವನ್ನೆ-

ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾದ್ ದ್ವಿಜ ಉಚ್ಯತೇ।
ವೇದಾಭ್ಯಾಸಾದ್ ಭವೇದ್ ವಿಪ್ರಃ ಬ್ರಹ್ಮಂ ಜಾನಾತಿ ಬ್ರಾಹ್ಮಣಃ॥

ಎಂದು ಋಷಿಗಳು ನಿರ್ಧರಿಸಿರುವರು

ಇದರಿಂದಾಗಿಯೇ ದುಷ್ಟ ಕರ್ಮಾಸಾಮರ್ಥ್ಯವು ರಾಜನು' ಎಂದು ದ್ವಿಜತ್ವವನ್ನು ಯಮಾಡಿ ಕೊಡುವ ಉಪನಯನಾದಿ ಸಂಸ್ಕಾರವು ಶೂದ್ರರಿಗಿರುವುದಿಲ್ಲ ಈ ವಿಷಯದಲ್ಲಿ ಯಾವ ಋಷಿಗಳೂ ಬನ್ನಾಬಿಪಾಯವುಳ್ಳವರಾಗಿಲ್ಲ ಶಾಸ್ತ್ರವು ಹೀಗಿರುವಾಗ ಶೂದ್ರರಿಗೂ ಉಪನಯನಾದಿ ಸಂಸ್ಕಾರಗಳಿಗೆ ಅರ್ಹತೆಯು ಉಂಟೆಂದು ''ಜನ್ಮನಾಜಾಯತೆ ಶೂದ್ರಃ'' ಎಂಬುವುದಕ್ಕೆ ಅರ್ಥವನ್ನು ಕಲ್ಪಿಸುವುದು ಹಿಂದೆ ಹೇಳಿದ ಸ್ಮೃತಿಗಳಿಗೆ ಅತ್ಯಂತ ವಿರುದ್ಧವಾಗಿರುವುದು. ಇದೂ ಅಲ್ಲದೆ ಉಪನಯನಕ್ಕೆ ಮೊದಲು ಎಲ್ಲರೂ ಶೂದ್ರರೇ ಎಂಬ ಅರ್ಥವಾಗುವುದಾದರೆ ಉಪನಯನಕ್ಕೆ ಮೊದಲು ಬ್ರಾಹ್ಮಣಾದಿ ವರ್ಣಗಳಿಂದ ಬೇರೆಬೇರೆ ಪ್ರತ್ಯೇಕವಾದಿಸುವ ಸ್ಮೃತಿಗೂ ವಿರೋಧವುಂಟಾಗುತ್ತದೆ. ಬ್ರಾಹ್ಮಣಾದಿಗಳಿಗೆ ಉಪನಯನ ಕಾಲವನ್ನು ವೇದದಲ್ಲಿ ''ಗರ್ಭಾಷ್ಟಮೇ ಬ್ರಾಹ್ಮಣಮುಪನಯೀತ'' ''ಗರ್ಭೈಕಾದಶರಾಜನ್ಯಂ'' ''ಗರ್ಭದ್ವಾದಶೇ ವೈಶ್ಯಂ'' ಬ್ರಾಹ್ಮಣನಿಗೆ ಗರ್ಭವಾದ ಎಂಟನೆಯ ವರ್ಷದಲ್ಲಿಯೂ, ಕ್ಷತ್ರಿಯನಿಗೆ ಗರ್ಭವಾದ ಹನ್ನೊಂದನೆಯ ವರ್ಷದಲ್ಲಿಯೂ, ವೈಶ್ಯನಿಗೆ ಗರ್ಭವಾದ ಹನ್ನೆರಡನೆಯ ವರ್ಷದಲ್ಲಿಯೂ ಉಪನಯನ ಮಾಡಬೇಕೆಂದು ಹೇಳುವುದು ಉಪನಯನಕ್ಕೆ ಮುಂದಲು ಎಲ್ಲರೂ ಶೂದ್ರರೇ ಆಗಿದ್ದರು ಆಯಾಯ ಜಾತಿಯನ್ನು ಬೇರೆಬೇರೆಯಾಗಿ ನಿರ್ದೇಶಿಸಿ ಬಿಸಿಬಿಸಿನ ಕಾಲವನ್ನು ಹೇಳುವುದು ಅನಂಗತವಾಗಿ ಪೀಕಾಗುವುದು. ಬ್ರಹ್ಮಜ್ಞಾನಾನಂತರದಲ್ಲಿಯೇ ಬ್ರಾಹ್ಮಣನಾಗಬೇಕಾಗಿರುವಾಗ ಪೂರ್ವದಲ್ಲೇ ಬ್ರಾಹ್ಮಣ ಶಬ್ದವನ್ನು ಹೇಳುವುದು ಯೇಗೆ? ಮಂದಗನ್ನಿಲ್ಲಿಯೂ, ಸ್ಮೃತಿಗಳಲ್ಲಿಯೂ ಸಂಸ್ಕಾರೋಕ್ತಿಪೂರ್ವ ಇಲ್ಲದೆ ಗುಣಗಂದವೇ ಇಲ್ಲದ ಕುಮಾರನ ವಿಷಯದಲ್ಲಿ ಬ್ರಾಹ್ಮಣಾದಿ ಜಾತಿ ಶಬ್ದದಿಂದ ಮರ್ಯಾದೆಗಳು ವ್ಯವಹರಿಸುವುದನ್ನು ವಿಚಾರ ಮಾಡಿದರೆ ಬ್ರಾಹ್ಮಣಾದಿಗಳು ಒಸ್ಮಸಿದ್ಧವೆಂದೇ ತಿಳಿದುಬರುವುದು ಆದರೆ ಬ್ರಾಹ್ಮಣಜನ್ಮದಲ್ಲಿ ಹುಟ್ಟಿದವನು ಬ್ರಾಹ್ಮಣೋಚಿತ ಕರ್ಮಗಳನ್ನಾಚರಿಸದೆ ತಾಮಸಿಯಂತೆ ಆಚರಿಸುತ್ತಿದ್ದರೆ ಅವನನ್ನು ''ಶೂದ್ರ'' ಎಂಬುದಿಂದ ವ್ಯವಹರಿಸುವರು ಈ ವ್ಯವಹಾರವು ಶೂದ್ರಜಾತಿಯಲ್ಲಿ ಹುಟ್ಟಿದವನೆಂದಲ್ಲ, ಶೂದ್ರಯೋನಿಯಲ್ಲಿ ಜನಿಸಿದವನು ಕರ್ಮಾನುಷ್ಠಾನವಿಲ್ಲದವನಾಗಿರುವಂತೆ ಇವರೂ ಇರುವನೆಂಬಭಿಪ್ರಾಯದಿಂದ ಶೂದ್ರನಂತಿರುವನು ಎಂಬುದಕ್ಕೆ ಒದಲಾಗಿ ಶೂದ್ರನಂತೆಯೇ ಸ್ಪಷ್ಟ ಹರಿಸಲ್ಪಡುವನು ಎಂದು ನಿರ್ದೇಶಿಸುವರು. ಇದು ದೇವದತ್ತನು ಸಿಂಹದಂತಿರುವನೆಂಬುದಕ್ಕೆ ಒದಲಾಗಿ ದೇವದತ್ತನು ಸಿಂಹವೇ ಎಂದು ವ್ಯವಹರಿಸುವಂತೆ ಇರುವುದೆಂದು ತಿಳಿಯಬೇಕು. ಇದನ್ನೆನುಸರಿಸಿ ''ಜನ್ಮನಾ ಜಾಯತೇ ಶೂದ್ರಃ'' ಎಂಬಲ್ಲಿಯೂ ಶೂದ್ರ ಸಮನೆಂದು ಹೇಳುವುದಕ್ಕೆ ಬದಲಾಗಿ ಶೂದ್ರನೆಂದು ಹೇಳಿರುವರು.

ಬ್ರಾಹ್ಮಣನಾಗಿ ಹುಟ್ಟಿದಾಗ್ಯೂ ಉಪನಯನಕ್ಕೆ ಮೊದಲು ಕರ್ಮಾನುಷ್ಠಾನ, ಆಹಾರನಿಯಮವು ಇವುಗಳು ಅನವಶ್ಯಕವಾಗಿರುವಂತೆ, ''ಪ್ರಾಗುಪನಯನಾತ್ ತಾವತ್ ಸಮಾನೋ ಜಾಯತೇ ದ್ವಿಜಃ'' ಎಂಬಲ್ಲಿ ಉಪನಯನಕ್ಕೆ ಮೊದಲು ಬ್ರಾಹ್ಮಣಾದಿ ವರ್ಣಗಳಲ್ಲಿ ಯಾವ ವರ್ಣದವರಿಗೂ ಶೂದ್ರರಿಗೆ ಸಮಾನರಾಗಿರುವುದಿಲ್ಲವೆಂದು ಸ್ಪಷ್ಟವಾಗಿ ತಾಲವಿಡುವುದು. ಆದ್ದರಿಂದ ಈ ಸಂಸ್ಕಾರವನ್ನೆನುಸರಿಸಿ ಹೀಗೆ ಶೂದ್ರರಿಗೆ ಹರಿಸಲ್ಪಡುವನು ಈ ವಿಷಯವನ್ನೆ-

ನಷ್ಟಸ್ಯ ವಿದ್ಯತೇ ಶೌಚಂ ಚಂದ್ರ ಸೂರ್ಯೌ ಚ ಬ್ರಹ್ಮಣಃ
ವೈಶ್ಯಾಶೂದ್ರಸವರ್ತ್ಯೌಲ್ಯೋ ಯಜ್ಞ ಪಶ್ಯತಿ ಸಾಧಕಃ

ಎಂಬ ಪದ್ಯದಲ್ಲಿ ಶೂದ್ರನಾಗಿರುವನನ್ನು ಪಂಪ್ಯರು ಸ್ಪಷ್ಟವಾಗಿ ಹೇಳುವರು ಆದರಂತೆ ಬ್ರಹ್ಮಣಾ ಪ್ರಾವಾಣಿಕರು ವೈದಿಕ ಮನ್ನು ಸಾಧಿಸಿರುವರು

ಮತ್ತು ಇನ್ನೊಂದು [illegible] ಲ್ಲಿಗೆಯೇಕು. ''ಬ್ರಾಹ್ಮಣನಿಗೆ ಬ್ರಾಹ್ಮಣ ವಾದವೆಷ್ಟು'' ಎಂಬಲ್ಲಿ ಹೇಳಿರುವಂತೆ ಆಹಾರ ದಿನಿಬಂಧನವಿಲ್ಲದವರು ಸಂಸ್ಕಾರವು ಸಂಸ್ಕಾರವೂ ಸಹ ಅಸಹಕಾರಿಗೆ ಸೇರಿ ವೆಂದು ಲಕ್ಷ್ಯವು ಮಾಡುತ್ತಿರುವಾಗ ''ಸ್ವಿತ್ಯಾದಿಗಳಿಂದ ಬ್ರಾಹ್ಮಣ್ಯ' ಎಂಬ ಅರ್ಥ ಸಮಿತ್ರದಲ್ಲಿ ಸಂಸ್ಕಾರ ಸೆಯ ಸ್ಪಷ್ಟವಾಗಿ ಪರಿಹಾರವೆಂದು ಹೇಳಿರುವುದು ಉಪನಯನ ಮಾಡುವ ಎಲ್ಲರೂ ಶೂದ್ರರೇ ಆಗಿದ್ದ ಸಂಸ್ಕಾರ ಬ್ರಾಹ್ಮಣನ್ನೆ ಎಂದಿಲ್ಲದೆ ಶೂದ್ರನ ಸಂಸ್ಕಾರ ಮಾಡಿ ತ್ತಿದ್ದರು ಹಾಗೆ ಹೇಳದೆ ಒಂದು ಜಾತಿಯ ಪರನ್ನು ಮಾತ್ರ ಹೇಳಿರುವುದರಿಂದ ಒಸ್ಮಿಂಗರ್ ಜಾತಿಬೀದವುಂಟೆಂದು ದೃಢಪಡಿಸುವುದು ಅಯಿತರಿಂದ ''ಜನ್ಮನಾಜಾಯತೇ ಶೂದ್ರಃ' ಎಂಬ ಶಿಕ್ಷನದ ಆಧಾರದ ಮೇಲೆ ಗುಣಕರ್ಮದಿಂದಲೇ ವರ್ಣವ್ಯವಸ್ಥೆಯೆಂದು ಹೇಳುವುದು ಸಮರ್ಥನೀಯವಾಗಿರುವುದು.

ಮತ್ತು ಗುಣಕರ್ಮಗಳಿಂದ ಬ್ರಾಹ್ಮಣನೆಂದು ಕಲ್ಪಿಸುವುದರಲ್ಲಿ ಮೂರು ದೋಷಗಳಿರುವುದೆಂದು ತಂತ್ರವಾರ್ತಿಕದಲ್ಲಿ ಹೇಳಿರುವುದು ಬಂದನೆಯದು ಅನ್ಯೋನ್ಯಾಶ್ರಯ ದೋಷವು ಆಚಾರವಿಲ್ಲದ ಜನಿಸಿದವು ಬ್ರಾಹ್ಮಣನಾಗುವುದಿಲ್ಲ

1964

ಜಯಕರ್ನಾಟಕ

Director
of Publicity and Information,
Government of Mysore,
Bangalore-1.

Model copy

ಜಯ ಕರ್ನಾಟಕ

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ।
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯಾ।
ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯಾ।
ಪರುಷದ ಬಲದಿಂದ ಅವಲೋಹದ ಕೇಡು ನೋಡಯ್ಯ।

—ಬಸವಣ್ಣನವರು

ಸಂಪಾದಕರು: ಎಮ್. ಬಿ. ಬೂದಿಹಾಳಮಠ

ವ್ಯವಸ್ಥಾಪಕ ಸಂಪಾದಕರು: ಎಸ್. ಎಸ್. ಬಸವನಾಳ, ಬಿ. ಎಸ್ ಸಿ.

ಪ್ರೊಫೆಸರ ಎಸ್. ಎಸ್. ಬಸವನಾಳರ ಲಿಂಗೈಕ್ಯ ದಿನಾಚರಣೆಯ ೧೩ನೇ ವಾರ್ಷಿಕೋತ್ಸವ



ಇದೇ ದಿನಾಂಕ ೨೨ ರಂದು ಲಿಂಗಾಯತ ಟೌನ್‌ಹಾಲಿನಲ್ಲಿ ಪ್ರೊ. ಲಿಂ. ಬಸವನಾಳರ ಲಿಂಗೈಕ್ಯ ದಿನಾಚರಣೆಯ ೧೩ನೆಯ ವಾರ್ಷಿಕೋತ್ಸವವು ಕರ್ನಾಟಕ ಯುನಿವರ್ಸಿಟಿಯ ರಜಿಸ್ಟ್ರಾರ ಶ್ರೀ. ಎಸ್. ಎಸ್. ಒಡೆಯರರವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಹ್ಲಿ. ಜಿ. ಕುಲಕರ್ಣಿಯವರು ಆಗಮಿಸಿದ್ದರು.

ಲಿಂ. ಪ್ರೊ. ಶಿ. ಶಿ. ಬಸವನಾಳರ ಅನ್ಯೂತ ಪುತ್ಥಳಿಗೆ ಮತ್ತು ಲಿಂಗರಾಜ ಸರದೇಸಾಯಿಯವರ ಪುತ್ಥಳಿಗೆ ರಜಿಸ್ಟ್ರಾರ ಒಡೆಯರರವರು ಮತ್ತು ಶ್ರೀಯುತ ಕಟ್ಟಿಮನಿಯವರು ಮಾಲಾರ್ಪಣೆಯನ್ನು ಮಾಡಿ ಲಿಂಗಾಯತ ಭವನದಲ್ಲಿಯ ಕಾರ್ಯಕಲಾಪಗಳನ್ನು ಪ್ರಾರಂಭಿಸಿದರು.

ಮುಲ್ಲಾಬಾದಿಯವರು ಪ್ರಥಮವಾಗಿ ಬಸವನಾಳ ಸ್ಮಾರಕ ಸಂಸ್ಥೆಯವರ ಪರವಾಗಿ ಅಧ್ಯಕ್ಷರನ್ನು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ ಅತಿಥಿಗಳ ಸಮಯೋಚಿತ ಪರಿಚಯವನ್ನು ಒದಗಿಸಿದರು. ತರುವಾಯ ಮುಖ್ಯ ಅತಿಥಿಗಳನ್ನು ನಾಲ್ಕು ಮಾತು ಹೇಳಬೇಕೆಂದು ಪ್ರಾರ್ಥಿಸಿದರು.

ಮುಖ್ಯ ಅತಿಥಿಗಳಾದ ಪ್ರೊ. ಹ್ಲಿ. ಜಿ. ಕುಲಕರ್ಣಿಯವರು ತಮ್ಮ ಭಾಷಣವನ್ನು ಪ್ರಾರಂಭಿಸುತ್ತ ಲಿಂಗೈಕ್ಯ ಬಸವನಾಳರ ಬಳಗದಲ್ಲಿ ತಾವೂ ಒಬ್ಬರೆಂದೂ ಹಿಂದೆ ನಡೆದ ಘಟನೆಗಳು ಒಮ್ಮೆಲೆ ನೆನಪಿಗೆ ಬಂದು ಭಾವದ ತಾಕಲಾಟದಲ್ಲಿ ಮಾತು ತಡವರಿಸಿದರೆ ಕ್ಷಮಿಸಬೇಕೆಂದೂ ಕೇಳಿಕೊಂಡು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಬಸವನಾಳರ ಶಿಷ್ಯನಾಗುವ ಸುಯೋಗವು ನನಗೆ ಒದಗಲಿಲ್ಲ. ಎಸ್. ಕೆ ಭಾವಿಕಟ್ಟಿಯವರೊಂದಿಗೆ ನಾನು ಗೌರ್ನಮೆಂಟ್ ಹೈಸ್ಕೂಲಿನಲ್ಲಿ ನನ್ನ ವಿದ್ಯಾಭ್ಯಾಸ ಸಾಗಿಸಿದೆ. ವಿಶ್ವವಿದ್ಯಾಲಯದ ಪದವಿಯನ್ನು ಪಡೆದು ಬಂದತರುವಾಯ ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ೧೯೩೫ ರಲ್ಲಿ ಒಕ್ಕೈಯ ಜನರನ್ನು ಆರಿಸಿತೆಗೆದುಕೊಳ್ಳುವ ಸ್ವಭಾವದ ಬಸವನಾಳರು ನನ್ನನ್ನು ತಮ್ಮೊಂದಿಗೆ ಆಯ್ದು ತೆಗೆದುಕೊಂಡರು. ವಿದ್ಯೆಯಲ್ಲಿ ವಯಸ್ಸಿನಲ್ಲಿ ಯೋಗ್ಯತೆಯಲ್ಲಿ ಬಸವನಾಳರು ಹಿರಿಯರಾದರೂ ನಮ್ಮೊಂದಿಗೆ ಸಮತಾಭಾವದಿಂದ ಬೆರೆಯುತ್ತಿದ್ದರು. ಏನಾದರೂ ವಿಷಯವನ್ನು ಚರ್ಚಿಸುವಾಗ ದುಡುಕಿನಿಂದ ಮಾತನಾಡಿದರೂ ಅವರು ಕೋಪಿಸಿಕೊಳ್ಳದೇ ನನ್ನ ತಪ್ಪು ನನ್ನ ಮನಸ್ಸಿಗೊಪ್ಪುವಂತೆ ತಿಳಿಸಿ ಹೇಳುತ್ತಿದ್ದರು. ಅದು ಅವರ ಪರಿಪಕ್ವ ಮನಸ್ಸಿನ ದ್ಯೋತಕವೆಂದು ಹೇಳಬಹುದು. ಕನ್ನಡ ಸಾಹಿತ್ಯದಲ್ಲಿ ಅತಿ ಮಹತ್ವದ ವಿಷಯವಾದ ವೀರಶೈವ ಸಾಹಿತ್ಯದ ಸೇವೆಯನ್ನು ಮಾಡಿದುದು, ಕೆ. ಎಲ್. ಈ. ಸೊಸಾಯಿಟಿಯನ್ನು ನಿರ್ಮಿಸಿದುದು, ಮತ್ತು ಕರ್ನಾಟಕ ಯುನಿವರ್ಸಿಟಿಯನ್ನು ನಿರ್ಮಿಸಿದುದು, ಅವರು ಕನ್ನಡ ನಾಡಿಗಿತ್ತ ಸೇವೆಯಾಗಿದೆ ಎಂದು ಹೇಳಿದರು. ಇತಿಹಾಸದಲ್ಲಿ ಎಮ್. ಎ ಪದವಿಯನ್ನು ಪಡೆದ ಶ್ರೀಯುತ ಬಸವನಾಳರು ಬಹುಮುಖ ವ್ಯಕ್ತಿತ್ವಉಳ್ಳವರು. ಸಕಲ ವಿಷಯಗಳಲ್ಲಿಯೂ ಅವರಿಗೆ ಪಾಂಡಿತ್ಯ ವಿತ್ತು. ಪ್ರತಿಯೊಂದು ವಿಷಯವನ್ನೂ ಅವರು ಅಭ್ಯಸಿಸಿದ್ದರು. ಆದರೂ ಪ್ರತಿಯೊಂದರಲ್ಲಿಯೂ ಪರಿಣಿತರಾಗಿದ್ದರು. ಅವರು ಕನ್ನಡದ ಮೇಲೆ ಪ್ರಭುತ್ವ ಸ್ಥಾಪಿಸಲು ತಮಿಳು ಭಾಷೆಯನ್ನು ಕಲಿಯಲು ಹೇಳಿದ್ದುಂಟು. ಬಸವನಾಳರದು ಎಲ್ಲ ವಿಷಯದಲ್ಲಿಯೂ ರಚನಾತ್ಮಕ ವಿಧಾನ. ಇನ್ನೊಬ್ಬರ ಮನಸ್ಸನ್ನು ನೋಯಿಸುವವರಲ್ಲ. ಅವರ ಮಾತಿನಲ್ಲಿ ಸಮಾಧಾನ, ನಯ, ವಿನಯ, ಸಂಸ್ಕೃತಿ ಮುಂತಾದವು ತುಂಬಿ ತುಳುಕುತ್ತಿದ್ದವು.

ಅವರ ಜೀವನದಲ್ಲಿ ಅವರ ಮನಸ್ಸಿಗೆ ನೋವನ್ನುಂಟು ಮಾಡುವಂತಹ ಎರಡು ಘಟನೆಗಳು ನಡೆದವು. ಒಂದು ೧೯೩೬ ರಲ್ಲಿ ಮರಾಠಿ ಪುಂಡರು ಅವರ ಮೇಲೆ ಹಲ್ಲೆ ಮಾಡಿದ್ದು. ಅದಕ್ಕೆ ಕಾರಣವೆಂದರೆ ಬಸವನಾಳರು ಶಿವಾಜಿಯ ಬಗೆಗೆ ಕೆಳದಿ ನೃಪವಿಜಯದಲ್ಲಿ ಬರುವ ಒಂದು ಅಂಶವನ್ನು ಇತಿಹಾಸದಲ್ಲಿ ಬರೆದುದರ ಕಾರಣ ಮರಾಠಿ ಪತ್ರಿಕೆಗಳು ಅತಿರಂಜಿತ ವರದಿಯನ್ನು ಮಾಡಿ ಜನತೆಯನ್ನು ಕೆರಳಿಸಿದವು. ಅವರ ಮೇಲೆ ಹಲ್ಲೆ ಮಾಡಿದಾಗ ಅವರು ಹೇಳಿದ್ದು ಪೆಟ್ಟುಬಿದ್ದಿನೆ ಎಂದಿಷ್ಟೇ ಹೇಳಿದರು. ತಿಲ್ಲಿದ್ದ ಜನತೆ ಹೌಹಾರಿದ್ದರೂ ಬಸವನಾಳರು ಸ್ಥೈರ್ಯ ಕಳೆದುಕೊಳ್ಳಲಿಲ್ಲ. ಮರುದಿನ ನನಗೆ ತಿಳಿದದ್ದು ಅವರ ಬೆನ್ನಿಗೆ ಚೂರಿಯ ಘಾಯವು ಆಗಿದ್ದಿತೆಂದು. ಎರಡನೆಯದಾಗಿ ಅವರು ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನಕ್ಕೆ ಜುನಾವಣೆಯಲ್ಲಿ ಸ್ಪರ್ಧಿಸಿ ಸೋತಾಗ ಅವರು ತೋರಿಸಿದ ಸ್ಥೈರ್ಯ ಅವರು ತಮ್ಮ ಮನಸ್ಸಿನ ನೋವನ್ನು ಮುಖದ ಮೇಲೆ ಕೂಡಾ ತೋರದಿದ್ದುದು, ಅವರ ಮನಸ್ಸಿನ ಪರಿಪಕ್ವತೆಯನ್ನು ತೋರುತ್ತಿದೆ ಎಂದು ಹೇಳಿದರು. ಈ ವಿಷಯವು ನನಗೆ ರಾಮನ ಪಟ್ಟಾಭಿಷೇಕದ ದಿನವನ್ನು ನೆನಪಿಗೆ ತರುವದೆಂದು ದುಕೂಲ ಮತ್ತು ವಲ್ಕಲಧಾರಿಯಾದ ರಾಮನು ಯಾವ ರೀತಿ ಒಂದೇ ಮುಖಭಾವವನ್ನು ತೋರುತ್ತಿದ್ದನೋ ಹಾಗಿದ್ದರು ಎಂದು ಹೇಳಿದರು. ಅವರಲ್ಲಿಯ ದೊಡ್ಡ ಗುಣಗಳಾದ ಸತ್ಯ, ಶೀಲ, ಗಂಭೀರತೆ, ಶಿಸ್ತು ಮುಂತಾದವುಗಳಲ್ಲಿ ಕೆಲವಂಶವಾದರೂ ನಮಗೆ ದೊರೆಯಲಿ ಎಂದು ಹೇಳಿ ತಮ್ಮ ಭಾಷಣವನ್ನು ಮುಗಿಸಿದರು.

ಅವರ ತರುವಾಯ ಶ್ರೀ ಎಸ್. ಬಿ. ಹರಿಹರ ಮಾಸ್ತರರು ಮಾತನಾಡುತ್ತ, ಬಸವನಾಳರಲ್ಲಿಯ ಸಮಾಧಾನ ಗುಣವನ್ನು ಸ್ವಲ್ಪಮಟ್ಟಿಗಾದರೂ ನಾನು ಕಲಿಯಬೇಕೆಂದು ಪ್ರಯತ್ನಿಸಿದುದಾಗಿಯೂ ಈಗಲೀಗ ಸ್ವಲ್ಪ ಭಾಗ ಬಂದಂತಾಗಿದೆಯೆಂದು ಹೇಳಿದರು. ಶ್ರೀಯುತ ಬಸವನಾಳರು ಹೆಡ್ ಮಾಸ್ತರರಾಗಿದ್ದರೂ ಸಹ ಯಾವಾಗಲೂ ಟೀಚರ್ಸ ರೂಮಿನಲ್ಲಿದ್ದು, ಉಳಿದ ಮಾಸ್ತರುಗಳೊಂದಿಗೆ ಇದ್ದು, ಅವರೊಂದಿಗೆ ವಿಚಾರ ವಿನಿಮಯ ಮಾಡುತ್ತಿದ್ದರು. ಉಳಿದವರೊಂದಿಗೆ ಬೆರೆಯುತ್ತಿದ್ದರೂ ಸಹ ತಮ್ಮ ಘನತೆ ಗೌರವಗಳನ್ನು ಕಾಯ್ದುಕೊಂಡು ಹೋಗುವಂಥ ಪ್ರಭಾವ ಬೀರಿದ್ದರು. ಇದರಿಂದಾಗಿ ಉಳಿದವರೂ ಅವರಿಗೆ ಸಲ್ಲಬೇಕಾದ ಗೌರವವನ್ನು ಕೊಡುತ್ತಿದ್ದರು. ತಮ್ಮ ಜೀವನದಲ್ಲಿ ಅವರೊಂದಿಗೆ ನಡೆದ ಘಟನೆಯನ್ನು ಹೇಳುತ್ತ ಬಸವನಾಳರು ತಮ್ಮ ವಿವಾಹದಲ್ಲಿ ಇತ್ತ 'ಕೇಪ್ಸೆಕ್' ವಾಚನ ಬಗೆಗೆ ಹೇಳಿದರು ಅವರ ಸ್ಮರಣೆಯು ಅವರ ಗುಣಗಳಲ್ಲಿಯ ಕೆಲವಂಶವನ್ನಾದರೂ ಕೊಡುವಂತಾಗಲಿ ಎಂದು ಹೇಳಿ ತಮ್ಮ ಭಾಷಣ ಮುಗಿಸಿದರು.

ಆವರನಂತರ ವಿಧಾನಸಭೆಯ ಉಪಾಧ್ಯಕ್ಷರಾದ ಶ್ರೀಯುತ ಕಟ್ಟಿಮನಿಯವರು ಮಾತನಾಡುತ್ತ ಕೆ. ಎಲ್. ಈ ಸೊಸಾಯಿಟಿಯನ್ನು ಗಡಿನಾಡಿನಲ್ಲಿ ಸ್ಥಾಪಿಸಿದ್ದೇಕೆ ಎಂಬುದನ್ನು ಹೇಳಿದರು ಮಾತಿನಲ್ಲಿ ಉದ್ವೇಗಕ್ಕೆ ಎಡೆಕೊಡಬಾರದೆಂದು ಮಾತುಗಳನ್ನು ಸ್ವಲ್ಪ ತೂಗಿ ಹೇಳುವದಾಗಿ ಹೇಳುತ್ತ ಅವರು ಹೇಗೆ ಬಸವಳಿಳಾಳರ ಸಹವಾಸದಿಂದ ತಮಗೂ ಮಹತ್ವ ಬಂತೆಂಬುದನ್ನು ವಿವರಿಸಿದರು ಅನೇಕ ಗಣ್ಯರೂ ಅವರ ಕೂಡಿದ್ದುಕೊಂಡು ತಮಗೆ ಆದ ಲಾಭವನ್ನು ವಿವರಿಸಿದರು. ತಮ್ಮ ಮತ್ತು ಬಸವನಾಳರಲ್ಲಿದ್ದ ಗುಣ ಸಾಮ್ಯವನ್ನು ವಿವರಿಸಿ ಹೇಳಿದರು ಆದರೆ ಸ್ವಭಾವದಲ್ಲಿದ್ದ ವೈಷಮ್ಯದಿಂದ ಜನತೆಯಲ್ಲಿ ಯಾವ ಪರಿಣಾಮವಾಗುತ್ತಿತ್ತೆಂದು ಹೇಳಿದರು. ತಮ್ಮಿಬ್ಬರಲ್ಲಿದ್ದ ಸೋದರ ಸಂಬಂಧ ಮತ್ತು ತಾವು ಅವರೊಂದಿಗೆ ಕಟ್ಟಿ ಬೆಳೆಸಿದ ಕನ್ನಡ ಸಂಶೋಧನ ಸಂಸ್ಥೆ ಹಾಗೂ ಲಿಟರರಿ ಕಮೀಟಿ ಮುಂತಾದವುಗಳ ಕಾರ್ಯವನ್ನು ವಿವರಿಸಿದರು. ಕನ್ನಡಿಗರು ಪ್ರಸಂಗ ಬಂದಾಗ ಮಾತ್ರ ಏಳುವ ಸ್ವಭಾವದವರು. ಬೆಳಗಾವಿ, ನಿಪ್ಪಾಣಿ, ಕಾರವಾರಗಳು ಕನ್ನಡದ ಪ್ರದೇಶ ನಮ್ಮದನ್ನು ಬಿಟ್ಟುಕೊಡುವ ಮಾತು ಏಳಲಾರದು ಎಂದು ಹೇಳಿದರು. ಮತ್ತು ಶರಣಮಾರ್ಗದಲ್ಲಿ ನಡೆದು ಸುಜನರಾಗಿ ಬಾಳಿದ ಬಸವನಾಳರಿಗೆ ತನ್ನ ಗೌರವನ್ನು ಸಲ್ಲಿಸಿ ಭಾಷಣವನ್ನು ಮುಗಿಸಿದರು.

ತರುವಾಯ ಅಧ್ಯಕ್ಷ ಸ್ಥಾನದಿಂದ ಶ್ರೀಯುತ ಒಡೆಯರವರು ತಮ್ಮ ಭಾಷಣವನ್ನು ಮಾಡುತ್ತ, ತಾವು ಅವರಿಂದ ಒಂದು ತಲೆಮಾರು ಮುಂದಿನವರು ನಾನು ಇಲ್ಲಿ ಮಾತನಾಡುವುದಕ್ಕಿಂತಲೂ ಕಟ್ಟಿಮನಿ ಮುಂತಾದವರು ಮಾತನಾಡಬೇಕು ತಾವು ಕೇಳಬೇಕು ಎಂದು ಹೇ

ದರು. ಬಸವನಾಳ ಮತ್ತು ಕಟ್ಟೀಮನಿ ಯವರು ನಡೆಸಿದ ತ್ಯಾಗದ ಕಾಲ ಹೋಯಿತೇನೊ ಎನ್ನಿಸುತ್ತದೆ. ಈಗಿನ ಜನ ತಮ್ಮ ಕೊಟ್ಟಯ ಎರಡೂ ಬದಿಗೂ ಬೆಣ್ಣೆ ಹಚ್ಚಿದ ತರುವಾಯ ಉಳಿದವರ ವಿಚಾರ ಮಾಡುವರು ಎಂದು ಹೇಳಿದರು. ಅವರ ಆದರ್ಶವನ್ನು ನಾವು ಹೊಗಳಲೇ ಬೇಕು; ತ್ಯಾಗವನ್ನು ನಾವು ಸ್ಮರಿಸಲೇ ಬೇಕು ಏಕೆಂದರೆ ಇಂಗ್ಲಿಷ ಗಾದೆಯಂತೆ "Just praise is a debt it must be paid." ಯಾವದೇ ವಿಷಯದಲ್ಲಾ ಗಲಿ ಅವರು ಪ್ರವೇಶಿಸಿದರೇ ಪ್ರತಿಯೊಂದ ರಲ್ಲೂ ತಾವು ಸಹಾಯ ಸಲ್ಲಿಸಬೇಕು ಎಂಬ ರಚನಾತ್ಮಕ ದೃಷ್ಟಿಯಿಂದ ದುಡಿ ಯುವವರು ಅವರು ಖ್ಯಾತಿಗಾಗಿ ದುಡಿ ದವರಲ್ಲ ಯುನಿವರ್ಸಿಟಿಯ ಸ್ಥಾಪನೆ ಯಾದಾಗ ಶ್ರೀಯುತ ಬಸವನಾಳರು ಹಗಲು ರಾತ್ರಿಯೆನ್ನದೆ ೬ ತಿಂಗಳು ದುಡಿದು ಯುನಿವರ್ಸಿಟಿಯ ಘಟನೆ ನಿಯಮ ಮುಂತಾವುಗಳನ್ನು ತಮ್ಮ ಯುನಿವರ್ಸಿಟಿಗೆ ಬೇಕಾಗುವಂತೆ ಅಳ ವಡಿಸಿಕೊಟ್ಟರು. ಅವರು ಮಾಡಿದ ಕಾರ್ಯವನ್ನು ಇನ್ನೂ ಅಲ್ಲಿ ನೋಡಸಿಗು ತ್ತವೆ. ಪ್ರತಿಯೊಂದು ಸ್ಟ್ಯಾಟ್ಯೂಟ್ ಸಲ್ಲಿಯೂ ಬಸವನಾಳರಹಸ್ತಾಕ್ಷರ ಇದ್ದೇ ಇದೆ. ಎಂದು ಹೇಳಿದರು ಕಾರ್ಯತತ್ಪರರಾದ ಬಸವನಾಳರನ್ನು ಕೇಳದೆ ಶ್ರೀಯುತ ಹುಲಕೋಟಿಯವರಾಗಲೀ ಇನ್ನಾರೇ ಆಗಲಿ ಕೆಲಸ ಮಾಡುತ್ತಿರಲಿಲ್ಲ. ಅವರಲ್ಲಿ ವಿಶ್ವಬಂಧುತ್ವವಿತ್ತು ಅದಕ್ಕೆ ನಿದರ್ಶನ ವೆನ್ನುವಂತೆ ತಮ್ಮ ಮಗಳಿಗೆ ಫ್ರೆಂಚ ವೇಂಟೆಂಗಿನ ಹೆಸರಾದ ಮೋನಾಲೀಸಾ ಹೆಸರನ್ನಿಟ್ಟಿದ್ದಾರೆ. ಸದ್ಗೃಹಸ್ಥ ಈ ಶಬ್ದದ ವಾಖ್ಯಾನವನ್ನು ಹೇಳಬೇಕೆಂದರೆ ಬಸವನಾಳರನ್ನು ತೋರಿಸಬೇಕು ಅವರು ಅದಕ್ಕೆ ಒಂದು ಸಜೀವ ವ್ಯಾಖ್ಯೆಯಾಗಿ ದ್ದರು. ವಿಶ್ವವಿದ್ಯಾಲಯದ ಚುನಾವಣೆ ಯಲ್ಲಿ ನೋತತರುವಾಯ ಸಿಂಡಿಕೇಟ ನೆದುರು ಆ ವರ್ಷದ ಆಯವ್ಯಯ ಪಟ್ಟಿ ಯನ್ನು ಮಂಡಿಸಿದರು ಮತ್ತು ಚರ್ಚೆ ಮಾಡಿದರು. ಅವರನ್ನು ನೆನೆಸುವ ಅವ ಕಾಶ ವದಗಿಸಿದುದಕ್ಕಾಗಿ ನುತ್ತು ಸೈಯ ಕ್ತಿಕವಾಗಿ ಅವರಿಗೆ ಶ್ರದ್ಧಾಂಜಲಿ ಯನ್ನೂ ಅರ್ಪಿಸಲು ಅವಕಾಶ ಒದಗಿಸಿ ದುದಕ್ಕಾಗಿ ಸಮಿತಿಯವರಿಗೆ ತುಂಬಾ ಆಭಾರಿಯಾಗಿರುವದಾಗಿ ತಿಳಿಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ಕೊನೆಯದಾಗಿ ಶ್ರೀಯುತ ಮಲ್ಲಾ- ಬಾ ದಿ ಯ ವ ರು ಆಭಾರವನ್ನಿಸುತ್ತ ಚಂಪೂಕಾವ್ಯದ ವಿ ಷ ಯ ವಾ ಗಿ ಬಸವನಾಳರು ಮಾಡಿದ ಸಂಶೋಧನೆ ಮತ್ತು ಪ್ರಕಟನೆಗಳನ್ನು ಹೊಗಳುತ್ತ ಚಂಪೂಕಾವ್ಯವು ಒಂದು ಜಾತಮುತ್ತು ಅದು ನಮ್ಮ ನಿತ್ಯ ಜೀವನದಲ್ಲಿ ಉಪ ಯುಕ್ತವಲ್ಲದಿದ್ದರೂ ಇಂಥ ಒಂದು ಮುತ್ತು ನಮ್ಮಲ್ಲಿ ಇತ್ತು ಇದೆ ಎಂದು ತೋರಿಸುವದಕ್ಕಾದರೂ ಇರಲೇಬೇಕು. ಅದನ್ನು ಉಳಿಸಿಕೊಂಡು ಬಂದವರು ಬಸವನಾಳರು ಎಂದು ಹೇಳಿದರು. ಮಾಸ್ತರ ಶಬ್ದಕ್ಕೆ ಈಗ ಬೆಲೆಯೇ ಇಲ್ಲ ವಾಗಿದ್ದರೂ ಬಸವನಾಳರ ವ್ಯಕ್ತಿತ್ವ ದೊಡನೆ ಅದು ಹೊಂದಿಕೊಂಡಿದ್ದನ್ನು ನೋಡಿದರೆ ಅವರ ಕಲಿಸುವ ವ್ಯಕ್ತಿತ್ವ ಗುರು ಎಂಬ ಗೌರವಭಾವವನ್ನು ಹೊಂದಿತ್ತು. ಎಂದು ಹೇಳಿದರು. ಆವ ರನ್ನು ನೆನಸಿದರೆ ನಮ್ಮ ಬಾಳು ಸುಳಿ ದೆಗೆದು ಬೆಳೆಯುತ್ತದೆ. ಅವರ ಜೀವನ ಒಂದು ದಿಟ ಪುಟ ಸಂಪುಟ ಮುಂತಾಗಿ ಹೇಳಿ, ಎಲ್ಲರ ಆಭಾರವನ್ನು ಮನ್ನಿಸಿದರು. ತರುವಾಯ ಜನ ಗಣ ಮನ ದೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂ ಡಿತು. ಕಾರ್ಯಕ್ರಮದ ಅಂಗವಾಗಿ ಪ್ರೊ.ಬಸವನಾಳರು ಸಂಪಾದಿಸಿದ ಮತ್ತು ಪರಿಷ್ಕರಿಸಿದ ಮತ್ತು ಅವರ ಜೀವನಕ್ಕೆ ಸಂಬಂಧಿಸಿದ ಪುಸ್ತಕಗಳ ಮತ್ತು ಚಿತ್ರ ಗಳ ಪ್ರದರ್ಶನವನ್ನು ಏರ್ಪಡಿಸ ಲಾಗಿತ್ತು.



ಸಿದ್ಧೇಶ್ವರ ಮತ್ತು ಕಂಪನಿ (ಹುಬ್ಬಳ್ಳಿ) ಪ್ರಾ. ಲಿ., ಹುಬ್ಬಳ್ಳಿ

ನಮ್ಮಲ್ಲಿ ಉಕ್ಕಿನ ಶ್ರೇಷ್ಠ ತರಗತಿಯ ತಿಜೋರಿ, ಕಪಾಟು, ಸೇಫ ಕಪಾಟು, ಕ್ಯಾಶ್ ಬಾಕ್ಸ, ಕೀಲಿ, ಫರ್ನಿಚರ, ರೋಲಿಂಗ ಶಟರ್ಸ ಮುಂತಾದವುಗಳು ತಯಾರ ಆಗುತ್ತವೆ.

ವಾರ್ತಾ ಸಂಗ್ರಹ

ಬಡ ವಿದ್ಯಾರ್ಥಿಗಳಿಗೆ ರೋಖ ವಿದ್ಯಾರ್ಥಿವೇತನ

ವಾರ್ಷಿಕ ಆದಾಯ ೨೪೦೦ ರೂ. ಅಥವಾ ಅದಕ್ಕೂ ಕಡಿಮೆಯಿರುವ ಬಡ ಹಾಗೂ ಇತರ ಹಿಂದುಳಿದ ವರ್ಗಗಳ ಕುಟುಂಬದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವರ್ಗಗಳಲ್ಲಿಯ ಪರೀಕ್ಷೆಗೆ ಕಟ್ಟ ಬೇಕಾದ ಫೀಗಾಗಿ ರೋಖ ವಿದ್ಯಾರ್ಥಿ ವೇತನ ಕೊಡುವದಕ್ಕಾಗಿ ಜಿಲ್ಲಾ ಡೆಪುಟ ಕಮೀಶನರರ ಅಧ್ಯಕ್ಷತೆಯಲ್ಲಿ ಒಂದು ಆಯ್ಕೆ ಸಮಿತಿಯು ರಚಿತವಾಗಿದೆ. ಅಧಿ ಕೃತ ವಿದ್ಯಾಸಂಸ್ಥೆಗಳಲ್ಲಿ ಕಲಿಯುತ್ತಿರುವ ಹಾಗೂ ಬೇರೆ ಯಾವ ಬಗೆಯ ವಿದ್ಯಾರ್ಥಿ ವೇತನಗಳನ್ನು ಪಡೆಯದಿರುವ ಮೈಸೂರು ರಾಜ್ಯದ ವಿದ್ಯಾರ್ಥಿಗಳಿಗೆ ಈ ವೇತನ ದೊರೆ ಯುವದು. ಉತ್ತರಕನ್ನಡಜಿಲ್ಲೆಯಮಟ್ಟಿಗೆ ಇಂಥ ಪ್ರಶಸ್ತಿಯನ್ನು ಪಡೆಯಬಯಸು ವವರು ನಿರ್ದಿಷ್ಟ ನಮೂನೆಯಲ್ಲಿ ಅರ್ಜಿ ಯನ್ನು ಉತ್ತರ ಕನ್ನಡ ಜಿಲ್ಲೆಯ ಡೆ. ಕಮೀಶನರರಿಗೆ ತಮ್ಮ ಕಾಲೇಜು ಅಥವಾ ಉಚ್ಚ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಿನ್ಸಿ ಪಾಲರ ಮುಖಾಂತರ ೩೪-೧೨-೬೪ ರಂದು ಅಥವಾ ಅದಕ್ಕೂ ಮೊದಲು ಮುಟ್ಟು ವಂತೆ ಕಳಿಸಬೇಕು. ಅನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.

ಸೈನ್ಯಭರತಿ ಅಧಿಕಾರಿಗಳ ಸಂಚಾರ

ಕಾರ್ಯಕ್ರಮ

ಬೆಳಗಾವಿಯ ಬ್ರ್ಯಾಂಚ ರಿಕ್ರೂಟಿಂಗ ಕಚೇರಿಯ ಅಧಿಕಾರಿಗಳು ಭಾರತೀಯ ಸೈನ್ಯಪಡೆಯಲ್ಲಿ ವಿವಿಧ ಹುದ್ದೆಗಳಿಗೆ ಉಮೇದುವಾರರನ್ನು ಭರತಿ ಮಾಡುವದ ಕ್ಕಾಗಿ ಬರುವ ಜನೇವರಿ ತಿಂಗಳಲ್ಲಿ ಈ ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಅವುಗಳ ಮುಂದೆ ತೋರಿಸಿದ ದಿನಾಂಕಗಳಂದು ಉಮೇದುವಾರರನ್ನು ಸಂದರ್ಶಿಸುವರು. ಸೈನ್ಯಪಡೆಗೆ ನೇರಲಿಚ್ಛಿಸುವವರು ಆಯಾ ಸ್ಥಳಗಳಲ್ಲಿ ಮುಂಜಾನೆ ೮-೦೦ ಗಂಟೆ ಯಿಂದ ಅಧಿಕಾರಿಗಳನ್ನು ಕಾಣಬಹುದು.

ನಿಪ್ಪಾಣಿ: ೫-೧-೧೯೬೫, ಹಳ್ಯಾಳ: ೧೨-೧-೬೫, ಯಲ್ಲಾಪುರ: ೧೪-೧-೬೫ ಕಾರವಾರ: ೧೪-೧-೬೫, ಮಾಜಾಳಿ: ೧೫-೧-೬೫, ಪಾನಾಪುರ: ೧೬-೧-೬೫, ಧಾರವಾಡ: ೨೭-೧-೬೫, ಹುಬ್ಬಳ್ಳಿ: ೨೮-೧-೬೫.

ನಿಪ್ಪಾಣಿ, ಕಾರವಾರ ಮತ್ತು ಹುಬ್ಬಳ್ಳಿ ಗಳಲ್ಲಿ ಸೈನ್ಯಭರತಿ ಅಧಿಕಾರಿಗಳೊಂದಿಗೆ ಸೈನ್ಯದ ವೈದ್ಯಕೀಯ ಅಧಿಕಾರಿಗಳೂ ಹಾಜರಿರುವರು. ಸಂದರ್ಶನಗಳು ಆಯಾ ಸ್ಥಳಗಳಲ್ಲಿಯ ಪ್ರವಾಸಿ ಮಂದಿರಗಳಲ್ಲಿ ಜರುಗುವವು.

ಹುಬ್ಬಳ್ಳಿಯಲ್ಲಿ ಯುವತಿಯ ಅಪಹರಣ

ಹುಬ್ಬಳ್ಳಿಯ ಹೊಸೂರ ಪ್ರದೇಶದಲ್ಲಿ ಹಾಡುಹಗಲೇ ಓರ್ವ ವಿವಾಹಿತ ಯುವತಿ ಯನ್ನು ಅಪಹರಿಸಲಾಗಿದೆ ಎಂದು ವರದಿ ಯಾಗಿದೆ. ಕಳೆದ ಶುಕ್ರವಾರ ಸ್ಥಳೀಯ ಮಹಿಳಾ ವಿದ್ಯಾಪೀಠದಲ್ಲಿ ಎಸ್. ಎಸ್. ಎಲ್. ಸಿ.ಗೆ ಓದುತ್ತಿದ್ದ ಳೆಂದು ಹೇಳಲಾದ ಓರ್ವ ಯುವತಿಯನ್ನು ತನ್ನ ನಾಲ್ಕೈದು ಗೆಳತಿಯರೊಂದಿಗೆ ಕಾಲೇಜಿಗೆ ಹೋಗು ತ್ತಿರುವಾಗ ಅಪರಿಚಿತ ವ್ಯಕ್ತಿಗಳು ಬಂದು ಅವಳ ಬಾಯಿಗೆ ಅರಿವೆ ಹಾಕಿ ಕಾರಿನಲ್ಲಿ ಪಲಾಯನ ಹೇಳಿದರೆಂದು ತಿಳಿದಿದೆ.

ಇನ್ನೊಂದು ಪ್ರಕರಣ

ಎರಡು ವಾರಗಳ ಹಿಂದೆ ಇಲ್ಲಿಯ ಪಿ. ಯು. ಸಿ ವರ್ಗದಲ್ಲಿ ಓದುತ್ತಿದ್ದಳೆಂದು ಹೇಳಲಾದ ಇನ್ನೋರ್ವ ವಿವಾಹಿತ ಯುವತಿಯನ್ನು ಬೆಂಗಳೂರಿಗೆ ಕರೆ ದೊಯ್ದು ವರದಿಯಾಗಿದ್ದು ಅವಳು ಹುಬ್ಬಳ್ಳಿ ಮೆಡಿಕಲ್ ಕಾಲೇಜಿನಲ್ಲಿಯ ಹಿರಿಯ ಡಾಕ್ಟರರೊಬ್ಬರ ಪುತ್ರಿಯೆಂದು ತಿಳಿದಿದೆ. ಸಂಬಂಧಿಕರು ಪೋಲೀಸರಿಗೆ ವರದಿ ನೀಡಲಾಗಿ ಬೆಂಗಳೂರಿಗೆ ಕರೆದು ಕೊಂಡು ಹೋದವರು ಅವಳ ಪತಿಯೇ ಎಂದು ತಿಳಿದುಬಂದಿದೆ. ಮಾವನು ಮಗಳನ್ನು ಕಳಿಸಲು ಒಪ್ಪದಾಗ ತಂದೆಗೆ ತಿಳಿಯದಂತೆ ಬೆಂಗಳೂರಿಗೆ ಒಯ್ಯಲಾಯಿ ತೆಂದು ಹೇಳಲಾಗಿದೆ.

ಧಾರವಾಡ ಸೈನಿಕ ಮಂಡಳದ ಕಾರ್ಯದರ್ಶಿಗಳು

ಗದುಗಿಗೆ ಸಂದರ್ಶನ

ಧಾರವಾಡ ಜಿಲ್ಲಾ ಸೈನಿಕ, ನಾವಿಕ ಮತ್ತು ವೈಮಾನಿಕ ಮಂಡಳದ ಕಾರ್ಯ ದರ್ಶಿಗಳು ಇದೇ ಡಿಸೆಂಬರ ದಿ. ೨೨ ರಿಂದ ೩೪ ರ ವರೆಗೆ ಗದುಗಿನಲ್ಲಿ ವಾಸ್ತವ್ಯ ಮಾಡಲಿದ್ದು ನಿವೃತ್ತ ಸೈನಿಕರು ಮತ್ತು ಸೈನ್ಯದಲ್ಲಿ ಕೆಲಸ ಮಾಡುತ್ತಿರುವ ಸೈನಿಕರ ಕುಟುಂಬದವರು ಈ ಮೂರು ದಿನಗಳಲ್ಲಿ ಕಚೇರಿಯ ವೇಳೆಯಲ್ಲಿ ಗದುಗಿನ ತಹಶೀಲ ದಾರರ ಕಚೇರಿಯಲ್ಲಿ ಅವರನ್ನು ಕಾಣ ಬಹುದು.

ಅಂಚೆ ಮತ್ತು ತಂತಿ ಇಲಾಖೆಯ ಪ್ರಗತಿ

[ಅಂಚೆ ಇಲಾಖೆಯ ದಕ್ಷತೆ ದ್ವಿಗುಣಿಸಲು ಜನತೆಯ ಸಹಕಾರ-ಸೌಜನ್ಯ ಅನಿವಾರ್ಯ]

ಶ್ರೀ ಡಿ. ಎನ್. ರಾಮಚಂದಾನಿ
ಪೋಸ್ಟ ಮಾಸ್ಟರ ಜನರಲ್, ಮೈಸೂರು ಸರ್ಕಲ್

ಅಖಿಲಭಾರತ ಅಂಚೆ ಮತ್ತು ತಂತಿ ಸಪ್ತಾಹದ ಸಂದರ್ಭದಲ್ಲಿ ಮೈಸೂರು ವಲಯದ ಪೋಸ್ಟ ಮಾಸ್ಟರ ಜನರಲ್ ಶ್ರೀ ಡಿ. ಎನ್. ರಾಮಚಂದಾನಿಯವರು, ಆಕಾಶವಾಣಿ ಬೆಂಗಳೂರು ಕೇಂದ್ರದಿಂದ ಡಿಸೆಂಬರ್ ೧೪ ರಂದು ರಾತ್ರಿ ೯-೩೦ ಗಂಟೆಗೆ ಮಾಡಿದ ಪ್ರಸಾರ ಭಾಷಣದ ಪೂರ್ಣಪಾಠ.

ಅಂಚೆ ಮತ್ತು ತಂತಿ ಇಲಾಖೆಯು ಇಂದಿನಿಂದ 'ಅಂಚೆ ಮತ್ತು ತಂತಿ ಇಲಾಖೆ ಸಪ್ತಾಹವನ್ನು' ಆಚರಿಸಲಿದೆ. ಇಲಾಖೆಯ ಸಿಬ್ಬಂದಿವರ್ಗದಲ್ಲಿ ಸೇವಾ ಮನೋಭಾವ ಮತ್ತು ಸೌಶೀಲ್ಯವನ್ನು ಹೆಚ್ಚಿಸುವುದು, ಸಾರ್ವಜನಿಕರೊಡನೆ ಅವರು ಮಧುರ ಸಂಪರ್ಕವಿಟ್ಟುಕೊಳ್ಳುವಂತೆ ಮಾಡುವುದು ಹಾಗೂ ಅಂಚೆ ತಂತಿ ಸೌಕರ್ಯವನ್ನು ಪಡೆಯುವ ಜನತೆಯನ್ನು ಇಲಾಖೆಯ ಸಿಬ್ಬಂದಿವರ್ಗದವರೊಡನೆ ಆತ್ಮೀಯರನ್ನಾಗಿ ಮಾಡುವುದು —ಇವು ಸಪ್ತಾಹದ ಗುರಿಯಾಗಿವೆ.

ದೇಶದ ಇಡೀ ಪ್ರಜಾವರ್ಗ, ಅಂಚೆ ಮತ್ತು ತಂತಿ ಸೌಕರ್ಯವನ್ನು ಪಡೆಯುತ್ತಿದೆ. ಜನತೆಗೆ ಈ ಇಲಾಖೆ ವಿವಿಧ ರೀತಿಯಲ್ಲಿ ಉಪಕಾರವೆಸಗುತ್ತಿದೆ. ಆದುದರಿಂದ ಜನತೆ ಮತ್ತು ಇಲಾಖೆ ಪರಸ್ಪರ ಅರ್ಥಮಾಡಿಕೊಳ್ಳುವುದು ಅತ್ಯಗತ್ಯವಾಗಿದೆ. ಇಲಾಖೆಯು ಜನರ ಆವಶ್ಯಕತೆಗಳನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕು. ಅಂತೆಯೇ ಸಹೃದಯಿಗಳಾದ ಗ್ರಾಹಕರು ಇಲಾಖೆಯ ಸೇವಾಮಿತಿ, ಸಾಮರ್ಥ್ಯ, ಕುಂದು ಕೊರತೆಗಳು ಇವೇ ಮೊದಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಮೈಸೂರು ರಾಜ್ಯದಲ್ಲಿ ಅಂಚೆ ಮತ್ತು ತಂತಿ ಸೇವಾಕ್ಷೇತ್ರದಲ್ಲಿ ಪ್ರಗತಿ ಗಮನಾರ್ಹವಾಗಿದೆ. ಎಲ್ಲಾ ಜಿಲ್ಲಾ ಮತ್ತು ಸಬ್‌ಡಿವಿಜನ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಟೆಲಿಫೋನ್ ಎಕ್ಸ್‌ಚೇಂಜಗಳು ವ್ಯವಸ್ಥೆಗೊಂಡಿವೆ. ಐದು ತಾಲೂಕು ಮುಖ್ಯ ಸ್ಥಳಗಳನ್ನುಳಿದು ಎಲ್ಲ ಕಡೆಗಳಲ್ಲೂ ಸಾರ್ವಜನಿಕ ಟ್ರಂಕ್‌ಕಾಲ್ ಕಛೇರಿಗಳಿವೆ. ಅಂತೆಯೇ ನಾಲ್ಕು ತಾಲೂಕು ಹೆಡ್‌ಕ್ವಾರ್ಟರ್ಸ್‌ಗಳ ಏನಹೆ ಮಿಕ್ಕೆಲ್ಲ ಕಡೆಯೂ ಟೆಲಿಗ್ರಾಫ್ ಸೌಕರ್ಯಗಳಿವೆ. ಈ ನಾಲ್ಕೂ ತಾಲೂಕುಗಳಲ್ಲಿ ಸಹಾ ೧೯೬೫ರ ಮಾರ್ಚ್‌ದೊಳಗಾಗಿ ಟೆಲಿಗ್ರಾಫ್ ಸೌಲಭ್ಯ ದೊರೆಯಲಿದೆ. ೫೦೦೦ಕ್ಕೆ ಮೇಲ್ಪಟ್ಟು ಜನಸಂಖ್ಯೆ ಇರುವ ಮತ್ತು ಸಬ್ ಇನ್‌ಸ್ಪೆಕ್ಟರ್‌ರವರ ಅಧಿಕಾರದಲ್ಲಿನ ಪೋಲೀಸ್ ಸ್ಟೇಶನ್‌ಗಳಿರುವ ಎಲ್ಲ ಹಳ್ಳಿಗಳಿಗೂ ಟೆಲಿಗ್ರಾಫ್ ಸೌಲಭ್ಯವನ್ನೊದಗಿಸಲಾಗುತ್ತಿದೆ.

ಮೈಸೂರು ರಾಜ್ಯದಲ್ಲಿ ಇದೀಗ ಜಾರಿಯಲ್ಲಿರುವ ಕೆಲವು ಮುಖ್ಯ ವಿಸ್ತರಣ ಕಾರ್ಯಯೋಜನೆಗಳನ್ನು ನಾನು ವಿವರಿಸಲಿಚ್ಛಿಸುತ್ತೇನೆ. ಮಂಗಳೂರಿನಲ್ಲಿರುವ 'ಮ್ಯಾನ್ಯುಯಲ್' ಎಕ್ಸ್‌ಚೇಂಜಿಗೆ ಬದಲಾಗಿ ಶೀಘ್ರದಲ್ಲಿಯೇ ೫೦೦೦ ಲೈನುಗಳ ಸಾಮರ್ಥ್ಯದ ಆಟೋಮ್ಯಾಟಿಕ್ ಎಕ್ಸ್‌ಚೇಂಜನ್ನು ವ್ಯವಸ್ಥೆಗೊಳಿಸಲಾಗುವುದು. ಮುಂದಿನ ಎರಡು-ಮೂರು ವರ್ಷಗಳ ಅವಧಿಯಲ್ಲಿ ಚಿಕ್ಕಮಗಳೂರು, ಧಾರವಾಡ, ಗದಗ, ಹಾಸನ, ರಾಯಚೂರು, ಶಿವಮೊಗ್ಗ ತುಮಕೂರು ಮತ್ತು ಇನ್ನೂ ಕೆಲವು ಕಡೆಗಳಲ್ಲಿನ ಸಣ್ಣ ಪ್ರಮಾಣದ ಮ್ಯಾನ್ಯುಯಲ್ ಎಕ್ಸ್‌ಚೇಂಜುಗಳನ್ನು ಆಟೋಮ್ಯಾಟಿಕ್ ಎಕ್ಸ್‌ಚೇಂಜಗಳಾಗಿ ಪರಿವರ್ತಿಸಲಾಗುವುದು. ಟ್ರಂಕ್‌ಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಮುಖ್ಯ ಟ್ರಂಕ್ ಮಾರ್ಗಗಳಿಗೆ ಪೂರಕವಾಗಿ 'ಮಲ್ಟಿ ಚಾನಲ್ ಕ್ಯಾರಿಯರ್‌ಗಳನ್ನು' ಜೋಡಿಸಲು ಇಲಾಖೆಯು ಉದ್ದೇಶಿಸಿದೆ. ಈ ಕಾರ್ಯ ಪೂರ್ಣವಾದ ಬಳಿಕ ವಿವಿಧ ಎಕ್ಸ್‌ಚೇಂಜಗಳಿಂದಾಗುವ ವಿಳಂಬ ತಪ್ಪುತ್ತದೆ.

ಆಧುನಿಕವಾದ 'ಕ್ರಾಸ್ ಬಾರ್' ಮಾದರಿಯ ೪೦೦೦ ಲೈನುಗಳ ಸಾಮರ್ಥ್ಯವುಳ್ಳ ಆಟೋಮ್ಯಾಟಿಕ್ ಎಕ್ಸ್‌ಚೇಂಜೊಂದನ್ನು ಮೈಸೂರು ನಗರದಲ್ಲಿ ವ್ಯವಸ್ಥೆಗೊಳಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ಇದಕ್ಕಾಗಿ ಸೂಕ್ತ ಕಟ್ಟಡವೊಂದನ್ನು ಸಹಾ ನಿರ್ಮಿಸಲಾಗುತ್ತಿದೆ.

ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ದೇಶದ ಇತರ ಭಾಗಗಳಲ್ಲಿ ಅಂಚೆ ಮತ್ತು ತಂತಿ ಕ್ಷೇತ್ರದಲ್ಲಿ ಕೈಗೊಳ್ಳಲಾಗಿರುವ ಇತರ ಕೆಲವು ಮುಖ್ಯ ಕಾರ್ಯಯೋಜನೆಗಳನ್ನು ನಾನು ಸಂಕ್ಷಿಪ್ತವಾಗಿ ತಿಳಿಸಲಪೇಕ್ಷಿಸುತ್ತೇನೆ. ದೆಹಲಿ-ಮುಂಬಯಿ, ಮುಂಬಯಿ-ಮದರಾಸು, ದೆಹಲಿ-ಜಲಂಧರ ಮತ್ತು ಇತರ ಕೆಲವು ಮುಖ್ಯ ವಿಭಾಗಗಳಲ್ಲಿ 'ಕೊ ಆಕ್ಸಲ್ ಕೇಬಲ್' ಪದ್ಧತಿಯನ್ನು ವ್ಯವಸ್ಥೆಗೊಳಿಸುವ ಪ್ರಥಮ ಕಾರ್ಯಯೋಜನೆ ಭರದಿಂದ ಮುಂದುವರೆಯುತ್ತಿದೆ. ಇದೇ ರೀತಿ ಬೆಂಗಳೂರು-ಮದ್ರಾಸುಗಳ ನಡುವೆ ಕೊಆಕ್ಸಲ್ ಕೇಬಲ್, ೧೯೬೫ರ ಜೂನ್ ವೇಳೆಗೂ, ಬೆಂಗಳೂರು-ಮುಂಬಯಿ (ಹುಬ್ಬಳ್ಳಿ, ಬೆಳಗಾವಿ ಮತ್ತು ಪೂನಾ ಮಾರ್ಗ) ನಡುವಣ ಕೊ ಆಕ್ಸಿಲ್ ಕೇಬಲ್ ವ್ಯವಸ್ಥೆಯು ೧೯೬೬ರ ಮಾರ್ಚ್ ವೇಳೆಗೂ ಸಿದ್ಧಗೊಳ್ಳುವ ನಿರೀಕ್ಷೆ ಇದೆ. ಕಲ್ಕತ್ತಾ-ನಗರವನ್ನು ಉತ್ತರ ಬಂಗಾಳ ಮತ್ತು ಆಸ್ಸಾಮುಗಳೊಂದಿಗೆ ಜಲಂಧರನು ಶ್ರೀನಗರದೊಂದಿಗೆ ಮತ್ತು ಅಂಬಾಲಾವನ್ನು ಸಿಮ್ಲಾದೊಂದಿಗೆ ಸಂಯೋಜಿಸಲು 'ನೈಕ್ರೋವೇವ್ ಲಿಂಕ್'ಗಳನ್ನು ವ್ಯವಸ್ಥೆಗೊಳಿಸುವ ಕಾರ್ಯಯೋಜನೆ ಆರಂಭವಾಗಿದೆ.

ಟೆಲಿಕ್ಸ್ ಸೌಲಭ್ಯ

ಬೆಂಗಳೂರು, ಕಾನ್ಪುರ, ನಾಗಪುರ, ಕೊಯಮತ್ತೂರು ಮತ್ತು ಇನ್ನು ಕೆಲವು ಕಡೆಗಳಲ್ಲಿ 'ಟೆಲಿಕ್ಸ್' ಸೇವೆಯನ್ನು (ಟೆಲಿಪ್ರಿಂಟರ್ ಎಕ್ಸ್‌ಚೇಂಜ್‌ಗಳನ್ನು) ಸ್ಥಾಪಿಸಲಾಗುವುದು. ಬೆಂಗಳೂರಿನಲ್ಲಿ 'ಟೆಲಿಕ್ಸ್' ೧೯೬೫ರ ಜೂನ್ ವೇಳೆಗೆ ಸಿದ್ಧಗೊಳ್ಳುವ ನಿರೀಕ್ಷೆ ಇದೆ. ವಿಶ್ವಬ್ಯಾಂಕ್ ನೀಡಿದ 'ಐ. ಡಿ. ಎ' ಸಾಲದ ಪರಿಣಾಮವಾಗಿ ತೃತೀಯ ಯೋಜನೆಯ ಅವಧಿಯಲ್ಲಿಯೇ ಈ ಕಾರ್ಯಯೋಜನೆಗಳನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಆಮದು ವಸ್ತುಗಳಿಗೆ ಬದಲಾಗಿ ದೇಶೀಯ ಉತ್ಪನ್ನಗಳಿಂದ ಸ್ವಪರಿಪೂರ್ಣತೆಯನ್ನು ಸಾಧಿಸುವ ಮಹತ್ವಪೂರ್ಣ ಉದ್ದೇಶದಿಂದ ಬೆಂಗಳೂರಿನಲ್ಲಿರುವ ಭಾರತೀಯ ಟೆಲಿಫೋನ್ ಕಾರಖಾನೆ, ಮದ್ರಾಸಿನಲ್ಲಿರುವ ಹಿಂದೂಸ್ಥಾನ ಟೆಲಿಪ್ರಿಂಟರ್ಸ್ ಮತ್ತು ಪಶ್ಚಿಮ ಬಂಗಾಳದ ರೂಪನಾರಾಯಣಪುರದಲ್ಲಿನ ಹಿಂದೂಸ್ಥಾನ ಕೇಬಲ್ಸ್ ಕಾರಖಾನೆಗಳನ್ನು ವಿಸ್ತರಿಸಲು ಯೋಜನೆಗಳನ್ನು ಕೈಗೊಳ್ಳಲಾಗಿದೆ. ಆಟೋಎಕ್ಸ್‌ಚೇಂಜ ಉಪಕರಣಗಳಲ್ಲಿಯೆ ಅತ್ಯಂತ ಆಧುನಿಕವಾದ ಕ್ರಾಸ್‌ಬಾರ್ ಮಾದರಿಯ ಆಟೋಎಕ್ಸ್‌ಚೇಂಜ ಉಪಕರಣಗಳನ್ನು ತಯಾರಿಸಲು 'ಐ.ಟಿ.ಐ ಹೊಸ ವಿಭಾಗವನ್ನು ಸ್ಥಾಪಿಸಲಿರುವುದು ನಾಲ್ಕನೆಯ ಯೋಜನೆಯ ಅಂತ್ಯದೊಳಗಾಗಿ ದೇಶಾದ್ಯಂತ ಆಟೋಎಕ್ಸ್‌ಚೇಂಜಗಳು ವ್ಯವಸ್ಥೆಗೊಂಡು ಹಲವಾರು ನಗರಗಳ ನಡುವೆ ಚಂದಾದಾರರೇ ನೇರವಾಗಿ 'ಟ್ರಂಕ್ ಡಯಲ್' ಮಾಡುವ ಸೌಲಭ್ಯ ವಿರುವುದೆಂದು ನನ್ನ ನಿರೀಕ್ಷೆಯಾಗಿದೆ.

ಈಗಾಗಲೇ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿದೆಯಾದರೂ ಸ್ಥಳೀಯ ಕಾಲ್‌ಗಳಿಗೆ ಮತ್ತು ಟ್ರಂಕ್‌ಗಳಿಗೆ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರ್ಣವಾಗಿ ಪೂರೈಸುವುದು ಶ್ರಮಸಾಧ್ಯವಾಗಿದ ಟೆಲಿಫೋನ್ ಕನೆಕ್ಷನ್‌ಗಳಿಗಾಗಿ ಅಭಿವೃದ್ಧಿಗಳು ಹೆಚ್ಚು ಕಾಲ ಕಾಯುವಂತಾಗಿದೆ ತಂತೆಯೇ ಟ್ರಂಕ್ ಸರ್ಕ್ಯೂಟ್ ಮತ್ತು ಟ್ರಂಕ್ ಮಾರ್ಗ್ದಗಳ ಕೊರತೆಯಿಂದಾಗಿ 'ಟ್ರಂಕ್ ಕಾಲ್'ಗಳಲ್ಲಿ ವಿಳಂಬವಾಗಿದೆ ತಂತಿ ವಿಭಾಗದ ನಮ್ಮ ಸಿಬ್ಬಂದಿವರ್ಗದವರು ಎಕ್ಕೆಸೊರಿ ಶ್ರಮವಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ಚಂದಾದಾರರು ಅಸಹನೆಯಿಂದ ವರ್ತಿಸಿದರೂ ನಮ್ಮ ಸಿಬ್ಬಂದಿಯವರು ತಾಳ್ಮೆಯಿಂದ, ದಕ್ಷತೆಯಿಂದ ಸೇವೆಸಲ್ಲಿಸಿದ್ದಾರೆ. ನಮ್ಮ ಇಲಾಖೆ ಎದುರಿಸುತ್ತಿರುವ ಆರ್ಥಿಕ ಮತ್ತಿತರ ಸಂದಿಗ್ಧಾಲಗಳ ಕೊರತೆಯು ವಿಳಂಬ ಮತ್ತಿತರ ತೊಂದರೆಗಳಿಗೆ ಕಾರಣವೆಂಬ ಅಂಶವನ್ನು ಜನತೆ ಅರಿತಿಲ್ಲಿ, ಅವರು ನಮ್ಮೊಡನೆ ಪೂರ್ಣವಾಗಿ ಸಹಕರಿಸುವರೆಂಬ ಭರವಸೆ ನನಗಿದೆ ಅಂಚೆ ಮತ್ತು ತಂತಿ ಇಲಾಖೆಯ ಸಾಮರ್ಥ್ಯ, ಕಾರ್ಯವ್ಯವಸ್ಥೆ ಮತ್ತು ಧ್ಯೇಯೋದ್ದೇಶಗಳನ್ನು ಆರಿತ ಸಾರ್ವಜನಿಕರು ತಾಳ್ಮೆಯಿಂದ, ಸಹನಶೀಲರಾಗಿ ರಾಷ್ಟ್ರಸೇವೆಯಲ್ಲಿ ನಮ್ಮೊಡನೆ ಸಹಕರಿಸಿದ್ದಾರೆ.

ಅಂಚೆ ಸೌಲಭ್ಯ

ಅಂಚೆ ಸೌಲಭ್ಯಗಳ ಮಟ್ಟಿಗಂತೂ ದೇಶಾದ್ಯಂತ ಗಮನಾರ್ಹ ಪ್ರಗತಿ ಕಂಡು ಬಂದಿದೆ ಮೈಸೂರು ರಾಜ್ಯದಲ್ಲಿ ಇದೀಗ ೧೯೬೦ ರಲ್ಲಿ ಇದ್ದ ಅಂಚೆ ಸೌಲಭ್ಯಕ್ಕೆಂತ ಎರಡರಷ್ಟು ಸೌಲಭ್ಯಗಳನ್ನು ಕಾಣಬಹುದಾಗಿದೆ. ರಾಜ್ಯದಲ್ಲಿ ೨೬,೦೦೦ ಗ್ರಾಮಗಳ ಪೈಕಿ ೧೪,೦೦೦ ಗ್ರಾಮಗಳು ಈಗ ಪ್ರತಿದಿನ ತಂಚೆಯನ್ನು ಪಡೆಯುತ್ತಿವೆ. ಬಸ್ ಸೌಕರ್ಯಗಳ ಪೂರ್ಣ ಪ್ರಯೋಜನವಪಡೆದ ಗ್ರಾಮಾಂತರ ಪ್ರದೇಶಗಳಿಗೆ ಶೀಘ್ರವಾಗಿ ಟಪಾಲನ್ನು ರವಾನಿಸಲು ವಿಶೇಷ ಗಮನ ನೀಡಲಾಗುತ್ತಿದೆ. ಇತ್ತೀಚಿನವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ

(೯ನೆಯ ಪುಟಕ್ಕೆ)

[ಕಳೆದ ಸಂಚಿಕೆಯಿಂದ ಬಂದುದು]



ಪ್ರಗತಿ ಸಂಹಾರ

[ಗುರುದೇವ ರವೀಂದ್ರರ ಕೊನೆಯ ಕಥೆ]

★

ಆಗ ನೀಹಾರನು " ಲೇವಡಿಯೇ ! ದೂರಬೇಕಾದರೆ ಚಂದ್ರನು ನಾನು ಅವಮಾನ ಮಾಡಿದೆನೆಂದು ದೂರಬೇಕು. ನಮ್ಮ ಕ್ಲಾಸಿನ ಜೋಗೇಶನು ಈ ಎಲ್ಲ ವಿಶ್ಲೇಷಣಗಳನ್ನು ಬಿಟ್ಟು ಅವಳನ್ನು ಬರಿಯ ' ನಿಭಾನನೇ ' ಎಂದು ಕರೆದರೆ ಸಾಕೆನ್ನುತ್ತಾನೆ. ಅವಳ ನಾಲಿಗೆಯು ' ಪೆನ್‌ನಿಬ್ಬಿ ' ನ ಹಾಗೆ ಕಠಿನವಾಗಿಯೂ ತೀಕ್ಷ್ಣವಾಗಿಯೂ ಇದೆಯೆಂದು ಅವನು ಹೇಳುತ್ತಾನೆ. ಈ ತೆರದ ಸುಶಿಕ್ಷಿತ ಹುಡಿಗಿಯರನ್ನು ಹೀಗೆ ಹೇಳುವುದು ಸರಿಯಲ್ಲವೆಂದು ಅವನನ್ನು ತಡೆದವನು ನಾನು. ನಾನಂತೂ ಅವಳನ್ನು ' ಪೂರ್ಣಹಂಪ್ರ ನಿಭಾನನೇ ' ಎಂದು ಕರೆಯುವುದರಿಂದ ದೋಷವೆನೂ ಇಲ್ಲವೆಂದು ಎಣಿಸುವೆನು."

ಹುಡುಗರೆಲ್ಲರೂ ಎದ್ದು—" ಸಾರ್, ವಿಷಯವನ್ನು ಪರಿತೀಲಿಸಿ ತೀರ್ಮಾನ ಹೇಳಿರಿ. ನಮ್ಮಿಬ್ಬಕ್ಕೆ ನಾವು ' ಹೇ ಸರಸ್ವತೀಚರಣಕಮಲದಲವಿಹಾರಿನೇ, ಗುಂಜನ ಮತ್ತ-ಮಧುವ್ರತೇ ' ಎಂದು ಹೇಳುತ್ತಿದ್ದೆವು. ಒಂದನೆಯದಾಗಿ, ಈ ಶಬ್ದಗಳು ಬೈಗಳಲ್ಲ. ಎರಡನೆಯದಾಗಿ ನಾವು ಇವಳನ್ನು ಕುರಿತು ಹೇಳಿದೆವೆಂದು ಇವಳು ಯಾಕೆ ಎಣಿಸಬೇಕು ? ಕ್ಲಾಸಿನಲ್ಲಿ ಇಷ್ಟು ಹುಡಿಗಿಯರು ಇರುವರಲ್ಲಾ ! ಅವರೆಲ್ಲಾ ಸುಮ್ಮನಿಲ್ಲವೇ ?"

ಸೂಪರಿಂಟೆಂಡೆಂಬರು— " ಅಂತಹ ಮಾತುಗಳೂ ಅಸಮಯಗಳಲ್ಲಿ ಅಸ್ಥಾನಗಳಲ್ಲಿ ಹಾಸ್ಯವೇ ಆಗುವುವು. ಅವುಗಳನ್ನು ಹೇಳಬೇಕಾದ ಪ್ರಮೇಯವಾದರೂ ಏನಿತ್ತು ? "

ಆಗ ಹುಡುಗರು— " ನೋಡಿ ಸಾರ್, ಮನಸ್ಸಿಗೆ ಬೇಜಾರಾದಾಗ ಸಮಯ ಅಸಮಯಗಳನ್ನು ಯಾರು ಎಣಿಸುವರು ? ಅದಲ್ಲದೆ ನಮ್ಮ ಮಾತುಗಳು ಹಾಸ್ಯವಾಗಿದ್ದರೆ ತಪ್ಪೇನು ? ಅವನ್ನು ಮನಸ್ಸಿಗೆ ತೆಗೆದುಕೊಳ್ಳದೆ ನಗುವಿನಲ್ಲಿ ಹಾರಿಸಬಾರದೆ ? ಅಲ್ಲದೆ ನಿಮ್ಮ ಕಾಲೇಜಿಗೆ ಅಲಂಕಾರಪ್ರಾಯರಾಗಿರುವ ಇಂತಹ ಮಹಾ ಮಹಾ ವಿದುಷಿಯರಲ್ಲಿ ಪರಿಹಾಸಕ್ಕೆ ಪ್ರತಿಯಾಗಿ ಪರಿಹಾಸ ಮಾಡುವವರು ಒಬ್ಬರೂ ಇಲ್ಲವೇ ? ಇವರ ' ದಸ್ತ ರುಚಿ ಕೌಮುದಿ ' ಯಲ್ಲಿ ' ಹಾಸ್ಯ ಮಧುರಿ ' ಗೆ ಸ್ಥಳವೇ ಇಲ್ಲವೇ ? ಹಾಗಾದರೆ ಸುಧಾಪಿಪಾಸುಗಳಾದ ನಮ್ಮಂತಹ ಪುರುಷರ ಗತಿಯೇನು ? " ಎಂದರು.

ಈ ತರಹದ ಹಾಸ್ಯಕಲ್ಲೋಲವು ಆಗಾಗ್ಗೆ ಎಳುತ್ತಿತ್ತು. ಇವುಗಳಿಂದ ಸುರೀತಿಯು ಅಧೀರಳಾದಳು. ಅವಳ ಸ್ವಾಭಾವಿಕವಾದ ಗಾಂಭೀರ್ಯವು ಅವಳನ್ನು ಬಿಟ್ಟು ನಡೆಯಿತು. ಅನಳಿಗೆ ಹಾಸ್ಯಪಾಡಲು ಬಾರದು. ಅಥವಾ ಕಠಿನವಾದ ಉತ್ತರವನ್ನು ಕೊಡಲು ಬೇಕಾಗುವ ಭಾಷೆಯೂ ಅವಳಿಗೆ ತಿಳಿಯದು. ಅವಳು ಒಳಗೊಳಗೆ ಕೋಪದಿಂದ ಬೆಂದು ಸಾಯುತ್ತಿದ್ದಳು. ಸುರೀತಿಯ ಈ ದುರ್ಗತಿಯನ್ನು ಕಂಡು ದಯೆಯನ್ನು ಹೊಂದುತ್ತಿದ್ದ ಗಂಡನರೂ ಆ ಗುಂಪಿನಲ್ಲಿದ್ದರು; ಆದರೆ ಅವರಾರಿಗೂ ಅವಕಾಶವೇ ಸಿಕ್ಕಲಿಲ್ಲ.

ಇನ್ನೊಂದು ದಿನ ಅವಳು ಕಾಲೇಜಿಗೆ ಬರುತ್ತಿದ್ದಾಗ ನೀಹಾರನು ಅಕಸ್ಮಾತ್ತಾಗಿ ಆ ದಾರಿಯಲ್ಲಿ ಬಂದನು. ರಸ್ತೆಯ ಎದುರು ಭಾಗದಿಂದ ನೀಹಾರನು ಅವಳನ್ನು ಉದ್ದೇಶಿಸಿ— " ಹೇ ಕನಕಜಂಪಕಧಾಮ ಗೌರೀ ! " ಎಂದು ಕೂಗಿದನು. ಅವನು ಬಹಳ ಗ್ರಂಥಗಳನ್ನು ಓದಿದ್ದವನು. ಅವನಿಗೆ ಭಾಷೆಗಳನ್ನು ಕಲಿಯಬೇಕೆಂಬ ಒಂದು ಹುಚ್ಚೂ ಇದ್ದಿತು. ಆಗಾಗ್ಗೆ ಅವನು ಸಂಸ್ಕೃತ ಶಬ್ದಗಳನ್ನು ಹೇಳುತ್ತಿದ್ದನು. ಅವನ ಧ್ವನಿಯೂ ಜೆನ್ನಾಗಿದ್ದಿತು. ವರ್ಗವ ಪಾಠ್ಯಗ್ರಂಥಗಳನ್ನು ಓದುವುದರಲ್ಲಿ ಸುರೀತಿಯು ಅವನನ್ನು ಮೀರಿಸುತ್ತಿದ್ದಳು. ಬಾಯಿಪಾಠ ಮಾಡುವುದರಲ್ಲಿ ಅವಳು ಗಬ್ಬಿಗಳು. ಆದರೆ ಪಾಠ್ಯಗ್ರಂಥಗಳ ಹೊರಗೆ ನೀಹಾರನ ಜ್ಞಾನಭಾಂಡಾರವು ಅಪಾರವಾಗಿತ್ತು. ಸುರೀತಿಯು ಒಮ್ಮೆಲೇ ಅಳುಮುಖ ಮಾಡಿಕೊಂಡು ಗೋವಿಂದಬಾಬುಗಳಲ್ಲಿ ಹೋಗಿ " ಈ ರೀತಿಯಾಗಿ ಹಾದಿಬೀದಿಗಳಲ್ಲಿ ಮಾತನಾಡಿಸಿಕೊಳ್ಳುವುದು ನನಗೆ ಸಹಿಸಲು ಅಸಾಧ್ಯ " ಎಂದು ದೂರಿದಳು.

ನೀಹಾರನು— " ನಾನು ನಿಜವಾಗಿಯೂ ತಪ್ಪು ಮಾಡಿದೆನು. ನಾಳೆಯಿಂದ ಅವಳನ್ನು ' ಹೇ ಮತೀ ವುಂಜಿತವರ್ಜೇ ' ಎಂದು ಕರೆಯುವೆನು. ' ಆದರೆ ಅದು ವಿಶೇಷವಾಗಿ ' ರೀಯಾಲಿಸ್ಟಿಕ್ ' ಆಗುವುದಿಲ್ಲವೇ ? "

ಸುರೀತಿಯು ಅಳತ್ತಾ ಅಳುತ್ತಾ ಹೊರಟು ಹೋದಳು. ನೀಹಾರನ ನಡತೆಯು ಪೂರ್ಣ ನಿಷ್ಠುರತೆಯಿಂದ ತುಂಬಿದುದಾಗಿತ್ತು. ತಕ್ಕ ಹಾಗೆ ಲಂಚ ಕೊಟ್ಟು ಅವನನ್ನು ಬಲೆಗೆ ಹಾಕಿಕೊಳ್ಳಬಹುದಾಗಿತ್ತು. ಈ ವಿಷಯವು ಎಲ್ಲರಿಗೂ ತಿಳಿದಿತ್ತು.

ಒಂದು ದಿನ ನೀಹಾರನು ' ಕಟ್-ಕಟ್ ' ಶಬ್ದ ಮಾಡುವ ಜಪಾನಿನ ಆಟದ ಸಾಮಾನನ್ನು ತುಂಬ ತಂದು ಎಲ್ಲ ಹುಡುಗರಿಗೂ ಹಂಚಿದನು. ' ಪ್ಲೇಟೋ ' ವಿನ ದಾರ್ಶನಿಕ ತತ್ವದ ವ್ಯಾಖ್ಯಾನವನ್ನು ಹೇಳುವ ಸಮಯವು ಬಂದಾಗ ಒಟ್ಟು ಕ್ಲಾಸಿನಲ್ಲಿ ' ಕಟ್-ಕಟ್ ' ಎಂದು ಶಬ್ದವು ಪ್ರಾರಂಭವಾಯಿತು. ಶಬ್ದವು ಎತ್ತ ಕಡೆಯಿಂದ ಬರುವುದೆಂದು ಹೇಳಲು ಸಾಧ್ಯವಿರಲಿಲ್ಲ. ಈ ' ಕಟ್-ಕಟ್ ' ಶಬ್ದವಲ್ಲಿ ' ಪ್ಲೇಟೋ ' ವಿನ ದಾರ್ಶನಿಕ ತತ್ವವು ಮುಂದುವರಿಯುವುದು ಅಸಾಧ್ಯವಾಯಿತು. ಕೊನೆಗೆ ಕ್ಲಾಸಿನಲ್ಲೆಲ್ಲಾ ಹುಡುಕಿನೋಡಿದರೆ ಸುರೀತಿಯ ಪೇಜಿನೊಳಗೆ ಈ ' ಕಟ್-ಕಟ್ ' ಶಬ್ದ ಮಾಡುವ ಹತ್ತು ಆಟದ ಸಾಮಾನುಗಳಿದ್ದವು. " ಇದು ನನ್ನದಲ್ಲವೇ ಅಲ್ಲ ! " ಎಂದು ಜೀತ್ಕಾರ ಮಾಡುತ್ತ ಎದ್ದಳು. " ಯಾರೋ ನನ್ನನ್ನು ಹೀಸಿಸಲು ನನ್ನ ಪೇಜಿನಲ್ಲಿ ತಂದು ಮುಚ್ಚಿಟ್ಟಿರುವರು " ಎಂದಳು. ಹುಡುಗರೆಲ್ಲಾ ಬಹಳ ಸಿಟ್ಟಿನಿಂದ ಎದ್ದು ನಿಂತರು. " ನಮ್ಮ ಮೇಲೆ ಈ ರೀತಿಯು ವ್ಯರ್ಥ ದೋಷಾರೋಪಣೆ ಮಾಡುವುದನ್ನು ನಾವು ಸಹಿಸುವುದಿಲ್ಲ. ಈ ತರಹದ ಹುಡುಗಾಟಿಕೆಯನ್ನು ನಮ್ಮಂಥ ಗಂಡಸರು ಎಂದೂ ಮಾಡರು. ಇದೆಲ್ಲ ಈ ಹುಡುಗಿಯರ ಹುಡುಗತನದ ಚೇಷ್ಟೆ " ಎಂದು ಕೂಗಾಡಿದರು. ಕೊಂಚ ಕಾಲ ಕ್ಲಾಸಿನಲ್ಲಿ ನಿಶ್ಯಬ್ದವಾಗಿತ್ತು. ಆ ಮೇಲೆ ಅಕಸ್ಮಾತ್ತಾಗಿ ಕ್ಲಾಸಿನ ಇನ್ನೊಂದು ಮೂಲೆಯಿಂದ ಒಂದು ವಿಚಿತ್ರ ಶಬ್ದವು ಬರಲಾರಂಭಿಸಿತು. ಕ್ಲಾಸಿನ ಸಿಮೆಂಟ್ ನೆಲದ ಮೇಲೆ ಒಮ್ಮೆಲೆ ಎಲ್ಲ ಹುಡುಗರೂ ತಮ್ಮ ಬೂಟುಗಳನ್ನು ಉಜ್ಜಲಾರಂಭಿಸಿದರು. ಇಷ್ಟೊಂದು ಬೂಟುಗಳು ಏಕಕಾಲದಲ್ಲಿ ಉಜ್ಜಲ್ಪಟ್ಟಾಗ ಅದೊಂದು ವಿಚಿತ್ರ ' ಕಾನ್‌ಸರ್ಟ್ ' ಶಬ್ದದ ಸೃಷ್ಟಿಯಾಯಿತು. ಕ್ರಮೇಣ ತಾಳವು ತಪ್ಪಿತು. ಸುರೀತಿಗೆ ಇನ್ನು ಸುಮ್ಮನೆ ಸಹಿಸಿಕೊಂಡು ಕುಳಿತಿರುವುದು ಕಷ್ಟವಾಯಿತು. ಕೊಂಚ ಕಾಲ ಹೇಗೆಯೋ ಸಹಿಸಿಕೊಂಡು ಕುಳಿತಿದ್ದಳು. ಆನಂತರ ಒಂದು ಸಲ ' ಧಡಂ ' ಎಂದು ದೊಡ್ಡ ಶಬ್ದವಾಯಿತು. ಆ ಮೇಲೆ ನಾಲ್ಕೂ ಮೂಲೆಗಳಿಂದಲೂ ಹುಡುಗರಿಂದ ಓಲಗವನ್ನು ಅಣಕಿಸುವ " ಊ-ಹೂಂ-ಊ- " ಎಂಬ ಶಬ್ದವು ಹೊರಬಿದ್ದಿತು. ಆಗ ಸುರೀತಿಯು ಎದ್ದು ನಿಂತು— " ಸಾರ್, ದಯವಿಟ್ಟು ಅವರನ್ನು ಸುಮ್ಮನಿರಲು ಹೇಳಿರಿ. ನಾವು ಇಲ್ಲಿಗೆ ಬಂದಿರುವುದು ಓದುವುದಕ್ಕೆ. ಇದು ಸಂಗೀತ ಚರ್ಚೆಗೆ ಜಾಗವಲ್ಲ. ಯಾರಿಗಾದರೂ ಪಾಠದ ಕಡೆಗೆ ಗಮನ ಕೊಡಲು ಇಷ್ಟವಿಲ್ಲವಾದರೆ ಅವರು ಇಲ್ಲಿಂದ ಹೊರಗೆ ಹೋಗಬಹುದು " ಎಂದಳು. ತತ್ಕ್ಷಣ ಎಲ್ಲ ಕಡೆಯಿಂದಲೂ ' ಪೇಂ, ಪೇಂ ' ಎಂಬ ಶಬ್ದಗಳು ಹೊರಟವು. ಆ ಮೇಲೆ ಹುಡುಗರೆಲ್ಲ ಒಬ್ಬರಿಗೆ ' ಲಿಫ್ಟ್-ರೈಟ್-ಪಾರ್ಟ್ ' ಎಂದು ಹೇಳುತ್ತಾ ಕ್ಲಾಸಿನಿಂದ ಹೊರಗೆ ಹೊರಟು ಹೋದರು. ಅಂದಿನಿಂತೆ ಮತ್ತೆ ಕ್ಲಾಸು ಸೇರಲೇ ಇಲ್ಲ. ಹುಡುಗಿಯರೆಲ್ಲಾ ಹೊರಗೆ ಹೋಗಿ ಕಾಮನ್ ರೂಮಿನಲ್ಲಿ ಕುಳಿತಿದ್ದಾಗ ಆಳು ಬಂದು ಸುರೀತಿಯನ್ನು ' ಸೆಕ್ರೆಟರಿಯವರು ಕರೆಯುವರೆ ' ಎಂದು ಹೇಳಿದನು. ಹುಡುಗಿಯರೆಲ್ಲಾ ಏನು ಮಾತಿಗಾರಂಭಿಸಿದರು. ಸುರೀತಿಯು ಸೆಕ್ರೆಟರಿಯವರ ಕೊಠಡಿಗೆ ಹೋದಳು. ಆಗ ಅಲ್ಲಿ ಆಫೊತ್ತಿನ ಪಾಠ

ವನ್ನು ಹೇಳುತ್ತಿದ್ದ ಉಪಾಧ್ಯಾಯರೂ ನೀಹಾರನೂ ನಿಂತಿದ್ದುದನ್ನು ಕಂಡಳು. ಸೆಕ್ರೆಟರಿಯು ಸುರೀತಿಯನ್ನು ನೋಡಿ—"ನಿನ್ನ ಇಂದಿನ ನಡೆವಳಿಕೆಯಿಂದ ಅವರಿಗೆ ಅವಮಾನವಾಯಿತೆಂದು ಹುಡುಗರೆಲ್ಲಾ ದೂರು ಹೇಳುವರು. ನೀನೇನಾದರೂ ಹೇಳುವುದಿದ್ದರೆ ಹೇಳು" ಎಂದು ಹೇಳಿದರು. "ಸಾರ್, ಅವರು ಪ್ರೊಫೆಸರರ ಸಂಗಡ ಅವಮಾನಜನಕ ರೀತಿಯಲ್ಲಿ ವರ್ತಿಸಿದರು. ನಮ್ಮೊಡನೆ ಅಗೌರವ ರೀತಿಯಲ್ಲಿ ನಡೆದುಕೊಂಡರು. ಆದ್ದರಿಂದ ಅವಮಾನವು ನಮಗಾಯಿತೋ, ಅವರಿಗಾಯಿತೋ?" ಎಂದು ಸುರೀತಿಯು ಅಂದಳು. ಸೆಕ್ರೆಟರಿಗಳು ಎರಡೂ ಪಕ್ಷದವರ ಸುದ್ದಿಯನ್ನು ನಿಧಾನವಾಗಿ ಕೇಳಿ ಯೋಚಿಸಿ, ನೀಹಾರನೆಡೆಗೆ ತಿರುಗಿ—"ಕ್ಲಾಸಿನಲ್ಲಿ ನೀವುಗಳೇ ಮೊದಲು ಗಲಾಟೆಗೆ ಆರಂಭಿಸಿದಿರೆಂದೂ ನೀನೇ ಈ ಗುಂಪಿನ ಮುಖಂಡನೆಂದೂ ಎಲ್ಲ ಕಡೆಗಳಿಂದ ಪ್ರಮಾಣವಾಗಿದೆ. ಈ ಸಂದರ್ಭದಲ್ಲಿ ನೀವುಗಳೇ ಕ್ಷಮೆ ಬೇಡಬೇಕು" ಎಂದರು.

"ಸಾರ್, ನಮ್ಮಿಗಳಿಂದ ಅದು ಸಾಧ್ಯವಾಗುವುದಿಲ್ಲ. ಅದಕ್ಕಿಂತ ನನಗೆ ಅನುಮತಿ ಕೊಡಿರಿ. ನಾನು ಕಾಲೇಜನ್ನು ಬಿಟ್ಟುಹೋಗಲು ತಯಾರಾಗಿರುವೆನು" ಎಂದು ನೀಹಾರನು ಹೇಳಿದನು.

"ನಿನಗೆ ಅವಕಾಶ ಕೊಡುವೆನು. ಚೆನ್ನಾಗಿ ಯೋಚಿಸಿ ನೋಡು." ಎಂದು ಸೆಕ್ರೆಟರಿಯವರು ಹೇಳಲು ಅವನು "ಹಾಗೇ ಆಗಲಿ" ಎಂದು ಹೇಳಿ ಪುಸ್ತಕವನ್ನು ಎತ್ತಿಕೊಂಡು ಹೊರಟನು. ಅವತ್ತು ಕ್ಲಾಸು ಮುಗಿದ ನಂತರ ಹುಡುಗ ಹುಡುಗಿಯರೂ ಹೊರಗೆ ಬಂದಾಗ "ಇಂದಿನಿಂದ ಪೂಜೆಯ ರಜೆಯು ಆರಂಭವಾಗುವುದು" ಎಂದಿದ್ದ ನೋಟೀಸನ್ನು ನೋಡಿದರು.

ಸಲಿಲಳಿಗೂ ನೀಹಾರನಿಗೂ ಬಹಳ ಸ್ನೇಹವಿತ್ತು. ಅವಳು ನೀಹಾರನನ್ನು ಕುರಿತು "ನೀನೂ ದಾರ್ಜಿಲಿಂಗಿಗೆ ಹೊರಟು ಬಾ" ಎಂದಳು. ಆಗ ಅವನು "ನಮ್ಮ ತಂದೆಯು ನಿಮ್ಮಪ್ಪನ ಹಾಗೆ ಲಕ್ಷಾಧೀಶನಲ್ಲ. ದಾರ್ಜಿಲಿಂಗಿನಲ್ಲಿ ಇದ್ದುಕೊಂಡು ಓದುವ ಶಕ್ತಿಯು ನನಗೆಲ್ಲಿಯದು?" ಅಂದನು. ಅದನ್ನು ಕೇಳಿ ಆ ಹುಡುಗಿಯು "ಸರಿ; ನಿನ್ನ ಖರ್ಚನ್ನು ನಾನು ವಹಿಸಿಕೊಳ್ಳುವೆನು" ಎಂದಳು. ನೀಹಾರನಲ್ಲಿ ಒಂದು ಗುಣವಿತ್ತು. ಅವನಿಗೆ ಯಾರು ಏನನ್ನು ಕೊಟ್ಟರೂ ಅವನ್ನು ತೆಗೆದುಕೊಂಡು ಜೇಬಿನಲ್ಲಿ ಹಾಕಿಕೊಳ್ಳಲು ಅವನು ಹಿಂಜರಿಯುತ್ತಿರಲಿಲ್ಲ. ಆ ಧನಿಕ ವಿದ್ಯಾರ್ಥಿನಿಯ ಖರ್ಚಿನಲ್ಲಿ ಅವನು ದಾರ್ಜಿಲಿಂಗಿಗೆ ಹೋಗಲು ನಿಶ್ಚಯಿಸಿದನು.

ಇತ್ತ ಸುರೀತಿಗೆ ಎಷ್ಟೇ ಅಹಂಕಾರವಿದ್ದರೂ ನೀಹಾರನ ಮನಸ್ಸು ಸಲಿಲಳ ಕಡೆಗೆ ಎಳೆಯಲ್ಪಟ್ಟದ್ದು ಅವಳಿಗೆ ಕಷ್ಟವಾಗಿ ತೋರುತ್ತಿತ್ತು. ಧನಿಕ ಕಾದ ಹುಡುಗಿಯ ಆಶ್ರಯದಲ್ಲಿ ನೀಹಾರನು ಸುರೀತಿಯನ್ನು ಇನ್ನೂ ಹೆಚ್ಚಾಗಿ ದೂಷಿಸಲು ಆರಂಭಿಸಿದನು. ಮನಸ್ಸಿಗೆ ಬಂದದ್ದನ್ನು ಹೇಳುತ್ತಿದ್ದನು. "ಗಂಡಸರು ಮರ್ಯಾದೆಯಿಂದ ನಡೆದುಕೊಳ್ಳಬೇಕೆಂದು ಹೇಳುವ ಹೆಂಗಸರು ತಮ್ಮಲ್ಲಿ ಸ್ತ್ರೀಸಹಜ ಗುಣಗಳನ್ನೂ ತಮ್ಮ ಸ್ತ್ರೀತ್ವವನ್ನೂ ಉಳಿಸಿಕೊಂಡಿರಬೇಕು." ಈ ಮಾತುಗಳನ್ನು ಕೇಳಿದಾಗಲೆಲ್ಲಾ ಸುರೀತಿಯು ಲೊಚಗುಟ್ಟಿ, ಭುಜಹಾರಿಸಿ ಆ ಮಾತುಗಳನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದಂತೆ ತೋರಿಸಿಕೊಳ್ಳುತ್ತಿದ್ದಳು. ಆದರೆ ಅವಳ ಹೃದಯಾಂತರಾಳದಲ್ಲಿ ನೀಹಾರನನ್ನು ಹೇಗಾದರೂ ಒಲಿಸಿಕೊಳ್ಳಬೇಕೆಂಬ ಭಾವನೆಯು ನೆಲಸಿರಲಿಲ್ಲವೆಂದು ಹೇಳಲಾಗುತ್ತಿರಲಿಲ್ಲ. ನೀಹಾರನು ಹಣವಂತರ ಮನೆಯ ಹುಡುಗಿಯಿಂದ ಸಹಾಯ ಹೊಂದುತ್ತಿದ್ದುದನ್ನು ಕಂಡು ಹುಡುಗರಲ್ಲಿ ಕೆಲವರು ಹೊಟ್ಟೆಕಿಚ್ಚು ಪಡುತ್ತಿದ್ದರು. ಇನ್ನು ಕೆಲವರು ಅವನ ಈ ನಡತೆಯನ್ನು ಧಿಕ್ಕರಿಸಿ 'ಫರಜಮಾಯಿ' (ಮನೆ-ಅಳಿಯ) ಎಂದು ಕರೆಯುತ್ತಿದ್ದರು. ನೀಹಾರನು ಇವನ್ನೆಲ್ಲಾ ಕಿವಿಯ ಮೇಲೆ ಹಾಕಿಕೊಳ್ಳುತ್ತಲೇ ಇರಲಿಲ್ಲ. ತನ್ನ ಸ್ನೇಹಿತರಿಗೆ 'ಫಿರ್ಪೋಸ್'*ನಲ್ಲಿ ತಿಂಡಿ ಕೊಡಿಸುವುದಕ್ಕೂ ತನ್ನ ಆವಶ್ಯಕತೆ ಆಶೆಗಳನ್ನು ತೀರಿಸಿಕೊಳ್ಳುವುದಕ್ಕೂ ಈ ಸುಲಭವಾದ ಹಾದಿಯಲ್ಲಿ ಎಲ್ಲಿಯವರೆಗೆ ಹಣ ಸಿಕ್ಕುತ್ತಿತ್ತೋ ಅಲ್ಲಿಯವರೆಗೆ ಈ ಹುಡುಗಿಯರ ಕೈಯ ದುಡ್ಡನ್ನು ಸೂರೆ ಮಾಡುವುದರಲ್ಲಿ ಅವನಿಗೆ ಎಳ್ಳಷ್ಟೂ ನಾಚಿಕೆಯಾಗಲೀ ಸಂಕೋಚವಾಗಲೀ ಇರುತ್ತಿರಲಿಲ್ಲ. ತನಗೆ ಬೇಕಾದಾಗಲೆಲ್ಲಾ ಸಲಿಲಳಲ್ಲಿ ಸಂಕೋಚವಿಲ್ಲದೆ ಹಣ ಕೇಳುತ್ತಿದ್ದನು. ಸಲಿಲಳಿಗೆ ತನ್ನ ಈ ಆಶ್ರಿತ ಪುರುಷ ವ್ಯಕ್ತಿಯಲ್ಲಿ ಬಹಳ ವಿಶ್ವಾಸವಿತ್ತು. ಅವನೊಂದು ದಿನ ತನ್ನ ಪ್ರತಿಭೆಯ ಪ್ರಭಾವದಿಂದ ಮಹಾಪುರುಷನಾಗುವನೆಂದು ಅವಳು ಎಣಿಸಿದ್ದಳು. ನೀಹಾರನೂ ತನ್ನ ಪ್ರತಿಭೆಗೆ ಸೃಷ್ಟಿಯ ಎಲ್ಲ ಪದಾರ್ಥಗಳ ಮೇಲೂ ಹಕ್ಕಿದೆಯೆಂದು ತೋರಿಸಿಕೊಳ್ಳುವುದನ್ನು ಮರೆಯುತ್ತಿರಲಿಲ್ಲ. ಸಲಿಲಳೂ ಅವನು ತನಗೆ ಕಲ್ಪಿಸಿಕೊಂಡ ಬೆಲೆಯನ್ನೇ ಒಪ್ಪಿಕೊಂಡಿದ್ದಳು.

ಸಲಿಲಳು ದಾರ್ಜಿಲಿಂಗಿನಲ್ಲಿರುತ್ತಿದ್ದಾಗ ಅವಳಿಗೆ ಅಕಸ್ಮಾತ್ತಾಗಿ ಡಬಲ್ ನ್ಯೂಮೋನಿಯಾ ತಗುಲಿತು. ಚಿಕಿತ್ಸೆಗೇನೂ ಅಭಾವವಿರಲಿಲ್ಲ. ಆದರೂ ಯಮದೂತರನ್ನು ಮಾತ್ರ ಬರಿಗೈಯಲ್ಲಿ ಹಿಂದಿರುಗಿಸಲಾಗಲಿಲ್ಲ. ಸಲಿಲಳು ಯಮಪುರಿಗೆ ಪ್ರಯಾಣ ಬೆಳೆಸಿದಳು. ಅವಳು ತನ್ನ 'ವಿಲ್'ನಲ್ಲಿ ತನಗೇನಾದರೂ ಕೊಟ್ಟಿರುವವೆಂದು ಕೊನೆಯ ವರೆಗೂ ಕಾಯ್ದಿದ್ದಳು. ಆದರೆ ತನ್ನ ಕೆಲಸದವಳಿಗೆ ಮಾತ್ರ ಒಂದು ನೂರಾ ರೂಪಾಯಿಗಳನ್ನು ಕೊಡುವಂತೆ ಬರೆದಿದ್ದು ತನ್ನ ಹೆಸರನ್ನೇ ಎತ್ತದಿದ್ದುದನ್ನು ಕಂಡು ಅವನಿಗೆ ಬಹು ಕೋಪ ಬಂದಿತು. "ಎಂತಹ ನೀಚತನ! ಇವಕ್ಕೇ ಇಂಗ್ಲಿಷಿನಲ್ಲಿ 'ಮೀನ್-ನೆಸ್' ಎಂದು ಹೇಳುವುದು" ಎಂದನು. ನೀಹಾರನು ಇದುವರೆಗೂ ಯಾರನ್ನು 'ಜಗದ್ಧಾತ್ರಿ' ಯೆಂದು ಹೊಗಳುತ್ತಿದ್ದನೋ ಅವಳು ಈ ಪುರುಷ ಪಾಲನದ ಕಾರ್ಯಕ್ಕೆ ರಾಜೀನಾಮೆ ಕೊಟ್ಟು ನೀಹಾರನನ್ನು ನಿಮಿಷ ಮಾತ್ರವಲ್ಲಿ ನೈರಾಶ್ಯದ ಅರಣ್ಯದಲ್ಲಿ ಕೈಬಿಟ್ಟು ಹೊರಟು ಹೋದಳು. ಇನ್ನು ಮೇಲೆ ದಾರ್ಜಿಲಿಂಗಿನ ಖರ್ಚಿಗೆ ಸಹಾಯಕರಿಲ್ಲ. ನೀಹಾರನು ಮತ್ತೆ ಕಲ್ಕತ್ತೆಯ ತನ್ನ ಹಳೆಯ 'ವಿದ್ಯಾರ್ಥಿ ನಿಲಯ'ಕ್ಕೇ ಹಾಜರಾದನು. ಹುಡುಗರೆಲ್ಲಾ ಅವನನ್ನು ನೋಡಿ ಬಹಳ ಹಾಸ್ಯಮಾಡಿ ಜೆನ್ನಾಗಿ ನಕ್ಕರು. ಆದರೆ ನೀಹಾರನು ಇವರ ಹಾಸ್ಯವನ್ನು ಲೆಕ್ಕಿಸಲಿಲ್ಲ. ಅವನು ತನ್ನ ಮುಂದಿನ 'ಜಗದ್ಧಾತ್ರಿ'ಯು ಎತ್ತ ಕಡೆಯಿಂದ ಬರುವಳೆಂದು ನಿರೀಕ್ಷಿಸುತ್ತಿದ್ದನು. ನಾಲ್ಕಾರು ದಿನಗಳಿಗೆ ಮುಂಚೆ ಒಬ್ಬ ಪ್ರಸಿದ್ಧ ಉಡಿಯಾ ಸಾಮುದ್ರಿಕ ಶಾಸ್ತ್ರಜ್ಞನು+ ಇವನ ಕೈ ನೋಡಿ "ನೀನು ಶೀಘ್ರದಲ್ಲಿಯೇ ಹಣವಂತರ ಹುಡುಗಿಯೊಬ್ಬಳ ಆದರವನ್ನು ಹೊಂದುವೆ" ಎಂದು ಹೇಳಿದ್ದನು. ನೀಹಾರನು "ಅವನ ಭವಿಷ್ಯವಾಣಿಯು ಎಂದು ಫಲಿಸುವುದೋ" ಎಂದು ಎದುರು ನೋಡುತ್ತಿದ್ದನು. ಅವನ 'ಎರಡನೆಯ ಜಗದ್ಧಾತ್ರಿ'ಯು ಯಾವ ದಾರಿಯಿಂದ ಬರುವಳೋ ಎಂಬುದನ್ನು ಮಾತ್ರ ಆ ಸಾಮುದ್ರಿಕ ಶಾಸ್ತ್ರಜ್ಞನು ಹೇಳಲಿಲ್ಲ. ಇಚೀಚೆಗೆ ನೀಹಾರನ ಆರ್ಥಿಕ ಸ್ಥಿತಿಯು ಅತಿ ಹೀನವಾಗಿತ್ತು.

ದಾರ್ಜಿಲಿಂಗಿನಿಂದ ಹಿಂದಿರುಗಿದನಂತರ ನೀಹಾರನನ್ನು ಅಕಸ್ಮಾತ್ತಾಗಿ ಕಾಲೇಜಿನಲ್ಲಿ ಕಂಡಾಗ ಸುರೀತಿಗೆ ಆತ್ಯಾಶ್ಚರ್ಯವಾಯಿತು. "ನೀವು ಹಿಮಾಲಯದಿಂದ ಎಂದು ಹಿಂದಿರುಗಿದಿರಿ?" ಎಂದಳು.

ನೀಹಾರನು ನಗುನಗುತ್ತ ಉತ್ತರ ಕೊಟ್ಟನು. "ಓ ಸೀಮಂತಿನೀ, ಸ್ವಲ್ಪ ಕಾಲ ಅಲ್ಲಿಯ ವಾಯುವನ್ನು ಸೇವಿಸಿ ಹಿಂತಿರುಗಿದೆನು. ಮಹಾಕವಿ ಕಾಳಿದಾಸನು ಹೇಳಿರುವನು— 'ಮಂದಾಕಿನೀ ನಿರ್ಝರ ಶಿಖರಾಣಾಂ ರೋಢಾ ಮುಹುಃ ಕಂಪಿತ ದೇವದಾರುಃ' ಆದರೆ ಈ ಬಂಗಾಲಿಯ ಅಸ್ಥಿಪಂಜರವು ದೇವದಾರುವಿಗಿಂತ ಹೆಚ್ಚಾಗಿ ಕಂಪಿಸಲಾರದೆನಿಸಿತು. ಅದನ್ನು ಸಹಿಸಲಾಗಲಿಲ್ಲ. ಇದೋ—ಈ ಕಂಬಳಬಟ್ಟೆಗಳು. ಈ ಭೂಟಿಯಾ (ಭೂತಾನಿನವರ) ವೇಷ. ಇದೆಲ್ಲ ನೋಡಿದರೆ ನಿಜಸ್ಥಿತಿಯು ತಿಳಿಯುವುದಿಲ್ಲವೇ?"

ಸುರೀತಿಯೂ ನಗುತ್ತ, "ಯಾವ ವೇಷವಾದರೇನು? ನಿಮಗೆ ಈ ವೇಷವೂ ಚೆನ್ನಾಗಿ ಒಪ್ಪುವುದು. ಈ ಭೂಟಿಯಾ ವೇಷ—ಅದರ ತರಹ—ಅದರ ಬಟ್ಟೆಗಳು, ಇವೆಲ್ಲ ನಿಮಗೆ ಚೆನ್ನಾಗಿ ಒಪ್ಪುತ್ತಿವೆ" ಎಂದಳು.

ನೀಹಾರ:—"ನಿಮ್ಮ ಮಾತುಗಳನ್ನು ಕೇಳಿ ಸಂತೋಷವೇ. ಈಗಂತೂ ಶೀತಬಾಧೆಯ ಹೆದರಿಕೆಯಿಲ್ಲ. ಈಗಿರುವ ಭಯವೆಂದರೆ ನಿಮ್ಮ ಮತ್ತು ನಿಮ್ಮ ಸ್ನೇಹಿತೆಯರ ದೃಷ್ಟಿಯಲ್ಲಿ ಚೆನ್ನಾಗಿ ಕಾಣುವುದು ಹೇಗೆ ಎಂಬ ಪ್ರಶ್ನೆಯೇ! ಇದು ಅತಿ ಕಷ್ಟಸಾಧ್ಯವಾದ ವಿಷಯ.

ಸುರೀತಿ:—ಅಂತಹ ಆವಶ್ಯಕತೆಯೇನು? ಗಂಡಸರಿಗೆ ಅವರ ವಿದ್ಯೆ ಬುದ್ಧಿ ಇವೇ ಮಹಾ ಸಹಾಯಕರು. ನಿಮಗಂತೂ ಅಭುಗಳ ಅಭಾವವೇನೂ ಇಲ್ಲ.

ನೀಹಾರ:—ಹಾಗಲ್ಲ. ನೀವು ತಪ್ಪು ಎಣಿಸಿದ್ದೀರಿ. ನ್ಯೂಟನ್ನನು ತಾನು ಜ್ಞಾನಸಾಗರವ ತೀರದಿಂದ ಕೆಲವು ಸಣ್ಣ ಹರಳುಗಳನ್ನು ಮಾತ್ರವೇ ಆಯ್ದುಕೊಂಡಿರ-ವೆನೆಂದು ಹೇಳಿರುವನು. ನಾನಾವರೋ ಅಷ್ಟೂ ಇಲ್ಲ. ಕೇವಲ ಕೆಲವು ರಜಕಣಗಳನ್ನು ಆರಿಸಿಕೊಂಡಿರುವೆನು.

(ಮುಂದುವರೆಯುವುದು)

---

* Firpos Restaurant—ಕಲ್ಕತ್ತೆಯಲ್ಲಿ ಯುರೋಪಿಯನ್ನರ ದೊಡ್ಡ ಹೊಟೆಲುಗಳಲ್ಲೊಂದು.

\+ ಬಂಗಾಲದ ದೊಡ್ಡ ಪಟ್ಟಣಗಳಲ್ಲಿ ವಿಶೇಷವಾಗಿ ಕಲ್ಕತ್ತೆಯಲ್ಲಿ ಬೀದಿಯ ಮೂಲೆಮೂಲೆಗಳಲ್ಲಿ ಜ್ಯೋತಿಷ ಹೇಳುವವರು, ಕೈ ನೋಡುವವರು ಕುಳಿತು ತಮ್ಮ ಕಸಬನ್ನು ನಡೆಸುವರು. ಇವರಲ್ಲಿ ಬಹು ಮಂದಿ ಉಡಿಯಾಗಳು (ಒರಿಸ್ಸಾ ದೇಶದವರು.)

ತಾ. ೨೪—೧೨—೧೯೬೪ ರಿಂದ ತಾ. ೩೦—೧೨—೧೯೬೪ರ ವರೆಗೆ

ಮೇಷ

ಈ ವಾರ, ನಿಮ್ಮ ಇಷ್ಟಾರ್ಥಗಳು ಸಿದ್ಧಿಯಾದರೂ, ಮನಸ್ಸಿನಲ್ಲಿ ಏನೋ ಒಂದು ದುಗುಡ ನಿಮ್ಮನ್ನು ಕಾಡುತ್ತಲೇ ಇರುತ್ತೆ. ಆದರಲ್ಲಿ ವಿಶೇಷವಾಗಿ ಹಣದ ಕೊರತ ಹೇಗೆ ಬರುತ್ತೆ ಹೇಗೆ ಹೋಗುತ್ತೆ ಎಂಬುದೇ ತಿಳಿಯದಾಗುತ್ತೆ. ನೌಕರಿ–ಉದ್ಯೋಗ–ಧಂದೇಗಳಲ್ಲಿ ಕೂಡ ತಕ್ಕ ಹಣಕ್ಕೆ ಹೇಗೋ ಬಾಯಿಗೂಡಿಸುತ್ತೀರಿ. ಆದರೆ ಬರತಕ್ಕ ಹಣ ಸಕಾಲಕ್ಕೆ ಬಾರದು. ಪ್ರಕೃತಿ ಮತ್ತು ಪ್ರಾವಂಚಿಕ ಸುಖ ದೊರೆಯುತ್ತೆ. ಶುಭಮಂಗಲ ಕಾರ್ಯ, ಪ್ರವಾಸಗಳಲ್ಲಿ ಅನುಕೂಲವಿದೆ ವಿದ್ಯಾರ್ಥಿಗಳು ಲೇಖಕರಿಗೆ ಸಮಯದ ಅಭಾವ ಎದ್ದು ಕಾಣುತ್ತದೆ. ತಾ|| ೨೬–೨೭ ಕಷ್ಟಸಾಧ್ಯ, ಅಲ್ಪಪ್ರಗತಿ.

ವೃಷಭ

ಈ ವಾರ, ತಾವು ಅಲ್ಪ ಕಾರ್ಯಕ್ಕಾಗಿ ಅತಿಯಾಗಿ ಹಣ ವ್ಯಯ ಮಾಡುವ ಪ್ರಸಂಗ ಬರುತ್ತೆ. ಪ್ರಿಯಜನರ ಬಗ್ಗೆ ಕಾತುರತೆ ಹೆಚ್ಚಾಗುತ್ತೆ. ನೌಕರಿ–ಧಂದೇ–ಉದ್ಯೋಗಗಳಲ್ಲಿ ನಿರಾಶೆಯೇ ಎದ್ದು ಕಾಣುತ್ತದೆ ಪ್ರಕೃತಿ ಮತ್ತು ಪ್ರಾಸಂಚಿಕ ಸುಖ ಸಾಧಾರಣವಿದೆ. ಪ್ರವಾಸ ಕಾರ್ಯ ಮುಂದೂಡಲಾಗುತ್ತೆ. ಶುಭಮಂಗಲ ಕಾರ್ಯಗಳಲ್ಲಿ ವಿಘ್ನಗಳೇ ತಲೆಮೇರುತ್ತವೆ. ಲೇಖಕರು–ವಿದ್ಯಾರ್ಥಿಗಳಿಗೆ ಕಷ್ಟಸಾಧ್ಯವಿದೆ. ತಾ|| ೨೬–೨೭ ಅನಿಷ್ಟ, ಅಧಿಕವ್ಯಯ.

ಮಿಥುನ

ಈ ವಾರ, ತಾವು ಸಕಲ ಕಾರ್ಯಗಳಲ್ಲಿಯೂ ಜಯ ಸಂಪಾದಿಸುತ್ತೀರೆಂದು ತಿಳಿಸಲು ಸಂತೋಷವೆನಿಸುತ್ತದೆ. ಉದ್ಯೋಗ–ಧಂದೇಗಳಲ್ಲಿದ್ದ ನಿಮ್ಮ ಆಶೆ ಪೂರೈಸುತ್ತದೆ. ಪ್ರಕೃತಿ ಮತ್ತು ಪ್ರಾಸಂಚಿಕ ಸುಖ ಉತ್ತಮವಿದೆ. ನೌಕರಿ ವರ್ಗಕ್ಕೆ ಸಮಾಧಾನಕಾರಕ ಘಟನೆಗಳು ಜರಗುತ್ತವೆ. ಮಹತ್ವದ ಪ್ರವಾಸವೂ ಜರಗುವ ಯೋಗವಿದೆ. ಲೇಖಕರು, ವಿದ್ಯಾರ್ಥಿಗಳಿಗೆ, ಸಮಾನುಕೂಲ ಯೋಗವಿದೆ. ತಾ|| ೨೬–೨೭ ಮನರಂಜನೆ, ಧನಲಾಭ.

ಕರ್ಕ

ಈ ವಾರ, ತಾವು ಅಗದ ಕೆಲಸಕ್ಕಾಗಿ ಕೈಹಾಕಿ ನಿರಾಶರಾಗುತ್ತೀರಿ, ಹುಷಾರಿ! ಉದ್ಯೋಗ–ಧಂದೇಗಳಲ್ಲಿ ಕೇವಲ ಬರೀ ಕೈಲೆ ಮೊಳಹಾಕಿ ಶಾಂತರಾಗುತ್ತೀರಿ, ಆದರೆ ಸಂತಾವನೆ ಶೂನ್ಯ. ನೌಕರಿ ವರ್ಗವು ಅಲ್ಪ ಸುಖಕ್ಕಾಗಿ ಕೈಹಾಕಬೇಡಿರಿ. ಆದಷ್ಟು ಜಾಗ್ರತೆ ವಹಿಸಿರಿ. ವರಿಷ್ಠರ ಸಹಕಾರ ಸಿಗಲಾರದು. ಪ್ರವಾಸದಲ್ಲಿ ಅಧಿಕವ್ಯಯ ಕಂಡುಬರುತ್ತದೆ. ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ ವಿದೆ. ಲೇಖಕರಿಗೆ, ವಿದ್ಯಾರ್ಥಿಗಳಿಗೆ, ಆಲಸ್ಯ ಹೆಚ್ಚಾಗುತ್ತೆ. ತಾ|| ೨೮–೨೯ ಅನುಕೂಲ, ಸ್ವಜನ ಪಕ್ಷಪಾತ.

ಸಿಂಹ

ಈ ವಾರ, ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ದೊರೆಯುತ್ತದೆ. ಆರ್ಥಿಕವಾಗಿಯೂ ಅನುಕೂಲ ಕಂಡುಬರುತ್ತೆ. ನೌಕರಿ ವರ್ಗಕ್ಕೆ ಪ್ರಗತಿಯೋಗವಿದ್ದು, ವರಿಷ್ಠರ ಸಹಾನುಭೂತಿ ಸಂಪಾದಿಸುತ್ತೀರಿ ವಾದ–ವಿವಾದಗಳಲ್ಲಿ ಅನುಕೂಲವಿಲ್ಲ. ಉದ್ಯೋಗ–ಧಂದೇಗಳಲ್ಲಿ ಅಲ್ಪ ಲಾಭದಿಂದಲೇ ತೃಪ್ತಿಹೊಂದುವುದು ಉತ್ತಮ. ಪ್ರವಾಸಯೋಗವಿದೆ. ಲೇಖಕ ವಿದ್ಯಾರ್ಥಿಗಳಿಗೆ, ಸಾಧಾರಣ ಫಲ. ತಾ|| ೨೮–೨೯ ಮಿತ್ರಸೌಖ್ಯ, ಭೋಜನ ಸುಖ.

ಕನ್ಯಾ

ಈ ವಾರ, ನೀವು ಆದಷ್ಟು ಜಾಗ್ರತೆ ವಹಿಸುವುದು ಉತ್ತಮ. ಮಹತ್ವದ ವಸ್ತು ನಷ್ಟ ಇಲ್ಲವೆ ಕಳವಾಗುವ ಸಂಭವವಿದೆ, ಹುಷಾರಿ! ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮವಿದೆ. ವಾದ–ವಿವಾದಗಳಲ್ಲಿ ಜಯ ದೊರೆಯಲಾರದು. ನೌಕರಿ–ಧಂದೇ–ಉದ್ಯೋಗಗಳಲ್ಲಿ ದುಡಿತಕ್ಕೆ ತಕ್ಕ ಫಲ ಕಂಡುಬರುತ್ತದೆ. ಶುಭಮಂಗಲ ಕಾರ್ಯಗಳಲ್ಲಿ ಆಪ್ತರಿಂದ ಸಹಕಾರ ಕಂಡುಬರುತ್ತದೆ. ಪ್ರವಾಸಕಾರ್ಯ ನಿರ್ವಿಘ್ನವಾಗಿ ಜರಗುತ್ತೆ. ಲೇಖಕ–ವಿದ್ಯಾರ್ಥಿಗಳಿಗೆ, ಶುಭಫಲ. ತಾ|| ೨೭–೨೮ ನಿದ್ರಾಭಂಗ, ಗಡಿಬಿಡಿ.

ತುಲಾ

ಈ ವಾರ, ನಿಮ್ಮ ಆರ್ಥಿಕ ಪರಿಸ್ಥಿತಿ ಸುಧಾರಣೆ ಹೊಂದಬಹುದೆಂಬ ನಿಮ್ಮ ಆಶೆ, ಈಡೇರಲಾರದು. ನೌಕರಿ ವರ್ಗಕ್ಕೆ ಖರ್ಚಿನ ಬಾಬು ಬೆಳೆದು, ತುಂಬಾ ತೊಂದರೆಯಾಗುತ್ತದೆ. ಆಪ್ತರಿಂದ ಸಹಕಾರ ಕಂಡುಬರಲಾರದು. ಉದ್ಯೋಗ–ಧಂದೇಗಳಲ್ಲಿ ಬಂದ ಅಕಸ್ಮಾತ್ ತೊಂದರೆಗಳು ನಿಮ್ಮನ್ನು ಹೈರಾಣರನ್ನಾಗಿ ಮಾಡುತ್ತವೆ. ಪ್ರವಾಸಕಾರ್ಯ ಅನಿವಾರ್ಯವೆನಿಸುತ್ತದೆ. ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣ. ಲೇಖಕರಿಗೆ, ವಿದ್ಯಾರ್ಥಿಗಳಿಗೆ, ಕಷ್ಟಸಾಧ್ಯವಿದೆ. ತಾ|| ೨೭–೨೮ ಮಂದಬುದ್ಧಿ, ಕಲಹ–ವಿರಹ.

ವೃಶ್ಚಿಕ

ಈ ವಾರ, ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ದೊರೆತರೂ ಮಾನಸಿಕ ಸುಖ ದೊರೆಯಲಾರದು ನೌಕರಿ ವರ್ಗಕ್ಕೆ ಅಪವ್ಯಯದ ಬಾಬುಗಳೇ ಅಧಿಕವಾಗುತ್ತವೆ. ಉದ್ಯೋಗ–ಧಂದೇಗಳಲ್ಲಿ ಅನುಕೂಲ ಕಂಡರೂ, ಲಾಭದ ಅಂಶ ತೀರ ಕಡಿಮೆಯಾಗುತ್ತೆ. ವಾಹನಗಳ ಹಠಮುರಿಯಿಂದ ಅಕಸ್ಮಾತ್ ಪ್ರವಾಸ ನಿಲ್ಲಿಸಬೇಕಾಗುತ್ತದೆ. ಶುಭಮಂಗಲ ಕಾರ್ಯಗಳಲ್ಲಿ ಅನುಕೂಲವಿದೆ. ಲೇಖಕ ವಿದ್ಯಾರ್ಥಿಗಳಿಗೆ ಅನಾರೋಗ್ಯ, ಭಯ ಕಂಡುಬರುತ್ತದೆ. ತಾ|| ೨೬–೨೭ ಸತ್ಸಂಗ, ಭಯದೂರ.

ಧನು

ಈ ವಾರ, ತಮಗೆ ಪ್ರಶಾಂತ ವಾತಾವರಣವಿದ್ದು ಸ್ವೀಕೃತ ಕಾರ್ಯಗಳಲ್ಲಿ ಪ್ರಗತಿಯೋಗವಿದೆ. ಒಂದು ಮಹತ್ವದ ಕಾರ್ಯವು ಸಿದ್ಧಿಯಾಗುತ್ತದೆ. ನೌಕರಿ–ಧಂದೇ–ಉದ್ಯೋಗಗಳಲ್ಲಿ ಲಾಭ–ಯಶ–ಪ್ರಗತಿ, ಸನ್ಮಾನದ ಯೋಗವಿದೆ. ಪ್ರಕೃತಿ ಮತ್ತು ಪ್ರಾಂಚಿಕ ಸುಖ ಉತ್ತಮವಿದೆ. ಪ್ರವಾಸ ಜರಗಿ ಪುಣ್ಯಕ್ಷೇತ್ರಗಳ ದರ್ಶನವಾಗುತ್ತದೆ ಲೇಖಕರಿಗೆ, ವಿದ್ಯಾರ್ಥಿಗಳಿಗೆ ಶುಭದಾಯಕ. ತಾ|| ೨೮–೨೯ ಮನರಂಜನೆ, ಸಜ್ಜನರ ಸಹವಾಸ.

ಮಕರ

ಈ ವಾರ, ಪ್ರಕೃತಿ ಮತ್ತು ಪ್ರಾವಂಚಿಕ ಸುಖ ಸಮಾಧಾನಕರವಿದೆ. ನೌಕರಿ ವರ್ಗಕ್ಕೆ ಅನುಕೂಲವಿದ್ದು, ಯೋಜನಾ ಕಾರ್ಯಗಳು ಸಿದ್ಧಿಯಾಗುವ ಲಕ್ಷಣಗಳು ಕಂಡುಬರುತ್ತವೆ. ಉದ್ಯೋಗ–ಧಂದೇಗಳಲ್ಲಿ ಉತ್ಸಾಹಕರವಿದ್ದು, ತೊಂದರೆಗಳು ದೂರಾಗುತ್ತವೆ. ಪ್ರವಾಸ ಜರಗಿ ಉತ್ಸಾಹಭರಿತರಾಗಿ ಕಂಡುಬರುತ್ತೀರಿ. ಶುಭಮಂಗಲ ಕಾರ್ಯಗಳು ಕೂಡಿಬರುತ್ತವೆ. ಲೇಖಕ ವಿದ್ಯಾರ್ಥಿಗಳಿಗೆ ಸೌಖ್ಯ ಪ್ರದ. ತಾ|| ೨೬–೨೭ ಆಪ್ತರ ಸಹಕಾರ, ಮಿತ್ರದರ್ಶನ.

ಕುಂಭ

ಈ ವಾರ, ಪ್ರಕೃತಿ ಮತ್ತು ಪ್ರಾವಂಚಿಕ ಸುಖ ಉತ್ತಮ. ಉದ್ಯೋಗ–ಧಂದೇಗಳಲ್ಲಿ ವಿಘ್ನಗಳು ಬಂದರೂ, ತಾಳ್ಮೆ ವಹಿಸಿ, ಕಾರ್ಯ ಪೂರೈಸಿಕೊಳ್ಳಿರಿ ನೌಕರಿ ವರ್ಗವು ಯಾರನ್ನೂ ಎದುರು ಹಾಕಿಕೊಳ್ಳುವ ಪ್ರಸಂಗ ಬಾರದಂತೆ ನೋಡಿಕೊಳ್ಳುವುದು ಹಿತಕರ. ಪ್ರವಾಸಯೋಗವಿಲ್ಲ. ಶುಭಕಾರ್ಯಗಳಲ್ಲಿ ಅಧಿಕ ವ್ಯಯ ಕಂಡುಬರುತ್ತೆ. ಲೇಖಕರಿಗೆ, ವಿದ್ಯಾರ್ಥಿಗಳಿಗೆ, ಮಂದಬುದ್ಧಿಯಾಗುತ್ತೆ. ತಾ|| ೨೫–೨೬ ಸಂಶಯ, ಪ್ರತಿಕೂಲ.

ಮೀನ

ಈ ವಾರ, ತಮಗೆ ಅಲ್ಪಾನುಕೂಲ ಕಂಡರೂ, ಧೈರ್ಯಗುಂದದೆ ಬಾರಿ ಬಾರಿ ಪ್ರಯತ್ನ ಮಾಡಿ ಕಾರ್ಯ ಸಾಧಿಸಿಕೊಳ್ಳಿರಿ ಎಂಬುದೇ ನಿಮ್ಮ ಗ್ರಹಮಾನಗಳ ಸಂದೇಶವಾಗಿದೆ. ನೌಕರಿ ವರ್ಗವು ಹಿಡಿದ ಕೆಲಸಗಳನ್ನು ಪೂರ್ತಿಗೊಳಿಸುವುದು ಹಿತಕರ. ಕೌಟುಂಬಿಕ ಸೌಖ್ಯ ದೊರೆಯುತ್ತೆ. ಉದ್ಯೋಗ–ಧಂದೇಗಳಲ್ಲಿ ಆರ್ಥಿಕವಾಗಿ ತೊಂದರೆಯಾಗಬಹುದು. ಪ್ರವಾಸ ಕಾರ್ಯ ಅನಿವಾರ್ಯವೆನಿಸುತ್ತೆ. ಶುಭಕಾರ್ಯಗಳಲ್ಲಿ ಸಾಧಾರಣ ಅನುಕೂಲ. ಲೇಖಕರಿಗೆ, ವಿದ್ಯಾರ್ಥಿಗಳಿಗೆ ಸಾಧಾರಣ ಫಲ. ತಾ|| ೨೬–೨೭ ನಿದ್ರಾಭಂಗ, ಆರ್ಥಿಕ ಚಿಂತೆ.

ಅಂಚೆ ಮತ್ತು ತಂತಿ ಇಲಾಖೆಯ ಪ್ರಗತಿ

(೫ನೆಯ ಪುಟದಿಂದ)

ಅಂಚೆ ಸೌಕರ್ಯಗಳನ್ನು ವಿಸ್ತರಿಸಲು ಗಮನ ನೀಡಲಾಗುತ್ತಿತ್ತು. ಇದೀಗ ನಗರಗಳಲ್ಲಿಯೂ ಅಂಚೆ ಸೇವೆಯನ್ನು ವಿಸ್ತರಿಸಲು ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಉದಾಹರಣೆಗೆ ಬೆಂಗಳೂರು ನಗರದಲ್ಲಿ ತೃತೀಯ ಯೋಜನೆಯ ಅವಧಿಯಲ್ಲಿ ಅಂಚೆ ಕಚೇರಿಗಳ ಸಂಖ್ಯೆ ೬೦ರಷ್ಟು ಹೆಚ್ಚಿದೆ. ಗ್ರಾಮಾಂತರ ಪ್ರದೇಶಕ್ಕಿಂತ ನಗರದಲ್ಲಿ ಅಂಚೆ ಕಚೇರಿಯನ್ನು ತೆರೆಯುವುದು ಹೆಚ್ಚು ಪ್ರಯಾಸಕರವಾಗಿದೆ. ಜನಭರಿತ ಸ್ಥಳಗಳಲ್ಲಿ ಕಚೇರಿಗಾಗಿ ಕಟ್ಟಡದೊರೆಯುವುದು ಕಷ್ಟವಾಗಿದ್ದು, ಕಟ್ಟಡದ ಬಾಡಿಗೆಯೂ ಗ್ರಾಮಗಳಿಗೆ ಹೋಲಿಸಿದ್ದಲ್ಲಿ ಹೆಚ್ಚಾಗಿರುತ್ತದೆ. ಬೆಂಗಳೂರಿನಲ್ಲಿ ಇಲಾಖೆಯು ಅಂಚೆಗಾಗಿ ಮೋಟಾರ ವ್ಯಾನ್‌ಗಳನ್ನು ಓಡಿಸುತ್ತಿದೆ. ಬೆಂಗಳೂರು ನಗರದ ಅಂಚೆ ವ್ಯವಸ್ಥೆಯ ಉಸ್ತುವಾರಿಗಾಗಿ ಉನ್ನತ ಅಧಿಕಾರಿಯೊಬ್ಬರನ್ನು ನೇಮಿಸಲಾಗಿದೆ.

ಸಾರ್ವಜನಿಕರ ಸಹಕಾರ ಅಗತ್ಯ

ನಮ್ಮ ಗುರಿ ದ್ವಿಮುಖವಾಗಿದೆ. ಅಂಚೆ ಸೌಲಭ್ಯಗಳ ವಿಸ್ತರಣೆ ಮತ್ತು ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಈಗಿರುವ ನೇವಾಸಿಬ್ಬಂದಿಯವರ ದಕ್ಷತೆಯನ್ನು ಹೆಚ್ಚಿಸುವುದು ಕೈಗಾರಿಕೆ ಮತ್ತು ವಾಣಿಜ್ಯ ಉದ್ಯಮಗಳು ಹೆಚ್ಚುತ್ತಾ ಬಂದಂತಲ್ಲಾ ನಮ್ಮ ಅಂಚೆ ವಿಭಾಗ ಹೆಚ್ಚು ಹೆಚ್ಚು ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದೆ. ನಾಲ್ಕು ವರ್ಷಗಳ ಹಿಂದೆ ವರ್ಷಕ್ಕೆ ಸುಮಾರು ೧೮ ಕೋಟಿ ಅಂಚೆ ಸಾಮಗ್ರಿಗಳನ್ನು ರವಾನಿಸುತ್ತಿದ್ದ ನಮ್ಮ ವಿಭಾಗವು ಇಂದು ವರ್ಷಕ್ಕೆ ಸುಮಾರು ೨೫ ಕೋಟಿಗೂ ಹೆಚ್ಚು ಸಾಮಗ್ರಿಗಳನ್ನು ರವಾನಿಸುತ್ತಿದೆ. ಅಂತೆಯೇ ವಿಭಾಗವು ಸಿಬ್ಬಂದಿವರ್ಗ ಮತ್ತು ಸ್ಥಳಾವಕಾಶಗಳಿಗೆ ಸಂಬಂಧಪಟ್ಟಂತೆ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ ನಾವು ಉನ್ನತ ಮಟ್ಟದಲ್ಲಿ ಸೇವೆನಲ್ಲಿಸುವಂತೆ ಮಾಡಲು ಜನತ ನವ್ಮೊಡನೆ ಸಹಕರಿಸಬೇಕಾಗಿದೆ. ಅಂಚೆ ಸೌಲಭ್ಯವನ್ನು ಪಡೆಯಲವೇಪ್ಪೆಸು ಮನರು ಎರಡು ಮುಖ್ಯ ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಮೊದಲನೆಯದು ಕಾಗದ ಪತ್ರಗಳ ಮೇಲೆ ಸರಿಯಾಗಿ ವಿಳಾಸಬರೆಯುವುದು. ತೀರಾ ಸಾಮಾನ್ಯವಾದ ಹಾಗೂ ಪ್ರಾಥಮಿಕವಾದ ಈ ವಿಷಯ ಕೆಲವರಿಗೆ ಆಶ್ಚರಿಯನ್ನುಂಟುಮಾಡಬಹುದು. ಸರಿಯಾಗಿ ವಿಳಾಸ ಬರೆಯದ ಕಾಗದ ಪತ್ರಗಳು ನಮ್ಮ ಸೇವಾಕಾರ್ಯಗಳಿಗೆ ಭಾರಿ ಆತಂಕವಾಗಿವೆ. ಅಸ್ಪಷ್ಟವಾಗಿ 'ಗೀಚಿದ ವಿಳಾಸದ ಸಂಖ್ಯೆಗಳಲ್ಲಿದ್ದ ಅಥವಾ ಹಾಗೊಮ್ಮೆ ಇದ್ದರೂ ತಪ್ಪು ಸಂಖ್ಯೆಯನ್ನೊಳಗೊಂಡ, ಅಂಚೆ ತಲಪಬೇಕಾದ ವ್ಯಕ್ತಿಯ ಹೆಸರೇ ಇಲ್ಲದೆ ಅಕ್ಕಮವಾಗಿ ಬರೆದ ಅಸಂಖ್ಯಾತ ಪತ್ರಗಳನ್ನು ನಾವು ಕಾಣುತ್ತಿದ್ದೇವೆ. ಇವು ಎಲ್ಲ ಹಂತದಲ್ಲಿಯೂ ನಮ್ಮ ಕೆಲಸಕ್ಕೆ ಅಡ್ಡಿ ಬರುತ್ತವೆ. ಬೆಂಗಳೂರಿನ ಜನರಲ್ ಪೋಸ್ಟ ಆಫೀಸ ಒಂದರಲ್ಲಿಯೇ ಇಂತಹ ಸುಮಾರು ೧೦,೦೦೦ ಅಂಚೆ ಸಾಮಗ್ರಿಗಳು ಸಿಕ್ಕಿವೆ.

ಕಾಗದ ಪತ್ರಗಳ ಮೇಲೆ ವಿಳಾಸ ಸರಿಯಾಗಿದ್ದಲ್ಲಿ ನಾವು ಸುಲಭವಾಗಿ ಶೀಘ್ರವಾಗಿ ಕಾಗದ ಪತ್ರಗಳನ್ನು ರವಾನಿಸಬಹುದು. ಅಂಚೆಯನ್ನು ಸ್ವೀಕರಿಸುವ ವ್ಯಕ್ತಿಯ ಹೆಸರು, ಮನೆಯ ನಂಬರು, ರಸ್ತೆಯ ಹೆಸರು, ಊರಿನ ಹೆಸರು ಮತ್ತು ಬಟವಾಡೆ ಮಾಡುವ ಅಂಚೆ ಕಚೇರಿಯ ನಂಬರು (ನಂಬರು ಇದ್ದಲ್ಲಿ ಮಾತ್ರ) ಜಿಲ್ಲೆ ಅಥವಾ ರಾಜ್ಯ— ಇವಿಷ್ಟು ವಿವರಗಳು ಕಾಗದ ಪತ್ರಗಳ ಮೇಲೆ ಇರಬೇಕು. ಜಿಲ್ಲೆ ಅಥವಾ ರಾಜ್ಯದ ಹೆಸರನ್ನು ನಮೂದಿಸುವುದು ಒಳ್ಳೆಯದು. ಒಂದೇ ಹೆಸರಿನ ಹಲವಾರು ಊರುಗಳು ವಿವಿಧ ಜಿಲ್ಲೆಗಳು ಮತ್ತು ರಾಜ್ಯಗಳಲ್ಲಿರುವುದರಿಂದ— ಉದಾಹರಣೆಗೆ ಮೈಸೂರು ರಾಜ್ಯದಲ್ಲಿ ಬೆಳ್ಳೂರು (ಮಂಡ್ಯ ಜಿಲ್ಲೆ) ಮತ್ತು ಬೇಲೂರು (ಹಾಸನ ಜಿಲ್ಲೆ), ಶ್ರೀನಗರ (ಕಾಶ್ಮೀರ) ಮತ್ತು ಶ್ರೀನಗರ (ಘೆರ್ವಾಲ್) ಸಾಗರ (ಮೈಸೂರು) ಮತ್ತು ಸಾಗರ (ಮಧ್ಯಪ್ರದೇಶ)— ಕಾರಣ ಜಿಲ್ಲೆ ಮತ್ತು ರಾಜ್ಯದ ಹೆಸರನ್ನು ನಮೂದಿಸುವುದು ಒಳ್ಳೆಯದು

ಸಾರ್ವಜನಿಕರಿಂದ ನಾವು ಅಪೇಕ್ಷಿಸುವ ಮತ್ತೊಂದು ಸಹಕಾರವೆಂದರೆ ಕಾಗದ ಪತ್ರಗಳನ್ನು ಅಂಚೆ ಕಚೇರಿಗಳು ಮುಚ್ಚುವ ಕಾಲಕ್ಕೆ ಪೋಸ್ಟ ಮಾಡುವ ಬದಲು ಸಾಧ್ಯವಾದಷ್ಟು ಮುಂಜೆ ಹಾಕುವುದು. ಇದರಿಂದ ಕೊನೆಯ ಘಳಿಗೆಯಲ್ಲಿ ಕೆಲಸದ ಪ್ರಮಾಣ ವಿಪರೀತವಾಗಿ ವಿಳಂಬವಾಗುವುದು ತಪ್ಪುತ್ತದೆ.

ಈ ಒಂದು ಪುಟ್ಟ ಭಾಷಣವು ಓದುಗರಿಗೆ ಅಂಚೆ ಮತ್ತು ತಂತಿ ಇಲಾಖೆಯು ನಿರ್ವಹಿಸುತ್ತಿರುವ ಕೆಲಸಕಾರ್ಯಗಳು ಮತ್ತು ವಿಸ್ತೃತ ಚಟುವಟಿಕೆಗಳ ವಿಹಂಗಮ ನೋಟ ನೀಡುವುದೆಂದು ನಾನು ನಂಬಿದ್ದೇನೆ. ಅಂತೆಯೇ ಉನ್ನತ ಮಟ್ಟದಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ಸಾರ್ವಜಕರು ಅಂಚೆ ಮತ್ತು ತಂತಿ ಸಿಬ್ಬಂದಿಯವರೊಡನೆ ಹೇಗೆ ಸಹಕರಿಸಬೇಕೆಂಬುದನ್ನು ನನ್ನ ಈ ನಾಲ್ಕಾರು ಮಾತುಗಳು ನೆನಪುಮಾಡಿಕೊಡುವುದೆಂಬ ಭರವಸೆ ನನಗಿದೆ. ●

ಮಕ್ಕಳ ಕತೆ

ಥೂ....ನಿನ!

ಒಮ್ಮೆ ಆನೆಯು ನಿಧಾನವಾಗಿ, ಪ್ರಶಾಂತವಾಗಿ, ಸೊಂಡಿಲನ್ನು ಅಲ್ಲಾಡಿಸುತ್ತ ಸಾಗಿ ನಡೆಯುತ್ತಿತ್ತು. ಮೊಲವು ತನ್ನ ಹಿಂದೆ ಆಡಗಿಕೊಂಡು ಬರುತ್ತಿರುವುದನ್ನು ಒಡನೆಯೇ ಆನೆಯು ಕಂಡಿತು.

ಮೊಲದ ನಡತೆಯಿಂದ ಆನೆಗೆ ಆಶ್ಚರ್ಯವಾಯಿತು. ಅದು ಬಹುಶಃ ಹುಚ್ಚಾಗಿರಬಹುದೆಂದು ನಿರ್ಧರಿಸಿ ಆನೆಯು ಜೋರಾಗಿ ನಡೆಯತೊಡಗಿತು. ಮೊಲವೂ ಅಷ್ಟೇ ವೇಗವಾಗಿ ಆನೆಯನ್ನು ಹಿಂಬಾಲಿಸಿತು.

'ಇನ್ನು ನಾನು ಮಾಡುವುದೇನು? ಈ ಮೊಲದಿಂದ ತಪ್ಪಿಸಿಕೊಳ್ಳುವುದು ಹೇಗೆ?' ಎಂದು ಆನೆ ಆಲೋಚಿಸಿತು. ಅದು ತನ್ನ ನಡಿಗೆಯ ವೇಗವನ್ನು ಇನ್ನೂ ಹೆಚ್ಚಿಸಿತು.

'ಮೊಲಗಳು ಆನೆಗಳನ್ನು ಅಟ್ಟಿಸಿಕೊಂಡು ಹೋಗುವುದನ್ನು ಹಿಂದೆಂದೂ ನಾನು ಕೇಳಿಲ್ಲ!'—ಎಂದು ಆನೆಯು ಮನಸ್ಸಿನಲ್ಲೇ ಮೆಲಕು ಹಾಕುತ್ತಿತ್ತು.

ಆ ಮೇಲೆ ಆನೆಯು ಓಡತೊಡಗಿತು. ಮೊಲ ಏನು ಮಾಡುತ್ತಿದೆ ಎಂದು ಪುನಃ ಪುನಃ ಹಿಂದಕ್ಕೆ ತಿರುಗಿ ನೋಡುತ್ತಿತ್ತು.

ಆ ಮೊಲವೂ ಸಹ ಆನೆಯನ್ನು ಅಟ್ಟಿಸಿಕೊಂಡು ಬರುತ್ತಲೇ ಇತ್ತು.

ಇದ್ದಕ್ಕಿದ್ದ ಹಾಗೆಯೇ ಮುಂದೆ ಒಂದು ಆಳವಾದ ಹಳ್ಳ ಕಂಡುಬಂದಿತು.

'ಇನ್ನಾಯಿತು! ನನ್ನ ಗತಿ ತೀರಿತು!' ಎಂಬ ವಿಚಾರವು ಆನೆಯ ಮನಸ್ಸಿನಲ್ಲಿ ಸುಳಿಯಿತು. ಅದು ನಿಂತೇ ಬಿಟ್ಟಿತು.

ಎದುಸಿರುಬಿಡುತ್ತ ಮೊಲವು ಓಡಿ ಬಂದಿತು.

ನನ್ನಿಂದ ನಿನಗೇನಾಗಬೇಕಾಗಿದೆ?— ಎಂದು ಆನೆಯು ಕಂಪಿಸುತ್ತ ಕೇಳಿತು.

'ದಯವಿಟ್ಟು ಕ್ಷಮಿಸಿ ನಿಮ್ಮ 'ಆಟೋಗ್ರಾಫ್' (ಸ್ವಹಸ್ತಾಕ್ಷರ) ಕೊಡುತ್ತೀರಾ?'—ಎನ್ನುತ್ತ ಮೊಲವು ತಲೆಯೆತ್ತಿ ಆನೆಯನ್ನು ನೋಡುತ್ತ, ದೈನ್ಯದಿಂದ ಕೇಳಿಕೊಂಡಿತು 'ದಯವಿಟ್ಟು ಕೊಡುತ್ತೀರಾ?' ಎಂದು ಪುಸ್ತಕವನ್ನು ನ ಂದೆ ಮಾಡಿತು.

'ಥೂ....ನಿನ!'—ಎಂದಿತು ಆ ಆನೆ.

ಚೀಣಾದರ್ಶನ

ಅಫೀಮು ಬೆಳೆಯಲು ಚೀಣೀ ಸರ್ಕಾರದ ಉತ್ತೇಜನ

ಅಫೀಮಿನ ವ್ಯವಸಾಯವು ನೈಋತ್ಯ ಚೀಣಾದಲ್ಲಿ ಈಗ ಒಂದು ಲಾಭದಾಯಕ ಉದ್ಯಮವಾಗಿದೆ. ಪೀಕಿಂಗ್ ಸರ್ಕಾರವೇ ಈ ಉದ್ಯಮಕ್ಕೆ ರಕ್ಷಣೆ ನೀಡಿದೆ. ಈ ಮೊದಲು ಅಫೀಮಿನ ಕೃಷಿ ಮಾಡುವುದನ್ನು ಚೀಣಾದಲ್ಲಿ ಬಹಿಷ್ಕರಿಸಲಾಗಿತ್ತು. ಆದರೆ ಇತ್ತೀಚೆಗೆ ಸರ್ಕಾರದ ಸಹಾಯ-ಸಹಕಾರಗಳಿಂದಲೇ ಈ ಉದ್ಯಮವು ಪುನರುಜ್ಜೀವನಗೊಂಡಿದೆ.

ವಾಯವ್ಯ ಯೂನಾನ್ ಪ್ರಾಂತ್ಯದಲ್ಲಿನ ಜನರು ಅಫೀಮನ್ನು ಅಧಿಕೃತ ಪೂರಣದಲ್ಲಿ ಉತ್ಪಾದಿಸಿ ರಫ್ತು ಮಾಡಿದ್ದರಿಂದ ದಿನಬೆಳಗಾಗುವುದರೊಳಗಾಗಿಯೇ ಶ್ರೀಮಂತರಾದರೆಂದು ಈ ಪ್ರದೇಶದಿಂದ ಬಂದ ವರದಿಗಳಿಂದ ವ್ಯಕ್ತಪಟ್ಟಿದೆ.

ಪೀಕಿಂಗ್ ಸರ್ಕಾರವು ಅಫೀಮು ಬೆಳೆಯುವವರಿಗೆ ಹೆಚ್ಚಿನ ಉತ್ತೇಜನ ನೀಡುತ್ತಿದೆ ಅವರಿಗೆ ಬೇಕಾದ ಎಲ್ಲ ಸಹಾಯ ಸಹಕಾರಗಳನ್ನೂ ಒದಗಿಸುತ್ತಿದೆ. ಅವರ ಉತ್ಪನ್ನಗಳನ್ನು ಕೊಳ್ಳಲು ಮತ್ತು ಅವುಗಳನ್ನು ನೆರೆಹೊರೆಯ ದೇಶಗಳಲ್ಲಿ ಮಾರಲು ಪ್ರತ್ಯೇಕ ಸಂಸ್ಥೆಯನ್ನೂ ಸ್ಥಾಪಿಸಿದೆ.

ನೈಋತ್ಯ ಚೀಣಾದ ಈ ಪ್ರಾಂತ್ಯಗಳ ವರಮಾನವು ಕಳೆದ ನಾಲ್ಕೈದು ವರ್ಷಗಳಲ್ಲಿ ಶೇ. ೨೦೦ ರಷ್ಟು ಮತ್ತು ತಲಾ ವರಮಾನ ಎರಡೂವರೆಯಷ್ಟು ಹೆಚ್ಚಿರುವುದು ಅಫೀಮು ವ್ಯಾಪಾರದ ಸ್ರಮೃದ್ಧಾಣವನ್ನು ನೂಚಿಸುತ್ತದೆ ಕೆಲವೇ ವರ್ಷಗಳ ಹಿಂದೆ ಬಡತನದಿಂದ ನಲುಗುತ್ತಿದ್ದ ಈ ಪ್ರಾಂತ್ಯದ ಜನರು ಈಗ ಒಮ್ಮಲೇ ಶ್ರೀಮಂತರಾಗಿರುವರೆಂದು ವರದಿಗಳಿಂದ ವ್ಯಕ್ತಪಟ್ಟಿದೆ.

ವಿಶ್ವದ ದೀನದಲಿತರ ವಿಷಯದಲ್ಲಿ ಮೊದಲೇ ಕಣ್ಣೀರು ಸುರಿಸುತ್ತಿರುವ ಚೀಣೀಸರ್ಕಾರವು ತನ್ನ ಜನರ ದೌರ್ಬಲ್ಯಗಳಿಗಾಗಿ ಇವರನ್ನೇ ಶೋಷಣೆ ಮಾಡುತ್ತದೆಯೆನ್ನುವುದು ನಿಜಕ್ಕೂ ಹೃದಯವಿದ್ರಾವಕ ಸಂಗತಿ.

॥ ಓಂ ಸರ್ವಂ ವಿಕಟಮಯಂ ಜಗತ್ ॥



ಸಂಪುಟ ೨೪] ನವಂಬರ್ ೧೯೩೪. [ಸಂಚಿಕೆ ೧

— ಸ್ವವಿಷಯ. —

ವಿಕಟ ವಿನೋದಿನಿಯರು ಪತ್ರಿಕಾ ಪ್ರಪಂಚದಲ್ಲಿ ಅಡಿಯಿಟ್ಟು ಇಂದಿಗೆ 23 ವರ್ಷಗಳಾದುವು. ಈ ವರ್ಷಂಗಳ ಪರಿಮಿತಿಯಲ್ಲಿ ವಿಕಟ ದಂಪತಿಗಳು ಸಾಂಪ್ರತ ಕಾಲಕ್ಕನುಗುಣವಾದ ಸಾಮಾಜಿಕ, ನೈತಿಕ ವಿಷಯಗಳನ್ನು ಚಮತ್ಕಾರವೂ, ನೀತಿಪರವೂ ಆದ ಲೇಖನಗಳಿಂದ ಇಡೀ ಕರ್ಣಾಟಕದ ನಾಡುಗಳಲ್ಲಿಯೂ, ನಗರಗಳಲ್ಲಿಯೂ, ಗ್ರಾಮಗಳಲ್ಲಿಯೂ ಯಡೆಬಿಡದೆ ಬಿತ್ತಿ ಹರಡುತ್ತಾ ತನ್ಮೂಲಕ ಭಾಷಾ ಸೇವೆಯನ್ನು ಮಾಡುತ್ತಾ ಬಂದಿರುವರು.

ಆಧುನಿಕ ಪತ್ರಿಕಾ ಪ್ರಪಂಚವು ಈಗಲೀಗ ಉನ್ನತ ಶಿಖರವನ್ನಡರುತ್ತಿರುವಂತೆ ಕಾಣುತ್ತಿರುವುದಾದರೂ ಕನ್ನಡದ ದೌರ್ಭಾಗ್ಯ ದೆಶೆಯು ತನ್ನ ಸ್ಥಾನವನ್ನು ಬಿಟ್ಟಗಲುವಂತೆ ಕಾಣುತ್ತಿಲ್ಲವು. ಇದಕ್ಕೆ ನಮ್ಮವರ ಉದಾಸೀನವೇ ಕಾರಣವೆಂದು ಹೇಳಬಹುದಾಗಿದೆ. ಕರ್ಣಾಟಕ ಮಾತೆಯ ಉದರದಲ್ಲೇ ಜನಿಸಿದವರಾಗಿಯೂ, ಕನ್ನಡ ಭಾಷೆಯನ್ನೇ ಆಡುತ್ತಿರುವರಾಗಿಯೂ, ಕರ್ಣಾಟಕ ದೇಶದಲ್ಲೇ ವಾಸಿಸುತ್ತಿರುವರಾಗಿಯೂ ಇರುವ ಕನ್ನಡಿಗರಿಗೇ ಕನ್ನಡವನ್ನು ಕಂಡರಾಗದು. "ತನ್ನ ಮನೆ ಸಾರಿಗಿಂತಲೂ ನೆರಮನೆ ಹುಲಿಸೊಪ್ಪೇ ಹಿತ" ಎಂಬಂತೆ ಅನ್ಯಭಾಷಾಪ್ರೇಮಿಗಳಾದ ಈಗಿನ ಯುವಕ ಯುವತಿಯರಿಗಂತೂ ಕನ್ನಡವೆಂದರೆ ಬಲುಜಿಗುಪ್ಸೆ. ಕನ್ನಡದಲ್ಲಿ ಮಾತನಾಡುವುದೆಂದರೆ ಅವರ ತಲೆಯೇ ಕಳಚಿ ನೆಲಕ್ಕುರುಳಿದಂತಾಗಿ ಬಿಡುವುದು. ಇನ್ನು ಕನ್ನಡ ಪುಸ್ತಕಗಳನ್ನು ಕಂಡರೆಂದರೆ ದೊಡ್ಡಪಿಡಿಗೇ ಬಡಿದಂತಾಗಿ ಬಿಡುವುದು. ಹೀಗಿರುವಲ್ಲಿ ಕನ್ನಡ ಪತ್ರಿಕೆಗಳ ಪೋಷಣೆಯೂ, ಪ್ರಚಾರವೂ ಎಂತಾಗುವುದು. ಕನ್ನಡ ಪತ್ರಿಕೆಗಳ ದುರ್ದೆಶೆಗೆ ಪಾಳ್ಯದಲ್ಲಿ ಕಿತ್ತಲಾಟ ಬೇರೆ. ಒಂದು ಪತ್ರಿಕೆಯನ್ನು ಕಂಡರೆ ಮತ್ತೊಂದು ಪತ್ರಿಕೆಗಾಗದು. ಎಲ್ಲೋ ಹುಟ್ಟಿ, ಎಲ್ಲೋ ಬೆಳೆದು, ಹೇಗೊ ಲಯವಾಗುವ ಕೆಲ ಪತ್ರಿಕೆಗಳು ಸ್ವಲ್ಪ ಕಾಲದ ತಮ್ಮ ಅವಧಿಯಲ್ಲಿಯೆ ಆರಂಭ ಶೂರತ್ವವನ್ನು ತಾಳಿ ತೆಪ್ಪನಾಗಿ ಬಿಡುವವು. ಇನ್ನು ಕೆಲವು ನೆನ್ನೆ ಮೊನ್ನೆಗೆ ಕಣ್ಣು ತೆರೆದು ಇನ್ನು ಪುಕ್ಕಗಳು ಬೆಳೆಯುವದಕ್ಕೆ ಮೊದಲೇ ಹಾರಿ ಹಾರಿ, ಕುಪ್ಪಳಿಸಿ, ಮುಗ್ಗರಿಸಿ, ತಡವರಿಸುತ್ತಿದ್ದರೂ, "ಜಂಭದ ಕೋಳಿ" ಯಂತೆ ತನ್ನ ಸಮಾನರಿಲ್ಲವೆಂದು ಕೊಚ್ಚಿಕೊಳ್ಳುತ್ತಿರುವವು. "ತುಂಬಿದ ಕೊಡ ತುಳುಕಲಾರದು" ಕಾಕಃ ಕಾಕಃ ಪಿಕಃ ಪಿಕಃ.

ಭಾಷಾ ಸೇವೆಯೆ ದೇಶ ಸೇವೆ. ದೇಶಸೇವೆಗಾಗಿ ಹೊರಡುತ್ತಿರುವ ಯಾವ ಪತ್ರಿಕೆಯನ್ನೂ ವಿಕಟ ಪತ್ರಿಕೆಯು ದೋಷವಾಗೆಣಿಸಿ ತನ್ನ ಕರ್ತವ್ಯ ಶೀಲತೆಯನ್ನು ಎಂದೂ ಕೆಡಿಸಿಕೊಂಡಿರುವುದಿಲ್ಲ. 'ತಾನುಂಟೊ ಜಗವುಂಟೊ' ಎಂಬ ದುರ್ಭಾವನೆಯನ್ನಳಿದು ಸಮದೃಷ್ಟಿಯಿಂದ ವರ್ತಿಸುತ್ತಿರುವುದೇ ಉತ್ತಮತರದ ಪತ್ರಿಕಾ ಲಕ್ಷಣವು. ಈ ಲಕ್ಷ್ಯದಿಂದಲೇ ವಿಕಟ ವಿನೋದಿನಿ ಪತ್ರಿಕೆಗೆ ೨೪ ವರ್ಷಂಗಳು ಈ ಸಂಚಿಕೆಯಿಂದ ಆರಂಭವಾಗುವುದೆಂದು ತಿಳಿಸಲು ಹರ್ಷಿಸುವೆವು.

ವಾಚಕರಲ್ಲಿ ಭಾಷಾಭಿವೃದ್ಧಿಯನ್ನು ಹೆಚ್ಚಿಸಬೇಕೆಂಬ ಉದ್ದಿಶ್ಯದಿಂದ ಈಗ್ಗೆ ಕೆಲವು ತಿಂಗಳುಗಳಿಂದಲೂ "ನಗದು ಬಹುಮಾನಸ್ಪರ್ಧೆ" ಯನ್ನು ಪ್ರಾರಂಭಿಸಿರುವೆವು. ಸ್ಪರ್ಧೆಯಲ್ಲಿ ಕಾಣುವ ಅನೇಕ ಪದಗಳು ಸಾಧಾರಣವಾಗಿ ರೂಢಿಯಲ್ಲಿರುವ ವಾದರೂ ಕೆಲವು ಶಬ್ದಗಳನ್ನು ಗ್ರಂಥಗಳಿಂದ ಹುಡುಕಿ ತೆಗೆಯ ಬೇಕಾಗುವುದು. ಇದರಿಂದ ವಾಚಕರಿಗೆ ಪ್ರಾಚೀನ ಗ್ರಂಥ ಪರಿಚಯವೂ ಆದಂತಾಗುವುದು. ಸ್ಪರ್ಧೆಗೆ ಇನ್ನೂ ಹೆಚ್ಚು ಹೆಚ್ಚಾಗಿ ಜನಗಳು ಸೇರಿದಂತೆಲ್ಲ ಬಹುಮಾನದ ಹಣವನ್ನು ಹೆಚ್ಚಿಸಲಾಗುವುದು. ಬಹುಮಾನವಿನಿಯೋಗದಲ್ಲಿ ಯಾವ ತೆರನಾದ ಮೋಸವೂ ಉಂಟಾಗದಂತೆ ಪತ್ರಿಕಾ ಸಂಪಾದಕರೂ ಮತ್ತು ಕಮಿಟಿ ಮೆಂಬರುಗಳು ನೋಡಿಕೊಳ್ಳಲು ಸಿದ್ಧರಾಗಿರುತ್ತಾರೆ.

ಕನ್ನಡ ಪತ್ರಿಕೆಗಳಲ್ಲಿ ಹಾಸ್ಯಪ್ರಧಾನವೂ, ನೀತಿಪರವೂ ಆದ ವಿಕಟ ಪತ್ರಿಕೆಯಲ್ಲಿ ನಗದು ಬಹುಮಾನ ಸ್ಪರ್ಧೆಯನ್ನು ಕನ್ನಡಿಗರ ಹಿತಕ್ಕಾಗಿ ಪ್ರಾರಂಭಿಸಿದ ಶ್ರೇಯೋವೇಲ್ಲು ಸನ್ಯಸಿಯರಿಗೆ ನೂತನ ವರ್ಷದ ವಿಕಟ ದಂಪತಿಗಳ ಅಭಿನಂಜನಗಳನ್ನು ಈ ಮೂಲಕ ಸಲ್ಲಿಸಿದೆ ಇರಲಾರೆವು.

ಕನ್ನಡಭಾಷೆಯಲ್ಲಿ ಇಂತಹ ಸ್ಪರ್ಧೆಯನ್ನು ಪ್ರಾರಂಭಿಸಿರುವುದು ಇದೇ ಪ್ರಥಮಪ್ರಯತ್ನವಾದುದರಿಂದ ನಮ್ಮ ವಾಚಕರೆಲ್ಲರೂ ದಯವಿಟ್ಟು ಸ್ಪರ್ಧೆಯತತ್ವವನ್ನು ಸಂಪೂರ್ಣವಾಗಿ ಅರಿತುಕೊಂಡು ಸ್ಪರ್ಧೆಗೆ ಸೇರಿ ಪ್ರಯೋಜನವನ್ನು ಹೊಂದುವುದರ ಮೂಲಕ "ವಿಕಟ ವಿನೋದಿನಿ" ಯನ್ನು ವಾಚನೀಯವನ್ನಾಗಿ ಮಾಡುವರೆಂದು ನಂಬಿರುವೆವು.

ನಮ್ಮ ನಿಬಂಧನೆಗಳನ್ನನುಸರಿಸಿ ಯಾರು ಬೇಕಾದರೂ ಬಹುಮಾನ ಸ್ಪರ್ಧೆಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಾರಂಭಿಸಬಹುದು.



SARASWATHI

(Kannada Monthly)

(ESTD. 1920)

ಸರಸ್ವತಿ

(ಕನ್ನಡ ಮಾಸ ಪತ್ರಿಕೆ)

| — ನವಂಬರ್ ೧೯೫೫ — |

ದೀಪಾವಳಿ ಶುಭಾಶಯಗಳು

'ಸರಸ್ವತಿ' ಚಂದಾದಾರರು, ಜಾಹಿರಾತುದಾರರು, ಲೇಖಕರು
ಕಂದನವನದ ಪುಟ್ಟ ಗೆಳೆಯರು ಹಾಗೂ ಹಿತಚಿಂತಕರಿಗೆಲ್ಲಾ
ನಮ್ಮ ಹೃತ್ಪೂರ್ವಕ ಅಭಿನಂದನೆಗಳು

ಸಂಪಾದಕೆ :
ಆರ್. ಕಲ್ಯಾಣಮ್ಮ

ಪ್ರಕಾಶಕೆ :
ಜಿ. ಆರ್. ಲಕ್ಷ್ಮಣ

ಬಿಡಿ ಪ್ರತಿಕೆ 0—4—0

ವಾರ್ಷಿಕ ಚಂದಾ 3—0—0

Reg. No. M. 3076.

WORLD NEWS PAPER EXIP ON
SHIVALI 5 4,
Shimoga Dist. Karanataka State INDIA

೪೦ ಪುಟಗಳು ಬಿಡಿ ಸಂಚಿಕೆ ೦—೨—೦

ಉತ್ತಮವರ್ಗದ ಮಾಸಪತ್ರಿಕೆ

ಕತೆಗಾರ

ಸಂಪಾದಕರು ಎಂ. ಎಸ್. ನಾರಾಯಣರಾವ್, ಬಿ. ಎ. ಎಲ್‌ಎಲ್. ಬಿ.

ಸಂಪುಟ ೧) ಜುಲೈ ೧೯೩೪ (ಸಂಚಿಕೆ ೧೦



೬—೬—೧೯೩೪ನೇ ತಾರೀಖಿನ ೧೯೩೩—೩೪ನೇ T. B. C. ೧೫೬೫ನೇ ನಂಬರು ಆರ್ಡರ್ ಮೂಲಕ ವಿದ್ಯಾಭ್ಯಾಸದ ಇಲಾಖೆ ಡೈರೆಕ್ಟರ್‌ರವರು ಮಿಡಲ್ ಸ್ಕೂಲ್, ಹೈಸ್ಕೂಲ್, ಮತ್ತು ನಾರ್ಮಲ್ ಸ್ಕೂಲುಗಳ "ರೀಡಿಂಗ್ ರೂಮ್"ಗಳಿಗೆ 'ಕತೆಗಾರ' ಪತ್ರಿಕೆಯನ್ನು ಮಂಜೂರ್ಮಾಡಿದ್ದಾರೆ.

ಪ್ರಕಾಶಕರು ಕತೆಗಾರ ಪ್ರಕಟಣಾಲಯ, ೪೯, ಚಿಕ್ಕಪೇಟೆ, ಬೆಂಗಳೂರು ಸಿಟಿ.

ವಿಷಯಾನುಕ್ರಮಣಿಕೆ

೧. ತುಂತುರುಗಳು
೨. ಮದರಾಸ್ ಟೋಪಿ–ಮೈಸೂರು ರುಮಾಲು ಶ್ರೀ. 'ಬಾಲಶಶಿ'
೩. ಸಾಹಿತ್ಯ ಸೇವೆ .... ,, ಬಿ. ನರ್ಸಪ್ಪ.
೪. ಹರ್ಷಸುಧಾ .... ,, ಪೋ ನ. ನಾ.
೫. ಹೊಸಜೀವ .... ,, ನಾಗರಾಜ.
೬. ಸಾರುವ ಧ್ವನಿ .... ,, 'ತ್ರಿಮೂರ್ತಿ'
೭. ಪ್ರೇಮವಿಜಯ .... ,, ಎಂ. ಎನ್. ಜಿ.
೮. ತಿವಾರಿ .... ,, ಕೆ. ವಿಶ್ವೇಶ್ವರಗೌಡ.
೯. ಟೀಪೂ .... ,, ಕೃ. ಹ. ಕುಲಕರ್ಣಿ.
೧೦. ಸಾಹಿತ್ಯಪರಿಚಯ ....
೧೧. ಸಂಪಾದಕರ ನುಡಿ ....

ಅಖಿಲ ಕರ್ನಾಟಕದಲ್ಲೆಲ್ಲಾ ಕಾದಂಬರಿಗಳ ಪ್ರಕಟಣಾ ಕಾರ್ಯಕ್ಕಾಗಿ ಜನ್ಮವೆತ್ತಿರುವ ಮಾಸಪತ್ರಿಕೆ

ಕಾದಂಬರಿ ಸಾಗರ

ಕರ್ನಾಟಕದ ಪ್ರಸಿದ್ಧ ಕಾದಂಬರಿಕಾರರ ಕಾದಂಬರಿಗಳು
ನಾಟಕಗಳು ಉತ್ತಮ ವರ್ಗದ ಸಣ್ಣ ಕಥೆಗಳು
ಕವಿತೆಗಳು ಪ್ರಕಟವಾಗುತ್ತವೆ.

ಸ್ವಳದಲ್ಲಿ ವಾ॥ ಚಂ॥ ರೂ ; **ಪರಸ್ವಳದಲ್ಲಿ :** ವಾ॥ ಚಂ॥ ೨॥ ರೂ.

ಒಂದು ವರ್ಷದಲ್ಲಿ ನಾಲ್ಕು ಸಂಪೂರ್ಣ ಕಾದಂಬರಿಗಳೂ,
ನಾಲ್ಕು ಸಂಪೂರ್ಣ ನಾಟಕಗಳೂ ಚಂದಾದಾರರ
ಕೈಸೇರುತ್ತವೆ.

"ಭಾರತಿ"

ಚಂದಾ ರೂ. ೨-೦-೦] [ಅಂಚೆ ಸೇರಿ ರೂ. ೨-೪-೦

ಕನ್ನಡ ವಿದ್ಯುನ್ಮಣಿಗಳ ಲೇಖನ, ಕತೆ, ಕವಿತೆಗಳಿಂದ ಕೂಡಿದ್ದು ಪ್ರತಿ ತ್ರೈಮಾಸಗಳಾಂತ್ಯಕ್ಕೆ ತಪ್ಪದೇ ಹೊರಬೀಳುವುದು. ಹುಲಮೂರ್ಖ ಮತ್ತು ಬರ್ಮಾದೇಶದ ಪ್ರಾಂತ್ಯಗಳಲ್ಲಿ ಸರ್ವಕ್ಕೂ ನಿಮ್ಮ ಜಾಹೀರಾತುಗಳು ಪ್ರಚಾರವಾಗಬೇಕೆಂದಿದ್ದರೆ 'ಭಾರತಿ' ಯಲ್ಲಿ ಕೊಡುವ ಜಾಹಿರಾತು ತುಂಬಾ ಪಲಕಾರಿಯಾಗುವುದೆಂಬುದೆನ್ನು ಮರೆಯದಿರಿ.

ಮೊದರಿ ಸಂಚಿಕೆಗೆ ಬರೆಯಿರಿ

ಮ್ಯಾನೇಜರ್
"ಭಾರತಿ" ಕಾರ್ಯಾಲಯ, ಮೂಲಕ. ದ. ಕ

ಅರ್ಥಸಾಧಕ ಪತ್ರಿಕೆ

ಇದು ಮೈಸೂರು ಸಂಪದಭಿವೃದ್ಧಿ ಸಮಾಜದ ಆಶ್ರಯದಲ್ಲಿ **ಪ್ರತಿ ಸೋಮವಾರವೂ** ಪ್ರಕಟವಾಗುವುದು. ದೇಶದ ಸಂಪದಭಿವೃದ್ಧಿಗೆ ಸಹಾಯಕವಾದ ವಿದ್ಯೆ, ವಾಣಿಜ್ಯ ವ್ಯಾಪಾರ ವ್ಯವಸಾಯ, ಕೈಗಾರಿಕೆ, ಪರಸ್ಪರ ಸಹಾಯ, ಪೌರ ಸಾಮಾಜಿಕ ಮುಂತಾದ ವಿಷಯಗಳೂ, ದೇಶ ವಿದೇಶ ವರ್ತಮಾನಗಳೂ, ಇದರಲ್ಲಿ ಆಡಕವಾಗಿವೆ. ಆರ್ಥಿಕ ಸಾಮಾಜಿಕ ಮುಂತಾದ ವಿಚಾರಗಳನ್ನು ಚಿತ್ರಿಸುವ ಮನೋಹರವಾದ ಸಣ್ಣ ಕಥೆ, ದೃಶ್ಯ, ಕವಿತೆ–ಇವುಗಳೂ ಆಗಾಗ್ಗೆ ಬರುವುವು. ಪ್ರತಿ ವಾರವೂ ಪುಸ್ತಕ ರೂಪವಾಗಿ ಕನ್ನಡದಲ್ಲಿ ಹೊರಡುವ ಪತ್ರಿಕೆಯು ಇನ್ನೊಂದಿಲ್ಲ.

ಚ ಂ ದಾ ದ ರ

ಬೆಂಗಳೂರಲ್ಲಿ ವರ್ಷಕ್ಕೆ ರೂ. ೧–೧೨–೦.
ಪರಸ್ಥಳದಲ್ಲಿ ಅಂಚೆಯ ಹಾಸಲೂ ಸೇರಿ ,, ರೂ. ೨–೮–೦.

ಅರ್ಥಸಾಧಕ ಪತ್ರಿಕೆ ಆಫೀಸ್,
ನಾಗಸಂದ್ರದ ರೋಡ್, ಬಸವನಗುಡಿ, ಬೆಂಗಳೂರು ಸಿಟಿ.

ಧಾರವಾಡದ ಕನ್ನಡ ನಾಟ್ಯವಿಲಾಸಿ ಸಂಘದವರ ಆಶ್ರಯದಲ್ಲಿ ಹೊರಡುವ

ಪ್ರೇಮ

(ತ್ರೈಮಾಸಿಕ)

ಸಂಪಾದಕರು ಪಂಡಿತ ತಾರಾನಾಥರು

ಏಕಾಂಕ ನಾಟಕ, ಸಣ್ಣಕತೆ, ನಾಟ್ಯಕಲೆಗೆ ಸಂಬಂಧಿಸಿದ ಪ್ರೌಢ ಲೇಖನಗಳು ಬರುವುವು

ಕರ್ನಾಟಕ ನವಚೈತನ್ಯದ ಮುಖಪತ್ರಿಕೆ

ವಾರ್ಷಿಕ ಚಂದಾ ವಿ.ಪಿ ಮೂಲಕ ೨–೯–೦ ಮ.ಅ. ೨–೬–೦.

ಬಡವನ ಬಂಧು

ಏನ ಪ್ರತಿಯು ಒಂದೂ ಉಳಿಯದಿರಲು ಕಾರಣವೇನು ?— ಅದರಲ್ಲಿ ಪ್ರತಿ ತಿಂಗಳೂ ಪ್ರಕಟವಾಗುವ ಉತ್ಕೃಷ್ಟ ಕಥೆ, ಬೇಕೆನಿಸುವ ಕವನ, ನಗಿಸುವ ಏನೋದ, ಜ್ಞಾನಾರ್ಜನೆಯ ಒಗಟು ಇವೇ ಕಾರಣ.

ಜಾಹೀರಾತಿಗೆ ಉತ್ತಮ ಪತ್ರಿಕೆಯೆಂದರೆ ಇದೊಂದೇ ! ಜುಲೈತಿಂಗಳೊಳಗೆ ಹೊಂದಾದರರಾಗುವವರಿಗೆ ಒಂದು ವಿಶೇಷ ಸಂಚಿಕೆ ಇರುವುದು.

ವಾರ್ಷಿಕ ಚಂದಾ (ಅಂಚೆ ವೆಚ್ಚ ಸೇರಿ) ಬರೇ ೧–೪–೦

ಒಡವರ ಬಂಧು ಆಫೀಸ್
ಬೆಂಗಳೂರು ದ ಕ

Approved by The Director of Public Instruction, in Mysore State,
for the Reading Rooms of High, Middle and Normal Schools,
in T. B.C. No 133 of 1933-34 dated 6-6-34.

ಕರ್ಣಾಟಕ
ನೂತನ
ಕಥಾವಾಹಿನಿ

ಕ ತೆ ಗಾ ರ

ವಾರ್ಷಿಕ ಚಂದಾ
ಬೆಂಗಳೂರಲ್ಲಿ ಮೈಸೂರಲ್ಲಿ } ೧-೮-೦
ಪರಸ್ಥಳಕ್ಕೆ ೧-೧೪-೦
ಪೋಷಕರಿಗೆ ೨-೪-೦
ಬಿಡಿ ಸಂಚಿಕೆ ೦-೨-೦

ಸಣ್ಣ ಕತೆಗಳ ಮಾಸಪತ್ರಿಕೆ.

ಸಂಪುಟ ೧ | ಜುಲೈ ೧೯೩೪ | ಸಂಚಿಕೆ ೧೦

ತುಂತುರುಗಳು

ಹುಚ್ಚ:—(ಆಸ್ಪತ್ರೆಯಲ್ಲಿ) ಡಾಕ್ಟರ್‌ಸಾಹೇಬರೇ ತಾವು ಮುಂಚಿನವರಿಗಿಂತ ಒಳ್ಳೆಯವರಾಗಿದ್ದೀರಿ.

ಡಾಕ್ಟರು:—ಅದು ಹೇಗೆ ?

ಹುಚ್ಚ:—ನೀವೂ ನಮ್ಮ ಜೈಕಿ ಒಬ್ಬರಾದ್ದರಿಂದ.

ಒಂದು ಹರಿಕಥೆ ನಡೆಯುತ್ತಿದ್ದಾಗ ಸ್ವಾರಸ್ಯಬೀಳದು ದರಿಂದ ಎಲ್ಲರೂ ಹೊರಟುಹೋದರು. ಒಬ್ಬನು ಮಾತ್ರ ಹೋಗದೆ ಕುಳಿತಿದ್ದುದರಿಂದ ಹರಿಕಥೆ ದಾಸರು ಕೊನೆಯವರಿಗೂ ಹೇಳಿ ಮುಗಿಸಿ, ಅವನನ್ನು ಕುರಿತು 'ಸ್ವಾಮಿ, ನಿಮ್ಮೊಬ್ಬರಿಗೆ ಮಾತ್ರ ನನ್ನ ಹರಿಕಥೆಯ ಸ್ವಾರಸ್ಯ ತಿಳಿಯಿತು' ಎಂದರು.

'ನಿಮ್ಮ ಕಥೆ ಸ್ವಾರಸ್ಯಕ್ಕಲ್ಲ ನಾನು ಕುಳಿತಿದ್ದದ್ದು. ಈ ಸಂಖ್ಯಾನೆ ನನ್ನದಲ್ಲದೇ ಹೋಗಿದ್ದರೆ ಯಾವಾಗಲೋ ಹೊರಟು ಹೋಗಿರುತ್ತಿದ್ದೆ.' ಎಂದವನು ಉತ್ತರ ಕೊಟ್ಟಾಗ ದಾಸರ ಪೋರೆ ನೋಡಬಾರದುದಾಯಿತು.

ಪೀಡಿತ ಜನೋದ್ಧಾರಿಣೀ ಸಮಾಜದ ಉಪದೇಶಿಗ ಳೊಬ್ಬರು ಪಂಚಮರ ಹಳ್ಳಿಯಲ್ಲಯೇ ಸ್ಥಿರವಾಸ್ತವ್ಯ ಮಾಡಿ ಕೊಂಡು 'ಬ್ರಹ್ಮ' ಜ್ಞಾನವನ್ನು ಭೋಧಿಸತೊಡಗಿದ್ದರು. ವರ್ಷಾಂತದಲ್ಲಿ ವಾರ್ಷಿಕೋತ್ಸವವು ನಡೆದ ಸಂದರ್ಭದಲ್ಲಿ ಸೇರಿದ ಸಭಿಕರನ್ನುದ್ದೇಶಿಸಿ 'ವಿದ್ಯಾವಂತ' ಪಂಚಮನೊಬ್ಬನು ಮಾತನಾಡುತ್ತ, ಉಪದೇಶಿಗಳನ್ನು ಬಹಳವಾಗಿ ಶ್ಲಾಘಿಸಿ,— 'ಹೆಚ್ಚೇಕೆ? ಪೂಜ್ಯರಾದ ಈ ಉಪದೇಶಿಗಳು ಬಂದು ಹೇಳಿಕೊಡುವುದಕ್ಕೆ ಪೂರ್ವದಲ್ಲಿ ಶುದ್ಧ ಮೂಢರಾದ ನಮಗೆ 'ಪಾಪ' ಪೆಂದರೇನೆಂದು ಕೂಡ ತಿಳಿದಿರಲಿಲ್ಲ!' ಎಂದನು. ಸಭಿಕರು ಹೇಗೆ ಗ್ರಹಿಸಿಕೊಂಡರೋ—ಅರಿಯೆವು. ಆದರೆ ಉಪದೇಶಿಗಳ ಮೂತಿ ಮಾತ್ರ ತತ್ಕಾಲದಲ್ಲಿ ಬಣ್ಣ ಇಳಿದುಹೋಯಿತೆಂದು ಒಂದು ಹಾಲುಹಕ್ಕಿ ನಮ್ಮ ಕಿವಿಯಲ್ಲಿ ಪಿಸುಗುಟ್ಟುತ್ತಲಿವೆ.

ಕತೆಗಾರ

ಮದರಾಸ್ ಟೋಪಿ--ಮೈಸೂರು ರುಮಾಲು

ಪೆಂಕಪ್ಪ ಶಾಸ್ತ್ರಿಗಳು ನಲವತ್ತೇ ವರ್ಷದ ಯುವಕರು. ಅವರನ್ನು ಒಮ್ಮೆ ನೋಡಿದರೆ ಸಾಕು, ಆ ದಿನ ನಿಮಗೆ ಅನ್ನ ಸೇರಿದರೆ ನನ್ನಾಣೆ! ಅಷ್ಟು ನಾಜೂಕು ಅವರ ಉಡಿಗೆತೊಡಿಗೆ. ಉಟ್ಟ ಪಂಚೆ ಎಷ್ಟು ದಿನವಾಗಿತ್ತೋ ನೀರಿನ ಮುಖ ಕಂಡು! ತೊಟ್ಟಿದ್ದ ಬನಿಯನ್ ಒಳ್ಳೆ ಮಯಣಗಬುಡ; ನಾಲ್ಕು ಹದ ನೀರು ಬಿದ್ದರೂ ಅದೇನೋ ತೊಯ್ಯುತ್ತಿರಲಿಲ್ಲ. ಅಪರೂಪವಾಗಿ ಊರಿಗೆ ಹೋಗುವಾಗ ಒಂದು ಅಂಗಿಹಾಕಿಕೊಳ್ಳುತ್ತಿದ್ದರು. ಅದು ಅವರ ಮೊದಲು ಮದುವೆಯಲ್ಲಿ ಮಾಪ ಕೊಟ್ಟ ಉಡುಗೊರೆಯಂತೆ (ಅಂದರೆ ೧೯೧೮ನೇ ಇಸವಿ ಮಾತು) ಮದುವೆ ಮಾತೆತ್ತಿದರೆ ಒಂದು ಕತೆ ನೆನಪಿಗೆ ಬರುತ್ತೆ; ಕೇಳಿ.

ಶಾಸ್ತ್ರಿಗಳು ಜೋತಿಷ್ಯ ಹೇಳುತ್ತಿದ್ದರು. ನೋಡುವುದಕ್ಕೆ ಅಷ್ಟು ಕೊಳಕಾಗಿದ್ದರೂ ಅವರು ಹೇಳಿದ್ದೆಲ್ಲ ಗಡಿಯಾರ ನಡೆದಂತೆ ನಡೆಯುತ್ತಿತ್ತು. ಪ್ರಶ್ನೆ ಹೇಳುವುದು ಅವರ ತಂದೆಯವರಿಂದ ಬಂದ ಒಂದೇ ಆಸ್ತಿ. ನಮ್ಮೂರಿಗೆಲ್ಲ ಅವರೇ ಹೆಸರು ಹೊಂದಿದ ಜೋಯಿಸರು. ಅವರಿಗೆ ಒಂದುಕಾಲು ಕುಂಟು. ಆದ್ದರಿಂದ ಕುಂಟ ಜೋಯಿಸರೆಂದು ಅಡ್ಡ ಹೆಸರು ಬಿದ್ದುಬಿಟ್ಟಿತ್ತು. ಅವರಿಗೆ ಬೀದಿಯಲ್ಲಿ ಹೋಗುವಾಗ ಆಡುವ ಮಕ್ಕಳು ಕೂಡ ಅದೇ ಹೆಸರಿನಿಂದ ಕೂಗುವರು. ಆದರೆ ಕೋಪಿಸಿಕೊಳ್ಳುವವರಲ್ಲ ಆ ಬ್ರಾಹ್ಮಣ. ಮಕ್ಕಳಿಲ್ಲದ ಅವರಿಗೆ ಮಕ್ಕಳೆಂದರೆ ಆಸೆ. ತೊದಲ್ನುಡಿಯಿಂದ ಹಾಗೆನ್ನುವ ಹುಡುಗರಿಗೆ ತಿಂಡಿ ತಂದುಕೊಟ್ಟು, "ನಮ್ಮ ಕುಂಟು ಜೋಯಿಸರು ಒಳ್ಳೋರು" ಎನ್ನಿಸಿಕೊಳ್ಳುವುದೇ ಆನಂದ.

ಹದಿನೈದು ವರ್ಷದ ಹಿಂದಿನ ಮಾತು. ಜೋಯಿಸರಿಗೆ ಮದುವೆಯಾಗಬೇಕೆಂಬ ಆಸೆಯ ಕಾಲ. ಕುಂಟು ಕಾಲಾದರೂ ಆಸ್ತಿ ಬಹಳ ಇದ್ದುದರಿಂದ ಬಹು ಮಂದಿ ಹೆಣ್ಣು ಕೊಡಲು ಮುಂದೆ ಬಂದರು. ಎಲ್ಲ ಹುಡುಗಿಯರ ಜಾತಕಗಳನ್ನೂ ನೋಡಿ ಅವುಗಳಲ್ಲಿ ಉತ್ತಮನಾದ, ಹಾಗೂ ರೂಪವತಿಯಾದ ಹೆಣ್ಣನ್ನೇ ಆರಿಸಿ ಮದುವೆಯಾದರು.

ನಮ್ಮ ತುಟಿಗಳ ಕಪ್ಪು ನಮಗೆ ಕಾಣಿಸದು. ಜ್ಯೋತಿಷ್ಯರ, ವೈದ್ಯರ ವಿಷಯದಲ್ಲಿ ಇದು ಅನ್ವಯಿಸುವುದು ಇನ್ನೂ ಜೆನ್ನಾಗಿ. ಶಾಸ್ತ್ರಿ—ಸತೀ ಶಾಸ್ತ್ರಿ ಇವರ ದಾಂಪತ್ಯ ಮಾದರಿಯಾದಾಗಿತ್ತು. ಆದರೆ ಆ ಸ್ಥಿತಿಯಲ್ಲಿ ಚಿರಕಾಲವಿರುವ ಭಾಗ್ಯವಿತ್ತೆ ಆ ಬಡ ಬ್ರಾಹ್ಮಣನಿಗೆ? ಹೆಂಡತಿ ಮನೆಗೆ ಅಡಿಯಿಟ್ಟು ತಿಂಗಳೊಳಗೇ ಟಿಕೆಟನ್ನು ತೆಗೆದುಕೊಂಡಳು ಇಹ ಸಂಸಾರದ ಆಚೆಯ ದಡಕ್ಕೆ!

* * * *

ಹದಿನೈದು ವರ್ಷ ಜೋಯಿಸರ ಜೀವನವು ಒಂದೇ ಕಾಲಿನದು. ಹದಿನೈದು ವರ್ಷಗಳು ಕಾಲಚಕ್ರದ ಪರಿಧಿಯಲ್ಲಳಿಸಿ ಹೋಗುತ್ತಿರಲು ಜಗಜ್ಜೀವನದಲ್ಲಿ ಎಷ್ಟು ಬದಲಾವಣೆಗಳಾಗಲಿಕ್ಕಿಲ್ಲ? ಜೋಯಿಸರ ಐಶ್ವರ್ಯವು ಅಚ್ಚರಿಗೊಳಿಸುವಷ್ಟು ಬೆಳೆಯಿತು; ಮುರುಕು ಮನೆ ಬಿದ್ದು ಮಣ್ಣಾಯಿತು. ಅದರೆಡೆ ಮಹಡಿಮನೆಯಾಯಿತು. ಅವರ ಕೀರ್ತಿಯು ಗಾಳಿಯಂತೆ ಸರ್ವತ್ರ ಹರಡಿತು. ಆದರೆ ಒಂದು ಮಾತ್ರ ಕೊರತೆ—ಅವರು ತಮ್ಮ ಅಂಗವಿಹೀನತ್ವಕ್ಕೆ ಯೋಚಿಸುತ್ತಿರಲಿಲ್ಲ. ಪೈಯುಕ್ತಿಕ ನಚ್ಚಿನಂತೆ ಹಂಬಲಿಸುತ್ತಿರಲಿಲ್ಲ. ಸಾಂಘಿಕ ಅಸಹನೀಯತೆಯಿಂದ ಭೀತಿಗೊಳ್ಳುತ್ತಿರಲಿಲ್ಲ. ತನ್ನ ಆಸ್ತಿಯೂ ಕೇಳುವವರಿಲ್ಲದೆ ಹೋಗುತ್ತದಲ್ಲ ಎಂಬ ಸಂಕಟವಾತನಿಗೆ. ಐಹಿಕ ಸಂಸಾರದಲ್ಲಿ ಚಿರಮೈತ್ರಿಯ ಮೈತ್ರಿಯಿಲ್ಲವಲ್ಲ ಎಂಬ ಕಾತುರತೆ.....ಈ ಯೋಚನೆಗಳಲ್ಲಿ ಹದಿನೈದು ಗಟ್ಟಿ ವರ್ಷಗಳು ತುಳಿದುವು. ಗಟ್ಟಿಮುಟ್ಟಾಗಿದ್ದ ಮೈಗಟ್ಟು ಬರಬರುತ್ತ ಹಳೆಯದಾಗುತ್ತ ಬಂದಿತು. ಮುರುಕುಮನೆಯನ್ನು ಹೊಡೆಸಿ ಹೊಸ ಮನೆ ಕಟ್ಟಿಸಿದ—ಅದೇ ರೀತಿ ತನ್ನ ಜೀವದ ಗೂಡೂ ಸಹ ಆರ್ಧ ಮುರುಕು ಬಿದ್ದಿತ್ತು. ಈಗ ಜೋಯಿಸನಿಗೆ ನಲವತ್ತು ವರ್ಷ. ಮದುವೆಯ ಹಂಬಲು ಇನ್ನೂ ಉತ್ಕಟವಾಗಿತ್ತು. ಮೇಲೆ ನಮ್ಮಂತಹ ತರುಣರ ಸೌಖ್ಯ (ನಮ್ಮ ಸೌಖ್ಯ ನಮಗೇ ಗೊತ್ತು, ಕೆಲಸವಿಲ್ಲದೆ ಲಾಟರಿ ಹೊಡೆಯುವ ಸುಖ—ಮನೆಯ ತಿಗಣೆಗಳಂತೆ ಹೆತ್ತವರ ಬಿಸಿರಕುತ ಹೀರುವ—ಅದೂ ಅವರು ಶಾಂತತೆಯ ನಿದ್ದೆ ಬಯಸಿದಾಗ—ಸುಖ) ನೋಡಿ ಒಂದು ತರಹೆ ಅಸೂಯೆ ಹುಟ್ಟಿತು. ಹೇಗಾದರೂ ಮಾಡಿ ಮದುವೆ ಮಾಡಿಕೊಳ್ಳಬೇಕೆಂಬ ಹಂಬಲಿಕೆಯುಂಟಾಯಿತು. ಆದಕ್ಕೆ ಸರಿಯಾಗಿ ನಾವೂ ಆತನನ್ನು

ಹೇಯಾಳಿಸುತ್ತಿದ್ದೆವು–ವಿಧುರನಾದ ಒಂಟಿ ಬ್ರಾಹ್ಮಣನೆಂದು. (ನನಗೂ ಆತನಿಗೂ ಬಹು ಸ್ನೇಹ. ಇಡ್ಲಿ–ಸಾಂಬಾರಿಗಿದ್ದಂತೆ)

'ಲೋ ಸುಂದರ್, ನಿನ್ನಿಂದ ಒಂದು ಕೆಲಸ ಆಗಬೇಕು, ಆಗುತ್ತೋ ಇಲ್ಲೋ ಹೇಳು ?' ಎಂದ ಒಂದು ಸಂಜೆ.

'ಆಗುತ್ತೋ ಇಲ್ಲೋ ಪ್ರಶ್ನೆ ನೋಡು' ಎಂದೆ.

'ನೋಡಿದೆಯಾ, ನೀನೂ ಷರು ಮಾಡಿದೆ ಗೇಲಿ ಎಬ್ಬಿಸೋದಕ್ಕೆ–ಆಗುತ್ತೋ ಇಲ್ಲವೋ ಹೇಳು ಖಂಡಿತ'

'ಏನು ಹೇಳಿ ಬಿಡು. ಆದರೆ ಆಗುತ್ತೆ;....ಇಲ್ಲದಿದ್ದರೆ .....'

'ರಾಂರಾಂ. ದೋಷವಿಲ್ಲ ಅನ್ನು–ಅನ್ನು ದೋಷವಿಲ್ಲ ಅಂತ....'

'ಅನ್ನೋಣ–ನಿನ್ನ ಕಂತೆ ಬಿಚ್ಚು'

'ಏನೂ ಇಲ್ಲ ಸುಂದರ್ ; ಈಗ ನಂಗೆ ೪೦ ವರ್ಷ ನಡೀತಿದೆ... ....

'ಓಹೋ ಅದೇ ತಾನೆ ?'

'ಆಗಲೇ ಬೇಜಾರು ಪಟ್ಟುಕೋ ಬೇಡ, ನಾನು ಮುಗಿಸುವ ವರೆಗೂ ಕೇಳು ...'

'ಕೇಳೋದೇನು. ನಿನಗೂ ೪೦ ತುಂಬುತಾ ಬಂದಿದೆ. ೪೦ ಕೊಡ ತುಂಬೋ ಅಷ್ಟು ಆಸ್ತಿ ಇದೆ. ಇನ್ನೂ ಬೆಳೀತಿದೆ ಪಾಪಾಸುಕಳ್ಳಿ ಬೆಳೆದಂತೆ.....'

'ಪಾಪಾಸುಕಳ್ಳಿಯೇನೋ ನನ್ನ ಆಸ್ತಿ ?'

'ಛೆ, ಹಾಗೆಂದೆನೇ ನಾನು ? ಹೇಳಿದ್ದನ್ನೆಲ್ಲಾ ಹೀಗೆ ವಿಪರೀತ ಅರ್ಥ ಮಾಡಿಕೊಂಡರೆ ನಮ್ಮ ಉಳಿಗಾಲ ಬೇಗೆ ? .....ಇರಲಿ ಆಸ್ತಿ ನೋಡಿಕೊಳ್ಳೋಕೆ ಯಾರೂ ಇಲ್ಲ; ಪಿತ್ಥ ನೆತ್ತೀಗೇರಿದಾಗ ಹೊಡೆಯೋಕೆ ಯಾರೂ ಇಲ್ಲ ... '

'ಹಾಗಾದರೆ ಮೊದಲ ಹೆಂಡತಿಯನ್ನು ಹೂತೆಯುತ್ತಿದ್ದೆ ನೆಂತೋ ನಿನ್ನ ಧಾವನೆ ?'

'ನಿಮ್ಮ ಮೊದಲ ಹೆಂಡತಿ ಇದ್ದಾಗ ನಂಗೆ ಬುದ್ಧಿ ಬಂದಿತ್ತೋ ಇಲ್ಲವೋ ಅದೇ ಗೊತ್ತಿಲ್ಲ. ಈಗ ಮದುವೆ ಆಗಬೇಕೂಂತ ನಿನ್ನ ಉದ್ದಿಶ್ಯ. ಅಷ್ಟೇತಾನೆ ?'

'ಅಷ್ಟೇ ಅಲ್ಲ. ಮದುವೆ ಎಂದ ಮೇಲೆ ಹೆಣ್ಣು ಕುರೂಪಿಯಾಗಿರಬಾರದು. ವಿದ್ಯೆ ಇರಬೇಕು. ಬುದ್ಧಿ ಇರಬೇಕು. ಗುಣ ಚೆನ್ನಾಗಿರಬೇಕು. ನಮಗೇನು ಕಾಲೇಜು–ಗೀಲೇಜು ಹುಡುಗೇರೇ ಬೇಕೂ ಅಂತಿಲ್ಲ. ಆ ವೈಯ್ಯಾರ–ಸೊಗಸು–ಬೆಡಗು .....ಈ 'ಐ' ಟಕ್ಕುಗಳೇನೂ ಆಗತ್ಯವಿಲ್ಲ. ಹುಡುಗಿ ಲಕ್ಷಣವಾಗಿ ಗುಣ, ನಡತೆ ಸರಿಯಾಗಿದ್ದರೆ ಅಷ್ಟೇ ಸಾಕು. ನನಗೂ ಹಾಗೆ ಎಲ್ಲಾದರೂ ತಗುಲಿಕಟ್ಟಿ ಪುಣ್ಯ ಕಟ್ಟಿಕೋ....'

* * * *

ಹಿಂದೂಪೇಪರಿನಲ್ಲಿ ಒಂದು ಕನ್ಯೆಗೆ ವರಬೇಕೆಂದು ಜಾಹೀರಾತಿತ್ತು. ಅದರಿಂದ ಇಷ್ಟುಮಾತ್ರ ತಿಳಿದುಬಂತು.

ಕುಮುದೆ ಹದಿನಾರು ವಯಸ್ಸಿನ ಹುಡುಗಿ. ನೋಡಲಿಕ್ಕೆ ಅಂದವಾಗಿಯೇ ಇದ್ದಳು. (ಈಗಿನ ಕಾಲದಲ್ಲಿ ಅಂದವನ್ನು ಅಂದವಲ್ಲದ್ದರಿಂದ ಭೇದಿಸುವುದು ಕಷ್ಟ.) ಬೇರಾಗಿ ಕುಮುದೆ ಇರುವುದು ಮದರಾಸಿನಲ್ಲಿ ತಂದೆ ಹೆಸರು ಹೊಂದಿದ ವಕೀಲರು. ಮಗಳಿಗೆ ಸಂಗೀತವನ್ನು ಬಹು ಚೆನ್ನಾಗಿ ಕಲಿಸಿದ್ದರು. ಆಕೆಯ ಶಾರೀರವೂ ಇಂಪಾಗಿತ್ತು. ರೂಪಕ್ಕೆ ತಕ್ಕ ಲಾವಣ್ಯವೂ ವಿದ್ಯೆಯೂ ಇತ್ತು. ಜೋಯಿಸರಿಗೆ ತಕ್ಕ ಕನ್ಯೆಯೆಂದುಕೊಂಡೆ. ಶಾಸ್ತ್ರಿಗೆ ಹೇಳಿದೆ ಈ ವಿಚಾರ. 'ಒಳ್ಳೇ ಸಂಬಂಧ ಆದರೆ ಅವರೆಲ್ಲಿ ಒಪ್ಪುತ್ತಾರೋಪ್ಪ–ಆಗಲಿ ನಾನೇ ಹೋಗಿ ನೋಡಿಕೊಂಡು ಬರೋಣ. ಕೊಟ್ಟರೆ ನಮ್ಮ ಅದೃಷ್ಟ. (ಕೊಡದಿದ್ದರೆ ಅವರ ಪುಣ್ಯ) ಎಂದ. 'ಅಯ್ಯೋ ಮಹಾರಾಯ; ಪಧ್ಯಕ್ಕೆ ನೀವು ಇಲ್ಲೇ ಇರ್ರಿ. ನಾನೂ ಇನ್ನಾರಾದರೂ ಹೋಗಿ ಬರುತ್ತೇವೆ. ನೀವು ಬಂದರೆ ನಿಮ್ಮ ಕಾಲು ನೋಡಿದ ತಕ್ಷಣ.....ಒಂದುವೇಳೆ ಆ ವಕೀಲರು ನಿಮ್ಮನ್ನು ನೋಡಿಕೊಂಡು ಬೋಗಬೇಕೆಂದು ಬಂದರೆ ಏನು ಗತಿ ?' ಎಂದೆ.

'ಆ ವಿಷಯ ನಂಗೆ ಬಿಡು. ಮಾತ್ರ ನೀವು ಬರುವಲ್ಲಿ ತಂತಿ ಕಳುಹಿಸು' ಎಂದುತ್ತರವಿತ್ತ.

ಆ ಸಾಯಂಕಾಲ ಮದರಾಸು ಮೈಲು ಪುಣ್ಯವಾಡಿತ್ತು ನನ್ನ ಕೂರಿಸಿಕೊಂಡು ಹೋಗಲಿಕ್ಕೆ (ಅಥವಾ ನಾನು ಪುಣ್ಯ ಮಾಡಿದ್ದೆನೋ– ಎರಡೂ ಒಂದೆ.)

ಮದುವೆಗೆ ಒಬ್ಬ ಮಧ್ಯಸ್ಥಗಾರನಾಗಬೇಕಲ್ಲ. ನನಗೆ ಆ ಬ್ರಹ್ಮಪಟ್ಟ ವಹಿಸಲು ಯೋಗ್ಯತೆ ಸಾಲದೆಂದು ಜೇರೆ ಓಡಿದ

ಹೇಳಬೇಕಾಗಿಲ್ಲ. ಏಕೆಂದರೆ ಜೋಯಿಸರು–ಕೈಲು ಕಂಬಿ, ನಾನು–ನೂರ ಹನ್ನೊಂದು, (ಕೋಪಿಸಿಕೊಳ್ಳಬೇಡಿ; ಅವುಗಳೇ ನಮ್ಮ ಟ್ರೇಡ್ ಮಾರ್ಕುಗಳು) ಮೇಲಾಗಿ ನಾನಿನ್ನೂ ಚಿಕ್ಕವ. ವ್ಯವಹಾರಗಳಿಗೆ ಮೈನರ್. ಅಲ್ಲದೆ ನನಗೂ ಆ ವಕೀಲರಿಗೂ ಪರಿಚಯವೇ ಇರಲಿಲ್ಲ. ಮೈಲಾಪುರದಲ್ಲಿ ಜೋಯಿಸರ ದೂರದ ನೆಂಟರೊಬ್ಬರಿದ್ದರು. ಅವರಲ್ಲಿ ಹೋಗಿ ವಿಷಯ ತಿಳಿಸಿದೆ. ಅಲ್ಲಿ ಆ ಮಧ್ಯಾಹ್ನ ಕಾಫಿ ತೆಗೆದುಕೊಂಡು ಹೊರಟೆವು ಕನ್ಯಾಭಿಕ್ಷೆಗೆ. ಆಗ ಸಂಜೆ ನಾಲ್ಕೂವರೆ ಘಂಟೆ. ಕುಮುದೆ ಇದ್ದುದು ಅಡ್ಯಾರಿನಲ್ಲಿ. ನಾವು ಹೋಗುವಾಗ್ಗೆ ವಕೀಲರು ತಮ್ಮ ಬಂಗಲೆಯ ಅಂಗಳದಲ್ಲಿ ಕೂತು ಪೇಪರ್ ಓದುತ್ತಿದ್ದರು. ಮಹಡಿಯ ಮೇಲೆ ಕುಮುದೆ ಹಾಡುತ್ತಿದ್ದಳು.

ಮಾತು ಕತೆಯಾದಮೇಲೆ

'ಬಹಳ ಸಂತೋಷ. ನೀವೇನು ಓದುತ್ತಿದೀರಿ?' ಎಂದರು ವಕೀಲರು ನನ್ನನ್ನು ಕುರಿತು.

'ನನಗೆಲ್ಲ ಸರ್;—ನಾವು ಅಯ್ಯಂಗಾರ್ರು ನಮ್ಮ ಸ್ನೇಹಿತರೊಬ್ಬರಿದಾರೆ ವೆಂಕಪ್ಪ ಶಾಸ್ತ್ರಿಗಳು ಎಂತ.'

'ಓಹೋ Excuse me ನಾನು ನಿಮಗೇನೋ ಅಂತಿದ್ದೆ. ನೀವು ನಮ್ಮವರಾಗಿದ್ರೆ ಚೆನ್ನಾಗಿತ್ತು!'

ವರನ ವಯಸ್ಸು ರೂಪು ಎಲ್ಲಾ ವಿವರಿಸಿದ್ನಾಯಿಶು—ಹೋಟಲಿನವ ತಿಂಡಿ ಸಾಮಾನು ವಿವರಿಸುವಂತೆ. ಜೀವನ ಮಾರ್ಗ ಮಾತ್ರ ವಿವರಿಸಲಿಲ್ಲ.

'ಸಂತೋಷ; ನಾವೂ ಈ ದಿನ ಬಿಟ್ಟು ನಾಳೆ ಸಂಜೆ ಚಿಕ್ಕಬಳ್ಳಾಪುರಕ್ಕೆ ಹೊರಡೋಣ. ಅಷ್ಟುಮಟ್ಟಿಗೆ ವರ ಸಿಕ್ಕಿದ್ದು ನಮ್ಮ ಪುಣ್ಯವೆಂದೇ ಹೇಳಬೇಕು. (ವರನ ವಯಸ್ಸು ೨೬—೨೭ ಎಂದೇ ನಾನು ಹೇಳಿದ್ದು) ನಿಮಗೆ ಬೀಚಿಗೆ ಹೋಗಲು ಉತ್ಸಾಹವಿರಬಹುದೇನೋ' ಎಂದರು ನನ್ನ ಕಡೆ ತಿರುಗಿ.

'ಎರಡು ವರ್ಷ ಇಲ್ಲೇ ನಡೀತು ನನ್ನ ವಿದ್ಯಾರ್ಜನೆ' ಎಂದೆ.

'ಹಾಗೇನು?' ಎಂದರವರು.

ಎಲ್ಲರೂ ಎದ್ದೆವು.

'ನಮ್ಮ ಕುಮುದೆಯೂ ಜೊತೆಯಲ್ಲಿ ಬರುವ ಪದ್ಧತಿ....'

'ಓಹೋ.....ನಮ್ಮ ಪುಣ್ಯವೇ ಸರಿ.'

'ಇದೋ....ಅವಳೇ ಬಂದಳು ನಾವು ನೆನೆಸಿಕೊಂಡಂತೆ .....'

ಪಕ್ಕದ ಕೊಠಡಿಯಿಂದ ಬಂದಳು ಕುಮುದೆ. ಅವಳು ಸುಂದರಳೆಂದು ಹಿಂದೆಯೇ ಹೇಳಿದೇನೆ. ನವಯುಗದ ಜಾಣ್ಮೆಯ ಚಾಲಕರೊಬ್ಬಳಾಕೆ. ಯೌವನವು ಕುರೂಪಿಗಳಿಗೂ ರೂಪು ಕೊಡಬಲ್ಲ ಶಕ್ತಿ. ರೂಪವಂತರಿಗೆ ಆ ರೂಪು ಇಮ್ಮಡಿಸುವುದು. ಪಟ್ಟಣವಾಸಿಗಳು ನಾಜೂಕಿನ ಕೊನೆಯ ಪೆಟ್ಟಿಲವರು. ಇಮ್ಮಡಿಸಿದ ಸೊಬಗಿಗೆ ಬೆಡಗು ಕೊಡಿಸಿ ಅದೆಷ್ಟೋ ಜನ ರಸಿಕರನ್ನೂ ಮುಗ್ಧಗೊಳಿಸುವ ಸ್ವಭಾವ ಕಲಿತವರದು—ಕುಮುದೆ ಕಾಲೇಜು ಓದುಗಳಲ್ಲ. ಆದರೂ ರಸಿಕೆಯರ ಉಚ್ಚ ವಿದ್ಯಾವತಿಯರ ಗುಣ—ನಡತೆಗಳನ್ನೂ ಕದ್ದಿದ್ದಳಾಕೆ.

ಅವಳ ಸೌಂದರ್ಯವು ನನ್ನನ್ನೂ ಮುಗ್ಧನನ್ನಾಗಿಸಿತು. 'ಐಯಂಗಾರ್' ಹುಡುಗಿಯರಲ್ಲೂ ಇಂಥ ರೂಪವತಿಯರು ಸಿಗುವುದು ಅಪೂರ್ವ—ಕುಂಟ ಒಳ್ಳೇ ಅದೃಷ್ಟ ಮಾಡಿದ್ದ' ಎಂದುಕೊಂಡೆ.

ವಕೀಲರು ನನಗೂ ಕುಮುದೆಗೂ ಪರಸ್ಪರ ಪರಿಚಯ ಮಾಡಿಕೊಟ್ಟರು.

'ಬಹಳ ಸಂತೋಷವಾಯ್ತು ನಿಮ್ಮನ್ನು ಕಂಡು' ಎಂದಳು ಕುಮುದೆ ಎಡಗೈ ಕೊಡುತ್ತ (ಹುಸಿ ನಾಚಿಕೆಯಿಂದ ಆಕೆಯ ಕಪೋಲವು ಅರುಣ ಚ್ಛಾಯೆಯಿಂದ ಕೂಡಿತ್ತು).

'ನನಗೂ ಸಂತೋಷ' ಎಂದು ಬಲಗೈ ಕೊಟ್ಟೆ ಕುಲುಕಲಿಕ್ಕೆ. 'ಬಲಗೈ ಏಕೆ ಕೊಡಲಿಲ್ಲ!' ಎಂದುಕೊಂಡೆ.

'ಬಲಕಂಕುಳ ಕೆಳಗೆ ಏನೋ ಗಾಯವಾಗಿದೆ ಕೊಡಲಾಗಲಿಲ್ಲ shake-hand ಇಗೆ' ಎಂದರು ವಕೀಲರು ನನ್ನ ಸಂಶಯ ನಿವಾರಣೆಗಾಗಿ.

ಅನಂತರ ಬೀಚಿನ ಕಡೆಗೆ ಹೊರಟೆವು. ಮದರಾಸಿನ ಬೀಚನ್ನು ವರ್ಣಿಸುವ ಗೋಜಿಗೆ ನಾನು ಹೋಗೆನು. ಅದನ್ನು ಕಂಡವರಿಗೆ ನನ್ನ ವರ್ಣನೆಯು ಬೇಸರವೆನಿಸಬಹುದು; ಬೀಚು ನೋಡದವರಿಗೆ ನನ್ನ ವರ್ಣನೆಯು ಅವರಿಗೆ ನೋಡಲಿಕ್ಕೆ ಆಡಚಣೆಯಾಗಬಹುದು. ನನಗಂತೂ ಬೀಚಿನ ದೃಶ್ಯ ನೋಡಿ ನೋಡಿ ಹೇಸಿಗೆಯಾಗಿದೆ. ಮನಸ್ಸು ನಿಷ್ಕಲ್ಮಷವಾ

ಗಿದ್ದರೇನೇ ಒಂದು ವಸ್ತುವನ್ನು ನೋಟಕರಿಗೆ ಅಂದವಾಗು ವಂತೆ ಚಿತ್ರಿಸಲು ಸಾಧ್ಯವಾಗುವುದು; ಇಲ್ಲದಿದ್ದರೆ ಆ ಚಿತ್ರ ಕಾರನ ಮನೋಮಾಲನ್ಯವು ಕ್ಯಾಪೋಲಿಂದ ಕುಂಚಕಡ್ಡಿಗೆ ಹರಿದು ಚಿತ್ರವೂ ಕೆಟ್ಟುಹೋಗುತ್ತದೆ. ನಮಗೆ ಬೀಚಿನ ತಂಗಾಳಿ ಬೇಡ. ಏಕೆಂದರೆ ಅದು ಕಾಮಗರ್ಭಿತ ನಿವೇ ಶದ ಮೇಲೆ ಹಾಯ್ದು ಬರುವ ಗಬ್ಬುನಾತದ ಗಾಳಿ. ತರುಣರಿಗೆ ಅಲ್ಲಿನ ಸನ್ನಿವೇಶಗಳು ಸರಿಹೋಗಬಹುದು. ನಾವೂ ತರುಣರೆ. ಕ್ರಾಂತಿಕಾರರೆ. ಆದರೆ ನಮ್ಮದು ಪ್ರಾಕೃತಿಕ ನಿಯಮಗಳಿಗೆ—ಸಮಾಜದ ನೈತಿಕ ನ್ಯಾಯಗ ಳಿಗೆ ವಿರುದ್ಧವಾಗಿ ಹೋಗುವ ಕ್ರಾಂತಿಯಲ್ಲ. ನಮಗೆ ಬೇ ಕಾದುದು ಸಮಾಜದ ಉದ್ಧಾರ; ಅದರ ಕುಂದು ಕೊರತೆ ಗಳ ಅಳಿವು—ಹಿಂದೂ ಸಮಾಜವನ್ನು ಮೂಲೋತ್ಪಾಟನ ಮಾಡುವ ಹಂಬಲಿಕೆಯಲ್ಲ. ಆತ್ಮ ಸೌಖ್ಯಕ್ಕೆ ವಿರುದ್ಧವಾಗಿ ನಡೆಯುವ ಸ್ವಭಾವವಿಲ್ಲ. ಮದರಾಸು ಬೀಚು ಅಂತಹ ದುಸ್ವಭಾವದವರ ಬೀಡು. ಅಲ್ಲಿಗೆ ಹೋಗಲು—ಅದನ್ನು ವರ್ಣಿಸಲು ಹೋಗುವ ಪುಣ್ಯಕ್ಕೆ ನಮ್ಮ ಲೇಖನಿಯು ಹೋಗ ಬಯಸುವುದಿಲ್ಲ!

ಮರುದಿನ ಚಿಕ್ಕಬಳ್ಳಾಪುರಕ್ಕೆ ಬಂದೆವು—ನಾನು ಆ ವಕೀಲರು. ಮದರಾಸಿನಲ್ಲಿ ಕ್ಯೆಲು ಹಶ್ತುವಾಗಲೇ ತಂತಿ ಕೊ ಟ್ಟಿದ್ದೆ ನಮ್ಮ ಕುಂಟನಿಗೆ. ಅದರೂ ನನಗೆ ಭಯವಾಗಿತ್ತು. ಹೇಗೆ ತನ್ನ ವಯಸ್ಸನ್ನೂ ಅಂಗರಾಹಿತ್ಯವನ್ನೂ ಮುಚ್ಚಿಟ್ಟು ಕೊಳ್ಳುವನೋ ಎಂತ. ಒಂದುವೇಳೆ ಜೋಯಿಸರ ನಾಜೂಕು ತನ, ಅತನ ಹಳ್ಳಿ ಹಳ್ಳಿಗೂ ತಿರುಗಿ ಭಿಕ್ಷೆಯಿಂದ ಜೀವಿಸುವ ಬೀವನ, ಇವುಗಳು ಕಿವಿಗೆ ಬಿದ್ದರೆ ಇಷ್ಟು ಕಷ್ಟವೂ ಮಣ್ಣು ಪಾಲಾಗುತ್ತಲ್ಲಾ ಎಂದು ಯೋಚನೆಪಟ್ಟೆ. ಮೊದಲೇ ವಕೀ ಲರು, ಮದರಾಸು ಪಟ್ಟಣದಲ್ಲಿ ನುರಿತವರು · ಹೇಗಾದರೂ ಮಾಡಿ ಕಂಡುಹಿಡಿದಾರೆಂಬ ಭೀತಿ.... ...

ರೈಲಿನಲ್ಲಿ ಕೂತಷ್ಟು ಹೊತ್ತೂ ಇದೇ ಯೋಚನೆ ನನಗೆ. ವಕೀಲರು ಹಾಯಾಗಿ ನಿದ್ದೆಹೋಗಿಬಿಟ್ಟರು. ನನಗಂತೂ ಸುಳಿವೇ ಇಲ್ಲ. ನನ್ನ ಸ್ವಭಾವವೇ ಹಾಗೆ ಎನ್ನಿ. ಪ್ರಯಾಣ ಮಾಡುವಾಗ ನಿದ್ದೆ ಫ್ರೆಂಚ್‌ಲೀವ್ ತೆಗೆದುಕೊಂಡು ಬಿಡುತ್ತೆ! ಮುಂಜಾನೆ ಬೆಂಗಳೂರಲ್ಲಿ ಮುಖ ತೊಳೆದುಕೊಂಡು ಒಂದಷ್ಟು ಕಾಫಿ ತೆಗೆದುಕೊಂಡು ಚಿಕ್ಕ ಬಳ್ಳಾಪುರದ 'ಜಟಕಾಗಾಡಿ' ಹತ್ತಿದೆವು (ಬೆಂಗಳೂರು, ಕೋಲಾರ, ಬೌರಿಂಗ್‌ಪೇಟೆ ರೈಲಿಗೆ ಹೆಸರದು, ಅದು ಹೋಗುವುದು ಘಂಟೆಗೆ ಅರವಶ್ಟು ನಾಲ್ಕೆ ಪರ್ಲಾಂಗು) ಆಗ ಚಿಕ್ಕ ಬಳ್ಳಾಪುರಕ್ಕೆ ಹೋಗಲು ಬಸ್ಸುಗಳಿ ದ್ದರೂ ಕುಂಟ ಜೋಯಿಸರು ರೈಲಿನಲ್ಲೇ ಬರಬೇಕೆಂದು ನನಗೆ ತಂತಿ ಕೊಟ್ಟಿದ್ದರು. ವಕೀಲರಿಗಂತೂ ಬೇಸರಿಕೆ ಹತ್ತಿ ಬಿಟ್ಟಿತ್ತು.

ಅಂತೂ ಇಂತೂ ಹನ್ನೊಂದು ಘಂಟೆಗೆ ಇಳಿದೆವು. ಚಿಕ್ಕ ಬಳ್ಳಾಪುರದಲ್ಲಿ ನಮ್ಮ ಕುಂಟ ದೊಡ್ಡ ಮಹಡಿ ಮನೆಯನ್ನು ಕಟ್ಟಿದ್ದನೆಂದು ನಿರೂಪಿಸಿದೆನಲ್ಲ. ವೆಂಕಪ್ಪ ಶಾಸ್ತ್ರಿಯು ಬೀದಿ ಯಲ್ಲಿ ಕುಂಟಕಾಲುಹಾಕಿಕೊಂಡು ಎದುರು ನೋಡುತ್ತಿರುವ ನೆಂದು ನಾನು ಯೋಚಿಸಿದ್ದೆ. ಮನೆಯ ಮುಂದೆ ಬೋರ್ಡು ಹಾಕಿತ್ತು.

'Scientific Astralogical Studio,
S. V. Sastry,
Director,

ವಕೀಲರೂ ನೋಡಿದರು. ನಾನೂ ನೋಡಿದೆ.
'ಹಾಗಾದರೆ ಇವರೂ ಜೋತಿಷ್ಕರೆನ್ನಿ' ಎಂದರವರು.

'ಹೌದು ಸ್ವಾಮಿ. ಈಚೀಚೆಗೆ ಬಹು ಹೆಸರು ಸಡೆದಿ ದಾರೆ.' ಎಂದೆ. ವಕೀಲರು ಮುಗಳ್ನಕ್ಕರು. ಸಂತೋಷ, ಹಾಗೂ ಸಮಾಧಾನಭಾವವನ್ನು ಸೂಚಿಸಿದರು. ನಾನೂ ಹರ್ಷಚಿತ್ತನಾದೆ. ಆದರೂ ಆ ಹರ್ಷದಲ್ಲಿ ಒಂದಷ್ಟು ಚಿಂತೆ ಯ ಯೋಚನೆಯ—ಕಪ್ಪು ಇದ್ದೇ ಇದ್ದಿತು.

ಮನೆಯ ಅಂಗಳದ ಪಕ್ಕದ ಕೋಣೆಯೇ ನಮ್ಮ ಜ್ಯೋತಿಷ ವಿಶಾರದರ ಜ್ಯೋತಕ ಖಾನೆ. ಇಬ್ಬರೂ ಒಳಕ್ಕೆ ಹೋದೆವು. ಗೋಡೆಯ ಸುತ್ತಲೂ ದೊಡ್ಡ ದೊಡ್ಡ ಪಠಗಳು, ನಿಲುವುಗನ್ನಡಿಗಳು, ನಾಲ್ಕೈದು ಕಟ್ಟುಹಾಕಿದ್ದ ಸರ್ಟಿಫಿಕೇ ಟ್‌ಗಳು! ಒಂದು ಕಡೆ ಹನುಮ ಸ್ಕ್ರೀನ್. ಅದಕ್ಕೆ ಆ ಕಡೆ ದೊಡ್ಡ ಮೇಜಿನ ಮುಂದೆ, ಮೈಸೂರು ರುಮಾಲೊಂದು ಸುತ್ತಿ ಕೊಂಡು ಕುಳಿತಿದಾರೆ ನಮ್ಮ ಶಾಸ್ತ್ರಿಗಳು! ನಾನು ಡಂಗು ಬಡೆದು ಹೋಗಿಬಿಟ್ಟೆ. ನಾನಲ್ಲಿ ನೋಡಿದುದು ಕೊಳಕು ಬಟ್ಟೆಯ ಕುಂಟ ಜೋಯಿಸರನ್ನಲ್ಲ; ಸುಕ್ಕುಬಿದ್ದು ಹೋಗಿದ್ದ ಮುದಿಮುಖದ ಶಾಸ್ತ್ರಿಯನ್ನಲ್ಲ! ನಾಲ್ಕು ಮೊಳದ ಪಟ್ಟಿ ಪಂಚೆ ಯುಟ್ಟ ದಸ್ತದ ಕಂಚೆಯವನನ್ನಲ್ಲ!—ತುನ ಕೋಲುಮುಖಕ್ಕೆ ಒಪ್ಪಿದ ರುಮಾಲು. ನೀಟಾಗಿ ಮಾಸೆ ಬೋಳಿಸಿದ ಮುಖಕ್ಷೌರ, ಇಸ್ತ್ರಿ ಮಾಡಿದ ಖಾದಿಯ ಸಾದಾ ಅಂಗಿ (closed collar) ಶಾಸ್ತ್ರಿಯ ಉಡುಗೆಯಲ್ಲಿ ಪೂರ್ಣಪ್ರಗತಿಯಾಗಿ ಹೋಗಿತ್ತು

ಅವನ ದೃಷ್ಟಿಯಲ್ಲಿ ಕಾಲಚಕ್ರವು ಹದಿನೈದು ವರ್ಷದ ವಕ್ರಗತಿ ಕಿಡಿದಿತ್ತು. ೨೫ ವರ್ಷದ ಯುವಕನಂತಿದ್ದ ಆತನಾಗ.

ನಾನವನನ್ನು ನೋಡಿದಾಗ ಯಾವುದೋ ಕಾಗದವನ್ನು ಬರೆಯುತ್ತಿದ್ದ. ನಮ್ಮನ್ನು ನೋಡಿದ. ಮುಗುಳ್ನಕ್ಕು ಕೈಜೋಡಿಸಿದ.

ನಮಸ್ಕಾರ ಸರ್, ನಮಸ್ಕಾರ ಸರ್, ನಮಸ್ಕಾರ ಸುಂದರ್—ಯಾವಾಗ ಬಂದಿರಿ....ಬನ್ನಿ ಕೂಡಿ (ಎದುರಿಗಿದ್ದ ಕುರ್ಚಿಗಳ ಕಡೆ ಕೈ ತೋರಿಸುತ್ತ) ನಾನೂ ಸ್ಟೇಷನ್‌ಗೆ ಆಳು ಕಳಿಸಬೇಕೆಂದಿದ್ದೆ—ಅನುಕೂಲವಾಗಲಿಲ್ಲ, ...'

ನಾವು ಕೂತುಕೊಂಡೆವು.

'ಪರ್ವಾ ಇಲ್ಲ— ನಾನೊಬ್ಬನೇ ಬರುವ ಹಾಗಿದ್ದರೆ ಮನೆ ಹುಡುಕಲು ಕಷ್ಟವಾಗಿರಬಹುದಿದ್ದಿತು. ನಿಮ್ಮ ಸ್ನೇಹಿತರಿರುವರಲ್ಲ—ಇವರಿಗೆ ನಾನು ಎಷ್ಟು ಕೃತಜ್ಞನಾಗಿರುವೆನೋ ಹೇಳಲು ಬಾಯಾಡದು—ಇವರ ಜೊತೆಯಲ್ಲಿದ್ದುದರಿಂದ ಬಹು ಅನುಕೂಲವಾಯ್ತು.' ಎಂದರು ವಕೀಲರು.

ಜೋಯಿಸರು ಬಲು ಗಡಿಬಿಡಿಯಲ್ಲಿರುವಂತೆ ತಲೆ ತಗ್ಗಿಸಿ ಕೊಂಡು ಕಾಗದ ಬರೆಯುತ್ತಿದ್ದರು. ವಕೀಲರ ಮಾತಿಗೆ ತಲೆ ದೂಗುತ್ತ 'ಸರಿ—ಸರಿ' ಎನ್ನುತ್ತಿದ್ದರು.

'ಬಹಳ ಅವಸರದಲ್ಲಿದ್ದಂತೆ ಇದೆಯಲ್ಲ?! ಎಂದರು ವಕೀಲರು.

'ಹೂ ಸರ್, ಏನು ಮಾಡೋದು ನೋಡಿ—ಹೊಚ್ಚೆ ಪಾಡು. ಇದೋ ಈ tray ನಲ್ಲಿರುವ ಟಪಾಲಿಗೆಲ್ಲ ಜವಾಬು ಈ ಮಧ್ಯಾಹ್ನ ಎರಡುಘಂಟೆಯೊಳಗಾಗಿ ಹೊರಟು ಹೋಗಬೇಕು. ಗುಮಾಸ್ತೆಯೊಬ್ಬನಿದ್ದ ಇದನ್ನೆಲ್ಲ ನೋಡಿಕೊಳ್ಳಲಿಕ್ಕೆ. ಅವನಿಗೆ ಅವರಪ್ಪನ ಶ್ರಾದ್ಧವಂತೆ—ರಜಾ ತೆಗೆದು ಕೊಂಡು ಹೋಗಿಬಿಟ್ಟಿದಾನೆ. ಮನೆಗೆ ದೊಡ್ಡವರು ಬಂದಿದಾರೆ ಸ್ವಲ್ಪಹೊತ್ತು ಹಾಗೇ ಮಾತಾಡಿಕೊಂಡಿರೋಣವೆಂದರೆ ಹಾಳು ಕೆಲ್ಸ ಇದ್ದೇ ಇದೆ. ದಿನಾಗಲೂ ಎಷ್ಟೆಷ್ಟು ಹೊರೆ ಟಪಾಲು ಬರುತ್ತೆ.....(ಅಂಗೈಲಿದ್ದ ಗಡಿಯಾರವನ್ನು ನೋಡಿ).....ಓಹೋ, ೧೧—೫೫ ಆಗಿಹೋಗಿದೆ!' ಎಂದು ಹೇಳುತ್ತ ಪಕ್ಕದಲ್ಲಿ ಗೋಡೆಯಲ್ಲಿನ ವಿದ್ಯುಕ್ತಿನ ಗುಂಡಿಯನ್ನೊತ್ತಿದನು, ಶಾಸ್ತ್ರಿ. ಒಳಗಿನಿಂದ ಅಡಿಗೆಯವನು ಬಂದು 'ಏನ್ರೀ ಸ್ವಾಮಿ?' ಎಂದ.

'ಇವರಿಗೆ ಊಟಕ್ಕೆ ಸಿದ್ಧಮಾಡು' ಎಂದ ಜೋಯಿಸ.

'ಅಪ್ಪಣೆ' ಎನ್ನುತ್ತ ಮಾಯವಾದನು.

'ಸ್ವಾಮಿ, ದಯಮಾಡಿಸಬೇಕು—ಎಲೇ ಹಾಕಿದೆ.' ವಕೀಲರು ಶಾಸ್ತ್ರಿಯಕಡೆ ನೋಡಿದರು.

'ಕ್ಷಮಿಸಬೇಕು, ಸರ್. ನನ್ನ ಈ ಅವಸರ ನಿಮಿತ್ತ ಜಾಗ್ರತೆ ಊಟಮಾಡಬೇಕಾಯ್ತು. ನಿಮ್ಮ ಜೊತೆಗೆ ನಮ್ಮ ಸುಂದರ ಬರುತ್ತಾನೆ.... ...'

'ಹುಂ, ಆಗಬಹುದು. ನೋಡಿ ನಾನು ಈ ಮಧ್ಯಾಹ್ನ ರೈಲಿಗೆ ಹೊರಟು ಹೋಗಬೇಕಾಗಿದೆ. ಮತ್ತೇನು ಮಾತಾಡುವುದಿದೆ?.... ...ಎಲ್ಲಾ ಐಯಂಗಾರ್ರು ಮಾತಾಡಿಬಿಟ್ಟಿದಾರೆ. ಮದರಾಸಲ್ಲಿಯೇ ಆಗಿಹೋಗಲಿ ಏರ್ಪಾಡು. ಲಗ್ನ ಎಂದಿದೆಯೋ ಸ್ವಲ್ಪ ನೋಡಿ—ಎಷ್ಟು ಸಮೀಪದಲ್ಲಿದ್ದರೆ ಅಷ್ಟು ಉತ್ತಮ.'

'ಎಷ್ಟು ಜಾಗ್ರತೆ ಆದರೆ ಅಷ್ಟು ಅಷ್ಟು ಮೇಲು. ನಾಳೆ ಬುಧವಾರ ಅನುಕೂಲವಿದೆಯೇನೋ ನೋಡಿ ಎಂದೆ' ನಾನು ನಡುವೆ ಬಾಯ್ಹಾಕಿ.

'ಈದಿನ ಭಾನುವಾರ—ಬಿದಿಗೆ,.....ತದಿಗೆ,..... ಚೌತಿ, ಪಂಚಮಿ—ಬುಧವಾರ ಪಂಚಮಿ ಆಗುತ್ತೆ. ಅದಿನ ಲಗ್ನವೂ ಇದೆ.....'

* * * *

ಮದುವೆ ಜರುಗಿತು ಸಾಂಗವಾಗಿ.

ಅದಾದ ಒಂದು ತಿಂಗಳಮೇಲೆ ಶಾಂತಿ ಪ್ರಸ್ತವೂ ಆಯಿತು.

* * * *

ಒಂದುದಿನ ನಮ್ಮ ಮನೆಯಲ್ಲಿ ಕೂತು, ಮೈಲಿನ ಕತೆ ಬರೆಯುತ್ತಿದ್ದೆ ಹೆಸರೇನಿಡಬೇಕೆಂದು ಗೊತ್ತಾಗಲೇ ಇಲ್ಲ, ಮುಂಜುಟ್ಟು ಕೇಳುತ್ತ ಯೋಚನೆಮಾಡುತ್ತಿದ್ದೆ .....ಜೋಯಿಸರು ಮದುವೆಗೋಸ್ಕರ ವೇಷ ಹಾಕಿಕೊಂಡುದು, ಹತ್ತಿರದ ಮುದ್ರಾಲಯದಲ್ಲಿ ಸರ್ಟಿಫಿಕೇಟುಗಳನ್ನು ಮುದ್ರಿಸಿ ಕಟ್ಟು ಹಾಕಿಸಿಟ್ಟುದು, ಅರೆ ನರೆತ ಕೂದಲನ್ನು ಮರೆಸಲು ಇಟ್ಟು ಕೊಂಡ ಮೈನೂರು ರುಮಾಲು ಕುಂಟುಕಾಲು ಮರೆಸಲು ಹಾಕಿಕೊಂಡ ಬೂಟು—ಪರಾಯಿ ಇವೆಲ್ಲ ಕಣ್ಣುಮುಂದೆ ಕಟ್ಟಿದುವು—ಸಿನೆಮಾ ಚಿತ್ರದಂತೆ...

' ಸುಂದರ್, ಸುಂದರ್ ' ಎಂದು ಬಂದ ನಮ್ಮ ಕಥಾನಾಯಕ. ನಾನು ಬಿಸ್ಸಿ ಎನ್ನುವಷ್ಟರಲ್ಲಿ ಆತನೇ ಒಂದು ಬಿಟ್ಟಿದ್ದ.

' ಮದರಾಸಿಗೆ ಹೋದೋರೆಲ್ಲ ಜೋಪಿ ಹಾಕಿಸಿಕೊಂಡು ಬರ್ತಾರೆಂದು ಹೇಳಿದ್ದರು. ಈಗದು ನಿಜವಾಯ್ತು ಕಣೋ ' ಎಂದ ಎದುರಿನ ಕುರ್ಚಿಯಮೇಲೆ ಕೂತು.

' ಏನಾಯ್ತು, ಮದರಾಸಿಗೆ ಹೋಗಿ ?—ಇನ್ನೊಂದು ಕಾಲೂ ಕುಂಟು ಮಾಡಿಕೊಂಡು ಬಂದಿರಾ ? ' ಎಂದೆ.

' ಇಲ್ಲ—ದೇವರು ನಿಷ್ಪಕ್ಷಪಾತಿ ಸುಂದರ್—ಎಂತೆಂತಹವರಿಗೆ ಯಾರ್ಯಾರನ್ನು ಜೋಡಿಸಬೇಕೋ ಅದು ಅವನೊಬ್ಬನಿಗೇ ಅದು ಅವನೊಬ್ಬನಿಗೇ ಗೊತ್ತು ...'

' ಈಗೇನಾಯ್ತು ? ನಿಮಗೆ ಅನುಕೂಲವಿಲ್ಲವೇನು ? '

' ಎಲ್ಲಾ ಸರಿ ನನಗೆ ಕಾಲು ಕುಂಟು ;....ಅವಳಿಗೆ ಕೈಕುಂಟು ! '

' ಬಲಗೈ ಇಲ್ಲವೇನು ಹಾಗಾದರೆ ? ನಾನು ಕಂಡಾಗ ಇತ್ತಲ್ಲ ? '

' ಅದು ರಬ್ಬರ್ ತೋಳು. ಕುಂಟಾ—ಕುಂಟಿ ಸ್ಯೆ! '

' ಜಲ್ಸ ಹೊಡೀರಿ ' ಎಂದೆ.

ಸರಿ ಇಚ್ಚೆ ಈ ಕತೆಗೆ ' ಮದರಾಸ್ ಜೋಪಿ '—ಮೈನೂರ್ ರುಮಾಲು ' ಎಂತ.

ಸಾಹಿತ್ಯಸೇವೆ

ಬರೆದವರು—ಶ್ರೀ॥ **ಬಿ. ನರಸಪ್ಪ** ಮಂಗಳೂರು

ಬೇಕಾಗಿದ್ದಾರೆ

' ರಂಜಿತರಂಜನ ' ಮಾಸಪತ್ರಿಕೆಗೊಬ್ಬ ಉಪ ಸಂಪಾದಕನು ಬೇಕಿರುವನು ; ಬರಕೊಳ್ಳುವವನು ಕನ್ನಡದಲ್ಲಿ ಒಳ್ಳೇ ನುರಿತವನಿದ್ದು, ಕನಿಷ್ಪಪಕ್ಷಕ್ಕೆ ಬಿ. ಎ. ಯಾದರೂ ಪಾಸಾಗಿರತಕ್ಕದ್ದು ; ಮಾಸಿಕ ತಲಬು ೪೦—೬೦. ವಿವರಕ್ಕೆ ಇಲ್ಲಿಗೆ ಬರೆಯಿರಿ :—

' ರಂಜಿತರಂಜನಾ'ಲಯ
ಮಂಗಳೂರು.

' ಮಂಗಳೂರು ಮೈಲಿ ' ನ ' ವಾಂಟೆಡ್ ಕೋಲಮಿ ' ನಲ್ಲಿ ಪ್ರಕಟವಾಗಿದ್ದ ಈ ಮೇಲಿನ ಜಾಹಿರಾತನ್ನು ಓದಿದೊಡನೆ ಕೆಲಸ ಒಮ್ಮೆ ಸಿಕ್ಕಿದಂತೆಯೇ ಭಾಸವಾಯಿತು. ಅರ್ಜಿ ಬರೆದು ಟಪ್ಪಾಲು ದ್ವಾರಾ ಕಳುಹಿಸುವುದಕ್ಕಿಂತ ಖುದ್ದಾಗಿಯೇ ಹೋಗಿ ಮಾತಾಡುವುದೊಳ್ಳೆಯದೆಂದು ನೆನೆಸಿದೆನು. ' ಶೀಘ್ರಂ ಶುಭಂ '—ಎಂಬಂತೆ, ಅಂದೇ ಸಂಜೆಗೆ ಹೋಗುವುದೆಂದು ಮನದಲ್ಲಿ ನಿಶ್ಚಯಿಸಿದೆನು.

' ಅನ್ ಎಂಪ್ಲೈಮೆಂಟ್ ' ದೊರೆತು ಇಂದಿಗೆ ವರ್ಷಗಳು ಮೂರಾದರೂ ಪರ್ವಾ ಇಲ್ಲ; ಈಗ ಸಿಗುವ ಕೆಲಸ ಬಹಳ ಯೋಗ್ಯದ್ದೇ ! ಮಾಸಪತ್ರಿಕೆಯ ಉಪಸಂಪಾದಕನೆಂದರೇನು ಚಿಕ್ಕ ಕೆಲಸವೇ ? ಸಾಧಾರಣ ಮುಖ್ಯ ಸಂಪಾದಕರಂತೆಯೇ ! ' ಅಂತೆಯೇ ' ಏಕೆ ? ಸಹಜವಾಗಿಯೂ ಮುಖ್ಯ ಸಂಪಾದಕರೇ !! ಇಂತಹ ಸಂಗತಿಗಳಲ್ಲಿ ' ಅಂತೆಯೇ ' ಎಂಬ ಪದ (ಶಬ್ದ) ವು ಅನಾವಶ್ಯಕ. ಪತ್ರಿಕಾ ಉಪ ಸಂಪಾದಕರಿಗಿರುವ ಕೆಲಸಗಳೆಂದರೆ,—ಊರ—ಪರ ಊರುಗಳಿಂದ ಬಂದ R. T. ಕಲ್ಲನ್ನು ಓದಿ ನೋಡುವುದು, ಚಲೋದೆಂದಾದರೆ, ಪತ್ರಿಕೆಯಲ್ಲಿ ಹಾಕಿಸುವುದು ; ಹಾಗಲ್ಲವೆಂದಾದರೆ, ' ರಿಜಕ್ಟ್ ' ಮಾಡುವುದು ; ಬಂದ ಪತ್ರಗಳಿಗೆ ಉತ್ತರ ಬರೆಯುವುದು ; ನನ್ನ ಪ್ಯೆರಿಗಳನ್ನು ಪತ್ರಿಕೆಯಲ್ಲಿ ಡೂರಿ ಬರೆಯುವುದು ;—ಇವಿಷ್ಟೆ. ಇದೀಗ ' ರಾಜಾಮರ್ಜಿ 'ಯ ಕೆಲಸ. ನಂಪಾದಕರ ಗದ್ದುಗೆಗೇರಲು ನಾನೇನು ಅನಮರ್ಥನೂ ಅಲ್ಲ, ' ಕವಿಗೆ

ಳೊಪ್ಪಿಕೊಳ್ಳುವುದಾದರೆ, ನಾನು ಅವರ ಸಾಲಲ್ಲಿಯೂ ನಿಲ್ಲ ಬಹುದು. 'ನೀನು ಬರೆದ ಕಥೆ, ಕವಿತೆಗಳನ್ನೊಮ್ಮೆ ಓದಿದರೆ, ಬಳಿಕ ಬೇರಾವ ರೇಖನವನ್ನೋದಲೂ ಮನಸ್ಸು ಬರುವುದಿಲ್ಲ ವೆಂದು ನನ್ನ ಮಿತ್ರರನೇಕರು ಹೇಳುತ್ತಿದ್ದರು. ನಾನು ಬರೆದ 'ಹುಚ್ಚನ ಹುಚ್ಚು' ಎಂಬ ಕಥೆಯು ನಿದ್ದೆಯಿಂದಿದ್ದವರನ್ನೂ ಎಬ್ಬಿಸುವುದು. 'ದಾರಿಗನ ದಾರಿ.' ಇದನ್ನು ಇಂದು 'ರಶ್ಮಿ' ಪತ್ರಿಕಾ ಸಂಪಾದಕರು ತಾವಾಗಿಯೇ ನನ್ನಿಂದ ಕೇಳಿಕೊಂ ಡೊಯ್ದು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. 'ಕಪೆ ಮರಿ' ಎಂಬ ಕವಿತೆಯು ಒಮ್ಮೆಗೆ ಎಂತಹನನ್ನೂ ನಗಿಸದಿರು ವುದಿಲ್ಲ. 'ನಾನೇಕೆ ಕುಣಿಯಲಾರೆ.' ಇದು ಎಲ್ಲರಿಂದಲೂ ಕುಣಿಸಲ್ಪಟ್ಟಿದೆ. ರಾಜಕೀಯ ವಿಷಯದಲ್ಲಿ ಬರೆದ 'ತಿರು ಗುವ ತಂತ್ರ' ಎಂಬ ರೇಖನವು ಓದುಗರ ಮನಸ್ಸನ್ನೊಮ್ಮೆ ತಿರುಗಿಸುವುದೀ ಕಡೆಗೆ (?). 'ಮುಂಡಾಸಿನ ಒಳಭಾಗ' ಎಂಬ ಕಥೆಯು ಇದೇ 'ರಂಜಿತರಂಜನ' ಪತ್ರಿಕೆಯಲ್ಲಿ ಈ ಮೊದಲು ಪ್ರಕಟಿಸಲ್ಪಟ್ಟಿತ್ತು. ಇನ್ನೂ ಉಂಟು; ಅವುಗಳೆಲ್ಲವನ್ನೂ ಹೇಳುತ್ತಾ ಹೋದರೆ ಆರ್ಧ ಹೊತ್ತಿನ ಬಿಡುವಾದರೂ ಬೇಕು. ನಾನು ಬರೆದ ಯಾವ ರೇಖನವಾದರೂ 'ಬೂನು' ಆಗು ವುದೇ ಇಲ್ಲ. ಒಂದಕ್ಕಿಂತ ಒಂದು 'ಊಚು'

'ರಂಜಿತರಂಜನ' ಪತ್ರಿಕಾಲಯದ ಬಾಗಿಲು ತೆರೆ ದಿತ್ತು: ಒಳಹೊಕ್ಕುವುದರೊಳಗೆ ನರ್ಟಿಫಿಕೇಟಿನ ನೆನಪು! ಕೋಟಿನ ಒಳಜೇಬಿಗೆ ಮೆಲ್ಲಗೆ ಕೈ ತೂರಿಸಿದೆ. ನರ್ಟಿಫಿ ಕೇಟು ಇಲ್ಲ! ಮೈಜುಮ್ಮೆಂದಿತು! ಕೋಟಿನ ಹೊರಜೇಬಿಗೆ ಕೈ ತೂರಿದೆ! ಪುಣ್ಯಕ್ಕೆ ಅದರಲ್ಲಿತ್ತು ನರ್ಟಿಫಿಕೇಟು! (ತಂದೆ ತಾಯಿಗಳು ಎಷ್ಟೋ ಹಣವನ್ನು ವೆಚ್ಚಮಾಡಿ ಕಲಿಸಿದುದರ ಪ್ರತಿಫಲವೆಂದರೆ ಇದೇ ಈ ನರ್ಟಿಫಿಕೇಟು—ಪ್ರಾಣಪದಕ) 'ಬಚಾವು!' ಎಂದು ಮನದಲ್ಲಿ ಅಂದುಕೊಂಡೆನು. ಆದರೆ 'ಬಚಾವು' ಎಂಬ ಪದವು ಸ್ವಲ್ಪ ಗಟ್ಟಿ ಸ್ವರದೊಂದಿಗೆ ಸೇರಿ ಕೊಂಡು ಬಾಯಿ ಮಾರ್ಗವಾಗಿ ಹೊರಹೊರಟುಬಿಟ್ಟಿತು. ಆ 'ಬಚಾವು' ಎಂಬ ಶಬ್ದವು ಬಹುಶಃ ಒಳಗಿದ್ದ ಸಂಪಾ ದಕರಿಗೆ ಕೇಳಿಸಿರಲೂಬಹುದು, ಅಪಶಕುನಕ್ಕೆಡೆಯಿರದಂತೆ ಬಲ ಗಾಲನ್ನು ಬಾಗಿಲೊಳಗಿಟ್ಟು ಒಳಹೊಕ್ಕೆನು: ಸಂಪಾದಕರ ಅಲ್ಪಸ್ವಲ್ಪ ಪರಿಚಯವು ಮೊದಲೆ ಇತ್ತನ್ನಿ! ಒಳಹೊಕ್ಕೊಡನೆ— 'ಏನು ಬಂದಿರಿ? ಕುಳಿತುಕೊಳ್ಳಿರಿ' ಎಂದು ಹೇಳಿ, ನಾನು ಕುಳಿತುಕೊಳ್ಳುವುದಕ್ಕೆ ಮುಂಚಿತವಾಗಿಯೇ 'ಏನುಬೇಕಿತ್ತು?' ಎಂದು ಪ್ರಶ್ನಿಸಿದರು ಮಾನ್ಯ ಸಂಪಾದಕರು. ಆಗ ಮನ ಸ್ವಿನಲ್ಲೇನೋ ಸ್ವಲ್ಪ ಭಯ! (ಎದುರಲ್ಲಿ ಸಂಪಾದಕರಿದ್ದುದ ರಿಂದಲೋ ಏನೋ) ಮೆಲ್ಲಗೆ, 'ತಮ್ಮ ಪತ್ರಿಕೆಗೊಬ್ಬ ಉಪ ಸಂಪಾದಕ ಬೇಕಿರು '.....ಎನ್ನುವಷ್ಟರಲ್ಲಿ—'ಸರಿ; ತಿಳಿ ಯಿತು; ನೀವು ಪ್ರಥಮದಲ್ಲೇ ಬಂದಿರಿ; ಒಳ್ಳೇದೇ ಆಯಿತು. ನಿಮ್ಮ ಶಾಲೆ ಎಷ್ಟರತನಕ ನಡೆದಿದೆ?' ಎಂದು ಕೇಳಿದರು ಸಂಪಾದಕರು. ಜೇಬಿನಿಂದ ನನ್ನ ಪ್ರಾಣಪದಕ (?)ವನ್ನು ತೆಗೆದು ಮುಂದಿಟ್ಟೆ. ಸಂಪಾದಕರದನ್ನು ಓದಿನೋಡಿ,—'' ಸರಿ; ಈ ಕೆಲಸಕ್ಕೆ ನೀವು ಯೋಗ್ಯರೆಂದೇ ತೋರುವಿರಿ. ಆದರೆ, ಈ ಕೆಲಸಕ್ಕೆ ಬರಿಯ ಜ್ಞಾನವಿದ್ದರೆ ಸಾಲದು; ವಾಕ್ಚಾತುರ್ಯವೂ ಬೇಕೆಂದು ಸಂಪಾದಕ ಮಂಡಳಿಯ ಮತ. ಅದನಷ್ಟು ಪರೀಕ್ಷಿಸಬೇಕಾಯಿತಲ್ಲ?'—ಎಂದರು. ನನಗವರ ಮಾತಿನ ಅರ್ಥವಾಗದಿದ್ದರೂ 'ಹೋ ಅದಕ್ಕೇನು ಅಡ್ಡಿ? ಆಗಬಹುದು! ಎಂದೆನು. ಸಂಪಾದಕರು ಕಪಾಟಿ ನಿಂದ ಡೆಮ್ಮಿ ೧।೪ ಸೈಜಿನ ಒಂದು 'ಎಕ್ಸರ್‌ಸೈಜ್' ಪುಸ್ತಕ ವನ್ನೂ (ದಪ್ಪ ಬೈಂಡಿದ್ದು) 'ರಂಜಿತ ರಂಜನ' ದ ಕೆಲವು ಪ್ರತಿಗಳನ್ನೂ ಮತ್ತೊಂದು 'ಚಂಪರರಿ' ರಶೀದಿ ಪುಸ್ತಕ ವನ್ನೂ ಹೊರತೆಗೆದು, 'ಬರೇ ೨೫ ಮಂದಿ ಚಂದಾದಾರ ರನ್ನು ಸಂಪಾದಿಸಿರಿ. ಹಾಗೆ ಚಂದಾದಾರರಾಗುವರು ರೂ ಪಾಯಿ ಕೊಟ್ಟರೆ, ಇಗೊಳ್ಳಿ ಈ ರಶೀದಿಯನ್ನು ಹಾಗೂ ಒಂದು ಪತ್ರಿಕೆಯನ್ನು ಅವರಿಗೆ ಕೊಟ್ಟು ಈ ಡೆಲವರಿ ಪುಸ್ತಕದಲ್ಲಿ ಅವರ ದನ್ಯತು ಬರೆಸಿಕೊಂಡರಾಯಿತು'. ಎಂದು ಮೃದು ಮಧುರವಾಗಿ ಸೂಚಿಸಿದರು. ಅವರು ಇಷ್ಟು ಮಾತು ಹೇಳು ವಾಗ (ಸಂಕ್ಷೇಪವಾಗಿ ಹೇಳುವುದಾದರೆ) ನಾನು ಜೀವಂತಶ ವವಾಗಿದ್ದೆನು 'ಇದು ನಿಮ್ಮ ವಾಕ್ಚಾತುರ್ಯವೆಷ್ಟೆಂದು ಅಳೆಯಲಿಕ್ಕಾಗಿ,—ಅಷ್ಟೆ!' ಎಂದು ಸಂಪಾದಕರಿಂದ ಮುತ್ತಿ ನಂತಹ ಇನ್ನೊಂದು ಮಾತು ಹೊರಬಂತು. ಕೂಡಲೇ, 'ಈ ಕೆಲಸದಲ್ಲಿ ನೀವು ಉತ್ತೀರ್ಣರಾದೊಡನೆ ನಿಮಗೆ ಉಪಸಂ ಪಾದಕನ ಕೆಲಸ ಕೊಡುವೆವು'. ಎಂಬ ಮೆತ್ತನೆಯ ಮತ್ತೊಂ ದು ಮಾತು ಸಂಪಾದಕರ ನಾಭಿಯಿಂದ ಕಂಠನಾಳದ ಮಾ ರ್ಗವಾಗಿ ನಾಲಿಗೆಯ ಮುಖಾಂತರ ಹಲ್ಲುಗಳೆಡೆಯಿಂದ ತುಟಿಗಳನ್ನು ದೂಡಿಕೊಂಡು ಹೊರಬಂತು. ಆಗ ನನ್ನೆದೆಯಲ್ಲಿ ಇಂಜಿನಿನ ಬಡಿತ! ತುಟಿಗಳೆರಡೂ ಬಿಸಿಲಿಗಿಟ್ಟ ಕಟ್ಟಿಗೆಯಂತಾ ಗಿದ್ದುವು. (ಸಂಪಾದಕರ ತುಟಿಗಳಲ್ಲ ನನ್ನ ತುಟಿಗಳು.) ನಾಲಿಗೆಯನ್ನೊಮ್ಮೆ ತುಟಿಯ ಮೇಲ್ಸವರಿದೆ. 'ಡೆಲಿವರಿ ಪುಸ್ತಕವನ್ನು ಹಿಡಿದುಕೊಂಡು ತಿರುಗುವುದಕ್ಕೆ ನಾನೇನು ಮೂರನೇಕ್ಲಾಸು ಕಲಿತುದಲ್ಲ! ಬಿ. ಎ. ಪಾಸಾದುದು!' ಎಂದು ಹೇಳುವರೆ ಮೂರು ಮೂರುಸಲ ನಾಲಿಗೆ ಎತ್ತಿದೆ.

ಅದರೆ ಏಕೋ ಧೈರ್ಯವಾಗಲಿಲ್ಲ. ಅಲ್ಲದೆ ಬರೇ ೨೫ ಮಂದಿ ಚಂದಾದಾರರು! ಬಳಿಕ ಉಪಸಂಪಾದಕನಾಗಬಹುದು ಎಂಬ ಆಕೆಯು ಹಾಗೆ ಹೇಳಬಿಡಲಿಲ್ಲ. 'ಪ್ರಯತ್ನಿಸುವೆನು' ಎಂದು ಕೃತಕ ಗಾಂಭೀರ್ಯದಿಂದ ನುಡಿದೆ. ನನ್ನ ಕೈಯಲ್ಲಿದ್ದ ಪುಸ್ತಕಗಳಲ್ಲಿ ಡೆಲವರಿ ಪುಸ್ತಕವು ನನ್ನನ್ನೇ ದುರುಗುಟ್ಟಿ ನೋಡುತ್ತಿತ್ತು. ನಾನೂ ಅದನ್ನೆ ಮೈಕಣ್ಣರಳಿಸಿ ನೋಡಿದೆ. ಅದರೆ ಅದರ ಕಣ್ಣುಗಳು ಮುಚ್ಚಲಿಲ್ಲ. ನನ್ನ ಕಣ್ಣುಗಳೇ ಮುಚ್ಚಿದುವು. ನಮ್ರತೆಯಿಂದ 'ಇನ್ನಾವಾಗ ಬರಬೇಕು?', ಎಂದು ಕೇಳಿದೆ. 'ಎಷ್ಟು ಬೇಗ ಚಂದಾದಾರರನ್ನು ಸಂಪಾದಿಸಿಕೊಂಡು ಬರುವಿರೋ ಅಷ್ಟುಬೇಗ ಕೆಲಸಕ್ಕೆ ಸೇರಿಕೊಳ್ಳಬಹುದು. ಆದಷ್ಟು ಬೇಗನೇ ಕೆಲಸ ಪೂರ್ತಿಮಾಡಿಕೊಂಡು ಬನ್ನಿರಿ'. ಎಂದರು ಸಂಪಾದಕರು. ಸಾದಾ ತರಹದ್ದೊಂದು ನಮಸ್ಕಾರವನ್ನು ಸಂಪಾದಕರಿಗಿತ್ತು ಹೊರಟೆನು.

ನನಗೆ ಮೊದಲಿನಿಂದಲೂ ಸ್ವಲ್ಪ 'ಹುಳಿ' ಜಾಸ್ತಿ. ಅದಕ್ಕಾಗಿಯೇ ನನಗೀ ದುರವಸ್ಥೆ. ಅಲ್ಲವಾದರೆ ಬಿ. ಎ. ಕಲಿತವಗೆ ಡೆಲವರಿ ಪುಸ್ತಕವನ್ನು ಹಿಡಕೊಂಡು ತಿರುಗಾಡುವ ಗತಿ ಬಂದೊದಗುತ್ತಿತ್ತೇ? ನಾಚಿಕೆ! ನಾಚಿಕೆ! ನನ್ನಂತಹನು ಈ ಕೆಲಸ ಮಾಡಲೇ ಬಾರದೆಂದೊಮ್ಮೆ ಮನದಲ್ಲಿ ಯೋಚಿಸಿದರೂ 'ಕಾಲಕ್ಕೆ ತಕ್ಕ ಕೋಲ' ಎಂಬುದನ್ನು ನೆನೆದುಕೊಂಡು ಕಿಸೆಯಲ್ಲಿದ್ದೊಂದು ವಾರ್ತಾ ಪತ್ರಿಕೆಯ ಭಾಗವನ್ನು ಡೆಲಿವರಿ ಪುಸ್ತಕಕ್ಕೆ ಸುತ್ತಿ ಅದು ಹೊರ ಇಣಿಕಿ ನೋಡದಂತೆ ಮಾಡಿದೆನು. ಇನ್ನು ಹೋಗುವುದೆಲ್ಲಿಗೆ? ಚಂದಾದಾರರಾಗುವವರಾರು? ಎಂಬ ಯೋಚನೆ. ಅಷ್ಟರಲ್ಲಿ ನನಗೆ, ಕೆಲಸ ಇಲ್ಲದ ಮೂರು ವರ್ಷಗಳಲ್ಲೂ ನನ್ನನ್ನು ಏನೊಂದು ತಿರಸ್ಕಾರಭಾವದಿಂದ ನೋಡಿರದ ಹಾಗೂ ಪ್ರತಿನಿತ್ಯವೂ ನನ್ನನ್ನು ಬರಮಾಡಿಕೊಳ್ಳುತ್ತಿದ್ದ ಬಾವಚಿ ಗುಡ್ಡದ ನೆನಪಾಯಿತು. ಹೋಗಿಯೂ ಆಯಿತು. ಪಮ್ಮಿ, ದೇವೇಂದ್ರ, ಸುಬ್ಬಯ್ಯ ಈ ಮೂವರು ಗುಡ್ಡದ ಸೀಟೊಂದರಲ್ಲಿ ಕುಳಿತಿದ್ದರು. ಅವರು ನನ್ನ ಮಿತ್ರರು. ಅವರ ಬಳಿಗೆ ಹೋಗೋಣವೆಂದರೆ ಕೈಯಲ್ಲಿ ಡೆಲವರಿ ಪುಸ್ತಕ! ಹೋದರೆ (ಎಂದು ವೇಳೆ) ಅವರನ್ನು ಚಂದಾದಾರರನ್ನಾಗಿ ಮಾಡಬಹುದೆಂಬಾಶೆ! ಹೋದೆನು, 'ಏನು ರಾಯರೇ ಬಹಳ ಅಪರೂಪ?' ಎಂದ ಸುಬ್ಬಯ್ಯ. 'ಆಂ ನಾನೇನು ಅಪರೂಪ? ನಿಮ್ಮ ಕಾರ್ಖಾನೇನು?' ಎಂದು ಕೇಳಿದೆನು. 'ಇದು ಯಾರ ಫೋಟೋ?' ಎಂದು ಕಾಗದ ಸುತ್ತಿದ್ದ ಡೆಲವರಿ ಪುಸ್ತಕವನ್ನು ತೋರಿಸಿ ಕೇಳಿದ ಸುಬ್ಬಯ್ಯ. ಧೈರ್ಯದಿಂದ 'ಇದು ನಮ್ಮ ಮನೆಯವರದು.' ಎಂದೆನು. ಇತ್ತ ತಾ ನೋಡೋಣ' ಎಂದನು ಪುಣ್ಯಾತ್ಮ! ನನ್ನ ಪ್ರಾಣವೇ ಹಾರಲು ಪ್ರಯತ್ನಿಸಿತು. ಬಲವಂತದಿಂದ ತಡೆದೆ ಸುಬ್ಬಯ್ಯನ ಬುದ್ಧಿ ಮೊದಲಿನಿಂದಲೂ ಸ್ವಲ್ಪ ಚುರುಕು ತರ ಹದ್ದೇ. ಕೂತಲ್ಲಿಂದ ಎದ್ದು ಪುಸ್ತಕವನ್ನು ಫೋಟೋವೆಂದು ಭಾವಿಸಿ, ಕನುಗೊಳ್ಳುವುದರಲ್ಲಿದ್ದ ಸುಬ್ಬಯ್ಯ. ಅದಕ್ಕೆ ನಾನು ಬೇಗನೇ 'ಆಲ್ಲೋ ಹುಚ್ಚಾ ನಿನಗೂ ಬುದ್ಧಿಯಿಲ್ಲವೇ? ಫೋಟೋ ಆಗಿದ್ದರೆ ಇಲ್ಲೇಕೆ ತರುತ್ತಿದ್ದೆ? ನಮ್ಮ ಆಫೀಸಿಗೊಂದು ಡೆಲವರಿ ಪುಸ್ತಕ ಬೇಕಾಗಿತ್ತು. ಅದಕ್ಕಾಗಿ ಇದನ್ನೀಗ ಶೆಣೈ ಬ್ರದರ್ಸ್‌ರಲ್ಲಿಂದ ಕೊಂಡುಕೊಂಡೆನು.' ಎಂದೆನು. ಸುಬ್ಬಯ್ಯನು ಆಶ್ಚರ್ಯದಿಂದ 'ಏನು? ನಿಮ್ಮ ಆಫೀಸಿಗೆ? ನಿಮ್ಮ ಆಫೀಸೆಲ್ಲಿ? ನಿನಗೆ ಕೆಲಸ ಸಿಕ್ಕಿತೇ?' ಎಂದು ನಾಲ್ಕೈದು ಪ್ರಶ್ನೆಗಳನ್ನು ಒಮ್ಮೆಗೇ ಕೇಳಿಬಿಟ್ಟ! 'ಸಿಕ್ಕದೆ ಏನು? ಎಲ್ಲಪೂ ಪ್ರಯತ್ನದಲ್ಲುಂಟು.' ಎಂದು ನಸುನಗೆಯೊಡಗೂಡಿದ ಮೆಲ್ಲನೆಯ ಉತ್ತರ ನನ್ನದು. 'ಎಲ್ಲಿ? ಎಲ್ಲಿ?' ಎಂಬ ಜೋಡು ಶಬ್ದದ ಪ್ರಶ್ನೆ ಪುನಃ! 'ರಂಜಿತರಂಜನ' ಪತ್ರಿಕಾಲಯದಲ್ಲಿ' ಎಂಬ ನನ್ನ ಚಿಕ್ಕಪೂ ಚೊಕ್ಕಪೂ ಅದ ಉತ್ತರದೊಂದಿಗೆ 'ಆ ಪತ್ರಿಕೆಗೆ ನೀವೆಲ್ಲರೂ ಚಂದಾದಾರ ಬೇಕು; ಅದಕ್ಕೆ ವರ್ಷಕ್ಕೆ ಚಂದಾ ಹಣ ಬರೇ ರೂ. ೧೮-೦೦ ಮಾತ್ರ. ನಿಮ್ಮ ಹೆಸರುಗಳನ್ನೀಗಲೇ ಬರೆದುಕೊಡಬೇಕು. ಏನು ಆಗದೇ?' ಎಂದೊಂದು ಚಿಕ್ಕ ಭಾಷಣವನ್ನು (ಕಣ್ಣು ಮುಚ್ಚಿ ತೆರೆಯುವುದರೊಳಗೆ) ಹೇಳಿ ಮುಗಿಸಿದೆ. ಸುಬ್ಬಯ್ಯ ಹೇಳಿದ– 'ಹೂಂ ಆಗದೆ ಏನು? ನಾನೊಬ್ಬ ಚಂದಾದಾರನಾಗುವೆನು. ರೂಪಾಯಿ ಹಿಂದಿನಿಂದ ಕೊಡಬಹುದಷ್ಟೆ? ಅದಿರಲಿ ನಿನಗಲ್ಲಿ ಸಂಬಳ.....' ಇಷ್ಟು ಅವನು ಕೇಳುತ್ತಿರುವಾಗ ನಾನು ಅವನ ಮಾತಿನ ಮೇಲೆ ಗಮನವಿಡದವನಂತೆ ನಟಿಸಿ 'ನಿಮ್ಮ ಹೆಸರುಗಳನ್ನು ಬರದುಕೊಳ್ಳಲೋ? ಎಂದು ಉಳಿದಿಬ್ಬರಿಗೆ ಪ್ರಶ್ನಿಸಿದೆ. 'ನೀನು ಹೇಳಿದ ಮೇಲೆ ಆಗದೆಂದರಾದೀತೇ? ಪತ್ರರೊಡನೆ ಹನ್ನೊಂದು! ಇರಲಿ' ಎಂದನು ದೇವೇಂದ್ರ. 'ನಾವು ಬರೆದ ಲೇಖನಗಳನ್ನು ನಿಮ್ಮ ಪತ್ರಿಕೆಯಲ್ಲಿ ಹಾಕಬಹುದಲ್ಲವೇ?' ಎಂದು ಕೇಳಿದನು ಪಮ್ಮಿ. 'ಓಹೋ ಅಷ್ಟೇ ತಾನೆ, ಅದಕ್ಕೇನಡ್ಡಿ? ನಾನಿದ್ದೇನಲ್ಲಾ? ಮಾತು ಬಿಡಿ!' ಎಂದು ಬಿರುಸಾಗಿಯೇ ಹೇಳುವುದರೊಡನೆ ಹೆಸರುಗಳನ್ನು ಬರೆದುಕೊಂಡು, ಒಂದೊಂದು ಪತ್ರಿಕೆಯನ್ನವರಿಗಿತ್ತು, ಡೆಲವರಿ ಪುಸ್ತಕದಲ್ಲಿ ದಸ್ಕತ್ತು ಮಾಡಿಕೊಂಡೆನು. ಮೂರು ಮಂದಿ ಚಂದಾದಾರರಾದರೆಂದಷ್ಟಕ್ಕೆ ಮನಸ್ಸು ಶಾಂತಿ ಇಷ್ಟಾಗುವಾಗ ಸುಬ್ಬಯ್ಯನ ಕೆಲವು ಮಿತ್ರರು ಅತ್ತ ಬಂದರು; ಸುಬ್ಬಯ್ಯನಿಗೆ ಕೀಲು ಕೊಟ್ಟು ಅವರೂ ಚಂದಾದಾರರಾಗ

ವಂತೆ ಪ್ರೇರೇಪಿಸಲೆನಗಿದೆನು. ಅವರಲ್ಲೊಬ್ಬನು ಬಲೆಗೆ ಬಿದ್ದನು. ಉಳಿದವರ ಪೈಕಿ ಒಬ್ಬನು, 'ನಮಗೆ ದ್ವಿಜೋತ್ತಮ, ಸನಾತನಿಕಂದ, ಹರಿಜನವಿರೋಧಿ ಇಷ್ಟೆಲ್ಲಾ ಪತ್ರಿಕೆಗಳು ಬರುತ್ತವೆ. ನಡ್ಯಕ್ಕೆ ಈ ಪತ್ರಿಕೆಗೆ ಚಂದಾದಾರನಾಗಲು ಸಾಧ್ಯವಿಲ್ಲವೆಂದನು. ಇನ್ನೊಬ್ಬನು 'ಕೈಯಲ್ಲಿ ಕಾಸಿರದ ಕಾಲದಲ್ಲಿ ಇದೆಲ್ಲಾ ಯಾಕಯ್ಯ ರಟಾವಳಿ?' ಎಂದು ಹೇಳುತ್ತಾ ಜೇಬಿನಿಂದ ಗೋಲ್ಡ್‌ಫ್ಲೇಕ್ ಸಿಗರೇಟ್ ಪೆಟ್ಟಿಗೆಯನ್ನು ಹೊರಗೆ ತೆಗೆದು ಒಂದು ಸಿಗರೇಟನ್ನು ಬಾಯಿಯಲ್ಲಿಟ್ಟು ಸೇದಲುಪಕ್ರಮಿಸಿದನು. ಇದೀಗ ಈತನು ಹಣವಿಲ್ಲದೆ ನಾಯುವ ಕಾಲವೆಂದು ಮನದಲ್ಲೇ ಯೋಚಿಸಿ, ಒಪ್ಪಿದವನ ಹೆಸರನ್ನಷ್ಟು ಬರೆದುಕೊಂಡು ದನ್ಯತು ಪಡೆಕೊಂಡೆನು.

* * * *

ಇಡೀ ರಾತ್ರಿ ನಿದ್ರೆ ಬರಲಿಲ್ಲ. ಉಪಸಂಪಾದಕನಾಗುವೆನೆಂಬ ಸಂತೋಷ ಒಂದೆಡೆ. ೨೫ ಚಂದಾದಾರರಾಗುವ ತನಕ ಡೆಲಿವರಿ ಪುಸ್ತಕ ಕೈಯಲ್ಲಿರಬೇಕಲ್ಲಾ ಎಂಬ ಬೇಸರ ಇನ್ನೊಂದೆಡೆ. ಸಂತೋಷವೂ, ಬೇಸರವೂ ಸಮ್ಮಿಳಿತವಾದಾಗ ಆದಕ್ಕೇನನ್ನುವರೋ! ನಾನರಿಯೆ.. ಬೆಳಗಾಯಿತು; ಹೊಡಚಿ. ಇದ್ದವರ, ಇಲ್ಲದವರ, ಬಂದವರ ಹೋದವರ, ಕೈಕಾಲು (ಇನ್ನೂ ಬೇರೆ ಅಂಗಾಂಗ)ಗಳನ್ನು ಹಿಡಿದು ೨೫ ಚಂದಾದಾರರನ್ನು ಹೇಗೂ ಒದಗಿಸಿಕೊಂಡು, ಆಫೀಸಿಗೆ ಹೋದೆ. ಒಳಗೆ ಯಾರೋ ಮಾತನಾಡುತ್ತಿದ್ದರು. ಸ್ವಲ್ಪ ಹೊತ್ತು ಹೊರಗೆ ನಿಂತೆ, ಒಳಗಿನಿಂದ ಈ ಮಾತು ನನಗೆ ಕೇಳಿಸಿತು,

'ಒಳ್ಳೆಯವಾಯಿತು, ನೀವು ಪ್ರಥಮದಲ್ಲೇ ಬಂದಿರಿ. .....ಎಂದು ಮುಂತಾಗಿ ಮೊನ್ನೆ (ನನ್ನ ಮತ್ತು ಸಂಪಾದಕರ ಪ್ರಥಮ ಭೇಟಿಯ ದಿನದಲ್ಲಿ) ನನಗೆ ಹೇಳಿದ ಮಾತುಗಳನ್ನೇ ಇಂದು ಇನ್ನೊಬ್ಬನಾರಿಗೋ ಹೇಳುತ್ತಿದ್ದರು ಮಾನ್ಯ ಸಂಪಾದಕರು. ನನ್ನ ಎದೆಗೆ ಸಿಡಿಲು ಬಡಿದಂತಾಯಿತು! ಆದರೂ ಒಂದು 'ಕೈ' ನೋಡಬೇಕೆಂದಾಲೋಚಿಸಿ ಒಡನೆ ಒಳ ಹೊಕ್ಕೆನು. ಕೂಡಲೇ ಸಂಪಾದಕರು ಅಲ್ಲಿದ್ದವರನ್ನುದ್ದೇಶಿಸಿ— 'ನೀವಿನ್ನು ಹೋಗಬಹುದು' ಎಂದರು. ಪುಣ್ಯಾತ್ಮ ಹೊರಟು ಹೋದ! ಬಳಿಕ ನನ್ನೊಡನೆ, 'ಏನು ಎಷ್ಟರ ವರೆಗಾಯಿತು ನಿಮ್ಮ ಕೆಲಸ?' ಎಂದು ಕೇಳಿದರು ಸಂಪಾದಕರು. 'ಇಪ್ಪತ್ತೆರಡು ಮಂದಿ ಚಂದಾದಾರರಾದರು. ಇನ್ನು ಬರೇ ಮೂರು ಮಂದಿಯಾಗಬೇಕು. ಇಂದು ಸಂಜೆಯೊಳಗೆ ಪೂರಾ ತೀರಿಸಿಬಿಡುವೆನು.' ಎಂದೆನು. ಇಷ್ಟು ಮಾತುಕತೆಗಳಾಗುವಾಗ, ಇನ್ನೊಬ್ಬನು ಡೆಲಿವರಿ ಪುಸ್ತಕ ಮತ್ತು ಪತ್ರಿಕೆಯ ಕೆಲವು ಪ್ರತಿಗಳೊಡನೆ ಒಳಹೊಕ್ಕನು. ಅವನು ಪ್ರವೇಶಿಸಿದೊಡನೆಯೇ, ಸಂಪಾದಕರು ನನ್ನನ್ನು ಕುರಿತು, ನೀವೀಗ ಹೋಗಿರಿ, ನಾಳೆ ಬನ್ನಿರಿ' ಎಂದರು. ನನಗೇಕೋ ಮನದಲ್ಲೊಂದು ತರದ ಸಂಶಯ!—ಸಂಪಾದಕರ ಮೇಲೆ. 'ಆಗಬಹುದು', ಎಂದು ಒಂದು ಗಿಡ್ಡತರದ ನಮಸ್ಕಾರವನ್ನು ಹೊಡೆದು, ಹೊರಟು ಹೊರಬಂದು, ಬಾಗಿಲ ಹೊರಗೆ ಕಿವಿಯನ್ನಗಲವಿರಿಸಿ ನಿಂತೆನು. ಒಳಗಿನಿಂದ,—

'ಒಂದು ಕಂಟಕವನ್ನು ತಪ್ಪಿಸಿದೆನು. ಒಂದು ಕೆಲಸಕ್ಕೆ ಎಷ್ಟು ಜನರು? ನೂರು ಜನರನ್ನು ನಾನು ಮಾಡಿಕೊಡುವೆನು, ಕೆಲಸವನ್ನು ನನಗೆ ಕೊಡಬೇಕೆಂದು ಈಗ ಹೋದವನು ಹುಟ್ಟು ತೊಟ್ಟುಕೊಂಡಿದ್ದ. ನಾಳೆ ಬಾ! ಎಂದು ಕಳುಹಿಸಿಬಿಟ್ಟೆ ಎಂಬ ಮಾತು ಸಂಪಾದಕರ ಕಂಠನಾಳದಿಂದ ಹೊರಬಿತ್ತು! 'ದಢಂ' ಎಂದಿತೊಮ್ಮೆ ಎದೆ. ಸುಧಾರಿಸಿಕೊಂಡೆನು. ಪುನಃ ಕೇಳಬಂತು ಈ ಮಾತು ಸಂಪಾದಕರಿಂದ:—ನೀವು ಬರೇ ಮೂವತ್ತೆಂಟು ಮಂದಿ ಚಂದಾದಾರರನ್ನಷ್ಟೆ ಸಂಪಾದಿಸಿ, ಇಪ್ಪತ್ತಮೂರೇ ರೂಪಾಯಿಗಳನ್ನು ವಸೂಲು ಮಾಡಿರುವಿರಿ. ಆದರೂ ಚಿಂತಿಲ್ಲ. ಕೆಲಸ ನಿಮಗಲ್ಲದೆ ಬೇರಾರಿಗೂ ಕೊಡಲಾರೆ! ಇದು ಖಂಡಿತ! ಆದಷ್ಟು ಬೇಗನೆ ಕಾರ್ಯ ಮುಗಿಸಿಕೊಂಡು ಬನ್ನಿರಿ; ಕೆಲಸಕ್ಕೆ ಕೂಡಲೇ ಹಾಜರಾಗಬಹುದು.

ಇದಕ್ಕೆ ಪ್ರತ್ಯುತ್ತರವಾಗಿ ಅವರೊಡನಿದ್ದ ವ್ಯಕ್ತಿಯಿಂದ 'ಇಷ್ಟು ಚಂದಾದಾರರನ್ನು ಮಾಡಿ, ಇಷ್ಟು ರೂಪಾಯಿಗಳನ್ನು ವಸೂಲು ಮಾಡಬೇಕಾದರೆ ಬಹಳ ಪ್ರಯಾಸಪಟ್ಟೆನು.' ಎಂಬ ಮಾತು ಹೊರಬಿತ್ತು. ಪುನಃ ಸಂಪಾದಕರಿಂದ ಆಗಿರಬಹುದು. ಅದಕ್ಕಾಗಿಯೇ ಕೆಲಸವನ್ನು ಯಾರಿಗೂ ಕೊಡದೆ ನಿಮಗೇನೇ ಬಾಕಿ ಇಟ್ಟುದುದು. ನೀವೀಗ ಬರುವಾಗ ಇಲ್ಲಿದ್ದ ಬೇತಾಳ ನನ್ನು ಅದಕ್ಕಾಗಿಯೇ ಅಟ್ಟಿಬಿಟ್ಟುದುದು .....' ಇಷ್ಟು ಹೇಳಿದೊಡನೆ ನನಗೆ ನಿಂತುಕೊಳ್ಳುವಷ್ಟರ ತ್ರಾಣವೂ ಉಳಿಯಲಿಲ್ಲ. ಆದರೂ ಹೇಗೋ ನಿಂತಿದ್ದೆ. ಇಪ್ಪತ್ತರಲ್ಲಿ ಡೆಲಿವರಿ ಪುಸ್ತಕದ ಸಮೇತ ಇನ್ನೊಬ್ಬ ನಿರ್ಭಾಗ್ಯನು ಆಫೀಸಿನ ಮಳಿಗೆಯ ಮೆಟ್ಟಿಲೇರುತ್ತಿದ್ದ. ನಾನು ನಿಂತಲ್ಲಿಂದ ಬೇಗನೆ ಆಕಡೆ ಹೋದೆ. ಮೇಲೇರುತ್ತಿದ್ದುದು ನನ್ನ ಮಿತ್ರ ದಾಸನು.

'ಏನು ದಾಮು ಇಲ್ಲೇಕೆ ಬಂದೆ? ನಿನ್ನನ್ನು ನೋಡದೆ ಬಹಳ ದಿನಗಳಾದವು. ಇದಾವ ಪುಸ್ತಕ ಬಗಲಲ್ಲಿ?' ಎಂದು ಪ್ರಶ್ನಿಸಿದೆ. 'ಇದು ಡೆಲಿವರಿ ಪುಸ್ತಕ. ನಮ್ಮ ಆಫೀಸಿಗೊಂದು ಡೆಲಿವರಿ ಪುಸ್ತಕ ಬೇಕಿತ್ತು.' ಎಂದು ಅವನು ಮಾತು ಮುಗಿಸುವುದರೊಳಗೆ ನಾನು ಕೇಳಿದೆ 'ನಿನ್ನ ಆಫೀಸಾವುದು? ನಿನಗೆ ಕೆಲಸ ಸಿಕ್ಕಿತೇ?' ಎಂದು. ಇದೇ 'ರಂಜಿತ ರಂಜನ' ಪತ್ರಿಕೆಯ ಉಪಸಂಪಾದಕ ನಾನು.....ಎಂದು ದಾಮು ಹೇಳುತ್ತಿರುವಾಗಲೇ, ಒಳಗೆ ಸಂಪಾದಕರೊಡನೆ ಮಾತಾಡಿ ಕೊಂಡಿದ್ದವನು ಅಷ್ಟರಲ್ಲೇ ನಮ್ಮ ಬಳಿಯಿಂದ ಹಾದು ಹೋಗುತ್ತಿದ್ದವನು 'ಏನು ನೀವು 'ರಂಜಿತ ರಂಜನ'ದ ಉಪಸಂಪಾದಕರೇ? ಎಂದಿನಿಂದ' ಎಂದು ಉದ್ವೇಗ ಪೂರ್ಣವಾಗಿ ಕೇಳಿದನು ದಾಮುವಿನೊಡನೆ. ಇಷ್ಟರಲ್ಲಿ ನಮ್ಮ ವರ್ಗಕ್ಕೇ ಸೇರಿದ ಇನ್ನೊಂದು ದುರ್ದೈವ ಪ್ರಾಣಿ ಮಾಳಿಗೆ ಹತ್ತಿ ಬಂತು. ಕೈಯಲ್ಲಿ ಡೆಲಿವರಿ ಪುಸ್ತಕ ಹಾಜರು!

ಸಂಪಾದಕರೊಮ್ಮೆ ಬಾಗಿಲಿನಿಂದ ಹೊರಗೆ ಇಣಿಕಿದರು. ಮುಖ ರಕ್ತವರ್ಣಕ್ಕಿಟ್ಟಿತು. ಕೂಡಲೇ, ತಾನು ಒಳಗಿದ್ದೇ ಬಾಗಿಲನ್ನು ಮುಚ್ಚಿ ಚಿಲಕ ಹಾಕಿಬಿಟ್ಟರು.

ಹರ್ಷಸುಧಾ

ಬರೆದವರು :—**ಮೋ. ನ. ನಾ.**

ಸುಬ್ಬಾಚಾರ್ರು ೧೯೧೦ ನೇ ಇಸ್ವಿ ಆಗಸ್ಟು ತಾರೀಖು ೧೦ ನೇ ಶನಿವಾರದ ದಿನ ಇನ್ಸ್‌ಪೆಕ್ಟರ ಆಫೀಸಿನಲ್ಲಿ ೨೦ ರೂ ಪಾಯಿ ನಂಬಳದ ಗುಮಾಸ್ತೆಯಾಗಿದ್ದವರು ಅದೇ ಆಗಸ್ಟು ೧೨ ನೇ ತಾರೀಖು ಸೋಮವಾರದ ದಿನ ೪೦ ರೂಪಾಯಿ ಸಂಬಳದ ಮೇಲೆ ಎ. ವಿ. ಸ್ಕೂಲ್ ಹೆಡ್ಮಾಸ್ತರಾದರು. ಅವರ ಅಜನ್ಮಾಭಿಲಾಷೆಯಾದ ಹೆಡ್ಮಾಸ್ತರಗಿರಿ ಅವರಿಗೆ ಈ ರೀತಿ ದೊರಕಿದುದು ಪೂರ್ವಾರ್ಜಿತ ಪುಣ್ಯದಿಂದಲ್ಲ. ಇನ್ಸ್‌ಪೆಕ್ಟರ್ ವಿನಾಯಕ ಶಾಸ್ತ್ರಿಗಳನ್ನು ಹತ್ತಾರು ವರ್ಷಗಳಿಂದ ಬಿಡದೆ ಬೇಡುತ್ತಿದ್ದುದೂ ಇದಕ್ಕೆ ಕಾರಣವಲ್ಲ. ಮೇಲೆ ಹೇಳಿದ ಶನಿವಾರ ಸೋಮವಾರಗಳ ಮಧ್ಯದಲ್ಲಿ ನಡೆದ ಒಂದು ಸಂಗತಿಯೇ ಈ 'ಬಡ್ತಿ'ಗೆ ಕಾರಣ. ಆ ಸಂಗತಿಯನ್ನೇ ಇಲ್ಲಿ ಹೇಳುವುದು.

*　　*　　*　　*

ವಿನಾಯಕ ಶಾಸ್ತ್ರಿಗಳು ವಿದ್ಯಾಭ್ಯಾಸದ ಇಲಾಖೆಯಲ್ಲಿ ಇನ್ಸ್‌ಪೆಕ್ಟರು. ಹೆಸರಿಗೆ ಶಾಸ್ತ್ರಿಗಳಾದರೂ ಇನ್ಸ್‌ಪೆಕ್ಟರು ಬಹಳ ಷೋಕಿ ಮನುಷ್ಯರು. ಸಂಗೀತ ಸಾಹಿತ್ಯಗಳಲ್ಲಿ ಕಾಲಕಳೆದು ಸದಾ ಆನಂದದಲ್ಲಿದ್ದ ಪ್ರಾಣಿ. ಕೆಲಸಗಳ ವಿಷಯ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳುತ್ತಲಿರಲಿಲ್ಲ. ಇದಕ್ಕೆ ಅವರ ಹೆಂಡತಿ ಸಹಾ ಸ್ವಲ್ಪ ಮಟ್ಟಿಗೆ ಕಾರಣರು. ಆಫೀಸಿನ ವಿಷಯಗಳಲ್ಲಿ ಅಮ್ಮಾವರ ಪ್ರವೇಶ ಸ್ವಲ್ಪ ಹೆಚ್ಚಾಗಿತ್ತು. ಇನ್ಸ್‌ಪೆಕ್ಟರು ಅಮ್ಮಾವರಿಗೆ ಹೆದರುತ್ತಿದ್ದರೇ ಇಲ್ಲವೇ ಎಂಬ ವಿಷಯ ಇನ್ನೂ ನಿಷ್ಕರ್ಷೆಯಾಗಿಲ್ಲ. ಅಂತೂ ಇಷ್ಟು ನಿಜ. ಮೇಸ್ತ್ರಿಗಳ ವರ್ಗಾವರ್ಗಿ, ಬದಲಿ ಕೆಲಸಗಳನ್ನು ಕೊಡುವುದು ಮುಂತಾದುವುಗಳಲ್ಲಿ ನಿರ್ಣಯವೆಲ್ಲಾ ಅಮ್ಮಾವರದು. ಆರ್ಡರಿನ ಕೆಳಗೆ ರುಜು ಮಾತ್ರ ಇನ್ಸ್‌ಪೆಕ್ಟರದು.

ಮೇಲ್ಕಂಡ ಶನಿವಾರದ ದಿನ ಮಧ್ಯಾಹ್ನ ಸುಬ್ಬಾಚಾರ್ರು ಇನ್ಸ್‌ಪೆಕ್ಟರ ಮನೆಗೆ ಆಫೀಸ್ ಕಾಗದ ತೆಗೆದುಕೊಂಡು ಹೋಗಿದ್ದರು. ಅವರ ಮೋರೆ ಹಿಗ್ಗಿತ್ತು. ಹಿಂದಿನ ದಿನ ನಾನು ನೂರಿನ ಹೆಡ್‌ಮಾಸ್ಟರ್ ಕೆಲಸ ಖಾಲಿ ಆಯಿತು ಎಂಬ ಸಮಾಚಾರ ಬಂದಿತ್ತು. ಖುಷೀ ಮೇಲಿದ್ದ ಇನ್ಸ್‌ಪೆಕ್ಟರು ಆ ಕೆಲಸ ನಿನಗಿರಲಿ ಎಂದು ಸುಬ್ಬಾಚಾರ್ರಿಗೆ ಹೇಳಿದ್ದರು. ಆದರೆ ಆ ಹಿಗ್ಗಿದ ಮೋರೆಯಲ್ಲಿ ಆಗಾಗ್ಗೆ ಆಳುಕಿನ ಛಾಯೆ ನುಳಿಯುತ್ತಿದ್ದಿತು. ಅಮ್ಮಾವರ ಮನಸ್ಸಿಗೆ ಈ ಏರ್ಪಾಡು ಬರುತ್ತೊ ಇಲ್ಲವೋ ಎಂತ. ಹಿಂದೆ ಎಷ್ಟೋ ಬಾರಿ ಇನ್ಸ್‌ಪೆಕ್ಟರು ಹೆಡ್‌ಮಾಸ್ತರಗಿರಿಯನ್ನು ದಯಪಾಲಿಸಿದ್ದಾಗ ಅಮ್ಮಾವರು ಕಲ್ಲುಹಾಕಿದ್ದರು.

ಮನೆಯಲ್ಲಿ ಸುಬ್ಬಾಚಾರ್ರ ಮುಖ ನೋಡಿದ ತಕ್ಷಣ ಇನ್ಸ್‌ಪೆಕ್ಟರ ಮುಖದ ಮೇಲೆ ನೋವಿನ ಭಾವನೆಯೊಂದು ಹರಡಿತು. ಅವರು ಗುಗ್ಗುಳು ನುಂಗುತ್ತಾ—'ಸುಬ್ಬು, ನಿನ್ನೆ ಹೆಡ್‌ಮಾಸ್ಟರ್ ಕೆಲಸ ಹೇಳಿದ್ದೆನಲ್ಲಾ, ಅದನ್ನು ಮರೆತುಬಿಡು' ಎಂದರು.

ಸುಬ್ಬಾಚಾರ್ರ ಮನಸ್ಸು ಒಂದೇ ಬಾರಿ ಪಾತಾಳಕ್ಕಿಳಿಯಿತು. ಆದರೂ ಹೃದಯವೇದನೆಯನ್ನು ಮರೆಮಾಡಿಕೊಂಡು ಮೊಗದ ಮೇಲೆ ನಿರ್ಲಕ್ಷ್ಯವನ್ನು ತೋರ್ಪಡಿಸುತ್ತಾ 'ತಮ್ಮ ಚಿತ್ತ' ಎಂದರು.

'ಆ ಮೂರೆಯಲ್ಲೇಕಯ್ಯಾ ಕೆಲಸ ನಿನಗೆ. ಈ ಊರಲ್ಲೇ ಹೆಡ್‌ಮಾಸ್ಟರ್ ಕೆಲಸ ಕೊಡುತ್ತೇನೆ, ಸ್ವಲ್ಪ ತಡೆ.'

'ಅಮ್ಮಾವರ ಮನಸ್ಸಿನಲ್ಲಿ ಇನ್ನೊಬ್ಬರಿದ್ದಾರೇನೋ ಆ ಊರಿಗೆ' ಎಂದು ಪೆಚ್ಚನೆ ಸುಬ್ಬಾಚಾರ್ರು ಸೂಚಿಸಿದಾಗ ಇನ್ಸ್‌ಪೆಕ್ಟರು ಬೆಚ್ಚಿಬಿದ್ದರು.

'ನೀನೆಲ್ಲಾ ತಿಳಿದ ಘಾಟಿ, ಸುಬ್ಬೂ. ಮುಖ್ಯವಾಗಿ ದೊಡ್ಡಬಾಯಿ ಹೆಂಗನರಿಗೆ ಮಾತಿಗೆ ಸಂದರ್ಭ ಸಿಕ್ಕಿಸಬಾರದು 'ಹುಟಮಾರಿಗಳನ್ನು ಹೋದ ಹಾದಿಗೆ ಬಿಡುವುದು ಸುಸೂತ್ರ' ಎಂದೊಬ್ಬ ದೊಡ್ಡ ಕವಿ ಹೇಳಿದ್ದಾನಯ್ಯ, ಹೋಗಲಿ, ಅವನರದ ಆಫೀಸ್ ಕೆಲಸಗಳೇನಾದರೂ ಉಂಟೋ'

ಹೆಚ್ಚೇನೂ ಇಲ್ಲ. ಈ ಕೆಲವು ಕಾಗದಗಳು ಈ ದಿನದ ಟಪ್ಪಾಲಿಗೆ ಹೋಗಬೇಕು.'

'ನಾಳೆ ಭಾನುವಾರ ರಜಾ. ಸದ್ಯ ಹಾಯಾಗಿರಬಹುದು.'

'ನಾಳೆ ದಿನ ಧರ್ಮಸಾಗರಕ್ಕೆ ಹೋಗಬೇಕಲ್ಲಾ. ದಾನವೀರ ದಂಡಪ್ಪನವರ ಶಿಲಾಪ್ರತಿಮೆಅನಾವರಣ ಮಾಡುವ ಉತ್ಸವ ನಾಳೆ ತಮ್ಮ ಅಧ್ಯಕ್ಷತೆಯಲ್ಲಿ.'

'ಒಹೋ, ನಾನು ಮರೆತಿದ್ದೆ. ನನಗೆ ಸ್ಮರಣಶಕ್ತಿ ಪೊದಲಿನ ಹಾಗಿಲ್ಲ ಸುಬ್ಬೂ. ಯಾವಾಗಲೂ ಏನೋ ಒಂದು ಬಗೆಯ ಬೇಸರ. ಶರೀರ ನಿತ್ರಾಣವಾಗುತ್ತೆ. ಹೈಮಾದಿ ಪಾನಕ, ಸಂಜೀವಾಮೃತ, ಐರನ್ ಟಾನಿಕ್ ಏನೇನೋ ಸೇವಿಸಿದ್ದೇನೆ. ಒಂದರಿಂದಲೂ ಉಪಯೋಗವಿಲ್ಲ, ನನ್ನ ಹೆಂಡತಿಯ ಎರಡು ಮಾತು ಕೇಳುವುದರೊಳಗೆ ಮನೋಧೈರ್ಯ ಕುಗ್ಗಿಹೋಗಿ, ಶಕ್ತಿ ಉಡುಗಿಹೋಗುತ್ತಯ್ಯಾ. ಈಗ ನೋಡು ಆ ಸಾಸನೂರಿನ ಕೆಲಸ ನಿನಗೇ ಕೊಡಬೇಕೆಂದಿದ್ದೆ. ಅಧೀನದಲ್ಲಿಲ್ಲದ ಕೆಲವು ಕಾರಣಗಳಿಗೆ ತಲೆ ಬಾಗಿ,—

'ಬಿಡಿಸಾರ್ ಆ ಯೋಚನೆ. ನಮ್ಮನೆ ಮನಸ್ಸಿಗೆ ಏಕೆ ಹಚ್ಚಿಕೊಳ್ಳುತ್ತೀರಾ?'

'ಛೇಷ್. ನಿನ್ನ ಸಮಾಧಾನ ಪ್ರಕೃತಿಗೆ ಒಪ್ಪಿದೆನಯ್ಯಾ. ನಾನೂ ಮನಸ್ಸನ್ನು ಸಮಾಧಾನವಾಗಿ ಯಾವಾಗಲೂ ಹರ್ಷಚಿತ್ತವಾಗಿ ಇಟ್ಟುಕೊಳ್ಳಲು ಒಂದಲ್ಲ ಒಂದು ತೆಗೆದುಕೊಳ್ಳುತ್ತೇನೆ. ಉಪಯೋಗವಿಲ್ಲ. ಸ್ವಲ್ಪ ದ್ರಾಕ್ಷಾರಸ ಸಹಾ ಸೇವಿಸಿದುದುಂಟು. ....ನೀನು ಹೀಗೆ ಸದಾ ಹರ್ಷೋನ್ಮುಖನಾಗಿರುತ್ತೀಯಲ್ಲಾ.....ಏನಾದರೂ ಅಭ್ಯಾಸ ಉಂಟೋ'

ಸುಬ್ಬಾಚಾರ್ರು ಸುತ್ತಮುತ್ತಲೂ ನೋಡಿ ಮೆಲ್ಲಗೆ ಹೇಳಿದರು. 'ಏನೂ ಇಲ್ಲ ಸ್ವಾಮಿ ದಿನವೂ ಸ್ವಲ್ಪ 'ಹರ್ಷಸುಧಾ' ತೆಗೆದುಕೊಳ್ಳುತ್ತೇನೆ.'

'ಹರ್ಷಸುಧಾ! ಏನದು?'

'ನಮ್ಮಜ್ಜನವರು ಆಯುರ್ವೇದ ಪಂಡಿತರು ಏನೋ ಕಷಾಯ ಬರೆದಿಟ್ಟಿದ್ದಾರೆ. ದ್ರಾಕ್ಷೆ, ಆಜ್ವಾನ, ಏನೇನೋ ಬೀಳುತ್ತೆ.'

'ಸ್ವಲ್ಪಕೊಡು ಯಾವಾಗಲಾದರೂ ನೋಡೋಣ..... ರಾತ್ರಿ ಗಾಡಿ ನೋಡು, ಬೆಳಗಾಗುವುದರೊಳಗೆ ಧರ್ಮಸಾಗರದಲ್ಲಿರಬೇಕು. ದಂಡಪ್ಪನವರ ಧರ್ಮಪಾಠಶಾಲೆಯ ಹೆಡ್ಮಾಸ್ಟರ್ರುನನ್ನ ನಂಗಡ ಕಾರೇಜಿನಲ್ಲಿದ್ದ. ಪಾಪ ಫೇಲಾದ. ಪುನಃ ಪರೀಕ್ಷೆಗೆ ಹೋಗಲು ಬಡತನ. ಕಮ್ಮಿ ಸಂಬಳಕ್ಕೇ ಕೆಲಸ ಸಿಕ್ಕಿದರೆ ಸಾಕೆಂದು ಸೇರಿಬಿಟ್ಟ. ಸುಬ್ಬೂ ಪ್ರಪಂಚದಲ್ಲಿ ಬೇಕೆಂದುದು ಸಿಕ್ಕುವುದಿಲ್ಲ. ಬಹಳ ದುಃಖ ಸುಬ್ಬೂ. ಮನಸ್ಸಿನ ಆಸೆಗಳೊಂದೂ ಆಗುವುದಿಲ್ಲ.....

'ಬಿಡಿಸಾರ್ ಪುನಃ ಆ ಯೋಚನೆ ನಮ್ಮಣ್ಣ ಶೇಕಡಾ ರ್ಯಾಗಿದ್ದಾರೆ ಸಾರ್ ಧರ್ಮಸಾಗರದಲ್ಲಿ.'

'ಸರಿ ನಿನಗೊಳ್ಳೆದಾಯಿತು. ತಮಾಷೆಯಾಗಿ ನಾಳೆ ಕಳೆದು ಬರೋಣ .....ಇಲ್ಲಿ ನೋಡು ಸುಬ್ಬೂ ಆ 'ಹರ್ಷಸುಧಾ' ಸ್ವಲ್ಪ ತಂದಿರು ನೋಡೋಣ.'

* * * *

ಭಾನುವಾರದ ದಿನ ಧರ್ಮಸಾಗರದ ದಾನವೀರ ದಂಡಪ್ಪನವರ ಧರ್ಮ ಪಾಠಶಾಲೆಯ ಆವರಣದಲ್ಲಿ ಅವರ ಶಿಲಾ

ಪ್ರತಿಮೆಯ ಅನಾವರಣೋತ್ಸವವು ಮಹಾ ವಿಜೃಂಭಣೆಯಿಂದ ನಡೆಯಿತು. ಆ ದಾತೃಗಳ ಮಕ್ಕಳಾದ ಬಸಪ್ಪನವರು ತುಂಬಾ ದುಡ್ಡು ಖರ್ಚುಮಾಡಿ ಶುದ್ಧ ಸ್ಫಟಿಕದಂತಿದ್ದ ಅಮೃತಶಿಲೆಯಲ್ಲಿ ಕೀರ್ತಿಶೇಷ ಪಿತೃವರ್ಯರ ಪ್ರತಿಮೆಯನ್ನು ಬೊಂಬಾಯಿ ನಿಂದ ಮಾಡಿಸಿ ತರಿಸಿದ್ದರು. ಅನಾವರಣೋತ್ಸವದ ಅತಿಶ ಯವಾದ ಏರ್ಪಾಡುಗಳಿಗೂ ಹೆಚ್ಚಾಗಿ ಹೊನ್ನು ಸುರಿದಿದ್ದರು.

ಇನ್ಸ್‌ಪೆಕ್ಟರ್ ವಿನಾಯಕ ಶಾಸ್ತ್ರಿಗಳು ಠೀವಿಯಿಂದ ಅಧ್ಯಕ್ಷಸ್ಥಾನವನ್ನು ನಿರ್ವಹಿಸಿ, ದಾತೃಗಳ ದಾನಗುಣವನ್ನೂ ಆದರ್ಶ ಜೀವನವನ್ನೂ ಗಂಟೆಗಳಕಾಲ ಚಿತ್ರ ವಿಚಿತ್ರವಾಗಿ ಕೊಂಡಾಡಿದರು. ಹೆಡ್ಮಾಸ್ತರು ತಮಗೆ ಕೆಲಸಸಿಗುವಂತೆ ಪಾಠಶಾಲೆಯನ್ನು ಸ್ಥಾಪಿಸಿದುದಕ್ಕಾಗಿ ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಮರ್ಪಿಸಿದರು. ನೆರೆದವರೆಲ್ಲಾ ಇನ್ಸ್‌ಪೆ ಕ್ಟರ ಉಪನ್ಯಾಸವನ್ನು ಕೊಂಡಾಡುತ್ತಾ ಮನೆಗೆ ಹೋದರು.

ಸಂಜೆ ಎಂಟು ಗಂಟೆ. ಶಾಸ್ತ್ರಿಗಳೂ ಅವರ ಬಾಲ್ಯ ಸ್ನೇಹಿತರಾದ ಹೆಡ್ಮಾಸ್ತರೂ, ಇನ್ಸ್‌ಪೆಕ್ಟರಿಳಿದುಕೊಂಡಿದ್ದ ನ್ಕೂಲಿನ ಭಾಗದಲ್ಲಿ, ತಮ್ಮ ಹಳೇ ಕಾಲವನ್ನು ನೆನೆದುಕೊಂ ಡು ಮಾತನಾಡುತ್ತ ಕುಳಿತಿದ್ದರು. ಊಟ ತೀರಿತ್ತು. ದೆಳಗಿನ ಗಡಾಚೆಗಳಿಂದ ಹೆಡ್ಮಾಸ್ತರು ಸೋತುಹೋಗಿದ್ದರು. ಶಾಸ್ತ್ರಿ ಗಳೂ ಅಧಿಕವಾಗಿ ಖಿನ್ನವಾದ ಮನಸ್ಸಿನಿಂದ ಮರುಗು ತ್ತಿದ್ದರು.

'ಏಕೋ ಬಹಳ ದೇಸರವಾಗಿದೆ' ಎಂದರು ಇನ್ಸ್‌ಪೆ ಕ್ಟರು.

'ಹೌದು. ನಾಕಾಗಿಹೋಗಿದೆ' ಎಂದರು ಹೆಡ್ಮಾ ಸ್ತರು.

'ದೇಹದಲ್ಲಿ ಅಶಕ್ತಿ, ಮನದಲ್ಲಿ ಅಶಾಂತಿ. ಇದಕ್ಕೌ ಷಧವೇನು' ಎಂದು ಗೊಣಗಿದರು ಇನ್ಸ್‌ಪೆಕ್ಟರು.

'ಸ್ವಲ್ಪ ಕಾಫಿ ತರಿಸಲೇ' ಎಂದರು ಹೆಡ್ಮಾಸ್ತರು.

'ಛೇ! ಕಾಫಿಯಿಂದ ಹೋಗುವುದಿಲ್ಲವಯ್ಯಾ ಈ ಕ್ಲೇಶ. ....ಸ್ವಲ್ಪ ದ್ರಾಕ್ಷಾರಸ....ವಿರಾಯಿತೀದು....ಇದ್ದ ರಾಗಿತ್ತು. ಇಲ್ಲವೇ? ಹೋಗಲಿ,' ಎಂದು ನಿಟ್ಟುಸಿರು ಬಿಟ್ಟ ಇನ್ಸ್‌ಪೆಕ್ಟರು, ಕ್ಷಣಕಾಲದ ಮೇಲೆ ಇದ್ದಕ್ಕಿದ್ದಹಾಗೆ ಕ್ಯಾಟಿಕೆ ಹೊಡೆದು 'ಗೊತ್ತಾಯಿತು! ಗೊತ್ತಾಯಿತು!' ಎಂದರು.

'ಏನು?'

'ಈ ಅಶಾಂತಿಗೆ ಔಷಧಿ. ನಮ್ಮ ಗುಮಾಸ್ತೆ ಸುಬ್ಬಾ ಚಾರ್ಯ ಹತ್ತಿರ 'ಹರ್ಷಸುಧಾ' ಕಷಾಯವಿದೆ. ಅವನದನ್ನು ಕುಡಿದು ಯಾವಾಗಲೂ ಹರ್ಷಚಿತ್ತನಾಗಿರುತ್ತಾನೆ. ನಾವೂ ಸ್ವಲ್ಪ ತರಿಸಿ ನೋಡೋಣ. ಅವರಣ್ಣ ಇಲ್ಲಿ ಶೇಕದಾರ್ರಂತೆ. ಅವರಮನೆಗೆ ಹೇಳಿಕಳುಹಿಸಿದರೆ ಆದೀತು.'

ಕಾಲುಗಂಟೆಯಲ್ಲಿ ಅಳು ಒಂದು ಸೀಸೆ ತಂದುಕೊಟ್ಟ. ಅದರಲ್ಲಿ ಕರೀಬಣ್ಣದ ದ್ರಾವಕವಿತ್ತು. ಇನ್ಸ್‌ಪೆಕ್ಟರು ಬಣ್ಣ ನೋಡಿ ಸ್ವಲ್ಪಕಾಲ ಅನುಮಾನಿಸಿದರು. ಆದರೆ ಬಿರಡೆ ತೆಗೆ ಯುತ್ತಲೂ ಹೊರಟ ಗಮಗಮಿಸುವ ವಾಸನೆಯಿಂದ ಸ್ವಲ್ಪ ಧೈರ್ಯ ತಂದುಕೊಂಡು ಒಂದು ಬೊಟ್ಟಿದ್ದಿ ಬಾಯಲ್ಲಿ ಚೀಪಿಕೊಂಡರು. ರುಚಿಯಾಗಿದ್ದಿರಬೇಕು. ತಕ್ಷಣ ಎರಡು ಲೋಟಾಗಳಲ್ಲಿ ಬಗ್ಗಿಸಿದರು. ಕಂಠನಾಳಗಳ ಮೂಲಕ ಕ್ಷಣ ಮಾತ್ರದಲ್ಲಿ ಹೊಟ್ಟೆಗೆ ಸೇರಿಸಿದರು.

ರಸವು ಉದರವನ್ನು ಸೇರುವುದೇ ತಡ, ಕುಡಿದವರಲ್ಲಿ ಅಪೂರ್ವವಾದ ಬದಲಾವಣೆಗಳಾದವು. ಮುಖದ ಮೇಲಿದ್ದ ಬೇಸರವು ಮಾಯವಾಯಿತು. ನವತಾರುಣ್ಯದ ಪ್ರವಾಹ ವೊಂದು ಅಂಗಾಂಗಗಳಲ್ಲಿ ಹರಿದಂತಾಯಿತು. ನಗೆ ಅಪ್ರಯ ತ್ನವಾಗಿ ಮೊಗಗಳ ಮೇರೆ ಮೂಡಿದವು. ಹಲ್ಲುಗಳು ಹೊರ ಬಿದ್ದವು. ಇನ್ಸ್‌ಪೆಕ್ಟರೆದ್ದು ಹೆಡ್ಮಾಸ್ತರ ಬೆನ್ನಿನ ಮೇಲೊಂದು ಗುದ್ದುಕೊಟ್ಟು 'ಹಾ ಹಾ ಹಾ' ಎಂದು ಬಾಯಿಬಿಟ್ಟರು. ಹೆಡ್ಮಾಸ್ತರು ಪ್ರತಿಯಾಗಿ ಇನ್ಸ್‌ಪೆಕ್ಟರ ಎರಡೂ ಭುಜಗಳಮೇಲೆ ಕ್ಕೈಗಳನ್ನು ತಟ್ಟಿದರು. ಅವರಿಬ್ಬರ ಮನಗಳೂ ಹದಿನೈದು ವರ್ಷಗಳ ಹಿಂದಿನ ಕಾಲಕ್ಕೆ ಪ್ರಯಾಣಮಾಡಿ ಅವರ ಶಾಲೆಯ ದಿನಗಳಲ್ಲಿ ನೆರೆಸಿದವು. ಮೇಷ್ಟರ ಕುರ್ಚಿಯ ಮೇಲೆ ಗುಂಡು ಸೂಜಿಗಳನ್ನು ಚುಚ್ಚಿಟ್ಟು ತಮಾಷೆ ನೋಡುತ್ತಿದ್ದುದೂ, ಹಾಸ್ಟೆ ಲಿನಲ್ಲಿ ಸ್ನೇಹಿತರ ಕೊಠಡಿಗಳ ಮುಂದುಗಡೆ ಗುಂಡಿಗಳನ್ನು ತೋಡಿ ಮೇಲೆ ಜಂಬಾನೆ ಹಾಸಿ, ಅವರು ಕಾಣದೆ ಒಳಗೆ ಬಿದ್ದಾಗ ಗಹಗಹಿಸಿ ನಗುವುದೂ ಮೊದಲಾದ ಹುಡುಗಾಟಿಕೆಯ ಸಾಮ್ರಾಜ್ಯದಲ್ಲಿ ಅವರೀಗ ಇಳಿದರು.

ಹೆಡ್ಮಾಷ್ಟರು ದೊಡ್ಡದಾಗಿ ನಕ್ಕರು. ಏಕೆಂದು ಇನ್ಸ್‌ಪೆಕ್ಟರು ಕೇಳಿದಾಗ ಉತ್ತರ ಕೊಟ್ಟರು. 'ಲೋ ಶಾಸ್ತ್ರಿ. ಆ ದಂಡಪ್ಪ—ಬಿಪುಣ—ಕಳ್ಳ—ಎಷ್ಟು ಜನರ ಹೊಟ್ಟೆ ಹೊಡೆದು ದುಡ್ಡು ಸಂಪಾದಿಸಿದ್ದನೋ—ಅವನನ್ನು ಎಷ್ಟುದ್ದುದ್ದ ಹೊಗಳಿ ದೆಯೋ ಮಧ್ಯಾನ್ಹ.'

'ಹೌದು. ನನಗಾಗ ಬುದ್ಧಿ ಸರಿಯಾಗಿದ್ದಿಲ್ಲ, ಆ ಪಾಪಿಗೆ ಪ್ರತಿಮೆಯೇಕೆ? ಒಬ್ಬರ ಬುದ್ಧಿಯೂ ಸರಿಯಾಗಿಲ್ಲ. ಆ ಬಡವರ ಮನೆ ಮುರುಕನಿಗೆ ಸ್ಕೂಲ್ ಕಟ್ಟಡದಲ್ಲಿ ಶಾಶ್ವತ ಶಿಲೆ. ಇಲ್ಲಾ ನಮ್ಮ ಬುದ್ಧಿ ಸರಿಯಾಗಿದ್ದಿಲ್ಲ. ಅವನ ಮಗ ಆ ಚಿಕ್ಕಕೆಂಟಕ ಪ್ರತಿಮೆ ಮಾಡಿಸಿದ ಅಂತ ನಾವೆಲ್ಲಾ ಅವ ನೊಡನೆ ಕುಣಿದೆವಲ್ಲಾ! ನಾವೇನು ಆಗ ನಿಶಾ ಸೇವಿಸಿ ದ್ದೆವೇ?'

ಹೆಡ್ಮಾಸ್ಟರು ಏನೂ ಹೇಳಲಿಲ್ಲ. ತಾವು ಮಧ್ಯಾನ್ಹ ಮಾಡಿದ ಪಾಪಕೃತ್ಯಕ್ಕೆ ಏನು ಪ್ರಾಯಶ್ಚಿತ್ತವೆಂದು ಯೋಚನ ತೊಡಗಿದ್ದರು.

ಇಸ್ಪೆಕ್ಟರು 'ಒಳ್ಳೇ ಯೋಚನೆ ಹೊಳೆಯಿತು' ಎಂದೆ ನ್ನುತ್ತಾ ಹೆಡ್ಮಾಸ್ಟರ ಬೆನ್ನಿನ ಮೇಲೆ ಇನ್ನೊಂದು ಗುದ್ದು ಹೊಡೆದರು.

'ಏನು? ಏನು ಯೋಚನೆ?' ಎಂದರು ಹೆಡ್ಮಾಸ್ಟರು ಬೆನ್ನು ಸವರಿಕೊಳ್ಳುತ್ತಾ.

'ಆ ವಿಷಯಲಂಪಟನ ಮುಖಕ್ಕೆ ಮಸಿ ಬಳಿಯೋಣ. ಬಡನಾಲಗಾರರನ್ನು ಹಿಂಸಿಸಿ ಹಣ ಸಂಪಾದಿಸಿದ ನಾಹು ಕಾರ.'

'ಛೇಷ್. ಒಳ್ಳೇ ಕೆಲಸ. ಇದಕ್ಕಿಂತಲೂ ಧರ್ಮವಾ ದ್ದು ಬೇರೊಂದಿಲ್ಲ. ಆದರೆ ಮಸಿಗಿಂತ ಟಾರ್ ಬಳಿಯುವುದು ಒಳ್ಳೇದು ಆ ಪ್ರತಿಮೆಗೆ. ನಮ್ಮ ಸ್ಕೂಲಲ್ಲಿ ತರಾಯಿಗೆ ಬಳಿ ಯುವುದಕ್ಕೆ ಅಂತ ಸ್ವಲ್ಪ ಟಾರ್ ತರಿಸಿಟ್ಟಿದೇನೆ.' ಎಂದರು ಹೆಡ್ಮಾಸ್ಟರು.

* * * *

ರಾತ್ರಿ ಹನ್ನೆರಡು ಗಂಟೆಯಲ್ಲಿ ಸೂಟುಧರಿಸಿ ಜರಿ ರುಮಾಲು ಹಾಕಿಕೊಂಡಿದ್ದ ಇಸ್ಪೆಕ್ಟರೂ ಷರಟು ಹಾಕಿ ಕೊಂಡು ಶಲ್ಯ ಹೊದ್ದಿದ್ದ ಹೆಡ್ಮಾಷ್ಟರೂ ರಾಗವಾಗಿ ಸಿಳ್ಳು ಹಾಕುತ್ತಾ ಆ ಮಧ್ಯಾನ್ಹ ಅನಾವರಣವಾದ ಶಿಲಾ ಪ್ರತಿ ಮೆಯ ಬಳಿಗೆ ನಡೆದಿದ್ದರು. ಹೆಡ್ಮಾಸ್ಟರ ಬಲಗೈಯ್ಯಲ್ಲಿ ಟಾರಿನ ಡಬ್ಬಾ ಒಂದು. ಇಸ್ಪೆಕ್ಟರ ಎಡಗೈಯ್ಯಲ್ಲಿ ಟಾರು ಬಳಿಯುವ ಬ್ರಷ್ ಇತ್ತು. ಅವರ ಬಲಗೈ ಹೆಡ್'ಮಾಸ್ಟರ ಎಡಗೈಯಲ್ಲಿ ಬಂಧಿತವಾಗಿತ್ತು. ಆಗ ಅವರಿಬ್ಬರನ್ನೂ ಯಾರಾದರೂ ನೋಡಿದ್ದರೆ ಆಶ್ಚರ್ಯದಿಂದ ಕಲ್ಲಾಗಿ ಹೋಗಿರುತ್ತಿದ್ದರು. ಆದರೆ ಊರಿನ ಜನರೆಲ್ಲರೂ ಮಲಗಿ ನಿದ್ದೆ ಹೋಗಿದ್ದುದರಿಂದ ಯಾರಿಗೂ ಈ ಶಿಲಾವಸ್ಥೆ ಪ್ರಾಪ್ತವಾಗಲಿಲ್ಲ.

ಪ್ರತಿಮೆಯ ಬಳಿ ಸಾರಿದೊಡನೆಯೇ, ಇಸ್ಪೆಕ್ಟರು ತಮ್ಮ ರುಮಾಲನ್ನು ತೆಗೆದು ಪ್ರತಿಮೆಯ ತಲೆಮೇಲಿಟ್ಟು ಬ್ರಷ್ ನಿಂದ ಟಾರನ್ನು ಪ್ರತಿಮೆಯ ಮುಖಕ್ಕೆ ತೊಡೆಯತೊಡಗಿದರು. ಹೆಡ್ಮಾಷ್ಟರು ಟಾರಿನ ಡಬ್ಬವನ್ನು ಅನುಕೂಲವಾಗಿ ಹಿಡಿದು ನಿಂತು,' ಮನೆಮುರುಕ — ದುರಭಿಮಾನಿ — ವಿಷಯಲಂಪಟ' ಎಂದು ಪ್ರತಿಮೆಯನ್ನು ಶಪಿಸುತ್ತಿದ್ದರು. ಕೊನೆಗೆ ತೊಡೆ ಯುವ ಕೆಲಸದಲ್ಲಿ ಬೇನತ್ತ ಇಸ್ಪೆಕ್ಟರು ಬ್ರಷನ್ನು ಬಿಸಾಡಿ, ಟಾರಿನ ಡಬ್ಬವನ್ನೇ ಎತ್ತಿ ಪ್ರತಿಮೆಯ ಮೇಲೆ ಎಸೆದರು. ಅದಾದ ಮೇಲೆ ಇಬ್ಬರೂ ಕೇಳೆ ಹಾಕಿ ನಗುತ್ತ ದಿಗ್ವಿಜಯ ಪಡೆದ ಧರ್ಮವೀರರಂತೆ, ಹಿಂದಿರುಗಿದರು.

[ವಾಚಕರಿಗೆ ಇಲ್ಲೊಂದು ಮಾತು. ಇಸ್ಪೆಕ್ಟರು ಹೆಡ್ಮಾ ಷ್ಟರಂತಹ ದೊಡ್ಡ ಮನುಷ್ಯರು ಹೀಗೆ ಮಾಡಿರಬಹುದೇಎಂಬ ಅನು ಮಾನ ನಿಮಗಿಲ್ಲ ತಲೆದೋರಿರಬಹುದು. ಆದರೆ ಜ್ಞಾಪಿಸಿಕೊಳ್ಳಿ. ಅವ ರೀಗ ಇಸ್ಪೆಕ್ಟರು ಹೆಡ್ಮಾಷ್ಟರಲ್ಲ. ಸುಬ್ಬಾಚಾರ್ರು ಪಿತಾಮಹಕೃತ 'ಹರ್ಷಸುಧಾ' ರಸವನ್ನು ಪಾನಮಾಡಿದುದರ ಮೂಲಕ ಮಾರ್ಪಾ ಡಾದ ಇಬ್ಬರು ತುಂಟು ಹುಡುಗರು. 'ಹರ್ಷಸುಧಾ' ಪಾನದ ಪ್ರಭಾವವು ನಿಮಗೆ ಮುಂದಾಗಬೇಕಾದರೆ ನೀವೂ ಒಂದಾವೃತ್ತಿ ಅದನ್ನು ಪಾನಮಾಡಿ ನೋಡಬೇಕು. ಒಂದು ವೇಳೆ ಅದು ಸಿಕ್ಕದಿ ದ್ದರೆ ಕೆಲವು ವಿಲಾಯಿತಿ ದ್ರಾಕ್ಷಾರಸಗಳನ್ನು ಉಪಯೋಗಿಸಿ. ಸ್ವಲ್ಪ ವಾದರೂ ಅನುಭವವಾಗುವುದು.]

* * * *

ಸೋಮವಾರ ಬೆಳಿಗ್ಗೆ ಸುಬ್ಬಾಚಾರ್ರು ಇಸ್ಪೆಕ್ಟರನ್ನೆ ಬ್ಬಿಸಲು ಅವರ ಕೊಠಡಿಯೊಳಗೆ ಹೋದರು. ಇಸ್ಪೆಕ್ಟರ ಬಚ್ಚೆಗಳೂ ಕೈಗಳೂ ಟಾರಾಗಿದ್ದವು. ಇಸ್ಪೆಕ್ಟರು ಅದನ್ನು ನೋಡಿ ಗಾಬರಿಯಾಗಿ ಬಚ್ಚೆ ತೆಗೆದುಹಾಕಿ ಬೇರೆ ಹಾಕಿ ಕೊಂಡರು.

'ಸುಬ್ಬೂ, ರಾತ್ರಿ ನೀನು ಕಳಿಸಿದ ಹರ್ಷಸುಧಾ ಬಹಳ ಒಳ್ಳೇದು. .....ದಿನಕ್ಕೆಷ್ಟು ತೆಗೆದುಕೊಳ್ಳಬೇಕೆಂದು ನೀನು ಹೇಳಲೇ ಇಲ್ಲ. ನಾವಿಬ್ಬರೂ ಒಂದೊಂದು ಲೋಟಾ ತೆಗೆದು ಕೊಂಡೆವು.'

ಸುಬ್ಬಾಚಾರ್ರು ಹಾರಿಬಿದ್ದರು. 'ಅರ್ಧ ಚಮಚಾ ಒಂದು ಲೋಟಾ ನೀರಿನಲ್ಲಿ ಸೇರಿಸಿ ತೆಗೆದುಕೊಳ್ಳಬೇಕಾಗಿತ್ತದನ್ನ. ಬಹಳ ಪಿತ್ತಕಾರಿ'

'ಅದಕ್ಕೇ ನಮಗೆ ರಾತ್ರಿ ಹಾಗೆ ಆದದ್ದು' ಎಂದು ಇಸ್ಪೆಕ್ಟರು ನಕ್ಕರು.

ಅಷ್ಟು ಹೊತ್ತಿಗೆ ಹೊರಗಡೆ ಜನಗಳ ಗಲಾಟೆ ಕೇಳಿ ಬಂತು. ಸುಬ್ಬಾಚಾರ್ರು ಹೊರಗೆ ಹೋಗಿ ನೋಡಿಕೊಂಡು ಬಂದು ನಡುಗುತ್ತಾ ನಿಂತರು. ರಾತ್ರಿ ಯಾರೋ ದುರಾತ್ಮರು ದಾನವೀರ ದಂಡಪ್ಪನವರ ಪ್ರತಿಮೆಗೆ ಟಾರು ಬಳಿದಿದ್ದಾರೆಂದು ಊರೆಲ್ಲೆಲ್ಲಾ ಸಮಾಚಾರ ಹರಡಿ, ಎಲ್ಲರೂ ನೋಡಲು ಬಂದಿದ್ದರು. ಬಸಪ್ಪನವರೂ ಅವರ ಅನುಯಾಯಿಗಳೂ ತಮ್ಮ ಹಿರಿಯರಿಗೆ ಅವಮಾನವಾಯಿತೆಂದು ಕೋಪದಿಂದ ಕುದಿಯುತ್ತಾ, ಅಪರಾಧಿಗಳಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಕೂಗಿಕೊಂಡು ಬರುತ್ತಿದ್ದರು. ದುರಾತ್ಮರನ್ನು ದೂರ ಹುಡುಕಬೇಕಾದ್ದಿಲ್ಲ. ಜರೀ ರುಮಾಲೊಂದು ಪ್ರತಿಮೆಯ ಮೇಲಿತ್ತು. ಅದು ಅಪರಾಧಿಗಳದೇ ಆಗಿರಬೇಕು.

ಇತ್ತ ಕೊಠಡಿಯಲ್ಲಿ ಇಸ್ಪೆಕ್ಟರು ಬೇರೆ ಬಟ್ಟೆ ಹಾಕಿಕೊಂಡು ಹೊರಗೆ ಹೊರಡಲು ರುಮಾಲು ಹುಡುಕುತ್ತಿದ್ದರು. ಸಿಕ್ಕಲಿಲ್ಲ. ಸುಬ್ಬಾಚಾರ್ರು ಪ್ರತಿಮೆಯ ಮೇಲೆ ರುಮಾಲು ಸಿಕ್ಕ ಸಂಗತಿಯನ್ನು ಹೇಳುತ್ತಲೂ ಇಸ್ಪೆಕ್ಟರ ಮುಖ ಬೆಳ್ಳಗಾಯಿತು. ಒಂದೇ ರುಮಾಲು ತಂದೂದಕ್ಕಾಗಿ ಸುಬ್ಬಾಚಾರ್ರನ್ನು ಬೈದರು.

ಅಷ್ಟು ಹೊತ್ತಿಗೆ ಅವಸರವಸರವಾಗಿ ಹೆಡ್ಮಾಸ್ಟರೂ ರೂಮಿನೊಳಕ್ಕೆ ಬಂದರು. ಅವರ ಮುಖವು ಬಿಳುಪಿನಲ್ಲಿ ಶಾಸ್ತ್ರಿಗಳ ಮುಖವನ್ನು ಮೀರಿಸಿತ್ತು. 'ರಾತ್ರಿ ಎಂಥಾ ಕೆಲಸ ಮಾಡಿಬಿಟ್ಟೆನಲ್ಲಾ ಶಾಸ್ತ್ರಿ. ಈಗೇನು ಮಾಡೋಣ' ಎಂದು ಕೈ ಕೈ ಮುರಿದುಕೊಂಡರು.

'ಎಲ್ಲಾ ನಿನ್ನದೇ ತಪ್ಪು' ಎಂದರು ಇಸ್ಪೆಕ್ಟರು.

'ಹೌದು ನನ್ನ ರುಮಾಲೇ ಪ್ರತಿಮೆಯ ಮೇಲಿಟ್ಟದ್ದು' ಎಂದು ಅಣಕಿಸಿದರು ಹೆಡ್ಮಾಸ್ಟರು.

ಪ್ರತಿಯೊಬ್ಬರೂ ಇನ್ನೊಬ್ಬರ ಮೇಲೆ ಹೀಗೆ ತಪ್ಪು ಹೊರಿಸುತ್ತಿರುವಾಗ ಸುಬ್ಬಾಚಾರ್ರು ಮೆಲ್ಲನೆ ಅಲ್ಲಿಂದ ಜಾರಿದರು.

'ಹೆಡ್ಮಾಸ್ಟರೆಲ್ಲಿ' ಎಂದು ಕೂಗುತ್ತಾ ದಾನವೀರ ದಂಡಪ್ಪನವರ ಕುಮಾರ ಬಸಪ್ಪನವರು ರೂಮಿನ ಬಳಿ ಬಂದರು. ಹೆಡ್ಮಾಸ್ಟರು ಒಳಗೇ ನಡುಗಿದರು. 'ದೇವರು ಎರಡು ರೆಕ್ಕೆ ಕೊಡಬಾರದಾಗಿತ್ತೇ. ಕಿಟಕಿಯ ಮೂಲಕ ಹೀಗೆಯೇ ಹಾರಿ ಹೋಗುತ್ತಿದ್ದೆನಲ್ಲಾ' ಎಂದು ಇಸ್ಪೆಕ್ಟರು ಉದ್ಗರಿಸಿದರು. ಬಸಪ್ಪನವರು ಒಳಗೆ ಪ್ರವೇಶಿಸಿ ಗಂಟೆ ಹೊಡೆದಂತೆ ಹೇಳಿದರು 'ನ್ಯಾಮಿಾ ಹೆಡ್ಮಾಷ್ಟರೇ, ಇಸ್ಪೆಕ್ಟರೇ, ನಿನ್ನೆ ತಾವು ಅನಾವರಣ ಮಾಡಿದ ಪ್ರತಿಮೆಗೆ ಯಾರೋ ಅಧಮರು ಟಾರು ಬಳಿದಿದ್ದಾರೆ. ಆ ನೀಚರಿಗೆ ತಕ್ಕ ಶಾಸ್ತಿ ಮಾಡಿದ ಹೊರತು ನನಗೆ ಸಮಾಧಾನವಾಗುವುದಿಲ್ಲ.'

'ಹಾಗೇನು? ಯಾರು ಬಳಿದವರು ಹಿಡಿದುಕೊಂಡು ಬನ್ನಿ.' ಎಂದು ಹೆಡ್ಮಾಷ್ಟರು ಸ್ವಲ್ಪ ಧೈರ್ಯತಂದುಕೊಂಡು ಕೇಳಿದರು.

'ಆ ನೀಚರ ಪತ್ತೆ ಇನ್ನೂ ಆಗಿಲ್ಲ. ಇಗೋ ಈ ಜರೀ ರುಮಾಲು, ಪ್ರತಿಮೆಯ ತಲೆಯ ಮೇಲೆ ಇದ್ದದ್ದು' ಎಂದು ಟಾರಿನ ಬರೆಗಳಿಂದಲಕ್ಯತವಾಗಿದ್ದ ರುಮಾಲೊಂದನ್ನು ಮುಂದೆ ಹಿಡಿದರು.

ಇಸ್ಪೆಕ್ಟರು ರುಮಾಲನ್ನು ನೋಡಿದ ತಕ್ಷಣ ತಲೆ ಮುಟ್ಟಿ ನೋಡಿಕೊಂಡರು. ಈ ಕಾರ್ಯ ಬಸಪ್ಪನವರ ಗೋಚರಕ್ಕೆ ಬಿದ್ದು ಅವರ ಮನಸ್ಸಿನಲ್ಲೊಂದು ಅನುಮಾನವನ್ನು ಹುಟ್ಟಿಸಿತು. ಅವರು ಇಸ್ಪೆಕ್ಟರ ಬೊಕ್ಕತಲೆಯನ್ನು ಸ್ವಲ್ಪ ಕಾಲ ಈಕ್ಷಿಸಿ 'ತಮ್ಮ ರುಮಾಲೆಲ್ಲಿ?' ಎಂದು ಕೇಳಿದರು.

ಈ ಸಾಧಾರಣ ಪ್ರಶ್ನೆಗೆ ಇಸ್ಪೆಕ್ಟರು ಅಷ್ಟೊಂದು ಏಕೆ ಬೆಚ್ಚಿಬೀಳಬೇಕು! ಬೆವರಿದ ಮುಖದಿಂದ, ಕುಗ್ಗಿದ ಧ್ವನಿಯಲ್ಲಿ 'ರಾತ್ರಿ ಯಾರೋ ಕದ್ದುಬಿಟ್ಟಿದಾರೆ.' ಎಂದರು. ಬಸಪ್ಪನವರ ಅನುಮಾನ ಈ ಉತ್ತರದಿಂದ ಕಡಿಮೆಯಾಗಲಿಲ್ಲ. ಮತ್ತಷ್ಟು ಪಚ್ಚಾಯಿತು. ಇಸ್ಪೆಕ್ಟರೇ ಟಾರು ಬಳಿದವರಿರಬೇಕೆಂದು ಅವರ ಮನಸ್ಸಿನಲ್ಲಿ ಹೇಗೊ ಬೇರೂರಿಬಿಟ್ಟಿತು. ತಮ್ಮ ಹಿರಿಯರಿಗಾದ ಅವಮಾನದ ನೆನಪು ಸಂಗಡಲೇ ಮನೋಪಥದಲ್ಲಿ ಸುಳಿಯಿತು. ಇದ್ದಕ್ಕಿದ್ದ ಹಾಗೆ ಬಸಪ್ಪನವರು ತಮ್ಮ ಅನುಯಾಯಿಗಳ ಕಡೆ ತಿರುಗಿ ಕಿರುಚಿದರು. 'ಈ ಹಾರು ವಯ್ಯನೇ ಆ ಕೆಲಸ ಮಾಡಿದವ. ಹಾಕಿ ಸದೆಬಡೆಯಿರಿ.'

ನೆರೆದವರಲ್ಲಿ ಅಲ್ಲೋಲಕಲ್ಲೋಲವಾಯಿತು. ಇಸ್ಪೆಕ್ಟರೂ ಹೆಡ್ಮಾಸ್ಟರೂ ಗಡಗಡ ನಡುಗಿದರು. ತಮ್ಮ ಪ್ರಾಣಗಳು ಹೋದುವೆಂದು ಅವರಿಗೆ ಮುಂದಟ್ಟಾಯಿತು. ಅಷ್ಟರಲ್ಲಿ ಒಂದು ಸಂಗತಿ ನಡೆಯಿತು. ಕೊಳಕು ಪಂಚೆಯನ್ನುಟ್ಟು ಅರೆ ಹರಿದ ಅಂಗಿಯನ್ನು ಧರಿಸಿದ್ದ ಸುಮಾರು ಹದಿನಾಲ್ಕು ವಯಸ್ಸಿನ ಧೃಡಕಾಯ ಹುಡುಗನೊಬ್ಬನು ಜನಗಳ ಗುಂಪನ್ನು

ಭೇದಿಸಿಕೊಂಡು ಬಂದು ಹೆಡ್ಮಾಸ್ತರ ಎದುರಿಗೆ ನಿಂತನು. ಅವನ ಕೈಯಲ್ಲಾ ಟಾರಾಗಿತ್ತು. ಬಟ್ಟೆಗಳ ಮೇಲೆ ಟಾರಿನ ಬರೆಗಳಿದ್ದುವು.

'ಏನು ರಾಮು ಈ ವೇಷ? ಈಗೇಕೆ ಬಂದೆ' ಎಂದು ಹೆಡ್ಮಾಸ್ತರು ಸಿಡುಕಿನಿಂದ ಕೇಳಿದರು.

'ನಾನೇ ಪ್ರತಿಮೆಗೆ ಟಾರು ಬಳಿದವನು. ತಪ್ಪನ್ನೊಪ್ಪಿ ಕೊಳ್ಳಲು ಬಂದೆ' ಎಂದು ರಾಮು ತಲೆ ಬಗ್ಗಿಸಿ ನೆಲದಮೇಲೆ ಕಾಲುಗುರು ಗೀರುತ್ತಾ ಹೇಳಿದ.

'ಆ! ಆ! ಆ! ಆ! ಆ!' ಎಂದು ಒಟ್ಟಿಗೆ ಐದು 'ಆ' ಗಳು ಕೇಳಿಬಂದವು. ಮೊದಲನೇ ಎರಡು 'ಆ!' ಗಳು ಹೆಡ್ಮಾಸ್ತರು ಮತ್ತು ಇನ್ಸ್ಪೆಕ್ಟರವು. ಕೊನೇ ಮೂರು 'ಆ!' ಗಳು ದಾನವೀರ ದಂಡಪ್ಪನವರ ಸುಪುತ್ರ ಬಸಪ್ಪನವರದು.

ತಲೆಯ ಮೇಲಿಂದ ಒಂದು ದೊಪ್ಪ ಬೆಟ್ಟವನ್ನು ಇಳಿಸಿ ಟ್ಟಂತಾಗಿ ಹೆಡ್ಮಾಸ್ತರು,

'ನೀನೇ ಆ ಪ್ರತಿಮೆಗೆ ರಾತ್ರಿ ಟಾರು ಬಳಿದಿದ್ದು?'

'ಹೂ'

'ರುಮಾಲು?'

'ಇನ್ಸ್ಪೆಕ್ಟರ ಕೊಟಡಿಯಿಂದ ನಾನೇ ಕದ್ದುಕೊಂಡು ಹೋಗಿ ಪ್ರತಿಮೆಯ ತಲೆಯ ಮೇಲಿಟ್ಟೆ.'

'ಒಳ್ಳೇ ಹುಡುಗಚೇಷ್ಟೆ ನಿನ್ನದು. ನಮ್ಮ ತಲೆಗೆ ತಂದಿದ್ದೆ.' ಎಂದು ಹೇಳುತ್ತಾ ಹೆಡ್ಮಾಸ್ತರು ಮುಗುಳ್ನಗೆ ನಕ್ಕರು.

'ಪಾಪ ಇನ್ನೂ ಹುಡುಗ ಬುದ್ಧಿ ಬಿಟ್ಟಿಲ್ಲ. ಚಿಕ್ಕಂದಿನಲ್ಲಿ ಚೇಷ್ಟೆ ಜಾಸ್ತಿ. ಇನ್ನು ಮುಂದೆ ಹೀಗೆಲ್ಲಾ ಮಾಡಬೇಡ' ಎಂದು ಇನ್ಸ್ಪೆಕ್ಟರು ಠೀವಿಯಿಂದ ಹೇಳಿದರು. ಅವರ ಹೆದರಿಕೆ ಹಾರಿಹೋಗಿತ್ತು.

ಬಸಪ್ಪನವರ ಉಗ್ರಮುಖ ಇನ್ನೂ ಇಳಿದಿರಲಿಲ್ಲ 'ಈ ಕೆಟ್ಟ ಹುಡುಗನನ್ನು ತಕ್ಷಣ ಸ್ಕೂಲಿನಿಂದ ಡಿಸ್‌ಮಿಸ್ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಕೆಲಸಕ್ಕೆ ರಾಜೀನಾಮೆಕೊಡಿ.' ಎಂದವರು ಹೆಡ್ಮಾಷ್ಟರೊಡನೆ ಹಟಹಿಡಿದರು. ಇನ್ಸ್ಪೆಕ್ಟರೆಷ್ಟು ಸಮಾಧಾನ ಹೇಳಿದರೂ ಕೇಳಲಿಲ್ಲ. ಕೊನೆಗೆ ಹೆಡ್ಮಾಸ್ತರು ಆಗಲೆಂದು ಒಪ್ಪಿದಮೇಲೆ ಬಸಪ್ಪನವರು ಇನ್ಸ್ಪೆಕ್ಟರನ್ನು ತಾವು ಬಂದುದಕ್ಕೆ ಕ್ಷಮಾಪಣೆ ಬೇಡಿ ಹೊರಟು ಹೋದರು.

ನೆರೆದ ಜನವೆಲ್ಲಾ ಹೊರಟು ಹೋಯಿತು. ಕೊಟಡಿಯಲ್ಲಿ ಇನ್ಸ್ಪೆಕ್ಟರು ಹೆಡ್ಮಾಷ್ಟರು ರಾಮೂ ಉಳಿದಿದ್ದರು.ಹೆಡ್ಮಾಷ್ಟರು ರಾಮುವನ್ನು ಕುರಿತು ,ನಿನ್ನ ಈಸ್ಕೂಲಿನಿಂದ ಡಿಸ್‌ಮಿಸ್ ಮಾಡಿದರೆ ಕೆಡತು. ಶೇಕದಾರ್ರಿಗೆ ಹೇಳು ಹೆದರಬೇಕಾದ್ದಿಲ್ಲ ಎಂತ. ಇನ್ಸ್ಪೆಕ್ಟರ ಊರಿಗೆ ಹೋದರೆ ಅಲ್ಲಿಯ ಸ್ಕೂಲಲ್ಲಿ ನಿನ್ನನ್ನು ಸೇರಿಸುವುದಿಲ್ಲದೆ, ನಿನ್ನ ಊಟ ತಿಂಡಿಗೂ ಏರ್ಪಾಡು ಮಾಡುತ್ತಾರೆ' ಎಂದು ಹೇಳಿ, ತಮ್ಮ ಮಾತಿಗೆ ಒಪ್ಪಿಗೆ ಕೇಳುವಂತೆ ಇನ್ಸ್ಪೆಕ್ಟರ ಕಡೆ ನೋಡಿದರು.

'ಈ ಹುಡುಗ ಯಾರು?' ಎಂದರು ಇನ್ಸ್ಪೆಕ್ಟರು.

'ಶೇಕದಾರ್ರ ಮಗ' ಎಂದು ಹೆಡ್ಮಾಷ್ಟರು ಉತ್ತರ ಕೊಟ್ಟಾಗ,ಇನ್ಸ್ಪೆಕ್ಟರ ಬುದ್ಧಿಗೆ ಒಂದು ಉಪಾಯ ಹೊಳೆಯಿತು.

'ಹಾಗಾದರೆ ಸುಬ್ಬಾಚಾರ್ರು ನಿಮ್ಮ ಚಿಕ್ಕಪ್ಪ' ಎಂದು ಕೇಳಿದರು. ರಾಮು ಹೂ ಎಂದು ತಲೆ ದೂಗಿದನು. 'ನೀನಿನ್ನು ಓದುವುದು ನಿಮ್ಮ ಚಿಕ್ಕಪ್ಪನ ಸ್ಕೂಲಲ್ಲಿ, ಸಾಸನೂರಲ್ಲಿ.' ಎಂದರು ಇನ್ಸ್ಪೆಕ್ಟರು. ರಾಮೂ, ಹೆಡ್ಮಾಸ್ತರೂ, ಹೊಗಟುಹೋದಮೇಲೆ ಸುಬ್ಬಾಚಾರ್ರು ಕೊಠಡಿಯೊಳಗೆ ಬಂದರು. ಇನ್ಸ್ಪೆಕ್ಟರು ಕೃತಜ್ಞತಾಪೂರ್ವಕ ಕಟಾಕ್ಷವೊಂದನ್ನು ಅವರ ಮೇಲೆ ಬೀರಿ 'ಸುಬ್ಬೂ, ನಿನ್ನ ತಂತ್ರ ಗೊತ್ತಾಯಿತು.' ಎಂದರು.

'ಏನು ತಂತ್ರ' ಎಂದು ಗಾಬರಿಯಿಂದ ಸುಬ್ಬಾಚಾರ್ರು ಕೇಳಿದರು.

'ನೆನ್ನೆ ರಾತ್ರಿ ನಾವು ದಂಡಪ್ಪನ ಮುಖಕ್ಕೆ ಟಾರು ಬಳಿದಿದ್ದೆವು. ಈ ದಿನ ನಿನ್ನ ಅಣ್ಣನಮಗ ಎಲ್ಲರೆದುರಿಗೆ ತಾನೇ ತಪ್ಪಿತಸ್ಥನೆಂದು ಒಪ್ಪಿಕೊಂಡ. ಸುಬ್ಬೂ, ಒಳ್ಳೇ ಸಮಯದಲ್ಲಿ ಮಾನ ಕಾಪಾಡಿದೆ.... .. ....ನಿನಗೆ ಹೇಗೆ ತಿಳಿಯಿತು ನಾವೇ ಅದನ್ನ ಮಾಡಿದ್ದು ಅಂತ.'

'ಒಂದು ರೋಚಾದಷ್ಟು, ಹರ್ಷಸುಧಾ, ನೀವು ಕುಡಿದೆವೆಂದು ಹೇಳಿದಾಗ'

'ಹಹ್ಹಾ! ..... ಆ ಹುಡುಗನ್ನ ಒಪ್ಪಿಸಲಿಕ್ಕೆ ಬಹಳ ಕಷ್ಟವಾಯಿತೇನೋ ನಿನಗೆ.'

'ಏನೂ ಇಲ್ಲ. ಈ ಸುಲಭ ತೆಲಸಕ್ಕೆ ಅವನೊಂದು ರಿಸ್ಟ್‌ವಾಚ್ ಕೇಳಿದ. ನಾನು ಚೌಕಾಯಿಸಿಮಾಡಿ ಒಂದು ಹಳೆಯ ಫೌಂಟೆನ್‌ಪೆನ್ ಕೊಟ್ಟು ಒಪ್ಪಿಸಿದೆ.'

ಹಾಗಾದರೆ ನಾನು ನಿನಗೆ ಹೊಸ ಪೆನ್ ಕೊಡಬೇಕಾಯಿತು. ಈಗ ಹಣ ಸನ್ನಲ್ಲಿಲ್ಲ. ಮುಂದಿನ ತಿಂಗಳು ಮೊದಲನೇ ತಾರೀಖಿಗೆ ನಿನ್ನ ಹೊಸ ಅಡ್ರೆಸ್ಸಿಗೆ ಕಳುಹಿಸುತ್ತೇನೆ.'

'ಹೊಸ ಅಡ್ರೆಸ್ಸು!'

'ಹೆಡ್ಮಾಷ್ಟರ್_ಸಾಸನೂರು.'

ಸುಬ್ಬಾಚಾರ್ರು ಕ್ಷಣಕಾಲ ಅಪ್ರತಿಭರಾದರು. ಸಂತೋಷ ಉಕ್ಕಿ ಬಂತು.

'ನಿಜವಾಗಿಯೂ?'

'ನಿಜವಾಗಿಯೂ.'

'ಅಮ್ಮಾವರೇನನ್ನುತ್ತಾರೋ'

'ನಾನು ಅದೆಲ್ಲಾ ಯೋಚನೆ ಮಾಡಿದ್ದೇನೆ, ಸುಬ್ಬೂ ಈಗಲೇ ಮನೆಗೆ ಕಾಗದ ಬರೆದು ಬಿಡುತ್ತೇನೆ ಈ ವಿಷಯ. ನಾನೆರಲ್ಲಾ ಊರು ಸುತ್ತಿಕೊಂಡು ತಿಂಗಳ ಕೊನೆಗೆ ಮನೆಗೆ ಹೋಗುತ್ತೇನೆ. ಅಷ್ಟೊತ್ತಿಗವಳೆಲ್ಲಾ ಮರೆತು ಬಿಟ್ಟಿರುತ್ತಾಳೆ .....ಈಗಲೇ ಆರ್ಡರ್ ಬರೆದುಬಿಡು ಸುಬ್ಬೂ, ರುಜು ಹಾಕುತ್ತೇನೆ."

: ಆಗಲಿ, ಸಾರ್. ತಮ್ಮ ಉಪಕಾರ ಬಹಳ.....'

'ಅದೆಲ್ಲಾ ಇರಲಿ ಬಿಡು, ಸುಬ್ಬೂ.....ಇನ್ನೊಂದು ವಿಷಯ, ಶೇಕದಾರ್ರು ಜರೀ ರುಮಾಲು ಹಾಕಿಕೊಳ್ಳುತ್ತಾರಲ್ಲವೇ'

'ಹೌದು ಸಾರ್, ನಿಮಗೊಂದು ಸಾಲ ಕೇಳಿ ತಂದಿದ್ದೇನೆ.'

ಹೊಸಜೀವ

ಲೀಲಾ ಅವಳತಾಯಿ, ಗುಡಿಸಿಲಿನ ಮುಂದೆ ಕುಳಿತಿದ್ದರು. ವಸಂತನ ಸಂಜೆ. ವನವು ಚಿಗುರಿತ್ತು. ಆ ಮಧುಮಾಸದ ತಂಬೆಲರು ಮನಸೆಳೆದು, ಹೊಸ ಜೀವವನ್ನೀಯುತ್ತಿತ್ತು. ಗುಡಿಸಿಲಿನ ಮುಂಭಾಗದಲ್ಲಿ ಗುಡ್ಡ. ಆ ಗುಡ್ಡದ ಮೇಲೆ ಹೆಸುಗಳು ಮೆಲ್ಲನೆ ಓಡಾಡುತ್ತಿದ್ದವು. ಸೂರ್ಯನು ಬಹು ನಿಧಾನವಾಗಿ ಗುಡ್ಡದ ಹಿಂಭಾಗಕ್ಕಿಳಿಯುತ್ತಿದ್ದನು. ಮುಳುಗುವ ಸೂರ್ಯನ ಬೊಬ್ಬು ಬಿಸಿಲು, ಲೀಲಾನ ಮುಖದ ಮೇಲೆ ಬಿದ್ದು, ಆ ಸುಂದರವದನದ ಕಾಂತಿಯನ್ನು ಇಮ್ಮಡಿಸಿತು. ನಸುಗೆಂಪಿನಿಂದ ಕೂಡಿದ ದುಂಡುಕೆನ್ನೆ; ಅರಳಿದ, ಮಿಂಚುವ ಕಣ್ಣುಗಳು; ಅವುದನ್ನೋ ಹುಡುಕುವ ನೋಟ; ವಿಶಾಲವಾದ ಹಣೆ; ಸುಳಿಯುತ್ತಿರುವ ಮುಂಗುರುಳು.

ಲೀಲಾ 'ಅಮ್ಮಾ?' ಎಂದಳು.

'ಏನು? ಲೀಲಾ?'

'ಸಂಜೆ ಎಷ್ಟು ಮನೋಹರವಾಗಿದೆ ನೋಡಮ್ಮಾ!'

'ಹೌದು ಲೀಲಾ; ವಸಂತನ ಸಂಜೆ'

'ಗಿಡಗಳೆಲ್ಲವೂ ಚಿಗುರಿದೆ.'

'ಅವುಗಳ ಮೇಲೆ ಸುಳಿಯುವ ಗಾಳಿ ಮನೋಹರವಾಗಿದೆ.'

'ಅಮ್ಮಾ, ಹುಲ್ಲುಗಾವಲನ್ನು ನೋಡು. ಎಷ್ಟು ಸೊಗಸಾಗಿದೆ—ಎಲ್ಲಿ ನೋಡಿದರೂ ಹಸುರು!'

'ಹೌದು ಚೆನ್ನಾಗಿದೆ'

'ಅಲ್ಲಿ ಹೋಗಿ ಕುಣಿಯಬೇಕೆನಿಸುತ್ತದೆ.'

'ಮಗೂ'

'ಬಹು ಬೇಸರವಾಗುತ್ತಮ್ಮಾ?'

'ಏಕೆ?'

'ನಾನೊಬ್ಬಳೆ; ನೀನು ನನ್ನೊಂದಿಗೆ ಆಟವಾಡುವುದೇ ಇಲ್ಲ!'

'ಮಗೂ'

'ನಿನಗೆ ಸಂತೋಷವಿಲ್ಲವೇ ನಮ್ಮಾ?'

'ಇದೆ, ಲೀಲಾ.'

'ಹಾಗಾದರೆ ಹುಲ್ಲು ಗಾವಲಿನ ಮೇಲೆ ಆಟವಾಡುವುದಕ್ಕೆ ನನ್ನೊಂದಿಗೆ ಏತಕ್ಕೆ ಬರುವುದಿಲ್ಲ?'

'ಜೇಡ ಮಗೂ!'

'ನನ್ನ ಸಂಗಡ ಆಡುವುದಕ್ಕೆ ಇನ್ನಾರೂ ಇಲ್ಲವೇ ನಮ್ಮ?'

'ನಿನ್ನ ನಾಯಿ ಇದಯಲ್ಲ!'

'ಅದಕ್ಕೆ ಮಾತು ಬರುವುದಿಲ್ಲ; ನನ್ನಂಥ, ನಿನ್ನಂಥವರು ಇನ್ನಾರೂ ಇಲ್ಲವೇನಮ್ಮಾ?'

'ಇದಾರೆ'.

'ಎಲ್ಲಿದಾರೆ?,

'ಬಹು ದೂರದಲ್ಲಿ'.

'ನಾವು ಅಲ್ಲಿಗೆ ಹೋಗೋಣವೆ?,

'ಹೋಗೋಣ ಲೀಲಾ'.

'ಅಲ್ಲಿಗೆ ಹೇಗಮ್ಮ ಹೋಗುವುದು?'

'ಎದುರಿಗಿನ ಗುಡ್ಡವನ್ನು ದಾಟಿ ಹೋಗಬೇಕು'.

'ಅಲ್ಲಿ ನಮ್ಮಂಥವರು ಎಷ್ಟು ಜನರಿದಾರೆ?'

'ಬಹು ಮಂದಿ'.

'ಅವರಿಗೆ ಬೇಸರವಿಲ್ಲವೆ?'

'ಇಲ್ಲ'.

'ಏಕೆ?'

'ಆಟವಾಡುತ್ತಿರುತ್ತಾರೆ'.

'ಯಾರೊಂದಿಗೆ?'

'ಅವರಿಗೆ ಗೆಳೆಯರಿದ್ದಾರೆ'.

'ನನಗೆ ನಿನಗೆ ಗೆಳೆಯರಿಲ್ಲವೆ?'

'ಸುಮ್ಮನೆ ಇರು ಲೀಲಾ, ನೀನೂ ಆಟವಾಡುವಯಂತೆ!'

' ಯಾಕೊಂದಿಗಮ್ಮಾ ? '

' ನಿನಗೊಬ್ಬ ಗೆಳೆಯ ಸಿಗುತ್ತಾನೆ ; ಅವನೊಂದಿಗೆ '.

' ಅವನು ' ಅಂದರೆ ಯಾರಮ್ಮಾ ? '

' ಅವರು ಗಂಡಸರು—ನಮ್ಮ ಹಾಗೆಯೇ ? '

' ಗಂಡಸು' ಅಂದರೆ, ಅದು ಒಂದು ಪ್ರಾಣಿ ಏನಮ್ಮಾ?'

' ಅಲ್ಲ ಮಗು, ನಮ್ಮಂತೆಯೇ ; ಆದರೆ.....'

' ಆದರೆ ಏನಮ್ಮಾ ? '

' ..... '

' ಆದೇಕಮ್ಮ ಹೇಳೊಲ್ಲ ; ಅವರು ಹೇಗಿರುತ್ತಾರೆ ?'

' ಮಗೂ, ಲೀಲಾ ನುಮ್ಮನಿರು '

' ಅಮ್ಮಾ ! '

' ಏನು ಲೀಲಾ ? '

' ಆದೆಂಥ ಗಂಡಸಮ್ಮ ; ನಾವು ಹೇಳಿದಹಾಗೆ ಕೇಳುತ್ತೇನಮ್ಮ ? '

ಕೊಂಚ ಕಷ್ಟ ; ಆದರೆ ಪಳಗಿಸಬಹುದು.'

' ಹಾಗಿದ್ದರೆ ಅಲ್ಲಿಗೆ ಹೋಗೋಣ ; ಒಂದು ಗಂಡಸನ್ನು ಹಿಡಿದು ಆಟವಾಡಿಸೋಣ ! '

' ಆಗಲಿ ಲೀಲಾ , '.

' ಅದು ಏನು ತಿನ್ನುತ್ತದಮ್ಮ ? '

' ನಾವು ತಿನ್ನುವ ಆಹಾರವೇ '

ಅದಕ್ಕೆ ಒಂದು ಪುಟ್ಟ ಕೊಠಡಿ ಸಾಕು—ಅಲ್ಲ ವೇನಮ್ಮ ! '

' ಲೀಲಾ ಅದಕ್ಕೆ ಕೊಠಡಿ ಬೇಡ '

' ನಮ್ಮ ಜತೆಗೆ ಇರುತ್ತೇನಮ್ಮ ? ತಪ್ಪಿಸಿಕೊಳ್ಳುವುದಿಲ್ಲವೆ ! '

' ಜೋಪಾನವಾಗಿ ಕಾದುಕೊಂಡಿರಬೇಕು. '

' ಆಗಲಿ, ನಾನು ಕಾದುಕೊಂಡಿರುತ್ತೇನೆ. '

' ಲೀಲಾ ! '

' ಅಮ್ಮಾ ? '

' ಬಹು ಜೋಪಾನವಾಗಿರಬೇಕು. '

' ಆಗಲಿ ಅಮ್ಮಾ. ಇಂದೇ ಗುಡ್ಡದಾಚೆಗೆ ಹೋಗೋಣವೇ ? ಅದನ್ನು ಮುಟ್ಟಬೇಕೆಂದು ಬಹು ಆಶೆಯಾಗಿದೆ..... ಮನಸ್ಸಿನಲ್ಲಿ ಏನೋ ಒಂದು ತರಹ.....ಹೇಳುವುದಕ್ಕೆ ಬಾಯಿ ಬರುವುದಿಲ್ಲ. '

' ಲೀಲಾ ! '

' ಹೌದು ಅಮ್ಮ ; ಏನೋ ಒಂದು ಸಂತೋಷ ಅಮ್ಮ ! '

* * * *

' ಹೌದು, ಗುಡ್ಡದಿಂದಾಚೆಗೆ ಕರೆದುಕೊಂಡು ಹೋಗುವದಿನ ಬಂದಿದೆ. ಕರೆದುಕೊಂಡು ಹೋಗಬೇಕು ; ಹೊಸ ಜೀವದ ಚಿನ್ಹೆಗಳು ಕಾಣುತ್ತಿವೆ. ಗೆಳೆಯರೊಡನೆ ಬೆರೆಯಲಿ. ಆಟವಾಡಲಿ ; ಸಂತೋಷಪಡಲಿ ; ಜೀವನದ ಆಳದಲ್ಲಿ ಧುಮುಕಿ ಆಚೆಯ ದಡವನ್ನು ಸೇರಲಿ.....ಲೀಲಾ, ಸೂರ್ಯನುದಯದೊಡನೆ ಹೋಗೋಣ. '

' ಆಗಲಿ ಅಮ್ಮ. ರೆಕ್ಕೆ ಇದ್ದರೆ ಹಾರಿಹೋಗಬಹುದು ಅಲ್ವೆ ? '

' ಲೀಲಾ ! '

' ಅಮ್ಮಾ ! '

— ನಾಗರಾಜ

(ಸೋದರ ಸಂಘ, ಶಿವಮೊಗ್ಗಾ)

"ಸ್ವದೇಶೀ ಪ್ರಚಾರಕ"

(ಕರ್ನಾಟಕದ ಒಂದೇ ಒಂದಾದ ಸ್ವದೇಶಿ ಪತ್ರಿಕೆ)

ವರ್ಷದಲ್ಲಿ ಮೂರು ವಿಶೇಷ ಸಂಚಿಕೆಗಳು,

ಎಲ್ಲ ಸಂಚಿಕೆಗಳೂ ಸಚಿತ್ರ.

ವಿಖ್ಯಾತ ಕತೆಗಾರರ ಕತೆಗಳು

ವಾರ್ಷಿಕ ಚಂದಾ

ಬರೀ ರೂ. ೧-೪-೦ (ಅಂಚೆ ವೆಚ್ಚ ಸಹಿತ)

ಸ್ವದೇಶೀ ಪ್ರಚಾರಕ ಆಫೀಸ್,

ರಥಬೀದಿ, ಮಂಗಳೂರು. ದ. ಕ.

ಸಾರುವ ಧ್ವನಿ *

ಹೌದು—ಸತ್ಯ! ಹೆದರಿದ್ದೆ, ಬಹಳ ಬಹಳ ಹೆದರಿ ನಡುಗಿದ್ದೆ; ಆದರೆ, ನಾನು ಹುಚ್ಚನೇ? ಉಹು! ವ್ಯಾಧಿಯು ಇಂದ್ರಿಯಗಳನ್ನು ಮುರಿದಿರಲಿಲ್ಲ—ಮಂಕು ಮಾಡಿರಲಿಲ್ಲ; ಮೊನಚಾಗಿ ಹರಿತ ಮಾಡಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ, ಶಬ್ದೇಂದ್ರಿಯ ತೀಕ್ಷ್ಣವಾಗಿತ್ತು. ಸ್ವರ್ಗ ಮರ್ತ್ಯದ ಹವ್ಯಾಸಗಳನ್ನು ಕೇಳುತ್ತಿದ್ದೆ. ಅಧೋಲೋಕದ ಅನೇಕ ವಿಷಯಗಳು ಕೇಳಿಬರುತ್ತಿತ್ತು. ಹಾಗಾದರೆ ನಾನು ಹುಚ್ಚನು ಹೇಗೆ? ನೋಡಿ!—ಸರಿಯಾಗಿ ನೋಡಿ! ಎಷ್ಟು ಸಾವಧಾನದಿಂದ, ದೇಹಮನೋಶಾಂತಿಯಿಂದ, ನಾನು ಎಲ್ಲವನ್ನೂ ಹೇಳುತ್ತೇನೆ.

ಹೇಗೆ ಹೊದಲು, ಆ ಭಾವನೆ ಮನಸ್ಸಿನೊಳಕ್ಕೆ ನುಗ್ಗಿತೋ?—ನನಗೇ ತಿಳಿಯದು; (ನನ್ನ ಯೋಚನೆಗೆ ಮಿಾರಿದ್ದಿದು!)—ಆದರೆ ಒಂದು ಸಲ ನುಗ್ಗಿದುದು, ರಾತ್ರಿ ಹಗಲು ಎಡೆಬಿಡದೆ ಹಿಡಿದುಬಿಟ್ಟಿತು, ಪಿಶಾಚಿ ಹಿಡಿದಂತೆ! ಗುರಿ—ಒಂದೂ ಇಲ್ಲ; ಆಶೆ ಆಕಾಂಕ್ಷೆ—ಉಹು; ಆ ಮುದುಕನನ್ನು ನಾನು ಪ್ರೀತಿಸುತ್ತಿದ್ದೆ; ಅನ್ಯಾಯವೊಂದೂ ಅವನು ಮಾಡಿರಲಿಲ್ಲ; ಕೀಳಾಗಿ ನನ್ನನ್ನೆಂದೂ ಕಂಡುದಿಲ್ಲ; ಅವನ ಹಣದ ಮೇಲೆ ಆಶೆಯಿದ್ದಿಲ್ಲ. ಅವನ—ಆ ಕಣ್ಣು; ಹೌದು; ಅದೆ ಅದೇ—ಒಂದು ಕಣ್ಣು; ಎಡಗಡೆಯ ಆ ಗೃಧ್ರ ಕಟಾಕ್ಷ—ಗೂಗೆಗಣ್ಣು—ಒಂದು ಮಾಸಲು ಹಸುರು ಗಣ್ಣು; ಮೇಲೊಂದು ಪೊರೆ—ಸಾಕು! ಆ ಕಣ್ಣು ನನ್ನ ಮೇಲೆ ಬಿದ್ದರೆ ರಕ್ತ ತಣ್ಣಗಾಗುತ್ತಿತ್ತು! ಸ್ವಲ್ಪ—ಸ್ವಲ್ಪಸ್ವಲ್ಪವಾಗಿ ನನ್ನ ಮನಸ್ಸನ್ನು, ಧೃಢಮಾಡಿದೆ, ಧೈರ್ಯಮಾಡಿದೆ—ಆ ಮುದುಕನ ಪ್ರಾಣ ಹಿಂಡುವುದಕ್ಕೆ; ಆ ಮೇಲೆ, ಆ ಕಣ್ಣು ಎಂದೆಂದಿಗೂ ನನ್ನ ಮೇಲೆ ಬೀಳುವುದಿಲ್ಲ.

ಇದೀಗ ನನ್ನ ಆಲೋಚನೆ. ನೀವು ಹುಚ್ಚನೆಂದು ಭಾವಿಸಿರಬಹುದು; ಹುಚ್ಚರಿಗೆ ಯಾವುದರ ಅರಿವೂ ಇರುವುದಿಲ್ಲ; ಆದರೆ ನೀವು ನೋಡಿರಬೇಕಾಗಿತ್ತು ನನ್ನ! ನೋಡುತ್ತಾ ಇರಿ; ಎಷ್ಟು ಬುದ್ಧಿವಂತಿಕೆಯಿಂದ, ನಾನು ಮುಂದುವರಿದೆ—ಎಚ್ಚರಿಕೆಯಿಂದ; ಕುಶಾಗ್ರತೆಯಿಂದ—ಎಷ್ಟು ಊಹೆಯಿಂದ, ಎಷ್ಟು ಮುಂದಾಲೋಚನೆಯಿಂದ; ಚಮತ್ಕಾರದಿಂದ; ನನ್ನ ಕೆಲಸಕ್ಕೆ ಕೈಹಾಕಿದೆ—ನನ್ನಷ್ಟು ಪ್ರೀತಿಸುವವರು, ವಿಶ್ವಾಸಿಗಳು ಆ ಮುದುಕನಿಗೆ—ಅವನ ಜೀವನದ ಕಡೆಯವಾರದಲ್ಲಿ—ಮತ್ತೊಬ್ಬರಿದ್ದಿಲ್ಲ. ಪ್ರತಿದಿನವೂ ಮಧ್ಯರಾತ್ರಿಯಲ್ಲಿ—ಹೌದು, ಅಲ್ಲಿವರೆಗೂ ಕಾದಿದ್ದು, ಸರಿರಾತ್ರಿಗೆ ಸರಿಯಾಗಿ ಅಗಣಯನ್ನು ತಿರುಗಿಸಿ ಬಾಗಿಲು ತೆರೆಯುತ್ತಿದ್ದೆ—ಓ! ಎಷ್ಟು ಮೃದುವಾಗಿ—ಶಬ್ದಹೀನವಾಗಿ! ಬಾಗಿಲು ತೆರೆದು—ನನ್ನ ತಲೆ ಹಿಡಿಯುವಷ್ಟು ಮಾತ್ರ ತೆಗೆದು, ದೀಪವನ್ನು, ಕತ್ತಲೆಯನ್ನು ಅಣುಮಾತ್ರವೂ ಭೇದಿಸದಂತಿರುವ ದೀಪವನ್ನು, ಪೂರ್ಣವಾಗಿ, ಸಂಪೂರ್ಣವಾಗಿ, ಒಂದು ಸೂಜಿಮೊನೆಯಷ್ಟು ಬೆಳಕೂ ಬೀಳದಂತೆ ಮುಚ್ಚಿರುವ ದೀಪವನ್ನು ಬಾಗಿಲಿನ ಕಂಡಿಯಲ್ಲಿ ಹಿಡಿದು, ನನ್ನ ತಲೆ—ತಲೆ ಮಾತ್ರ ಒಳಗಿಡುತ್ತಿದ್ದೆ. ಎಷ್ಟು ಯುಕ್ತಿಯಿಂದ (ನೀವು ನೋಡಿದ್ದರೆ ಬಿದ್ದು ಬಿದ್ದು ನಗುತ್ತಿದ್ದಿರಿ) ತಲೆಯನ್ನು ನಿಧಾನವಾಗಿ ಬಹಳ, ಬಹಳ ನಿಧಾನವಾಗಿ, ಮುದುಕನ ನಿದ್ದೆಯನ್ನು ತುಸವೂ ವಿರಸ ಮಾಡದೆ (ಮೊದಲೇ ಮುದುಕನ ನಿದ್ದೆ!) ನೋಡಿ! ಒಂದು ಗಂಟೆ ದೀಕ್ಷಾಯಿತು ನನ್ನ ತಲೆಯನ್ನು ಆ ಬಾಗಿಲಿನ ತೆರೆದ ಕಂಡಿಯಲ್ಲಿ ಇಡದೇ ಕಾದರೆ. ಎಷ್ಟು? ಮುದುಕನ ಹಾಸಿಗೆ ಕಾಣುವಷ್ಟು; ಇಷ್ಟು ಬುದ್ಧಿವಂತನಾಗಿರುತ್ತಾನೆಯೇ ಹುಚ್ಚ? ತಲೆ, ಒಳಕ್ಕೆ ಸರಿಯಾಗಿ ಹೋದಮೇಲೆ, ಮೆಲ್ಲನೆ, ದೀಪದ ಹೊದಿಕೆಯ ಅಂಚೊಂದನ್ನು ಎಚ್ಚರಿಕೆಯಿಂದ ಎಷ್ಟು ಎಚ್ಚರದಿಂದ ಅತಿ ಎಚ್ಚರದಿಂದ (ಕೊಂಡಿ, ಕ್ರಿಕ್ ಅಂದು ಬಿಟ್ಟಿರೆ!) ತೆಗೆದೆ, ಒಂದು ಸೂಜಿ ಮೊನೆಯ ಕೊನೆಯಷ್ಟು ಬೆಳಕಿನ ಮೊನೆಯು ಆ ಗೃಧ್ರನಯನದ ಮೇಲೆ ಬೀಳುವಷ್ಟು ಮಾತ್ರ. ಏಳು ದಿವಸ ಏಳು ನೀಳವಾದ ರಾತ್ರಿಯಲ್ಲಿ—ಪ್ರತಿದಿನವೂ ಸರಿರಾತ್ರಿಯಲ್ಲಿ ಅದೂ. ಆದರೆ, ಆ ಕಣ್ಣು ಯಾವಾಗಲೂ ಮುಚ್ಚೇ ಇರುತ್ತಿತ್ತು! ಆದ್ದರಿಂದ, ನನ್ನ ಕೆಲಸವು ನನ್ನಲ್ಲೇ ಇತ್ತು. (ನೋಡಿ

---

* ಅಮೇರಿಕಾದ ಕತೆಗಾರರಾದ (Edgar Allan Po. ಎಡ್ಗಾರ್ ಅಲನ್ ಪೋಯವರ The Tell-Tale Heart ಎಂಬುದರ ಅನುವಾದ.

ಹುಚ್ಚುತನ!) ನನಗೆ ತೊಂದರೆ ಕೊಡುತ್ತಿದ್ದುದು, ಆ ಮುದುಕನ ಕನ್ನಲ್ಲಿ ಆ ಕೆಟ್ಟ ಕಣ್ಣು! ಬೆಳಗಾದ ಮೇಲೆ ಪ್ರತಿ ಬೆಳಿಗ್ಗೆಯೂ ಧೈರ್ಯದಿಂದ, ಅವನ ಕೋಣೆಗೆ ಹೋಗಿ ದಿಟ್ಟತನದಿಂದ ಮಾತಾಡಿ, ನಗೆಯಿಂದ ಅವನನ್ನು ಕರೆಯುತ್ತ, ರಾತ್ರಿ ಸುಖ ನಿದ್ರೆ ಬಂತೆ, ಎಂದು ಕೇಳುತ್ತಿದ್ದೆ.

ಎಂಟನೆಯ ರಾತ್ರಿ–ಎಚ್ಚರಿಕೆ ಇಮ್ಮಡಿ–ದಿನಚರಿಯ ಎಚ್ಚರಕ್ಕಿಂತ ಹೆಚ್ಚು ಎಚ್ಚರಿಕೆಯಿಂದ ಬಾಗಿಲನ್ನು ತೆರೆದೆ. ನನ್ನ ಕೈಗಳ ವೇಗಕ್ಕಿಂತ ಗಡಿಯಾರದ ಮುಳ್ಳು ಎಷ್ಟೋ ಬೇಗನೆ ಹೋಗುತ್ತಿತ್ತು; ಮೊದಲು ಸಾರಿ, ಆ ರಾತ್ರಿ ನನ್ನ ಶಕ್ತಿಯ, ಚಾತುರ್ಯದ ಪರಿಮಾಣದ ಅನುಭವವಾಯಿತು. ಒಂದು ಯೋಚನೆಯಿಂದ–ನಾನು ಮೆಲ್ಲನೆ ಬಾಗಿಲನ್ನು ತೆರೆಯುತ್ತಿರುವುದು;–ಆ ಮುದುಕನು ನನ್ನ ಗುಪ್ತ ಸಂಧಾನವನ್ನು ಕನಸಿನಲ್ಲಿಯೂ ತಿಳಿಯಲಾರದೆ ಇರುವುದು! ಈ ಗೆಲುವಿನ ಅನುಭವವನ್ನು ತುಂಬುವುದಕ್ಕೆ ನನ್ನ ಪುಟ್ಟಿದೆಯು ಸಾಲಲಿಲ್ಲ. ಇಂತಹ ಸನ್ನಿವೇಶದ ಅನುಭವದಿಂದ ನನ್ನೆದೆಯು ತಡೆತಡೆಯುತ್ತಿತ್ತು. ಅದನ್ನು ಕೇಳಿದನೋ ಏನೊ? (ಎದೆಯ ತಳಮಳವನ್ನು!) ಅವನು ಹಾಸಿಗೆಯಮೇಲೆ ಸ್ವಲ್ಪ ಹೆದರಿದವನಂತೆ ಹೊರಳಾಡಿದನು. (ನಾನು ಹಿಂದಕ್ಕೆಸರೆದೆನೆಂದು, ಅಗಲೇ ನೀವು ಮನಸ್ಸಿನಲ್ಲಿ ಮಾಡಿಕೊಂಡಿರಬಹುದು–ಆದರೆ–ಇಲ್ಲ.) ಅವನ ಕೋಣೆ, ಕಗ್ಗತ್ತಲ ಕೋಣೆ; ಕತ್ತಲಮೊತ್ತದಕೋಣೆ; (ಕಿಟಕಿಗಳನ್ನು ಭದ್ರವಾಗಿ ಹಾಕಿಬಿಟ್ಟಿದ್ದನು–ಕಳ್ಳರ ಹೆಧರಿಕೆಗೆ) ಆದ್ದರಿಂದ ಅವನು ಬಾಗಿಲು ತೆರೆದಿರುವುದನ್ನು ಕಾಣುವ ಸಂಭವವಿಲ್ಲವೆಂದು ನನಗೆ ಗೊತ್ತು. ನಾನು ಮೆಲ್ಲಮೆಲ್ಲನೆ, ಮೆಲ್ಲನೆ, ಮೆಲ್ಲನೆ ತೆರೆಯುತ್ತ ಹೋದೆ. ನಾನು ತಲೆಯನ್ನು ಒಳಗಿಟ್ಟಿದ್ದೆ. ಇನ್ನೇನು, ದೀಪದ ಮುಸುಕು ತೆಗೆಯಬೇಕು. ನನ್ನ ಹೆಬ್ಬೆರಳು, ಮುಚ್ಚಲವ ತಗಡಿಗೆ ತಗಲಿತು.

ಮುದುಕನು ಚೆಂಗನೆದ್ದು ಹಾಸಿಗೆಯಮೇಲೆ ಕುಳಿತು, 'ಯಾರಲ್ಲಿ?'....ಎಂದನು.

ನಾನು ಉಸಿರಾಡದೆ ಕಲ್ಲಿನಂತೆ ನಿಂತೆ. ಒಂದು ಗಂಟೆ ಪೂರ್ತಿ, ಒಂದು ಬೆರಳಲುಗಿಸಲಿಲ್ಲ. ಮುದುಕನು ಮಲಗಿದ್ದು ಕೇಳಿಸಲಿಲ್ಲ. ಅವನು ಹಾಸಿಗೆಯಮೇಲೆ ಕುಳಿತು, ಅವನ ಕಿವಿಗೆ ಬರುವ ಶಬ್ದವನ್ನೆಲ್ಲ ಆಲಿಸುತ್ತಿದ್ದನು. ಸೂಕ್ಷ್ಮ ಮೈಡಿದ್ದನು, ಕಿವಿಗಳನ್ನು.

ತಕ್ಷಣ, ನನ್ನ ಕಿವಿಯ ಮೇಲೆ, ಒಂದು ಸಣ್ಣ 'ಗೊರ್' ನರಳುವ ಧ್ವನಿ! ಒಂದು ಅಸಾಮಾನ್ಯವಾದ ಸ್ವರ. ಸಾವಿನ ಪೆದರಿಕೆ! ಸಣ್ಣದಾಗಿ ಅರ್ಧರ್ಧ ಹಿಡಿದುಕೊಂಡು ಬರುತ್ತಿದ್ದ ದನಿ. ಜೀವದಂತರಾಳದಿಂದ ಏಳುವ ದನಿ. ಜೀವಕ್ಕೆ ಭಯವಾದಾಗ ಬರುವ ಧ್ವನಿ. ಅನೇಕ ರಾತ್ರಿ, ಸರಿರಾತ್ರಿಯಲ್ಲಿ ಪ್ರಪಂಚವೆಲ್ಲ ನಿದ್ದೆಯಲ್ಲಿ ಮುಳುಗಿರುವಾಗ, ಅದು ಎದೆಯೊಳಗೆದ್ದು, ಭಯಂಕರವಾಗಿ ಮಾರ್ದನಿ ಕೊಡುವ ಧ್ವನಿಯಿಂದ ಜೀವವನ್ನೇ ನಡುಗಿಸುತ್ತಿದ್ದುದು ಬಲ್ಲೆ. ನನಗೆ ಗೊತ್ತಾಯಿತು, ಮುದುಕನ ಅಗಿನ ಅನುಭವ. ಅದಕ್ಕಾಗಿ ನಾನು ಮರುಗಿದೆ. ಅವನು, ನನ್ನ ಬೆರಳಿನ ಶಬ್ದ ಕೇಳಿದಾಗಿನಿಂದ, ಹಾಸಿಗೆಯ ಮೇಲೆ ಎದ್ದು ಪೂರ್ಣ ಎಚ್ಚರವಾಗಿ ಕುಳಿತಿದ್ದ. ಅವನ ಹೆದರಿಕೆ ನಿಮಿಷ ನಿಮಿಷಕ್ಕೂ ಬೆಳೆಯುತ್ತಾ ಇತ್ತು. ಹೆದರಿಕೆಗೆ ಕಾರಣವಿಲ್ಲದ್ದೆಂದು ಭಾವಿಸಿಕೊಳ್ಳುವುದಕ್ಕೆ ಅದಷ್ಟು ಪ್ರಯತ್ನ ಮಾಡುತ್ತಿದ್ದ. ತನಗೇ ಹೇಳಿಕೊಳ್ಳುತ್ತಿದ್ದ, 'ಎಲ್ಲೋಗಾಳಿ! ಒಂದು ಓಡಾಡುತ್ತಿದ್ದ ಇಲಿ; ಒಂದು ಜಿರಳೆ; ಒಂದು ಸಲ 'ಚಿಪ್' ಎಂದು ಓಡಿಹೋಗಿದ್ದು, ಅಷ್ಟೆ.....ಹೌದು! ಅವನು ಭಯನಿವೃತ್ತಿಗೆ ಪ್ರಯತ್ನಿಸುತ್ತಿದ್ದ. ಆದರೆ, ಎಲ್ಲ ನಿರರ್ಥಕ! ಎಲ್ಲಾ ನಿರರ್ಥಕ! ಸಾವು ಹತ್ತಿರಕ್ಕೆ ಬರುತ್ತಾ, ಅದರ ಕರಿ ನೆರಳನ್ನು ಅವನ ಮೇಲೆ ಚೆಲ್ಲಿ ಮುಸುಕಿಬಿಟ್ಟಿತ್ತು. ಕಣ್ಣಿಗೆ ಕಾಣದೆ ಇದ್ದರೂ, ಕಿವಿಗೆ ಕೇಳಿಸದೆ ಇದ್ದರೂ ಅನುಭವಿಸುತ್ತಾ ಇದ್ದ ಕರಿ ನೆರಳು, ಅವನಿಗೆ ಅನುಭವ ಮಾಡಿಬಿಟ್ಟಿತ್ತು! ನನ್ನ ತಲೆ, ಅವನ ಕೋಣೆಯಲ್ಲಿರುವುದನ್ನು.

ಬಹಳ ಹೊತ್ತು ಸಾವಧಾನವಾಗಿ ಕಾದರೂ, ಅವನು ಮಲಗುವುದು ಕಾಣಲಿಲ್ಲ. ದೃಢಮಾಡಿಕ್ಕೊಂಡು, ಮುಚ್ಚಳವನ್ನು ತುಸುತೆರೆಯುವುದಕ್ಕೆ–ಬಹಳ ಸ್ವಲ್ಪ, ಒಂದು ಕಿರಿದಾದ ಕಂಡಿ ದೀಪದ ಮುಸುಕಿನಲ್ಲಾಗುವಂತೆ (ನಿಮ್ಮ ಭಾವನೆಗೆ ನಿಲುಕುವುದಿಲ್ಲ–ಹೇಗೆ ಕಳ್ಳ–ಕಳ್ಳತವದಿಂದ ಶಬ್ದ ಹೀನವಾಗಿ ತೆಗೆದುದು) ನಾನು ಮುಚ್ಚಲವನ್ನು ತೆರೆದೆ. ಕಟ್ಟ ಕಡೆಗೆ ಒಂದು, ಒಂದೇ ಒಂದು ಕಿರಣ–ಜೇಡನ ಬಲೆಯದಾರ–ವನ್ನು ಕಂಡಿಯಿಂದ ನುಗ್ಗಿಸಿದೆ ಕಿರಣದಸೂಜಿ ಗೂಗೆಗಣ್ಣಿಗೆ ನೇರವಾಗಿ! ಕಣ್ಣು ತೆರೆದಿತ್ತು! ಅಗಲ–ಅಗಲವಾಗಿ ಅದನ್ನೇ ಎವೆಯಿಕ್ಕದೆ ಉಗ್ರವಾಗಿ ನೋಡಿದೆ–ಪೂರ್ತಿಯಾಗಿ, ಸಂಪೂರ್ಣವಾಗಿ ಚೆನ್ನಾಗಿ ನೋಡಿದೆ. ಮಾಸಲ ನೀಲಿ, ಮೇಲೊಂದು ಪೊರೆ. ನನ್ನ ಮೂಳೆಮೂಳೆಗಳು ತಣ್ಣಗಾದುವು. ಆದರೆ ಮುದುಕನ ಮುಖವಾಗಲಿ, ದೇಹವಾಗಲಿ

ಕಾಣಿಸುತ್ತಿದ್ದಿಲ್ಲ. ಕಿರಣವು, ನೇರವಾಗಿ ಗುರಿಯಿಟ್ಟಂತೆ ಬಿದ್ದಿತ್ತು ಆ ಗೂಗೆಗಣ್ಣಿಗೆ.

ಆಗಲೇ ನಾನು ಹೇಳಲಿಲ್ಲವೇ–ನನ್ನ ಮೇರೆ ಮೀರಿದ ಬುದ್ಧಿಸೂಕ್ಷ್ಮತೆಯನ್ನು ನೀವು ಹುಚ್ಚೆಂದು ತಿಳಿಯುತ್ತೀರೆಂದು. ಆಗ ಒಂದು ಹೀನವಾದ ಮಂಕಾದ ತೀಕ್ಷ್ಣವಾದ ದನಿಯು–ಗಡಿಯಾರವನ್ನು ಪೆಟ್ಟಿಗೆಯಲ್ಲಿ ಮುಚ್ಚಿಟ್ಟು ಆಲಿಸಿದಾಗ ಕೇಳಿ ಬರುವ ಧ್ವನಿಯು–ಕಿವಿಗೆ ಬಿದ್ದಿತು. ನನಗೆ ಆ ಧ್ವನಿಯು ಚೆನ್ನಾಗಿ ಗೊತ್ತು. ಅದು ಮುದುಕನ ಎದೆಯ ಏರಿಳಿತಗಳ ಶಬ್ದ! ನಗಾರಿಯ ಹೊಡೆತದಿಂದ ಸಿಪಾಯಿಯ ಎದೆಯಲ್ಲಿ ಧೈರ್ಯವುಕ್ಕುವಂತೆ, ನನ್ನ ಉಗ್ರತೆಯೇರಿತು. ಆಗಲೂ ತಡೆದುಕೊಂಡಿದ್ದೆ ಕಲ್ಲಿನಂತೆ. ಉಸಿರೇ ಆಡುತ್ತಿರಲಿಲ್ಲ. ದೀಪವನ್ನು ಅಲುಗದಂತೆ ಹಿಡಿದಿದ್ದೆ. ಕಿರಣವನ್ನು ಆದಷ್ಟು ಮಟ್ಟಿಗೆ ಆ ಕಣ್ಣಿನ ಮೇಲೆ ಇಟ್ಟಿದ್ದೆ. ಇಷ್ಟರಲ್ಲಿ ಆ ಹಾಳು ಎದೆಯ, ಡಬ್....ಡವ್.....ಧ್ವನಿ ಹೆಚ್ಚಾಗುತ್ತಿತ್ತು. ಆ ಮುದುಕನ ಭಯ ಮೂರು ಮುಟ್ಟಿರಬೇಕು. ಅದು ಘಟ್ಟಿಯಾಯಿತು; ಜೋರಾಯಿತು. ತ್ವರೆತ್ವರೆಯಿಂದ ಘಟ್ಟಿಯಾಯಿತು. ಪ್ರತಿ ಕ್ಷಣವೂ (ನೀವು ನನ್ನನ್ನು ತಿಳಿದಿದ್ದೀರಿ ತಾನೆ: ನಾನು ಹೇಳಿದೆನೆಲ್ಲಾ ಹೆದರಿದೆ ಎಂದು) ಹೌದು, ಹೆದರಿದೆ. ಕರಿರಾತ್ರಿಯ ನರಿಹೊತ್ತಿನಲ್ಲಿ ಭೀಕರವಾದ ಮೌನತೆಯಲ್ಲಿ, ಆ ಹಳೇ ಮನೆಯಲ್ಲಿ ಆ ವಿಜಾತೀಯವಾದ ಧ್ವನಿಯಿಂದ ತಡೆಯಲಸಾಧ್ಯವಾದ ಭಯವಾಯಿತು. ಆದರೂ ಕೆಲವು ಕ್ಷಣಗಳವರೆಗೆ ತಡೆತಡೆದು ಕಲ್ಲಿನಂತೆ ತಡೆದುಕೊಂಡಿದ್ದೆ. ಆದರೆ ಹೊಡೆತವು ತ್ವರೆಯಾಯಿತು; ತೀಕ್ಷ್ಣವಾಯಿತು; ಘಟ್ಟಿಘಟ್ಟಿಯಾಯಿತು. ಎದೆ ಒಡೆಯುತ್ತದೆಂದು ತಿಳಿದೆ. ಇನ್ನೊಂದು ಚಿಂತೆ, ನನ್ನ ಮನಸ್ಸಿಗೆ ಬಂತು. ಶಬ್ದ!–ನೆರೆಯವರಿಗೆ ಕೇಳಿಸುತ್ತೆ! ಕೇಳಿಸಿದರೇ! ಮುದುಕನ ಆಂತ್ಯ ಬಂತು! ಒಂದು ನೆಗೆತದಿಂದ ದೀಪದ ಮುಸುಗು ತೆಗೆದು ಕೋಣೆಗೆ ಹಾರಿದೆ.

ಒಂದುಸಲ, ಒಂದೇ ಒಂದುಸಲ ಅವನು ಚೀರಿದ!–ತೀಕ್ಷ್ಣವಾದ ಸ್ವರದ ಸರ ಒಂದೇ ಒಂದು! ಇನ್ನೊಂದು ಕ್ಷಣದಲ್ಲಿ ನಾನು ನೆಲಕ್ಕೆಳೆದು ಅವನ ಮೇಲೆ ಭಾರವಾದ ಹಾಸಿಗೆ ಎಳೆದುಬಿಟ್ಟೆ! ನಾನು ಮಾಡಿದ ಕೆಲಸಕ್ಕೆ, ಒಂದು ಹುಸಿನಗೆ ನಕ್ಕೆ. ಆದರೂ ಕೆಲವು ನಿಮಿಷಗಳವರೆಗೂ ಆ ಎದೆಯಲ್ಲಿ ಒಂದು ವಿಧವಾದ ಶಬ್ದ ಬರುತ್ತಿತ್ತು. ನನಗದೇನೂ ವೇಸರವೆನಿಸಲಿಲ್ಲ. ಅದು ಗೋಡೆಯಿಂದಾಚೆಗೆ ಹೋಗುವುದಿಲ್ಲ! ಕೊನೆಗೆ ಅದೂ ನಿಂತಿತು. ಮುದುಕನು ಸತ್ತಿದ್ದ. ಹಾಸಿಗೆಯನ್ನು ತೆಗೆದು ಶವವನ್ನು ಪರೀಕ್ಷಿಸಿದೆ....ಹೌದು–ಅವನು ಕಲ್ಲಿನಂತೆ ಆಗಿದ್ದ. ನನ್ನ ಕೈಯನ್ನು ಕೆಲವು ನಿಮಿಷಗಳವರೆಗೆ ಅವನ ಎದೆಯ ಮೇಲೆ ಇಟ್ಟಿದ್ದೆ. ನಾಡಿ ನಿಂತಿತ್ತು. ಅವನು ಸತ್ತು ಕಟ್ಟಿಗೆಯಾಗಿದ್ದ. ಅವನ–ಆ ಕಣ್ಣು ಇನ್ನುಮೇಲೆ, ನನ್ನನ್ನು ತೊಂದರೆಪಡಿಸುವುದಿಲ್ಲ.

ನೀವಿನ್ನೂ ನಾನು ಹುಚ್ಚ ಎಂದು ತಿಳಿದಿದ್ದರೆ, ನಾನು ಎಷ್ಟು ಬುದ್ಧಿಯಿಂದ, ಎಚ್ಚರಿಕೆಯಿಂದ ಶವವನ್ನು ಮುಚ್ಚಿಟ್ಟೆ ಎಂಬುದನ್ನು ಕೇಳಿ. ಹುಚ್ಚನೆಂದು ತಿಳಿದುಕೊಳ್ಳುವುದಿಲ್ಲ. ರಾತ್ರಿ ಹೋಗುತ್ತಿತ್ತು. ನಾನು ಬೇಗನೆ ಕೆಲಸ ಪೂರೈಸಿದೆ ಶಬ್ದ ಲೇಶವಿಲ್ಲದೆ.

ಕೋಣೆಯ ನೆಲಕ್ಕೆ ಹಾಸಿದ್ದ ಬಿಲ್ಲೆಗಳ ಮೂರನ್ನು ತೆಗೆದೆ. ದೇಹ ಒಳಗಿಟ್ಟೆ. ಅಮೇಲೆ ಹಾಸು ಬಿಲ್ಲೆಗಳನ್ನು ಅವುಗಳ ಸ್ಥಾನದಲ್ಲಿ. ಚುರುಕೆಷ್ಟು; ಸೂಕ್ಷ್ಮತೆಯಿಂದ, ಕುಶಾಗ್ರತೆಯಿಂದ, ಯುಕ್ತಿಯಿಂದ ಮನುಷ್ಯ ಮಾತ್ರದ ಕಣ್ಣು ಆ ಕಣ್ಣು–ಕೂಡ ಶೋಧಿಸದಂತೆ, ಪತ್ತೆ ಹಚ್ಚದಂತೆ.

ಒಂದು ತೊಟ್ಟು, ಯಾವ ತರಹದ್ದೂ ಒಂದು ರಕ್ತಕಲೆ ಏನಾದರೂ ತೊಳೆಯುವುದಕ್ಕೆ ಏನೂ ಇರಲಿಲ್ಲ. ಅಘಗಳಿಗಿಂತಲೂ, ನಾನು ಬಹಳ ಕುಶಾಗ್ರಮತಿ.

ಈ ಕೆಲಸಗಳೆಲ್ಲ ಆಗುವ ಹೊತ್ತಿಗೆ ನಾಲ್ಕು ಗಂಟೆ. ಇನ್ನೂ ಸರಿರಾತ್ರಿಯಂತೆ ಕತ್ತಲು. ನಾಲ್ಕುಗಂಟೆ ಹೊಡೆದ ಶಬ್ದ ಕೇಳಿಸುತ್ತಿದ್ದಂತೆ, ಬಾಗಿಲನ್ನು ತಟ್ಟಿದರು. ನಾನು ಲಘುವಾದ ಹೃದಯದಿಂದ ಬಾಗಿಲು ತೆಗೆಯುವುದಕ್ಕೆ ಹೋದೆ. ನಾನು ಯಾವುದಕ್ಕೆ ಹೆದರಬೇಕೀಗ! ಮೂರು ಜನರು ಒಳಕ್ಕೆ ಬಂದು, ತಾವು ಪೋಲಿಸ್ ಅಧಿಕಾರಿಗಳೆಂದು, ತಮ್ಮ ಧರ್ಮವನ್ನೆಲ್ಲ ತೋರಿಸುತ್ತ ಪರಿಚಯ ಮಾಡಿಕೊಟ್ಟರು. ರಾತ್ರಿ ಒಂದು ಚೀರ್ದನಿ ನೆರೆಯವರಿಗೆ ಕೇಳಿಸಿತು. ದುಷ್ಕೃತ್ಯದ ಗುಮಾನಿ ಬಂತು. ಪೋಲಿಸ್ ಅಧಿಕಾರಿಗಳಿಗೆ ತಿಳಿಸಿದರು. ಆದ್ದರಿಂದ, ಅವರು (ಪೋಲಿಸ್ ಅಧಿಕಾರಿಗಳು) ಮನೆಯ ಶೋಧನೆಗೆ ಕಳುಹಿಸಲ್ಪಟ್ಟಿದ್ದಾರೆ.

ನಾನು ಮುಗಳುನಗೆ ಸೂಸಿದೆ. ಇನ್ನೇತಕ್ಕೆ ಹೆದರಿಕೆ ಬೇಕು! ಅವರಿಗೆ ಸ್ವಾಗತವೆನ್ನುತ್ತೆ. 'ಚೀರ್ದನಿ, ಕನಸಿನಲ್ಲಿ ನನ್ನದೇ ಎಂದೆ. ಮುದುಕ ಹಳ್ಳಿಗೆ ಹೋಗಿದ್ದಾನೆ; ಬಂದವರನ್ನು ಮನೆಯ ಎಲ್ಲ ಕಡೆಗೂ ಕರೆದುಕೊಂಡು

ಹೋದೆ. ಭದ್ರವಾಗಿದ್ದ ಭಂಡಾರವನ್ನು ತೋರಿಸಿದೆ. ನನ್ನ ನಂಬಿಕೆಯ ಪರಮಾವಧಿಯಲ್ಲಿ, ಕುರ್ಚಿಗಳನ್ನು ಆ ಕೋಣೆಗೆ ತಂದುಹಾಕಿದೆ. ಆಯಾಸ ಪರಿಹಾರ ಮಾಡಿ ಕೊಳ್ಳುವುದಕ್ಕೆ, ಅವರಿಗೆ ಹೇಳಿ, ನನ್ನ ಗೆಲುವಿನ ಅಹಂಭಾವದಲ್ಲಿ ನನ್ನ ಕುರ್ಚಿಯನ್ನು ಅವನ ದೇಹವಿದ್ದ ಸ್ಥಳದಮೇಲೆ ಹಾಕಿಕೊಂಡು ಕುಳಿತೆ.

ಅಧಿಕಾರಿಗಳು ತೃಪ್ತರಾದರು. ನನ್ನ ನಡೆವಳಿಕೆ ಸಮರ್ಪಕವಾಗಿತ್ತು. ನಾನು ರೇಸಾದೆ. ಅವರು ಕೂತು ಕೊಂಡು ಹರಟೆಗೆ ಪ್ರಾರಂಭಿಸಿದರು. ನಾನು ಉಲ್ಲಾಸದಿಂದ ಉತ್ತರ ಕೊಡುತ್ತಿದ್ದೆ. ಆದರೆ ಸ್ವಲ್ಪ ಹೊತ್ತಿನೊಳಗಾಗಿ, ನನ್ನ ಕೆನ್ನೆ ಬಿಳುಪೇರಿತು. ಅವರು ಹೋದರೆ ಸಾಕೆನ್ನಿಸಿತು. ತಲೆನೋವು ಬಂತು. ನನ್ನ ಕಿವಿಯಲ್ಲಿ ಏನೋ ಧ್ವನಿಯಾದ ಹಾಗೆ ನೆನಪಾಗುತ್ತಿತ್ತು. ಧ್ವನಿ! ಆ ಧ್ವನಿ ಚೆನ್ನಾಗಿ ಕೇಳಿಸುತ್ತ ಬಂತು. ಅದು ಸರಾಗವಾಗಿ ಚೆನ್ನಾಗಿ ಕೇಳಿಸುವುದಕ್ಕೆ ಪ್ರಾರಂಭ! ನಾನು ಮಾತು ಹೆಚ್ಚುಮಾಡಿದೆ. ಆ ನೆನಪನ್ನು ಮರೆಸುವುದಕ್ಕೆ. ಆದರೆ ಅದು ಸರಾಗವಾಗಿ ಕೇಳಿಸುವಂತಾಯಿತು. ಕಟ್ಟಕಡೆಗೆ, ನನಗೆ ತಿಳಿಯಿತು, ಆ ಧ್ವನಿ ನನ್ನ ಕಿವಿಯಿಂದ ತಪ್ಪಿಹೋಗುವ ಹಾಗಿಲ್ಲವೆಂದು.

ಆಗ ಮುಖ ಪೂರ್ತಿಯಾಗಿ ಬಿಳುಪೇರಿತ್ತು. ಆದರೆ ನಾನು ಸರಾಗವಾಗಿ, ದೊಡ್ಡ ಧ್ವನಿಯಿಂದ ಮಾತನಾಡುತ್ತಿದ್ದೆ. ಆದರೆ ಧ್ವನಿ ದೊಡ್ಡದಾಗುತ್ತಿತ್ತು! ಏನು ಮಾಡಬೇಕು ನಾನು? ಅದು ಹೀನವಾದ ಮಾಸಲಾದ ತೀಕ್ಷ್ಣವಾದ ಧ್ವನಿ—ಗಡಿಯಾರವನ್ನು ಪೆಟ್ಟಿಗೆಯಲ್ಲಿಟ್ಟು ಅಲಸಿದರೆ ಕೇಳಿಬರುವ ಧ್ವನಿಯದು. ನಾನು ನಿಡಿದಾದ ಉಸಿರು ತೆಗೆದುಕೊಂಡೆ. ಆದರೆ, ಅಧಿಕಾರಿಗಳಿಗೆ ಕೇಳಿಸಲಿಲ್ಲ.....ನಾನು ವೇಗವಾಗಿ ಮಾತನಾಡಿದೆ ಜೋರಾಗಿ ಮಾತನಾಡಿದೆ. ಎದ್ದುನಿಂತು ಸಣ್ಣ ವಿಷಯಗಳನ್ನು ದೊಡ್ಡದಾಗಿ ಚರ್ಚೆ ಮಾಡಿದೆ. ಆದರೆ ಧ್ವನಿ, ಮೆಲ್ಲನೆ ದೊಡ್ಡದಾಗುತ್ತಿತ್ತು; ಅವರು ಯಾಕೆ ಹೋಗುವುದಿಲ್ಲವೆನ್ನಿಸಿತು? ಅವರು ಹೇಳಿದ್ದು ತಪ್ಪೆಂದು ತೋರಿಸುವ ಹಾಗೆ, ನಾನು ಅಲ್ಲಿಂದ ಇಲ್ಲಿಗೆ 'ದಪ್ ದಪ್' ಎಂದು ಕಾಲು ಹೊಡೆಯುತ್ತ—ಆ ಆದರೆ ಧ್ವನಿ ಮೆಲ್ಲನೆ ದೊಡ್ಡದೊಡ್ಡದಾಗುತ್ತಿತ್ತು. ಓ ದೇವರೇ ಏನುಮಾಡಲಿ ನಾನು! ನಾನು ಉದ್ರೇಕಗೊಂಡೆ—ಉಗ್ರನಾದೆ, ಹಲ್ಲು ಕಡಿದೆ, ಆಣೆ ಇಟ್ಟೆ. ನಾನು ಕೂತಿದ್ದ ಕುರ್ಚಿಯನ್ನು ಹಾಸಿದ ಬಿಲ್ಲೆಗಳಮೇಲೆ ಇಚ್ಚೆ. ಆದರೆ ಧ್ವನಿ ಎಲ್ಲವನ್ನೂ ಮಿಂಚಿ ದೊಡ್ಡದಾಗುತ್ತಿತ್ತು. ಅದು ಘಟ್ಟಿ ಘಟ್ಟಿಯಾಯಿತು; ಘಟ್ಟಿಯಾಯಿತು ಬಹಳ ಘಟ್ಟಿಯಾಯಿತು. ಅವರು, ಇನ್ನೂ ತಮಾಷೆಯಾಗಿ ಹರಟೆ ಕೊಚ್ಚಿನಗುತ್ತಿದ್ದರು. ಅವರಿಗೆ ಆ ಶಬ್ದ ಕೇಳಿಸಿಲ್ಲವೇ? ಓ ದೇವರೇ.....ಇಲ್ಲ ಇಲ್ಲ, ಅವರಿಗೆ ಕೇಳಿಸಿತು; ಅವರು ಅನುಮಾನಪಟ್ಟರು! ಅವರಿಗೆ ಗೊತ್ತಿತ್ತು! ಅವರು ನನ್ನ ದಿಗಿಲನ್ನು ಅಣಕಿಸುತ್ತಿದ್ದರು! ಯಾವ ಹಿಂಸೆಯಾದರೂ, ಈ ಹಿಂಸೆಗಿಂತ ಉತ್ತಮ. ಯಾವ ಯಾತನೆಯನ್ನಾದರೂ ತಡೆಯಬಹುದು ಇದಾಗದು. ಆ ಬೂಟಾಟಿಕೆ ಹೌದು—ಆ ಅಣಕ ತಡೆಯಲಾಗಲಿಲ್ಲ. ನಾನು ಕಿರಿಚಬೇಕು; ಇಲ್ಲ ಸಾಯಬೇಕು ಅನ್ನಿಸಿತು. ಮತ್ತೆ—ಮತ್ತೆ—ಮತ್ತೀಗ ಆ ಘಟ್ಟಿ ಘಟ್ಟಿ! ಘಟ್ಟಿಯಾಗಿ! ಘಟ್ಟಿಯಾಗಿ!

ಪಾಪಿಗಳ! ನಾನು ಕಿರಿಚಿದೆ. ನಾಕು, ನಿಮ್ಮ ಹರಟೆ. ನಾನು ಮಾಡಿದ್ದು ಒಪ್ಪುತ್ತೀನೆ. ಆ ಹಾಸಿದ ಬಿಲ್ಲೆ ಸಿತ್ತಿ. ಇಲ್ಲಿ ಕೇಳಿ: ಇಲ್ಲಿ ಆಲಿಸಿ ಕೇಳೀ—ಅದೆ—ಅದೇ ಅವನ ಎದೆ ಬಡಿತ!

ಶ್ರೀಮೂರ್ತಿ.

ನಿಮಗೆ ಅಂದವಾದ ಲಗ್ನಪತ್ರಿಕೆ ಮುಂತಾದ ಮುದ್ರಣ ಕೆಲಸಗಳೂ, ಬುಕ್ ಬೈಂಡಿಂಗ್ ಕೆಲಸಗಳೂ ಬೇಕಾಗಿದ್ದಲ್ಲಿ,

ಎಸ್. ಎಸ್. ವಿಲಾಸ್ ಪ್ರೆಸ್.

ಚಿಕ್ಕಪೇಟೆ, ಬಿ. ಸಿಟಿ.

ಇವರಲ್ಲಿಗೆ ಬನ್ನಿ.

ನಿಮಗೆ ಕತೆಗಾರ ತೃಪ್ತಿಕರವಾಗಿದ್ದರೆ,

ನಮಗೆ ದಯಮಾಡಿ ಹೊಸ

ಚಂದಾದಾರರನ್ನು ಮಾಡಿಕೊಡಿ

ಪ್ರೇಮ ವಿಜಯ

[ಕವೀಂದ್ರ ರವೀಂದ್ರರ ಒಂದು ಕತೆಯ ಭಾವಾನುವಾದ]

" What she had slighted she now desired,
And for the first time she realised
she could not be happy without him. "

ಅನಂತಮೂರ್ತಿ ಬೆಂಗಳೂರಲ್ಲಿ ಬಿ. ಎ. ಪರೀಕ್ಷೆ ಮುಗಿಸಿಕೊಂಡು ತನ್ನ ಊರಿಗೆ ಬರುತ್ತಿದ್ದ. ಕೆರೆಕಟ್ಟೆಯ ಹತ್ತಿರ ಬಸ್ಸಿನಲ್ಲಿಳಿದು ಮನೆಯಕಡೆ ನಡೆದ. ಆಗತಾನೆ ಮಳೆ ಬಂದಿದ್ದು ದಾರಿಯೆಲ್ಲ ಕೆಸರಿನಿಂದ ಜಾರಿಕೆಯಾಗಿತ್ತು. ಅನಂತ ಒಂದುಕಡೆ ಜಾರಿ ಬಿದ್ದುಬಿಟ್ಟ. ಮಡಿಮಾಡಿದ್ದ ಅವನ ಸೂಟೂ ಮಿನುಗುತ್ತಿದ್ದ ಬೂಟೂ ಕೊಚ್ಚೆಯಾದವು. ಆ ಸಮಯಕ್ಕೆ ಸರಿಯಾಗಿ ಯಾರೋ ಕಿಲಕಿಲನೆ ನಕ್ಕಂತೆ ಶಬ್ದವಾಯಿತು. ಕೊಡವಿಕೊಂಡು ಮೇಲಕ್ಕೆದ್ದು ಅತ್ತಿತ್ತ ನೋಡಿದ. ಕೆರೆಯ ಸೋಪಾನದ ಮೇಲೆ ಕಿಶೋರಿಯಾದ ಹುಡುಗಿಯೊಬ್ಬಳು ಬಿದ್ದು ಬಿದ್ದು ನಗುತ್ತಿದ್ದಳು.

ಅನಂತಮೂರ್ತಿ ಆ ಊರಿನ ತರುಣ ಜೋಡೀದಾರೆ. ಎಲ್ಲರಿಗೂ ಅವನನ್ನು ಕಂಡರೆ ಗೌರವ, ಕಿರಿಯರು ಅವನೆದುರಿಗೆ ನಿಂತು ಮಾತಾಡುವುದಕ್ಕೂ ಹೆದರಿಕೊಳ್ಳುತ್ತಿದ್ದರು. ಹೀಗಿರುವಾಗ ಒಂದು ಸಾಮಾನ್ಯ ಕುಟುಂಬದ ಸಣ್ಣ ಹುಡುಗಿ ಅವನು ಜಾರಿಬಿದ್ದುದನ್ನು ನೋಡಿ ಹಾಸ್ಯಮಾಡಿಕೊಂಡು ನಗುವುದೆಂದರೆ ಆಶ್ಚರ್ಯವಲ್ಲವೆ ?

ಆ ಹುಡುಗಿಯ ತಾಯಿ ನೀರಿಗೆ ಕೆರೆಗೆ ಬಂದಿದ್ದಳು. ನೆರೆಯಲ್ಲಿದ್ದ ಇತರ ಹೆಂಗಸರೊಡನೆ ದೂರು ಹೇಳಿಕೊಂಡು ಹೇಚಾಡಿದಳು.

' ಏನು ಮಾಡಬೇಕಮ್ಮ ಈ ಹೆಣ್ಣಿಗೆ ? ಅವರು ಇವಳನ್ನು ಸುಮ್ಮನೆ ಹೆಚ್ಚಿಸಿಬಿಟ್ಟಿದ್ದಾರೆ. ಇವಳ ಧಾಷ್ಟೀಕತನ ಬಿಡಿಸುವುದಕ್ಕೆ ಏನೇನೋ ಮಾಡುತ್ತೇನೆ. ನನ್ನ ಪೆದರಿಕೆಗೆ ಇವಳು ಹೆದರುವುದಿಲ್ಲ. ನನ್ನನ್ನೇ ಅಣಕಿಸುತ್ತಾಳೆ. ದೊಡ್ಡವರು ಚಿಕ್ಕವರು ಎಂಬ ಲಕ್ಷ್ಯವೇ ಇಲ್ಲದೆ ಎಲ್ಲರನ್ನೂ ಹಾಸ್ಯ ಮಾಡುತ್ತಾಳೆ. ನಾನು ಶಿಕ್ಷಿಸುವುದಕ್ಕೆ ಹೋದರೆ ಕೈಗೆ ಸಿಕ್ಕದೆ ಓಡಿಬಿಡುತ್ತಾಳೆ. ಒಂದುವೇಳೆ ಶಿಕ್ಷಿಸಿದರೆ ಅವರು ಬಂದಾಗ ಇವಳು ನನ್ನ ಮೇಲೆ ದೂರು ಹೇಳುತ್ತಾಳೆ. ಅವರು ನನ್ನನ್ನೇ ಬಯ್ಯುತ್ತಾರೆ. ಇವಳು ಇನ್ನೂ ಹೆಚ್ಚಿಕೊಳ್ಳುತ್ತಾಳೆ.'

ಹುಡುಗಿಯ ಹೆಸರು ಕಮಲು. ಅವಳ ತಂದೆಗೆ ರಿಲೀವಿಂಗ್ ಸ್ಟೇಷ್ ಮಾಸ್ಟರ್ ಕೆಲಸ. ಊರಿಂದೂರಿಗೆ ಆಲೆದು ಕೊಳ್ಳಬೇಕಾಗುತ್ತಿತ್ತು. ಆದಕಾರಣ ಕುಟುಂಬವನ್ನು ತನ್ನ ಬಂಧುಗಳಿದ್ದ ಅನಂತನ ಊರಲ್ಲಿ ಬಿಟ್ಟು ತಾನೊಬ್ಬನೇ ಇದ್ದುಕೊಂಡಿದ್ದ. ಅವನಿಗೆ ಕಮಲು ಒಬ್ಬಳೇ ಮಗಳು. ಬೇರೆ ಅಪತ್ಯವಿಲ್ಲ. ಆದಕಾರಣ ಅವಳನ್ನು ವಿಶೇಷವಾಗಿ ಮುದ್ದು ಮಾಡಿ ಗಂಡುಬೀರಿಯನ್ನಾಗಿ ಮಾಡಿದ್ದ.

ಅನಂತನ ತಂದೆ ಕೆಲವು ವರುಷಗಳ ಹಿಂದೆ ತೀರಿಕೊಂಡಿದ್ದರು. ಅವರಿಗೆ ಅನಂತನ ಅಕ್ಕ ಪದ್ಮಾವತಿ, ಅನಂತ ಇಬ್ಬರೇ ಮಕ್ಕಳು. ಪದ್ಮಾವತಿಗೆ ಮದುವೆಯಾಗಿ ಮದರಾಸಿನಲ್ಲಿ ಗಂಡನೊಂದಿಗೆ ಸಂಸಾರ ಮಾಡಿಕೊಂಡಿದ್ದಳು.

ಅನಂತನ ಮೇಲೆ ಅವನ ತಾಯಿಗೆ ಅತ್ಯಂತ ವಾತ್ಸಲ್ಯ. ಊರಿಂದ ಬಂದ ಮಗನನ್ನು ನೋಡಿ ಆಕೆಗೆ ಅತ್ಯಾನಂದವಾಯಿತು. ಅವನಿಗೋಸ್ಕರ ಏನು ಮಾಡಲಿ ಎಂದು ಸಂಭ್ರಮಪಟ್ಟಳು. ಅವನಿಗೆ ಇಷ್ಟವಾದ ಅಡಿಗೆಯನ್ನು ಮಾಡಿಸಿದಳು.

ಊಟವಾದಮೇಲೆ ತಾಯಿ ಮಗ ಮಾತಿಗೆ ಕುಳಿತರು. ಮೆಲ್ಲಗೆ ಮದುವೆಯ ಮಾತು ಹೊರಟಿತು. ' ಈಗ ನೀನು ದೊಡ್ಡವನಾದೆ. ಇಷ್ಟು ಕಾಲಕ್ಕೆ ನಿನಗೆ ಮದುವೆ ಆಗಿರಬೇಕಾಗಿತ್ತು. ನೀನು ಬಿ. ಏ. ಆಗುವವರಿವಿಗೂ ಮದುವೆ ಆಗುವುದಿಲ್ಲವೆಂದು ಹಟ ಹಿಡಿಯದೆ ಹೋಗಿದ್ದಿದ್ದರೆ ಇದುವರಿಗೆ ಎಂದೋ ಆಗಿಹೋಗುತ್ತಿತ್ತು. ಇನ್ನು ನೀನು

ಬೇರೆ ನೆವ ಹೇಳಿದೆ ಮದುವೆ ಮಾಡಿಕೊಳ್ಳಲೇಬೇಕು' ಎಂದು ತಾಯಿಯ ಒತ್ತಾಯವಾಯಿತು.

ಹೀಗೆ ಒತ್ತಾಯವಾಗುವುದೆಂದು ಅವನಿಗೆ ಮೊದಲೇ ಗೊತ್ತಿತ್ತು. ಇನ್ನು ಪಿಳಂಬಿಸುವುದೂ ಸಾಧ್ಯವಿಲ್ಲವೆಂದು ತೋರಿತು. 'ಆಗಲಿ. ಅಮ್ಮ! ಅನುರೂಪಳಾದ ಹುಡುಗಿ ಸಿಕ್ಕಿದರೆ ಆಗಬಹುದು.' ಎಂದು ಹೇಳಿದ.

'ನಾನೊಂದು ಹುಡುಗಿಯನ್ನು ನೋಡಿ ಗೊತ್ತುಮಾಡಿಟ್ಟಿದ್ದೇನೆ. ಕುಲರೂಪಗುಣಗಳಲ್ಲಿ ನಿನಗೆ ತಕ್ಕವಳಾಗಿದ್ದಾಳೆ. ನಿನಗೆ ಯಾವ ವಿಷಯದಲ್ಲಿಯೂ ಯೋಚನೆಗೆ ಕಾರಣವಿಲ್ಲ. ನೀನು 'ಅಸ್ತು' ಎಂದರೆ ಎಂಟುದಿನಗಳೊಳಗಾಗಿ ಮದುವೆಯ ಏರ್ಪಾಡು ಆಗಿ ಹೋಗುವುದು.' ಎಂದು ತಾಯಿ ಉತ್ಸಾಹದಿಂದ ಹೇಳಿದಳು.

ಮದುವೆಯಂಥ ಮಹತ್ವದ ವಿಷಯ, ಜನ್ಮವಿರುವವರಿಗೂ ಏಗಬೇಕಾದ ಸಂಬಂಧ, ಪೂರ್ಣ ವಿಚಾರ ಮಾಡಿ ನೋಡಬೇಕು, ಎಂದವನಿಗೆ ತೋರಿತು. ಸ್ವಲ್ಪಹೊತ್ತು ಯೋಚನೆಮಾಡಿ, 'ನಾನೊಂದು ಸಲ ಹುಡುಗಿಯನ್ನು ನೋಡಬಹುದೇ?' ಎಂದು ಕೇಳಿದ.

'ಅಗತ್ಯವಾಗಿ. ನಾಳೆ ಮಧ್ಯಾಹ್ನ ಅವರ ಮನೆಗೆ ಹೋಗಿ ನೋಡಿಕೊಂಡು ಬಾ' ಎಂದು ತಾಯಿ ಹೇಳಿದಳು.

ಮರುದಿನ ಮಧ್ಯಾಹ್ನ ವಧೂಪರೀಕ್ಷೆ. ಅನಂತ 'ನೇವಿಬ್ಲೂ' ಸೂಟು, ಪೆರಗುಹಾಕಿದ ಬೂಟು ಹಾಕಿಕೊಂಡು ವಧುವಿನ ಮನೆಯನ್ನು ತಲುಪಿದ. ಅವನನ್ನು ಸ್ವಾಗತ ಮಾಡಿ ಒಳಗಿನ ಮನೆಗೆ ಕರೆದರು. ಅನಂತ ಬೂಟನ್ನು ಕಳಚಿ, ಒಳಗೆ ಹೋಗಿ ಹಾಸಿದ್ದ ರತ್ನಗಂಬಳಿಯ ಮೇಲೆ ಗಂಭೀರವಾಗಿ ಕುಳಿತು ಹುಡುಗಿಯ ಆಗಮನವನ್ನು ನಿರೀಕ್ಷಿಸಿದ.

ಹುಡುಗಿಗೆ ಹೆರಳು ಹಾಕಿ, ಹೂ ಮುಡಿಸಿ, ಕಣ್ಣಿಗೆ ಕಾಡಿಗೆ ತಿದ್ದಿ, ಬನಾರಸ್ ಪೀತಾಂಬರವುಡಿಸಿ, ಮೈತುಂಬ ಒಡವೆಗಳನ್ನು ಹೇರಿ, ಅಲಂಕಾರ ಮಾಡಿದ್ದರು. ಅವಳ ಅಜ್ಜಿ ಹುಡುಗಿಯನ್ನು ಕರೆದುಕೊಂಡು ಎಂದರೆ ಎಳೆದುಕೊಂಡು ಬಂದು ಅನಂತನ ಮುಂದೆ ನಿಲ್ಲಿಸಿದಳು. ಹುಡುಗಿ ದೂರದಲ್ಲಿ ತಲೆಬಾಗಿ ನಿಂತುಕೊಂಡಳು. ಅನಂತ ಹುಡುಗಿಯ ಮುಖವನ್ನು ನಿರೀಕ್ಷಿಸಿದ. ಹುಡುಗಿ ಬಗ್ಗಿಸಿದ ತಲೆ ಎತ್ತಲಿಲ್ಲ. ಮುಖ ನೋಡುವುದಕ್ಕೆ ಅವಕಾಶವೇ ಇಲ್ಲ. ಅನಂತ ಗಂಭೀರ ಮುದ್ರೆಯಿಂದ ಹುಡುಗಿಯ ಕಡೆ ನೋಡಿ, 'ನೀನು ಸ್ಕೂಲಿಗೆ ಹೋಗುತ್ತೀಯೋ?' ಎಂದು ಕೇಳಿದ. ಅತಿಶಯ ಲಜ್ಜಾಸ್ಪದವಾದ ಹುಡುಗಿಯಿಂದ ಉತ್ತರವೇ ಇಲ್ಲ. ಪುನಃ ಪ್ರಶ್ನೆ ಪುನಃ ನಿರುತ್ತರ! ಅಜ್ಜಿ ಎಷ್ಟೆಷ್ಟೋ ಹೇಳಿದಳು. ಹುಡುಗಿ ತುಟಿ ಪಿಟಿಕ್ಕೆನ್ನಲಿಲ್ಲ! ವಧೂ ಪರೀಕ್ಷೆಯನ್ನು ಮುಗಿಸಿಕೊಂಡು ಅನಂತ ಎದ್ದು ಹೊರಗೆ ಬಂದು ನೋಡಿದರೆ ಅವನ ಬೂಟುಗಳೇ ಪತ್ತೆಯಿಲ್ಲ! ಅಲ್ಲಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಕಡೆಗೆ ಬರೀ ಕಾಲಲ್ಲಿ ಮನೆಗೆ ಹೋಗಬೇಕಾಯಿತು. ವಿಲಾಯತಿಯ ಉಡುಪು ಧರಿಸಿ ಬರೀ ಕಾಲಲ್ಲಿ ನಡೆಯುವುದು ಬಹಳ ಹಾಸ್ಯಾಸ್ಪದ! ಅನಂತನಿಗೆ ಬಹಳ ಹೀನಾಯವಾಯಿತು.

ವಧುವಿನ ಮನೆಯನ್ನು ಬಿಟ್ಟು ಅನಂತ ಒಂದು ಸಂದಿಯ ಮೂಲಕ ಮನೆಗೆ ಹೋಗುತ್ತಿದ್ದ. ಅಲ್ಲಿ ಕಿಲಕಿಲನೆ ನಗುವ ಧ್ವನಿ ಇವನಿಗೆ ಕೇಳಿಸಿತು. ನಿನ್ನೆ ಕೆರೆಯ ಬಳಿಯಲ್ಲಿ ತಾನು ಜಾರಿಬಿದ್ದಾಗ ಕೇಳಿದ ಹಾಸ್ಯಧ್ವನಿಯೇ ಇದು. ಎಲ್ಲಿಂದ ಬಂತೆಂದು ಅತ್ತಿತ್ತ ನೋಡಿದ. ಒಂದು ಗೋಡೆಯ ಪಕ್ಕದಲ್ಲಿ ಅವಿತುಕೊಂಡಿದ್ದ ಕಮಲು ತಟ್ಟನೆ ಈಚೆಗೆ ಬಂದು ಅವನ ಬೂಟುಗಳನ್ನು ಅವನ ಮುಂದೆಸೆದು ಪರಾರಿಯಾದಳು! ಅನಂತ ಅವಳನ್ನು ಹಿಡಿಯುವುದಕ್ಕೆ ಓಡಿದ. ಜೋರಾಗಿ ಓಡಿ ಅವಳ ಮಣಿಕಟ್ಟನ್ನು ಬಲವಾಗಿ ಹಿಡಿದ. ಬಿಡಿಸಿಕೊಳ್ಳಲು ಕಮಲು ಬಹು ಸಾಹಸ ಮಾಡಿದಳು. ಕೈಯನ್ನು ಕೊಡವಿದಳು. ಜಗ್ಗಿದಳು. ಆದರೂ ಆ ವಜ್ರಮುಷ್ಟಿಯಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ.

ಅನಂತ ಕಮಲೂ ದೃಷ್ಟಿಗೆ ತನ್ನ ದೃಷ್ಟಿಯನ್ನು ಬೆರಸಿ ಸಮನಾಗಿ ತೀಕ್ಷ್ಣ ದೃಷ್ಟಿಯಿಂದ ನೋಡಿದ. ತನ್ನ ತಪ್ಪಿಗೆ ಏನು ಶಿಕ್ಷೆಯಾಗುವುದೋ? ಬೆಚ್ಚಗೆ ಕಪಾಳಮೋಕ್ಷವಾಗುವುದೋ, ಇಲ್ಲವೆ ಕಿವಿಗಳನ್ನು ಹಿಂಡುತ್ತಾನೆಯೋ? ಎಂದು ಕಮಲು ಮನಸ್ಸಿನಲ್ಲಿಯೇ ಯೋಚನೆ ಮಾಡುತ್ತಿದ್ದಳು. ಅನಂತ ಸುಮ್ಮನೆ ಅವಳ ಕೈಗಳನ್ನು ಬಲವಾಗಿ ಹಿಡಿದು ಅವಳ ಕಣ್ಣುಗಳನ್ನು ನೋಡುತ್ತಿದ್ದನೇ ಹೊರತು ಶಿಕ್ಷೆಯನ್ನೇನನ್ನೂ ವಿಧಿಸಲಿಲ್ಲ. ಕಡೆಗೆ ಅವನ ಮನಸ್ಸಿಗೆ ಏನೋ ಹೊಳೆದು ಅವನ ಹಿಡಿತ ಸಡಿಲವಾಯ್ತು. ಹುಡುಗಿ ನುಣುಚಿಕೊಂಡು ಓಡಿಹೋದಳು.

ಮನೆಗೆ ಬಂದ ಮಗನನ್ನು ನೋಡಿ ತಾಯಿ, 'ಏನಪ್ಪಾ! ಹುಡುಗಿಯನ್ನು ನೋಡಿದೆಯಾ? ನಿನಗೆ ಒಪ್ಪಿತೇ?' ಎಂದು ಕೇಳಿದಳು.

'ಹೌದಮ್ಮ ! ನಾನು ಆಲ್ಲಿ ನೋಡಿದ ಹುಡುಗಿಯರ ಲ್ಲೊಬ್ಬಳನ್ನು ಒಪ್ಪಿದ್ದೇನೆ'

"ಎಂದರೆ ? ನಾನು ಗೊತ್ತು ಮಾಡಿದ ಹುಡುಗಿಯೋ, ಬೇರೆಯೋ ?'

'ಇವಳು ಬೇರೆ. ಇವಳ ಹೆಸರು ಕಮಲಾ !'

ಅನಂತನ ತಾಯಿಗೆ ಗಾಬರಿಯೂ ಆಶ್ಚರ್ಯವೂ ಏಕ ಕಾಲದಲ್ಲಿ ಉಂಟಾದುವು. ತನ್ನ ಕಿವಿಗಳನ್ನೇ ತಾನು ನಂಬ ಲಾರದೆ ಹೋದಳು. ಬಿ. ಏ. ಪರೀಕ್ಷೆಯಲ್ಲಿ ಆಕೆಗಿದ್ದ ಆದರವು ಕಡಮೆಯಾಯಿತು. ಕಮಲೆಯಂಥ ಗಂಡುಬೀರಿ ಗಯ್ಯಾಳಿ ಯನ್ನು ಸೊಸೆಯನ್ನಾಗಿ ಮಾಡಿಕೊಳ್ಳುವುದು ಅಸಾಧ್ಯ ! ಕಲ್ಪನಾತೀತ !! ಎಂದು ಬಗೆದಳು.

ತಾಯಿ ಮಗನಿಗೆ ಬಹುವಾಗಿ ಹೇಳಿನೋಡಿದಳು. 'ಕಮ ಲೂ ತಾಯ್ತಂದೆಗಳು ತೀರ ಬಡವರು. ನಮಗೆ ಸರಿತೂಗುವ ಬೀಗರಲ್ಲ. ಅಲ್ಲದೆ ಆ ಹುಡುಗಿಗೆ ಮಾನವಿಲ್ಲ, ಮರ್ಯಾದೆ ಯಿಲ್ಲ, ಶುದ್ದವಾಗಿ ಹದ್ದುಮೀರಿ ಹೋಗಿದ್ದಾಳೆ. ಇಂಥವ ಳನ್ನು ಮದುವೆ ಮಾಡಿಕೊಳ್ಳಬೇಕೆಂಬ ನಿನಗೆ ಹುಚ್ಚುಗಿಚ್ಚು ಹಿಡಿದಿದೆಯೋ ? ಬಿ. ಏ. ಓದಿ ನಿನ್ನ ಬುದ್ಧಿ ಕೆಟ್ಟು ಹೋದಂತೆ ಕಾಣುತ್ತದೆ'.

'ಅಮ್ಮ ! ನಾನು ಮದುವೆ ಮಾಡಿಕೊಳ್ಳಬೇಕಾದರೆ ಅವಳನ್ನೇ ಮದುವೆಯಾಗುತ್ತೇನೆ. ಇಲ್ಲವಾದರೆ ನನಗೆ ಮದು ವೆಯೇ ಬೇಡ'.

ಅನಂತ ಯಾವಾಗಲೂ ಹಟಮಾರಿ. ತನ್ನ ಮಾತ ನ್ನೇ ನಡೆಸಿಕೊಳ್ಳುವನು. ಹೇಗಾದರೂ ಅವನಿಗೆ ಬೇಗ ಮದುವೆಯಾಗಿಬಿಟ್ಟರೆ ಸಾಕು. ಕಮಲೆಯನ್ನು ಮದುವೆಯಾದ ಕೂಡಲೆ ಮನೆಗೆ ಕರೆದುಕೊಂಡು ಬಂದು ತಿದ್ದಿಕೊಳ್ಳಬಹುದು. ಅಲ್ಲದೆ ಅವಳು ಕುರೂಪಿಯೂ ಅಲ್ಲ. ಅವಳ ಮಖದಲ್ಲಿ ಒಂದು ಬಗೆಯ ತೇಜಸ್ಸೂ, ಕಣ್ಣುಗಳಲ್ಲಿ ಒಂದು ರೀತಿಯ ಮೋಹಕ ಶಕ್ತಿಯೂ ಇವೆ. ಅನಂತ ಈಗ ಒಪ್ಪಿಕೊಂಡಿರು ವಾಗಲೇ ಮದುವೆ ಮಾಡಿಬಿಡಬೇಕು. ಇಲ್ಲವಾದರೆ ಮುಂದೆ ತೊಂದರೆ ಬಂದೀತು. ಎಂದು ಮನಸ್ಸಿನಲ್ಲಿಯೇ ಸಮಾಧಾನ ಮಾಡಿಕೊಂಡು, 'ಆಗಲಪ್ಪ ! ನಿನ್ನ ಮನಸ್ಸು ಹೇಗೆ ಬಂದರೆ ಹಾಗೆ ಮಾಡು. ಆಂತೂ ಮದುವೆ ಬೇಗ ಆಗುವುದು ಮುಖ್ಯ ಎಂದಳು.

ಈ ವರ್ತಮಾನ ಕೇಳಿ ಕಮಲೂ ತಾಯಿಗೆ ಎಷ್ಟು ಆನಂದವಾಯ್ತೆಂದು ಹೆಣ್ಣುಮಕ್ಕಳನ್ನು ಹೆತ್ತ ಬಡತಾಯಂ ದಿರೇ ಬಲ್ಲರು. ಕಮಲೆಯು ತಂದೆಗೆ ಹೇಳಿ ಕಳುಹಿಸಿದರು. ಅವನಿಗೂ ಅಪರಿಮಿತವಾದ ಆನಂದವಾಯಿತು. ಆದರೆ ರಜಾ ಸಿಕ್ಕಲಿಲ್ಲ. ಈಗಿನ ಮುಹೂರ್ತ ಬಿಟ್ಟರೆ ಇನ್ನೊಂದು ವರುಷದ ವರಿಗೂ ಬೇರೆ ಮುಹೂರ್ತವಿಲ್ಲ. ಆದಕಾರಣ ಹುಡುಗಿಯ ಸೋದರಮಾವನೇ ನಿಂತು ಮದುವೆ ಮಾಡ ಬೇಕಾಯಿತು.

ಮದುವೆಯಾದಮೇಲೆ ಕಮಲೆಗೆ ಅತ್ತೆಯ ಮನೆಯಲ್ಲಿ ಪಾಠಕ್ಕೆ ಪ್ರಾರಂಭ. ನಿರ್ಬಂಧದ ವಾಸ. ಸೊಸೆಯನ್ನು ಸುಧಾರಣೆ ಮಾಡುವುದು ಪುರುವಾಯಿತು. 'ಹುಡುಗೀ ! ನೀನಿನ್ನೂ ಹಸುಗೂಸಲ್ಲ, ತಿಳಿಯಿತೋ ! ಮನಬಂದಾಗ ಲೆಲ್ಲ ಮನೆಬಿಟ್ಟು ಹೊರಗೆ ಹೆಜ್ಜೆಯಿಡಕೂಡದು. ಗಟ್ಟಿಯಾಗಿ ಮಾತಾಡುವುದು, ನಗುವುದು, ಹರಟುವುದು, ಹಾರಾಡು ವುದು, ಕುಣಿದಾಡುವುದು, ಇವನ್ನೆಲ್ಲ ಇನ್ನುಮೇಲೆ ಸಂಪೂ ರ್ಣವಾಗಿ ಮರೆತುಬಿಡಬೇಕು. ನಮ್ಮ ಮನೆಯಲ್ಲಿ ಅವೆಲ್ಲ ನಡೆಯುವುದಿಲ್ಲ. ಹಿಂದೆ ನಮ್ಮ ಮನೆತನದಲ್ಲಿ ಯಾರೂ ಹೀಗೆ ಅಂಕೆ ತಪ್ಪಿರಲಿಲ್ಲ, ಜೋಕೆ !' ಎಂದು ಅತ್ತೆ ಗದರಿದಾಗ ಕಮಲೆಯು ತನ್ನ ಮನಸ್ಸಿನಲ್ಲಿ ಆ ಮನೆಯು ಕಾರಾಗೃಹ ವೆಂದೂ ಅಲ್ಲಿಯ ಜನಗಳ ಸಹವಾಸವನ್ನು ಸಾಧ್ಯವಾದಷ್ಟು ಬೇಗನೆ ನೀಗಿಕೊಳ್ಳಬೇಕೆಂದೂ ಭಾವಿಸಿದಳು.

ಸಾಯಂಕಾಲ ಅನಂತ ಮನೆಗೆ ಬಂದು ಕಮಲೆಯನ್ನು ನೋಡುವುದಕ್ಕೆ ಹೋದಾಗ ಅವಳು ಅಳುತ್ತಿದ್ದಳು. ಹೀಗೇ ಕೆ ಅಳುತ್ತೀಯೆ ಕಮಲಾ ! ನಿನಗೆ ನನ್ನಮೇಲೆ ಪ್ರೀತಿಯಿ ಲ್ಲವೆ ? ಎಂದು ಪ್ರೇಮಪೂರಿತ ಮೃದುಸ್ವರದಿಂದ ಕೇಳಿದ.

'ಇಲ್ಲ !'

ಅನಂತ ಅಧೀರನಾದ. 'ನಿನಗೆ ನಾನು ಮಾಡಿದ ಅಪರಾಧವಾದರೂ ಏನು ?'

'ಅಪರಾಧವೇ ? ನನ್ನನ್ನು ಮದುವೆಯಾದುದೇ ಅಪರಾಧ ;'

ಅನಂತನಿಗೆ ಮರು ಮಾತಾಡಲು ತೋರಲಿಲ್ಲ. ದಂಗೆ ಯೆದ್ದಿರುವ ಇವಳ ಹೃದಯವನ್ನು ವಿಶ್ವಪ್ರಯತ್ನದಿಂದ ವಶಮಾ ಡಿಕೊಂಡು ಪ್ರೇಮವಿಜಯವನ್ನು [illegible] ಹೋದರೆ !

ನಾನು ಅನಂತನೇ ಅಲ್ಲ !' ಎಂದು ಮನಸಿನೊಳಗೆ ನಿರ್ಧರಮಾಡಿಕೊಂಡ.

ಮರುದಿನ ಕಮಲೂಗೆ ತಂದೆಯ ಕಡೆಯಿಂದ ಕಾಗದ ಬಂತು. ಮದುವೆಯ ಸಮಯಕ್ಕೆ ಬರುವುದಕ್ಕಾಗದಿದ್ದುದಕ್ಕೆ ವಿಷಾದವನ್ನು ವ್ಯಕ್ತಪಡಿಸಿ, ನೂತನ ದಂಪತಿಗಳಿಗೆ ಆಶೀರ್ವಾದ ಮಾಡಿ ಬರೆದಿದ್ದಿತು. ತಂದೆಯ ಕಾಗದ ನೋಡಿ ಅವಳಿಗೆ ಅತ್ಯಾನಂದವಾಯಿತು. ಅತ್ತೆಯ ಬಳಿಗೆ ಓಡಿದಳು. 'ತಂದೆಯನ್ನು ನೋಡಬೇಕು. ಊರಿಗೆ ಕಳುಹಿಸಿಕೊಡಿ.' ಎಂದು ಕೇಳಿದಳು. ಅತ್ತೆಗೆ ಪೂರಾ ರೇಗಿಹೋಯಿತು. ಸೊಸೆಯ ಮೇಲೆ ಬೈಗಳ ಮಳೆಗರೆದಳು. ಅವಳ ತಾಯ್ತಂದೆಗಳ ಕುಲಕೋಟಿ ಉದ್ಧಾರವಾಗಿ ಹೋಯಿತು ! 'ಅಪ್ಪನ ಊರಿಗೆ ಹೋಗ್ತಾಳಂತೆ ಖೋಡಿ ! ಆ ಭಿಕಾರಿ ಅಪ್ಪನಿಗೇ ಇರುವುದಕ್ಕೆ ಜಾಗವಿಲ್ಲ. ನೀನು ಹೋಗಿ ಎಲ್ಲಿರುತ್ತೀಯೇ ?'

ಕಮಲೆ ಹತಾಶಳಾದಳು. ತನ್ನ ಕೋಣೆಗೆ ಹೋಗಿ ಬಿಕ್ಕಿ ಬಿಕ್ಕಿ ಅಳುವುದಕ್ಕೆ ಆರಂಭಿಸಿದಳು. 'ಅಪ್ಪಾ! ಅಪ್ಪಾ! ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗು. ಈ ನಿರ್ಬಂಧದಲ್ಲಿ ನಾನಿರಲಾರೆ.' ಎಂದು ತನಗೆ ತಾನೇ ಹೆಲುಬಿಕೊಂಡಳು.

ಮರುದಿನ ಬೆಳಗಿನ ಜಾವದಲ್ಲಿ ಅನಂತ ಕಮಲೆಯನ್ನೆಬ್ಬಿಸಿ, 'ಜಾಗ್ರತೆಯಾಗಿ ಸಿದ್ಧವಾಗು, ನಿಮ್ಮ ತಂದೆಯ ಊರಿಗೆ ಹೋಗೋಣ'. ಎಂದು ಹೇಳಿದ. ಕಮಲೆಯು ಸಂತೋಷದಿಂದ ಒಂದು ನಿಮಿಷಕ್ಕೆ ಅನುವಾದಳು. ಒಬ್ಬರಿಗೂ ತಿಳಿಯದಂತೆ ಇಬ್ಬರೂ ರೈಲ್‌ವೇ ಸ್ಟೇಷನ್ನಿಗೆ ಬಂದು ರೈಲು ಹತ್ತಿ ಮಧ್ಯಾಹ್ನದ ಹೊತ್ತಿಗೆ ಕಮಲೆಯ ತಂದೆಯಿದ್ದ ಊರಿಗೆ ತಲುಪಿದರು. ನೂತನ ದಂಪತಿಗಳನ್ನು ನೋಡಿ ರಾಮಣ್ಣನವರಿಗೆ ಒಂದು ಕಡೆ ಸಂತೋಷ, ಒಂದು ಕಡೆ ಅವರನ್ನಿರಿಸಿಕೊಳ್ಳಲು ಅನುಕೂಲವಿಲ್ಲದ ಸಂಕೋಚ. ಕೀಗಾಗಿ ಯೋಚನೆಯಾಯಿತು. ಅನಂತ ಮಾವನನ್ನು ಕುರಿತು 'ಕಮಲೂ ನಿಮ್ಮನ್ನು ನೋಡಬೇಕೆಂದು ಹಂಬಲಿಸಿದ್ದರಿಂದ ಏಕಾಏಕಿ ಹೊರಟು ಬಂದೆವು. ತಾಯಿಗೆ ಕೂಡ ತಿಳಿಸುವುದಕ್ಕಾಗಲಿಲ್ಲ. ಇನ್ನು ತಡಮಾಡದೆ ನಾವು ಹೊರಡಬೇಕು' ಎಂದು ಹೇಳಿದನು. ರಾಮಣ್ಣನವರಿಗೂ ಅದೇ ಸರಿ ಎಂದು ತೋರಿತು. ದಂಪತಿಗಳು ದಾರಿಯಲ್ಲಿಯೇ ಹಣ್ಣುಹಂಪಲು, ಪೂರಿಪಲ್ಯ, ಫಲಾಹಾರ ಮಾಡಿಕೊಂಡಿದ್ದು, ಮತ್ತಷ್ಟು ಕಟ್ಟಿಕೊಂಡು ಬಂದಿದ್ದರು. ಅದನ್ನೇ ಮೂವರೂ ಫಲಾಹಾರ ಮಾಡಿದರು. ಅದೇ ಸಾಯಂಕಾಲದ ಗಾಡಿಗೆ ಹೊರಟು ಮರುದಿನ ಬೆಳಿಗ್ಗೆ ಅನಂತನೂ ಕಮಲೆಯೂ ಪುನಃ ಮನೆಗೆ ಬಂದು ಸೇರಿದರು.

ಅನಂತನ ತಾಯಿಗೆ ಭಯಂಕರ ಸಿಟ್ಟು. ಇವರನ್ನು ಉದಾಸೀನಭಾವದಿಂದ ಕಂಡಳು. ಇವರು ಹೇಳಿದೆ ಕೇಳಿದೆ ಪರಾರಿಯಾದ ತಪ್ಪಿಗೆ ಮೌನಧಾರಣೆಯ ಶಿಕ್ಷೆಯಾಯಿತು. ಈ ದುಃಖಪೂರ್ಣ ಮೌನವು ಅನಂತನಿಗೆ ದುಃಸಹವಾಯಿತು. ಕಮಲೆಯರೀತಿಯೂ ಯಥಾಪ್ರಕಾರವಾಗಿಯೇ ಇದ್ದಿತು. ಇವೆಲ್ಲದರ ಪರಿಣಾಮವಾಗಿ ಅನಂತನ ಮನಸ್ಸಿಗೆ ತೀರ ಜಿಗುಪ್ಸೆಯುಂಟಾಯಿತು.

ಅನಂತ ಒಂದು ದಿನ ತಾಯಿಗೆ ಹೇಳಿದ. 'ಅಮ್ಮಾ ನಾನು ಮದರಾಸಿಗೆ ಲಾ ಓದುವುದಕ್ಕೆ ಹೋಗುತ್ತೇನೆ'.

'ಎಷ್ಟು ಓದುವುದು ಅನಂತ. ಓದಿ ಸಂಪಾದಿಸುವ ಅಗತ್ಯವೇನೂ ಇಲ್ಲವಲ್ಲಾ !'

ಎಂದು ಅವನ ತಾಯಿ ಸ್ವಲ್ಪ ಗಾಬರಿಯಿಂದ ಹೇಳಿದಳು. ಮಗನ ಮೇಲಿದ್ದ ಕೋಪವು ಹೋಗಿ ದುಃಖಕ್ಕೆ ಎಡೆಗೊಟ್ಟಿತ್ತು. ಅನಂತ ಕೇಳಲಿಲ್ಲ.

'ನನಗೆ ಇಲ್ಲಿರುವುದಕ್ಕೇ ಮನಸ್ಸಿಲ್ಲವಮ್ಮಾ. ನಾಳೆ ಹೊರಡುತ್ತೇನೆ' ಎಂದು ನಿರ್ಧರಿಸಿದ.

ರಾತ್ರಿ ಹೆಂಡತಿಗೂ ಈ ವಿಷಯ ತಿಳಿಸಿದ. 'ಕಮಲೂ ನನ್ನೊಡನೆ ಬರುತ್ತೀಯಾ ಮದರಾಸಿಗೆ'.

ಕಮಲೆ ಮಾತನಾಡಲಿಲ್ಲ. ಬರಲಿಷ್ಟವಿಲ್ಲವೆಂದು ಸೂಚಿಸಲು ತಲೆಯಾಡಿಸಿದಳು ಮಾತ್ರ.

'ನೋಡು ! ನಾನೀಗ ಹೊರಟುಹೋದರೆ ಬಹಳ ದಿನಗಳು ಮನೆಗೆ ಬರುವುದಿಲ್ಲ. ಎರಡು ವರ್ಷಕ್ಕಿಂತ ಹೆಚ್ಚು ಕಾಲ ಆಗಬಹುದು.

ಉತ್ತರವಿಲ್ಲ.

'ಹಾಗಾದರೆ ನೀನು ಇಲ್ಲಿಯೇ ಇರುತ್ತೀಯೋ ?'

'ಹೌದು ; ನಮ್ಮ ತಾಯಿಯ ಮನೆಯಲ್ಲಿರುತ್ತೇನೆ.'

'ನೋಡು ! ಪುನಃ ಹೇಳುತ್ತೇನೆ. ನಾನು ನಿನಗೋಸ್ಕರ ತಾಯಿಯ ಅಂತಃಕರಣವನ್ನು ಕಳೆದುಕೊಂಡಿದ್ದೇನೆ. ನಿನ್ನ ಉದಾಶೀನವಾದ ವರ್ತನೆಗೆ ಬೇಸರಪಟ್ಟು ಈಗ ಮನೆ

ಬಿಟ್ಟು ಹೋಗುತ್ತಿದ್ದೇನೆ. ನಾನು ಹಿಂದಿರುಗಿ ಬರಬೇಕೆಂದು ನೀನಾಗಿ ನೀನು ನನಗೆ ಕಾಗದ ಬರೆಯುವವರಿಗೂ ನಾನು ಪುನಃ ಇಲ್ಲಿ ಕಾಲಿಡುವುದಿಲ್ಲ.'

ಅನಂತ ಮದರಾಸಿಗೆ ಹೊರಟುಹೋದ. ಕಮಲೆ ತಾಯಿಯ ಮನೆಗೆ ಬಂದು ಕೆಲವು ತಿಂಗಳುಗಳಾದುವು. ಈಗ ಏತಕ್ಕೋ ಅವಳಿಗೆ ತವರ್ಮನೆ ಪೂರ್ವದಲ್ಲಿದ್ದಂತೆ ತೋರಲಿಲ್ಲ. ಪೂರ್ವದಲ್ಲಿದ್ದಷ್ಟು ಆನಂದ ಈಗ ಅಲ್ಲಿಲ್ಲ. ಇದನ್ನು ನೋಡಿ ಅವಳಿಗೇ ವಿಸ್ಮಯ. ಮನೆಯಲ್ಲಿ ಹೊತ್ತು ಹೋಗದು. ಏನು ಮಾಡುವುದಕ್ಕೂ ತೋರದು. ಮನೆ ಬಾಗಿಲು, ನೆರೆಹೊರೆ, ಎಲ್ಲಾ ಮೊದಲಿನವೇ ಆದರೂ ಮೊದಲು ಅವುಗಳಿಂದ ಅನುಭವವಾಗುತ್ತಿದ್ದಷ್ಟು ಸೌಖ್ಯ ಈಗ ಆಗದಿರುವುದಕ್ಕೆ ಕಾರಣವೇನು ?

ಆಕಸ್ಮಾತ್ತಾಗಿ ಅವಳ ಮನಸ್ಸಿನಲ್ಲಿ ಪತಿ ಸಾನ್ನಿಧ್ಯಕ್ಕೆ ಹೋಗಬೇಕೆಂಬ ಬುದ್ಧಿ ಜಾಗೃತವಾಯಿತು. ಅವಳ ಬಾಲ್ಯವು ಏಕಾಏಕಿ ಕಳೆದು ರೂಪಾಂತರ ಹೊಂದಿದಂತೆ ಅವಳಿಗೆ ಭಾಸವಾಯಿತು. ತೊಟ್ಟು ಮಾಗಿದರೆ ಎರೆಗಳು ಮರದಿಂದ ಹೇಗೆ ತಮ್ಮಷ್ಟಕ್ಕೆ ತಾವೇ ಕಳಚಿಬೀಳುವುವೋ ಹಾಗೆ ಕಮಲೆಯ ದೇಹದಲ್ಲಿ ಅಂಟಿಕೊಂಡಿದ್ದ ಪೂರ್ವದ ಸಂಸ್ಕಾರ, ಪೂರ್ವದ ಪ್ರಪಂಚ, ಪೂರ್ವದ ಕಲ್ಪನೆಗಳು ಒಂದೇ ಸಾರಿ ಜಾರಿಹೋದುವು. ಬಾಲ್ಯಾವಸ್ಥೆಯು ಅವಳಿಗೆ ಪತ್ತೆಯಿಲ್ಲದೆ ಹಾರಿ ಹೋಗಿ ತಾರುಣ್ಯಾವಸ್ಥೆಗೆ ಎಡೆಗೊಟ್ಟಿತ್ತು. ಈಗ ಕಮಲೆಗೆ ಮನೆ ಬಿಟ್ಟು ಹೋಗಬೇಕೆನ್ನಿಸುವುದಿಲ್ಲ. ಗಟ್ಟಿಯಾಗಿ ನಗು ಬರುವುದಿಲ್ಲ. ನಕ್ಕರೆ ಒಳೊಳಗೇ ಮೃದುಮಧುರ ಹಾಸ್ಯ.

ಒಂದು ದಿನ ಕಮಲೆಯು ತಾಯನ್ನು ಕುರಿತು ' ಅಮ್ಮಾ ! ನನ್ನನ್ನು ಅತ್ತೆಯಮನೆಗೆ ಕರೆದುಕೊಂಡು ಹೋಗುವುದಿಲ್ಲವೆ ?' ಎಂದು ಕೇಳಿದಳು.

' ಅವರು ಕರೆಯ ಕಳುಹಿಸದೆ ಹೇಗೆ ಹೋಗುವುದು ?'

' ಏನೂ ಚಿಂತೆಯಿಲ್ಲ. ನನ್ನ ಮನೆಗೆ ನಾನು ಕರೆಯಿಸಿಕೊಂಡು ಹೋಗಬೇಕೇ ? ಈ ಮಧ್ಯಾಹ್ನ ಕರೆದುಕೊಂಡು ಹೋಗಮ್ಮ '.

ಅನಂತನ ತಾಯಿಗೆ ಪೂರಾ ಆಶ್ಚರ್ಯವಾಯಿತು. ಈಚೆಗೆ ಕಮಲೆಯರೀತಿ ಒಳ್ಳೆಯದಾಗಿ ಬದಲಾಯಿಸಿದೆಯೆಂದು ಅವಳೂ ವಿಚಾರಿಸಿ ತಿಳಿದುಕೊಂಡಿದ್ದಳು. ಅನಂತನ ಮೇಲಿನ ಸಿಟ್ಟು ಇಳಿದು ಹೋಗಿತ್ತು. ಕಮಲೆಯನ್ನು ತಾನೇ ಕರೆಯಿಸಿಕೊಳ್ಳಬೇಕೆಂದಿದ್ದಳು. ಆದರೆ ಅವಳು ತಾನಾಗಿಯೇ ಬರುವಳೆಂದು ಕನಸಿನಲ್ಲಿಯೂ ನೆನಸಿರಲಿಲ್ಲ. ಒಡನೆಯೇ ಅವಳ ಕಣ್ಣುಗಳು ಹನಿಗೂಡಿದುವು. ಸಾಷ್ಟಾಂಗನಮಸ್ಕಾರ ಮಾಡಿದ ಸೊಸೆಯನ್ನು ಹಿಡಿದೆತ್ತಿ ತಬ್ಬಿಕೊಂಡಳು. ಆ ಕ್ಷಣದಲ್ಲಿ ಅತ್ತೆ ಸೊಸೆಯರು ಒಂದಾದರು. ಇಬ್ಬರ ಕಣ್ಣುಗಳಲ್ಲಿಯೂ ಒಂದೇ ಸಮನಾಗಿ ಧಾರೆ ಹರಿಯಿತು. ಇಬ್ಬರೂ ಅತ್ತರು. ಅತ್ತೆಯ ತಪ್ಪು ಗ್ರಹಿಕೆಯು ದೂರವಾಯಿತು. ಸೊಸೆಯು ಈಗ ಮೊದಲಿಗಿಂತ ನೂರ್ಮಡಿ ಸುಂದರಿಯಾಗಿ ಕಾಣಿಸಿದಳು. ಒಲವಿನಿಂದ ಮತ್ತೊಮ್ಮೆ ಅವಳನ್ನು ಮುದ್ದಿಟ್ಟುಕೊಂಡಳು.

ಅನಂತ ಮದರಾಸಿಗೆ ಹೋಗಿ ಒಂದು ವರುಷವಾಯಿತು. ಅವನು ಊರಿಗೆ ಬರುವ ಸುದ್ದಿಯೇ ಇಲ್ಲ. ದಿನೇ ದಿನೇ ಕಮಲೆಯು ಹೆಚ್ಚುಹೆಚ್ಚಾಗಿ ಪತಿದರ್ಶನೋತ್ಕಂಠಿತೆಯಾದಳು. ತನ್ನ ಕಾಗದ ಹೋಗುವವರಿಗೂ ಅವನು ಬರುಪುದಿಲ್ಲವೆಂದು ಹೇಳಿದ್ದುದು ನೆನಪಿಗೆ ಬಂದಿತು. ತತ್‌ಕ್ಷಣವೇ ಲೇಖನ ಸಾಮಗ್ರಿಗಳನ್ನೊದಗಿಸಿಕೊಂಡು ಬರೆಯುವುದಕ್ಕೆ ಕುಳಿತಳು. ಅವಳಿಗೆ ಕಾಗದ ಬರೆದು ಅಭ್ಯಾಸವಿಲ್ಲ. ಅವಳ ಅಕ್ಷರಗಳು ದೊಡ್ಡದೊಡ್ಡುವು. ಹೇಗೆ ಆರಂಭಿಸಬೇಕು, ಹೇಗೆ ಮುಗಿಸಬೇಕು ಎಂದು ತಿಳಿಯದು. ಎರಡಕ್ಷರ ಬರೆದಳು, ಬೆರಳುಗಳು ಮಸಿಯಾದುವು. ಏನಾದರೂ ಮಾಡಿ ಬರಿಯಲೇಬೇಕು. ಇಲ್ಲವಾದರೆ ಅವನು ದೇರೆ ಬರುವಹಾಗಿಲ್ಲ. ಎಂದು ಪ್ರಯತ್ನಮಾಡಿ ಏನು ಒಕ್ಕಣೆ ಬರಿಯಬೇಕೆಂದು ತಿಳಿಯದೆ, ತನ್ನ ಮನಸ್ಸಿನಲ್ಲಿದ್ದ ಮುಖ್ಯ ವಿಷಯವನ್ನು ಮಾತ್ರ ಹಾಗೂ ಹೀಗೂ ಮಾಡಿ ಬರೆದು ಮುಗಿಸಿದಳು.

' ನೀವು ನನಗೇಕೆ ಕಾಗದ ಬರೆಯುವುದಿಲ್ಲ? ನೀವು ಆರೋಗ್ಯವೇ ? ಈ ಕಾಗದ ಕಂಡ ತಕ್ಷಣ ಹೊರಟು ಬರಬೇಕು. ಇನ್ನು ಮೇಲೆ ನಾನು ನಿಮ್ಮ ಮಾತು ಮೀರುವುದಿಲ್ಲ. ನಿಮ್ಮ ದಾಸಿಯಾಗಿರುತ್ತೇನೆ.'

ಕಾಗದವನ್ನು ಮಡಿಸಿ ಒಂದು ಕವರಿನಲ್ಲಿ ಹಾಕಿ ಅಂಟಿಸಿ ಮೇಲಣ ವಿಳಾಸ ಬರೆದಳು. ' ಮದರಾಸಿನಲ್ಲಿರುವ ಶ್ರೀಯುತ ಜೋಡೀದಾರ್ ಅನಂತಮೂರ್ತಿರಾಯರಿಗೆ ' ಎಂದು. ಇಷ್ಟೇ ವಿಳಾಸ ಸಾಲದೆಂದು ಅವಳಿಗೆ ಗೊತ್ತಿಲ್ಲ. ಅರ್ಥಾತ್ ಅವಳ ಕಾಗದ ಅನಂತನಿಗೆ ಸೇರಲಿಲ್ಲ. ಅಂಚೆಯವರದೂ ಏನೂ ತಪ್ಪಿಲ್ಲ.

ಕಾಲೇಜಿಗೆ ರಜಾ ಬಂತು. ಆದರೂ ಅನಂತನಿಗೆ ಊರಿಗೆ ಬರುವ ಯೋಚನೆ ಇಲ್ಲ. ಅವನ ತಾಯಿ ತನ್ನ ಸಿಟ್ಟಿನಿಂದಲೇ ಮಗನನ್ನು ಓಡಿಸಿದೆನೆಂದು ಮನಸಾರೆ ಕೊರಗಲಾರಂಭಿಸಿದಳು. ತನ್ನ ಮೇಲಿನ ಸಿಟ್ಟು ಇನ್ನೂ ಇಳಿದಿಲ್ಲ. ಅದಕ್ಕೇ ತನ್ನ ಕಾಗದಕ್ಕೆ ಪ್ರತ್ಯುತ್ತರ ಬರಲಿಲ್ಲ, ಎಂದು ಕಮಲೆಯು ಚಿಂತಿಸಿದಳು. ಅವಳಿಗೆ ಜೀವನವೇ ಬೇಡವೆನಿಸಿತು.

ಅನಂತನ ತಾಯಿಗೆ ಮಗನನ್ನು ನೋಡಬೇಕೆಂಬ ಹಂಬಲ ದಿನೇ ದಿನೇ ವೃದ್ಧಿಯಾಯಿತು. 'ನಾನು ನಾಳೆ ಮದರಾಸಿಗೆ ಹೋಗಬೇಕೆಂದಿದ್ದೇನೆ. ನೀನೂ ನನ್ನ ಜತೆಯಲ್ಲಿ ಬರುತ್ತೀಯಾ?' ಎಂದು ಸೊಸೆಯನ್ನು ಕೇಳಿದಳು.

ಈ ಸಾರಿ ಕಮಲೆಯನ್ನು ಕೇಳಬೇಕಾಗಿಯೇ ಇರಲಿಲ್ಲ. ಕೃತಜ್ಞತಾ ದೃಷ್ಟಿಯಿಂದ ತನ್ನ ಸಮ್ಮತಿಯನ್ನು ಸೂಚಿಸಿದಳು. ತನ್ನ ಕೋಣೆಗೆ ಹೋಗಿ ಬಾಗಿಲನ್ನು ಹಾಕಿಕೊಂಡಳು. ಗೋಡೆಗೆ ತಗಲುಹಾಕಿದ್ದ ಅನಂತನ ಭಾವಚಿತ್ರಕ್ಕೆ ದೀರ್ಘದಂಡ ನಮಸ್ಕಾರ ಮಾಡಿದಳು. ತನ್ನ ಅಪಚಾರಗಳನ್ನೆಲ್ಲ ಕ್ಷಮಿಸಬೇಕೆಂದು ಅಶ್ರುಧಾರಾ ಪೂರ್ವಕವಾದ ಪ್ರಾರ್ಥನೆಯಿಂದ ಬೇಡಿದಳು.

ಇತ್ತ ಅನಂತನ ಮನಸ್ಸಿಗೂ ಸುಖಸಮಾಧಾನವಲ್ಲ. ಕಮಲೆಯನ್ನು ಆಗಾಗ ನೆನಸಿಕೊಳ್ಳುವನು ತಾನಾದರೂ ಅವಳಿಗೊಂದು ಕಾಗದ ಬರಿಯಬೇಕೆಂದು ಬಗೆದನು. ಅವಳ ಮೇಲೆ ತನಗಿರತಕ್ಕ ಉತ್ಕಟ ಪ್ರೇಮವನ್ನು ವ್ಯಕ್ತಪಡಿಸಿ ನಿರೂಪಿಸುವುದಕ್ಕೆ ತಕ್ಕ ಶಬ್ದಗಳೇ ಸೂಚನೆಯಾಗಲಿಲ್ಲ. ಯೋಚನೆ ಮಾಡುತ್ತ ಕುಳಿತಿರುವ ಸಮಯಕ್ಕೆ ಸರಿಯಾಗಿ ಅವನ ಭಾವನಿಂದ ಕಾಗದ ಬಂತು.

'ಮಾತೃಶ್ರೀ ಸಮಾನರಾದ ಅತ್ತೆಯವರು ಬಂದಿದ್ದಾರೆ ನಿಮ್ಮನ್ನು ನೋಡಬೇಕೆನ್ನುತ್ತಾರೆ. ಕೂಡಲೆ ಹೊರಟುಬರುವುದು ರಾತ್ರೆ ಊಟಕ್ಕೂ ಇಲ್ಲಿಯೇ ನಿಲ್ಲಬೇಕು'

ಅನಂತ ತಕ್ಷಣ ಹೊರಟು ಅಕ್ಕನ ಮನೆಗೆ ಬಂದು ತಾಯಿಯನ್ನು ನೋಡಿ ನಮಸ್ಕಾರ ಮಾಡಿದ. 'ಮನೆಯಲ್ಲೆಲ್ಲರೂ ಕ್ಷೇಮವೇನಮ್ಮ?' ಎಂದು ಕೇಳಿದ.

'ಹೌದಪ್ಪಾ! ಎಲ್ಲರೂ ಕ್ಷೇಮ. ನಾನು ನಿನ್ನನ್ನು ಕರೆದುಕೊಂಡು ಹೋಗಬೇಕೆಂದು ಬಂದೆ.'

ಅನಂತನ ಯೋಚನೆಯೇ ಬೇರೆಯಿಕಡೆ ತನ್ನ ತಾಯಿ ಕಮಲೆಯನ್ನೇಕೆ ಕರೆದುತರಲಿಲ್ಲ? ಈ ಮುದುಕಿಗೆ ಇಷ್ಟುಮಾತ್ರ ಗೊತ್ತಾಗಬೇಡವೆ? ಅಥವಾ ಆಕೆಯುದೇನು ತಪ್ಪು? ತನ್ನ ಪತ್ನಿಯೇ ಕರೆದರೂ ಬಾರದೆ ನಿರಾಕರಿಸಿರಬಹುದು, ಎಂದು ತೀಕ್ಷ್ಣವಾದ ನಿರಾಶೆಯು ಯಾತನೆಯನ್ನನುಭವಿಸುತ್ತ, 'ನಾನೀಗಲೇ ಊರಿಗೆ ಬರುವುದಕ್ಕಾಗುವುದಿಲ್ಲಮ್ಮ! ಹೇಗಿದ್ದರೂ ನಿನ್ನನ್ನು ನೋಡಿ ಆಯಿತಲ್ಲ. ಇನ್ನು ಊರಿನಲ್ಲಿ ನನಗೇನು ಕೆಲಸ?' ಎಂದು ಉತ್ತರ ಕೊಟ್ಟ.

ಅಷ್ಟರಲ್ಲಿ ಊಟಕ್ಕೆಬ್ಬಿಸಿದರು, ಅನಂತನ ಭಾವ ಈ ದಿನ ವಿಶೇಷ ಹಾಸ್ಯಪ್ರಿಯನಾಗಿದ್ದಂತೆ ತೋರಿತು. ಅವನ ಸರಸವಿನೋದಸಲ್ಲಾಪಗಳು ಅನಂತನಿಗೆ ಬೇಕಾಗಿರಲಿಲ್ಲ. ಆದರೂ ಬಿಡದೆ, ಅನಂತನ ಭಾವ ಆ ಮಾತು ಈ ಮಾತು ತೆಗೆದು ಅನಂತನನ್ನು ಕೂಡಿಸಿಕೊಂಡ. ಹತ್ತುಗಂಟೆ ಹೊಡೆಯಿತು. ಆಗ ಅನಂತನ ಅಕ್ಕ 'ಅನಂತ, ಈಗ ಬಹಳ ಹೊತ್ತಾಯಿತು. ಹೊರಗಡೆ ಮಳೆಯೂ ಬರುತ್ತಿದೆ. ಇಷ್ಟು ಹೊತ್ತಿನ ಮೇಲೆ ಹಾಸ್ಟೆಲ್ಲಿಗೆಲ್ಲಿ ಹೋಗುವುದು? ಇಲ್ಲಿಯೇ ಮಲಗಿದ್ದು ಬೆಳಿಗ್ಗೆ ಹೋದರೆ ಸರಿ' ಎಂದು ಹೇಳಿದಳು.

'ಇಲ್ಲ, ನಾನು ಹೋಗಬೇಕು. ನನಗೆ ಬಹಳ ಕೆಲಸವಿದೆ'. ಎಂದು ಭಾವನ ವಿನೋದಗಳಿಂದ ಬೇಸರುಗೊಂಡಿದ್ದ ಅನಂತ ಉತ್ತರ ಕೊಟ್ಟ.

'ಹೌದು, ಹೌದು, ನಿನಗೆ ಬಹಳ ಕೆಲಸ ಇರುವುದು ಗೊತ್ತಿದೆ. ಈ ಮಳೆಯಲ್ಲಿ ನೆನೆದುಕೊಂಡು ಹೋಗದಿದ್ದರೆ ಏನು ನಿಂತುಹೋಗುವುದೋ? ನಿನಗೂ ಆಯಾಸವಾಗಿರುವಂತೆ ಕಾಣುತ್ತದೆ. ನೀನು ಈ ರಾತ್ರೆ ಇಲ್ಲಿಯೇ ಇದ್ದರೆ ಅಮ್ಮನಿಗೂ ಸಮಾಧಾನ'. ಎಂದು ಅಕ್ಕ ಪುನಃ ಒತ್ತಾಯ ಮಾಡಿದಳು.

ಇಷ್ಟೊಂದು ಬಲವಂತವಾದ ಮೇಲೆ ಅನಂತ ಯತ್ನವಿಲ್ಲದೆ ಒಪ್ಪಿಕೊಳ್ಳಬೇಕಾಯಿತು. ಅಕ್ಕ ಅವನಿಗೆ ಸಿದ್ಧಪಡಿಸಿದ್ದ ಕೋಣೆಯನ್ನು ತೋರಿಸಿದಳು. ಒಳಗೆ ದೀಪವಿರಲಿಲ್ಲ. 'ಮಂಚದ ಮೇಲೆ ಹಾಸಿಗೆ ಹಾಸಿದೆ. ಬೇಕಾದರೆ ದೀಪ ಕಳುಹಿಸುತ್ತೇನೆ' ಎಂದು ಹೇಳಿದಳು.

'ದೀಪವೂ ಬೇಡ, ಏನೂ ಬೇಡ' ಎಂದು ಹೇಳಿ ಅನಂತ ಮೆಲ್ಲಮೆಲ್ಲಗೆ ಹೆಜ್ಜೆಯಿಕ್ಕುತ್ತ ಮಂಚವನ್ನು ಸಮೀಪಿಸಿದ ತಕ್ಷಣ ಕಂಕಣನಿನಾದದಿಂದೊಡಗೂಡಿದ ನಳಿದೋಳ್ಗಳಿರದು ಅವನ ಕೊರಳಿಗೆ ತೆಕ್ಕೆ ಬಿದ್ದುವು. ಬಹು ಮೆಲ್ಲಗೆ ಬಿಕ್ಕಿಬಿಕ್ಕಿ ಅಳುತ್ತಿರುವ ರಮಣಿಯ ಅಶ್ರುಧಾರೆಯಿಂದ ಅನಂತನ ವಕ್ಷಸ್ಥಳವು ತೊಯ್ದುಹೋಯಿತು. ಎಲ್ಲವೂ ಆಕಸ್ಮಾತ್. ಅನಂತನಿಗೆ ಸಮಾಚಾರವೇ ಇಲ್ಲ. ಅವನಿಗೆ ಮತಿ ವಿಭ್ರಮವಾಯಿತು. ಗಾಬರಿಯಾಯಿತು. ಆದರೆ ಕ್ಷಣಾರ್ಧದಲ್ಲಿಯೇ ಭ್ರಮೆಯು ಸರಿದುಹೋಗಿ, ಆ ಕೋಮಲ ಬಾಹುಗಳು ತನ್ನ ಹೃದಯೇಶ್ವರಿಯವೆಂದು ಗೊತ್ತಾಯಿತು.

ಎ೦. ಎಸ್. ಜಿ.

ತಿವಾರಿ*

ಇಲ್ಲಿಗೆ ಬಂದು ತಿಂಗಳಾಯಿತು. ಅನೇಕ ದೊಡ್ಡ ಮನುಷ್ಯರು ನನ್ನ ಪತಿಯ ಮಿತ್ರರಾದರು. ಅವರದು ಅಷ್ಟು ಸರಳ ಸ್ವಭಾವ. ನನ್ನದಾದರೋ ಬಹಳ ಸಂಕೋಚ ಪ್ರಕೃತಿ. ಯಾರೊಡನೆಯೂ ವಿಶೇಷವಾಗಿ ಕರೆತವಳಲ್ಲ. ಅನೇಕರು ನನ್ನೊಡನೆ ಸ್ನೇಹ ಬೆಳೆಸಲು ಇಷ್ಟತೋರುತ್ತಿದ್ದರು. ಅನೇಕರು ಮಿತ್ರರಾದರು. ಅವರುಗಳಲ್ಲಿ ಉಮಾದೇವಿಯು ನನ್ನ ಆಪ್ತಮಿತ್ರಳು.

ಉಮೆಯ ಹಸನ್ಮುಖ, ಚಂಚಲನೇತ್ರಗಳು ಮತ್ತು ಸರಳ ಪ್ರಕೃತಿ ಇವುಗಳು ನನ್ನ ಮನಸ್ಸನ್ನು ಆಕರ್ಷಿಸುತ್ತಿದ್ದವು. ಮನೆ ಕೆಲಸಗಳೆಲ್ಲ ಮುಗಿದ ಮೇಲೆ ಪತಿಯು ಆಫೀಸಿಗೆ ಹೋಗಿರುವಾಗ ನನ್ನ ಮುದ್ದು ಮಗುವು ಮಲಗಿದಮೇಲೆ ಉಮೆಯೊಡನೆ ಹರಟುವುದೇ ನನ್ನ ಕೆಲಸ. ಉಮೆಯ ವಯಸ್ಸು ಸುಮಾರು ಇಪ್ಪತ್ತು. ಮಕ್ಕಳಿಲ್ಲ. ಮಾವನು ಜೋಧಪುರದಲ್ಲಿ ಅತ್ತರ ವ್ಯಾಪಾರಿ. ಸ್ವಂತ ಮನೆಯಲ್ಲಿ ವಾಸ. ವಠಾರದಲ್ಲಿ ಅನೇಕ ಉಪಸಂಸಾರಗಳು ವಾಸಿಸುತ್ತಿದ್ದವು. ಉಮೆಯು ಪ್ರತಿ ದಿನವೂ ಬಂದಲ್ಲಿ ಒಂದು ಸಂಸಾರದ ಹಾಸ್ಯ ಪೂರಿತವಾದ ಕಥೆಗಳನ್ನು ಹೇಳಿ ನಗಿಸುತ್ತಿದ್ದಳು. ಏಕಾಂಗಿಯಾದ ಒಬ್ಬ ವಿಚಿತ್ರ ಮಹೋದಯನ ಕಥೆಯು ನನ್ನ ಮನಸ್ಸಿಗೆ ಬಹಳ ನಾಟಿತು.

ಉಮೆಯು ನಿತ್ಯವೂ ನಮ್ಮ ಮನೆಗೆ ಬರುತ್ತಿದ್ದರೂ ನಾನು ಒಂದು ದಿನವಾದರೂ ಅವಳ ಮನೆಗೆ ಹೋಗಿರಲಿಲ್ಲ. ಒಂದು ಹಬ್ಬದ ದಿವಸ ಅವಳ ಮನೆಗೆ ಹೋದೆ. ಮನೆತುಂಬ ಲೆಕ್ಕವಿಲ್ಲದಷ್ಟು ಬಂಧುಬಳಗದವರು ಕಿಕ್ಕಿರಿದು ತುಂಬಿದ್ದರು. ಸಂಜೆಯವರೆಗೂ ಅವಳ ಮನೆಯಲ್ಲಿಯೇ ಕಾಲವನ್ನು ಕಳೆದು ಮನೆಗೆ ಹಿಂತಿರುಗಲು ಉದ್ಯುಕ್ತಳಾದೆ. ಉಮೆಯು ಬಲವಂತವಾಗಿ ನನ್ನನ್ನು ಆ ವಠಾರದಲ್ಲಿದ್ದ ಇತರ ಮನೆಗಳಿಗೆಲ್ಲಾ ಎಳೆದುಕೊಂಡು ಹೋಗಿ ಅವರುಗಳ ಪರಿಚಯವನ್ನು ಮಾಡಿಸಿ ಕಡೆಗೆ ಒಂದು ಕೊಠಡಿಯಬಳಿಗೆ ಕರೆತಂದಳು.

ಬಾಗಿಲಿಗೆ ಬೀಗ ಹಾಕಿದ್ದಿತು. ಕಿಟಿಕಿಯು ತೆರೆದಿತ್ತು. ಒಳಗೆ ನೋಡಿದೆ. ಕೊಠಡಿ ತುಂಬ ಸಾಮಾನುಗಳು ಸಿಕ್ಕಾ ಪಟ್ಟೆಯಾಗಿ ಬಿದ್ದಿದ್ದವು. ಪುಸ್ತಕಗಳೇ ಹೆಚ್ಚಾಗಿದ್ದವು. ಮಂಚದ ಮೇಲೆ, ಕುರ್ಚಿಯ ಮೇಲೆ, ಮೇಜಿನ ಮೇಲೆ, ನೆಲದ ಮೇಲೆ ಎಲ್ಲೆಲ್ಲಿಯೂ ಪುಸ್ತಕದ ರಾಶಿಗಳು. ಒಂದು ಮೂಲೆಯಲ್ಲಿ ಬಟ್ಟೆ ಪೆಟ್ಟಿಗೆ. ಅದೂ ತೆರೆದುಬಿದ್ದಿದೆ. ಮತ್ತೊಂದು ಮೂಲೆಯಲ್ಲಿ ಮೈಲಿಗೆ ಬಟ್ಟೆಗಳ ರಾಶಿ. ಅಲ್ಲೊಂದು ಇಲ್ಲೊಂದು ಕೊಳೆ ಟವಲು. ಹಾಸಿಗೆ ಮಡಿಯಾಗಿದ್ದರೂ ಕೊಡವಿ ಹಾಸಿ ಬಹಳ ದಿವಸಗಳಾಗಿರಬೇಕು. ನೆಲದಮೇಲೆ ಹಾಸಿದ್ದ ಜಂಖಾನೆಯ ಮೇಲೆ ಒಂದು ಕನ್ನಡಿ. ಅದರ ಮೇಲೆರಡ್ಲಾ ಎಣ್ಣೆಗ್ಯೆಯ ಅಚ್ಚುಗಳು. ಪಕ್ಕದಲ್ಲಿ ಒಂದು ಬಾಚಣಿಗೆ. ಒಂದು ಎಣ್ಣೆ ಸೀಸೆ. ಅದರ ಪಕ್ಕದಲ್ಲಿ ಟೂತ್ ಪೇಸ್ಟ್ ಮತ್ತು ಬ್ರಷ್. ಬೀರುವಿನೊಳಗೆ ಅನೇಕ ಪುಸ್ತಕಗಳು, ಹಳೇ ಬಟ್ಟೆ, ಸ್ಪಿರಿಟ್, ಸೋಪು ಸೀವೇ ಎಣ್ಣೆ ಮತ್ತು ಸ್ಪಿರಿಟ್ ಸೀಸೆಗಳು. ಒಂದು ಸೆಟ್ ಟೀ ಪಾತ್ರೆಗಳು.

ಸಂಜೆಸೂರ್ಯನ ಸುವರ್ಣಕಿರಣಗಳು ಕಿಟಿಕಿಯ ಮೂಲಕ ಕೊಠಡಿಯ ಒಳಗೆ ನಲಿಯುತ್ತಿದ್ದವು. ನನ್ನ ದೃಷ್ಟಿ ಪಥವು ಮಂಕಾಯಿತು. ಎಲ್ಲಿಗೋ ತೇಲಿ ಹೋದೆ. ಈ ಜಗತ್ತಿನಿಂದ ಬಹುದೂರ ತೇಲಿ ಹೋದೆ. ಹಠಾತ್ತಾಗಿ ನನ್ನ ಬಾಲ್ಯದ ಬೇವುಬೆಲ್ಲಗಳ ಸವಿನೆನಪು ಮೂಡಿತು. ದುಃಖ ಮಿಶ್ರಿತವಾದ ಅನಂದವು ಚಿಮ್ಮಿತು.

'ಉಮಾ! ಇಲ್ಲಿ ಯಾರು ವಾಸಿಸುತ್ತಾರೆ?'

'ಕಮಲಾ, ಇದೇ ಆ ಅವಿವಾಹಿತ ವಿಚಿತ್ರಮಹೋದಯ ಚಂದ್ರಶೇಖರ ತಿವಾರಿಯ ಮನೆ'

'ಯಾರು? ತಿವಾರಿ? ಚಂದ್ರಶೇಖರ ತಿವಾರಿಯೇ!'

'ಹೌದು. ಅವನದೇ ಈ ಮನೆ. ಅವನು ಯಾರು? ಎಲ್ಲಿಂದ ಬಂದ? ಏನು ಕೆಲಸ ಮಾಡುತ್ತಾನೆಂಬುದು ಯಾರಿಗೂ ತಿಳಿಯದು. ವಯಸ್ಸು ಸುಮಾರು ಇಪ್ಪತ್ತೈದು. ಇನ್ನೂ

---

* ಹಿಂದೀ ಕತೆಯೊಂದರ ಅನುವಾದ

ಮುದುವೆ ಇಲ್ಲವಂತೆ ! ಅಷ್ಟು ಪಾತ್ರ ಅವನ ವಿಚಾರ ಗೊತ್ತು. ಬೆಳಗಿನ ಜಾವ ಮನೆ ಬಿಟ್ಟು ಹೊರಟರೆ ರಾತ್ರಿ ಹೊತ್ತಾಗಿ ಮನೆ ಸೇರುವನು. ಯಾರೊಡನೆಯೂ ಮಾತುಕತೆಗಳನ್ನಾಡಿದುದೇ ನಾನು ಕಾಣೆ.'

ನನ್ನ ಭಾವನಾತರಂಗಗಳಿಂದ ಕೂಡಿದ ವಿಚಾರಸಾಗರದ ಮಧ್ಯದಲ್ಲಿ ಒಂದು ಮೂರ್ತಿಯು ಉದ್ಭವವಾಯಿತು. ಸುಂದರಮೂರ್ತಿ. ಬಾಡಿದ ಮುಖದಲ್ಲಿ ತೀಪ್ರ ಪ್ರಕಾಶದ ತೇಲುವ ಕಣ್ಣುಗಳು. ಧೃಢ ಪ್ರತಿಜ್ಞೆಯನ್ನು ತೋರುವ ಬಿಗಿದ ತುಟಿಗಳು. ಕೇವಲ ಸರಳ ಪ್ರಕೃತಿ. ನಿಜವಾಗಿಯೂ ಒಬ್ಬ ವಿಚಿತ್ರಪುರುಷನ ಕಲ್ಪನೆಯಾಯಿತು. ಕೊಠಡಿಯು ಹೀಗೆ ಅಪೂರ್ವಸ್ಥಿತವಾಗಿರುವುದಕ್ಕೆ ಗೃಹಣಿಯ ಸೌಭಾಗ್ಯದಿಂದ ವಂಚಿತನಾಗಿರುವುದೇ ಕಾರಣ. ಯೋಗ್ಯಳಾದ ಭಾರ್ಯೆಯು ಲಭಿಸುವುಳಾದರೆ ಅವನ ಮನೋಭಾವಗಳು ರೂಪಾಂತರವನ್ನು ಹೊಂದುವುವು. ಆತ್ಮವು ವಿಕಾಸಗೊಳ್ಳುವುದು.' ಎಂದು ಅಂದುಕೊಳ್ಳುತ್ತಾ ಮನೆಗೆ ಹಿಂತಿರುಗಲು ಉದ್ಯುಕ್ತಳಾದೆ.

ತಿವಾರಿಯನ್ನು ನೋಡಬೇಕೆಂಬ ಉತ್ಕಟ ಅಭಿಲಾಷೆಯು ಉತ್ಪನ್ನವಾಯಿತು. ಎಂದೂ ನೋಡದ ಒಬ್ಬ ವ್ಯಕ್ತಿಯ ವಿಚಾರದಲ್ಲಿ ಸಮವೇದನಾತ್ಮಕ ಭಾವುಕತೆಯು ಉತ್ಪನ್ನವಾಗಿ ಕಳವಳಗೊಳ್ಳುವುದು ನಿಜವಾಗಿಯೂ ಹಾಸ್ಯಾಸ್ಪದವೇ ಸರಿ. ಆದರೆ ಮನುಷ್ಯನ ಮನವು ಈ ರೀತಿ ಪ್ರಭಾವಿತವಾಗುವುದಕ್ಕೆ ಸರಿಯಾದ ಕಾರಣವನ್ನು ತಿಳಿಯುವುದು ಕಷ್ಟ.

ಹೊತ್ತು ಮುಳುಗುವ ಸಮಯ. ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ಹೊರಟೆ. ಉಮೆಯೂ ನಾನೂ ಪೆಟ್ಟಲು ಇಳಿಯುತ್ತ ಬರುತ್ತಿದ್ದೆವು. ಅಷ್ಟರಲ್ಲಿ ಅದೇ ಪೆಟ್ಟಲುಗಳನ್ನು ಹತ್ತಿ ಬರುತ್ತಿದ್ದ ಸುಂದರ ಯುವಕನನ್ನು ಕಂಡೆ. ಸೆರಗನ್ನು ಸರಿಮಾಡಿಕೊಂಡು ಒಂದು ಪಕ್ಕದಲ್ಲಿ ನಿಂತೆ. ಮುಸಗಿನೊಳಗಿನಿಂದ ಓರೆಗಣ್ಣಿನಿಂದ ಯುವಕನನ್ನು ನೋಡಿದೆ. ಅನ್ಯ ಮನಸ್ಕನಾದ, ಆದರ್ಶವಾದಿಯಾದ ಪುರುಷವ್ಯಕ್ತಿ. ನಿಜವಾಗಿಯೂ ಬಲು ಸುಂದರ ಆಕೃತಿ. ತೆಳುವಾದ ಶರೀರ. ನೋಡಿದ ಕೂಡಲೇ ಸತ್ಕುಲಪ್ರಸೂತನೆಂದೂ, ವಿಕಾಂತವಾಸಕ್ಕೆ ಒಗ್ಗಿದವನಲ್ಲವೆಂದೂ ತಿಳಿಯಬಹುದು. ಮುಖದಲ್ಲಿ ವಿಷಾದಮಯವಾದ ಒಂದು ಕರುಣಛಾಯೆ ಮಾತ್ರ ಹರಡಿದೆ. ಯುವಕನು ಅತ್ತಿತ್ತ ತಿರುಗದೆ ನೇರವಾಗಿ ತನ್ನ ಕೊಠಡಿಗೆ ಹೊರಟುಹೋದನು. 'ಅವನೇ ತಿವಾರಿ'. ನಾನು ಬಿನ್ನ ಮನಸ್ಕಳಾಗಿ ಮನೆಯನ್ನು ಸೇರಿದೆ.

ಪತಿಯು ಆಫೀಸಿನಿಂದ ಮನೆಗೆ ಬಂದಿದ್ದರು. ಆಯಾಸಪಟ್ಟಿದ್ದರು. ನಾನು ಸರಸರನೆ ಮಗುವನ್ನು ತೊಟ್ಟಿಲಿನಲ್ಲಿ ಮಲಗಿಸಿ ಬೇರೆ ನೀರನ್ನೆಯನ್ನುಟ್ಟು ಅಡಿಗೆ ಮನೆಗೆ ಹೋಗಿ ಜಾಗ್ರತೆಯಾಗಿ ಒಂದು ಲೋಟ ಟೀಯನ್ನು ಮಾಡಿ ತಂದು ಪತಿಗೆ ಕೊಟ್ಟೆನು. ಇನ್ನೊಂದು ಕುರ್ಚಿಯನ್ನು ಎಳೆದುಕೊಂಡು ಪಕ್ಕದಲ್ಲಿ ಕುಳಿತುಕೊಂಡೆ. ಅವರು ನಿಧಾನವಾಗಿಯೇ ಕುಡಿಯುತ್ತಿದ್ದರು.

'ಈ ಊರಿನಲ್ಲಿ ನನಗೆ ಎಲ್ಲರೂ ಗೊತ್ತಿದೆ ಎಂದು ಹೇಳುವಿರಲ್ಲಾ ನಾನೊಬ್ಬರನ್ನು ಕೇಳುತ್ತೇನೆ ಹೇಳುವಿರಾ ?'

'ನಾನು ಕಾಣದಿರುವವರು ಅಂತವರಾರು ? ಸ್ವಲ್ಪ ಹೇಳು ನೋಡೋಣ'. 'ನನ್ನ ಸ್ನೇಹಿತೆ ಉಮಾಬಾಯಿ ಮನೆಯ ವಠಾರದಲ್ಲಿ ಒಂದು ಮನೆಯಲ್ಲಿದ್ದಾರೆ ಒಬ್ಬರು ವಿಚಿತ್ರ ಪ್ರಕೃತಿಯ ಪುರುಷರು. ಅವರ ವಿಚಾರ ಯಾರಿಗೂ ತಿಳಿಯದು. ಹಗಲೆಲ್ಲಾ ಮನೆಯಲ್ಲೇ ಇರುವುದಿಲ್ಲವಂತೆ'

'ಓಹೋ ನೀನು ಹೇಳುವುದು ಚಂದ್ರಶೇಖರ ತಿವಾರಿಯ ಮಾತೋ ?'

'ಹಾ ಅವರೇ'

'ನಾನು ಅವರನ್ನು ಚೆನ್ನಾಗಿ ಬಲ್ಲೆ. ಅವರ ಸ್ವಳ ಪಹಜಹಾನ್ಪುರ. ಅವರ ತಂದೆ ಒಬ್ಬ ದೊಡ್ಡ ಜಮೀನುದಾರರು. ಆದರೆ ಅವರು ಈ ಊರಿನಲ್ಲಿ ಏನು ಮಾಡಿಕೊಂಡಿರುವರೋ ಕಾಣೆ.'

'ಆ ಹಾ, ಎಲ್ಲರೆನ್ನೂ ಬಲ್ಲೆ ಎಂದು ಜಂಬ ಹೊಡಿಯುತ್ತೀರಿ. ಹತ್ತಿರದಲ್ಲಿರುವವರನ್ನು ಕಾಣಿರಿ.'

'ಇದನ್ನು ತಿಳಿಯುವುದೊಂದು ಮಹತ್ಕಾರ್ಯವೋ. ನಾಳೆಯೇ ನಿನಗೆ ನಾನು ಎಲ್ಲಾ ವಿವರಗಳನ್ನು ಹೇಳದಿದ್ದರೆ ಕೇಳು'.

ಮಾರನೇ ದಿನ ಪತಿಯು ಎಲ್ಲಿಂದರೊ ತಿವಾರಿಯನ್ನು ಜತೆಯಲ್ಲಿ ಹಿಡಿದೇ ತಂದರು. ಇಬ್ಬರೂ ಬರುವುದು ನೋಡಿ ನಾನು ಒಳಗೆ ಹೋಗಿ ಬಾಗಿಲು ಹಿಂದೆ ನಿಂತುಕೊಂಡೆ. ಬಾಗಿಲು ಮರೆಯಿಂದ ನೋಡುತ್ತಿದ್ದೆ. ಇಬ್ಬರೂ ಕುರ್ಚಿಯ

ಮೇರೆ ಕುಳಿತರು. ತಿವಾರಿಯ ಅಕೃತಿಯಲ್ಲಿ ಗಾಂಭೀರ್ಯ ವೂ ಆತ್ಮಗೌರವವೂ ತುಂಬಿತುಳುಕುತ್ತಿದ್ದವು. ತೇಲುವ ಕಣ್ಣಿನಲ್ಲಿ ಆಕರ್ಷಣೀಯವಾದ ತೇಜಸ್ಸು. ಎಷ್ಟು ನೋಡಿದರೂ ನನ್ನ ಮನದಣಿಯಲಿಲ್ಲ.

'ತಾವು ಈ ಮನೆಯಲ್ಲಿ ಎಂದಿನಿಂದಿರುವಿರಿ?'

'ಇಲ್ಲಿಗೆ ಬಂದು ಇನ್ನೂ ಒಂದು ತಿಂಗಳಾಯಿತು'.

'ಒಂದೇ ತಿಂಗಳೇ? ಆಗಲೆ ನಿಮಗೆ ಎಷ್ಟು ಮಂದಿ ಪರಿಚಯಸ್ಥರು. ನಾನು ಇಲ್ಲಗೆ ಬಂದು ಒಂದು ವರ್ಷದ ಮೇಲಾಯಿತು. ನನಗೆ ಯಾರೂ ಪರಿಚಿತರೇ ಇಲ್ಲವೆಂದು ಹೇಳಬಹುದು.'

'ತಮ್ಮ ಏಕಾಂತವಾಸದ ಮತ್ತು ಗಂಭೀರಸ್ವಭಾವದ ರಹಸ್ಯವನ್ನು ನಾವು ಯಾರೂ ಅರಿಯೆವು. ತಾವು ಈಗ ನಗನಗುತ್ತ ಮಾತನಾಡುತ್ತಿರುವುದರಿಂದ ತಮ್ಮೊಡನೆ ಬಿಚ್ಚಿ ಮಾತನಾಡಲು ನಾನು ಸಾಹಸಪಟ್ಟೆ. ತಮ್ಮ ಸ್ವಾಭಾವಿಕ ಗಂಭೀರ ಮುದ್ರೆಯನ್ನು ತಾಳಿದರೆ ತಮ್ಮೊಡನೆ ಮಾತನಾಡಲು ಯಾರಿಗೂ ಧೈರ್ಯ ಬಾರದು'.

ತಿವಾರಿಯು ಅಪೂರ್ವವಾದ ಒಂದು ನಗುವನ್ನು ಗುಟ್ಟಿಯಾಗಿ ನಕ್ಕನು. ಈ ಸಮಯದಲ್ಲಿ ಅಕಸ್ಮಾತ್ ನನ್ನ ಕೈ ಬಳೆಗಳು ಅಲುಗಿ ಸದ್ದಾದವು.

'ತಾವು ಇಲ್ಲಿ ಕುಟುಂಬ ಸಮೇತ ಇರುವಿರೋ?'

'ಹೌದು'

'ಓಹೋ ನನಗೆ ಗೊತ್ತಿರಲಿಲ್ಲ'. ಅದೇ ಗಂಭೀರ ಮುದ್ರೆ ಮೊಗದ ಮೇಲೆ ಬಂತು.

ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ.

'ತಾವು ಸ್ವಲ್ಪ ಟೀ ತೆಗೆದುಕೊಳ್ಳಬಹುದಲ್ಲವೇ?'

'ಅಭ್ಯಾಸವೂ ಇಲ್ಲ. ಬೇಡವೆನ್ನುವುದೂ ಇಲ್ಲ.'

ನಾನು ಜಾಗ್ರತೆ ಸ್ಟೋವನ್ನು ಹಚ್ಚಿ ಎರಡು ಬಟ್ಟಲು ಟೀ ಮಾಡಿದೆ. ಮನೆಯಲ್ಲಿ ಮಾಡಿದ್ದ ಮಿಠಾಯಿ ಸ್ವಲ್ಪ ಉಳಿದಿತ್ತು. ಅದನ್ನೂ ಎರಡು ತಟ್ಟೆಯಲ್ಲಿರಿಸಿದೆ. ಪತಿಯೇ ತಿಂಡಿ ತಟ್ಟೆಗಳನ್ನೂ ಟೀ ಬಟ್ಟಲುಗಳನ್ನು ತೆಗೆದುಕೊಂಡು ಹೋಗಿ ಕೊಟ್ಟರು.

'ನನಗಾಗಿ ತಾವು ಬಹಳ ಶ್ರಮ ವಹಿಸಿದಿರಿ.'

'ಶ್ರಮವೆಂತಹುದು ನಾವು ಸ್ವಯಂಸೇವಕರು. ಸೇವೆಯೇ ನನ್ನ ಕೆಲಸ.'

'ತಾವು ಕಾಂಗ್ರೆಸ್ ವಾಲೆಂಟಿಯರೋ?'

'ಇಲ್ಲ. ಆದರೂ ಸೇವೆಯೇ ನಮ್ಮ ಧರ್ಮ. ಆಫೀಸಿಗೆ ಹೋದರೆ ನಾಹೇಬರ ಸೇವೆ. ಮನೆಯಲ್ಲಿ ಪತ್ನಿಯ ಸೇವೆ.'

'ಪತ್ನಿ' ಶಬ್ದ ಕಿವಿಯ ಮೇಲೆ ಬೀಳುತ್ತಲೇ ತಿವಾರಿಯ ಮುಖವು ನಾಚಿಕೆಯಿಂದ ಕೆಂಪಾಯಿತು. ಸ್ವಲ್ಪ ಹೊತ್ತು ಸುಮ್ಮನಿದ್ದು—

'ತಿವಾರಿಜೀ. ವಿವಾಹದ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನು?'

'ವಿವಾಹದ ಅಗತ್ಯವೇನು? ಮನುಷ್ಯನು ತನ್ನ ಜೀವಮಾನದಲ್ಲಿ ವಿವಾಹ ಮಾಡಿಕೊಳ್ಳುವುದರ ಅವಶ್ಯಕತೆಯೇ ಇರುವುದಿಲ್ಲವೆಂದು ನಾನು ಧಾರಾಳವಾಗಿ ಹೇಳುತ್ತೇನೆ.'

'ಹಾಗಾದರೆ ಸ್ತ್ರೀಪುರುಷರು ವಿವಾಹ ಬಂಧನಕ್ಕೆ ಬೀಳದೆ ಪೂರ್ವದಲ್ಲಿದ್ದಂತೆ ಸ್ವೇಚ್ಛಾವಿಹಾರಿಗಳಾಗಿ ವರ್ತಿಸಬಹುದೆಂದು ಅಭಿಪ್ರಾಯಪಡುತ್ತೀರಾ?'

'ಇಲ್ಲ, ಇಲ್ಲ, ಎಂದಿಗೂ ಇಲ್ಲ. ನನ್ನ ಅಭಿಪ್ರಾಯವು ಹಾಗೆಂದಿಗೂ ಇಲ್ಲ. ಸ್ತ್ರೀಪುರುಷರು ಎಂದಿಗೂ ಯಾವ ರೂಪದಲ್ಲಿಯೂ ಪರಸ್ಪರ ಕೂಡುವಿಕೆಯ ಅವಶ್ಯಕತೆಯೇ ನನಗೆ ಕಾಣುವುದಿಲ್ಲ. ಬೇರೆ ಬೇರೆಯಾಗಿ ಇದ್ದುಕೊಂಡೇ ಜೀವಿಸಬಲ್ಲರು. ಇಬ್ಬರ ಜೀವನದ ಸ್ವಾಭಾವಿಕ ಮಾರ್ಗಗಳೇ ಕೇವಲ ಭಿನ್ನವಾಗಿವೆ. ಮತ್ತು ಭಿನ್ನವಾಗಿಯೇ ಇರಬೇಕು.'

'ಹಾಗಾದರೆ ತಾವು ಧ್ವಂಸವಾದಿಗಳೇ? ಸೃಷ್ಟಿಕಾರ್ಯವು ನಿರ್ಮೂಲವಾಗಿ ಹಾಳಾಗಲೆಂದು ಬಯಸುವಿರಾ?'

'ಇಲ್ಲಿ ನಾನು ಧ್ವಂಸವಾದಿಯಲ್ಲ. ಸ್ತ್ರೀಪುರುಷರು ಪರಸ್ಪರ ಸಂಪರ್ಕವನ್ನು ಪೂರ್ಣವಾಗಿ ತ್ಯಜಿಸುವುದಾದರೆ ಪ್ರಕೃತಿಯು ಬೇರೆ ಸೃಷ್ಟಿ ಮಾರ್ಗವನ್ನು ಹುಡುಕುತ್ತದೆ ಎಂಬುದೇ ನನ್ನ ನಂಬಿಕೆ. ವನಸ್ಪತಿ ವರ್ಗದ ನಿಯಮವನ್ನು ಅನುಸರಿಸಿ ಸೃಷ್ಟಿ ಕಾರ್ಯವು ನಡೆಯಬಹುದು. ಅಥವಾ ಮತ್ತಾವುದಾದರೂ ಸುಂದರ ಪವಿತ್ರ ಮತ್ತು ನವೀನ ಮಾರ್ಗವು ಸ್ವಾಭಾವಿಕವಾಗಿ ಮೂಡುವುದು. ಇದು ಅದ್ಭುತವಾಗಿ ಕಾಣುವುದೇನೋ ನಿಜ. ಆದರೆ ಅಸಂಭವ ಅಥವಾ

ಅಸ್ವಾಭಾವಿಕವೇನೂ ಅಲ್ಲ. ಲಕ್ಷಾಂತರ ವರ್ಷಗಳ ಮೊದಲು ಸೃಷ್ಟಿ ನಿಯಮವು ತೀರಾ ಬೇರೆಯೇ ಆಗಿತ್ತು.

ಇಂದಿನ ಸೃಷ್ಟಿ ಕ್ರಮವನ್ನು ನಾನು ಬಹಳ ವಿರೋಧಿಸುತ್ತೇನೆ. ನಾನೆಂದಿಗೂ ವಿವಾಹವಾಗುವುದಿಲ್ಲವೆಂದು ನಿಶ್ಚಯಿಸಿರುತ್ತೇನೆ. ಈ ದೃಢನಿಶ್ಚಯದ ಕಾರಣದಿಂದಲೇ ನಾನು ಮನೆ ಬಿಟ್ಟುಬರಬೇಕಾಯಿತು. ನನ್ನ ಇಷ್ಟಕ್ಕೆ ವಿರುದ್ಧವಾಗಿ ನಮ್ಮ ತಂದೆಯವರು ನನಗೆ ಲಗ್ನ ಮಾಡಲೇಬೇಕೆಂದು ಹಠಮಾಡಿ ಒಬ್ಬ ಹುಡುಗಿಯನ್ನು ಸಹ ಗೊತ್ತುಮಾಡಿ ಬಂದರು. ನನಗೆ ತಪ್ಪಿಸಿಕೊಂಡು ಓಡುವುದು ಏನಹ ಬೇರೆ ಮಾರ್ಗವೇ ಇರಲಿಲ್ಲ.'

ಅಪೂರ್ವ ಆದರ್ಶವಾದಿ ಪುರುಷನ ದೃಢ ಸಂಕಲ್ಪವನ್ನು ಕಂಡು ನಾನು ಮುಗ್ಧಳಾದೆ. ಇಂಥ ಸುಂದರ, ನಿಷ್ಕಪಟ ಸ್ವಭಾವದ ಪುರುಷರ ಹೃದಯದಲ್ಲಿ ಸ್ತ್ರೀಯರ ವಿಚಾರದಲ್ಲಿ ನಿಷ್ಪುರ ವೈರಾಗ್ಯವನ್ನೂ, ನೀಡ ಹೃದಯ ಹೀನ, ಕಪಟಿಗಳಲ್ಲಿ ಕಾಮಾಂಧತೆಯನ್ನೂ ತುಂಬಿರುವುದಕ್ಕಾಗಿ ನಾನು ಮನದಲ್ಲೆ ವಿಧಿಯನ್ನು ನಿಂದಿಸಿದೆನು. ಇದು ಸ್ತ್ರೀಯರ ದುರ್ಭಾಗ್ಯವಲ್ಲದೇ ಮತ್ತೇನು!

೨

ಮಧ್ಯಾಹ್ನ ನಾಲ್ಕು ಗಂಟೆಯ ಸಮಯ. ಪತಿಯು ಆಫೀಸಿನಿಂದ ಮನೆಗೆ ಬರುವ ಸಮಯವಾಗಿರಲಿಲ್ಲ. ಮಗುವು ಮಲಗಿತ್ತು. ಮನೆಯಲ್ಲಿ ಒಬ್ಬಳೇ ಇದ್ದೆ. ಸ್ವಲ್ಪ ಬೇಸರವಾಯಿತು. ಮಹಡಿಯ ಮೇಲಿನ ವರಾಂಡಾದಲ್ಲಿ ಸುಮ್ಮನೆ ನಿಂತು ಬೀದಿಯ ಕಡೆ ಅನ್ಯ ಮನಸ್ಕಳಾಗಿ ನೋಡುತ್ತಾ ನಿಂತಿದ್ದೆ. ನಮ್ಮ ಮನೆ ಕಡೆಗೇ ತಿವಾರಿಯು ಬರುತ್ತಿರುವುದನ್ನು ಕಂಡೆ. ನಮ್ಮ ಮನೆಗೇ ಬಂದನು. ಬಾಗಿಲು ಬಳಿ ಬರುತ್ತಿರುವಾಗಲೇ ' ಶರ್ಮಾಜೀ, ಶರ್ಮಾಜೀ,' ಎಂದು ಕೂಗುತ್ತಲೇ ಬಂದನು. ಬಾಗಿಲನ್ನು ತೆರೆಯಲೋ, ಬೇಡವೋ ಎಂಬ ಸಂಶಯ ಉಂಟಾಯಿತು. ಸ್ತ್ರೀಯ ಹೆಸರನ್ನು ಕೇಳಿದ ಮಾತ್ರಕ್ಕೆ ಬೆದರುವ ಮನುಷ್ಯನ ಎದುರಿಗೆ ಬರುವುದಕ್ಕೆ ಸಂಕೋಚವೇತಕ್ಕೆ? ನನ್ನ ಮನದಲ್ಲಿ ಮತ್ತೊಂದು ಉತ್ಸುಕತೆಯುಂಟಾಯಿತು. ಒಬ್ಬ ಸ್ತ್ರೀವಿರೋಧಿ ಪುರುಷನ ಮೇಲೆ ನನ್ನ ಸೌಂದರ್ಯವು ಯಾವರೀತಿ ಪ್ರಭಾವವನ್ನು ಬೀರುವುದೆಂಬುದನ್ನು ನೋಡಬೇಕೆನ್ನಿಸಿತು.

ಸದ್ದಿಲ್ಲದಂತೆ ಹೋಗಿ ಚೀಲವನ್ನು ತೆಗೆದೆ. ಅಲ್ಲಿಯೇ ಒಂದು ಕಡೆ ಮುಸುಕಿಲ್ಲದೆ ನಿಂತುಕೊಂಡೆ ತಿವಾರಿಯು ಬಾಗಿಲನ್ನು ಸ್ವಲ್ಪ ತಳ್ಳಿದ ಮಾತ್ರಕ್ಕೆ ತೆರೆದುಕೊಂಡಿತು. ಮುಸುಗನ್ನು ಹಾಕಿಕೊಳ್ಳುವಂತೆ ನಟಿಸುತ್ತ 'ದಯಮಾಡಿ' ಎಂದೆ. ತಿವಾರಿಯು ನನ್ನನ್ನು ನೋಡಿದೊಡನೆಯೇ ಹುಲಿಯನ್ನು ಕಂಡುದಕ್ಕಿಂತಲೂ ಹೆಚ್ಚಾಗಿ ಬೆಚ್ಚಿದನು. ಮುಖವೆಲ್ಲಾ ತೀರಾ ಬೆಳ್ಳಗಾಗಿ ಹೋಯಿತು. ದಿಗ್ಭ್ರಾಂತನಾಗಿ ನಿಂತನು. ' ಕುರ್ಚಿಯಲ್ಲಿ ಕೂಡಿರಿ. ಇನ್ನೇನು ಅವರು ಬರುವ ವೇಳೆಯಾಯಿತು ' ಎಂದೆ. ಹಾಗೂ ಹೀಗೂ ಹತ್ತಿರದಲ್ಲಿದ್ದ ಒಂದು ಕುರ್ಚಿಯೊಳಕ್ಕೆ ಕುಸಿದುಬಿದ್ದಂತೆ ಕೂತು ನನ್ನ ದೃಷ್ಟಿಯನ್ನು ತಪ್ಪಿಸುವುದಕ್ಕಾಗಿ ಗೋಡೆಯ ಮೇಲೆ ತಗಲಿ ಹಾಕಿದ್ದ ಒಂದೆರಡು ಪಠಗಳನ್ನು ನೋಡತೊಡಗಿದನು.

' ತಿವಾರೀಜಿ! ನೀವು ಇಲ್ಲಿ ಒಬ್ಬರೇ ಇರುವಿರಾ? ನಿಮ್ಮೊಡನೆ ಮತ್ತಾರೂ ಇರುವುದಿಲ್ಲವೇ?'

' ಇಲ್ಲಮ್ಮ '

' ಆ ದಿವಸ ನಾನು ನಿಮ್ಮ ಮನೆಯನ್ನು ನೋಡಿದುದರಲ್ಲಿ ನೀವು ಬಹಳ ಕಷ್ಟದೆಸೆಯಲ್ಲಿ ಇರುವಂತೆ ಭಾಸವಾಯಿತು. ನಿಮ್ಮ ಊಟೋಪಚಾರಗಳಿಗೆ ಏನು ಏರ್ಪಾಡು ಮಾಡಿಕೊಂಡಿರುವಿರಿ?'

ನನ್ನ ಮಾತಿನಲ್ಲಿ ಸ್ವಭಾವಿಕ ಸಮವೇದನೆಯಿತ್ತು. ಒಬ್ಬ ಅಪರಿಚಿತ ಸ್ತ್ರೀಯು ತನ್ನ ವಿಚಾರದಲ್ಲಿ ಸಮವೇದನೆ ಪಡುವುದನ್ನು ನೋಡಿ ತಿವಾರಿಗೆ ಭ್ರಾಂತಿ ಉಂಟಾಯಿತು. ಬಹಳ ಸಾಹಸಪಟ್ಟು ನನ್ನ ಕಡೆ ತಿರುಗಿನೋಡಿ ಅತಿ ನಮ್ರಭಾವದಿಂದ–' ಏನೂ ಏರ್ಪಾಡಿಲ್ಲ. ಆಗಾಗ್ಗೆ ಹೋಟಲಿನಲ್ಲಿ ಊಟ ಮಾಡುತ್ತೇನೆ. ಬರೀ ಹಾಲು ಕುಡಿದು ಇರುವುದೂ ಉಂಟು. ಅನೇಕ ದಿವಸ ಉಪವಾಸವನ್ನು ಮಾಡಿರುತ್ತೇನೆ '.

ನನಗೆ ಏನೋ ಒಂದು ವಿಧವಾದ ಆಂತರಿಕ ವ್ಯಥೆಯುಂಟಾಯಿತು. ತಿವಾರಿಯು ಹುಸುನಗೆಯಲ್ಲಿಯೂ ವೇದನೆಯು ಅಡಗಿತ್ತು. ' ನೀವು ನಿಮ್ಮ ಶರೀರದ ವಿಚಾರದಲ್ಲಿ ಘೋರ ಅನ್ಯಾಯಮಾಡುತ್ತಿದ್ದೀರಿ. ಈರೀತಿ ಅನಾದರಣೆ ಮಾಡುವುದರಿಂದ ನಿಮ್ಮ ಸ್ವಾಸ್ಥ್ಯವು ಬಹು ಜಾಗ್ರತೆ ಕೆಡಬಹುದು '.

' ನಾನೇನು ಮಾಡಲಿ. ನನಗೆ ಅಡಿಗೆ ಮಾಡುವುದು ಬಾರದು. ಹೋಟಲಿನ ಊಟವು ಸರಿಹೋಗುವುದಿಲ್ಲ.'

ಹೋಟಲಿನ ಊಟ ಏಕೆ ಮಾಡಬೇಕು ? ನಾನು ಮುಟ್ಟಿದ್ದನ್ನು ಸೇವಿಸಲು ಅಡ್ಡಿ ಇಲ್ಲದಿದ್ದರೆ ಎರಡು ಹೊತ್ತು ಇಲ್ಲೇ ಬಂದು ಊಟ ಮಾಡಿ ಹೋಗಬಹುದಲ್ಲವೇ ? '

' ತಾವು ನನಗಾಗಿ ಏಕೆ ತೊಂದರೆ ತೆಗೆದುಕೊಳ್ಳಬೇಕು ? '

' ಇದರಲ್ಲಿ ಕಷ್ಟವೇನಿದೆ ? ' ಸೇವಾಭಾವನೆಗಳು ಇರುವುದು ಕೇವಲ ಅಸಂಭವವೆಂದು ತಿಳಿದಿದ್ದ ತಿವಾರಿಯು ಆಶ್ಚರ್ಯದಿಂದಲೂ ಕುತೂಹಲದಿಂದಲೂ ಸ್ವಲ್ಪ ಹೊತ್ತು ಸುಮ್ಮನಿದ್ದು ' ತಾವು ಸತ್ಯವನ್ನು ನುಡಿಯುವಿರಾ ? ವಾಸ್ತವವಾಗಿಯೂ ಸೇವಾಭಾವನೆಯೇ ಸ್ತ್ರೀ ಜಾತಿಯ ಸ್ವಾಭಾವಿಕ ಗುಣವೇ ? '

' ನಿಮ್ಮ ಜೀವನದಲ್ಲಿ ಯಾವ ಸ್ತ್ರೀಯ ಪರಿಚಯವನ್ನೂ ಇದುವರೆಗೆ ಪಡೆದವರಲ್ಲವೆಂದು ತೋರುವುದು. ನಿಮ್ಮ ಸಂಭಾಷಣೆಗಳನ್ನೆಲ್ಲಾ ನಾನು ಮರೆಯಲ್ಲಿ ನಿಂತು ಕೇಳಿದ್ದೇನೆ. ಅದರಿಂದ ನಿಮಗೆ ಸ್ತ್ರೀಯರ ವಿಚಾರದಲ್ಲಿರತಕ್ಕ ವಿರುದ್ಧ ಭಾವನೆಯನ್ನು ನಾನು ಅರಿತಿರುವೆ. ನೀವು ವಿವಾಹಿತರಾಗಿದ್ದರೆ, ನಿಮ್ಮ ಭಾವನೆಗಳೆಲ್ಲಾ ಮಾರ್ಪಡುತ್ತಿದ್ದವು. ನಿಮ್ಮ ಮನೆಯು ಸುವ್ಯವಸ್ಥಿತ ರೀತಿಯಲ್ಲಿರುತ್ತಿತ್ತು. ನಿಮ್ಮ ಜೀವನವೂ ಒಂದು ಸಿಸ್ತಿನಿಂದ ಒಂದು ನಿಯಮಬದ್ಧವನ್ನು ಅನುಸರಿಸಿ ಸಾಗುತ್ತಿತ್ತು. ನೀವು ಹೀರಾ ಹಠ ಮಾಡುವಿರಿ. ವಿವಾಹವನ್ನು ವಿರೋಧಿಸುವಿರಿ. ತರ್ಕದಲ್ಲಿ ನಿಮ್ಮನ್ನು ಗೆಲ್ಲುವುದು ಅಸಾಧ್ಯ. ನೀವು ಮ್ಯಾದು ಸ್ವಭಾವದವರಾದರೂ ಸ್ತ್ರೀಯರನ್ನು ಉದಾಸೀನತೆಯಿಂದ ಕಾಣುವುದು ನಿಜವಾಗಿಯೂ ಆಶ್ಚರ್ಯಕರವಾಗಿದೆ.'

' ನಾನು ಎಂದಿಗೂ ಸ್ತ್ರೀಯರನ್ನು ದ್ವೇಷಿಸುವುದಿಲ್ಲ. ಅವರ ಜೀವನಗತಿಯೇ ಬೇರೆಯಾದುದು. ಅದರೊಡನೆ ನನಗೆ ಸಂಬಂಧವೇನೂ ಇಲ್ಲ. ಅದ್ದರಿಂದ ಅವರು ನನ್ನಿಂದ ದೂರವಾಗಿರಲಿ. ನನ್ನ ಕೆಲಸದಲ್ಲಿ ನಾನು ತೊಡಗಿರಲಿ ಎಂಬುದು ಮಾತ್ರ ನನ್ನ ಅಪೇಕ್ಷೆ '.

' ನಾನು ಇಲ್ಲಿ ನಿಮ್ಮೆದುರಿಗೆ ನಿಂತಿರುವುದರಿಂದ ನಿಮಗೆ ಬೇಸರ ತೋರುತ್ತಿರಬಹುದು. ಆದರೆ ನಿರ್ವಾಹವಿಲ್ಲ '.

' ಇಲ್ಲ ಇಲ್ಲ ' ಎಂದು ಹೇಳಿ ಸುಮ್ಮನಾದನು. ಇಷ್ಟರಲ್ಲಿ ಪತಿಯು ಬಂದರು. ಟೀಕುಡಿದು ಸ್ವಲ್ಪ ಹೊತ್ತು ಮಾತು ಕಥೆಗಳನ್ನಾಡಿದ ನಂತರ ತಿವಾರಿಯು ಮನೆಗೆ ಹೊರಟು ಹೋದನು. ತಿವಾರಿಯೊಡನೆ ನಡೆದ ನನ್ನ ಸಂಭಾಷಣೆಗಳನ್ನೆಲ್ಲಾ ಸವಿಸ್ತಾರವಾಗಿ ನನ್ನ ಪತಿಯೊಡನೆ ಹೇಳಿದೆನು. ತಿವಾರಿಯನ್ನು ಮನೆಗೆ ಊಟಕ್ಕೆ ಕರೆತರುವಂತೆ ಹೇಳಿದೆನು. ಎಷ್ಟು ಕರೆದರೂ ತಿವಾರಿಯು ಬರಲು ಒಪ್ಪಲಿಲ್ಲ. ಕಡೆಗೆ ಒಂದು ದಿನ ಪತಿಯು ಬಹಳ ನಿರ್ಬಂಧದಿಂದ ಅವನನ್ನು ಹಿಡಿದು ತಂದರು. ಆ ದಿವಸ ನನ್ನ ಪಾಕಶಾಸ್ತ್ರದ ಪಾಂಡಿತ್ಯವನ್ನೆಲ್ಲಾ ಖರ್ಚುಮಾಡಿ ಅಡಿಗೆ ಮಾಡಿದೆ. ತಿವಾರಿಯೂ ಬಹಳ ಹೊಗಳಿದನು. ಅಂದಿನಿಂದ ಆಗಾಗ್ಗೆ ಮನೆಗೆ ಊಟಕ್ಕೆ ಬರುವ ವಾಡಿಕೆಯಾಯಿತು. ಆದರೆ ಪತಿಯೊಡನೆ ಕುಳಿತು ಊಟಮಾಡಿ ಹೊರಟುಹೋಗುತ್ತಿದ್ದುದರಿಂದ ನಾನು ಮಾತನಾಡಲು ಅವಕಾಶವೇ ದೊರೆಯುತ್ತಿರಲಿಲ್ಲ.

೩

ಒಂದು ದಿನ ತಿವಾರಿಯು ಊಟಕ್ಕೆ ಬಂದನು. ಆದರೆ ಊಟವು ಸೇರಲಿಲ್ಲ. ಮೊದಲೆ ದೇಹಾಲಸ್ಯವಾಗಿತ್ತು. ಅನುಮಾನದಿಂದಲೇ ಬಂದಿದ್ದನು. ಜ್ವರವು ಏರುವ ಸೂಚನೆಯು ತೋರಿತು. ಪತಿಯು ಒಂದು ಹಾಸಿಗೆಯನ್ನು ಹಾಸಿ ಕೊಠಡಿಯಲ್ಲಿ ಮಲಗಿಸಿದರು. ಜ್ವರ, ತಲೆನೋವಿನ ದೆಸೆಯಿಂದ ತಿವಾರಿಯು ನಿಸ್ಸಂಕೋಚವಾಗಿ ಮಲಗಬೇಕಾಯಿತು. ಆಫೀಸಿಗೆ ಹೊತ್ತಾದುದರಿಂದ ಪತಿಯು ಹೊರಟುಹೋದರು. ಜ್ವರವು ಏರುತ್ತಲೇ ಇತ್ತು. ೧೦೩ ಡಿಗ್ರಿ ಜ್ವರದ ತಾಪದಿಂದ ದುಃಖ ಪೂರಿತವಾದ ಕಣ್ಣುಗಳಲ್ಲಿ ನೀರು ತುಂಬಿ ಬಂದಿತು. ಇನ್ಫ್ಲುಯೆಂಜಾ ಜ್ವರ.

ಗಂಜಿಯನ್ನು ಮಾಡಿ ಸ್ವಲ್ಪ ಕುಡಿಸಿದೆ. ಪಕ್ಕದಲ್ಲೇ ಕುಳಿತು ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದೆ. ತಲೆ ನೋವಿನಿಂದ ಬಹಳ ಸಂಕಟಪಡುತ್ತಿದ್ದನು. ನನ್ನಲ್ಲಿ ಒಂದು ಅಮೃತಾಂಜನ ಡಬ್ಬಿ ಇದ್ದಿತು. ತಕ್ಷಣ ಅದನ್ನು ತಂದು ತಿವಾರಿಯ ಹಣೆಯ ಮೇಲೆಲ್ಲಾ ನನ್ನ ಕೈಯಿಂದಲೇ ಚೆನ್ನಾಗಿ ಉಜ್ಜಿದೆನು. ಮೂರು ನಾಲ್ಕು ವೇಳೆ ಸ್ವಲ್ಪ ಸ್ವಲ್ಪ ಗಂಜಿ ಮಾಡಿ ಕೊಟ್ಟೆ. ಆಗಾಗ್ಗೆ ಥರ್ಮಾಮಿಟರ್ ಇಟ್ಟು ಶಾಖವನ್ನು ನೋಡುತ್ತಿದ್ದೆ. ಎರಡು ದಿವಸಗಳು ಒಂದೇ ಸಮನಾಗಿ ಜ್ವರವು ಕಾಯುತ್ತಿತ್ತು. ಪತಿಯು ಒಬ್ಬ ವೈದ್ಯರನ್ನು ಕರೆತಂದು ತೋರಿಸಿದರು. ಆದರೆ ತಿವಾರಿಯು ಔಷಧ ಕುಡಿಯಲು ಒಪ್ಪಲಿಲ್ಲ. ಐದನೇ ದಿವಸ ಜ್ವರವು ತಟ್ಟನೆ ತಾನಾಗಿ ನಿಂತು ಹೋಯಿತು.

ಬಹಳ ನಿತ್ರಾಣ. ಮಾತನಾಡಲು ಸಹ ಶಕ್ತಿ ಇಲ್ಲ. ಹೆಣ್ಣು, ಹಾಲು ಮುಂತಾದ ಪುಷ್ಟಿಕರವಾದ ಆಹಾರವನ್ನು ಕೊಡುತ್ತ ಬಂದೆ. ಏನಾದರೂ ತೆಗೆದುಕೊಳ್ಳಲು ನಿರಾಕರಿಸಿದರೆ, 'ನೀವು ತೆಗೆದುಕೊಳ್ಳದಿದ್ದರೆ ನಾನು ಊಟಮಾಡುವುದಿಲ್ಲ'ವೆಂದು ಹಠ ಮಾಡುತ್ತಿದ್ದೆ. ಮಕ್ಕಳಂತೆ ನಾನು ಹೇಳಿದ ಹಾಗೆ ಕೇಳುತ್ತಿದ್ದನು. ಬಿಡುವಾದ ಕಾಲಗಳಲ್ಲಿ ಹತ್ತಿರ ಕುಳಿತು ಅಲ್ಲಿ ಇಲ್ಲಿಯ ಮಾತುಗಳನ್ನಾಡುತ್ತ ಅವನ ಬೇಸರವನ್ನು ನೀಗಿಸುತ್ತಿದ್ದೆನು. ನನ್ನ ಮಾತುಗಳನ್ನೂ ಬಹಳ ಆನಂದದಿಂದ ಆಲಿಸುತ್ತ ಬಹಳ ನಮ್ರತೆಯಿಂದ ಉತ್ತರ ಕೊಡುತ್ತಿದ್ದನು. ನನ್ನ ಮಾತಿಗೆ ಪ್ರತಿ ಹೇಳುವುದನ್ನೇ ಬಿಟ್ಟುಬಿಟ್ಟನು. ಒಂದು ವಾರದಲ್ಲಿ ಅನೇಕ ವರ್ಷಗಳ ಪರಿಚಯವು ಉಂಟಾಯಿತು. ನಾವು ವಿಶೇಷವಾಗಿ ಸಾಮಾಜಿಕ ಅಥವಾ ಧಾರ್ಮಿಕ ವಿಚಾರಗಳನ್ನು ಚರ್ಚಿಸುತ್ತಿದ್ದೆವು.

ಒಂದು ದಿನ ಸಂಧ್ಯಾಕಾಲ. ಪತಿಯು ಆಫೀಸಿನಿಂದ ಮನೆಗೆ ಬರುವ ಸಮಯ. ನಾನು ತರೆ ಬಾಚಿಕೊಂಡು ಅಲಂಕೃತಳಾಗಿ ನನ್ನ ಮುದ್ದು ಮಗನಿಗೂ ಬಟ್ಟೆಗಳನ್ನು ತೊಡಿಸಿ ಅದನ್ನು ಕಂಕುಳಲ್ಲಿ ಎತ್ತಿಕೊಂಡು ವರಾಂಡದಲ್ಲಿ ತಿರುಗಾಡಿಸುತ್ತಿದ್ದೆ. ತಿವಾರಿಯು ಅಂಗಳದಲ್ಲಿ ದೂರದಲ್ಲಿ ನಿಂತಿದ್ದನು. ನಾನು ಮಗುವನ್ನು ಕುರಿತು—

ಅಲ್ಲಿ ನೋಡಲ್ಲಿ, ತಿವಾರೀಜೀ. ಅಲ್ಲಿ ನೋಡು, ಬಾ ಬಾ ಎಂದು ಕರಿ. ತಿವಾರೀಜೀ ಬಾ ಎನ್ನು' ಎಂದು ಹೇಳುತ್ತಿದ್ದೆ. ತಿವಾರಿಯು ಹಠಾತ್ತಾಗಿ ನನ್ನ ಬಳಿಗೆ ಓಡಿಬಂದನು. ಬಂದವನು ಎರಡು ಕೈಗಳನ್ನೂ ಚಾಚಿ ನನ್ನ ಮೊಳಕಾಲುಗಳನ್ನು ಬಿಗಿಯಾಗಿ ಅಪ್ಪಿಕೊಂಡನು. ನಾನು ವಿನ್ಮಯ ಚಕಿತಳಾಗಿ ನನ್ನ ಬಲಗೈಯನ್ನೂ ಅವನ ತಲೆಯ ಮೇಲಿಟ್ಟು ಸುಮ್ಮನೆ ನಿಂತೆನು. ತಿವಾರಿಯು ನನ್ನ ಕಾಲುಗಳನ್ನು ಬಿಟ್ಟು ಎದ್ದು ನಿಂತು ಕೈ ಜೋಡಿಸಿ ಬಹಳ ದೈನ್ಯಭಾವದಿಂದ—'ಮಾತೆ! ನಾನು ಕೇವಲ ಆಂತರಿಕ ಶ್ರದ್ಧೆಯಿಂದ ತಮಗೆ ನಮಸ್ಕರಿಸುವೆನು. ನಾನು ಅರಿಯದೆಯೇ ಏನಾದರೂ ತಪ್ಪು ಮಾಡಿದ್ದರೆ, ಅಸಭ್ಯ ರೀತಿಯಲ್ಲಿ ವರ್ತಿಸಿದ್ದರೆ ಅಥವಾ ನನ್ನಲ್ಲಿ ಇನ್ನೇನಾದರೂ ದೋಷಗಳು ಕಂಡುಬಂದಿದ್ದರೆ ದಯವಿಟ್ಟು ಕ್ಷಮಿಸಿ' ಎಂದನು. ನಾನು ಮೂಕಳಂತೆ ಅವನ ಮುಖವನ್ನು ನೋಡುತ್ತ ನಿಂತೆ ನಂತರ—' ನಾನು ನಿಮ್ಮಲ್ಲಿ ಏನೊಂದು ದೋಷವನ್ನೂ ಕಾಣೆ. ನಿಜವಾಗಿಯೂ ನೀವೊಬ್ಬರು ಕೇವಲ ವಿಚಿತ್ರ ಮನುಷ್ಯರು.' ನನ್ನ ಮಾತಿಗೆ ಯಾವ ಉತ್ತರವನ್ನೂ ಕೊಡದೆ ಮತ್ತೊಂದು ಬಾರಿ ದೀರ್ಘವಾಗಿ ನಮಸ್ಕರಿಸಿ, ಹೊರಟೇ ಹೋದರು. ಒಂದು ವಾರವಾದರೂ ಪುನಃ ಅವರ ಸುಳಿವೇ ಇಲ್ಲ. ಮನೆಯ ಬಾಡಿಗೆಯನ್ನೆಲ್ಲ ಪೂರ್ತಿ ಕೊಟ್ಟುಬಿಟ್ಟು ಎಲ್ಲಿಯೋ ಹೊರಟುಹೋದರೆಂದು ಉಪೆಯು ಹೇಳಿದಳು. ನನಗೆ ಏನೋ ಒಂದು ವಿಧವಾದ ಸಂಕಟ ಉಂಟಾಯಿತು.

ಎಂಟು ದಿನಗಳ ಮೇಲೆ ಒಂದು ಪತ್ರವು ಬಂದಿತು. ವಿಳಾಸವು ನನ್ನ ಪತಿಯ ಹೆಸರಿಗಿದೆ. ಪತಿಯ ಕಾಗದಗಳನ್ನೂ ನಾನೇ ಒಡೆದು ಓದುವ ಅಪೂರ್ವ ದೆಸೆ. ಪತ್ರವನ್ನು ಬಿಚ್ಚಿ ನೋಡಿದೆ. ತಿವಾರಿಯದು.

'ಪ್ರಿಯ ಶರ್ಮಾಜೀ,

ತಮ್ಮಗಳ ಅಪ್ಪಣೆ ಪಡೆಯದೇ ಹೊರಟು ಬಂದೆ. ಕ್ಷಮಿಸಿ. ನನ್ನ ಸರ್ವಾಪರಾಧಗಳನ್ನೂ ಕ್ಷಮಿಸಿ. ನನ್ನ ಅನಂ ಧನ್ಯವಾದಗಳನ್ನೂ ಸ್ವೀಕರಿಸಿ. ತಾಯಿಯ ಗರ್ತಿಲ್ಲದ ತಬ್ಬಲಿಗೆ ಕಮಲಾ ಸೋದರಿಯು ತಾಯ್ತನದ ಅಮೃತವನ್ನು ಕುಡಿಸಿದರು. ಅವರ ಸ್ನೇಹ ಪ್ರವಾಹದಲ್ಲಿ ನನ್ನ ದೃಢ ಪತಿಜ್ಞೆಗಳೆಲ್ಲಾ ತೇಲಿ ಹೋದವು. ನಾನು ವಿವಾಹ ಮಾಡಿಕೊಳ್ಳುವೆನು. ಆದರೆ ಈ ಜಗತ್ತಿನಲ್ಲಿ ಅವರಿಗೆ ಸದೃಶಳಾದ ಹುಡುಗಿಯು ದೊರೆತಾಗ. ಹಸುಳೆಗೊಂದು ಮುತ್ತು. ಇತಿ.

ತಮ್ಮವ

ಚಂದ್ರಶೇಖರ ತಿವಾರಿ.

ಪತ್ರವನ್ನು ನಾಲ್ಕಾರು ಬಾರಿ ಓದಿದೆ. ಕಣ್ಣಿಗೆ ಒತ್ತಿಕೊಂಡೆ. ಅನೇಕ ವರ್ಷಗಳು ಕಳೆದಿವೆ. ತಿವಾರಿಯನ್ನು ಪುನಃ ಎಲ್ಲಿಯೂ ನೋಡಿಲ್ಲ. ಆದರೆ ಇಂದೂ ಅವನ ನೆನಪು ಬಂದು ನನ ಕಣ್ಣಿನಲ್ಲಿ ಎರಡು ಹನಿಗಳನ್ನು ತುಳುಕಿ ಬೀಳಿಸುತ್ತಿದೆ.

ಕೆ. ವಿಶ್ವೇಶ್ವರಗೌಡ

— ——

ತುಂತುರು

ಗಂಡ—ನೋಡೇ, ರಾಮೂ ಪುನಃ ಜೇಬಿನಿಂದ ದುಡ್ಡು ಕದ್ದಿದ್ದಾನೆ.

ಹೆಂಡತಿ—ಅವನೇ ಕದ್ದ ಎಂತ ಹೇಗೆ ಹೇಳುತ್ತೀರಾ ಅಂದ್ರೆ, ನಾನು ಕದ್ದಿರ ಬಹುದು.

ಗಂಡ—ಇರ್ಲಾ ನೀನಲ್ಲ. ಇಟ್ಟಿದ್ದೆರ್ಲಾ ಹೋಗವೆ ಸ್ವಲ್ಪ ಉಳಿದಿರುವುದರಿಂದ ನೀನು ಖಂಡಿತವಾಗಿಯೂ ಅಲ್ಲ.

ಟೀಪೂ

ಒಂದು ಚಿಕ್ಕ ಕತೆ

ಬರೆದವರು:—ಶ್ರೀ॥ ಕೃ. ಹ. ಕುಲಕರ್ಣಿ.

ನನಗೆ ನಾಯಿಯನ್ನು ಕಂಡರೆ ಮೊದಲನಿಂದಲೂ ಪ್ರೀತಿ.

ಅಜ್ಜಿಗೆ ಅದರ ಮೇಲೆ ಸಿಟ್ಟು, ಮೈಲಿಗೆಯ ಪ್ರಾಣಿಯೆಂದು.

ಈಗೆರಡು ವರ್ಷಗಳ ಹಿಂದಿನ ಮಾತು. ಒಂದು ಕುನ್ನೀ ತಂದೆ. ತಾಯಿಯಿಂದ ಹೊರಬಿದ್ದು ಇನ್ನೂ ಹದಿನೈದು ದಿನಗಳಾಗಿದ್ದಿಲ್ಲ. ಆದೇ ಕಣ್ಣು ತೆರೆದಿತ್ತು. ಮೈಯೆಲ್ಲಾ ಕರ್ರಗೆ ನೀರಲ ಹಣ್ಣಿನಂತೆ. ನಡುವೆ ಅಲ್ಲಲ್ಲಿ ಬಿಳಿಯ ಚಿಕ್ಕೆಗಳು. ಕಾಲು—ಬಾಲ ಬೆಳ್ಳಗೆ. ಬಹಳ ಮುದ್ದು.

ತಂದ ಕೂಡಲೆ ಅದಕ್ಕೆ ಟೀಪು ಎಂದು ಹೆಸರಿಟ್ಟೆ.

ಮೊದಲು ನಾಲ್ಕುದಿನ ಟೀಪು ಬಹಳ ಪಡಪಡಿಸಿತು. ಮೊದಲನ ದಿನವಂತೂ ಬಹಳ ಕುಯ್ ಗುಟ್ಟಿತು. ತಾಯಿಯನ್ನಗಲಿದೆ ಮರಿ; ಎಷ್ಟು ಕಳವಳಪಡುತ್ತಲಿರುವುದೋ ಎನ್ನಿಸುವುದು. ಎತ್ತಿಕೊಂಡಾಗ ತಾಯಿಯ ಮೊಲೆಯೆಂದು ಬೆರಳು ಚೀಪುತ್ತಿತ್ತು. ಹಾಲು ಬರದಾಗಲು ಮತ್ತೆ ಕುಯ್‌ಗುಡುತ್ತಿತ್ತು.

ಅಂದೇ ರಾತ್ರಿ ಅದರ ತಾಯಿ ನಮ್ಮ ಓಣಿಯೆಲ್ಲಾ ಕೂಗಿತು. ಕೂಗು ಕೇಳಿ ಕಟ್ಟಿಹಾಕಿದ ಮರಿ ಅತ್ತಿತ್ತ ಹೋಗಲು ಹಾತೊರೆಯಿತು. ಮರಿಗೆ ಕೂಗಿನ ಅರ್ಥ ತಿಳಿದಿರಬೇಕು. ನಾನಿಲ್ಲಿದ್ದೇನೆ ಎಂದದು ಕುಯ್ ಗುಟ್ಟುತ್ತ ತನ್ನ ಮಾತಿನಲ್ಲಿ ಹೇಳಿರಬೇಕು.

ಹಾಲು ಕುಡಿಸಲು ಹೋದೆ. ಏನೋ ಸ್ವಲ್ಪ ಕುಡಿದಂತೆ ಮಾಡಬೇಕು. ತನ್ನ ತಾಯಿಯ ಹಾಲಲ್ಲ; ಹೊಸ ಪದಾರ್ಥವೆಂದು ಗೊತ್ತಾಗಲು ಬಿಟ್ಟುಬಿಡುತ್ತಿತ್ತು.

ಮರುದಿನ ಮುಂಜಾನೆ ಮತ್ತೆ ಅದೇ ಕೂಗು. ರಾತ್ರಿ ಕೂಗಿದ ಕೂಗು. ಟೀಪುವಿನ ತಾಯಿ ಮೋರೆ ಮೇಲೆ ಮಾಡಿ ಕೂಗುತ್ತಿತ್ತು. ಅರೆ ಮುಚ್ಚಿದ ರೆಪ್ಪೆ; ಹಸಿಯಾದ ಕಣ್ಣು ಕುಣಿಕೆ ಮೋರೆ ಸಣ್ಣದು ಮಾಡಿತ್ತು. ನಾನು ಕರೆದೆ. ಎರಡುಸಲ ಕರೆದೆ. ಅದು ಬರಲಿಲ್ಲ. ಬರಲಕ್ಕೆ ಮನಸ್ಸೂ ಇರಲಿಕ್ಕಿಲ್ಲ.

ಒಳಗೆ ಹೋಗಿ ರೊಟ್ಟಿ ತಂದೆ. ಅಜ್ಜಿ ಧಾಬಳಿ ಹಚ್ಚಿಕೊಂಡು ನೀರಿಗೆ ಹೋಗಿದ್ದರು. ರೊಟ್ಟಿ ಕೈಯಲ್ಲಿ ಹಿಡಿದು ಕರೆದೆ. ಒಂದೇ ಒಂದುಸಲ ಬಾಲ ಅರ್ಲಾಡಿಸಿತು; ಕೃತಜ್ಞತೆಯಿಂದ ನನ್ನನ್ನು ನೋಡಿತು. ಆದರೆ ಮುಂದಕ್ಕೆ ಬರಲಿಲ್ಲ; ಕೂಗುವುದು ಬಿಡಲಿಲ್ಲ.

ನನ್ನ ಮನ ಕರಗಿತು. ಮರಿ ನಿನ್ನಿನಿಂದಲೂ ಉಪವಾಸ. ಸ್ವಲ್ಪಾದರೂ ಎಲೆಹಾಲು ಕುಡಿಯಲಿ ಎಂದು ಎತ್ತಿಕೊಂಡು ಬಂದೆ.

ತಾಯಿ ಕೂಗುತ್ತಿತ್ತು; ಮರಿ ಕುಯ್‌ಗುಡುತ್ತಿತ್ತು. ಟೀಪುವನ್ನು ಅದರ ತಾಯಿಗೆ ತೋರಿಸಿದೆ. ಅದು ಒಮ್ಮೆಲೆ ಜಿಗಿದುಬಂತು. ಬಾಲ ಅರ್ಲಾಡಿಸುತ್ತ ಮರಿಯನ್ನು ಮೂಸಿ ನೋಡಿತು. ಕಣ್ಣು ತುಂಬಾ ತನ್ನ ಮಗುವನ್ನು ನೋಡಿತು. ಮರಿ ಅಪಾರ ಸಂತೋಷದಿಂದ ತಾಯಿಯನ್ನು ಮುದ್ದಾಡಿ ಹೊಟ್ಟೆಗೆ ತಿನ್ನಹತ್ತಿತು. ತಾಯಿ ಒಮ್ಮೆ ಮರಿಯನ್ನು ಮತ್ತೊಮ್ಮೆ ನನ್ನ ಕೈಯನ್ನು ನೆಕ್ಕಹತ್ತಿತು. ಅದಕ್ಕಷ್ಟು ಆನಂದ!

ನಾಲ್ಕಾರುದಿನ ತಾಯಿ ಹಾಗೆಯೇ ಬಂದು ಕುನ್ನಿಗೆ ಹೊಟ್ಟೆ ಕೊಡುತ್ತಿತ್ತು. ತಿನ್ನುವುದಾದಮೇಲೆ ಮರಿಯನ್ನು ಕರೆದೊಯ್ಯುತ್ತಿದ್ದೆ. ದಿನದಿನಕ್ಕೆ ಮರಿಗೆ ನನ್ನ ಸಲಿಗೆಯಾಗಹತ್ತಿತು; ನನ್ನ ಬೆನ್ನುಹತ್ತಿ ಬರಹತ್ತಿತು.

ಒಂದುದಿನ ಅಜ್ಜಿ ಮಡಿ ಹಚ್ಚಿಕೊಂಡು ನೀರಿಗೆ ಹೋಗಿದ್ದರು. ಅಡಗೀ ಮನೆಯಲ್ಲಿಯ ನನ್ನ ದನಿ ಕೇಳಿ ನಾನಿದ್ದಲ್ಲೇ ಬಂತು. ಬದಿಯಲ್ಲಿದ್ದ ಉಪ್ಪಿನಕಾಯಿ ಭರಣಿ—ಮಡಿ ನೀರು ಮುಟ್ಟಿತು. ಅಜ್ಜಿ ನೀರುತಕ್ಕೊಂಡು ಬಂದರು. ಆ ಧ್ವಷ್ಟಾಕಾರ ನೋಡಿದರು.

ಅಜ್ಜಿಗೆ ಭಯಂಕರವಾದ ಶಿಟ್ಟು ಬಂತು—ಸ್ಪಿರಿಟಿನೆಲ್ಲ ಎದ್ದಿದ ಅರಿವೆಗೆ ಕೊಳ್ಳಿ ಹತ್ತಿದಂತೆ—ಭಗ್—ಎಂದು. ಮೈಲಿಗೆಯಾಗಿ ಕೈಯಲ್ಲಿ ಸಿಕ್ಕ ಕಲಪರಚಿಯಿಂದ ನಾಯಿಗೆ ಇಕ್ಕಿದರು. ಕಲಪರಚಿ ಒಡೆಯಿತು. ನಾಯಿ ಓಡಿತು.

* * * *

ಎರಡು ತಿಂಗಳು ಕಳೆದವು. ಅಜ್ಜಿಯ ಮಾತು ಮೀರಿ ಟೀಪುವನ್ನು ತಂದಿಡಲಕ್ಕೆ ಧೈರ್ಯಸಾಲದು.

ಟೀಪು ಹೊಟ್ಟೆ ಹಸಿದಾಗ ಹೊರಗೆ ಅಡ್ಡಾಡಿ ನಮ್ಮ ಕಟ್ಟೆಗೆ ಬರುತ್ತಿತ್ತು. ನನ್ನನ್ನು ಕಂಡು ಆನಂದದಿಂದ ಬಾಲ ಅರ್ಲಾಡಿಸಿ, ಆಟವಾಡುತ್ತಿತ್ತು. ಅಜ್ಜಿಯನ್ನು ಕಂಡು ಬಾಲ ಮುದುಡಿಮಾಡಿ ಓಡುತ್ತಿತ್ತು.

* * * *

ಇಂದು ಟೀಪು ಹೊರಗೆ ಹೋಗಿದ್ದಿಲ್ಲ. ಬೇಸರ ಬಂದಿರ ಬಹುದು. ಇಲ್ಲವೆ ಅಜ್ಜಿ ಇಲ್ಲದ್ದನ್ನು ತಿಳಿದು ನನ್ನೊಡನೆ ಮನದಣಿ ಆಟವಾಡಬೇಕೆಂದು ಅನಿಸಿರಬಹುದು. ಅಜ್ಜಿ ಇಲ್ಲ ದಾಗ ನನ್ನದೇ ಕಾರುಭಾರ. ತುಪ್ಪ ಸವರಿ ರೊಟ್ಟಿ ತಂದು ಹಾಕಿದೆ. ರೊಟ್ಟಿಯ ಮೇಲೆ ಮುಂಗಾಲೂರಿ ಜಗಿಜಗಿದು ತಿನ್ನುತ್ತಿತ್ತು, ನಡನಡುವೆ ಹರುಷದಿಂದ ನನ್ನನ್ನು ನೋಡು ತ್ತಿತ್ತು.

ಒಳಗೆ ಸದ್ದಾಯಿತು.

ತಿರುಗಿನೋಡುವದರಲ್ಲಿ ಒಂದು ಕಲ್ಲು ಬಂದು ಟೀಪು ವಿನ ತಲೆಗೆ ಬಡಿಯಿತು. ಮಹತ್ಕಾರ್ಯ ಮಾಡಿದ ಯೋಗಿ ನಿಯಂತೆ ಅಜ್ಜಿ ಗಂಭೀರವಾಗಿ ಒಳಗೆ ನಡೆದರು. ಅವರ ಕಾರ್ಯಕ್ಕೆ ಬಲಿಕೊಡುವದಕ್ಕೋ ಎನ್ನುವಂತೆ ಟೀಪು ತಲೆ ಯಿಂದ ರಕ್ತ ಸುರಿಸುತ್ತಿತ್ತು. ನನ್ನ ಕಣ್ಣು ಕತ್ತಲುಗುಡಿ ಸಿತು. ರೊಟ್ಟಿ ಅಲ್ಲೇ ಉಳಿಯಿತು. ಟೀಪು ಈ ಸಲ ಓಡ ಲಿಲ್ಲ. ಮೆಲ್ಲಗೆ ಒಂದೊಂದೇ ಹೆಜ್ಜೆ ಇಡುತ್ತ ಹೊರಟಿತು. ಅದಕ್ಕೆ ಮೂರ್ಛೆಬಂದಿರಬೇಕು. ಬಾಗಿಲಲ್ಲಿ ತರೆ ತಿರುಗಿ ಬಿತ್ತು. ಮತ್ತೆ ಚೇತರಿಸಿಕೊಂಡು ಹೊರಟಿತು.

ಅಜ್ಜಿ ಹಿತ್ತಲಲ್ಲಿ ದೇವರನಲುವಾಗಿ ಹೂ ಕೊಯ್ಯುತ್ತಿ ದ್ದರು.

* * * *

ಟೀಪು ಈಗ ನಮ್ಮ ಮನೆಗೆ ಬರುವದು ಬಹಳ ಅಪ ರೂಪ. ಹಿತ್ತಲು ಮುಂದೆ ಸುತ್ತಾಡಿ ಅಜ್ಜಿ ಇಲ್ಲದ ಸುಳುವು ತಿಳಿದು ಯಾವಾಗಾದರೊಮ್ಮೆ ಬರುವದು. ನನ್ನೆಡೆಗೆ ನೋಡಿ ತುಸುನಿಂತು ಮತ್ತೆ ಹೊರಟು ಹೋಗುವುದು. ಇತ್ತಲಾಗಿ ನಮ್ಮ ಮನೆಗೇ ಬರುತ್ತಿದ್ದಿಲ್ಲ. ಪರದೇಶಿಯಂತೆ ಅಲ್ಲಲ್ಲಿ ತಿರುಗಾಡಿ ಸಿಕ್ಕಷ್ಟು ತಿಂದು ಉಳಿದ ಹೊಟ್ಟೆಗೆ ಹರಿಯನೀರು ಕುಡಿದು ಬೈರಾಗಿಯಂತೆ ಕಾಲಕಳೆಯುವದು. ಮೈ ಸೊರಗಿ ಎಲುಬುಗಳು ಎದ್ದು ಕಾಣುತ್ತವೆ. ಧೂಳು ಮೆತ್ತಿದೆ. ತರೆಯ ಮೇಲೊಂದು ಗಾಯ ಅದರ ಮೇಲೆ ನೊಣಗಳ ಕಾಟ. ಮನ ಸ್ಸು ಬಂದಾಗ ನೊಣ ಹೊಡಕೊಳ್ಳುವದು. ನನ್ನನ್ನು ನೋಡಿ ದಾಗೆಲ್ಲ ಯೋಚನಾಪರವಾದ ಭಾವಪೂರ್ಣವಾದ ನೋಟ ಬೀರುವದು.

* * * *

ತರೆ ಸಿಡಿಯುವಂಥ ಬೇಸಗೆಯ ಬಿಸಿಲು, ಹೊರಗೆ ನೋಡಿದರೆ ಸಿಡಿಲು ಬೆಂಕಿಯನ್ನು ನೋಡಿದಂತಾಗಿ ಕಣ್ಣು ಕತ್ತಲುಗುಡಿಸುತ್ತಿತ್ತು. ತಾಪವನ್ನು ತಾಳಲಾರದೆ ಗಾಳಿ ಹಾಕಿಕೊಳ್ಳುತ್ತ ಪಡಸಾಲೆಯಲ್ಲಿ ಅರೆದಾಡುತ್ತಿದ್ದೆ.

ಅಜ್ಜಿ ಅದೇ ಮಲಗಿ ಎದ್ದು ದೇವರಿಗಾಗಿ ಬತ್ತೀಮಾ ಡುತ್ತಿದ್ದರು.

ಹೊರಗೆ ಏನೋ ಸದ್ದಾಯಿತು.

ಟೀಪೂ !

ಬಿಕ್ಕೇಬೇಡುವವರು ಕೂಡ ಬಿಸಿಲಿಗೆ ಹೆದರಿ ಹೊರಬೀಳ ದಿರುವಾಗ ಇದಾವ ಸದ್ದೆಂದು ನೋಡಲು ಟೀಪೂ ! ಟೀಪು ವಿನ ಸ್ಥಿತಿ ಹೃದಯದ್ರಾವಕವಾಗಿತ್ತು. ತರೆಯಲ್ಲಿಯ ಗಾಯ ಬಹಳ ಆಗಲವಾಗಿತ್ತು. ರಕ್ತ ಹೊರಚಲ್ಲುತ್ತಿತ್ತು. ರಕ್ತ ಪಾನಕ್ಕಾಗಿ ನೊಣಗಳು ಧಾವಿಸಿ ಬರುತ್ತಿದ್ದವು.

ನಾನು ಹೊರಗೆ ಬಂದಾಗ ಟೀಪು ಪೂರಾ ಎಚ್ಚೆರಾವ ಸ್ಥೆಯಲ್ಲಿದ್ದಿಲ್ಲ.

ನಿಂತು ನೋಡುವವರೊಬ್ಬರು ' ಹುಚ್ಚು ನಾಯಿ ಸ್ವಾಮಿ, ಯಾರೋ ಹೊಡೆದಿದ್ದಾರೆ.' ಎಂದರು.

ಅದು ಹುಚ್ಚುನಾಯಲ್ಲವೆಂದು ನನ್ನ ಅಂತರ್ಯಕ್ಕೆ ಪೂರಾ ಗೊತ್ತು. ಅದೊಂದು ಅನಾಥ ಜೀವ–ನಿರುಪದ್ರವಿ ಯಾದ ಪ್ರಾಣಿ.

ಟೀಪುವಿನ ಅವಧಿ ತೀರುತ್ತ ಬಂತು. ನೆಟ್ಟ ದಿಟ್ಟಿಯಿಂದ ನನ್ನನ್ನೇ ನೋಡುತ್ತಿತ್ತು. ಅದರ ನೋಟದಿಂದ ನನ್ನ ಹೃದ ಯದಲ್ಲಿ ಏನೋ ಕೋಲಾಹಲವೆದ್ದಂತಾಯಿತು. ಏನೋ ದೆಳಕು ಮಾಡಿದಂತಾಯಿತು. ನಾನು ಕಣ್ಣು ಮುಚ್ಚಿದೆ.

ಕಣ್ಣು ತೆರೆದಾಗ ಟೀಪು ಮನೆಯ ಮುಂದೆ ನಿಶ್ಚಲವಾಗಿ –ಗಾಢವಾಗಿ ಮಲಗಿತ್ತು.

ಅಜ್ಜಿ ಭಕ್ತಿಪೂರ್ವಕವಾಗಿ–ದೇವರಿಗಾಗಿ–ದೀಪಕ್ಕಾಗಿ ಬತ್ತೀ ಹೊಸೆಯುತ್ತಿದ್ದರು.

WORLD NEWS PAPER
N. B

ವಿಶ್ವ ಪತ್ರಿಕೆ ಬಲಿಅರ್ಧ ಆಣೆ

ಪ್ರತಿ ಗುರುವಾರ ಅಣ್ಣಿಗಾರಿಯಾ ಜಾಳಾಜಾಯಿಯ ಮೊಹಲ್ಲೇರಿ. ಡಿಕ್ಕಿ

ವಿಷಕ್ಕೆ ಗಾಳಿ ಧಾರವಾಡ ಬುದ್ಧಮಂದಿರ ತಾರೀಖು ೫ನೇ ನವೆಂಬರ್ ೧೯೩೫ (ಸಂಪುಟ ೨೪೧

ದಿವಾಳಿಕೋರನ ಆಗಮನ ಮತ್ತು ನಿರ್ಗಮನ.

ದಿವಾಳಿಕೋರನು ಬಂದು

ಕೆಲವು ದಿನಗಳ ಹಿಂದೆ ಬಹಳ

ಕೋಳಿ ಸಾಲವನ್ನು ಮಾಡಿ

ಕಾರು ಮೋಟಾರನ್ನು

ಮೈಸೂರಿನ

ಇನ್ನೊಂದು ಬಗೆಯಾಗಿ

ಮಹಾನ್ಕರ ಸಾಧಕ ಸಾರುತ|

ಕರ್ನಾಟಕ ಸ್ತ್ರೀ ಬುದ್ಧಿಕ|

ಸರಸ ಪೂರ್ಣವು ಕನ್ನಡ ವೀರ ಬಾಲಕನೂ||

ಸಾಹಿತ್ಯದ ಕೀರ್ತಿ ಸೂರ್ಯನ|

ಇದರ ಒಪ್ಪನು ಪಿಡಿದು ಸಾಧಿಸಿರಿ|

ಮೊದಲ ಅಭಿಯೋಗ ಮಾಡಿ, ಸರಕಾರೀ ಉಪ್ಪನ್ನು ಸೂರೆ ಮಾಡಿದ ಮೇಜ್ಲೆರಿಯ ವೈದೂರ ಮಲ್ಲಾರಿಯು ಇದೇ ಸಮಯದಲ್ಲಿ ಬಂಧಮುಕ್ತನಾಗಿ ಧಾರವಾಡಕ್ಕೆ ಬಂದನು; ಹಿಕ್ಕೊಡಿಯ ತ್ರೀ ಅನಂತರಾಯರೂ ಹುಲಜಲಗಿಯಲ್ಲಿ ಬ್ರಿಟಿಶ ಸರ್ಕಾರದ ಆತಿಥ್ಯ ಹೊಂದಿದವರೇ. ಹೀಗೆ ಈ ಮೂವರ ಮೆರವಣಿಗೆ ಹೊರಟಿತು. ಒಂದಿಗುಂಟ ನರನಾರಿಯರು ಇವರ ಮೇಲೆ ಪುಷ್ಪವೃಷ್ಟಿ ಮಾಡಿದರು. ಮಾಲೆಗಳನ್ನು ಹಾಕಿದರು. ಆರತಿ ಮಾಡಿದರು. ಹೂ

REG. NO. M. 2814.

ನಮ್ಮಲ್ಲಿ ಉತ್ತಮ
ಕಾಫೀ ಬೀಜವೂ
ಕಾಫೀ ಪುಡಿಯೂ, ಒಟ್ಟಾ
ಗಿಯೂ ಚಿಲ್ಲರೆಯಾಗಿಯೂ
ಯಾವಾಗಲೂ
ದೊರೆಯುತ್ತದೆ ಸ್ಟಾಂಡರ್ಡ್
ಕಾಫಿ ಕಂಪನಿ ಚಿಕ್ಕಪೇಟೆ
ಬೆಂಗಳೂರು ಸಿಟಿ.

ಪ್ರಜಾಬಂಧು

ಉಜ್ವಲ ರಾಷ್ಟ್ರೀಯ

"PRAJABANDHU" A WIDELY

ಈಶಸೇವೆ, ರಾಜಸೇವೆ, ದೇ

ವಾರ್ಷಿಕ ಚಂದಾ (ಸ್ಥಳದವರಿಗೆ ಐದು ರೂಪಾಯಿ)

ಬಿಡಿ ಸಂಚಿಕೆ

ಸಂಪುಟ ೩]

ಬೆಂಗಳೂರು ನಗರ—ಮಂಗ

ಜಂ೦ ರೂಪಾಯಿ ಬಹುಮಾನ

ಸೌಂದರ್ಯದ ನಿಧಿ.

ನಮ್ಮ ಸೌಂದರ್ಯದ ದ್ರಾವಣವು ಮು
ಹತ್ವದ್ದು. ಶಾಸ್ತ್ರ ರೀತ್ಯಾ ತಯಾರಿಸಲ್ಪ
ಟ್ಟಿದೆ ಇದರಿಂದ ಮೊಖದ ಕಾಂತಿಯು
ಅವಿಚ್ಛಿನ್ನವಾಗಿರುತ್ತೆ. ಜಿಸ್ಸಿ ಮೊಖವ
ನ್ನು ಹೆರ್ಲೆಳ ಮೊಖಕ್ಕಿಂತ ಕಾಂತಿಯುತ
ವಾಗುವುದು. ಅದರ ದಿನವಹಿ ಉಪ
ಯೋಗದಿಂದ ಮುಖದ ಮುದಿರುಗಳು
ನಾಶವಾಗುತ್ತವೆ. ಅಲ್ಲದೆ ಇತರರು ನೋ
ಡಲು ಅಸಹ್ಯವಾಗುವ ಗುರುತುಗಳೂ ಮ
ಡವೆಗಳೂ ಇತರ ಯಾವ ವಿಧವಾದ ಕು
ಹುರುಗಳೂ ಮಾಯವಾಗುವುವು. ಮು
ಖ್ಯ ಮೊಖಮಲ್ಲಿನಂತೆ ಹರ್ಮವು ಮೃದು
ವಾಗುವುದು. ಮೊಖದಲ್ಲುಂಟಾಗುವ ಉ
ಷ್ಣವನ್ನು ಶಮನ ಮಾಡುವುದು. ಇದ
ನ್ನು ಉಪಯೋಗಿಸಿದರೆ ಬೇರೆ ಯಾವ ವಿ
ಧವಾದ ಥೂಲೂ ಅವಶ್ಯಕವಿಲ್ಲ. ಅದರ
ಶುಭ್ರತ್ವವು ಪುಹಾ ಮಹಾ ಪಂಡಿತರಿಂದ
ಪರಿಶೋಧಿಸಲ್ಪಟ್ಟಿದೆ. ಇಲಿಗಳ ಮೇಲೂ
ಕಾಗೆಗಳ ಮೇಲೂ ಪ್ರಯೋಗಮಾಡಲ್ಪಟ್ಟು
ನಂತರ ವ್ಯಾಪಾರಕ್ಕೆ ತಯಾರಿಸಲ್ಪಟ್ಟಿದೆ

ಒಂದಾವರ್ತಿ ಉಪಯೋಗಿಸಿದರಲ್ಲವೇ
ಗುಣ ಮನವರಿಕೆಯಾಗುವುದು. ಮೊಖಕ್ಕೆ
ಹಚ್ಚಿಕೊಂಡರೆ ಅದರಿಂದಾಗುವ ಅನುಭ
ವವು ನಿಮಗೆ ಗೊತ್ತಾಗುತ್ತೆ. ಆಗ ಎಲ್ಲ
ರಿಗೂ ನೀವು ಆದರ್ಶಸ್ತ್ರಾಯವಾಗುವಿರಿ

ಇದರ ಗುಣವನ್ನು ವಿರೋಧಿಸುವ
ಯಾವ ವೈದ್ಯನಿಗೇ ಆಗಲೀ ರಸಾಯನ
ಶಾಸ್ತ್ರ ವೇತ್ತನಿಗೆ ಆಗಲೀ ನಾವು ಜಂ೦
ರೂಪಾಯಿ ಬಹುಮಾನವನ್ನು ಕೊಡುವೆವು.

ರಾಜ ವೈದ್ಯ ನಾರಾಯಣಜಿ ಕೇಶವಜಿಯವರ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬದ್ಧತೆ, ನರಗಳ ಮತ್ತು ಮೆದುಳಿನ ನಿಶ್ಶಕ್ತಿ ಇವೇ.
ಮೊದಲಾದ ವ್ಯಾಧಿಗಳನ್ನು ಪರಿಹರಿಸಿ ರಕ್ತ ಶುದ್ಧಿ ಮಾಡಿ ಹೆಸಿವು ನಿದ್ರೆ ಮತ್ತು
ದೇಹದ ಶಾಖವನ್ನು ಮತ್ತು ಕಾಂತಿಯನ್ನು ಹೆಚ್ಚಿಸಿ ನವ ಚೈತನ್ಯವನ್ನು ಕೊಡು
ವುದು. ಸ್ತ್ರೀ ಪುರುಷರೆಲ್ಲರೂ ಉಪಯೋಗಿಸಬಹುದು ಇಡೀ ಪ್ರಪಂಚದಲ್ಲೆಲ್ಲಾ
ಬಹು ಪ್ರಸಿದ್ಧಿ ಹೊಂದಿ ಲಕ್ಷಾಂತರ ಯೋಗ್ಯ ಪತ್ರಿಕೆಗಳು ಬಂದಿರುತ್ತವೆ.

40 ಮಾತ್ರೆಗಳ ಡಬ್ಬಿ 1ಕ್ಕೆ ರೂ 10--0

ರಮಣಿವಿಲಾಸಿನಿವಟಿಕೆ

ಈ ಔಷಧಿಯ ಹೆಸರು ಯಾವುದನ್ನು ಸೂಚಿಸುವುದೋ ಆ ಗುಣಗಳೆಲ್ಲವೂ
ಇದರಲ್ಲಿ ನೆಲೆಗೊಂಡಿವೆ. ಸ್ತ್ರೀ ಸಂಭೋಗಕ್ಕೆ ಒಂದುಘಂಟೆ ಮುಂಚೆ [illegible] ಮಾ
ತ್ರೆಯನ್ನು ಜೀರ್ಣಿಸುವಷ್ಟು ಹಾಲಿನ ಜೊತೆಯಲ್ಲಿ ನೀಡುವುದರಿಂದ [illegible]
ಸ್ತಂಭನವಾಗಿ ಸಂಭೋಗದಲ್ಲಿನ ಆನಂದವು ಅತಿಶಯವಾಗುವುದಲ್ಲದೆ [illegible]
ನ್ನು ಗಟ್ಟಿ ಮಾಡುವುದರಲ್ಲಿ ಈ ಔಷಧ ಅಪಾರ ಶಕ್ತಿಯುಳ್ಳದು.

16 ಮಾತ್ರೆಗಳಿಂದ [illegible]

ಎಲ್ಲಾ ವಿಷಯಗಳು ಮತ್ತು ಇತರ ಔಷಧಿಗಳು [illegible]
ವೈದ್ಯ ವಿದ್ಯ ಎಂಬ ಪುಸ್ತಕವನ್ನು ತರಿಸಿ ಓದಿರಿ

ಏಜಂಟರು:—

ನಾರಾಯಣ್ & ಕಂಪ.
ಅವೆನ್ಯೂ ರೋಡ್, ಬೆಂಗಳೂರು ಸಿಟಿ

ಜಗತ್ಪ್ರಸಿದ್ಧ ಗಿರಿ ಕಾಫಿಯಿಂದ [illegible]

ಸಂಪಾದಕರು:—ಮೈ. ಶೃಷ್ಣಪ್ಪ

ಬಂಧು

ದೈನಂದಿನ ಪತ್ರಿಕೆ

ILATED KANNADA DAILY.

ನೆಗಳೇ ನಮ್ಮ ಧ್ಯೇಯ

ಪರಿಶುದ್ಧವಾದ
ಸ್ಟ್ಯಾಂಡರ್ಡ್ ಕಾಫಿಯಲ್ಲಿ
ನಿಜವಾದ ಕಾಫಿಯು
ಆನಂದವನ್ನು
ಕೊಡುತ್ತದೆ. ಸ್ಟ್ಯಾಂಡರ್ಡ್
ಕಾಫಿ ಕಂಪನಿ
ಚಿಕ್ಕಪೇಟೆ
ಬೆಂಗಳೂರು ಸಿಟಿ.

[ವಾರ್ಷಿಕ ಚಂದಾ (ಹರಸ್ಯೆದವರಿಗೆ) ಹತ್ತು ರೂಪಾಯಿ

ಲರ ೨೦ ನೇ ಮಾರ್ಚಿ ೧೯೩೪ [ಸಂಚಿಕೆ ೨೧

NAVARATNA PHARMACY
P. B. 68 COCHIN

ನವರತ್ನ ಆಶೋಕಾರಿಷ್ಟ.

ಇದು ಸ್ತ್ರೀಯರ ಋತು ಸಂಬಂಧ ವ್ಯಾಧಿಗಳಿಗೆ ಸಂಬಂಧಪಟ್ಟ ನೂರಾರು ಔಷಧಿಗಳ ಸಾರವಿಂದೊಡಗೂಡಿದೆ. ಬಿಳುಪು ಸ್ರಾವ, ರಕ್ತಸ್ರಾವ, ಅಲ್ಪಸ್ರಾವ, ಅತಿಸ್ರಾವ, ಹೊಟ್ಟೆಶೂಲೆ, ತಲೆನೋವು, ನಿಶ್ಶಕ್ತಿ, ಜೀರ್ಣವಿಲ್ಲದಿರುವಿಕೆ, ಅಕಾಲ ಬಹಿರ್ದೆಸೆ ಇವುಗಳೆಲ್ಲವಕ್ಕೂ ೨-೩ ಹೊತ್ತಿನಲ್ಲಿಯೇ ನಿಲ್ಲಿಸುತ್ತದೆ. ಬೆಲೆ ರೂ. 1-8-0.

ನವರತ್ನ ದ್ರಾಕ್ಷಾಸವ.

ಇದು ನವರತ್ನಗಳ ನಿಶ್ಶಕ್ತಿಯನ್ನು ಹೋಗಲಾಡಿಸಿ ಜೀರ್ಣಶಕ್ತಿಯನ್ನು ಹೆಚ್ಚಿಸಿ ಶರೀರಕ್ಕೂ, ಮಿದುಳಿಗೂ ಪುಷ್ಟಿಯನ್ನುಂಟುಮಾಡುವ ದಿವ್ಯೌಷಧವಾಗಿದೆ. ಹೃದಯರೋಗಿಗಳಿಗೂ, ಉಬ್ಬಸ, ಕೆಮ್ಮು ಮೊದಲಾದವುಗಳಿಗೂ ಶೀಘ್ರೋಪಶಮನಕಾರಿ ಮತ್ತು ಧಾತುವನ್ನು ಗಟ್ಟಿಮಾಡಿ ಸ್ವಪ್ನಸ್ಖಲನವನ್ನು ನಿಲ್ಲಿಸುತ್ತದೆ

ನವರತ್ನ ಆಯಿಡ್ಜೆಸ್ಟ್ ಸರಸಪರ್ಣ.

ಶಕ್ತಿವರ್ಧಕ ೪ ಮೂಲಿಕೆಗಳೆಂದು ಪ್ರಸಿದ್ಧವಾಗಿರುವ ಔಷಧಿಗಳ ಸಾರವೆಲ್ಲಾ ಇದರೊಳಗೆ ಸೇರಿರುತ್ತೆ. ಇದು ರಕ್ತ ಶುದ್ಧಿ ಮಾಡುವುದರ ಮೂಲಕ ಗುಪ್ತರೋಗಗಳೆಲ್ಲವನ್ನೂ ನಿವಾರಣೆಮಾಡಿ ನಿಮ್ಮಗಳನ್ನು 'ನವಚೈತನ್ಯ ಕೇಸರಿ'ಯಂತೆ ಮಾಡುತ್ತದೆ. ಬೆಲೆ ರೂ. 1-8-0.

ದೊರೆಯುವ ಸ್ಥಳ:

ಸಿ. ಟಿ. ಶಾಸ್ತ್ರಿ ಕೋ.

ಅಣೆಕ್ಕೂ ರೋಡ್ — — — ಬೆಂಗಳೂರು ಸಿಟಿ.

ies Scientifically Tested. ರಕ್ಷ ಶುದ್ಧಿ ಮಾಡು

ಜಾಜ್ವಲ್ಯಮಾನ ಕೆ. ಕಾರಿನೆಗರು ಸ್ಟೋರ್ಸ್ ಮಂಗಳೂರು

1934

ಬಾಲಚಂದ್ರ

ವ್ಯಾಭವಿಕ ಶಾಲಾ ಉಪಾಧ್ಯಾಯರ ಕೂಟದಿಂದ
ಪ್ರಕಟವಾಗುವ

ಮಾಸ ಪತ್ರಿಕೆ.

EDITOR: ULLAL MANGESHA RAO, B. A., L. T.
Jail Road, Mangalore.

ಪ್ರತಿ ತಿಂಗಳ ಆಖೈರಿಗೆ ಹೊರಡುವುದು

ಚಂದಾ ದರ ೧—೮—೦ ರೂ. (ಅಂಚೆವೆಚ್ಚಸೇರಿ). ಬಿಡಿಸಂಚಿಕೆಗೆ ಎರಡಾಣೆ

ಸಂಪುಟ II ೧೯೩೪ ಸಂಚಿಕೆ ೬

ಹದಿನೆಂಟನೆ ಅಧ್ಯಾಯ

ಬಾತಮಿಯ ಸತ್ಯತೆ.

ಗಿರಿಧರಲಾಲನು ಹೇಳಿದ ದಿನಗಳು ಕಳೆದುವು. ಅಷ್ಟರ ವರೆಗೆ ರಘುನಾಥ ಪಂತನಿಗೆ ಮುಳ್ಳಿನ ಮಂಚದ ಮೇಲೆ ಬಿದ್ದುಕೊಂಡಂತೆ ಮನಸ್ಸಿನ ಸ್ಥಿತಿಯಾಗಿತ್ತು. ತನ್ನ ತಾಯಿಯ ಮನಸ್ಸಿನಲ್ಲಿಯೂ ತನ್ನಲ್ಲಿ ಬಂದ ಸಂಶಯವು ಮೂಡಿರಬೇಕೆಂದು ಆತನು ನೆನಸಿದನು. ಹೀಗಾಗಿ ಹಗಲು ರಾತ್ರೆ ಅದೇ ಚಿಂತನೆಯಿಂದ ಅವನು ಕಾಲ ಕಳೆದನು. ಎಂಟನೇ ದಿನ ಬೆಳಗ್ಗೆ ಎದ್ದು ಚಾ ಕುಡಿದೊಡನೆ ಆತನು ಮನೆಯಿಂದ ಹೊರಬಿದ್ದು ಗಿರಿಧರಲಾಲನ ಪತ್ರಿಕೆಯ ಆಫೀಸನ್ನು ಉದ್ದೇಶಿಸಿ ಹೋದನು. ಅಲ್ಲಿ ಇನ್ನು ಬಾಗಿಲು ತೆರೆಯುವ ಹೊತ್ತಾಗಿರಲಿಲ್ಲ. ಹೀಗಾದ್ದರಿಂದ ೪ ಗಂಟೆ ಹೊಡೆಯುವ ವರೆಗೆ ಆಫೀಸಿನ ಮುಂದುಗಡೆ ಜಗಲಿಯಲ್ಲಿ 'ಗಸ್ತು' ಮಾಡುವ ಕೆಲಸವನ್ನು ಅವನು ಕೈಕೊಂಡನು. ೪ ಗಂಟೆಗೆ ಬಾಗಿಲು ತೆರೆಯಿತು. ಗಿರಿಧರಲಾಲನು ಪರ ಊರಿಗೆ ಹೋದವನು ಮರಳಿ ಬಂದ ಸಮಾಚಾರವಿಲ್ಲದ್ದರಿಂದ ಪುಸ್ತಕನು ಹೇಳಿದನು. "ಮಾನ ನಷ್ಟದ ನ್ಯಾಜ್ಯವು ತನ್ನ ಮೇಲೆ ಬಂದೀತೆಂಬ ಭಯದಿಂದ, ಗಿರಿಧರಲಾಲನು, ತನ್ನನ್ನು ವಂಚಿಸಿ ದೇಶಾಂತರವಾಸಿಯಾದನೇನೋ ಎಂಬ ಸಂಶಯವು ರಘುನಾಥನನ್ನು ಆವರಿಸಿತು. ರಘುನಾಥನು ತನ್ನ ಗೆಳೆಯನ ಕುಹಕಕ್ಕೆ ಬುದ್ಧಿ ಕಲಿಸಬೇಕೆಂದು ನಿಶ್ಚಯಮಾಡಿಕೊಂಡು ಕಿಡಿಕಿಡಿಯಾಗಿ ಪತ್ರಿಕೆಯ ಆಫೀಸಿನಿಂದ ಕೆಳಗೆ ಇಳಿದು ನಾಲ್ಕು ಮಾರು ಮುಂದೊತ್ತುವಷ್ಟರಲ್ಲಿ ಗಿರಿಧರಲಾಲನು ಅವನಿಗೆ ಎದುರಾಗಿ ಬಂದನು.

ಗಿರಿಧರ :—ರಘುನಾಥ! ಪರಊರಿಗೆ ಹೋದವನು ನಿನ್ನೆ ರಾತ್ರೆಯೇ ಬಂದುದರಿಂದ ನಿನ್ನನ್ನು ಕಾಣಲು ಅವಕಾಶ ದೊರೆಯಲಿಲ್ಲ. ಈಗ ಆಫೀಸಿಗೆ ಹೋಗಿ ನಿಮ್ಮಲ್ಲಿಗೇನೇ ಬರಬೇಕೆಂದು ಇದ್ದೆನು.

ರಘುನಾಥ :—ಏನು ವಿಶೇಷ ಕಾರ್ಯವಿತ್ತೋ?

ಗಿರಿಧರ :—ನಮ್ಮ ವರಮಾವತ್ತಿನಿಗೆ ತಿಳಿದು ತಿಳಿಯದೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವನ್ನು ಮಾಡಲು ಹೋಗಿದ್ದೆನು.

ರಘುನಾಥ :—ಎಲ್ಲಿಗೆ? ನಾಸಿಕಕ್ಕೆನ್ನಿ ಗೋಕರ್ಣಕ್ಕೆನ್ನಿ?

ಗಿರಿಧರ :—ಆವೆರಡು ಸ್ಥಳಗಳಿಗೂ ಅಲ್ಲ. ಹೋಗಿದ್ದೆನು ಎನ್ನುವಾಗಲೇ ಗಿರಿಧರಲಾಲನ ತುಟಿಗಳಲ್ಲಿ ಕಣ್ಣುವೋರೆಗಳಲ್ಲಿ ಪ್ರಮುಖವಾದ ಚಿಹ್ನೆಗಳೂ ತೋರಿಸಿಕೊಂಡವು. ತನ್ನ ಅಪರಾಧವನ್ನು ಗಿರಿಧರಲಾಲನು ಒಪ್ಪಿ ಅದಕ್ಕೆ ಸರಿಯಾದ ಪರಿಹಾರವನ್ನು ಹೇಳಲಿಕ್ಕಿರುವನೆಂದು ರಘುನಾಥನು ಹಿಗ್ಗಿದನು. ಮತ್ತು "ಸಾಂಗಲಿಗೆ? ಅದೇತಕ್ಕೆ ಹೋದಿರಿ?" ಎಂದು ತವಕದಿಂದ ಪ್ರಶ್ನಿಸಿದನು.

ಗಿರಿಧರ :—ಆ ಬಾತಮಿಯ ನಿಜತ್ವವನ್ನು ಪತ್ತೆಮಾಡಲು ಹೋಗಿದ್ದೆನು.

ರಘುನಾಥ :—ಗಿರಿಧರನನ್ನು (ತಬ್ಬಿಕೊಂಡು) "ನನ್ನದೂ ತಪ್ಪಾಯಿತು. ನಿಮ್ಮ ಮೇಲೆ ನಿಷ್ಕಾರಣವಾಗಿ ರೇಗಿದೆನು. ಹೇಗೂ ನಮ್ಮಪ್ಪನ ಮೇಲೆ ಆರೋಪವೇನೂ ಇಲ್ಲವಷ್ಟೆ!

ಗಿರಿಧರ :—ರಘುನಾಥ್! ನಿಜವಾದ ಸಮಾಚಾರವನ್ನು ಹೇಳಲೆ? ನನ್ನ ನಾಲಿಗೆಯೇ ಬೀಗಿಹೋದಂತಾಗಿದೆ. ಇದನ್ನು ಕೇಳಿದೊಡನೆ ರಘುನಾಥನ ಬಿಳುಪಾದ ಮುಖವು ಕಪ್ಪಾಗಿ ಹೋಯಿತು. ತವಕದಿಂದ ಆತನು "ಅಪ್ಪೇನು? ಆ ಆರೋಪವು ನಿಜವೆ?" ಎಂದು ಕೇಳಿದನು.

ಗಿರಿಧರ :—ಮಿತ್ರಾ! ಅಧೀರನಾಗಬೇಡಿ. ಮೊದಲು ಈ ಕಾಗದವನ್ನು ಓದಿಕೊಳ್ಳಿ. ಇದನ್ನು ಆ ಪ್ರಾಂತದ ಸಭ್ಯ ಗೃಹಸ್ಥರೊಬ್ಬರು ನನಗೆ ಬರೆದು ಕೊಟ್ಟು ತನ್ನ ಸಹಿಯನ್ನು ಕೊಟ್ಟಿರುವರು. ಅದನ್ನು ಸರಕಾರದವರ ಮುಂದೆ ವಿಚಾರಕ್ಕೆ ಇಡುವುದಿಲ್ಲವೆಂದು ಆಣೆ ಪ್ರಮಾಣಗಳನ್ನು ಮಾಡಿದ ಮೇಲೆಯೇ ಅವರು ನನಗೆ ಬರೆದುಕೊಟ್ಟರು" ಎಂದು ಆ ಪತ್ರವನ್ನು ಗಿರಿಧರಲಾಲನು ರಘುನಾಥನ ಕೈಗೆ ಒಪ್ಪಿಸಿದನು.

ಅದನ್ನು ಓದಿದಾಗ ರಘುನಾಥನಿಗೆ ಸಿಡಿಲು ಬಡಿದಂತಾಯಿತು. "ಹಾಯ್! ಹಾಯ್! ನಮ್ಮ ತಂದೆಯ ಮೇಲೆ ಈ ಕಲಂಕವು ಹರಿಗೊಂಡರೆ ಅವರು ಲೋಕಕ್ಕೆ ಮೋರೆಯನ್ನು ತೋರಿಸುವುದಾದರೂ ಹೇಗೆ? ನನ್ನ ತಾಯಿಯು ಎಂಟು ಹತ್ತು ದಿನಗಳಿಂದ ವಿಶೇಷವಾಗಿ ಕೊರಗುತಿದ್ದಾಳೆ. ಒಂದೇ ಒಂದು ಅಗುಳಾದರೂ, ಅವಳು ಬಾಯಿಗೆ ಎತ್ತಿದಂತೆ ಕಾಣುವುದಿಲ್ಲ. ಅವಳಿಗಾದರೂ ಈ ಸಂದೇಹವು ಹೇಗೆ ಉಂಟಾಯಿತು? "ಟೀ ಪಾರ್ಟಿ"ಯ ದಿನದಿಂದ ಅವಳ ಮನಸ್ಸು ಸುಸ್ಥವಾಗಿಲ್ಲ. ಈಗ ಈ ಸಮಾಚಾರವನ್ನು ಕೇಳಿದರೆ ಅವಳ ಪ್ರಾಣವು ಅರೆಕ್ಷಣವೂ ನಿಲ್ಲಲಾರದು.

ಗಿರಿಧರ :—ನೀವು ಇದನ್ನೆಲ್ಲಾ ಹೊರಗೆಡವುದು ಅಗತ್ಯವಿಲ್ಲ. ಕಂಗೆಡುವುದೂ ಪುರುಷಾರ್ಥವಲ್ಲ. ಈ ಕಥೆಯು ಸುಮಾರು ಇಪ್ಪತ್ತು ವರ್ಷ ಹಿಂದಿನದು. ಆ ಕಾಲದಲ್ಲಿ ಇದ್ದವರು ಈಗ ಸಾಂಗ್ಲಿಯಲ್ಲಿಯೂ ಬಹಳ ಮಂದಿ ಇಲ್ಲ. [illegible] ನೆಲಕ್ಕೆನೇ ಒರಸಿಬಿಡಬೇಕು. [illegible] ಮೊಗಕ್ಕೆ ಹಚ್ಚಿಕೊಳ್ಳಬಾರದು. ಇನ್ನೊಂದು ವಿಚಾರ[illegible]

ರಘು :—ಏನದು?

ಗಿರಿಧರ :—ನಂದೂಲಾಲನು ನಿಮ್ಮನ್ನು ಅಳಿಯನನ್ನಾಗಿ ಮಾಡಿಕೊಳ್ಳುವ ಪ್ರಸ್ತಾವವೇನಾಯಿತು?

ರಘು :—ಆ ಪ್ರಸ್ತಾವವು ಆಗಲೇ ಬಿದ್ದು ಹೋಗಿದೆ.

ಗಿರಿಧರ :—ಸರಿ ಸರಿ! ಅಷ್ಟೇ!

ರಘು :—ಅದಕ್ಕೂ ಇದಕ್ಕೂ ಏನು ಬಾದರಾಯಣ ಸಂಬಂಧ?

ಗಿರಿಧರ :—"ಅಂಥದ್ದು ಏನೂ ಇಲ್ಲ. ಈಗ [illegible] ತುಂಬಾ ವ್ಯಾಕುಲದಿಂದ ಪೀಡಿತವಾಗಿದೆ. ನಾವಿಬ್ಬರೂ [illegible]

ಪುಷ್ಪಕಾಂಡ

ಪಂಡಿತ ಜವಾಹರಲಾಲ ನೆಹರು

ಸಪ್ಟೆಂಬರ್ ೧೯೬೬



ಸಂಪಾದಕರು :
ಯಂ. ರಾಮರಾವ್
ಶ. ವೆಂಕಟೇಶ ಬಿಲು

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು _____

ಆರಂಭ ದಿನಾಂಕ _____

ಪ್ರಕಟನಾ ಸ್ಥಳ _____

ಸಂಪಾದಕರ ಹೆಸರು _____

ಮ್ಯಾನೇಜರ ಹೆಸರು _____

ಸೌಜನ್ಯ ಕೃಪೆ _____

1961

ಬೆಲೆ : ನಾಲ್ಕು ಆಣೆ

— — ವಿಷಯ ಸಂಗ್ರಹ — —

ಹೊತ್ತಿದ ಹುಣಿಸೆ (ಕವನ)	ಶ್ರೀ. ಅಂಬಿಕಾತನಯ ದತ್ತ	೨೭
ಜೂಜಿನ ಮೋಜು	ಪ್ರೊ. ಎನ್. ಎಂ. ಕುಲಕರ್ಣಿ, ಎಂ.ಎ.	೨೭೪
ಕೆಚ್ಚಿದೆಯ ಕನ್ನಡಿಗ (ನಾಟ್ಯಛಟಾ)	ಶ್ರೀ. ಮೊರಬ ರಘುನಾಥ	೨೮೦
ಅತ್ತಿಗೆ	ಶ್ರೀ. ಎಚ್. ಎಸ್. ಪಾಟೀಲ, ಎಂ.ಎ.	೨೮೨
ಹೆಸ್ತ ಸಾಮುದ್ರಿಕದ ಸಾಮಾನ್ಯ ಜ್ಞಾನ	ಶ್ರೀ. ಹುರಕಡ್ಲಿ ಅನ್ನದಾನಪ್ಪನವರು	೨೮೫
ದೇಹದ ಹಿಗ್ಗು	ಡಾ. ಕೃಷ್ಣ ಮುಳಬಾಗಲ, ಮುಂಬಯಿ	೨೮೭
ಕೃತ್ರಿಮ ರೇಶಿಮೆ....	ಶ್ರೀ ಆರ್. ವ್ಹಿ. ಕುಲಕರ್ಣಿ	೨೮೯
ರತ್ನಾಕರನ ಕಾಲೇಜ ಡೈರಿ	ಶ್ರೀ. ಕಾ. ಮಾ. ಕಾಲೇಜಕರ	೨೯೧
ಆರೋಗ್ಯಾಭಿವೃದ್ಧಿ	ಶ್ರೀ. ವಾಯ್. ಬಂಗ್ಲೀದ	೨೯೫
ನವ ಭಾರತದ ನವ ಶಿಕ್ಷಣ	ಶ್ರೀ. ದೇಶಪಾಂಡೆ ಮನೋಹರರಾಯರು, ಎಂ.ಎ.	೨೯೭
ರಸನಿವೇದನ	....	೩೦೪
ಆಕಾಶಸ್ಥ ಗ್ರಹಗಳ ಆದೇಶ	ಡಾ. ಕೃಷ್ಣ ಮುಳಬಾಗಲ, ಮುಂಬಯಿ	೩೦೧
ಸಾಹಿತ್ಯಾವಲೋಕನ	....	೩೦೪
ದಿಗಂತ ದೃಷ್ಟಿ	....	೩೦೫
ರಾಷ್ಟ್ರೀಯ ಕನ್ನಡ ಶಿಕ್ಷಣ	ಶ್ರೀ. ಆಲೂರ ವೆಂಕಟರಾಯರು....	೩೦೬

ಬುದ್ಧಿಬಲ ಬಳಗ

ನಂ.	ಸದಸ್ಯರಾದವರ ಹೆಸರು	ನಂ.	ಸದಸ್ಯರಾದವರ ಹೆಸರು
೧.	ಎಸ್. ಪಿ. ಜಿನ್ನಾರಾಜಯ್ಯಾ. ಸಾಲಿಗ್ರಾಮ	೧೭.	ಬಿ. ಆರ್. ತಡಕೋಡ, ಬೆಳಗಾಂವ
೨.	ಸಂಗಪ್ಪ ಗವಿಯಪ್ಪ ಭಾವಿಕಟ್ಟಿ, ಗುಳೇದಗುಡ್ಡ	೧೮.	ವೆಂಕಟೇಶ ವ್ಯಾ. ಹೆರಕಲ್, ಹೊನವಾಡ
೩.	ಕೆ.. ರಾಮಕೃಷ್ಣಯ್ಯಾ, ಚಿತ್ತಲದುರ್ಗ	೧೯.	ಎನ್. ಬಿ. ಅಣ್ಣಿಗೇರಿ, ಹುಬ್ಬಳ್ಳಿ
೪.	ಉಮ್ಮಣಸಾ ಮಾವರಸಾ ನಾಕೋಡ, ಗದಗ	೨೦.	ಎಂ. ಸೀತಾರಾಮಯ್ಯಂಗಾರ, ದೊಡ್ಡಬಳ್ಳಾಪೂರ
೫.	ಸೋಮಶೇಖರ ಶಿ. ಗದಗಿಮಠ, ರಾಣೆಬೆನ್ನೂರ	೨೧.	ಫಕೀರಪ್ಪಾ ಭೀಮಪ್ಪಾ ಸಮಗಾರ, ಇಳಕಲ್ಲ
೬.	ಎಸ್. ಆರ್. ಪಡಸಲಗಿ, ರಾಣೆಬೆನ್ನೂರ	೨೨.	ಸಿ. ಭೀಮಪ್ಪಾ, ಚಿತ್ತಲದುರ್ಗ
೭.	ಬಸಪ್ಪಾ ಕುಪ್ಪಸದ, ಹಾವೇರಿ	೨೩.	ಆರ್. ಸಿ. ದಿಕ್ಷಿತ, ಹೈದರಾಬಾದ
೮.	ಕೆ. ರಾಮಶೆಟ್ಟಿ, ಸಕಲೇಶಪೂರ	೨೪.	ಎಸ್. ಆರ್. ಪಡಸಲಗಿ, ಸವಣೂರ
೯.	ಎಂ. ಡಿ. ಸುಬ್ಬರಾವ, ತೀರ್ಥಹಳ್ಳಿ	೨೫.	ಪಿ. ಎನ್. ಹೆಗ್ಡೆ, ಕಾರ್ಕಳ
೧೦.	ಕೆ. ಎಸ್. ಚಂದ್ರಶೇಖರಯ್ಯಾ, ತೀರ್ಥಹಳ್ಳಿ	೨೬.	ಎಚ್. ಆರ್. ಲದನಾ, ಗದಗ
೧೧.	ವೆಂಕಟೇಶ ಗೋವಿಂದ ಸವಣೂರ, ಕುಂದಗೋಳ.	೨೭.	ಗಣೇಶ ಗೋವಿಂದ ಗ್ರಾಮಪುರೋಹಿತ, ಬೆಟಗೇರಿ
೧೨.	ಚ. ಆ. ಪಡನೂರ,. ಹುಬ್ಬಳ್ಳಿ.	೨೮.	ಎಚ್. ಶಾಮರಾವ, ಬಳ್ಳಾರಿ
೧೩.	ಸುರೇಂದ್ರನಾಥ ಮಂಟಗಣೇಕರ, ಹುಬ್ಬಳ್ಳಿ	೨೯.	ಎಚ್. ಬದರೀನಾರಾಯಣರಾವ, ಹುಬ್ಬಳ್ಳಿ
೧೪.	ವ್ಹಿ. ವ್ಹಿ. ವಕ್ಕುಂದ, ಹುಬ್ಬಳ್ಳಿ	೩೦.	ಕು. ವೀರೂಬಾಯಿ ಹಿರೇಮಠ, ಗದಗ
೧೫.	ಗುರುರಾವ ದೇಸಾಯಿ, ಗದಗ	೩೧.	ಶಿವಶಂಕರಯ್ಯಾ ಮಠಪತಿ, ರಾಣೆಬೆನ್ನೂರ
೧೬.	ಸಿ. ಎಸ್. ಹಿರೇಮಠ, ಹುಬ್ಬಳ್ಳಿ	೩೨.	ಕುಬೇರ ರಾಮಚಂದ್ರ ಗೌರೀಶ, ವಿಜಾಪೂರ

ಮುಂದಿನ ಸಂಚಿಕೆಯಲ್ಲಿ— ?

ದೇವರ ಲಿಲಾವು : (ಏಕಾಂಕ ನಾಟಕ)
ಪ್ರೊ. ಎನ್. ಎಂ. ಕುಲಕರ್ಣಿ

ಶಾರದಾ ಬಿಲ್ಲಿನಮೇಲೆ ದಾವೆ : ಲೇ– ಲಕ್ಷ್ಮೀಶ

ಮೊದುವೆಯ ಮಾರ್ಗದಲ್ಲಿ : (ಹಾಸ್ಯ ಪ್ರಬಂಧ)

ಒಂದು ಪತ್ರ : ಕೈ. ವಾ. ಶ್ರೀಮತಿ ಬಿ. ಟಿ. ಜಿ. ಕೃಷ್ಣ

ನನ್ನ ಪಾರಕೆರ ಪೆನ್ನಿನ ವಿರಹ : ವಿಹಾರಿ

ಸುಭಾಷ್‌ಚಂದ್ರ ಬೋಸ್ ಪೂರ್ಣಸ್ವಾಮಿ ಪಕ್ಷದ ಪ್ರಥಮ ಪಂಚಪತ್ರಿಸಿನ
ಕಾಂಗ್ರೆಸ್ ಇತಿಹಾಸದಲ್ಲಿ ಹೊಸ ಪ್ರಕರಣವನ್ನು ರಚಿಸಿದ

ದೇಶಗೌರವ ಸುಭಾಷ ಬೋಸರು

ಶ್ರೀ ಬಸವರಾಜ ಮೆಡಿಕಲ್ ಫಾರ್ಮಸಿ, ಸಿದನಾಳ ಮತ್ತು ಕಂಪನಿ,

— ನಪುಂಸಕತ್ವಾರಿ ಗುಳಿಗೆ —

(ಷಂಢತ್ವನಾಶಕ ಗುಳಿಗೆಗಳು)– ಕಿಮ್ಮತ್ತು ೪ ರೂ. ಅ. ವೆ. ಬೇರೆ. ಅತಿ ಮೈಥುನ, ಹಗಲಿರುಳು ಕೆಟ್ಟ ವಿಚಾರ, ಭಿಭತ್ಸ ಲೇಖನ-ವಾಚನ, ಸ್ವಪ್ನಾವಸ್ಥೆ, ಮುಷ್ಟಿ ಮೈಥುನ ಮೊದಲಾದ ಅಯೋಗ್ಯ ರೀತಿಯಿಂದ ಧಾತು ಪತನವಾದಲ್ಲಿ ಧಾತುಸ್ಥಾನವಲ್ಲಿ ಕಡಕಿ ಉತ್ಪನ್ನವಾಗುವದಲ್ಲದೆ ನಪುಂಸಕತ್ವ ಉಂಟಾಗುವದು. ಹಾಗೆ ಧಾತು ಕ್ಷೀಣವಾಗುವದರಿಂದ ಶಿರವು ನಿರ್ಬಲವಾಗಿ ಶಿಥಿಲವಾಗುವದು. ಇದನ್ನು ಸಶಕ್ತಮಾಡಲು ಈ ಗುಳಿಗೆಯ ಉಪಯೋಗವಾಗುವದು. ಕಡಿಕಿ ನಾಶವಾಗಿ ದೇಹದಲ್ಲಿ ಸಾಕಷ್ಟು ಬಲವುಂಟಾಗುವದು. ಪಚನ ಕ್ರಿಯೆಯ್ಯು ಬೆಳೆದು ರಕ್ತಶುದ್ಧಿಯಾಗುವದು. ಧಾತುವಿನ ಕ್ಷೀಣತೆಯು ಅಳಿದು ವೃದ್ಧಿಯಾಗಿ ಗಟ್ಟಿಯಾಗಹತ್ತುವದು. ಪ್ರತಿ ದಿನ ಮಲವು ಸಾಫ ಆಗುವದು. ಸನ್ ೧೯೨೫ರಿಂದಲೂ ಈ ಔಷಧದಿಂದ ಅನೇಕರು ೨೪ ದಿವಸಗಳಲ್ಲಿ ಪೂರ್ಣ ಗುಣಹೊಂದಿರುವರು. ಅನುಭವದಿಂದ ತಾನೇ ಖಾತ್ರಿಯಾಗುವದು. ಈ ವಿಷಯವಾಗಿ ಎಲ್ಲ ಪತ್ರವ್ಯವಹಾರವು ಗುಪ್ತವಾಗಿ ಇಡಲ್ಪಡುವದು. ಪಥ್ಯವೇನೂ ಇಲ್ಲ. ಅನುಪಾನ ಪತ್ರಿಕೆ ಔಷಧದಕೂಡ.

— ಮದನೋದ್ಭವ ಗುಟಿ —

ರಸಾಯನ ವ, ಕೈಫಿಜೀನಸ ಅದೆಯೆಂದೂ ಗುಣವಿಲ್ಲವೆಂದೂ ಸಿದ್ಧಮಾಡಿದವರಿಗೆ **೧೦೦೦ ರೂ. ಇನಾಮು!**

ಮುಷ್ಟಿ ಮೈಥುನ, ಘಾತಕ ಸಂವಯಿ, ಅನೈಸರ್ಗಿಕ ಆಚರಣ, ಅತಿ ಮೈಥುನ, ವೇಶ್ಯಾಗಮನ, ಮೊದಲಾದ ಕಾರಣಗಳಿಂದ ಇಂದ್ರಿಯಕ್ಕೆ ಶಿಥಿಲತಾ ಪ್ರಾಪ್ತವಾಗಿ ಧಾತುಸ್ಥಾನ ನಿರ್ಬಲವಾಗುತ್ತದೆ. ಮತ್ತು ಸೀಘ್ರಪತನವಾಗಿ ಕಾಮವಾಸನೆಯು ತೃಪ್ತಿ ಆಗದ್ದರಿಂದ ಮನಸ್ಸು ಉದಾಸೀನವಾಗುತ್ತದೆ. ಇವೆಲ್ಲವುಗಳಿಗಾಗಿ ಯೋಗ್ಯ ಸಂಶೋಧನಮಾಡಿ **"ಮದನೋದ್ಭವ ಗುಟಿ"** ಎಂಬ ಔಷಧವನ್ನು ತಯಾರ ಮಾಡಿರುತ್ತದೆ. ಈ ಗುಟಿಯಿಂದ ಅನೇಕ ಜನರು ಸಮಾಧಾನ ಹೊಂದಿದ್ದಾರೆ. ೧೨ ತಾಸುಗಳಲ್ಲಿ ಗುಣತೋರಿ ೨೧ ದಿವಸಗಳಲ್ಲಿ ಪೂರ್ಣ ಗುಣ ಬರುವದು. **ಕಿಮ್ಮತ್ತು ೪॥ ರೂ.** ಅ.ವೆ. ಬೇರೆ. ಪಥ್ಯ ಇಲ್ಲ. ಅನುಪಾನ ಪತ್ರಿಕೆ ಔಷಧಕೂಡ.

ಪ್ರಮೇಹ (ಪರಮಾ) ನಾಶಕ ಗುಟಿ:— ಕಿ. ೪॥ ರೂ. ಅ. ವೆ. ಬೇರೆ. ನಿಷ್ಕಾಳಜಿತನದಿಂದ ಪ್ರಮೇಹ (ಪರಮಾ) ಮೈಯಲ್ಲಿ ಭೇದಿಸಲಿಕ್ಕೆ ಕೊಟ್ಟರೆ ತಮ್ಮ ಮತ್ತು ಭಾವೀ ಸಂತತಿಯ ಅತ್ಯಂತ ಹಾನಿ ಮಾಡಿದಂತಾಗುವದು. ಪ್ರಮೇಹ ರೋಗವು ಉಂಟಾಗಲಿಕ್ಕೆ ಅನೇಕ ಕಾರಣಗಳುಂಟು. ಎಲ್ಲ (೨೦) ಪ್ರಕಾರದ ಪ್ರಮೇಹ ರೋಗದ ಮೇಲೆ ನಮ್ಮ ಪ್ರಮೇಹ ನಾಶಕ ಗುಟಿಯು ಅಲೌಕಿಕ ವಸ್ತು ಆಗಿದೆ. ಇದರ ಸೇವನೆಯಿಂದ ಪ್ರಮೇಹ ೭ ದಿವಸದಲ್ಲಿ ನಾಶವಾಗುತ್ತದೆ. ಪಥ್ಯವೇನೂ ಇಲ್ಲ. ಅ. ಪತ್ರಿಕೆ ಔಷಧದ ಕೂಡ.

ವನಿತಾ ಕಲ್ಯಾಣ ಪ್ರದರಾಂತಕ:— ಕಿ. ೫ ರೂ. ಅ. ವೆ. ಬೇರೆ. ಸ್ತ್ರೀಯರಿಗೆ ಪ್ರದರ (ಧುಪಣಿ, ಶರಗು) ಉಂಟಾಗುವದರಿಂದ ತಲೆ, ನಡ, ಸಂದು ಮತ್ತು ಗರ್ಭಾಶಯ ಇವುಗಳಲ್ಲಿ ಅಸಹ್ಯ ವೇದನೆ ಮೂರ್ಛಾ, ಹಿಸ್ಟೀರಿಯಾ (ಅಪತಂತ್ರಕ), ಮೈಯಲ್ಲಿ ಅಶಕ್ತತೆ, ಸಂಭೋಗ ಸಮಯದಲ್ಲಿ ಕಷ್ಟ, ಇನೆಲ್ಲ ರೋಗಗಳು ಉತ್ಪನ್ನವಾಗಿ ತಾರುಣ್ಯವು ನಷ್ಟವಾಗುವದಲ್ಲದೆ ಮಕ್ಕಳಾಗುವದು ಬಂದಾಗುತ್ತದೆ. ಇಂತಹ ಮಹಾ ಹಾನಿಕಾರಕ ಪ್ರದರ ರೋಗಕ್ಕೋಸ್ಕರವಾಗಿ ಇದು ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಔಷಧವಿದೆ. ಇದರಿಂದ ಕೆಂಪು, ಹಳದಿ, ಬಿಳಿ, ಕರೆ ಯಾವದೇ ಬಣ್ಣದ ನೀರು ಸ್ರವಿಸುತ್ತಿದ್ದರೆ ಅದನ್ನು ಕಾಯಂ ಗುಣಪಡಿಸುತ್ತದೆ. ಮತ್ತು ಅದರ ಕಾರಣದಿಂದ ಉಂಟಾದ ಸಮಸ್ತ ವ್ಯಾಧಿಗಳನ್ನು ನಷ್ಟಪಡಿಸಿ ಶರೀರದಲ್ಲಿ ಬಲ, ಪುಷ್ಟಿ, ಮತ್ತು ಗರ್ಭಾಶಯದಲ್ಲಿ ಗರ್ಭಧಾರಣೆಯ ಶಕ್ತಿ ಉಂಟಾಗುತ್ತದೆ.

ಪ್ರೊ. ವೈದ್ಯರಾಜ ಎ. ಬಿ. ಸಿದನಾಳ, ೧೩೮೯ G ಬಸವಣಗಲ್ಲಿ, ಬೆಳಗಾವಿ.



ಸಂಪಾದಕರು: ಎನ್. ಕೆ. ಕುಲಕರ್ಣಿ, ಎಂ. ಎ. ಗದಗ

ವರುಷ ೧] ಜೂಲೈ ೧೯೩೯ [ಸಂಚಿಕೆ ೭

ಸಾರ್ವಜನಿಕ ಪುಸ್ತಕ ಭಂಡಾರ
ಹರಿಹರಪುರ ಪೋಸ್ಟ
(ಕೊಪ್ಪ-ಕಡೂರು.)
ಬಿಕ್ಕಳಿ

ಹೂತ್ತದ ಹುಣಿಸೆ

ಹೂತ್ತುವ ಹುಣಸೆಯಾ ಚಿಗುರು
ಮದರಂಗಿ ಬಣ್ಣದುಗುರು
ರುಚಿಗೆ ಹುಳಿಯೊಗರು
ನೋಡ್ಯೆ ಜೀವಕ್ಕೆನಿಸಿತ ಹಗರು ॥೧॥ ಹೂತ್ತುದ

ಉಗುರ್ಗೆಂಪು ಹಸಿರು ಬಿಳಿನಿಂಬಿ
ಹುಣಸೆಯಾ ರೆಂಬಿ
ಚಿಗಿತಿತೆನೊ ಎಂಬಿ
ಕಾಮುನ ಬಿಲ್ಲಿನ ಕೊಂಬಿ ॥೨॥ ಹೂತ್ತುದ

ಬ್ಯಾಸಿಗಿ ಹೊಡೆದುದ ಬಿಸಿಲಿನ ಡೇರೆ
ಮಧ್ಯಾನ್ಹದ ಪಾಹರೆ
ಯಾರಿಗಿಲ್ಲ ಹ್ಯಾರೆ
ಸದ್ದು ಸುಳಿವು ಇಲ್ಲ ಬ್ಯಾರೆ ॥೩॥ ಹೂತ್ತುದ

ಸುಳ್ಳಸುಳ್ಳ ಗಾಳಿ ಹಾಕಿತು ಸಿಳ್ಳು
ಕಾಗಿ ಚುಂಬಿನ ಹಳ್ಳು
ಬಿದ್ದು ಅಂತ್ಯು 'ಹೊಳ್ಳು'
ಮೈಚಾಚ್ಯದ ಹುಣಸೆಯ ನೆಳ್ಳು ॥೪॥ ಹೂತ್ತುದ

ಅಡ್ಡಾಗತೇನಿ ನೆಳ್ಳಾಗ ಹೀಂಗ
ಹುವ್ವು ಚಿಗುರು ಹ್ಯಾಂಗ
ಅವ ಹಾಸಿಧಾಂಗ
ಹುಳಿ ಚಿಗುರು ಸುರಿಸಿನಾದಂಗ ॥೫॥ ಹೂತ್ತುದ

ಬಿಸಿಲ್ಗುದುರಿ ಕುಣಿಯಲಿ ದೂರ
ಯಾರಿಗೆ ಬೇಕು ನೀರ
ಹೀಂಗ ನಿನ್ನಿದಿರ
ಕಣ್ಣಳತಿಯೊಳಗ ನೀ ಬಾರ ॥೬॥ ಹೂತ್ತುದ

ಹಾರತಿರಲಿ ಗಾಳಿಗೆ ಬಿಚ್ಚಿಪ್ಪೆರಳು
ವಾರಿಯಿರಲಿ ಕೊರಳು
ಬಾಚತಿರಲಿ ಬೆರಳು
ನೋಡ್ತೇನಿ ನಿನ್ನ ಕವಿನೆರಳು ॥೭॥ ಹೂತ್ತುದ

ಕಣ್ಣಿಕಣ್ಣಿ ಚಕಮಕಿ ಇತ್ತ
ಕುಡಿಗಣ್ಣಿನತ್ತ
ತಾಕಿ ಹಾರಿತ್ತ
ಗಾಳಿ ಸಹಾರಿಗ್ಹೊರಟಿತು ಬೆತ್ತ ॥೮॥ ಹೂತ್ತುದ

ಆಗೊ ಗಾಳಿದೂಳಿಯಾ ಬಿಂಬ
ನಿಂತಾಂಗದ ಖಂಬ
ಅಲ್ಲಿ ರೌದಿ ತುಂಬ
ಗಣಿಕುಣಿಸಿಧಾಂಗ ಡಂಬರ ರಂಬ ॥೯॥ ಹೂತ್ತುದ

ಮ್ಯಾಲೆ ಅಲ್ಲಿ ಪಾರಿವಾಳ ಜೋಡಿ
ಒಂದಕ್ಕೊಂದ ನೋಡಿ
ಬಿಸಿಲ ತೆರೆಮೂಡಿ
ಹಾರ್ತದ ನೀಲಿ ಮುಗಿಲ್ಮಾಡಿ ॥೧೦॥ ಹೂತ್ತುದ

ಕಂಡಾಂಗಾತು ನೀರಿನ ಕೊಳ
ನೀಲಿ ಮುಗಿಲ ಜಳಾ
ಎಂಥ ಝಳಝಳಾ
ಮುಳುಮುಳುಗಿ ಹೋತು ಮನ್ ಧೂಳಾ॥೧೧॥ ಹೂತ್ತುದ

ಕಾಲ ಹೋಗತಿತ್ತ ಹಿಂದ ಸರದು
ಮನಸು ಆತ ಬರಿದು
ಮಧ್ಯಾನ್ ಬ್ಯಾಸರ ಮುರಿದು
ಬಿಸಿಲ ತಾನ ಹೋಗತಿತ್ತ ಹರಿದು ॥೧೨॥ ಹೂತ್ತುದ

ಕವಿ ಜೀವದ ಬ್ಯಾಸರ ಹರಿಸಾಕ
ಹಾಡ ನುಡಿಸಾಕ
ಹೆಚ್ಚಿಗೇನು ಬೇಕ
ಒಂದು ಹೂತ ಹುಣಸಿಮರ ಸಾಕ ॥೧೩॥ ಹೂತ್ತುದ

—ಅಂಬಿಕಾತನಯ ದತ್ತ

ಜೂಜಿನ ಮೋಜು

ಪ್ರೊ. ಎನ್. ಎಂ. ಕುಲಕರ್ಣಿ, ಎಂ.ಎ.
ಬನಾರಸ ಹಿಂದೂ ಯುನಿವರ್ಸಿಟಿ

ಕುರವತ್ತಿ ಜಾತ್ರೆಯನ್ನು ಮುಗಿಸಿಕೊಂಡು ಪರತ ಬಂದ ಜನರೆಲ್ಲ ನಮ್ಮ ಹಳ್ಳಿಯ ಚಾವಡಿಯಲ್ಲಿ ನಿಲ್ಲದೇ ಮುಂದಕ್ಕೆ ಹೋಗುತ್ತಿರಲಿಲ್ಲ. ಚಾವಡಿಯ ಮುಂದೆ ವಿಶಾಲವಾದ ಆಲದ ಮರವಿದ್ದು ಅದರಡಿಯಲ್ಲಿ ವಿಶ್ರಮಿಸಿ ಕೊಂಡು ತಮ್ಮ ತಮ್ಮ ಸ್ಥಳಗಳಿಗೆ ಹೊರಡುತ್ತಿದ್ದರು. ಹೋದ ವರ್ಷದ ಜಾತ್ರೆಯಲ್ಲಿ ನಮ್ಮ ಹಳ್ಳಿಯ 'ವಿಶ್ರಾಂತಿ-ಗ್ರಹ'ದ ಯಜಮಾನ ಆಂದಾನೆಪ್ಪ ತನ್ನ ಆಂಗಡಿಯನ್ನು ಕುರವತ್ತಿಗೆ ಒಯ್ದು ಚನ್ನಾಗಿ ದುಡಿದುಕೊಂಡು ಬಂದಿದ್ದ. ಅಲ್ಲದೇ ಜಾತ್ರೆಯಲ್ಲಿ ಒಂದು ಮೋಜಿನ ಜೂಜಿನಲ್ಲಿ ಪಾತ್ರ ವಹಿಸಿದ್ದ. ಆ ಸಂಗತಿಯನ್ನು ಆ ವ ನ ಬಾಯಿಂದಲೇ ಕೇಳಬೇಕು. ಅಷ್ಟು ಉತ್ಸಾಹದಿಂದ ಆವನು ಹೇಳುವದು. ಅದನ್ನು ಕೇಳಿದವರೆಲ್ಲರೂ ಹೊಟ್ಟೆ ಹಣ್ಣಾಗುವಂತೆ ನಗುತ್ತ ಲಿದ್ದರು. ನಾನು ಒಂದು ದಿನ ಚಾವಡಿಯಲ್ಲಿ ಕುಳಿತಾಗ ಆದೇ ಜೂಜಿನ ವೃತ್ತಾಂತ ಹೇಳುತ್ತಿದ್ದ. ಅಷ್ಟರಲ್ಲಿ ಓರ್ವ ವ್ಯಕ್ತಿ ಕೇಳಿದ:

" ನಿನ್ನೆ ನಮ್ಮ ಹಳ್ಳಿಯ ಪಂದ್ಯಾಟವಾಯಿತಲ್ಲ, ಏನು ಚಮತ್ಕಾರದ ಆಟವಾಡಿದರು ನಮ್ಮ ಹುಡುಗುರು ? ಏನು ಹಾರೋದು, ಜಿಗಿಯೋದು; ಮಂಗ ಹಾರಲಿಕ್ಕಿಲ್ರಿ ಹಾಂಗ!"

" ಈಗಿನ ಹುಡುಗರೇ ಹಾಂಗ್ರಿ, ಮಲ್ಲಪ್ಪಾ; ಅದೇನೋ ಹೇಳ್ತಾರಲ್ಲ ಈ ಕಲ್ತ ಜನ, ನಾವೇ ನೋ ಮಂಗನ ಮೊಮ್ಮಕ್ಕಳಂತೆ; ಇದ್ದರೂ ಯಾಕರ ಬಾರದು ?" ಅಂತ ಇನ್ನೊಬ್ಬ ವ್ಯಕ್ತಿ ತುಂಬಾ ಬಲ್ಲವನಂತೆ ಕೇಳಿದ.

" ಕೇಳಿದಿರಾ, ಅಂದಾನಪ್ಪಾ, ಈ ಹುಡುಗರ ಆಟಾ ?" ಮಲ್ಲಪ್ಪ ಪ್ರಶ್ನೆಮಾಡಿದ.

" ಹುಡುಗರ ಆಟಾ ಕೇಳಿದ್ದೇನೆ ಸ್ವಾಮಿ, ಆದರೆ ದೊಡ್ಡವರ ಓಟಾ ನೀವು ಕೇಳಿದಂತೆ ಕಾಣಲಿಲ್ಲ. ನಾನು ಕುರವತ್ತೀ ಜಾತ್ರೆಗೆ ಹೋದಾಗ ಓರ್ವ ವ್ಯಕ್ತಿ ಒಂದುಪಣ ಕಟ್ಟಿದ್ದ; ಒಂದು ಮೈಲು ಓಡಲಿಕ್ಕೆ ಒಬ್ಬನಿಗೆ ಎಷ್ಟು ನಿಮಿಷ ಬೇಕು ಅಂತಾ...."

" ಅವಶ್ಯವಾಗಿ ಹೇಳಬೇಕು ಅಂದಾನೆಪ್ಪ, ಯಾರು ಗೆದ್ದರು, ಎಂಥಾ ಪಣಾ ?"

ಅಂದಾನೆಪ್ಪ ತಾಂಬೂಲ ಹಾಕುತ್ತ ಈ ಪ್ರಕಾರ ತನ್ನ ಅನುಭವ ಹೇಳಿದ.

" ಕುರವತ್ತೀ ಜಾತ್ರೆಗೆ ನಮ್ಮ 'ವಿ ಶ್ರಾ ಂ ತಿ ಗ್ರ ಹ' ಒಯ್ದಿದ್ದೆವಷ್ಟೇ; ಒಂದು ದಿನ ನಮ್ಮ ಅಂಗಡಿಗೆ ಮೂರು ಗಿರಾಕಿಗಳು ಬಂದು ಇ ಳ ಕೊ ಂ ಡ ರು. ಒಬ್ಬನ ಹೆಸರು ಜಿಗಳೆಪ್ಪ. ಇನ್ನಿಬ್ಬರು ಇವನ ಗೆಳೆಯರು. ಜಿಗಳೆಪ್ಪ ಜಾತ್ರೆ ಯಲ್ಲಿ ಜೂಜಾಟದ ಆಸಾಮಿ. ತಾನು ಹಿಡಿದ ಪಣವನ್ನು ಜಿಗಳೆಯಂತೆ ಸಾಧಿಸುತ್ತಿದ್ದದರಿಂದ ಇವನಿಗೆ ಜೂಜಿನ ಜಿಗಳೆಪ್ಪ ಅಂತಾ ಅನ್ವರ್ಥಕನಾಮ ಬಂದಿತ್ತು. ಇವನ ಆಟಗಳೂ, ಶರ್ತುಗಳೂ ಅನೇಕ ರೂಪ ಹೊಂದುತ್ತಿದ್ದವು. ಇಸ್ಪೇಟು, ಬಿಲ್ಲೀ ತೂರುವದು, ಸರಿ ಬೆಸ ಆಡುವದು, ನೊಣಬಿಲ್ಲಿ ಆಟ, ಲೆತ್ತ...."

" ಅದೇನ್ರಿ, ನೊಣಬಿಲ್ಲಿ ಎನೋ ಅಂದ್ರೆಲ್ಲ ?"

" ಅದೂ ಒಂದು ಜೂಜಿನಾಟ ಸ್ವಾಮೀ. ನಾಲ್ಕುಮಂದಿ ಕೂಡುವದು; ಎರಡು ಬಿಲ್ಲಿ ನೆಲದ ಮೇಲೆ ಇಡುವದು; ಹಾರುವ ನೊಣಗಳಲ್ಲಿ ಯಾವನ ಬಿಲ್ಲಿಯ ಮೇಲೆ ಕೂಡು-ವವೋ ಅವನೇ ಗೆದ್ದಂತೆ! ಇದರಂತೆ ಜಿಗಳೆಪ್ಪ ಅನೇಕ ರೀತಿ ಪಣ ಕಟ್ಟುತ್ತಿದ್ದ. ಇದು ಅವನ ದೈನಿಕ ಧಂದೆ. ಮುಖ್ಯವಾಗಿ ಜಾತ್ರೆಗಳಲ್ಲಿ ಇವನ ಆಟ ಹೆಚ್ಚು. ಇವನ ಗೆಳೆಯರು ಜೂಜಾಟದಲ್ಲಿ ಸಹಾಯಕರು. ಜಿಗಳೆಪ್ಪನಿಗೆ ಪಣ ಕಟ್ಟುವದೆಂದರೆ ಒಂದು ಮೃ ಷ್ಟಾ ನ್ನ ಭೋಜನ-ವಿದ್ದಂತೆ. ಅವನ ಪಣದ ಚಮತ್ಕೃತಿ ಚಾತುರ್ಯಕ್ಕೆ ಎಣೆ ಇರಲಿಲ್ಲ. ಯಾವ ಆಟವೂ ಸಾಗದ ಹಾಗಿದ್ದರೆ ನೊಣ, ಇರುವೆ, ಜೊಂಡಿಂಗ, ಹಲ್ಲಿಗಳ ಕೂಡ ಶರ್ತುಕಟ್ಟುತ್ತಿದ್ದ!"

" ಜಾತ್ರಿ ಮುಗಿಯು ಮುನ್ನಾದಿನ ಜಿಗಳೆಪ್ಪ ನಮ್ಮ ಅಂಗಡಿಯಲ್ಲಿ ಕುಳಿತಿದ್ದ. ಯಾರೋ ಒಬ್ಬರು ಓಡುವ ಶರ್ತಿನ ವಿಷಯಕ್ಕೆ ಮಾತನಾಡುತ್ತಿದ್ದರು. ಜಿಗಳೆಪ್ಪನ

ಕಿವಿ ನೆಟ್ಟಗಾದವು. "ಏನು ಸ್ವಾಮಿ, ನಿಮ್ಮೂರಲ್ಲಿ ಓಡುವ ಗಡಿಗಳಿವೆಯೇ?" ಅಂತ ಕೇಳಿದ. "ಉಂಟ್ರಿ, ಉಂಟು. ನಮ್ಮ ಸಾಲೀಕೇರಿ ಸಂಗ ೫ ಮಿನಿಟಿನ್ಯಾಗ ಒಂದು ಮೈಲು ಓಡತಾನ!" ಏನಂದ್ರಿ, ಐದೇ ಮಿನಿಟಿನಾಗ? ಸ್ವಲ್ಪ ವಿಚಾರಿಸಿ ಹೇಳ್ರಿ ಸ್ವಾಮಿ; ಎಲುವಿಲ್ಲದ ನಾಲಿಗಿ ಅಂತ ಏನೇನಾರ ಹೇಳಬ್ಯಾಡ್ರಿ" ಅಂತ ಜಿಗಳಿಪ್ಪ ಅಂದ. "ನಾ ಏನ್ ಬುಲ್ಡೀ ಹೊಡ್ಯಾವಾ ಅಂತಾ ಮಾಡೀ ಏನಪಾ ಯಜಮಾನಾ, ಕೇಳ್ಯಾರ ಕೇಳು ಈ ಅಂದಾನೆಪ್ಪನ್ನಾ" ಅಂತ ಸ್ವಲ್ಪ ಶಿಟ್ಟಿನಲ್ಲಿಯೇ ಹೇಳಿದ ವ್ಯಕ್ತಿ. ಆ ಮೇಲೆ ನಾನು ಹೇಳಬೇಕಾಯಿತಷ್ಟೇ?" "ಹೌದ್ರಿ ಜಿಗಳಿಪ್ಪ, ಈ ಊರ ಸಂಗ ಓಡೋದರಾಗ ಜೋರಿದ್ದಾನ ಅಂತಾ ಕೇಳೀನಿ. ೫ ಯಾಕ ಳಳ್ಳಿ ಮಿನೀಟಿನಾಗ ಒಂದು ಮೈಲು ನಿದಾನವಾಗಿ ಓಡಬಲ್ಲ" ಅಂತ ವಿಶ್ವಾಸದಿಂದ ಹೇಳಿದೆ. ಜಿಗಳಿಪ್ಪಗೆ ಆ ದಿನ ಯಾರೂ ಜೂಜು ಆಡೋರು ಸಿಕ್ಕಿದ್ದಿಲ್ಲ ಅಂತ ಕಾಣ್ತದೆ. ಒಳ್ಳೇ ಗಿರಾಕಿ ಸಿಕ್ಕಿತು ಅಂದವನೇ ಪುನಃ ಕೇಳಿದ: "ಹಾಗಾದರೆ ಇದಕ್ಕೆ ಶರ್ತ ಏನ್ರೀ, ಮಾಲೀಕರೇ?" ಆ ಮೇಲೆ ನಾನು ಅಂದೆ: "ಏನು ಸ್ವಾಮಿ, ನಾನು ಶರ್ತಗಿರ್ತು ಯಾವದೂ ಕಟ್ಟಿದವ ಅಲ್ಲ. ಆದರೂ ನೀವ್ಯಾಕೋ ಬಹಳೇ ಸಂಶಯದವ್ರು ಅಂತಾ ನಿಮಗೆ ಖಾತ್ರಿಮಾಡಿಕೊಡಲಿಕ್ಕೆ ಶರ್ತಿಗೆ ಕಬೂಲ. ನಾಳೆ ಮುಂಜಾನೆ ಈ ಊರ ಆಗಸೀ ಮುಂದಿನ ೨ಳ ಮತ್ತು ೫ನೇ ಮೈಲಿ ಕಲ್ಲುಗಳ ನಡುವೆ ಸಂಗನ ಓಟ ಆಗೇಬಿಡಲಿ. ವೇಳೆ ಳ ಮಿನೀಟ ಳ೫ ಸೇಕಂದು. ಶರ್ತಿನ ರಕಂ ನಾವು ಸೋತರೆ ೧೦೦ ರೂಪಾಯಿ; ನೀವು ಸೋತರೆ ಅದೇ ರಕಂ ನಮಗೆ ಕೊಡಬೇಕು. ಕಬೂಲೇ ಸ್ವಾಮಿ?" "ಅಗತ್ಯವಾಗಿ, ಮಾಲೀಕರೇ; ಇದಕ್ಕೆ ಇಲ್ಲಿದ್ದವರೇ ಸಾಕ್ಷೀ" ಅಂತಾ ಜಿಗಳಿಪ್ಪ ಹೇಳಿ ತನ್ನ ಗೆಳೆಯರೊಂದಿಗೆ ತುಂಬಾ ಉತ್ಸಾಹದಿಂದ ಜಾತ್ರೆಯಲ್ಲಿ ಹೊರಟ.

ಜಿಗಳಿಪ್ಪನ ಈ ಉತ್ಸಾಹ ಇವನ ಗೆಳೆಯರಿಗೆ ಆಶ್ಚರ್ಯವೆನಿಸಿತು. ತಮ್ಮ ದೇವರ ಸತ್ಯ ತಮಗೆ ಗೊತ್ತಿಲ್ಲವೇ? "ಅದೇನ್ರಿ, ಇಷ್ಟು ವಿಶ್ವಾಸದಿಂದ ನೂರು ರೂಪಾಯಿ ಶರ್ತು ಕಟ್ಟಿ ಬಿಟ್ರೀ. ಒಂದು ವೇಳೆ ನಾವು ಸೋತರೆ ಎಲ್ಲಿಂದ ಕೊಡುವದು? ನಮ್ಮಲ್ಲಿ ನೂರು ಬಿಲ್ಲಿ ಕೂಡ ಉಳಿದಿಲ್ಲ. ಅಲ್ಲದೇ ಅಂಗಡೀ ಮಾಲಿಕ ಪಠಾಣರಂತೆ ಇದ್ದಾನೆ. ಉದ್ರೀ ಬಿಲ್ಲಿ ಕೂಡಾ ಬಿಟ್ಟವನಲ್ಲ ಅವ; ಇದೇನು ಮಾಡಿದಿರಿ?" ಜಿಗಳಿಪ್ಪ ಒಳ್ಳೇ ಆಪ್ಯತೆಯಿಂದ ಹೇಳಿದ: "ನಾನು ಜೂಜಿನಲ್ಲಿ ಸೋತದ್ದು ಎಂದಾರೂ ಕಂಡೀರೇನು ನೀವು? ಈಗ ಇಪ್ಪತ್ತು ವರ್ಷಾಯಿತು ನಮ್ಮಾನಿಮ್ಮಾ ದೋಸ್ತಿ. ಅಷ್ಟು ಖಾತ್ರಿ ಇಲ್ಲದೇ ಕಟ್ಟೇನೇ ಶರ್ತು? ನಿಮಗಿನ್ನೂ ತುಂಬಾ ಅನುಭವ ಬಂದಿಲ್ಲ ನಮ್ಮ ಧಂದೇದಾಗ. ಈ ಓಟಾ ನಾಲ್ಕೂ ಮುಕ್ಕಾಲ ಮಿನೀಟಿನಲ್ಲಿ ಆಗಲಿಕ್ಕೆ ಶಕ್ಯವೇ ಇಲ್ಲಾ. ಅಲ್ಪ-ಸ್ವಲ್ಪ ಸಾಧ್ಯವಿದ್ದರೂ ಅದು ಸಾಧಿಸದಂತೆ ವ್ಯವಸ್ಥೆ ಮಾಡುವದು ನಮ್ಮ ಈ ದಿನದ ಕೆಲಸ. ಅಂಗಡೀ ಮಾಲೀಕ ಯಾಕೋ ವಿಶ್ವಾಸಿ ಅಲ್ಲ ಅಂತಾ ನನಗೆ ತೋರಬಂತು. ಬರೇ ಬರೇ ಒಂದು ಮೈಲು ಅನ್ನುವದು ಬಿಟ್ಟು, ನಿರ್ದಿಷ್ಟವಾಗಿ ೨ಳನೇ ಮತ್ತು ೫ನೇ ಮೈಲಿಕಲ್ಲುಗಳ ನಡುವೇ ಏಕೆ ಓಡುವದು? ಆಗ ನನಗೆ ಹೊಳೆಯಿತು ಒಂದು ವಿಚಾರ. ಈ ಮೈಲಿಕಲ್ಲುಗಳ ನಡುವಿನ ಹಾದಿ ಮೈಲಿಗಿಂತ ಕಮ್ಮಿ ಇರಲಿಕ್ಕೇ ಬೇಕು ಅಂತಾ. ನಾವು ಈ ರಾತ್ರಿ ಅಲ್ಲಿ ಹೋಗಿ ಒಂದು ಕಲ್ಲನ್ನು ಎತ್ತಿ ೩-೪ ಫರ್ಲಾಂಗು ದೂರದಲ್ಲಿ ಕೂಡಿಸಬೇಕು ತಿಳಿಯಿತೇ? ನಾವೇನು ಈ ಊರವರಲ್ಲ. ನಮ್ಮ ಮೇಲೆ ಯಾರೂ ಸಂಶಯ ಪಡಲು ಶಕ್ಯವಿಲ್ಲ. ನಾಲ್ಕೂ ಮುಕ್ಕಾಲು ಮಿನೀಟಿನಲ್ಲಿ ಒಂದೂವರೆ ಮೈಲು ಓಡುವದೆಂದರೆ ಸಂಗನ್ನ ಬಿಟ್ಟು ಮುಂಗನಿಗೂ ಸಾಧ್ಯವಿಲ್ಲ. ಒಂದು ವೇಳೆ ಆ ಎರಡು ಕಲ್ಲುಗಳ ನಡುವಿನ ಹಾದಿ ಮೈಲಿಗಿಂತ ಹೆಚ್ಚಾಗಿದೆ ಎಂದು ತಿಳಿದರೂ ನಮ್ಮ ರಕಮಿಗೆ ಧೋಕಾ ಇಲ್ಲ. ನಮ್ಮ ಶರ್ತು ನಿರ್ದಿಷ್ಟವಾಗಿ ೨ಳನೇ ಮತ್ತು ೫ನೇ ಮೈಲಿಕಲ್ಲುಗಳ ನಡುವೆ ಅಂತಾ ಇದೆ. ಮತ್ತು ಶರ್ತನ್ನು ಮಾಲೀಕನೇ ಕಟ್ಟಿದ್ದಾನೆ. ಅಂದಮೇಲೆ ಈ ಶರ್ತಿನಿಂದ ನಾವು ೧೦೦ ರೂಪಾಯಿ ದುಡಿಯುವದಲ್ಲದೇ, ಡಿಸ್ಟ್ರಿಕ್ಟ ಲೋಕಲ್ ಬೋಡಿನವರಿಗೆ ಸಹಾಯ ಮಾಡಿಕೊಟ್ಟಂತಾಗುತ್ತದೆ. ವಿಚಾರಿಸಿದಹಾಗೆಲ್ಲ ನನಗಂತೂ ಈ ಕಲ್ಲುಗಳ ನಡುವಿನ ದಾರಿ ಮೈಲಿಗಿಂತ ನಿಜವಾಗಿಯೂ ಕಮ್ಮಿ ಇರಲೇಬೇಕೆಂದು ನಿಶ್ಚಯವಾಗುತ್ತಲಿದೆ. ಸೋಲುವ ಹೆದರಿಕೆ ನಮಗ್ಯಾಕ?" ಅನ್ನುತ್ತ ಗೆಳೆಯರನ್ನು ಹುರಿದುಂಬಿಸಿದ. ಗೆಳೆಯರು ಇಂಥ ವಿಚಾರಸರಣಿಯ ಮೇಂದುವನ್ನು ನಿಜವಾಗಿಯೂ ಅಮೇರಿಕೆಗೇ ಕಳಿಸಬೇಕೆಂದು ನಿರ್ಧರಿಸಿ, ಜಿಗಳಿಪ್ಪನ ಚಾತುರ್ಯವನ್ನು ಪದೇಪದೇ ಹೊಗಳುತ್ತ ಒಳ್ಳೇ ಮೋಜಿನಿಂದ ಸಾಯಂಕಾಲದ ವರೆಗೆ ಜಾತ್ರೆಯಲ್ಲಿ ಅತ್ತಿತ್ತ ತಿರುಗಾಡಿ ಪುನಃ ಅಂದಾನೆಪ್ಪನ ಅಂಗಡಿಗೆ ರಾತ್ರಿ ಊಟಕ್ಕೆ ಬಂದರು. ಸರಿಯಾಗಿ ಊಟ ಮಾಡಿಕೊಂಡು ರಾತ್ರಿ ಯಾವುದೋ ನಾಟಕ ನೋಡಲು

ಹೋಗುತ್ತೇವೆಂದು ಹೇಳಿ ತಮ್ಮ ಮೈಲಿಕಲ್ಲಿನ ನಾಟಕದ ಕಡೆಗೆ ತಿರಳಿದರು.

ಕೃಷ್ಣಪಕ್ಷವಾಗಿದ್ದು ಹೊರಗೆ ಕತ್ತಲು ಚನ್ನಾಗಿಯೇ ಹಬ್ಬಿತ್ತು. ಗಾಳಿಯೂ ಜೋರಾಗಿ ಬೀಸುತ್ತಿತ್ತು. ಜಾತ್ರೆಯ ಜನರೆಲ್ಲ ನಾಟಕ ಸರ್ಕಸ್ಸುಗಳಲ್ಲಿ ಕೂಡಹತ್ತಿದ್ದರು. ಅಂತೂ ಜಿಗಳೆಪ್ಪನ ಕಾರ್ಯಕ್ಕೆ ಯಾವ ರೀತಿಯಿಂದಲೂ ತೊಂದರೆಯಾಗುವಂತಿರಲಿಲ್ಲ. ಆಗಸೆಯ ಮುಂಬೆ ನಿ:ಶಬ್ದವಾಗಿತ್ತು. ಒಬ್ಬರೂ ಇದ್ದಿಲ್ಲ. ಕತ್ತಲು ಬೇರೆ. ಸರಿ. ಜಿಗಳೆಪ್ಪ ಸಲಕಿ-ಗುದ್ದಲಿ-ಹೆಗ್ಗ ದೊರಕಿಸಲಿಕ್ಕೆ ಅತ್ತಿತ್ತ ಹುಡುಕುತ್ತಿರುವಾಗ ಅಲ್ಲಿಯೇ ಇದ್ದ ಒಂದು ತೋಟದಲ್ಲಿ ಹೊಕ್ಕ. ಗೆಳೆಯರಿಗೆ ಬೇಲೆಯ ಹೊರಗೇ ನಿಲ್ಲಲಿಕ್ಕೆ ಹೇಳಿ ತೋಟದ ಗುಡಸಲಿನ ಹಿಂದೆ ಹೋದ. ಎಲ್ಲ ಸಾಮಾನೂ ಸಿದ್ಧವಾಗಿದ್ದವು. ತೋಟಗನೂ ಜಾತ್ರೆಯ ನಾಟಕಕ್ಕೆ ಹೋಗಿರಬಹುದೆಂದು ತಿಳಿದು ಸಲಕಿ ಗುದ್ದಲಿ ತಗೊಂಡು ಗೆಳೆಯರಿದ್ದಲ್ಲಿ ಬಂದ. ಬೇಲಿಯಿಂದ ಹೊರಗೆ ಬಂದವನೇ ಮೈಲಿಕಲ್ಲಿನ ಕಡೆಗೆ ಹೊರಡುವಷ್ಟರಲ್ಲಿ ಆದಾರೋ ಬೆನ್ನಹಿಂದೆ ಅಂಗಿಯನ್ನು ಜಗ್ಗಿದರು. ಕೈಯೆಲ್ಲಿಯ ಗುದ್ದಲಿ ಒಗೆದವನೇ ತಿರುಗಿ ನೋಡಿದ. ವ್ಯಕ್ತಿ ಅಂತು: "ಏನು ಸ್ವಾಮಿ, ಜಾತ್ರೀಗದ್ದಲದಾಗ ಏನು ಮಾಡಿದರೂ ನಡೀತದಂತಾ ತಿಳಿದೀರೇನು? ಒಳ್ಳೇ ಕೆಲಸಾ ನಿಮ್ಮದು; ಯಾರಮನೀ ಹಾಳಮಾಡಬೇಕೆಂದು ಮಾಡೀರಿ? ಈ ಸಂಗ್ರಹ ಎಲ್ಲಿಗೆ ಎತ್ತಹತ್ತೀರಿ?" ಜಿಗಳೆಪ್ಪನು ಚತುರನೆಂದು ಮೊದಲೇ ಹೇಳಿದೆಯಷ್ಟೆ? ಎಂಥ ಹೊತ್ತಿನಲ್ಲಿಯೂ ಅವನು ಎದೆಗುಂದಿದವನಲ್ಲ. "ನಿಮ್ಮಲ್ಲಿಗೇ ಬಂದಿದ್ದೆ, ತೋಟದಪ್ಪಾ; ಇದೇ ಈಗ ನಮ್ಮದೊಂದು ನಾಯಿ ಸತ್ತಿದೆ; ಪ್ರೀತಿಯಿಂದ ಸಾಕಿದ ನಾಯಿಗೆ ಮಣ್ಣು ಕೊಡಲಿಕ್ಕೆಂದು ಬಂದೇವಿ. ಗುಡಿಸಲಲ್ಲಿ ನೋಡಿದೆ ಯಾರೂ ಕಾಣಲಿಲ್ಲ. ಮಣ್ಣು-ಕೊಟ್ಟವರೇ ಪುನಃ ನಿನ್ನ ಸಲಕೀ ಗುದ್ಲೀ ಇಲ್ಲೇ ತಂದು ಇಡ್ತೇವಿ. ನಾವು ಪರಸ್ಥಳದವರು, ತಿಳಿಯಿತೇ?" ಅಂತಾ ಹೇಳಿದ. "ನಾ ಏನು ನಾಯೀ ಹುಗಿಯಾಕ ಇಟ್ಟೀನೆಂದು ಮಾಡಿಯೇನಪಾ ಗುದ್ಲೀನಾ; ಸುಮಾಕ ಇಟ್ಟಬಿಡು ಅಲ್ಲೇ; ಬೇಕಾಗಿದ್ರ ಪ್ಯಾಟ್ಯಾಗ ಹೋಗಿ ಕೊಂಡಕೊಂಡಬಾ; ಈಗೇನು ಜ್ಯಾತ್ಯಾಗ ಬೇಕಾದಷ್ಟು ಕಬ್ಬಿಣದ ಅಂಗಡಿ" ಅಂತಾ ತೋಟದಪ್ಪ ಹೇಳಿದ. "ಹಾಗ ಅನಬಾರದಪಾ ಮಣ್ಣಾಕೊಡೋ ಕೆಲ್ಸಕ್ಕ ತೋಟದಪ್ಪಾ; ರಾತ್ರಿವ್ಯಾಳ್ಯಾ; ಎರಡೇ ಮಿನಿಟಿನ ಕೆಲಸೈತಿ; ಗುದ್ಲಿಗೇನು ಭಾಡಿಗಿ ಕ್ಯೇಕ್ತೀ ಕೇಳು. ಸುಮ್ಮನೇ ಅವ್ಯಾಳ್ಯಾದಾಗ ತ್ರಾಸ ಕೊಡಬೇಡಾ ಪರಳೂರವರಿಗೆ; ಇದೋ ಎರಡು ರೂಪಾಯಿ ತಗೋ" ಅಂತಾ ಜಿಗಳೆಪ್ಪ ರೂಪಾಯಿ ಕೊಡಹೋದ "ಸತ್ತನಾಯಿ ಹುಗಿದ ಸಲಕೀ ಗುದ್ಲೀ ತಿರುಗಿ ನಾ ಏನು ಮುಟ್ಟಾವಲ್ಲಪ್ಪೋ; ನಂಲ್ಕು ರೂಪಾಯಿ ಕೊಟ್ರೀ ಸೈ ನೋಡು" ಅಂದಾ. ಸರಿ ಜಿಗಳೆಪ್ಪಗೆ ವ್ಯಾಪಾರ ಮಾಡುತ್ತ ನಿಲ್ಲುವ ವೇಳೆ ಇರಲಿಲ್ಲ. ಕೂಡಲೇ ನಾಲ್ಕು ರೂಪಾಯಿ ಕೊಟ್ಟು "ಇದೇ ಈಗ ತಂದಿಡ್ತೇವಿ, ಕಾಳಜೀ ಬ್ಯಾಡಾ" ಅಂತಾ ಹೇಳಿದ. ವ್ಯಕ್ತಿ ರೂಪಾಯಿ ತಕ್ಕೊಂಡು ಕತ್ತಲದಲ್ಲಿ ದೂರ ಹೋಗಿ "ಈಗ ಬಿಟ್ಟು ಮತ್ತ ನಾಕೊಪ್ಪೊತ್ತು ಇಟಕೊಳ್ಳಪ್ಪೋ ಅವನ್ನ, ಸಾಮಾನು ನನ್ನವಲ್ಲ" ಅನ್ನುತ್ತ ಮಾಯವಾದ! ಬೇರೆ ವೇಳೆಯಾಗಿದ್ದರೆ ಜಿಗಳೆಪ್ಪ ವ್ಯಕ್ತೀ ಬೆನ್ನು ಹತ್ತ ಬಹುದಾಗಿತ್ತು. ಆದರೆ ಆಗ ಹಾಗೆ ಮಾಡಲು ಶಕ್ಯವಿಲ್ಲ. ರಾತ್ರಿ ೧೧ ಹೊಡೆದಿತ್ತು. ನಾಳೆ ನೋಡೋಣಂತ ಈ ತೋಟದಪ್ಪನ್ನ ಅಂದುಕೊಂಡು ಗೆಳೆಯರೊಂದಿಗೆ ಮೈಲಿಕಲ್ಲಿನ ಹತ್ತಿರಕ್ಕೆ ಬಂದ.

ಅಷ್ಟು ಹೊತ್ತಿಗೆ ಗಾಳಿ ಜೋರಾಗಿ ಬೀಸಹತ್ತಿತ್ತು; ಆಕಾಶದಲ್ಲಿ ಮೋಡಗಳೂ ಹೆಚ್ಚಿದವು; ಕಲ್ಲಿನ ಹತ್ತಿರ ನಿಂತು ಜಿಗಳೆಪ್ಪ ಕಡ್ಡೀ ಕೆರೆದು ನೋಡಿದ. ಗಾಳಿಯಲ್ಲಿ ಇಪ್ಪತ್ತು ಕಡ್ಡೀ ಕೆರೆದರೂ ಒಂದೂ ಬೆಳಕೂ ಕೊಡಲಿಲ್ಲ. ಪೆಟ್ಟಿಗೆಯಲ್ಲಿದ್ದ ಎಲ್ಲ ಕಡ್ಡಿಗಳೂ ತೀರಿದವು. ಗೆಳೆಯರ ಹತ್ತಿರಿದ್ದ ಒಂದೇಒಂದು ಕಡ್ಡಿಯನ್ನು ತಗೊಂಡು, ಸುತ್ತಲೂ ಧೋತರಮುಚ್ಚಿಕೊಂಡು, ಒಳ್ಳೇ ಹುಷಾರಿಯಿಂದ ಕೆರೆದ. ೨ ಸೆಕಂದಿನಷ್ಟು ಬೆಳಕು ಬಿತ್ತು. "ಇದೇ ಕಲ್ಲು ಗೆಳೆಯರೇ ೨೫ನೇದು; ಆದರೆ ಇದು ಆಗಸೆಯ ಮುಂದೆಯೇ ಇದ್ದದರಿಂದ ಇದನ್ನು ಎತ್ತುವದು ಬೇಡ. ಸಂಶಯ ಬಂದೀತು. ೨೪ನೇದನ್ನು ಸರಿಸೋಣ" ಎಂದು ಹೇಳಿ ಗೆಳೆಯರೊಂದಿಗೆ ೨೪ನೇ ಮೈಲ ಕಲ್ಲಿನ ಕಡೆಗೆ ಹೊರಟ.

೨೪ನೇ ಕಲ್ಲು ಇದ್ದಲ್ಲಿ ಅನೇಕ ಸಣ್ಣ ಪುಟ್ಟ ಗಿಡಗಂಟಿಗಳು ಬೆಳೆದಿದ್ದವು. "ಜಾಗಾ ಚೆನ್ನಾಗಿದೆ ಇಲ್ಲಿ, ಆಗಿದರೆ ಸಂಶಯ ಬರಲು ಕಾರಣವಿಲ್ಲ. ಹೂ ಸುರುವು ಮಾಡ್ರಿ ಕೆಲಸಾ ಗೆಳೆಯರೇ. ಅರ್ಧ ತಾಸಿನ ಕೆಲಸಾ. ಕೂಲಿ ೧೦೦ ರೂಪಾಯಿ! ಅಲ್ಲ. ೯೬ ರೂಪಾಯಿ. ಅರ್ಧ ತಾಸಿನಲ್ಲಿ ೯೬ ರೂಪಾಯಿ ನಮ್ಮ ಗವರ್ನರ ಜನರಲ್ಲಗೂ ಶಿಗಲು ಶಕ್ಯವಿಲ್ಲ." ಎಂದು ಹುರಿದುಂಬಿಸುತ್ತ, ರಸ್ತೆಯಲ್ಲಿ ಅತ್ತಿತ್ತ ನೋಡುತ್ತ ಕುಳಿತುಕೊಂಡ. ಗೆಳೆಯರು ಗುದ್ದಲಿ ಸಲಕಿಗಳಿಂದ ಜೋರಾಗಿ ಕಲ್ಲಿನ ಸುತ್ತಲೂ ಅಗಿಯಹತ್ತಿದರು. ನೆಲವು ಬಹಳೇ ಗಟ್ಟಿಯಾಗಿತ್ತು. ಅರ್ಧಗಂಟೆ

ತೋಡಿ ಉಸ್ಸೆಂದು ಕುಳಿತರು ಜಿಗಳಿಪ್ಪ ಉತ್ಸಾಹಿಸಲು ಯತ್ನಿಸಿದ ಕಮಿಶನ್ ರಕಮನ್ನು ಹೆಚ್ಚು ಮಾಡಿದ. "ಈ ಜಾಗೆಯಲ್ಲಿ ಕಬ್ಬಿಣದ ಕಣಿಯಿದ್ದಂತೆ ಕಾಣುತ್ತದೆ. ಒಂದೊಂದು ಇಂಚು ನೆಲ ತೋಡಲಿಕ್ಕೆ ಇಪ್ಪತ್ತು ಸಲ ಗುದ್ಲೀ ಎತ್ತಬೇಕು" ಎಂದು ಒಬ್ಬ ಗೆಳೆಯ ಅಂದ. ಸಂಚಿಯಲ್ಲಿಯ ತಾಂಬೂಲ ಕೊಟ್ಟು ಜಿಗಳಿಪ್ಪ ಪುನಃ ಕೆಲಸ ಸ್ಪಾರಂಭಿಸಲು ಉತ್ತೇಜನಕೊಟ್ಟ. ಗೆಳೆಯರು ಕಮಿಶನ್ನದ ಆಶೆಗೆ ಪುನಃ ಸುರುವು ಮಾಡಿದರು. ಕೊನೆಗೆ ಎರಡು ತಾಸು ಆದ ಮೇಲೆ ಕಲ್ಲು ಸರಿದಾಡಹತ್ತಿತು. ಜಿಗಳಿಪ್ಪಗೆ ಆದ ಆನಂದ ಹೇಳಲು ಸಾಧ್ಯವಿಲ್ಲ. ಕೂಡಲೇ ಹಗ್ಗದಿಂದ ಕಲ್ಲು ಸುತ್ತಿ ಮೇಲಕ್ಕೆತ್ತಲು ಮೂವರೂ ಕೂಡಿ ಎಳೆದರು. ಕಲ್ಲು ಸಾವಕಾಶವಾಗಿ ಮೇಲಕ್ಕೆ ಬಂತು. ಇನ್ನು ಅದನ್ನು ಮೂರು-ನಾಲ್ಕು ಫರ್ಲಾಂಗು ದೂರ ಒಯ್ಯಲು ಸುರುವು ಮಾಡುತ್ತಿದ್ದರು. ಅಷ್ಟರಲ್ಲಿ ಯಾರೋ ಕೂಗಿದರು.

"ಅದರಲ್ಲಿ ನನ್ನದೂ ಅರ್ಧ ಪಾಲು, ಜೋಕೆ"! ಜಿಗಳಿಪ್ಪ ಕೈಯಲ್ಲಿದ್ದ ಹಗ್ಗ ಒಗೆದು ಅತ್ತಿತ್ತ ನೋಡಿದ. ಇದಾವ ವ್ಯಕ್ತಿಯಪಾ ಅರ್ಧ ಪಾಲು ಬಯಸುವದು? ಎಂಥ ಪಾಲು ಅದು? ಕಲ್ಲಿನ ಅರ್ಧ ಪಾಲು ಮಾಡುವದು ಹೇಗೆ, ಮುಂತಾದ ವಿಚಾರ ಅವನ 'ಅಮೇರಿಕೆ'ಯ ಮೇಂದುಸಿನಲ್ಲಿ ಒಳ್ಳೇ ಲಗುಬಗೆಯಿಂದ ಬಂದವು. ಗೆಳೆಯರಿಗೆ ಅಲ್ಲಿಯೇ ನಿಲ್ಲಲಿಕ್ಕೆ ಹೇಳಿ ಕೂಗು ಕೇಳಿದ ದಿಕ್ಕಿಗೆ ಹೊರಟ. ಸ್ವಲ್ಪ ದೂರ ಹೋಗುವದರಲ್ಲಿ ಆ ವ್ಯಕ್ತಿ ತನ್ನ ಕಡೆಗೇ ಬರುತ್ತಿತ್ತು. "ನಂದೂ ಅರ್ಧ ಪಾಲು ಆ ಹಣದಲ್ಲಿ" ಅಂತ ಪುನಃ ಹೇಳಿತು. ಜಿಗಳಿಪ್ಪ ದಂಗುಬಡೆದು ಕೇಳಿದ. "ಇದಾವ ಪಾಲು ಮಹಾತ್ಮಾ ನಿಂದು? ನಾವೇನು ದರೋಡೆ ಮಾಡಿಕೊಂಡು ಹೊರಟೀವಿ ಅಂತಾ ತಿಳಿದಿಯೇನು? ಸತ್ತ ನಾಯಿ ಹುಗಿಯಲಿಕ್ಕೆ ಹತ್ತೀನಿ, ನಾಯಿ. ಬೇಕಾದರೆ ಅರ್ಧ ಯಾಕೆ ಪೂರಾನೂ ಒಯ್ದುಬಿಡು" ಅಂತಾ ಒಳ್ಳೇ ನಟನೆಯ ಸಿಟ್ಟಿನಲ್ಲಿ ನುಡಿದ. "ಗೊತ್ತದೆ ಸ್ವಾಮೀ, ನಿಮ್ಮ ನಾಯೀ ಸಮಾಚಾರ; ನಾನು ಇಲ್ಲಿ ನಿಂತು ಈಗ ಎರಡು ತಾಸು ನೋಡಹತ್ತೀನಿ, ನಿಮ್ಮ ನಾಯಿ ಹುಗಿಯೋದನ್ನ. ಆದರೆ ಹುಗಿದೀದು ಬಿಟ್ಟು ಆದೇನೋ ಅಗಿಯಹತ್ತೀರಲ್ಲಾ. ಆ ಹಣದಾಗೇ ನನ್ನ ಅರ್ಧ ಪಾಲು ಅಂದೆ. ನಿಮ್ಮ ನಾಯಿ ಹೆಣದಾಗಲ್ಲ" ಅಂತಾ ವ್ಯಕ್ತಿ ಹೇಳಿತು. ಜಿಗಳಿಪ್ಪಗೆ ಈ ವ್ಯಕ್ತಿ ಹುಚ್ಚು ಇರಬಹುದು ಅನಿಸಿತು. ಅವನನ್ನು ಸಮಾಧಾನ ಮಾಡಬೇಕೆಂದು ಸಂಚೀ ಬಿಚ್ಚಿದ. ಪುನಃ ವ್ಯಕ್ತಿ ಸುರುವು ಮಾಡಿತು: "ನಮ್ಮ ಜೊಯ್ಸರ ನಿಂಗಪ್ಪ ಹೇಳಿದ್ದು ಇದೇ ಜಾಗಾ. ಇದೇ ಮಾವಿನ ಗಿಡದ ಬುಡದಾಗ ರಾಮುಟಂಕಿ ವರಾದ ಗಡಿಗೀನ ಅದಂತ. ನಾ ಇದೇ ಅವರ ಮನಿಂದಾ ಬಂದೇನಿ. ನಾನೇ ಅಗೀಬೇಕು ಅಂತಾ ಬಂದಿದ್ದೆ. ಆದ್ರೆ ನನ್ನಕಿಂತಾ ಮೊದಲು ನೀವೇ ಬಂದು ಅಗಿದು ತಯಾರಮಾಡಿದ್ದರಿಂದ, ನಾನು ಅರ್ಧ ಪಾಲಾದರೂ ಬಿಟ್ಟವಲ್ಲ. ಎಸ್ಟು ವರಹ ಸಿಕ್ಕಾನ ಹೇಳ್ರಿ" ಅಂದ, ಮತ್ತೂ ಗೆಳೆಯರು ನಿಂತ ಜಾಗಾದ ಕಡೆಗೆ ಹೊರಡಹತ್ತಿದ. ಜಿಗಳಿಪ್ಪ ಈ 'ವರಾಹ' ವೈಲಿ ಕಲ್ಲಿದ್ದಲ್ಲಿ ಹೋದರೆ ಕೆಲಸ ಕೆಟ್ಟೀತು ಅಂತಾ ಅವನ್ನ ಸಮಾಧಾನ ಮಾಡಲಿಕ್ಕೆ ಹತ್ತಿದ. "ಸ್ವಾಮೀ, ಸ್ವಲ್ಪ ವಿಚಾರಿಸಿರಿ. ನಾವು ತೋಡಿದ್ದು ವರಹಕ್ಕಲ್ಲ. ಸತ್ತ ನಾಯೀ ಹುಗೀಲಿಕ್ಕೆ. ಇನ್ನು ನೀವ ಸಂಶಯ ತಗೊಂಡು ಹಟಹಿಡಿದರೆ ಕೆಲಸ ನೆಟ್ಟಗಾಗಲಿಕ್ಕಿಲ್ಲ. ನಾವು ಮೂರು ಮಂದಿ ಇದ್ದೇವಿ. ನೀವು ಒಬ್ಬರೇ ಒಬ್ಬರು. ಅಲ್ಲದೇ ಕತ್ತಲ. ನೀವು ಒದರಿದರೂ ಕೇಳುವದಿಲ್ಲ. ಇಂಥಾ ಪ್ರಸಂಗದಲ್ಲಿ ನೀವು ಸ್ವಲ್ಪ ಹುಷಾರಿಯಿಂದ ವರ್ತಿಸಬೇಕು. ನಿಮ್ಮ ಜೊಯ್ಸರು ಪೋಟಾ-ಜೊಯ್ಸರು. ಇಲ್ಲಿ ನಾಲ್ಕು ವರ್ಷ ನೀವು ತೋಡಿದರೂ ಕಲ್ಲು ಮಣ್ಣು ಬಿಟ್ಟು ಒಂದು ಕವಡಿ ಕೂಡಾ ಸಿಗಲು ಸಾಧ್ಯವಿಲ್ಲ. ಅದ್ದರಿಂದ ನನ್ನ ಮಾತು ಕೇಳಿರಿ. ಇದೋ ಈ ಐದು ರೂಪಾಯಿ ತಗೊಂಡು ಬಾಯಿಮುಚ್ಚಿಕೊಂಡು, ಗದ್ದಲವನ್ಮಾಡದಂತೆ ನಡೆದು ಹೋಗಿರಿ. ಸುಮ್ಮನೇ ವೈ...." "ಅಡ್ಡೀ ಇಲ್ಲ ಸ್ವಾಮೀ, ನಿಮ್ಮಂತೇ ಆಗಲಿ, ಆದರೂ ನೀವು ಸಾವಿರಾರು ವರಗಳನಿಟ್ಟುಕೊಂಡು ಐದೇ ರೂಪಾಯದಲ್ಲಿ ನನ್ನ ಪಾಲು ಮುಟ್ಟಿಸುವದು ಮಹದನ್ಯಾಯ. ಆದರೂ ಏನು ಮಾಡೋದು, ಮೊದಲೇ ಬಂದಿದ್ದರೆ ನನ್ನ ಭಾಗ್ಯಕ್ಕೆ ಎಣೆಯೇ ಇರಲಿಲ್ಲ. ಆಗಲಿ ಸ್ವಾಮೀ, ನೀವೇ ದೊಡ್ಡವರಾಗಿರಿ. ಇನ್ನೊಂದು ಜಾಗಾ ಹುಡುಕಲಿಕ್ಕೆ ಹೇಳ್ತೀನಿ ನಮ್ಮ ಜೋಯ್ಸರಿಗೆ", ಅನ್ನುತ್ತ ಐದು ರೂಪಾಯಿ ನೋಟನ್ನು ತಗೊಂಡು ವ್ಯಕ್ತಿ ಹೊರಟುಹೋಯಿತು. ಕೂಡಲೇ ಜಿಗಳಿಪ್ಪ ಗಡಿಬಿಡಿಯಿಂದ ಗೆಳೆಯರಲ್ಲಿ ಬಂದು "ತಡಬೇಡ ಇನ್ನು ಮಿತ್ರರೇ, ಜಾತ್ರಿಗೆ ಹೋಗಿದ್ದರೂ, ಇಲ್ಲಿ ಯಾಕೋ ಜನರ ಗದ್ದಲ ಕಮ್ಮಿ ಇದ್ದಂತೆ ಕಾಣುವದಿಲ್ಲ. ಈಗಾಗಲೇ ಇಬ್ಬರು ಬಂದಿದ್ದರು. ೯ ರೂಪಾಯಿ ಹೋಗ್ಯಾವ. ಇನ್ನು ಮಾತ್ರ ಹೆಚ್ಚು ವಿಲಂಬ ಬೇಡಾ" ಅಂದವನೇ ಹಗ್ಗ ಹಿಡಿದು ಜೋರಿನಿಂದ ಕಲ್ಲು ಜಗ್ಗಹತ್ತಿದ. ಗೆಳೆಯರು ಕೂಡ ಜಗ್ಗುತ್ತ ಸಾವಕಾಶವಾಗಿ ಮೂರು ಫರ್ಲಾಂಗ ದೂರ ಒಯ್ದರು. ಅಲ್ಲಿಯೇ ಪುನಃ ಅದನ್ನು ಹುಗಿಯಲು ಜಾಗೆ ಹುಡುಕಹತ್ತಿದರು. ಜಿಗಳಿಪ್ಪ

ಅಂದ. "ಮೂರೇ ಫರ್ಲಾಂಗ ಸಾಕಾಗುವದಿಲ್ಲ ಗೆಳೆಯರೆ, ಆ ಮೈಲು ಕಮ್ಮಿ ದಾರಿಯದು ಇದ್ದು, ನಿದಾನ ನಾಲ್ಕು ಫರ್ಲಾಂಗಾದರೂ ದೂರ ಒಯ್ಯದಿದ್ದರೆ ಆ ಆಸಾಮಿ ಈ ದಾರೀ ಓಡಬಹುದು. ಇನ್ನೊಂದು ಫರ್ಲಾಂಗ ಮುಂದೆ ಹುಗಿಯೋಣ" ಎಂದು ಹೇಳಿದ. ಅದರಂತೆ ಪುನಃ ಮುಂದಕ್ಕೆ ಎಳೆದುಕೊಂಡು ಹೊರಟರು.

ನಾಲ್ಕು ಫರ್ಲಾಂಗ ಬಂದಮೇಲೆ ಪುನಃ ಆಗಿಯಹತ್ತಿದರು. ದೈವವಶಾತ್ ಈ ಜಾಗೆಯಲ್ಲಿ ಕಲ್ಲುಗಳು ಬಹಳ ಇರಲಿಲ್ಲ. ನೆಲವು ಹಗುರಾಗಿತ್ತು. ಗೆಳೆಯರು ಹುರುಪಿನಿಂದ ಆಗಿಯಹತ್ತಿದರು. ಜಿಗಳೆಪ್ಪ ಎಳೆದು ತಂದ ಕಲ್ಲನ್ನು ಆಗಿಯುವ ಸ್ಥಳಕ್ಕೆ ಸರಿಸುತ್ತಿದ್ದ. ಒಳ್ಳೇ ಆನಂದದಲ್ಲಿದ್ದ ಆದರೆ ದೈವವು ಜನರು ಬಹಳ ಆನಂದದಲ್ಲಿದ್ದರೆ ಅಸೂಯೆ ಪಡುತ್ತದಂತೆ. ಅಂತೆಯೇ ಜಿಗಳೆಪ್ಪನ ಆನಂದ ಬಹಳ ಹೊತ್ತಿರಲಿಲ್ಲ. ಯಾವದೋ ಒಂದು ವ್ಯಕ್ತಿ ಪುನಃ ಅಡ್ಡಾಡುತ್ತ, ಜೋಲೀ ಹೊಡಿಯುತ್ತ, ಮೈಲಿಕಲ್ಲನ್ನು ಎಡವಿ, ಹಗ್ಗದಲ್ಲಿ ಕಾಲು ಸಿಕ್ಕು, ನೆಲದ ಮೇಲೆ ಉರುಳಿಬಿತ್ತು. ಸಾವರಿಸಿಕೊಂಡು ಏಳುತ್ತ "ದಾರಿಯಲ್ಲಿ ಏನು ಕಲ್ಲಪಾ ಇದು?" ಅನ್ನುತ್ತ ಜಿಗಳೆಪ್ಪನನ್ನು ನೋಡಿತು. ಆ ಮೇಲೆ ಕಣ್ಣು ಕಿಕ್ಕುತ್ತ ಕಲ್ಲಿನ ಕಡೆಗೆ ದಿಟ್ಟಿಸಿ ನೋಡಹತ್ತಿತು. "ಅರೇ ಅಲ್ಲಾ, ಏ ಕ್ಯಾ ಮೈಲೀ ಕಲ್? ಇಸ್ಕು ಕಹಾ ಒಯ್ತಾವ ಭಾಯಿ?" ಅನ್ನುತ್ತ ಕಲ್ಲನ್ನು ಕೈಯಿಂದ ಮುಟ್ಟಿ ಪರೀಕ್ಷಿಸಿತು. ಅತ್ತಿತ್ತ ಜೋಲೀ ಹೊಡೆಯುತ್ತ ಅದರಮೇಲೆ ಕುಳಿತೇಬಿಟ್ಟಿತು. "ಏ ದೇಖ, ಹಮ್ ಕುಡ್ದೇನಿ ಅಂತಾ ಮಾಡ್ಯಾವ? ಕಭೀ ನೈ; ಹಂ ಶರಾಬ ನಹಿ ಪೀತಾ. ಶೇಂದಿ ಖರಾಬ ಚೀಜ. ಹಂ ನೈ ಪಿಯಾ ಉಸ್ಕು. ಸುನಾ? ನಾ ಕುಡ್ದಿಲ್ಲಾ...." ಅಂತ ಏನೇನೊ ಬಡಬಡಸಹತ್ತಿತು ಜಿಗಳೆಪ್ಪಗೆ ಇಂಥಾ ವ್ಯಕ್ತಿ ಯಾರೂ ಭೆಟ್ಟಿಯಾಗಿರಲಿಲ್ಲ ವ್ಯಕ್ತಿ ತುಂಬಾ ಶೆರೆಯ ಗುಂಗಿನಲ್ಲಿದ್ದಂತೆ ಕಾಣಬಂತು. "ಇಲ್ಲಿ ಕೇಳ್ರಿ ಮಿಯಾಸಾಹೇಬ್, ಈ ಕಲ್ಲನ್ನು ರಸ್ತೆಯಲ್ಲಿ ಹೂಳಲಿಕ್ಕೆ ಬಂದೇವಿ. ನಾನು ಲೋಕಲ್ ಬೋರ್ಡ ಮಿಸ್ತ್ರಿ. ಕಲ್ಲಿಗೆ ಸುಣ್ಣ ಹಚ್ಚಿ ಪುನಃ ಇದ್ದಲ್ಲೇ ಇಡಬೇಕಾಗಿದೆ. ತಾವು ಸರಕಾರೀ ಜನರನ್ನು ಕರ್ತವ್ಯದಲ್ಲಿ ಅಡ್ಡ ತರಬಾರದು. ಏಳರಿ ಅಲ್ಲಿಂದ" ಅಂತ ಒಳ್ಳೇ ಅಧಿಕಾರವಾಣಿಯಲ್ಲಿ ಹೇಳಿದ. ಆದರೆ ವ್ಯಕ್ತಿ ಇದನ್ನೆಲ್ಲಾ ಕೇಳಲಿಲ್ಲ ತನ್ನ ಗುಂಗಿನಲ್ಲಿಯೇ ಇದ್ದಾ. "ಹಂ ಫಿರ್ ಕೇಳ್ತಾವ, ಈ ಕಲ್ಲ ಕಹಾ ಲೇ ಜಾತಾ? ಹಂ ಪೀತಾ ನಹಿ, ಫಿಯಾಫೀ ನಹಿ. ಕಾಸಡೀಮೇ, ಹಂ ಕುಡ್ಯಾಣಿಲ್ಲ. ಕುಡ್ದೂ ಇಲ್ಲ. ಎಚ್ಚರದಾಗ ಆದಾವ. ಜಲ್ದಿ ಹೇಳ ಎಲ್ಲಿಗೊಯ್ತಿ ಈ ಕಲ್ಲ?" ಅನ್ನುತ್ತ ಮತ್ತಿಷ್ಟು ಗಟ್ಟಿಯಾಗಿ ಕುಳಿತುಕೊಂಡಿತು. ಜಿಗಳೆಪ್ಪ ಈ ವ್ಯಕ್ತಿಯ ಕೂಡಾ ಮಾತನಾಡಿ ಉಪಯೋಗವಿಲ್ಲವೆಂದು, ಎರಡೂ ಕೈಹಿಡಿದು ಎಬ್ಬಿಸಿ ನಿಲ್ಲಿಸಿದ. ವ್ಯಕ್ತಿ ಅತ್ತಿತ್ತ ಜೋಲೀ ಹೊಡೆಯುತ್ತ ಎದ್ದಿತು. ಮುಂದಕ್ಕೆ ಕರೆದೊಯ್ದು ಜಿಗಳೆಪ್ಪ ಚಂಚೀ ಕೊಟ್ಟ. "ಸ್ವಲ್ಪ ಪಾನಸುಪಾರೀ ತಗೊಳ್ರಿ ಸಾಹೇಬ ಮಿಯಾ; ಸುಮ್ಮನೇ ನೀವು ಬಂದ ದಾರೀಲೇ ಮನಿಗೆ ಹೋಗಿರಿ. ರಾತ್ರಿ ಬಹಳಾಗಿದೆ. ಸರಕಾರೀ ಜನಕ್ಕೆ ಅಡ್ಡೀ ಮಾಡಿದರೆ ಶಿಕ್ಷಾ ಆಗುವದು, ಶಿಕ್ಷಾ." ಅಂತಾ ಕೂಗಿ ಹೇಳಿದ. "ಕ್ಯಾ ಹೇಳ್ತಾವ? ಹಂ ನಹಿ ಪಿಯಾ ಹೈ; ಕೈಸಾ ಹೋತಾ ಶಿಕ್ಷಾ?" ಜಿಗಳೆಪ್ಪಗೆ ದೊಡ್ಡ ಸಮಸ್ಯೆಯೇ ಬಿತ್ತು. ಈ ವ್ಯಕ್ತಿಯಿಂದ ಹೇಗೆ ಪಾರಾಗುವದು ಅಂತಾ. ಅಲ್ಲದೇ ವೇಳೆಯೂ ಬಹಳವಾಗುತ್ತ ಬಂದಿತ್ತು. "ಇಲ್ಲ ಮಿಯಾ, ನೀವು ಕುಡಿದಿಲ್ಲ; ನಾ ದೇವರ ಆಣಿ ಮಾಡಿ ಹೇಳ್ತೇನಿ ನೀವು ಕುಡಿದಿಲ್ಲಾ ಅಂತ ಸಾಕ್ಷಿ. ಇನ್ನಾದರೂ ಹೋಗಿರಿ, ನಮ್ಮ ಸರಕಾರೀ ಕೆಲ್ಸಕ್ಕೆ ಅಡ್ಡೀ ಮಾಡಬೇಡಿರಿ." ವ್ಯಕ್ತಿಗೆ ತುಂಬಾ ಆನಂದವಾಯ್ತು. ಜಿಗಳೆಪ್ಪನ್ನ ಅಪ್ಪಿಕೊಳ್ಳುತ್ತ ಹೇಳಿತು: "ಠೀಕ ಬೋಲಾ ಭಾಯಿ, ಠೀಕ. ಹಂ ಕಭೀ ನೈ ಪೀತಾ ದೇಖ. ಅಛಾ, ಅಬ್ ಕ್ಯಾ ನಿಮ್ಮ ಕೆಲಸಾ ಈ ಕಲ್ಲಿನ ಕೂಡಾ?" "ಅದನ್ನು ಸುಣ್ಣ ಹೆಚ್ಚಿ ಪುನಃ ಅಲ್ಲಿಯೇ ಹೂಳುವದು" "ಠೀಕ, ಹಂ ಅಬ್ ಜಾತಾ ಸಬ್ ಆದ್ಮೀಕೋ ಬೋಲಿಂಗೆ ಕೆ ಮೈಲೀಕಲ್ಲ ದುರಸ್ತ ಹುವಾ ಕರ್ಕೆ" ಅನ್ನುತ್ತ ಹೊರಡಹತ್ತಿದ. ಜಿಗಳೆಪ್ಪಗೆ ದಿಗಿಲು ಬಿತ್ತು. ಈ ವ್ಯಕ್ತಿ ಊರಲ್ಲಿ ಹೋಗಿ ಮೈಲಕಲ್ಲ ದುರಸ್ತ ಆಗಿದೆ ಅಂತ ಹೇಳಿದರೆ ಎಲ್ಲ ಕೆಲಸ ಕೆಟ್ಟೀತು ಅಂತ ಹೆದರಿದ. "ಇಲ್ಲಿ ಕೇಳಿರಿ, ಮಿಯಾ. ನೀವು ಏನೂ ಹೇಳಬಾರದು ಮಂದಿಗೆ. ಇದೋ ಈ ರೂಪಾಯಿ ತಗೊಳ್ರಿ. ಬಾಯಿ ಮಾತ್ರ ಬಿಡಬೇಡ್ರಿ ಮೈಲಕಲ್ಲ ವಿಷಯಕ್ಕೆ. ಖುಸಂ ಕೊಡತೀರಾ?" "ಠೀಕ, ಠೀಕ ನಹೀ ಬೋಲಿಂಗೇ. ಲೇಕೆನ್ ನೀವೂ ಹೇಳಬಾರದು ನಾವು ಕುಡದಾವ ಅಂತ, ಸಮಝೆ? " ಅಂದು ವ್ಯಕ್ತಿ ಐದುರೂಪಾಯಿ ನೋಟು ತಗೊಂಡು ಹೊರಟಿತು. ಜಿಗಳೆಪ್ಪನಿಗೆ ಇನ್ನು ವಿಚಾರಿಸುತ್ತ ನಿಲ್ಲಲು ಬಿಲ್ಕುಲ ವೇಳೆ ಇರಲಿಲ್ಲ ರಾತ್ರಿ ಮುಗಿಯುತ್ತ ಬಂದಿತ್ತು. ಮಿಯಾಸಾಬರನ್ನು ಕಳ್ಸಿ ಗೆಳೆಯರಲ್ಲಿ ಬಂದ ತೆಗ್ಗು ತೋಡಿ ತಯಾರಿತ್ತು. ಸರಿ. ಮೂವರೂ ಕೂಡಿಕೊಂಡು ಹೆಗ್ಗವನ್ನು ಜೋರಿನಿಂದ

ಎಳೆಯ ಹತ್ತಿದರು ಕಲ್ಲು ಸರಿಯುತ್ತ ತಗ್ಗಿನಲ್ಲಿ ಬಂತು. ಗುದ್ದಲಿಯಿಂದ ಮಣ್ಣನ್ನು ಎಳೆಯಹತ್ತಿದರು. ಜಿಗಳೆಪ್ಪನಿಗೆ ಈಗ ಸ್ವಲ್ಪ ಸಮಾಧಾನವೆನಿಸಿತು, ಅಂತೂ ಒಮ್ಮೆ ಮುಗಿಸಿದೆ ಕೆಲಸಾ ಅಂತಾ. ಆದರೆ ಆ ಸಮಾಧಾನಕ್ಕೆ ಇನ್ನೂ ಒಂದು ಕೊರತೆ ಇತ್ತು.

ಏಕಂದರೆ ಎಲ್ಲ ಮಣ್ಣನ್ನೂ ಮುಚ್ಚಿ ಕಲ್ಲನ್ನು ಸರಿಯಾಗಿ ಹೂಳಿ ಮೇಲೆ ನೋಡುವಷ್ಟರಲ್ಲಿ ಅದಾರೋ " ಖೂನ್, ಖೂನಿ " ಎಂದು ಒದರಿದರು. ಕಲ್ಲನ್ನು ಅಲ್ಲಿಯೇ ಬಿಟ್ಟು ಎಲ್ಲರೂ ಅತ್ತಿತ್ತ ನೋಡಿದರು. ನಿಜವಾಗಿಯೂ ಈ ಊರ ಅಗಸೆಯಲ್ಲಿ ಮೊದಲು ಸ್ಮಶಾನವಿತ್ತೆಂದು ಅವರಿಗೆ ಭಾಸವಾಯಿತು. ಇಲ್ಲದೇ ಹೋದರೆ ಇಷ್ಟು ಸ್ವಲ್ಪಾವಧಿಯಲ್ಲಿ ಳ-೬ಜನ ಹೇಗೆ ಬರುವದು ? ಅಂತೂ ಅತ್ತ ನೋಡುವದರಲ್ಲಿ ಅದಾವುದೋ ಮತ್ತೊಂದು ವ್ಯಕ್ತಿ ಬರುತ್ತಿತ್ತು. ಸನಿಯದಲ್ಲಿ ಒಂದು " ಯಾರ ಹೆಣಾ ಹುಗೀತಾ ಇದ್ದೀರಿ, ಈ ಅಸವ್ಯಾಳ್ಯಾದಾಗ. ಒಳ್ಳೇ ಮಾತೀಲೇ ಹೇಳಿಬಿಡ್ರಿ. ಹೆಣ್ಣೋ, ಗಂಡೋ ಖೂನೀ ಆಸಾಮಿ ? ಇಲ್ಲದಿದ್ರೆ ನೋಡ್ರಿ " ಅಂತಾ ತನ್ನ ಹತ್ತರಿದ್ದ ಒಂದು ಪೋಲೀಸ ಶೀಟಿಯನ್ನು ಬಾಯಿಗೆ ಒಯ್ದ. ಜಿಗಳೆಪ್ಪ ಕೂಡಲೇ ಅವನ ಕೈಹಿಡಿದು " ನಾವು ಯಾರ ಖೂನೂ ಮಾಡಿಲ್ಲ, ದೊರೆಯೇ. ನಮ್ಮದೊಂದು ನಾಯಿ ಸತ್ತಿತ್ತು ಅದಕ್ಕೆ ಮಣ್ಣು ಕೊಡಲು ಬಂದಿದ್ದೆವು. ಬೇಕಾದರೆ ನೋಡಿಕೊಳ್ಳಿರಿ ಇಲ್ಲಿ ಯಾರದಾದರೂ ದೇಹ ಇದ್ದರೆ...." ಅಂತಾ ಏನೇನೋ ಹೇಳುತ್ತಿದ್ದ. ಆದರೆ ವ್ಯಕ್ತಿ ಕೇಳಲಿಲ್ಲ. " ನೀವು ನಾಯಿಗೆ ಮಣ್ಣು ಹಾಕುವದು ಬಿಟ್ಟು ನನ್ನ ಕಣ್ಣಲ್ಲಿ ಮಣ್ಣು ಹಾ ಕ ಬೇ ಕೆಂ ದು ಮಾಡಿದ್ದೀರಿ ಕಾಣ್ತಾದೆ. ಈ ಶೀಟಿ ೩ಮೈಲು ದೂರ ಕೇಳುತ್ತದೆ. ಜಾತ್ರೆಗೆ ಸ್ಪೆಶೆಲ್ ಪೋಲೀಸ ಬಂದಿದೆ. ಇವ್ದ ಹಕೀಕತ ಹೇಳಬಿಡ್ರಿ. ಇಲ್ಲವಾದ್ರೆ...." ಎಂದು ಪುನಃ ಶೀಟಿ ಬಾಯಿಗೆ ಒಯ್ದ. ರೂಪಾಯಿ ಕೊಡದ ಹೊರ್ತು ಶೀಟಿ ಬಂದು ಮಾಡಲು ಸಾಧ್ಯವಿಲ್ಲೆಂದು ತಿಳಿದು ಜಿಗಳೆಪ್ಪ ಮತ್ತೊಂದು ಐದು ರೂ. ನೋಟು ತಗೆದ. " ಸ್ವಾಮೀ ದಯವಿಟ್ಟು ಇಷ್ಟರಮೇಲೆ ಸಾಗಿಸಿರಿ. ಶೀಟಿ ೂದಬಾರದು " ಅಂತ ದೀನಮುಖದಿಂದ ಹೇಳಿದ. ಈಗ ಮಾತ್ರ ಜಿಗಳೆಪ್ಪನಲ್ಲಿ ನಿಜವಾಗಿ ದೀನತನ ಬಂದಿತ್ತು. ವ್ಯಕ್ತಿ ರೂಪಾಯಿ ತಗೊಂಡು ಶೀಟಿ ಕಿಸೆಯಲ್ಲಿ ಹಾಕಿದ. " ಅದಷ್ಟು ಜಲ್ದೀ ಮುಗಿಸಿರಿ ನಿಮ್ಮ ಮಣ್ಣು ಕೊಡೋ ಕೆಲಸಾ, ಬೆಳಗಾಗುತ್ತ ಬಂದಿಪೆ. " ಎಂದು ಹೇಳಿ ಹೊರಟುಹೋದ. ಸರಿ. ಜಿಗಳೆಪ್ಪ ಮತ್ತು ಕಂಪನಿ ತಡಮಾಡದೆ ಕಲ್ಲನ್ನು ಅದಷ್ಟು ಹಳೆಯದು ಕಾಣುವ ಹಾಗೆ ಮಣ್ಣು ಮುಚ್ಚಿ ಗಡಿಬಿಡಿಯಿಂದ ಜಾತ್ರೆಯಲ್ಲಿಯ ಅಂದಾನೆಪ್ಪನ ಅಂಗಡಿಗೆ ಬಂದರು. ನೆಲ ಅಗಿದು ಕೈ ಸೋತು. ಉಸ್ಸೆಂದು ಬಾಕಿನ ಮೇಲೆ ಒಬ್ಬರನ್ನೊಬ್ಬರು ನೋಡುತ್ತ ಕುಳಿತುಕೊಂಡರು.

ತಾಸೆರಡುತಾಸು ಆದಮೇಲೆ ಜಿಗಳೆಪ್ಪ ಏನೂ ಗೊತ್ತಿಲ್ಲದವನಂತೆ ಅಂದಾನೆಪ್ಪನಿಗೆ ಕೇಳಿದ; " ಈ ದಿನ ಓಡುವ ಕಲ್ಲುಗಳು ಇಲ್ಲಿಂದ ಕಾಣ್ತಾವ ಏನ್ರೀ " ಅಂದಾನೆಪ್ಪ ಹೇಳಿದ " ಓಹೋ, ಇಲ್ಲಿಂದಲೇ ನೋಡಬಹುದು. ಇಲ್ಲಿ ಬನ್ರಿ " ಅಂದು ಅಂಗಡಿಯಿಂದ ಅವರನ್ನು ಹೊರಗೆ ಕರೆಮೊಯ್ದ. "ಅದೋ ಆ ಮಾವಿನ ಗಿಡದ ಬುಡದಲ್ಲಿ ಕಾಣುವದು ೩೩ನೇ ಮೈಲಿಕಲ್ಲು ನಮ್ಮ ಜೂಜಿನ ಪ್ರಕಾರ ಈ ದಿನ ಓಡುವ ಅದರ ಮುಂದಿನ ೩೪ನೇ ಮತ್ತು ೩೫ನೇ ಮೈಲಿನ ನಡುವೆ ಓಡುವದು" ಅಂತೂ ಹೇಳಿದ. ಜಿಗಳೆಪ್ಪನಿಗೆ ಅದಾರೋ ತಲೆಯ ಮೇಲೆ ಜೋರಾಗಿ ಲಾಠೀಪ್ರಯೋಗ ಮಾಡಿದಂತೆ ಅನಿಸಿತು. "ಏನಂದ್ರಿ, ಅಲ್ಲಿಕಾಣೋದು ೩೩ನೇ ಕಲ್ಲೇನ್ರಿ" "ಹೌದು ಸ್ವಾಮೀ, ಬೇಕಾದ್ರೆ ತಾವು ಸ್ವತಃ ಹೋಗಿ ಪರೀಕ್ಷಿಸಬಹುದು" ಅನ್ನುತ್ತ ಅಂದಾನೆಪ್ಪ ತನ್ನ ಅಂಗಡಿಯ ಒಳಕ್ಕೆ ಹೋದ.

ಇತ್ತ ಜಿಗಳೆಪ್ಪ ಮತ್ತು ಕಂಪನಿ ಅಗಸೆಯ ಕಡೆಗೆ ಹೊರಟರು. ಅಲ್ಲಿ ಬಂದು ನೋಡಿದರು. ಅವರು ಅರ್ಧ-ಮರ್ಧ ಕಡ್ಡಿಯ ಬೆಳಕಿನಲ್ಲಿ ನೋಡಿದ ಮೊದಲನೆಯ ಕಲ್ಲು ೩೩ನೇದೇ ಆಗಿತ್ತು! ಇಂಗ್ರೇಜಿ ೩ ಮತ್ತು ೫ನೇ ಅಂಕಿಗಳು ಹೆಚ್ಚು ಕಮ್ಮಿ ಒಂದೇ ಕಾಣತ್ತಾವಷ್ಟೇ? ಅದರಲ್ಲೂ ಕಲ್ಲು ಹಳೇವಾಗಿ ಅನೇಕ ದಿನಗಳಿಂದ ಧೂಳಕೂತು ಅಂಕಿಗಳು ಸ್ಪಷ್ಟವಾಗಿ ಕಾಣುವಂತಿರಲಿಲ್ಲ. ಆದರೂ ಬೆಳಗಿನ ಬೆಳಕಿನಲ್ಲಿ ನೋಡಿದಾಗ ಅಗಸಿಯ ಮುಂದಿನ ಕಲ್ಲು ೩೩ನೇದೇ ಇತ್ತೇ ಹೊರತು ೩೫ನೇದು ಅಲ್ಲ. ಸರಿ, ಜಿಗಳೆಪ್ಪನಿಗೆ ನಿಜವಾಗಿಯೂ ಧೈರ್ಯ ಹೋಯಿತು. ರಾತ್ರಿ ಬೆಳತನಕ ಗೆಳೆಯರೊಂದಿಗೆ ನಿದ್ದಿಗೆಟ್ಟು, ಅನೇಕ ವ್ಯಕ್ತಿಗಳಿಗೆ ಲಂಚಕೊಟ್ಟು, ಮಾಡಿದ ಕೆಲಸದ ಪರಿಣಾಮ? ೩೪-೩೫ ಕಲ್ಲುಗಳ ನಡುವಿನ ದಾರಿಯನ್ನು ಹೆಚ್ಚು ಮಾಡುವದು ಬಿಟ್ಟು, ಅರ್ಧ ಮೈಲಿನಷ್ಟು ಕಡಿಮೆ ಮಾಡಿದ್ದರು! ಇನ್ನು ಹೆಚ್ಚು ವಿಚಾರ ಮಾಡುತ್ತ ಕೂಡಲು ವೇಳೆಯೇ ಇರಲಿಲ್ಲ. ಜಾತ್ರೆಗೆ ಹೋದರೆ ಆ ಓಡುವ ಸಂಗನು ತಯಾರಾಗಿಯೇ ಇದ್ದನಷ್ಟೆ? ಜಿಗಳೆಪ್ಪ ಗೆಳೆಯರಿಗೆ ಹೇಳಿದ. " ಮಿತ್ರರೇ, ನಾವು ಈಗ ಮಾಡತಕ್ಕ ಕಾರ್ಯ ಒಂದೇ ಒಂದು. ೪೫ ಮಿನಿಟಿನಲ್ಲಿ ಅರ್ಧ ಮೈಲು ಓಡಲಿಕ್ಕೆ ದೊಡ್ಡ ಸಾಮರ್ಥ್ಯ ಬೇಕಾಗಿಲ್ಲ.

ಈಗ ನಾವು ಅದಕ್ಕೂ ಹೆಚ್ಚಾಗಿ ಜೋರಿನಿಂದ ಓಡಿ ನಮ್ಮೂರನ್ನು ಮುಟ್ಟಲಿಕ್ಕೇ ಬೇಕು. ಇಲ್ಲವಾದರೆ ಜೂಜಿನ ರಕಂ ನೂರು ರೂಪಾಯಿ ಎಲ್ಲಿಂದ ಕೊಡುವದು ?" ಈ ಪ್ರಶ್ನೆಗೆ ಉತ್ತರ ಕೊಡುವ ಕಾರಣವೇ ಇರಲಿಲ್ಲವಷ್ಟೇ. ಗೆಳೆಯರಿಗೂ ಈಗ ಓಟದ ಮಾರ್ಗವೇ ಮುಕ್ತ ಎಂದು ಕಂಡು ಬಂತು. ಅಷ್ಟರಲ್ಲಿ ಅದಾರೋ ಮಗ್ಗಲಲ್ಲಿ ಮಾತಾಡುವದು ಕೇಳಿಸಿತು. ಆಲಿಸಿ ಕೇಳಿದರು.

" ಸಲಕಿ - ಗುದ್ದಲೀ ಭಾಡಿಗೆ ೪ ರೂಪಾಯಿ ಜಮಾ; ರಾಮಟಿಂಕಿ ವರಹದ ಬಾಬತು ೫ರೂಪಾಯಿ; ಮೈಲಕಲ್ಲು ಹುಗಿದದ್ದು ಗುಪ್ತ ಇಡಲಿಕ್ಕೆ ೫ರೂಪಾಯಿ; ಖೂನಿ ಆರೋಪ ತಪ್ಪಿಸಲಿಕ್ಕೆ ೫ರೂಪಾಯಿ; ಅಂತೂ ಜಮಾ ೧೯ ರೂಪಾಯಿ. ಖರ್ಚು ಬಿಲ್ಕೂಲ ಇಲ್ಲಾ." ಇದು ಯಾರ ಧನಿ ಎಂದು ಜಿಗಳಿಪ್ಪ ವಿಚಾರಿಸಿದ. ಆದರೆ ಆಗಿನ ಅವನ ಸ್ಥಿತಿಯಲ್ಲಿ ವಿಚಾರಕ್ಕೆ ಆಸ್ಪದವಿರಲಿಲ್ಲ. ಆದರೂ ಅವನಿಗೆ ಏಕೋ ಸಂಶಯ ಬಂತು. ಮಾತಾಡಿದ ಆಸಾಮಿ ಅಂಗಡಿ ಅಂದಾನೆಪ್ಪನೆಂದು. ಅದನ್ನು ನಿಶ್ಚಯ ಮಾಡಲಿಕ್ಕೆ ಅವಕಾಶವಿರಲಿಲ್ಲ. ಫಲಾಯನ ಮಾಡುವದು ಮೊದಲನೇ ಕೆಲಸವಾಗಿತ್ತು. ಸರಿ. ಮೂವರೂ ಕೂಡಿ ಹಿಂದು ಮುಂದು, ಎಡಬಲಕ್ಕೆ ನೋಡದೆ ಏಕ ಚಿತ್ತದಿಂದ ಊರ ಕಡೆಗೆ ಓಡಿದರು ಒಟ್ಟಿನಮೇಲೆ ಹೇಳಬೇಕಂದರೆ, ಅವರು ಆ ದಿನ ಓಡಿದ ವೇಳೆಯಲ್ಲಿ ಲೆಕ್ಕ ಹಾಕಿದರೆ ಸುಮಾರು ಅರ್ಧ ಘಂಟೆಯಲ್ಲಿ ಅರು ಮೈಲು ಓಡಿರಬಹುದೆಂದು ನನ್ನ ತರ್ಕ ಅಂತ ಹೇಳಿ ಅಂದಾನೆಪ್ಪ ತನ್ನ ಜೂಜಿನ ಮೋಜಿನ ಅನುಭವವನ್ನು ಮುಗಿಸಿದ. ಈ ಎಲ್ಲ ಸಂಗತೀ ಅವನ ಬಾಯಿಂದಲೇ ಕೇಳಬೇಕು. ಇಲ್ಲಿ ಅವನು ಹೇಳಿದ್ದರ ಸಾರಾಂಶವಿದ್ದು ಅದರಲ್ಲಿ ಅಂದಾನೆಪ್ಪನ ಉತ್ಸಾಹದ ಒಂದು ಕಾಲು ಪಾಲು ಕೂಡಾ ಇಲ್ಲ. ಆದರೆ ಎಲ್ಲರಿಗೂ ಅಂದಾನೆಪ್ಪನ ಅನುಭವ ಕೇಳುವ ಸುದೈವವಿಲ್ಲದ್ದಕ್ಕೆ ಇಷ್ಟರಿಂದಲೇ ತೃಪ್ತಿಹೊಂದಬೇಕೆಂದು ಹೇಳಿದ್ದೇನೆ.

ಕೆಚ್ಚೆದೆಯ ಕನ್ನಡಿಗ

ನಾಟ್ಯಛಟಾ

ಶ್ರೀ. ಮೊರಬ ರಘುನಾಥ

(ಇಬ್ಬರು ಗೆಳೆಯರು ಚಹವ ಕುಡಿದು, ಎಲೆ ಅಡಿಕೆ ಮೆಲ್ಲುತ್ತ ಕುಳಿತು ಕೊಂಡಿದ್ದರು. ಮಾತನಾಡುತ್ತ ಪಾದಕ್ಕೆ ಬಂದು ಹತ್ತಿತು.)

" ಹಾಂ..... ಹಂಗ ಅನಬ್ಯಾಡ್ರಿ ನೋಡ್ರಿ ನೀವು.... ಕರ್ನಾಟಕಾ ಹಿಂದುಳಿದ ದೇಶಾ ಅಂತ ಅನಬ್ಯಾಡ್ರಿ..... ಯಾಕ ಅಂದೀರಿ ಏನ್ರೆಪಾ.... ಇನ್ನೊಂದು, ನನಗೆಲ್ಲೆ ಆಗ್ತದ ಸವಡು— ಕಚೇರೀ ಕೆಲ್ಸದಾಗ ರಗ್ಗಡ ಆಗತದ ದುಡಿಯೋದು.... ಓದಲಿಕ್ಕೆ ಆಗೂದೇ ಇಲ್ಲ.... ಆದರೂ ಇಕಾ ನಮ್ಮ ಮಗ- ಶೀನು-ನಾಕನೇಯತ್ತಾಗ ಇದ್ದಾನ ಏನ್ರೆಪಾ... ಆವ ಓದತಿದ್ನ ಅದಕ್ಕ ಹೇಳತೀನಿ.... ಹಿಂದಕ ಪುಲಿಕೇಶಿ, ವಿಕ್ರಮ, ಹರಿಹರ, ಬುಕ್ಕ, ಅಂಬೋರು ಕನ್ನಡ ನಾಡಿನೊಳಗ ಅಳಿಹೋಗ್ಯಾರ- ನಿಮಗ ಗೊತ್ತದ; ಅಲ್ಲಾ..... ಹಿಂದಕ್ಕೇನೋ ನೃಪತುಂಗ ವರ್ಣನಾ ಮಾಡ್ಯಾನಂತಲ್ಲಾ.... ಏನಪಾ ಅಂದೀರಿ. ಕರ್ನಾಟಕಾ ಒಂದಾನೊಂದು ಕಾಲಕ್ಕ ಗೋದಾವರಿಯಿಂದ ಹಿಡಿದು ಕಾವೇರೀ ತನಕಾ ಇತ್ತಂತ. ಎಲ್ಲೀ ಗೋದಾವರಿ, ಎಲ್ಲೀ ಕಾವೇರೀ— ಕಲ್ಪನಾ ಇಲ್ಲ ನಿಮಗ— ಅಷ್ಟು ದೊಡ್ಡದಿತ್ತು ನಮ್ಮ ದೇಶ.... ಏನು ಮಾಡೋದು.... ಆಂ.... ನಮ್ಮಲ್ಲೆ ಸಾಹಿತ್ಯ ಇಲ್ಲಂತೀರಿ ? ಯಾಕ್ರೆಪಾ ಅದು ? ಮೊನ್ನೆ ಎಂದೂ ಹೋಗದವ ನಾ ಹೋಗಿದ್ದೆ. 'ಸಾಹಿತ್ಯ'ದ ಮೇಲೆ ಭಾಷಣ ಇತ್ತು. ಒಂದು ಪಂಧ್ರಾ ಮಿನಿಟ ನಿಂತಿದ್ದೆ ಅನ್ರಿ. ಪಂಪ, ಹೊನ್ನ, ಜನ್ನ, ರನ್ನ ಅಂತ ಕವಿಗಳಿದ್ರಂತ. ಇಂಥಾ- ಅದೇನೋ ಅಂದರ್ರಿ- ಹಾಂ- ಉದ್ದಾಮ- ಹೌದು ಉದ್ದಾಮ ಕವಿಗಳಿದ್ರಂತ. ಅಂಥಾದು ನಮ್ಮ ದೇಶ ಏನ್ರೆಪಾ.... ಆಂ.... ನೀವು ಸುಳ್ಳು ಸುಳ್ಳೇ ಹೇಳತೀರೀ ಅಂದೆ. ಈಗೇನು ಅದ ಅಂತೀರಿ ? ನಮ್ಮಲ್ಲೆ ಕವಿಗಳಿಲ್ಲ ? ಬಹಳಿಲ್ಲ ಇಷ್ಟ ಖರೆ. ನಾಟಕಕಾರರು, ಕತೆಗಾರರು ರಗ್ಗಡ ಇದ್ದಾರ.... ದರವೊಂದು ಮಾಸಿಕ ತಗದ ನೋಡ್ರಿ ಒಂದು ಏಕಾಂಕ ನಾಟಕ ಇದ್ದs ಇರತದ. ಇನ್ನೂ ಎಷ್ಟೋ ನಾ ಟ ಕ ಪ್ರಿಂಟ ಆಗದ ಹಂಗ ಉಳದಾವ. ಕತೀಗಂಕಾ ಲೆಕ್ಕನs ಇಲ್ಲಾ. ಆದರೇನು ನನಗೆಲ್ಲೆ ಆಗ್ತದ ಓದೂದು.... ನಡುವ ಬಾಯಿ ಹಾಕಬ್ಯಾಡ್ರಿ ನೀವು..... ನಮ್ಮಲ್ಲೆ ಗಾಯಕರಿಲ್ಲಾ ಅಂತ ಯಾಕ ಅಂತೀರಿ ಅದು ? ಎಂಥಿಂಥಾ ಗವಯಿಗಳಿದ್ದಾರ, ಭಾಗವತರಿದ್ದಾರ ಕನ್ನಡ ಹಾಡೂದಿಲ್ಲ ಇಷ್ಟ. ತೆಲಗು, ಹಿಂದುಸ್ತಾನಿ ಹಾಡಿದಾಕ್ಷಣಕ

ಅವರೇನು ಕನ್ನಡಿಗರಲ್ಲ? ಅದರಾಗ ಬ್ಯಾರೆ— ನಿಮಗ ಗೊತ್ತದs ಅಲ್ಲಾ– ನನಗ ನವಡು ಎಲ್ಲೆ ಆಗ್ತದ? ಅಲ್ಲದ ನನ್ನ ಹೇಣತಿ ಬೆಳಗಾಂವಿಯಾಕಿ.... ಮನ್ಯಾಗೆಲ್ಲಾ ಮರಾಠಿ ಅದರೇನು ನಾವು ಕನ್ನಡಿಗರಲ್ಲೇನು? ನಮಗೆಲ್ಲಾ ಮರಾಠಿ ಸಂಪರ್ಕ ಬಹಳ ಏನ್ರೆಸಾ. ಅದಕ್ಕ ನನಗ 'ಜಯಂತಿ' 'ವಸಂತ'— ಹೊಸದಾಗಿ ಕನಡಿನಾಗ ಹೊರಟಾವಂತಲ್ಲಾ ಆ ಮಾಸಿಕ ಶರಸೂದೆಲ್ಲಿ ಆಗತದ. ನನ್ನ ಹೇಣತಿ ಕೆಲ್ಕೋಸ್ಕರ, ಸ್ತ್ರೀ, ಮನೋಹರ, ತರನೇ ತರಸತಾಳಾತು. ಅದರೊಳಗ ಕರ್ನಾಟಕದ ಸುದ್ದಿ ಬಂದೇ ಬರತದ. ಮೊನ್ನೆ ಗುಳೇದಗೂಡದಾಗ ಓಂದು ನಾಟಕ ಕಂಪನೀ ಹೊರಟದ ಅಂತ 'ಚಿತ್ರಾ'ದೊಳಗ ಓದಿದೆ.... ನಿಮಗ ಗೊತ್ತದs ಅಲ್ಲಾ ಇಷ್ಟೆಲ್ಲಾ ಇರತಿರಲಿಕ್ಕೆ ಕರ್ನಾಟಕ ಹಿಂದುಳಿದ ದೇಶಾ ಅಂತೀರಿ? ಯಾಕಂತೀರಿ ಅಂಬೂದs ತಿಳಿವಲ್ದು. ಆಂ–ಪ್ರಸಿದ್ಧ ಜನರಿಲ್ಲ? ದೊಡ್ಡ ದೊಡ್ಡ ಪ್ರೊಫೆಸರರಿದ್ದಾರ ಕನ್ನಡಿಗರು. ಅವರೆಲ್ಲಾ ಮಹಾರಾಷ್ಟ್ರದೊಳಗನs 'ಇದ್ದಾರ. ಇದ್ರೇನಾತು.... ಅವರೇನು ಕನ್ನಡಿಗರು ಸುಳ್ಳ? ಶಹಣೇರು ಇಲ್ಲಾಂತ ಅಂತೀರಲ್ಲಾ? ತಪ್ಪ ಅದ ನಿಮ್ಮ ಸಮಜೂತು– ಕರ್ನಾಟಕದೊಳಗ ಸಾಚಹಜಾರ Graduates ಇದ್ದಾರ ಗೊತ್ತದನs ನಿಮಗ.... ಇನ್ನೇನು ಬಹಳ ಮಂದಿ ಆರ್ಟ್ಸ ಮಂದಿನs ಅದ.... ಮತ್ತು ತೀನಹಜಾರ ಮಂದಿ ಇನ್ನೂ ರಜಿಸ್ಟರ ಮಾಡಿಸಿಕೊಂಡಿಲ್ಲ. ಅದಕ ಶಾಣ್ಯಾರಿಲ್ಲಾ ಅಂತೀರಿ ನೀವು. ತಪ್ಪ ಅದುs. ಅಲ್ಲಾ, ಕಲಿಯೂದು ಶಾಣ್ಯಾರಾಗೂದು ಎದಕ್ಕರೆಸಾ.... ಹೊಟ್ಟೇ ತುಂಬಿಸಿಕೊಳ್ಳಲಿಕ್ಕೆ. ಕನ್ನಡಿಗರು ಹೊಟ್ಟೆಗಿಲ್ಲದ, ಬ್ಯಾರೆ ದೇಶಾ ನೇರಿದ್ದು ನೋಡಿರೇನು ನೀವು? ಅದಕ್ಕ ಕಲ್ತರ ಏನು ಮಾಡಬೇಕು? ಶಹಣೇರೆಲ್ಲಾ ಮಹಾರಾಷ್ಟ್ರದೊಳಗs ಇದ್ದಾರ.... ಅವರೆಲ್ಲಾ ಕನ್ನಡಿಗರs ಪ್ಪೆ. ಎಲ್ಲೆದ ಕರ್ನಾಟಕ? ನನ್ನ ಸಿಟ್ಟಿಗೆಬ್ಬಿಸಬ್ಯಾಡ್ರಿ.... ನೀವು ಅಂಬೂದು ಖರೆ ಏನ್ರೆಸಾ. ವಿಜಾಪುರದೊಳಗಿನ ವ್ಯಾಪಾರಸ್ಥರೆಲ್ಲಾ ಮೋಡೀ ಬರೀತಾರ ಅಂಬೂದು ಖರೆ. ಹ್ಯಾಂಡ್‌ಬಿಲ್ಲು ಸುದ್ದಾ ಮರಾಠಿಯೊಳಗನs ಪ್ರಿಂಟ ಆಗ್ತಾವ. ಅದೂ ಖರೆನ. ಸೊಲ್ಲಾಪುರದಾಗ, ಶೇಕಡಾ ಸಾಠೀ ಮಂದಿ ಕನಡ ಮಾತಾಡಲಿಕ್ಕೆ ಒತಿದ್ರೂ, ಮರಾಠಿ ಬರೀತಾರ.... ಅದರ ಅವರೇನು ಕನ್ನಡಿಗರಲ್ಲೇನು? ಈಗೊಂದು ಚಾರ ವಾಚ ವರಷದ ಕೆಳಗ, ಸೊಲ್ಲಾಪುರದಾಗ 'ಹೇಮರಡ್ಡಿ ಮಲ್ಲಮ್ಮ' ಎಂಬೋ ನಾಟಕ ಸಕ್ಸೀ ಸಾರೆ ನಡೀತಂತ. ನೋಡ್ರಿ ನೀವs ಕನ್ನಡಿಗರು ಎಲ್ಲೇ ತನಕ ಇದ್ದಾರ ಅಂಬೋದು. ಹಂ... ಅಲ್ಲಾ.... ನಾ ಹೇಳೂದರ ಕೇಳತೀರೋ ಇಲ್ಲೊ? ನಮ್ಮಲ್ಲೆ ಫಿಲ್ಮ ಕಂಪನಿ ಇಲ್ಲಾ ಅಂತ ಅನಬ್ಯಾಡ್ರಿ. 'ಚಿರಂಜೀವಿ' ಸಿನೇಮಾ ಏನು ಕೆಟ್ಟಾಗಿತ್ತ? ಅದರ ಸಂಬಂಧ ಯಾವದಾದರೂ ವರ್ತಮಾನ ಪತ್ರದೊಳಗ ವಿರುದ್ಧ ಟೀಕಾ ಓದೀರ್ಯಾ? ಶಕ್ಯ ಇಲ್ಲಾ ಅಂದೆ. ನಮ್ಮಲ್ಲೇನು ನಟರಿಲ್ಲs ತೆಲಗಿನೊಳಗ ಮರಾಠಿಯೊಳಗ ಪಾರ್ಟ ಮಾಡೇ ಮಾಡ್ಯಾರ. ಅವರೇನು ಕನ್ನಡಿಗರಲ್ಲ?

"ನಿಮಗ ಇನ್ನೊಂದು ಹೇಳತೀನಿ. ಈಗ ಕರ್ನಾಟಕ ಏಕೀಕರಣ ಅಂತ ಒದರ್ಯಾಡತಾರಲಾ. ಯಾಕ ಬೇಕೈಪಾ ಇವರಿಗೆ ಏಕೀಕರಣ? ಏಕೀಕರಣ ಅದನs ಅದ. ಗೋದಾವರಿಯಿಂದ ಕಾವೇರೀ ತನಕ ಕರ್ನಾಟಕಾ ಇದ್ದಿತಂದ ಮ್ಯಾಲೆ ಮಹಾರಾಷ್ಟ್ರನೂ ಕರ್ನಾಟಕ ಅಂತ ಯಾಕ ಅನಭಾರದು? ಬ್ಯಾಡಾ, ದಕ್ಷಿಣ ಮಹಾರಾಷ್ಟ್ರ ಅಂತ ನಮ್ಮ ದೇಶಕ್ಕ ಕರದಾರ, ನಾವೂ ಮಹಾರಾಷ್ಟ್ರಕ್ಕ ಉತ್ತರೋತ್ತರ ಕರ್ನಾಟಕಾ ಅಂತ ಯಾಕ ಕರೀಬಾರದು? ನೀವs ಹೇಳ್ರಿ.... ಎಷ್ಟೋ ವರ್ಷಗಳಿಂದ ಕರ್ನಾಟಕದ್ದೂ, ಮಹಾರಾಷ್ಟ್ರದ್ದೂ, ಬಳಕೆ ಅದ ಭಾಳಾ. ಅದ್ಯಾಕ ನಮ್ಮ ಮನ್ಯಾಗನs ನೋಡೀದ್ರೆಲಾ! ನನ್ನ ಮಗಳು ಮರಾಠೀ ಕಲೀತಾಳ..... ಯಾಕ ಅಂದೀರಿ..... ಈಕೀ ಮಗಳ್ನ ಪುಣೇಕನs ಕೊಡ್ಲಬೇಕು ಅಂತ ಹಟಾನ ಹಿಡದಾಳ. ಮತ್ತೇನ್ರೆಸಾ, ಕರ್ನಾಟಕದೊಳಗ ಮರಾಠಿ ಸಂಪರ್ಕ ಬಹಳ ಅದ. ಸವ್ವಾ ಒಂದು, ಸಾಡೇದಹಾ, ಅಕರಾ, ದೀಡು ಅಂತ ಮರಾಠಿಅಂಕೀನ ಅಂತೀವಿ. ಅದರಾಗ ಬ್ಯಾರೆ 'ಜ್ಞಾನೇಶ್ವರೀ' ಯೊಳಗ ಶೇಕಡಾ ಸಾಠಿಶಬ್ದ ಕನ್ನಡ ಅವs ಅಂತ ಹೇಳ್ಯಾರ. ಅದಲ್ಲದ, ನಮ್ಮಲ್ಲೆ ಕನಡ ಸಹಿ ಮಾಡಲಿಕ್ಕೆ ಬರದಿದ್ರೂ ಕನಡ ಅಷ್ಟs ಜೋರು, ಮರಾಠಿ ಅಷ್ಟs ಫರಡಾ ಮಾತಾಡೋ ಅವರೂ ಇದ್ದಾರ. ಮತ್ತ ಅವರು ಮಹಾರಾಷ್ಟ್ರದೊಳಗೂ ಕರ್ನಾಟಕದೊಳಗೂ ಅಷ್ಟs ಪ್ರಸಿದ್ಧ ಇದ್ದಾರ. ಅಂದಮ್ಯಾಲೆ ಕರ್ನಾಟಕ ದೇಶ ಮತ್ತು ಮಹಾರಾಷ್ಟ್ರ ಎಲ್ಲಾ ಒಂದs ಅಂತ! ಈಗಿನ ದಿನದಾಗ ಹಿಟ್ಲರ ಹ್ಯಾಂಗ ಸೋತ ದೇಶಗಳನ್ನ ತಿರುಗಿ ತಕ್ಕೊಳ್ಳಲಿಕ್ಕೆ ಹತ್ಯಾನ, ನಾವೂ ಗೋದಾವರಿಯಿಂದ ಕಾವೇರೀ ತನಕ ಈಗ ಅದನs ಅದ– ಕರ್ನಾಟಕಾ ಅಂತ ಯಾಕ ತಿಳಕೋ ಬಾರದು? ಮತ್ತ ಮರಾಠಿ, ಕನಡು ಕೂಡೆ ಒಂದs ಭಾಗಾ ಮಾಡಬೇಕು ಅಂತ ನನಗ ಅನಸತ. ಯಾಕ ಇವಕ್ಕೇನಂತೀರಿ?' ನಿಮಗ ಗೊತ್ತದs ಅಲ್ಲಾ!"

(ತಾನು ಹೇಳುತ್ತಿದ್ದುದು ಕೇಳುವದಿಲ್ಲವೆಂಬುದನ್ನು ಕಂಡು ತಾನೇ ಮಾತಾಡುವದನ್ನು ನಿಲ್ಲಿಸಿದ.)

"ಅತ್ತಿಗೆ"

ಶ್ರೀಮಾನ್. ಎಚ್. ಎಸ್. ಪಾಟೀಲ ಎಂ.ಎ.

●

ಅತ್ತಿಗೆ! ಯಾವುದೇ ಕುಟುಂಬದಲ್ಲಿ ಅತ್ತಿಗೆಯ ಸ್ಥಾನದಲ್ಲಿದ್ದ ಹೆಣ್ಣುಮಗಳನ್ನು ಕುರಿತು "ಈ ಸ್ಥಾನದ ಬಗೆಗೆ ನಿಮ್ಮ ಅನುಭವವೇನು!" ಎಂದು ಒಬ್ಬ ಮಂತ್ರಿವರ್ಯನನ್ನು ಕೇಳುವಂತೆ ಕೇಳಿದರೆ ಅವರು ನಿಶ್ಚಯವಾಗಿಯೂ ಈ ಉತ್ತರವನ್ನು ಕೊಡುವರು. "ಒಂದು ಒಟ್ಟು ಕುಟುಂಬದಲ್ಲಿ ಅತ್ತೆಯಾಗುವದು ಬೇಕು—ಅದೇಕೆ ಉತ್ತಮ. ಆದರೆ ಅತ್ತಿಗೆಯಾಗುವದು ಬೇಡ" ಪ್ರಶ್ನವನ್ನು ಕೇಳಿದವರಿಗೆ ವಿಸ್ಮಯವೆನಿಸಬಹುದು; ಮತ್ತು ಅದೇ ಕಾವಿನಲ್ಲಿ ಅವರನ್ನು 'ಏಕೆ' ಎಂದೂ ಕೇಳಬಹುದು. ಏಕೆಂದರೇನು? ಅತ್ತೆಯಾದರೆ ಕೇವಲ ಸೊಸೆಂದಿರಿಗಷ್ಟು ಬೇಸರ, ಅನಾದರ ಅಥವಾ ಅಸೂಯೆ. ಆದರೆ ಮನೆಯೊಳಗಿನ ಉಳಿದ ಜನರಿಗಾದರೂ, ಅಂದರೆ ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಇವರಿಗಾದರೂ ಅತ್ತೆಯು ಬೇಕಾದವಳು, ಪೂಜ್ಯಳು. ಅದೆ ಅತ್ತಿಗೆ! ದುಡಿಯಲು ಗುಡ್ಡದಷ್ಟು ಕೆಲಸ. ಆದರೆ ಪಡೆಯಲು ಬುಟ್ಟಿತುಂಬ ಬೈಗುಳು! 'ಮದುವೆಯಾದ ಕೂಡಲೆ ಮಗನ ಸ್ವಭಾವವೇ ವಿಚಿತ್ರವಾಯಿತು' ಎಂದು ಅತ್ತೆ-ಮಾವಂದಿರು ಆಗಾಗ್ಗೆ ನುಡಿಯುವರು. ಅದೇನೋ ಅವಳ ಪ್ರಭಾವವಂತೆ! ಇತ್ತ 'ಅವರ ಶಿಷ್ಟಾಚಾರ ಹೇಳುವಂತಿಲ್ಲ; ನಮ್ಮ ಅತ್ತಿಗೆಂದಿರ ಮದುವೆ ಇಡಿಯ ರಾಜ್ಯಕ್ಕೆ ಹೊರತಾಗಿದೆ' ಎಂದು ಗಂಡನ ತಂಗೆಂದಿರು ಮೂಗು ಮುರಿಯುವರು. ಅತ್ತ 'ಅಣ್ಣನನ್ನು ಈಗೇನೂ ಕೇಳುವಂತಿಲ್ಲ; ಎಲ್ಲದರ ಕೇಲಿಯ ಕೈ ಅತ್ತಿಗೆಯ ಬಳಿಯಲ್ಲಿದೆ' ಎಂದು ಮೈದುನಂದಿರು ಕೆವಿ ಕಚ್ಚಾಡುವರು ಆದರೆ ನಿಜವಾಗಿಯೂ ಅತ್ತಿಗೆಯ ಪರಿಸ್ಥಿತಿಯು ಹೀಗಿರುವದೇ?

ಶ್ರೀ. ಎಚ್. ಎಸ್. ಪಾಟೀಲ, ಎಂ.ಎ.

ಹಿರಿಯ ಅತ್ತಿಗೆ ತಾಯಿಯಸಮಾನ ಎನ್ನುವರು. ಇಂದು ಅತ್ತಿಗೆಂದಿರ ಸಂಗಡ ಮೈದುನಂದಿರು ನಡೆದುಕೊಳ್ಳುವ ರೀತಿಯನ್ನು ನೋಡಿದರೆ, ಆ 'ತಾಯಿ' ಶಬ್ದಕ್ಕ ಹಿಂದೆ 'ಮಲ' ಎಂಬೆರಡು ಅಕ್ಷರಗಳನ್ನು ಜೋಡಿಸಬೇಕು ಎನಿಸುತ್ತದೆ. ಎಂತಹ ಉದಾತ್ತ ಭಾವನೆಯಿಂದ ಈ ಮೈದುನರ ಸೇವೆಯನ್ನು ಮಾಡಿದರೂ, ಅವರಿಗೆ ನಿಜವೆನಿಸುವದಿಲ್ಲ — ಸಮಾಧಾನವಾಗುವದಿಲ್ಲ. ಮನೆಯೊಳಗಿನ ತನ್ನ ಜವಾಬ್ದಾರಿಯನ್ನು ಎಷ್ಟೆ ತಿಳಿದುಕೊಂಡು ಆಚರಿಸಿದರೂ, ಮತ್ತೆ ಅತ್ತೆ-ಮಾವಂದಿರೆದುರಿನಲ್ಲಿ ಮೈದುನರ ದೂರುಗಳು ಕಡಿಮೆಯಾಗುವದಿಲ್ಲ; ಅಣ್ಣ-ಅತ್ತಿಗೆಂದಿರ ವಿಷಯದಲ್ಲಿದ್ದ ಅವರ ಅಸಂತುಷ್ಟತೆಯು ದೂರಾಗುವದಿಲ್ಲ. ಮೈದುನರು ದೊಡ್ಡವರಿದ್ದರಂತೂ ಆಗಿಯೆ ಹೋಯಿತು, ಅವರು ಚಿಕ್ಕ ಬಾಲಕರಿದ್ದರೂ ಸಹ, ತಾನು ಹೊಸದಾಗಿ ಆ ಕುಟುಂಬದಲ್ಲಿ ಬಂದ ಕಾರಣ ಮೈದುನ ದೇವರ ಸನ್ಮಾನ ಮಾಡುವದಕ್ಕಾಗಿ ಅವನಿಗೆ ಬಹು-ವಚನವನ್ನು ಉಪಯೋಗಿಸಬೇಕು. ಅವರಿಗೆ ಊಟ ಮಾಡಿಸಿದ ಮೇಲೆ 'ಕೈ ತೊಳೆಯಿಸುತ್ತೇನೆ ಬನ್ನಿರಿ'-'ಅಂಗಿಯನ್ನು ಹಾಕುತ್ತೇನೆ ನಿಲ್ಲಿರಿ' ಎಂದು ಅವರನ್ನು ಉದ್ಬೋಧಿಸಬೇಕು. ಇಲ್ಲಿ ಮೈದುನಂದಿರ ಸಭ್ಯತನಕ್ಕಾಗಲಿ, ಅಥವ ಹಿರಿತನಕ್ಕಾಗಲಿ ಮರ್ಯಾದೆ ಇರದೆ, ಅವರ ಮೈದುನ ಎಂಬ ಪದವಿಗೆ ಇರುತ್ತದೆ ಮಾನ-ಮರ್ಯಾದೆ! ಮುಂದೆ ಮೈದುನರು ದೊಡ್ಡವರಾಗುತ್ತಲೆ ಏನಾದರೊಂದು ಕುಂಟ ನೆವದಿಂದ ತುಂಟತನ ಮಾಡಿ, ಕೊನೆಗೆ ಅತ್ತಿಗೆಗೆ ಹೊಡೆಯುವದನ್ನು ಅಥವಾ ಹೊಡೆಯಿಸುವದನ್ನು ಸಹ ನಾವು ಪ್ರತಿಯೊಂದು ಕಡೆಗೆ ನೋಡಬಹುದು. ಆದರೆ ಈ ಮೈದುನಂದಿರಿಗೆ ಅತ್ತಿಗೆಯ ಬೆಲೆಯು ಗೊತ್ತಾಗುವದು ಅವಳ ಬಳಿಯಲ್ಲಿದ್ದಾಗ್ಗೆ ಅಲ್ಲ; ಅವಳನ್ನೂ, ಅಣ್ಣನನ್ನೂ ಬಿಟ್ಟು, ಬೇರೆ ಕಡೆಗೆ ಹೋಗುವ ಪ್ರಸಂಗ ಬಂದಾಗ್ಗೆ. ಆಗ್ಗೆ ಪ್ರತಿಯೊಬ್ಬರ ಸಂಗಡ ಹಾಗೂ

ಪ್ರತಿಯೊಂದು ಪತ್ರದಲ್ಲಿ ತಪ್ಪದೆ ತನ್ನ ಅತ್ತಿಗೆಗೆ ಕಳಿಸುವ ನಮಸ್ಕಾರಗಳಿಂದ, ಮಲತಾಯಿಯಂತೆ ಭಾವಿಸಿದ್ದ ಆ ಅತ್ತಿಗೆಯು ಹೇಗೆ ನಿಜವಾಗಿಯೂ 'ನಿರ್ಮಲ' ತಾಯಿಯಿರುವಳು ಎಂದು ಮನವರಿಕೆಯಾದುದು ಕಂಡುಬರುವದು.

ಮೈದುನಂದಿರ ಮದುವೆಯ ಪ್ರಸಂಗವೆಂದರೆ ಅತ್ತಿಗೆಗೆ ಒಂದು ಕುತ್ತು ಇದ್ದಂತೆ. ಮೈದುನರು ಕಲಿಯುವದನ್ನು ಮುಗಿಸಿ, ಕೆಲಸವನ್ನು ಹಿಡಿದು, ಸ್ವತಂತ್ರರಾದ ಮೇಲೆ ಅವರ ಮದುವೆಯಾಗಬೇಕು; ತನ್ನಂತೆ ಮೈದುನನ ಹೆಂಡತಿಯಾದರೂ ಪರತಂತ್ರಳಾಗಿ ತೊಳಲಾಡಬಾರದು ಎಂದು ಕೆಲಕಾಲ ಸುಮ್ಮನಿದ್ದರೆ 'ನಮ್ಮ ವಿಷಯವಾಗಿ ಮನೆಯಲ್ಲಿ ಯಾರಿಗೂ ಆಸ್ಥೆಯೆ ಇಲ್ಲ' ಎಂದು ಅತ್ತಿಗೆಯನ್ನುದ್ದೇಶಿಸಿ ನುಡಿದು ನಿರಾತೆ ಹೊಂದುವರು ಮೈದುನಂದಿರು. 'ನಮ್ಮಿಂದ ಸೇವೆಯು ಕಡಿಮೆಯಾಗುತ್ತಿದ್ದರೆ, ಬೇಗನೆ ಒಂದು ಮದುವೆ ಮಾಡಿಕೊಳ್ಳಿರಿ' ಎಂದು ಒಂದು ದಿನ ಸಿಟ್ಟಿನ ಭರದಲ್ಲಿ ನುಡಿದರೆ 'ಹಾಂ ಹಾಂ. ನಮ್ಮ ಕೊರಳೊಳಗೆ ಒಂದು ಗುದ್ದಿಯನ್ನು ಕಟ್ಟಿ, ನಮ್ಮನ್ನು ಹೊರಗೆ ಅಟ್ಟಬೇಕೆನ್ನುತ್ತಾರೆ' ಎಂಬ ಆರೋಪಣೆ ಬರುವದು. ಕೊನೆಗೊಮ್ಮೆ ನೈದುನನಿಗೆ ಕನ್ಯೆಯನ್ನು ಹುಡುಕುವ ಕಾಲವು ಬಂದರೂ, ಅದು ಅತ್ತಿಗೆಗೇ ಪರೀಕ್ಷಾಕಾಲವಿದ್ದಂತೆ! ತನ್ನಂತೆ ಹಳೆಯ ಪದ್ಧತಿಯವಳಾದರೂ, ಹೃದಯವಿದ್ದವಳನ್ನು ಆರಿಸಹೋದರೆ 'ನಮಗೊಂದು ಕಲ್ಲನ್ನು ಗಂಟುಹಾಕಬೇಡಿರಿ' ಎಂದು ಮೈದುನಂದಿರು ಎಚ್ಚರಿಕೆಯನ್ನು ಕೊಡುವರು. ಹಾಗಾದರೆ ಮೈದುನನಿಗೆ ತಕ್ಕ ಹೊಸ ಬಗೆಯ ಹುಡುಗೆಯನ್ನು ನೋಡೋಣ ಎಂದರೆ 'ಮನೆಯನ್ನು ಮೂರಾಬಟ್ಟೆ ಮಾಡುವದು ಬೇಡ; ವಧುವು ಲಕ್ಷಣವಾಗಿರಲಿ' ಎಂದು ಅತ್ತೆ–ಮಾವಂದಿರು ಆಡ್ಡ ಬರುವರು. ಮುಂದೆ ಅಂತೂ ಒಮ್ಮೆ ಮದುವೆಯಾಯಿತೆಂದರೆ ಸಹ, ಮೈದುನನ ಹೆಂಡತಿಯು ಹೇಗೆ ನಡೆಮುಕೊಂಡರೂ, ಅವರ ಅಪವಾದವು ಹಿರಿಯತ್ತಿಗೆಯ ಮೇಲೆಯೆ ಬರುವದು ನಿಶ್ಚಿತ. ಹೆಂಡತಿಯು ಸುಧಾರಿಸಿದವಳಿದ್ದರೆ ಅತ್ತಿಗೆಯನ್ನು ಕುರಿತು 'ಅವರಿಗೆ ತಿಳಿವಳಿಕೆಯೆ ಇಲ್ಲ' ಎಂದು ಮೈದುನಂದಿರು ಬೀಳುಗಳೆಯುವರು. ಮನೆಯೊಳಗಿನ ಪರಿಸ್ಥಿತಿಗೆ ತಕ್ಕಂತೆ, ಮತ್ತು ಮನೆತನದೊಳಗಿನ ತಮ್ಮ ಸ್ಥಾನ – ಮಾನಗಳಿಗನುಸರಿಸಿ, ಮೈದುನನ ಹೆಂಡತಿಯು ಹಿರಿಯತ್ತಿಗೆಯಂತೆ ಇರಹತ್ತಿದರೆ, ಮತ್ತೆ ಅದರ ಕಾರಣವು ಅತ್ತಿಗೆಯ ಮೇಲೆಯೆ 'ಹಿರಿಯಕ್ಕನ ಚಾಳಿ ಮನೆಯ ಮಂದಿಗೆಲ್ಲ' ಎಂಬ ಮುದ್ರೆಯಿಂದ ಬೀಳುವದು.

ನಮ್ಮ ಕನ್ನಡದಲ್ಲಿ ಹೆಣ್ಣುಮಕ್ಕಳನ್ನು ದೂರಿನ ಸ್ಥಳಗಳಿಗೆ ಕೊಟ್ಟು ಮದುವೆಮಾಡುವ ಪರಿಪಾಠವು ವಿಶೇಷವಾಗಿ ರೂಢಿಯಲ್ಲಿಲ್ಲ. ಆದರೂ ಸಾಗರ, ಶಿವಮೊಗ್ಗೆಯ ಕಡೆಗಿನ ಒಬ್ಬ ಹುಡುಗೆಯನ್ನು ಧಾರವಾಡ, ಬೆಳಗಾವಿಯ ಕಡೆಗೆ, ಅಥವಾ ಇಲ್ಲಿಯ ಕನ್ಯೆಯನ್ನು ಆಚೆಯ ಕಡೆಗೆ ಕೊಟ್ಟರೆ, ಆ 'ಮನೆ ಬದಲಿಸುವ' ಹುಡುಗೆಗೆ ಕೆಲದಿನ ದಿಕ್ಕುತಪ್ಪಿದಂತಾಗುವದು. ಹೊಸ ಸ್ಥಳ, ಹೊಸ ಜನ ಎಂದು ಯಾರಿಗಾದರೂ ಅನಿಸಬಹುದು. ಆದರೆ ಅದರ ಕಾರಣವು ಇಷ್ಟು ಸಾಮಾನ್ಯವಾದುದಿಲ್ಲ. ಪರಸ್ಥಳ ಹಾಗು ಅಪರಿಚಿತ ಜನರಾದರೂ, ಭಾಷೆಯು ಕನ್ನಡವೊಂದೆ ಇರುವದಲ್ಲ ಎಂಬ ಧೈರ್ಯದಿಂದ ಆ ಹುಡುಗೆಯು ಮೊದಲು ಸಲ ಅತ್ತೆಯ ಮನೆಗೆ ಹೋದರೆ, ತಾನು ಮಾಡಿದ ತಪ್ಪು ಎರಡು ದಿನಗಳಲ್ಲಿ ಅಕೆಗೆ ತಿಳಿಯಹೋಗುವದು. ತನ್ನ ಗಂಡನ ಗೆಳೆಯರಾದರೂ ಮೈದುನಂದಿರನ್ನು "ನಿಮ್ಮ ಮನೆಯಲ್ಲಿ ಹೊಸಬರಾರೋ?" ಎಂದು ಕೇಳಿದರೆ, ಅವರು "ನಮ್ಮ **ವೈನೀ**" ಎಂದಾಗಲಿ ಅಥವಾ "ನಮ್ಮ Sister-in-law" ಎಂದಾಗಲೀ ಹೇಳುವದನ್ನು ಕೇಳಿ ಅಕೆಯು ಗಾಬರಿಗೊಳ್ಳುವಳು. ಕೊನೆಗೆ ಕನ್ನಡದಲ್ಲಿ ಅಣ್ಣನ ಹೆಂಡತಿ ಎನ್ನಲಿಕ್ಕೆ ಅತ್ತಿಗೆ ಎಂಬ ಶಬ್ದವಿದ್ದರೂ, ಆದರ ಪ್ರಚಾರವಿರುವದಿಲ್ಲ ಎಂದು ಯೋಚಿಸುತ್ತ 'ಓಹೋ ಇದು ಪರಭಾಷೆಯ ಮಬ್ಬು, ಪರಪ್ರಾಂತೀಯರ ಪಿಡುಗು' ಎಂಬುದನ್ನು ಕಂಡುಹಿಡಿದು, ಆದರ ವಿರುದ್ಧವಾಗಿ ಚಳವಳಿಯನ್ನು ಹೂಡಿದರೆ ಮಾತ್ರ ಅತ್ತಿಗೆಂದಿರಿಗೆ ತಮ್ಮ ಸ್ಥಾನವು ತಮಗೆ ಉಳಿಯುವದು; ಆದರ ಮಾನವು ಅವರಿಗೆ ದೊರೆಯುವದು.

ಒಟ್ಟು ಕುಟುಂಬದಲ್ಲಿ ಒಳ್ಳೆಯ ಅತ್ತಿಗೆ ಎಂದೆನಿಸಿಕೊಂಡು ಹೋಗುವದೆಂದರೆ, ಅದೊಂದು ಕಠಿಣ ಕೆಲಸ. ಮಾವನಿಲ್ಲದ ಮನೆಯಿದ್ದರೆ, ಅತ್ತೆಯ ಕೈಯಲ್ಲಿಯೆ ಮಾವನ ಅಧಿಕಾರವೂ ಇರುವದು. ಎಂದಮೇಲೆ ಒಬ್ಬ ಅತ್ತೆಯ ಕೈಯಿಂದಲೇ ಹೌದೆನಿಸಿಕೊಳ್ಳಬೇಕಾದರೆ ಸಾಕುಬೇಕಾಗಿ ಹೋಗುತ್ತದೆ– ಅಂತಹದು ಈ ಜೋಡು ಅತ್ತೆಯ ಕೈಯಿಂದ ಪಾರಾಗುವ ಬಗೆಯಂತು? ಮನೆಯಲ್ಲಿ ಮಾವನ ಮಗಳೊಬ್ಬಳು ವಿಧವೆಯಿದ್ದರೆ ಅತ್ತಿಗೆಯ ಎಲ್ಲ ಬಗೆಯ ಆಶೆ-ಆಕಾಂಕ್ಷೆಗಳು ಕೊನೆಯವರೆಗೆ – ಅಂದರೆ ಆ ವಿಧವೆಯ ಅಥವಾ ಈ ಅತ್ತಿಗೆಯ ಕೊನೆಯ ವರೆಗೆ ಹಾಗೆಯೆ ಉಳಿಯುವವು. ಯಾಕೆಂದರೆ ಆ ವಿಧವೆಗೆ ಮನೆಯಲ್ಲಿ ಬೇರೆ ಯಾವ ಕೆಲಸವೂ ಇಲ್ಲದಿರುವದರಿಂದ, ಎಲ್ಲ ಅಧಿಕಾರವು ಅವಳ ಕೈಯಲ್ಲಿಯೆ! ಮನೆಯಲ್ಲಿ ೩–೪ ಜನ ಚಿಕ್ಕ-ಪುಟ್ಟ

ಮೈದುನಂದಿರಿದ್ದರೆ, ಗಂಡನಿಗೆ ಸಲ್ಲಿಸತಕ್ಕ ಎಲ್ಲ ಸೇವೆ-ಸನ್ಮಾನಗಳಲ್ಲಿ ಅವರಿಗೂ ಕಡಿಮೆಯಾಗದಂತೆ, ಅತ್ತಿಗೆಯು ಜಾಗರೂಕಳಾಗಿರಬೇಕು! ಕೊನೆಯದಾಗಿ ಮನೆಯಲ್ಲಿ ನಾದಿನಿ-ನೆಗಣ್ಣಿಯರಿದ್ದರೆ, ಅವರಲ್ಲಿ ತನ್ನ ವೈಶಿಷ್ಟ್ಯವನ್ನು ತೋರಗೊಡದೆ ತಾನಾಗಿಯೆ ಅವರಂತೆ ನಡೆದುಕೊಳ್ಳಬೇಕು. ಇಂತು ಅತ್ತೆ-ಮಾವಂದಿರಿಗೆ ಮಗಳಾಗಬೇಕು, ನಾದಿನಿ-ನೆಗೆಣ್ಣಿಯರಿಗೆ ಅಕ್ಕನಾಗಬೇಕು, ಮೈದುನಂದಿರಿಗೆ ಮಾತೆಯಾಗಬೇಕು. ಗಂಡನಿಗೆ ಮಡದಿಯಿರುವಳೆಂಬುದನ್ನಂತೂ ಹೇಳಲಿಕ್ಕೆ ಬೇಡ. ಇಷ್ಟೆಲ್ಲ ಸಾಮಾನ್ಯವೇ?

ಅತ್ತೆಯ ತರುವಾಯ ಅತ್ತಿಗೆಯು ಮನೆಯ ಒಡತಿಯಾಗುವಳು ಎಂಬುದು ಚನ್ನಾಗಿ ತಿಳಿದುಕೊಳ್ಳುವಂತಹ ಮಾತು. ಕೇವಲ ಬೇರೆ ಮನೆತನದ ಹೆಣ್ಣುಮಗಳು ಎಂದು ಆಕೆಯನ್ನು ಅವಿಶ್ವಾಸಕ್ಕೆ ಪಾತ್ರಳನ್ನಾಗಿ ಮಾಡದೆ, ಆಕೆಗೂ ತನ್ನವು ಎಂಬ ಆಶೆ-ಆಕಾಂಕ್ಷೆಗಳು ಇರುವವು. ಹೊಣೆಯನ್ನು ಹೊರಿಸಹೋದಂತೆ, ಹಕ್ಕುಗಳಿಗೂ ಆಕೆಯು ಬಾಧ್ಯಸ್ಥಳು ಎಂಬ ಸಂಗತಿಗಳು ಮರೆಯಬಾರದಂತಹವಿರುವವು. ಅದರಲ್ಲಿ ಇತ್ತಿತ್ತಲಾಗಿ ವೈಯಕ್ತಿಕ ಸಂಸ್ಥೆಗಳೇ ಹೆಚ್ಚಾಗುವ ಸಂದರ್ಭಗಳು ಒದಗಹತ್ತಿರುವದರಿಂದ, ಪ್ರತಿಯೊಬ್ಬ ಅತ್ತಿಗೆಗೆ ತನ್ನ ಮನೆ, ತನ್ನ ಹೊಣೆ, ತನ್ನ ಸಂಸಾರಗಳೇ ಹೆಚ್ಚಿನವು ಎಂಬ ವಿಚಾರಕ್ಕೆ ಮನ್ನಣೆ ಕೊಡಲಿಕ್ಕೆಬೇಕು!



ಒಂದೇ ದರ! **Fixed Rate!**

ಪ್ರಭಾತ ಕ್ಯಾಪ ಮಾರ್ಟ

ಗದಗ. ಬ್ರಾಂಚ: ಹೊಸ ಜವಳಿ ಪೇಟೆ ಹುಬ್ಬಳ್ಳಿ



ಮಹನಿಯರೇ, ನಮ್ಮಲ್ಲಿ ಶಿಲೋಲಾಯಿಡ ಕ್ಯಾಪ, ಫರ ಕ್ಯಾಪ, ಜರಿ ಟೊಪ್ಪಿಗೆಗಳು ಅಲ್ಲದೆ ಅನೇಕ ನಮೂನೆಯ ಹಲಕಾ ಮತ್ತು ಭಾರಿ ಕಿಮ್ಮತ್ತಿನಲ್ಲಿ, ತಾಳಿಕೆಯಲ್ಲಿ ಮಜಬೂತ ನೋಡಲಿಕ್ಕೆ ಸುಂದರವಾದಂಥ ಟೊಪ್ಪಿಗೆಗಳು ಸ್ವತಃ ನಮ್ಮ ಕೈಯಿಂದ ತಯಾರ ಮಾಡಲ್ಪಡುತ್ತವೆ. ಟೊಪ್ಪಿಗೆ

ಗಳನ್ನು ತಯಾರ ಮಾಡುವ ಕೆಲಸದಲ್ಲಿ ನಮಗೆ ಅನೇಕ ಸರ್ಟಿಫಿಕೇಟುಗಳು ಮತ್ತು ಪ್ರಶಂಸಾಪತ್ರಗಳು ಸಿಕ್ಕಿವೆ. ಕಾರಣ ನಮ್ಮ ಟೊಪ್ಪಿಗೆಗಳನ್ನು ಒಮ್ಮೆ ವಾಪರಿಸಿ ಖಾತ್ರಿ ಮಾಡಿಕೊಳ್ಳಿರಿ.

ಹೋಕ ವ್ಯಾಪಾರಸ್ಥರಿಗೆ ಸೋವಿದರ ದಿಂದ ಮಾಲು ಪೂರೈಸುತ್ತೇವೆ.

ಏಜಂಟರು ಬೇಕು!

ಏಜನ್ಸಿ ತಕ್ಕೊಳ್ಳುವ ಇಚ್ಛೆಇದ್ದವರು ಸಮುಚ್ಚಯ ಅಥವಾ ಪತ್ರದ್ವಾರ ಮೇಲಿನ ವಿಳಾಸಕ್ಕೆ ಬರೆದು ತಿಳಕೊಳ್ಳಬೇಕು

ದೇಹದ ಹಿಗ್ಗು

ಡಾ. ಕೃಷ್ಣ ಮುಳಬಾಗಲ

ಬಿ.ಬಿ.ಸಿ ಎಲ್.ಡಿ, (ಯು ಎಸ್ ಎ.). ಎಫ್.ಆರ್.ಇಕಿಸ್. (ಲಂಡನ್) ಎಂ ಆಯ್.ಎಂ.ಎಫ್.ಎಚ್. (ಯು.ಎಸ್.ಎ.)

(ಮುಂದರಿದುದು)

●

ಇಷ್ಟಾದರೂ ಅರ್ಧಾಂಗಿ ಇಲ್ಲದ ಬಾಳ್ವೆಯು ವ್ಯರ್ಥವೇ. ಅದೇ ಮೇರೆಗೆ ಗೆಳೆಯರಿಲ್ಲದಿರುವದೂ ವ್ಯರ್ಥ. ಹೆಂಡರು ಗೆಳಿಯರ ಗುಂಪು, ದುಡ್ಡಿರುವ ತನಕ. ದುಡ್ಡೇ ದೊಡ್ಡಪ್ಪ. ಅದು ಇದ್ದಲ್ಲಿ ಹೆಂಡರು ಮಕ್ಕಳು ಗೆಳೆಯರು ಇರುವೆ ಸಾಲಾಗಿ ಮುಕರುತ್ತಾರೆ. ಅಂತೂ ಸದ್ಯಕ್ಕೆ ಯಾರೂ ನನ್ನವರಲ್ಲ. ಆದರೆ ಈಗ ನನ್ನ ಆರ್ಥಿಕ ದೈನ್ಯತೆಯ ಪರಿಸ್ಥಿತಿಯಲ್ಲಿ ಇದ್ದ ನೆಂಟರು ಸಹ ನಿಃಸಂದೇಹವಾಗಿ ನನ್ನನ್ನು ಮರೆತಿರುತ್ತಾರೆ. ನನ್ನನ್ನು ನೋಡದ ಸಾವಿರಾರು ಮಾನವರು ಮಾತ್ರ ನನ್ನ ಸ್ನೇಹಾಪೇಕ್ಷೆ ಮಾಡುತ್ತಾರೆ. ನನ್ನ ಬರಹ ವಕ್ತೃತ್ವಗಳನ್ನು ಹೊಗಳುತ್ತಾರೆ. ಹುಟ್ಟಿದಲ್ಲಿ ಮಾರುವದಿಲ್ಲೆಂಬುವದು ನಿಜ. ಎಷ್ಟೋ ಜನರು ಅಸೂಯಾ ಪ್ರೇರಣೆಯಿಂದ ಪೂರಿತರಾಗಿ ನನ್ನ ಕೇಡು ಬಯಸಿದರೂ ನನ್ನ ಉತ್ಕರ್ಷವೇ ಆದರಿಂದ ಹಬ್ಬುತ್ತಲಿದೆ. ಕಾಲಕಾಲದ ಅಪಜಯವೇ ನನ್ನ ಅಂತಿಮ ಜಯಭೇರಿಯ ಮೊದವನ್ನು ಮಾಡುತ್ತಲಿದೆ. ವೈರಿಗಳ ಸಮೂಹವು ಹೆಚ್ಚಾದಂತೆ ನನ್ನ ಆತ್ಮ ಸಾಮರ್ಥ್ಯವು ಹೆಚ್ಚುತ್ತಲಿದೆ. ಅವರು ನನ್ನ ಹಾನಿಗೆ ಹಾತೊರೆದಂತೆ ನನ್ನಲ್ಲಿಯ ಜಾಗ್ರತೆಯು ಬೆಳೆದು, ಅಡಗಿದ್ದ ಗುಣಗಳು ಬೈಲಿಗೆ ಬಂದು ಹೋರಾಡಿ ಜಯಪ್ರದರಾಗುವದರಲ್ಲಿ ಸಂದೇಹವಿಲ್ಲ. ಕರ್ನಾಟಕ ಮಾತೆಯು ನನ್ನನ್ನು ಕಟಕತನದಿಂದ ಕನಿಕರವಿಲ್ಲದೆ ಮಲಮಗನಂತೆ ನಡಿಸಿಕೊಳ್ಳುತ್ತಿದ್ದಾಳೆ. ಆದರೂ ಆಕೆಯ ಸೇವೆಯನ್ನು ಮಾಡುವದು ನನ್ನ ಕರ್ತವ್ಯವು. ಹೋರಾಟವೇ ನನ್ನ ಜೀವಿತದ ಗುಟ್ಟು. ಹಣವಿಲ್ಲದಿದ್ದರೂ ಈ ಜಗತ್ತು ನನಗೆ ಕೈಲಾಸವಾಗಿ ತೋರುತ್ತದೆ. ಸತ್ಯ-ಸಾತ್ವಿಕ ವಿಚಾರಗಳೂ ಆಚಾರಗಳೂ ಜಾಣ ಜೀವಿತವೂ ನನ್ನನ್ನು ಹರಿಸಲಿ. ಮಾತೃಭಾಷೆಯಲ್ಲಿ ಬರೆದ ಇದೇ ಮೊದಲನೆಯ ಸಾಹಿತ್ಯಸಾಗರದಲ್ಲಿಯ ಹೂವಿನ ಪಕಳೆ ಇರಲಿ. ಜೀವದ ಹಂಬಲವೂ ಅದರ ಹಿಗ್ಗೂ ನನಗೆ ಉಂಟು. ಆದರೆ ದೈವ ವಶಾತ್ ಕೋಟ್ಯಾವಧಿ ಜನರು ಕೇವಲ ದುಃಖದಲ್ಲಿ ಮುಳುಗಿದವರು ಇದ್ದರೂ ಕೂಡ ಯಾಕೆ ದೇಹಕ್ಕೆ ಹಿಗ್ಗುವರೋ ವಿಚಕ್ಷಣೆಯಾಗಿ ನೋಡುವಾ.

ಡಾ. ಕೃಷ್ಣ ಮುಳಬಾಗಲ

ಬದುಕಿ ಇರುವ ಬಾಳ್ವೆಯು ಅಂತಃಸ್ಫೂರ್ತಿಯಿಂದ ಪ್ರೇರಿತವಾಗಿರುತ್ತದೆ. ಮಾನಸ ಶಾಸ್ತ್ರಜ್ಞರು ಜೀವಿಸುವ ಮೋಹವು ಮೊಟ್ಟಮೊದಲನೆಯ ಸ್ವಾಭಾವಿಕ ನೇಮವು ಎಂದು ಸಾರುತ್ತಾರೆ. ಇದೇ ಸ್ವಂತ ಸ್ವಾಸ್ಥ್ಯವೆಂದು ಹೇಳಬಹುದು. ಇದಕ್ಕೇ ದೇಹದ ಹಿಗ್ಗೆನ್ನಬೇಕು. ಆತ್ಮನು ನಿತ್ಯನು; ಅಂತೇ ಅಂತರ್ಯಾಮಿಯಾದ ಜೀವವು ಇದ್ದೇ-ಬಾಳೇ ತಿರುವದು. ಶರೀರದಲ್ಲಿ ಅಡಗಿದ ಜೀವವು ಕಡೆತ ಹೊಡೆತಗಳನ್ನು ಅನುಭವಿಸಿದರೂ ದೀಪಜ್ಯೋತಿಗೆ ಪಕ್ಕದ ಹುಳವು ಮೋಹಿಸಿ ಭಸ್ಮೀಭೂತವಾದರೂ ಪುನಃ ಪುನಃ

ಅದರ ಗುಹ್ಯತಮವಾದ ಅಭಿಲಾಷೆಯನ್ನು ಬಿಡಮ. ಇನ್ನು ಎರಡನೇ ನೇಮವೆಂದರೆ ಮಾನವರ ಸ್ವಭಾವಸಿದ್ಧವಾದ ಉತ್ಪಾದನ ಕಾರ್ಯವು. ಅಂತೇ ಬರೀ ಜೀವದಿಂದ ಇರುವದಷ್ಟೇ ಅಲ್ಲ. ಅದರಿ ಜೀವಕ್ಕೆ ಜೀವವನ್ನು ಹುಟ್ಟಿಸಿ ಗುಣಿಸಿ ಬೆಳಿಸುವದೇ ಮತ್ತು ಅನುಭವ ಸಿದ್ಧವಾಗಿ ಅದರ ಆನಂದವನ್ನು ಆಸ್ವಾದನ ಮಾಡುವದೇ ಜೀವನದ ಇಂಗಿತವು. ಇವುಗಳ ಹೊರ್ತು ಇನ್ನೂ ಕೆಲವು ಜೀವನದ ಉಪಾಧಿಗಳುಂಟು. ಅಂತರಂಗದಿಂದ ಹೊರಡುವ ಲೀಲೆಯ ಲಹರಿಗಳು, ಜೀವವು ಜೊತೆಗಾರನಾಗಿ ಇರುವ ಲಾಲಸೆಯು, ಳಿಕೆ – ಬಳಕೆ ಮಾಡುವ ಸ್ಫೂರ್ತಿಯು ಮತ್ತು ಜನಸಂಗೋಪನವು ಇವೇ ಮೊದಲಾದವುಗಳು, ಮನುಷ್ಯ ಸ್ವಭಾವವಾಗಿ ಸೃಷ್ಟಿ ಆರಂಭದಿಂದ ಬರಬರುತ್ತ ಬೇರೂರಿ ನೆಲೆಗೊಂಡಿರುತ್ತವೆ. ಇವೇ ಗುಣಗಳು ಮಹಾಶಕ್ತಿರೂಪವಾಗಿ ಜೀವದಿಂದ ಬಾಳುವದಕ್ಕೆ ಪ್ರೋತ್ಸಾಹಿಸುತ್ತವೆ. ಜೀವನವು ಒಂದು ನಾಟಕವೆಂದು ಆಟದೋಪಾದಿಯಲ್ಲಿ ಅದನ್ನು ಅನುಭವಿಸಿದರೆ ಅದರ ಇಹಲೋಕದಲ್ಲಿಯ ಯಾತ್ರೆಯು ಸುಲಭವಾಗಿಯೂ ನಿರಾತಂಕವಾಗಿಯೂ ಜರಗುತ್ತದೆ. ಜಗದ್ವ್ಯಾಪಾರಗಳೆಲ್ಲ ಕೇವಲ ಆಟದಂತೆ ಊಹಿಸಿ ಮನಾನಂದಗೊಳಿಸುತ್ತ ಕಾಲಕ್ರಮಣ ಮಾಡಿದರೆ ಚಿರಕಾಲ ತರುಣಾವಸ್ಥೆಯು ಉಂಟಾಗಿ ಸೌಖ್ಯ-ಸಮಾಧಾನಗಳನ್ನು ಹೊಂದಿ ಜೀವನವು ಸುಖಮಯವಾಗುತ್ತದೆ. ತಾರುಣ್ಯದ ಗುಹ್ಯವು ಇದೇ. ದೇಹದ ಹಿಗ್ಗಿನ ಗೌಪ್ಯವು ನಿಜವಾಗಿ ಇದೇ. ಅದರಂತೆ ಜೊತೆಗಾರರೊಡಗೂಡಿ ಇರುವ ಕುತೂಹಲವು ಮತ್ತಿಷ್ಟು ಜೀವನದ ಮೋಹವನ್ನೂ ಹೆಚ್ಚಿಸುತ್ತದೆ. ಗೆಳೆಯರ ಮತ್ತು ಇತರ ಭಾಂಧವರ ಹುಳುಕು ಕೊಂಕುಗಳು ಗೊತ್ತಿದ್ದರೂ ಅವರನ್ನು ಪ್ರೀತಿಸುವದು, ಅವರಲ್ಲಿಯ ಅವಗುಣಗಳನ್ನು ಲೆಕ್ಕಿಸದೆ ಅವರನ್ನು ಪರಾಮರಿಸುವದು, ಬೆಲೆಬಾರದಿದ್ದರೂ ಉಪಕೃತಿ ಸಿಗದಿದ್ದರೂ ಅವರು ಅವುಗಳನ್ನು ಎಣಿಸದಿದ್ದರೂ ಅವರಿಗೆ ಸಿರಬಾಗುವದು, ಅವರು ನನುಗೆ ವಿಷಕೊಟ್ಟರೂ ಹಾಲನ್ನೆರೆಯುವದು, ಅವರು ಕೃತಘ್ನರಾದರೂ ಅವರನ್ನು ಉಪೇಕ್ಷಿಸದೆ ನಿಂದಿಸದೆ ಇರುವದು, ಇವೇ ಮುಂತಾದ ಜೀವನದ ಗುಹ್ಯತರವಾದ ದೇಹಕ್ಕೆ ಹಿಗ್ಗುವಂತಹ ಬೆಲೆ ಇಲ್ಲದ ದೈಹಿಕ ದೈದೀಪ್ಯಮಾನವಾದ ಶ್ಯೇಯವು ಆಗಿದೆ. ಳಿಕೆಯ ಲಾಲಸೆಯು ಕೃಪಣರನ್ನಾಗಿ ಮಾಡದೆ ಳಿಸಿದ ಯಾವತ್ತು ವಸ್ತುಗಳ ಆಳಾಗದೆ ಇರುವದೇ ಮುಖ್ಯತ್ವದಿಂದ ಜೀವನವನ್ನು ಸೌಖ್ಯ-ಸಮಾಧಾನಗಳಲ್ಲಿ ಇಡುವ ಪ್ರೇಮಾವ್ಹಾನವಾಗಿರುವದು.

ಇವೇ ಕೆಲವು ಸಿದ್ಧಾಂತಗಳು. ದೇಹದ ಹಿಗ್ಗಿಗೆ ಕಾರಣೀಭೂತವಾಗಿವೆ. ಜೀವವು ಜೀವಂತವಿರುವ ಆತ್ಯಾಶ್ಚರ್ಯಕರವಾದ ಸುಖಭರಿತ ಗೂಢಹುಚ್ಚೀಸರಿ. ಪ್ರೇಮವು ಜೀವನ ಸರ್ವಸ್ವದ ಬಹುಮೂಲ್ಯವಾದ ಮತ್ತು ಆಧಾರ ಭೂತವಾದ ಸಿಂಹಾಸನವೇರಿ ಆಟವು ಜೀವನದ ಆಟ್ಟಹಾಸದ, ಅಚ್ಚುಕಟ್ಟಾದ ಮನೋವ್ಯಾಪಾರದ ಪುಷ್ಟಿತುಷ್ಟಿಗಳ ಉಗಮವೇ ಸರಿ. ಸ್ನೇಹತ್ವವು ಜೀವನದ ಶೃಂಗಾರಾತಿಶಯವೂ ಸ್ವಾಸ್ಥ್ಯವೂ ಶಾಂತಿಯೂ ಆಗಿದೆ. ಳಿಕೆಯು ಜೀವನದ ಜೋಪಾನಿಕೆಯ ಆಶ್ರಯಭೂತವಾದ ಖಜೀನೆಯೂ ವ್ಯಾಪಾರದ ಆಗರವೂ ಆಗಿದೆ. ಅರಸನಿಗೂ ಭಿಕಾರಿಗೂ ಸರಿಯಾಗಿ ಇವು ಈಶದತ್ತ ವರಗಳು. ಇವುಗಳನ್ನು ತಾತ್ಸರ ಮಾಡದೆ ಹೂಳಿಡದೇ ಉಪಯೋಗಿಸಿ ಅದರಿಂದಾಗುವ ಮತ್ತು ಹುಟ್ಟುವ ಫಲಗಳನ್ನು ಹೆಚ್ಚಿಸಿ ಸೇವಿಸಿ ತೃಪ್ತರಾಗಿ ಜೀವನದ ವ್ಯಾಪಾರವನ್ನು ಮತ್ತಿಷ್ಟು ರುಚಿಕರವಾಗಿ ಮಾಡಿ ದೇಹಾಸ್ತವಾಗುವವರೆಗೆ ಈ ಅಮೃತ ಪ್ರಾಶನ ಮಾಡುವದೇ ಮಾನವನ ಆದ್ಯ ಮ ಅಂತಿಮ ಕರ್ತವ್ಯವು.

ಸ್ವಲ್ಪದರಲ್ಲಿ ದೇಹದ ಹಿಗ್ಗು ಸ್ವತಂತ್ರ ಬಾಳ್ವೆಯು ಶರೀರ ಸ್ವಾಸ್ಥ್ಯವನ್ನು ಪೂರಾ ಕಾಯುವದರಲ್ಲಿ, ಆನಂದವನ್ನು ಹೆಚ್ಚಿಸುವದರಲ್ಲಿ ದುಃಖಗಳನ್ನು ದೂರ ಬಿಸಾಡುವದರಲ್ಲಿ ತುಂಬಾ ವಾಸಿಸುತ್ತದೆ. ಕಾರಣ ದೊಡ್ಡ ಮನಸ್ಸಿನಿಂದ ಬಾಳುವದು, ಜೀವನ ವ್ಯಾಪಾರಗಳಲ್ಲಿ ತ್ರಿಕರ್ಣಪೂರ್ವಕ ಮನಸಿಡುವದು, ಭೀತಿ ಇಲ್ಲದೆ ಭಗೀರಥ ಪ್ರಯತ್ನ ಮಾಡುವದು, ಜೀವದಿಂದ ಇದ್ದು ಜೀವದ ಮಹತ್ವವನ್ನು ಬೆಳಿಸುವದು, ಇದರಿಂದ ಯಾರೂ ಮುಟ್ಟದಂಥ ಗತಿಯನ್ನು ಹೊಂದುವನು. ಸತ್ಕಾರ್ಯ ಸತ್ಪರಾಯಣರಾಗಿ ಎಲ್ಲವನ್ನು ಜಯಿಸಿ ದೇಹದ ಆಟವನ್ನು ಆಡಿರಿ. ಅಂದರೇನೇ ದೇಹದ ಹಿಗ್ಗಿನ ಆಟವು ಸ್ವರ್ಗದಆಟ್ಟಕ್ಕೆ ಇಹದಲ್ಲಿಯೇ ಮುಟ್ಟಿಸುತ್ತೆ.

ಕೃತ್ರಿಮ ರೇಶಿಮೆ

ಶ್ರೀ. ಆರ್. ವ್ಹಿ. ಕುಲಕರ್ಣಿ
ಗದಗ

ಮೊನ್ನೆ ಮೊನ್ನೆ ಬೆಳಕಿಗೆ ಬಂದ ಈ ಕೃತ್ರಿಮ ರೇಶಿಮೆಯು ಇಷ್ಟರೊಳಗಾಗಿಯೆ ಒಂದು ಭವ್ಯವಾದ ಸ್ವತಂತ್ರ ವ್ಯವಸಾಯವನ್ನು ಉಂಟುಮಾಡುವದೆಂದು ಯಾರೂ ಎಣಿಸಿರಲಿಲ್ಲ. ಇಂದು ನೆಯ್ಗೆಯ ಯಾವ ಶಾಖೆಯನ್ನಾದರೂ ನೋಡಬಹುದು, ಯಾವ ಎಳೆದಾರಗಳ ಉದ್ಯೋಗವನ್ನಾದರೂ ನೋಡಬಹುದು, ಎಲ್ಲಕಡೆಯಲ್ಲಿಯೂ ಇದರ ಕೈವಾಡವೆ ಕಂಡು ಬರುತ್ತದೆ. ಇದಕ್ಕೆ ಸಿಗುವಷ್ಟು ಪ್ರಾಶಸ್ತ್ಯವು ಇನ್ನಾವ ಎಳೆಗೂ– ಸ್ವಾಭಾವಿಕ ರೇಶಿಮೆಗೂ ಕೂಡ ಇಲ್ಲ. ಕೃತ್ರಿಮ ರೇಶಿಮೆಯು ಇಂದಿನ ನೆಯ್ಗೆಯಲ್ಲಿಯ ನಮ್ಮ ವ್ರಗತಿಯ, ಕಲೆಯ ದ್ಯೋತಕವಾಗಿದೆ: ಇಂದಿನ ಸಂಸ್ಕೃತಿಯ ಮಂದಿರಕ್ಕೆ ಒಂದು ಸುಂದರವಾದ ಶಿಖರವಾಗಿದೆ

ಕೃತ್ರಿಮ ರೇಶಿಮೆಯ ಉತ್ಪತ್ತಿಯಾದದ್ದು ಕಳೆದ ಶತಮಾನದ ಕೊನೆಕೊನೆಯ ಭಾಗದಲ್ಲಿ. ಮಹಾಯುದ್ಧಕ್ಕೆ ತುಸು ಮುಂಚಿನಿಂದ ಯುರೋಪಿನ ಜನತೆಯಲ್ಲಿ ಸಾರ್ವತ್ರಿಕವಾಗಿ ಹಬ್ಬುತ್ತಾ ಬಂದ ಕಲಾಭಿರುಚಿ, ತರತರದ ಬಣ್ಣಬೆಳಕುಗಳ ಅತಿಶಯವಾದ ಮೋಹ, ಕೈಗಾರಿಕೆಯ ಉದ್ಯೋಗಗಳನ್ನು ಬೆಳೆಸಿಕೊಂಡು ಹೋಗುವಂತಹ ಗಿರಾಕಿಗಳ ಪ್ರೋತ್ಸಾಹ — ಇವು ಮುಮ್ಮುರಿಗೊಂಡು ನೆಯ್ಗೆಯ ವ್ಯವಸಾಯದಲ್ಲಿ ಒಂದು ಭವ್ಯವಾದ ಕ್ರಾಂತಿಗೆ ಕಾರಣವಾದವು. ರಸಾಯನ ಶಾಸ್ತ್ರದ ದಿವ್ಯ ತತ್ವಗಳನ್ನು ಔದ್ಯೋಗಿಕ ಜೀವನದಲ್ಲಿ ಹರಿಬಿಡಲಾಗಿ, ಇಂದಿನವರೆಗೆ ಗೂಢವಾಗಿದ್ದ ಎಷ್ಟೋ ಉದ್ಯೋಗಗಳು ಮೂಡಿ, ಬೆಳೆದು ಬಂದವು. ಇವುಗಳಲ್ಲಿ ಎಲ್ಲಕ್ಕೂ ಹೆಚ್ಚಾಗಿ ಜನ ಮೆಚ್ಚುಗೆಯನ್ನು ಪಡೆದು ಬೆಳೆದು ಬಂದದ್ದು ಕೃತ್ರಿಮ ರೇಶಿಮೆಯ ಉದ್ಯೋಗ.

ಕೃತ್ರಿಮ ರೇಶಿಮೆಯು ನಿಸರ್ಗದಲ್ಲಿ ಸ್ವಾಭಾವಿಕವಾಗಿ ಹುಟ್ಟಿಬರುವ ರೇಶಿಮೆಯ ಸೂಕ್ಷ್ಮ ನಿರೀಕ್ಷಣೆಯಿಂದ, ಅದನ್ನು ಅನುಕರಿಸಿ, ತಯಾರಿಸಲ್ಪಟ್ಟಿತು. ರೇಶಿಮೆಯ ಹುಳವು ತಿನ್ನುವ ಎಲೆಗಳನ್ನು ಪರಿಶೋಧಿಸಿ, ಅವುಗಳ ಮುಖ್ಯ ಸತ್ವವಾದ ಸಿಲುಲೋಜ (Cellulose) ನ್ನು ತೆಗೆದುಕೊಂಡು ಅದರಿಂದ ರಾಸಾಯನಿಕವಾಗಿಯೂ, ಯಾಂತ್ರಿಕವಾಗಿಯೂ ಎಳೆಗಳನ್ನು ತೆಗೆಯುವ ಪ್ರಯತ್ನವು ಸಫಲವಾಯಿತು. ಹೀಗೆ ತಯಾರಿಸಿದ ರೇಸಿಮೆಯು ವನಸ್ಪತಿಗಳಿಂದ ಹುಟ್ಟಿದ ಪರ್ಯಾಯ ವಸ್ತುವಾಗಿದೆ. ಆದ್ದರಿಂದ ರಸಾಯನ ಶಾಸ್ತ್ರದ ದೃಷ್ಟಿಯಿಂದ ಅದು ಅರಳೆ, ನಾರುಗಳ ಜಾತಿಗೆ ಸೇರಿದುದು; ಅದೇ ಉಣ್ಣೆ ರೇಶಿಮೆಗಳು ಕೇವಲ ಪ್ರಾಣಿಜನ್ಯವಾಗಿವೆ.

ಈ ಸಿಲೊಲೂಜಿನ ದ್ರವವನ್ನು ರಸಾಯನಿಕ ದ್ರವಗಳ ಸಂಪರ್ಕದಿಂದಲೂ ವಿಧವಿಧವಾದ ಯಂತ್ರಗಳ ಸಹಾಯದಿಂದಲೂ ರೂಪಾಂತರಗೊಳಿಸಿ, ತೆಳುವಾಗಿ ಒಂದೆ ಸವನಾಗಿರುವ, ಗಟ್ಟಿಯಾದ ಎಳೆಗಳನ್ನು ಹೊರಡಿಸುವುದೆ ಕೃತ್ರಿಮ ರೇಶಿಮೆಯ ಮುಖ್ಯ ತತ್ವವಾಗಿರುತ್ತದೆ. ಸಿಲೊಲೂಜಿನಿಂದ ಎಳೆ ಹೊಸೆಯುವ ಯಂತ್ರದವರೆಗಿನ ಕಾರ್ಯವೆಲ್ಲ ಕೇವಲ ರಾಸಾಯನಿಕವಾಗಿರುತ್ತದೆ; ಅನಂತರದ ಕೆಲಸವು ಯಾಂತ್ರಿಕವಾಗಿದೆ ಕಚ್ಚಾಮಾಲು ಹೋಗಿ ಕೃತ್ರಿಮ ರೇಶಿಮೆಯ ಎಳೆಗಳು ಸಿದ್ಧವಾಗುವುದಕ್ಕೆ ಹಗಲಿರುಳೂ ದುಡಿದರೆ ಸುಮಾರು ೧೫ ದಿನಗಳ ಅವಧಿ ಬೇಕಾಗುತ್ತದೆ.

ಆರ್. ಫ್ಹಿ. ಕುಲಕರ್ಣಿ

ಮೂವತ್ತು ನಲವತ್ತು ವರ್ಷಗಳ ಪರಿಶ್ರಮದಿಂದ ಈ ರೇಶಿಮೆಯು ರಾಸಾಯನಿಕವಾಗಿಯೂ ಯಾಂತ್ರಿಕವಾಗಿಯೂ ಈಗಿನ ಪರಿಪಕ್ವ ಸ್ಥಿತಿಯನ್ನು ಹೊಂದಿದೆ. ಈಗ ಒಂದೆ ಸವನಾದ ತಾಳಿಕೆಯುಳ್ಳ ಏಕಪ್ರಕಾರವಾದ– ಸ್ವಾಭಾವಿಕ ರೇಶಿಮೆಗಿಂತಲೂ ನಯವಾದ ಎಳೆಗಳನ್ನು ನಾವು ತಯಾರಿಸ ಬಹುದು. ಯುದ್ಧದ ನಂತರ ಗಿರಾಕಿಗಳ ಹಾಗು ಬಂಡವಾಳ ಗಾರರ ಒಲವು ಇದರ ಕಡೆಗೆ ಹೆಚ್ಚಾಗಿ, ಕೃತ್ರಿಮ ರೇಶಿಮೆಯ ಉತ್ಪತ್ತಿಯು ಅಧಿಕವಾಗತೊಡಗಿತು. ಈಗ ಸ್ವಾಭಾವಿಕ ರೇಶಿಮೆಗಿಂತ ಇದೇ ಹೆಚ್ಚಾಗಿ ಹುಟ್ಟುತ್ತಿದೆ.

ಕೃತ್ರಿಮ ರೇಶಿಮೆಯನ್ನು ತಯಾರಿಸುವ ವಿಧಾನಗಳು ನಾಲ್ಕು :—

೧. ನೈಟ್ರೊಸಿಲುಲೋಜ ಪದ್ಧತಿ (Nitrocellulose process)

೨. ಕಪ್ರಾಮೋನಿಯಮ್ ,, (Cuprammonium ,,)

೩. ಎಸಿಟೇಟ್ ,, (Acetate ,,)

೪. ವ್ಹಿಸ್ಕೊಸ್ ,, (Viscose ,,)

ಎಲ್ಲವುಗಳಿಗೂ ಕಚ್ಚಾಮಾಲು ಸಿಲುಲೋಜ (ಅರಳಿಯಿಂದ ಇಲ್ಲವೆ ಕಟ್ಟಿಗೆಯಿಂದ) ತಯಾರಿಸುವ ರೀತಿಯೂ ರಾಸಾಯನಿಕವೆ; ಆದರೆ ಉಪಯೋಗಿಸುವ ರಸಾಯನ ದ್ರವ್ಯಗಳು ಮ್ಹಾತ್ರ ಭಿನ್ನವಾದುವು. ಮೊದಲನೆಯದರಲ್ಲಿ ಬಳಸಿಕೊಳ್ಳುವ ಬೆಲೆಯುಳ್ಳ ರಸಾಯನಗಳ ಮೂಲಕ ಅದು ಬಹಳ ವೆಚ್ಚದ್ದಾಗಿದೆ. ಎರಡನೆಯ ಪದ್ಧತಿಯು ಮೊದಮೊದಲು ಬಳಕೆಯಲ್ಲಿದ್ದರೂ ಇತ್ತೀಚೆಗೆ ಪ್ರಚುರವಾದ ವ್ಹಿಸ್ಕೊಸ ಪದ್ಧತಿಯ ಪ್ರಭಾವದಿಂದ ಕುಗ್ಗಿಹೋಗಿದೆ. ಮೂರನೆಯ ವಿಧಾನವಾದರೂ ವೆಚ್ಚದ್ದಾಗಿರುವದರಿಂದ ಅಷ್ಟು ಫಲಕಾರಿಯೆನಿಸುವದಿಲ್ಲ. ಅಲ್ಲದೆ ಅದರಲ್ಲಿ ಆರ್ದ್ರತೆಯನ್ನು ಹೀರಿಕೊಳ್ಳುವ ಗುಣವು ಇಲ್ಲದೆ ಹೋದುದರಿಂದ ಅದಕ್ಕೆ ಚೆನ್ನಾಗಿ ಬಣ್ಣ ಕೊಡಲಾರದು. ಈಗ ತಯಾರಿಸಲ್ಪಡುವ ಕೃತಿಮ ರೇಶಿಮೆಯ ಮುಕ್ಕಾಲು ಪಾಲು ವ್ಹಿಸ್ಕೊಸ್ ಪದ್ಧತಿಯಿಂದ ಆದದ್ದು.

ಈ ಪದ್ಧತಿಯು ಬಹಳ ಸೂಕ್ಷ್ಮವಾಗಿರುವದರಿಂದ ಅದನ್ನು ಮೊದಲಿಂದ ಕೊನೆಯವರೆಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಿಕೊಳ್ಳುತ್ತಲೆ ಇರಬೇಕು. ತುಸು ತಪ್ಪಿದರೆ ರಾಸಾಯನಿಕ ಪರಿಣಾಮಗಳಲ್ಲಿ ಹೆಚ್ಚು ಕಡಿಮೆಯಾಗಿ ರೇಶಿಮೆಯಲ್ಲ ಕೆಟ್ಟು ಹೋಗುವ ಸಂಭವವಿರುತ್ತದೆ.

ಕೃತ್ರಿಮ ರೇಶಿಮೆಯು ಮಿದುವಾಗಿ, ನಯವಾಗಿ ಅನೇಕ ಎಳೆಗಳುಳ್ಳದ್ದಾಗಿರುತ್ತದೆ. ಅದಕ್ಕೆ ಇಷ್ಟು ಪ್ರಾಶಸ್ತ್ಯ ಬಂದಿರುವುದಕ್ಕೆ ಅದರಲ್ಲಿರುವ ಏಕರೂಪತೆ, ಜಿಲುವಾದ ಮಿರುಗು, ಹೆಚ್ಚಾಗಿ ಬಣ್ಣವನ್ನು ಹೀರಿಕೊಳ್ಳುವ ಗುಣ– ಇವೇ ಕಾರಣಗಳು. ಕೃತ್ರಿಮ ರೇಶಿಮೆಯ ಬಟ್ಟೆಗಳನ್ನು ಬಲು ನಾಜೂಕಾಗಿ ಉಪಯೋಗಿಸಬೇಕು. ಅದು ಉಳಿದ ಬಟ್ಟೆಗಳಂತೆ ನುಗ್ಗಾಟಿಕ್ಕಾಟಗಳನ್ನು ತಾಳಿಕೊಳ್ಳುವಷ್ಟು ಒರಟಾಗಿರುವುದಿಲ್ಲ. ಬಹಳ ಸುಕುಮಾರ. ನೀರಲ್ಲಿ ಅದ್ದಿಬಿಟ್ಟರೆ ನಿಸ್ಸತ್ವವಾಗಿ ಹೋಗುತ್ತದೆ, ಅದೆ ಒಣಗಿತೆಂದರೆ ಪುನಃ ತನ್ನ ಬಲವನ್ನು ಹೊಂದುತ್ತದೆ. ಆರ್ದ್ರತೆಯನ್ನು ಹೀರಿಕೊಳ್ಳುವ ಗುಣವಿರುವ ಮೂಲಕ ಇದನ್ನು ಒಳಗಿನ ಪೋಷಾಕಿಗಾಗಿ ಉಪಯೋಗಿಸುತ್ತಾರೆ; ಮೈ ಬೆವರನ್ನು ಹೀರಿಕೊಂಡು ಮೈಯನ್ನು ಒಣದಾಗಿಯೂ ಸುಖವಾಗಿಯೂ ಇಡುತ್ತದೆ. ಇನ್ನೊಂದು ಹೆಚ್ಚಿನ ಸಂಗತಿಯೆಂದರೆ ಇದು ಸ್ವಾಭಾವಿಕ ರೇಶಿಮೆಯ ಹಾಗೆ ಬೆವರಿನಿಂದ ಕೊಳೆತು ಬಣ್ಣಗೆಡುವದಿಲ್ಲ. ಇದರ ಹೊಳಪು ಮೊದಲಿಂದ ಕೊನೆವರೆಗೆ ಹಾಗೆಯೆ ಉಳಿಯುವಂತಹದು.

ವ್ಹಿಸ್ಕೊಸ್ ಪದ್ಧತಿಯಿಂದ ತಯಾರಾದ ರೇಶಿಮೆಯು ಬಹುತರವಾಗಿ ಸ್ವಾಭಾವಿಕ ರೇಶಿಮೆಯನ್ನೆ ಹೋಲುತ್ತದೆ; ಅದಕ್ಕಿಂತಲೂ ತುಸು ಒರಟು, ತುಸು ತಣ್ಣಗೆ ಹತ್ತುತ್ತದೆ. ಆದರೆ ಬೇಕೆನಿಸಿದರೆ ಎಷ್ಟು ಬೇಕಷ್ಟು ನಿದುವಾದ ಎಳೆಗಳನ್ನು ಸ್ವಾಭಾವಿಕ ರೇಶಿಮೆಯ ಎಳೆಗಿಂತಲೂ ಸೂಕ್ಷ್ಮವಾದ, ನಯವಾದ ಎಳೆಗಳನ್ನು ತಯಾರಿಸುವುದು ಸಾಧ್ಯವಿದೆ.

ಹತ್ತಿ, ನಾರು ಮುಂತಾದವುಗಳೊಡನೆ ಹೊಂದಿಸಿಯಾಗಲಿ, ಇಲ್ಲವೆ ಸ್ವತಂತ್ರವಾಗಿಯಾಗಲಿ ಕೃತ್ರಿಮ ರೇಶಿಮೆಯು ನೆಯ್ಗೆಯ ಉದ್ಯೋಗದ ಎಲ್ಲ ಶಾಖೆಗಳಲ್ಲಿಯೂ ಉಪಯೋಗಿಸಲ್ಪಡುತ್ತಿದೆ. ಸಾಧಾರಣವಾಗಿ ನೂಲು, ರೇಶಿಮೆಗಳಿಂದಾಗುವ ಬಟ್ಟೆಬರೆಗಳನ್ನಲ್ಲದೆ ಅವುಗಳೊಡನೆ ಬೆರೆಸಿ ಇನ್ನುಳಿದ ತರತರದ ವಸ್ತ್ರಗಳನ್ನೂ ಈ ರೇಶಿಮಿಯಿಂದ ತಯಾರಿಸುವುದುಂಟು. ಗ್ಯಾಸ್ ದೀಪಗಳ ಉರಿಜಾಳಿಗೆಗಳು (gas mantles), ಆಟದ ಒಡವೆಗಳು, ಕೃತ್ರಿಮ ಕೇಶಗಳು ಈ ರೇಶಿಮೆಯಿಂದ ಮಾಡಿದುವು. ಕೃತ್ರಿಮ ರೇಶಿಮೆಯಲ್ಲಿ ವಿದ್ಯುತ್ತು ಹರಿಯುವದಿಲ್ಲವಾದುದರಿಂದ ಅದು ವಿದ್ಯುದ್ವಾಪಕಗಳ ವೇಷ್ಟನವಾಗಿ ಉಪಯೋಗಿಸಲ್ಪಡುತ್ತದೆ. ಈ ರೇಶಿಮೆಯ ತಯಾರಿಕೆಯಲ್ಲಿ ಹೊರಟ ಪರ್ಯಾಯ ವಸ್ತುಗಳನ್ನಾಗಲಿ, ಉಳಿದ ಕಸವನ್ನಾಗಲಿ ನಿರುಪಯೋಗವೆಂದು ಎಂದೂ ಚೆಲ್ಲಿಕೊಡುವದಿಲ್ಲ. ಈಗ ಅನೇಕ ರೀತಿಯಲ್ಲಿ

(೨೯೬ನೆಯ ಪುಟದಲ್ಲಿ ನೋಡಿರಿ.)

ರತ್ನಾಕರನ—ಕಾಲೇಜ ಡೈರಿ ಎಂದರೆ ಸ್ವರೂಪನಾಶ!

ಬರೆದವರು:
ಕಾ. ಮಾ. ಕಾಲೇಜಕರ

ಎಂದಾದರೂ ಮೊದಲನೆಯ ತಾಸಿಗೆ ಕಾಲೇಜಿಗೆ ಹೋಗುವುದು ಕಾಲೇಜಿನ ಆದರ್ಶ ಯುವಕನ ಲಕ್ಷಣವಲ್ಲ ವೆಂಬ ತತ್ವವು ರತ್ನಾಕರನಿಗೂ ಅನ್ವಯಿಸುತ್ತಿದ್ದಿತು. ಆದರಲ್ಲಿಯೂ ಈ ನಿಯಮವು ರತ್ನಾಕರನಿಗೆ ಒಂದಲ್ಲದೆ ಅನೇಕ ರೀತಿಯಿಂದ ಅನ್ವಯಿಸುತ್ತಿತ್ತು. ರತ್ನಾಕರನಿದ್ದುದು ಜೆ. ಬಿ. ಎ. ದಲ್ಲಿ. ಮೇಲಾಗಿಯೂ ಇದು ಮೊದಲನೆಯ ಟರ್ಮು. ಆದರಲ್ಲಿಯೂ ಕಾಲೇಜು ಪ್ರಾರಂಭವಾಗಿ ಇದೇ ಏಳೆಂಟು ದಿನಗಳಾಗಿದ್ದುವು. ಇಷ್ಟೂ ಅಲ್ಲದೆ ರತ್ನಾಕರನು ಜಿಮಖಾನಾ ಇಲೆಕ್ಶನ್ನಿಗೆ ನಿಂತಿದ್ದನು. ಎಂದಮೇಲೆ ರತ್ನಾಕರನು ಮೊದಲನೆಯ ತಾಸಿಗೇನೆ ಕಾಲೇಜಿಗಿ ಬರಬೇಕೆಂದರೆ ಹೇಗೆ ತಾನೆ ಸಾಧ್ಯ? ಮುಖ್ಯವಾಗಿ ಮೊದಲನೆಯ ತಾಸಿಗೆ ಕಾಲೇಜಿಗೆ ಬರುವದೆಂದರೆ ರೋಲ್ (ಹಾಜರಿ)ಇನ ಸಲುವಾಗಿ. ಎರಡು ವರ್ಷ ಕಾಲೇಜಿನ ಅನುಭವವುಳ್ಳ ರತ್ನಾಕರನಿಗೆ ರೋಲಿನ ಬಗ್ಗೆ ಹೇಗೆ ಮ್ಯಾನೇಜ ಮಾಡಬೇಕೆಂಬುದು ಗೊತ್ತಿರಲಿಕ್ಕಿಲ್ಲವೆಂದರೆ ನಗಲಿಕ್ಕಿಲ್ಲವೆ ಯಾರಾದರು? ಮೇಲಾಗಿಯೂ ಇಲೆಕ್ಶನ್ನಿನ ಉಮೇದವಾರನೆಂದ ಮೇಲೆ ಭಕ್ತಜನರಿಗೇನು ಕಡಿಮೆ? ಇಂತಹ ಭಕ್ತರ ಪರಿಪಾಲಕನಾಗಿ ಭಕ್ತರ ಭಕ್ತಿಗೆ ಮೆಚ್ಚಿ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧನಾದ ಜಗದೋದ್ಧಾರನಂತೆ ಗಾರ್ಡಿಯನ್ನರ ಬೊಕ್ಕಸವನ್ನು ಉದ್ಧಾರಪಡಿಸಿ ಜೀವನದ ಹೊಣೆಗಾರಿಕೆಯ ಎಣಿಕೆ ಸಹ ಇಲ್ಲದೆ ಜೆ. ಬಿ. ಎ. ದ ಸತ್ತ ಸ್ವರ್ಗದಲ್ಲಿ 'ಚೇನಿಬಾಜಿ'ಯಿಂದ ಕಾಲಕಳೆಯುತ್ತಿರುವ ತರುಣ ರತ್ನಾಕರನಿಗೆ ಜೀವನದ ಸಾರ್ಥಕತೆಯು ಅನುಭವಕ್ಕೆ ಬಂದಿದ್ದಿತು.

ಇದೀಗ ಮೊದಲನೆಯ ತಾಸು (ಎಂದರೆ 'ಪಿರಿಯಡ್') ಮುಗಿಯುತ್ತ ಬಂದಿದ್ದಿತು. ರತ್ನಾಕರನು ಮೊದಲನೆಯ ಬಾಗಿಲಿಗೆ, ಪ್ರೊಫೆಸರರಿಗೆ ಅದೃಶ್ಯನಾಗಿ ವಿದ್ಯಾರ್ಥಿನಿಯರಿಗೆ (ಸ?) ದೃಶ್ಯನಾಗಿ, ಒರಗಿನಿಂತಿದ್ದ. ಒಮ್ಮೊಮ್ಮೆ ಮೆಲ್ಲಗೆ ಕಳ್ಳಗಣ್ಣಿನಿಂದ ಒಳಗೆ ನೋಡುವನು. ಒಳಗಿನಿಂದೊಮ್ಮೆ ನೋಟದಮಿಂಚು ಎದೆಗೆ ಸಿಡಿಲಿನಂತೆ ಬಡಿದು ಮೈಯು ವಿದ್ಯುತ್‌ಸಂಚಾರದಿಂದ ಜುಮ್ ಎಂದಿತೆಂದರೆ ಹುಚ್ಚುನಗೆಯಿಂದ ಲಕ್ಷ್ಯವಿಲ್ಲದೆ ಮುಂಗೈ ಗಡಿಯಾರವನ್ನು ನೋಡುವನು. ಆಮೇಲೆ 'ಪಾಯಿಜಮ್'ಗೆ ಅಂಟಿದ್ದ ಅರುಣ ಪಂಕದ ತುಂತುರಗಳನ್ನು ಕೊಡವಿ, ಗರುಡವಾಹನನ ರೆಕ್ಕೆ-

ಯಂತಿದ್ದ ಪಾಯಿಜಮಿನ ಪಕ್ಕಗಳನ್ನು ಮಗದೊಮ್ಮೆ ಬಿಗಿಯಾಗಿ ಕಾಲಿಗೆ ಸುತ್ತಿ ಕ್ಲಿಪು ಹಾಕಿಕೊಳ್ಳುವ. ಎಡಗೈ ಮೇಲಿನ ರೇನಕೋಟನ್ನು ಓರಣ ಗೊಳಿಸುವ.

ಹೊರಗೆ ಮಳೆಯು ಜಿನುಗುತ್ತಿದ್ದಿತು. ಒಮ್ಮಿಂದೊಮ್ಮೆಲೆ ಒಳಗೆ ಕರತಾಡನದ ಘೋರವಾದ ಸುರಿಮಳೆ! ಅಂತೂ 'ಲಿಕ್ಚರ' ಮುಗಿಯಿತೆಂದೇ ಹೇಳಬೇಕು; ಏಕೆಂದರೆ ತಡಮಾಡಿ ಬಂದವರೆಲ್ಲ ತಮ್ಮ ರೋಲ್ ಹಾಕಿಸಲಿಕ್ಕೆ ವೇದಿಕೆಯನ್ನೇರಿ ಪ್ರೊಫೆಸರರನ್ನು ಮುತ್ತಿದರು. ಅಷ್ಟರಲ್ಲಿಯೆ ಗಂಟೆಯೂ ಆಯಿತು. ರತ್ನಾಕರನು ಕ್ರಾಪನ್ನು ನೇವರಿಸಿಕೊಳ್ಳುತ್ತ ಏಕರಿಸಹತ್ತಿದನು. ಇದೀಗ ವಿದ್ಯಾರ್ಥಿನಿಯರಿಲ್ಲರೂ ಹೊರಗೆ ಬರುವರು ಅವರಿಗೆಲ್ಲ ತಾನು ಹೋಟಿನ ಕಾರ್ಡು ಕೊಡಬೇಕು. ಆದರೆ ಹೇಗೆ ಕೊಡುವುದು? ಎಂತು ಉದ್ದೇಶಿಸುವುದು? ಎಂಬ ವಿಚಾರ ಭರದಲ್ಲಿ ತಾಕಲಾಡುತ್ತ ನಿಂತುಬಿಟ್ಟಿದ್ದನು..... ನಿಂತುಬಿಟ್ಟಿದ್ದನು ಈಚೆಯ ಬಾಗಿಲಿಗೆ; ಆದರೆ ಅವರೆಲ್ಲ ಹೋದರು ಆಚೆಯ ಬಾಗಿಲಿಗೆ! ಹತಾಶನಾದ ರತ್ನಾಕರನು ಅತ್ಯಾತೆಯಿಂದ ಆಚೆಗೆ ನೋಡಿದನು. ಅವರು ಲಾಯಬ್ರಿಯ ಹಾಲಿನ ಕಡೆಗೆ ಸಾಗಿದ್ದರು. ಅಹುದು, ಎರಡನೆಯ ತಾಸಿನ ಪ್ರೊಫೆಸರರು ಅಂದು ತಮ್ಮ ಪಾಠವನ್ನು ತೆಗೆದುಕೊಳ್ಳಲಾಗುವದಿಲ್ಲವೆಂದು ನೋಟೀಸ್ ಕಳಿಸಿದ್ದರಂತೆ. ಹತಾಶನಾದ ರತ್ನಾಕರನು ಮತ್ತೆ ಹಸನ್ಮುಖಿಯಾಗಿ ಲಾಯಬ್ರಿಯ ಕಡೆಗೆ ಹೊರಳಿದನು. ರೀಡಿಂಗ ರೂಮಿನಲ್ಲಿ ನಡುವಿನ ದೊಡ್ಡ ಟೇಬಲ್ಲಿನ ಆಚೆಬದಿ ಮಿಸ್ ಕುಸುಮಳೊಬ್ಬಳೇ ಒಂದು ಕನ್ನಡ ಮಾಸಪತ್ರವನ್ನು ಓದುತ್ತ ಕುಳಿತಿದ್ದಳು. ಆಗಾಗ ತೇಲ್ಗಣ್ಣುಗಳನ್ನು ಮೇಲೆಮಾಡಿ ವಾರೆಯಾಗಿ ಬರಹೋಗುವವರನ್ನು ಸೂಕ್ಷ್ಮ ದೃಷ್ಟಿಯಿಂದ ನಿರೀಕ್ಷಿಸುತ್ತಿದ್ದಳು.

ರತ್ನಾಕರನು ಒಂದೆರಡು ಬಾರಿ ಅವಳೆದುರಿಗೆ ಸುಳದಾಡಿದ. ಅವಳು ಆಚೆಗೆ ನೋಡದೆ ಹಿಂದೆ ತೂಗಾಡುತ್ತಿದ್ದ ತನ್ನ ಹೆಳಲತುದಿಯನ್ನು ಕೈಯಲ್ಲಿ ಹಿಡಿದುಕೊಂಡು ಹೊತ್ತು ಕಳೆಯುವ ಉದ್ದೇಶದಿಂದ ಲಕ್ಷ್ಯವಿಲ್ಲದೆ ಹೆಳಲಿಗೆ ಸುತ್ತುತ್ತಿದ್ದಳು. ರತ್ನಾಕರನು ಮತ್ತೊಮ್ಮೆ ನಿಡಿದಾದ ಉಸಿರನ್ನು ಒಳಗೆ ನುಂಗಿದನು. ಅವಳನ್ನು ಕಣ್ಣಿನಿಂದಲೇ ಕುಡಿಯುವನೇನೊ ಎಂಬಂತೆ ಒಂದೆರಡು ಸಲ ದುರು ದುರು ನೋಡಹತ್ತಿದನು. ಆಗ ಅವಳ ನೀಲವರ್ಣದ ದೊಡ್ಡ ಕಣ್ಣುಗಳೂ, ಮುದ್ದಾದ ಬಾಯಿಯೂ, ಕೆಂದುಟಿಗಳೂ, ದುಂಡು ದುಂಡಾಗಿ, ಬೀಸಾಗಿ, ತೆಳ್ಳಗಿನ ಬ್ಲೌಜಿನಿಂದ ಸ್ಫುಟವಾಗಿ ಕಾಣುವ ತೋಳುಗಳೂ, ರತ್ನಾಕರನ ಮನಸ್ಸನ್ನು ಕದಡದೆ ಬಿಡಲಿಲ್ಲ. ಆದರೆ ಆ ವಾತಾವರಣದಲ್ಲಿ ರತ್ನಾಕರನಿಗೆ ಯಾವುದೇ ಬಗೆಯ ವಿಕಾರಕ್ಕೆ ಒಳಗಾಗುವದಕ್ಕೆ ಅವಕಾಶವಿರಲಿಲ್ಲ. ಏಕೆಂದರೆ ಅವನಿಗೆ ಬೇಕಾದಿದ್ದು ದು ಕುಸುಮಳ **ಮತ್ತ,** ಮನವಲ್ಲ. ಮನದೊರೆತರೂ ಅಲ್ಲಗಳೆವವನಲ್ಲನಾದರೂ ಮೊದಲನೆಯ ಬಾರಿಗೆ ಒಂದುಬಗೆಯ ಅಧೀರತೆ(nervousness)ಯು ಮನಪಸಂಕೋಚವನ್ನು ಮತ್ತಷ್ಟು ಸಂದಿಗ್ಧಪಡಿಸುತ್ತದೆ. ಆಂತೂ ಒಮ್ಮೆ ರತ್ನಾಕರನು ವಿಚಾರದ ಹೊರೆಯಿಂದ ಹಗುರಾಗಿ ಹೋಟಿನ ಕಾರ್ಡನ್ನು ಕುಸುಮಳಿಗೆ ಕೊಟ್ಟೇಬಿಡಬೇಕೆಂದು ಕಿಸೆಯೊಳಗಿಂದ ಒಂದನ್ನು ತೆಗೆದ. ಅದರಲ್ಲಿ ಮೂಡಿಸಲ್ಪಟ್ಟಿದ್ದ ತನ್ನ ಬ್ಲಾಕನ್ನು ಮತ್ತೊಮ್ಮೆ ನೋಡಿ, ಹಿಗ್ಗು ಅಭಿಮಾನಗಳಿಂದ ಬಿಗಿದ ಆದರೇನು—? 'Hallo Mr. Ratnakar!' ಎಂದೊಬ್ಬ ಮಿತ್ರನು ಬಂದವನೆ ಅವನ ಕೈಯೊಳಗಿನ ಕಾರ್ಡು ಕಸಿದುಕೊಂಡ. ಕಸಿದುಕೊಂಡವನೇ ಹಾಗೇ ನಡೆದೇಬಿಟ್ಟ ಕಾಲೇಜ ಫ್ಯಾಶನ್‌ದ ನಿಯಮಕ್ಕೆ ಅನುಸಾರವಾಗಿ. ರತ್ನಾಕರನು ಮಾತ್ರ ಪೆಚ್ಚು ಮುಖದಿಂದ ಆತನನ್ನೆ ಹಿಂದಿರುಗಿ ನೋಡುತ್ತ ನಿಂತುಬಿಟ್ಟ. ಎಂಥ ವೇಳೆಯಲ್ಲಿ ಎಂಥ ಆಘಾತ! ಅದೇ ರೆಕ್ಕೆ ಮೊಳೆತ ಹಕ್ಕಿಯು ಹಾರಬೇಕೆನ್ನುವಾಗ ಗಿಡಗವು ಬಂದು ನೆತ್ತಿ ಕುಕ್ಕಿದಂತಾಯಿತು ರತ್ನಾಕರನಿಗೆ! "ಹೆಸರು ರತ್ನಾಕರಾ ಕರೆಯುವದು ಕಣ್ಣೀರಾ" ಎನ್ನುವಂತಾಯಿತು ರತ್ನಾಕರನ ಸ್ಥಿತಿ. ಇದೆಲ್ಲವನ್ನು ಕುಸುಮಳು ಮಾತ್ರ ನೋಡದಿರಲಿಲ್ಲ. ಅವಳು ನೋಡಿರಬೇಕೆಂಬುದೂ ರತ್ನಾಕರನಿಗೆ ಹೊಳೆಯದೆ ಇರಲಿಲ್ಲ. ಮತ್ತೆ ಚೇತರಿಸಿಕೊಂಡು ಮುಂದಡಿಯಿಟ್ಟ ರತ್ನಾಕರ; ಇಲ್ಲಿಲ್ಲ ಹಿಂದಡಿಯನ್ನು ಇಟ್ಟನು. ಏಕೆಂದರೆ ಮತ್ತೆ 'ಮೇಕಪಾ' ಸಜ್ಜಾಗಬೇಕಲ್ಲ. ಮತ್ತೊಂದು ಹೋಟಿನ ಕಾರ್ಡು ತೆಗೆಯಲು ಕಿಸೆಯೊಳಗೆ ಕೈ ಹಾಕಿದ. 'Oh, the irony of fate!' ಕಿಸೆಯಲ್ಲಿ ರತ್ನಾಕರನ ಬ್ಲಾಕು ಇದ್ದ ಕಾರ್ಡು ಒಂದೂ ಇದ್ದಿರಲಿಲ್ಲ ಬರಿ 'Please vote for.....!' ಎಂಬ ಕಾರ್ಡುಗಳಷ್ಟೇ ಇದ್ದುವು. ಅದರಿಂದೇನೂ ಪ್ರಯೋಜನವಾಗುವಂತಿರಲಿಲ್ಲ. ಜೀವಂತ ಮುಖವೆ ತನ್ನಲ್ಲಿದ್ದಾಗ ಆ ಮುಖದ ಚಿತ್ರವಿಲ್ಲದೆ ಕುಸುಮಳೆಡೆಗೆ ಹೋಗಲು ರತ್ನಾಕರನಿಗೆ ಮನಸ್ಸಾಗಲಿಲ್ಲ. 'ಏನು ಮಾಡುವುದು!' ಎಂಬ ದೀರ್ಘ ವಿಚಾರಕ್ಕೊಳಗಾಗುವಷ್ಟರಲ್ಲಿಯೆ ಕುಸುಮಳು 'ನೋಟೀಸ ಬೋರ್ಡಿನ' ಕಡೆಗೆ ನಡೆದುಬಿಟ್ಟಳು. ಅವಳನ್ನು ಅರ್ಧ ಹಾದಿಯಲ್ಲಿಯೆ

ಬೆಟ್ಟಿಯಾಗಿ ಬಿಡಬೇಕೆಂದು ರತ್ನಾಕರನು ಮತ್ತೊಂದು ಬಾಗಿಲಿನಿಂವ ಆಫೀಸ ರೂಮಿನ ಕಡೆಗೆ ಧಾವಿಸುತ್ತ ನಡೆದ. ಆದರೇನು ಅಪಘಾತ! ಅತ್ತಿತ್ತ ಬದಿಯಲ್ಲಿ ಓಡಾಡುವ ಗಂಡು ತರುಣರನ್ನು ಆಚೆಗೆ ದಬ್ಬುತ್ತ ' ಏನು ಹಚ್ಚಿರುವೆ ಗಂಡುಸಿನ ಬಿಂಕ ' ಎಂದು ಸೆಡವಿನಿಂದ ನಡೆದ ದುರ್ಗಾದೇವಿಯ ಅವತಾರದಂತೆ ಓರ್ವ ಕ್ರಿಶ್ಚನ್ ತರುಣಿಯು ತಡೆಹಾಯ್ದು ಬಿಟ್ಟಳು ರತ್ನಾಕರನನ್ನು. ರತ್ನಾಕರನಿಗಾದ ಸಂಭ್ರಮವನ್ನು ಹೇಳಲಾಸಲ್ಲ. ಏಕೊ! ಏಕೆಂದರೇನು ಹ್ಯಾಜಲಿನ್ ಸ್ನೋದ ವಾಸನೆಯ ರಸದೂಟವಾಯಿತು ಅವನಿಗೆ. ಆದರೆ ಆ ಸಂಭ್ರಮವನ್ನು ಅವಳಿಗೆ ತಿಳಿಯಪಡಿಸುವಷ್ಟು ಧೈರ್ಯವಂತನಾಗಲಿ ಭಾಷ್ಕಳಪಂತನಾಗಲಿ ರತ್ನಾಕರನಲ್ಲ. ಏಕೆಂದರೆ ಕ್ರಿಶ್ಚನ್ ವಿದ್ಯಾರ್ಥಿಗಳನ್ನು ಒಮ್ಮೆ ಕೆಣಕಿ ಮಾತನಾಡಿಸುವುದೆಂದರೆ ಅನೇಕ ಗಂಡಾಂತರಗಳು. ಮೊದಲು ಅವನಿಗೆ ' ಫರ್ಡಾ ' ಇಂಗ್ಲಿಷ ಬರುತ್ತಿರಬೇಕು. ಎರಡನೆಯದಾಗಿ ಆ ವಿದ್ಯಾರ್ಥಿನಿಗಳ ಉಚ್ಚಾರವನ್ನು ತಿಳಿದುಕೊಳ್ಳುವ ತಲೆಬೇಕು. ಮೂರನೆಯದಾಗಿ..... ಅವಳು ಗಡಿಬಿಡಿಯಿಂದ ನಡದೇ ಬಿಟ್ಟಳು.

ನೋಟೀಸ ಬೋರ್ಡಿಗೆ ಮುಕುರಿದ, Sorry, ನೆರೆದ ವಿದ್ಯಾರ್ಥಿಗಳ ಸಂದಣಿ ಜೇನ ಹುಟ್ಟಿನಂತೆ ಇತ್ತು. ಆಲ್ಲಿ ಅಂತಹದೇನು ಓದಿಕೊಳ್ಳುವದು ವಿಶೇಷವಾಗಿರದಿದ್ದರೂ ನೋಡಿಕೊಳ್ಳುವುದು ವಿಶೇಷವಾಗಿರುತ್ತಿದ್ದಿತು. ಕುಸುಮಳು ಈ ಸಂದಣಿಯನ್ನು ನೋಡಿ ನಸುನಾಚಿ ದೂರ ನಿಂತಳು.

ಸುಳಿಗಾಳಿ ತೀಡುತ್ತಿತ್ತು. ಕುಸುಮಳ ಕುರುಳುಗಳು ಕಪೋಲದ ಮೇಲೆ ಕುಣಿದಾಡ ಹತ್ತಿದುವು. ಮೈಮೇಲಿನ ಮುಂಜೆರಗು ಓರೆಯಾಗಿ ಹಾರಾಡಹತ್ತಿತು; ರತ್ನಾಕರನ ಮನಸ್ಸೂ ಹಾರಾಡಹತ್ತಿತು. ಅವಳ ಮೈಕಟ್ಟಿನ ಸೊಬಗು ಮತ್ತಷ್ಟು ಸ್ಫುಟವಾಗಹತ್ತಿತು. ಜನರು ತನ್ನನ್ನು ಕಡೆಗಣ್ಣಿನಿಂದ ನೋಡುತ್ತಿರುವರೆಂಬ ಅರಿವು ಅವಳಿಗಾಗದೆ ಇರಲಿಲ್ಲ; ಕೂಡಲೆ ಬಲಗಡೆಗೆ ಹೊರಳಿ ಬಲಗೈ ಮುಷ್ಟಿಯಲ್ಲಿ ಸೆರಗಿನ ತುದಿಯನ್ನು ಬಿಗಿಯಾಗಿ ಹಿಡಿದುಕೊಂಡು ಕಟಾಂಜನದ ಮೇಲೆ ಪುಸ್ತಕಗಳನ್ನಿಟ್ಟು ಪುಸ್ತಕಗಳ ಮೇಲೆ ಎರಡು ಮೊಳಕೈಗಳನ್ನೂರಿ ಅವುಗಳ ಮೇಲೆ ಮುಖವನ್ನಿರಿಸಿ ಕೆಳಗೆ ದೃಷ್ಟಿಯನ್ನು ತೂರಿದಳು ಕುಸುಮಳು. ಅವಳ ದೃಷ್ಟಿಯು ಸಹಜವಾಗಿದ್ದರೂ ಮುಂದ ವಿದ್ಯಾರ್ಥಿಗಳನ್ನೇಕರು ಹುರುಪಿನಿಂದ ಏಕರಿಸುತ್ತ ತಮಗೆ ಸೈಕಲ್ ಹೊಡೆಯಲು ಎಷ್ಟು ಅತ್ಯುತ್ತಮವಾಗಿ ಬರುವುದೆಂಬುದನ್ನು ತೋರಿಸಲು ತಟ್ಟನೆ ಸೈಕಲ್ ಏರಿ ಬೆಲ್ ಬಾರಿಸುತ್ತ ಹಿಂದೊಮ್ಮೆ ಮೇಲೊಮ್ಮೆ ನೋಡುತ್ತ ತೆರಳುವರು.

ಮೂರನೆಯ ತಾಸು ಆನರ್ಸ ಪಿರಿಯಡ್. ರತ್ನಾಕರನಂತಹರು ಆನರ್ಸ ಕ್ಲಾಸಿಗೆ ಕೂಡುವುದೆಂದರೆ ನಾಚಿಕೆಗೇಡಲ್ಲವೆ? ಪರೀಕ್ಷೆಯ ಫಾರ್ಮು ತುಂಬುವವರೆಗೂ ಆನರ್ಸ ಎಂದೇ ಹೇಳಿಕೊಳ್ಳುತ್ತ, ಮನೆಯಲ್ಲಿಯೂ ಆನರ್ಸಿಗೆಂದೇ ರೂಪಾಯಿ ತಂದು ಬರಿ ಪಾಸಿಗೆ ಫಾರ್ಮು ತುಂಬುವ ಕಲೆಯೂ ರತ್ನಾಕರನ ತಲೆಯಲ್ಲಿ ಮನೆಮಾಡಿಕೊಂಡಿತ್ತು. ಕುಸುಮಳು ನೋಟೀಸ ಬೋರ್ಡಿನ ಸಂದಣಿನೋಡಿ ಆಚೆಗೆ ಒಬ್ಬಗೆಳತಿ ಬ್ಯಾಡ್‌ಮಿನ್‌ಟನ್ ರ್ಯಾಕೆಟ್ ತೋರಿಸುತ್ತ ಆಟಕ್ಕೆ ಕರೆಯುತ್ತಿದ್ದುದನ್ನು ಕಂಡು ಕೂಡಲೆ ಕೆಳಗಿಳಿದು ಬ್ಯಾಡ್‌ಮಿನ್‌ಟನ್ ಹಾಲಿಗೆ ನಡೆದುಬಿಟ್ಟಳು. Quick Silverನಂತಿದ್ದ ರತ್ನಾಕರನು ಇದನ್ನು ನೋಡದೆ ಉಳಿದನೆ? ಇಪ್ಪರಲ್ಲಿಯೆ ತನ್ನ ಬ್ಲಾಕುಳ್ಳ ಒಂದು ಹೋಟಿನ ಕಾರ್ಡನ್ನು ಸಂಪಾದಿಸಿಯೆ ಬಿಟ್ಟಿದ್ದ.

ಕಾಲೇಜಿನ ಬ್ಯಾಡ್‌ಮಿನ್‌ಟನ್ ಹಾಲ್ ಎಂದರೆ ಮೊಗಲರ ಕಾಲದಲ್ಲಿಯ ನರ್ತನಶಾಲೆಯೆಂದು ತುಸು ಅತಿಶಯೋಕ್ತಿಯಿಂದ ಹೇಳಿಬಿಡಬಹುದು. ಅನೇಕ ಕ್ರಿಶ್ಚನ್ ಯುವಕ-ಯುವತಿಯರ ಸಹ-ನೃತ್ಯ ಪ್ರದರ್ಶನಗಳೂ ಕೂಡ ಅಲ್ಲಿ ನಡೆಯುವುವು. ಸಕೃದ್ದರ್ಶನ, ಸಕೃತ್ ಪರಿಚಯ ಎಲ್ಲ ಸಕೃತ್ ಕಾರ್ಯಗಳ ಪಡಿಮೂಲೆಯದು. ಜೀವನವೆಂದರೆ ಒಂದು ಆಟವೆಂದು ಬಗೆದ ಭಾವೀ ದಂಪತಿಗಳು ತಮ್ಮ ಜೀವನದ ಭಾಗವನ್ನು ಸರಿಯಾಗಿ ಸಮತೋಲದಿಂದ ವಹಿಸಿ ಮುಂದಿನದನ್ನು ಈಗ ಸೂಚಿಸುತ್ತಿರುವರೇನೊ ಎಂಬಂತೆ ಒಂದೊಂದೆಡೆಯಲ್ಲಿ ಒಬ್ಬ ವಿದ್ಯಾರ್ಥಿ ಒಬ್ಬ ವಿದ್ಯಾರ್ಥಿನಿಯರು ಭಾಗವಹಿಸಿ ಆಟವಾಡುತ್ತಿದ್ದರು. ಸ್ತ್ರೀ ಸಮತಾವಾದ, ಸ್ತ್ರೀಪುರುಷ ಸ್ವಾತಂತ್ರ್ಯ ಮೊದಲಾದ ಪ್ರಗತಿಪದ ವಿಚಾರಗಳು ಉದ್ಭೂತವಾದುದಾದರೂ ಇಂತಹ ಪ್ರಯೋಗ ಶಾಲೆಯಲ್ಲಿಯೆ ಎಂದು ಕಾಣುತ್ತದೆ. ಅಂತೂ ಏನು?— ರತ್ನಾಕರನಿಗೆ ಸಿಕ್ಕಿತು ಒಳ್ಳೇ ಸುಸಂಧಿ!

ತನ್ನ ಸಖಿಯಿಂದ ಅನುಸರಿಸಲ್ಪಟ್ಟವಳಾಗಿ ಕುಸುಮಳು ಹಾಲಿನಲ್ಲಿ ಕಾಲಿಕ್ಕುವುದೊಂದೇ ತಡ ರತ್ನಾಕರನು ಪೆಚ್ಚುದೈನ್ಯ ಮುಖಮುದ್ರೆಯನ್ನು ತಾಳಿ ಒಂದು ಹೋಟಿನ ಕಾರ್ಡು ತೆಗೆದು ಕುಸುಮಳಿಗೆ ಅರ್ಪಿಸುತ್ತ, ' Will you please vote for me for badminton and in-door games?' ಎಂದು ಕೇಳಿದ. ಆಯಿತು

ಕಾ. ಮಾ. ಕಾಲೇಜಕರ

ರತ್ನಾಕರನ maiden speech! ಉಸುರ್ಗರೆದು ಬಾಯ್ತೆರೆದು ನಿಂತ. ಕುಸುಮಳು ತುಸು ಹೊತ್ತು ಸುಮ್ಮನೆ ನಿಂತಳು; ದೀರ್ಘವಾಗಿ ಆಲೋಚಿಸಿದಳು. ಕೊನೆಗೊಮ್ಮೆ ಕಿರುನಗೆಯನ್ನು ಮಿಂಚಿಸುತ್ತ, 'Sorry I have already promised' ಎಂದು ನುಡಿದಳು. ಅವಳ ನಗೆಮಿಂಚು ರತ್ನಾಕರನ ಎದೆಗೆ ಸಿಡಿಲಾಗಿ ಸಿಡಿಮಿಡಿಗೊಂಡನು. ಕೇಳತಕ್ಕದ್ದೇನಿನ್ನು? ಪ್ರಥಮಗ್ರಾಸೇ— ಏನು? ಕುಸುಮಳಿಗೆ ತಾನು ಕನ್ನಡತಿ ಎಂಬ ಅಭಿಮಾನ ವಿಲ್ಲವೆ? "ಹಾಯ್, ಹಾಯ್ ಕನ್ನಡ ಮಾತೇ ಏನು ನಿನ್ನ ಅವಸ್ಥೆ!" ಎಂದು ಮನದೊಳಗೇ ಉದ್ಗಾರ ತೆಗೆದ. ಆದರೆ ಒಳಗೊಳಗೇ ಒಂದು ಆಶಾಕಿರಣವು ಮೂಡಿ ರತ್ನಾಕರನ ಹೃತ್ತಮಲವನ್ನು ಅರಳಿಸಿತು. ಅದಾವುದೆಂದರೆ ಕುಸುಮಳ ಸಕೃತ್ ಪರಿಚಯ. 'Stepping stone to success' ಎಂದು ಕೊಂಡಿರಬೇಕು ಆತ. ಹಾಗೆಂದು ಕೊಳ್ಳದೆ ನಿರ್ವಾಹವೆ ಇಲ್ಲ ಮತ್ತೆ. 'Thank you' ಎಂದವನೇ ಹೊರಳಿದನು ರತ್ನಾಕರ. ಇನ್ನೇನು ಮಾಡುವುದು? ಇಲೆಕ್ಯನ್ನಿಗಾದರೂ ನಿಲ್ಲುವದೇ ಬೇಡವೆ? ಛೆ. ಒಬ್ಬ ಕುಸುಮಳ ಮತವು ದೊರೆಯದಿದ್ದರೇನಾಯಿತು ಉಳಿದ ವಿದ್ಯಾರ್ಥಿಗಳೆಲ್ಲವೆ ತನ್ನನ್ನು ಸಮರ್ಥಿಸುವಂತಹರು? ಆಮೇಲೆ ಒಂದು ವೇಳೆ ತಾನು ಆರಿಸಿಬಂದರೆ— ಬಂದರಿ ಕೇಳುವದೇನು? ಕುಸುಮಳೊಡನೆ ಸ್ನೇಹ! ಅವಳಿಗೆ ಬೈಸಿಕಲ್ ಕಲಿಸುತ್ತೇನೆಂದು ಹೇಳಬೇಕು. ಊರ ಹೊರಗೆ ಹೋಗಬೇಕು. ಬೆಳದಿಂಗಳು ಸೂಸಿರಬೇಕು. ಹೊಗಳು ಹಾಸಿರಬೇಕು. ಬೈಸಿಕಲ್ ಕಲಿಸುತ್ತ ಕಲಿಸುತ್ತ ಅದೇ ಬೈಸಿಕಲ್ ಮೇಲೆ ಇಬ್ಬರೂ ಮರಳಬೇಕು. ....ಮರುಳು! ಒಂದು ವೇಳೆ ಆರಿಸಿಬರದಿದ್ದರೆ? ಎಂಬ ಕಲ್ಪನೆ ಹೊಳೆಯಬಾರದೆ ಅವನಿಗೆ? ಹೊಳೆದಿರಬೇಕು. ಆ ವಿಚಾರ ಹೊಳೆದಿರಬೇಕು; ಹೊಡೆದಿರಬೇಕು.... ಗಂಟೆ ಹೊಡೆದಿರಬೇಕು ಅಂತೇ ಧಾವಿಸುತ್ತ ಕೆಫೆಯ ಕಡೆಗೆ ನಡೆದ ರತ್ನಾಕರ.

ಮುಂದರಿಯುವದು.... ಛೆ, ಮುಗಿದೇಬಿಟ್ಟಿತು. ಏಕೆಂದರೆ ಮುಂದೇನಿದೆ? **ರತ್ನಾಕರನ ಸ್ವರೂಪನಾಶ!**

"ಉಸುರ್ಗರೆದು ಬಾಯ್ತೆರೆದು ನಿಂತ ಕುಸುಮಳು ತುಸುಹೊತ್ತು ಸುಮ್ಮನೆ ನಿಂತಳು."

● ಹಂಸ ಬೆಂಗಳೂರಿನ ಉಜ್ವಲ ವಾರಪತ್ರ!
ಒಂದೇ ಆಣೆ! ನೂರಾರು ಚಿತ್ರಗಳು! ಜಾಹೀರಾತುದಾರರಿಗೆ ಒಳ್ಳೆ ಸಂಧಿ

ಸೂರ್ಯನಮಸ್ಕಾರಗಳಿಂದ ಆಗುವ ಲಾಭಗಳು

ಶ್ರೀ. ವಾಯ್. ಬಂಗ್ಲೋದ

ನಾವು ಮಾಡುವ ನಮಸ್ಕಾರಗಳಿಂದ ನಮ್ಮ ದೇಹದ ಎಲಬುಗಳಲ್ಲಿ ಹುಟ್ಟುವ ಸ್ನಿಗ್ಧರಸವು ಹೆಚ್ಚುವದು. ಎಲಬುಗಳು ಹೆಚ್ಚು ಗಟ್ಟಿಯಾಗುತ್ತವೆ. ಮೆದುಳು ಹೆಚ್ಚು ಚುರುಕಾಗಿ ದೇಹದ ಚಲನವಲನವನ್ನು ವಿಚಾರಶಕ್ತಿಯನ್ನು ಹೆಚ್ಚಿಸುವದು. ಮಿದುಳಿನಿಂದ ಹೊರಟ ಮಣಿಶಿಕರವು ಹೆಚ್ಚು ಶಕ್ತಿಯುಳ್ಳದ್ದಾಗಿ ಹೃದಯ, ಜಠರ, ಕರಳು ಮೊದಲಾದ ಸ್ನಾಯುಗಳನ್ನು ತನ್ನ ಶಕ್ತಿ ಸಾರವಾಗಿ ಕಾಪಾಡುವದು. ಬೆನ್ನಹುರಿ ಮತ್ತು ಮಜ್ಜಾತಂತುಗಳಿಗೆ ತಕ್ಕಂತೆ ಶ್ರಮವು ಸಿಗುವದರಿಂದ ಬೆನ್ನಹುರಿಯು ಶಕ್ತಿಯುಳ್ಳದ್ದಾಗುವದು ಜ್ಞಾನತಂತುಗಳು ಚುರುಕಾಗಿ ದೇಹದ ಎಲ್ಲ ವ್ಯವಹಾರವನ್ನು ಮೆದುಳಿಗೆ ತಿಳಿಸಲಿಕ್ಕೆ ಶಕ್ತಿಯುಳ್ಳವುಗಳಾಗುವವು. ನೇತ್ರದಲ್ಲಿ ಇರುವ ಪಾರದರ್ಶಕ ಪದಾರ್ಥವು ಹೆಚ್ಚುವದು. ನೇತ್ರ ತೇಜವು ಹೆಚ್ಚುವದಲ್ಲದೆ ದೂರದರ್ಶಕ, ಸಮೀಪದರ್ಶಕ ದೃಷ್ಟಿದೋಷವನ್ನು ಕ್ರಮೇಣ ಸುಧಾರಿಸುವವು.

ಕರ್ಣನಲಿಕೆಯು ಸೂಕ್ಷ್ಮ ಜ್ಞಾನತಂತುಗಳ ಶಬ್ದದ ಜ್ಞಾನವನ್ನು ತಿಳಿಯಲಿಕ್ಕೆ ಚುರುಕಾಗುವವು. ಘ್ರಾಣೇಂದ್ರಿಯಲ್ಲಿಯ ಜ್ಞಾನತಂತುಗಳು ವಾಸನೆಯನ್ನು ಹೆಚ್ಚು ತಿಳಿಯಲಿಕ್ಕೆ ಪ್ರಯತ್ನಿಸುವವು. ರಸನೆಯ ಎಡಬಲದಲ್ಲಿ ಇರುವ ದಂತಗಳು ವಸಡೆಗಳು ಗಟ್ಟಿಯಾಗುವವು.

ಮೂತ್ರ ಪಿಂಡಗಳು ನಾವು ಮಾಡುವ ನಮಸ್ಕಾರಗಳಿಂದ ಶಕ್ತಿಯುಳ್ಳವುಗಳಾಗುತ್ತವೆ. ನಮಸ್ಕಾರಗಳನ್ನು ಹಾಕುವಾಗ್ಯೆ ನಾವು ತಕ್ಕೊಳ್ಳುವ ದೀರ್ಘಶ್ವಾಸದ ಸಂಗಡ ಪ್ರಾಣವಾಯು ಎಂಬ ಹವೆಯು ಕೂಡಿ ಪುಪ್ಪುಸದಲ್ಲಿ ಸೇರುತ್ತದೆ. ಈ ಹವೆಯಿಂದ ಪುಪ್ಪುಸದಲ್ಲಿಯ ರಕ್ತವು ಶುದ್ಧಿಹೊಂದಿ ಹೃದಯದ ಕಡೆಗೆ ಹೋಗುವದು. ಪುಪ್ಪುಸದೊಳಗೆ ಕೆಟ್ಟ ರಕ್ತದಿಂದ ಹೊರಟ ಕಾರ್ಬಾನಿಕ್ ಆಸಿಡ್ಡ ವಾಯುವು ಮೂಗಿನಿಂದಾ ಹೋಗುವದು ಪುಪ್ಪುಸದಲ್ಲಿ ಶುದ್ಧವಾದ ರಕ್ತವು ಹೃದಯಕ್ಕೆ ಬರುವದು. ಅಲ್ಲಿಂದಾ ರುಧಿರಾಭಿಸರಣ ಮಾರ್ಗವಾಗಿ ದೇಹದ ಎಲ್ಲ ಭಾಗಗಳಲ್ಲಿ ಪಸರಿಸುವದು... ಕೆಟ್ಟರಕ್ತವು ಅಶುದ್ಧ ರಕ್ತವಾಹಿನಿಗಳಿಂದ ಪುಪ್ಪುಸದಲ್ಲಿ ಬಂದು ಶುದ್ಧಿ ಹೊಂದುವದು. ರಕ್ತದಲ್ಲಿ ಎರಡು ಭಾಗಗಳಿರುವವು. ಅವು ಯಾವವೆಂದರೆ ಕೆಂಪು ರಕ್ತಗೋಲ, ಬಿಳಿಯ ರಕ್ತಗೋಲ ಇವುಗಳು ಕೂಡಾ ನಾವು ಮಾಡುವ ನಮಸ್ಕಾರಗಳಿಂದ ಹೆಚ್ಚು ವೃದ್ಧಿಹೊಂದುವವು.

ನಾವು ನಮಸ್ಕಾರಗಳನ್ನು ಹಾಕುವಾಗ ತಕ್ಕೊಳ್ಳುವ ದೀರ್ಘ ಶ್ವಾಸದಿಂದ ನಮ್ಮ ಪುಪ್ಪುಸಗಳು ಹೃದಯವು ಉದರವು ಇತರ ಎಲ್ಲ ಗ್ರಂಥಿಗಳಿಗೆ ಹೆಚ್ಚು ಶುದ್ಧಿ ಹೊಂದುವವು ಎದೆಯು ವಿಶಾಲವಾಗುವದು. ಎದೆಯ ಬಳೆ ಎಲಬುಗಳೂ ಹೆಚ್ಚು ಬೆಳೆಯಲಿಕ್ಕೆ ಪ್ರಾರಂಭವಾಗುವವು. ರಕ್ತವು ಸ್ನಾಯುಗಳಲ್ಲಿ ಹೆಚ್ಚು ಸೇರಿ ಸ್ನಾಯು ಒಳಗಿನ ಮಜ್ಜಾತಂತುಗಳು ಚುರುಕಾಗಿ ಸ್ನಾಯುಗಳನ್ನು ಹೆಚ್ಚು ಬೆಳೆಯಲಿಕ್ಕೆ ಆಶ್ರಯ ಕೊಡುವವು. ನಮಸ್ಕಾರದಿಂದ ಎಲ್ಲ

ಸ್ನಾಯುಗಳಿಗೆ ಬೆಳವಣಿಗೆ ಸಿಕ್ಕು ಹುರಿಗಟ್ಟಾಗಿ ಮೈಯಲ್ಲಿ ಕಾಣಿಸುವವು. ಮನುಷ್ಯನ ಅಂಗಾಂಗಗಳು ಅಂದವಾಗಿ ಕಾಣಿಸುವವು. ನಮಸ್ಕಾರದಿಂದ ಹೆಚ್ಚು ಬೆವರೊಡೆದು ತಂತು ಗಳು ಶುದ್ಧಿ ಹೊಂದಿ ತ್ವಚೆಯು ಮಿರುಗುವಾಗಿ ತನ್ನ ಕೆಲಸ ವನ್ನು ಹೆಚ್ಚಿಸುವವು.

ಶ್ರೀ. ವಾಯ್. ಬಂಗ್ಲೀದ

ಸೂರ್ಯನಮಸ್ಕಾರದಿಂದಾಗುವ ದೇಹಪುಷ್ಟಿ

ನಮಸ್ಕಾರಗಳನ್ನು ಸೂರ್ಯೋದಯವಾದ ಒಂದು ತಾಸಿನ ವರಿಗೆ ಹಾಕಬೇಕು. ಯಾಕಂದರೆ ಆ ಕಿರಣದಲ್ಲಿ ಊದಿ ಕಿರಣಗಳೂ ಸಿಗುವದರಿಂದ ಹೆಚ್ಚು ಶ್ರೇಯಸ್ಕರವು. ಈ ಕಿರಣಗಳು ಅಂಗಾಂಗಗಳಲ್ಲಿ ಪ್ರವೇಶಿಸಿ ಎಲ್ಲ ಅಂಗಾಂಗ ಗಳನ್ನು ಹೆಚ್ಚು ಶುದ್ಧಿ ಮಾಡುವವು ಇತರ ವೇಳೆಯಲ್ಲಿ ಹಾಕುವದಕ್ಕಿಂತ ಮುಂಜಾವಿನಲ್ಲಿ ಹಾಕುವದು ಉತ್ತಮ. ಇದರಿಂದ ಇತರ ರೋಗಗಳು ನೆಟ್ಟಗಾಗುವವು. ಯಾವ-ವೆಂದರೆ– ರುತುದೋಷ, ಕ್ಷಯ, ಗುಲ್ಮ, ಶೂಲಿ, ಸ್ವಪ್ನ ದೋಷ, ಮೂತ್ರ ದೋಷ, ಚರ್ಮರೋಗ. ಗರ್ಭದೋಷ, ಉದರ ರೋಗ, ಕಂಠ ರೋಗ, ನಡ ನೋವು, ಸಂದುಗಳ ನೋವು, ಅಶಕ್ತತೆ, ಮೆದುಳಿನ ಎಲ್ಲ ದೋಷ ಇನ್ನು ಇತರ ರೋ ಗ ಗ ಳೂ ಸೂರ್ಯ ನಮಸ್ಕಾರದಿಂದ ಸಿದ್ಧಿ ಹೊಂದಿ ನಮ್ಮನ್ನು ಸವ್ಯಥರನ್ನಾಗಿ ಮಾಡುವದು

ವಸಂತ ಗೀತೆ

Milton ರ 'The Song on May Morning' ಎಂಬುದರ ಭಾಷಾಂತರವು

ನೋಡಲ್ಲಿ! ಹೊಳೆವ ಬೆಳಗಿನ ಚಿಕ್ಕೆ, ಮುಂಬಗಲ
ದೂತನಕೊ, ಪೂರ್ವದಿಂ ಕಳೆಯೇರಿ ಕುಣಿಕುಣಿದು
ಹಸುರ ನಿಡುಗೈಗಳಿಂ ಹಳದಿ ಹೂಗಳ ತೂರಿ
ಬರುತಿಹಂ ಜೇತ್ರನಂ ಜೈತ್ರನಂ ಮುಂಕೊಂಡು!!
ಉಲ್ಲಸದ, ಸಂತಸದ ಅಶಿಮುದಗಳ ಜೀಡೆ!
ಒಸಗೆ ಮಿಗಿಲಕ್ಕೆ ಹೇ! ಚಿತ್ರಮಯ ಜೈತ್ರನೇ!!
ಬನಬನಂಗಳು ನಿನ್ನ ಮೈಮೆಯಿಂ ಚೆಲುವಹವು!
ಗಿರಿಗಳಂ ನಿಂದು ಬೆರಗಾಗಿಸಿದೆ ಈ ಚೆಲುವು!
ಶಾಶ್ವತದ ಭಕ್ತಿಯಲಿ ನಿನ್ನ ಕಾಡುವೆವು.
ಶಾಶ್ವತಂ ನೆಲಸೆಂದು ನಿನ್ನ ಬೇಡುವೆವು!

—ಗಾಂಗೇಯ

(೨೯೦ನೆಯ ಪುಟದಿಂದ ಮುಂದರಿದುದು)

ಬಳಸಲ್ಪಡುತ್ತಿರುವ "ವ್ಹಿಸ್ಕಾ" ಎಂಬ ಕೃತ್ರಿಮ ಹುಲ್ಲ (artificial straw) ನ್ನಾದರೂ ಇದೇ ರೇಶಿಮೆಯೊಂ-ದಿಗೆ ತಯಾರಿಸುತ್ತಾರೆ.

ಕೃತ್ರಿಮ ರೇಶಿಮೆಯಲ್ಲಿರುವ ಎಲ್ಲಕ್ಕೂ ಹೆಚ್ಚಿನ ಗುಣ ವೆಂದರೆ ಬಣ್ಣವನ್ನು ಹೀರಿಕೊಳ್ಳುವದು. ಉಣ್ಣೆ-ರೇಶಿಮೆ-ಕೃತ್ರಿಮ ರೇಶಿಮೆಗಳಿಂದಾದ ಒಂದು ಬಟ್ಟೆಯನ್ನು ಎರಡು ಬೇರೆ ಬೇರೆ ಬಣ್ಣಗಳ ಮಿಶ್ರಣದಲ್ಲಿ ಅದ್ದುವದರಿಂದ ಒಂದೇ ಬಾರಿಗೆ ಎರಡು ಮೂರು ತರದ ಬಣ್ಣಗಳನ್ನು ಬಟ್ಟೆಯಲ್ಲಿ ಮೂಡಿಸಬಹುದು. ಇದರಂತೆ ಬೇರೆ ಬೇರೆ ಪದ್ಧತಿಯಿಂದಾದ ಕೃತ್ರಿಮ ರೇಶಿಮೆಗಳಿಂದ ಕೂಡಿದ ಬಟ್ಟೆಯಲ್ಲಿ ಅನೇಕತರದ ಬಣ್ಣಗಳನ್ನು ಏಕಕಾಲಕ್ಕೆ ಮೂಡಿಸಬಹುದು. ಏಕೆಂದರೆ ಒಂದೊಂದು ತರದ ರೇಶ್ಮೆಯ ಎಳೆಯು ತನಗೆ ಬೇಕಾದ ಒಂದೇ ಬಣ್ಣವನ್ನು ಹೀರಿಕೊಳ್ಳುತ್ತದೆ. ಹೀಗೆ ಒಂದು ಬಟ್ಟೆಯಲ್ಲಿ ಹದಿನೆಂಟು ಬಣ್ಣಗಳನ್ನು ಅಚ್ಚು ಹಾಕಬಹು-ದೆಂದು ಗೊತ್ತಾಗಿದೆ ಇದರಿಂದ ಉಂಟಾಗುವ ಬಣ್ಣಬಣ್ಣ ಗಳ ವಿವಿಧ ವಿಲಾಸಗಳು ಸುಂದರವಾದ ಚಿತ್ರಚಿತ್ರವಾದ ಸುಳುವು ಹೊಳವುಗಳು ಕೃತ್ರಿಮ ರೇಶಿಮೆಗೆ ಒಂದು ಅಪೂ-ರ್ವವಾದ ಸೌಂದರ್ಯವನ್ನು ತಂದುಕೊಡುತ್ತವೆ. ಈ ಸೌಂದರ್ಯಕ್ಕಾಗಿಯೆ ಜನತೆಗೆ ಕೃತ್ರಿಮ ರೇಶಿಮೆಯ ಮೇಲೆ ಅಷ್ಟು ನೋಡ.

ನವಭಾರತದ ನವಶಿಕ್ಷಣ

(ವರ್ಧಾ ಯೋಜನೆಯ ವಿಮರ್ಶೆ)

ಶ್ರೀಮಾನ್ ದೇಶಪಾಂಡೆ ಮನೋಹರರಾಯರು ಎಂ.ಎ. ಅಥಣಿ

●

೨. ಪಾರ್ಶ್ವಭೂಮಿ

೭. ಅದರ ಆದರ್ಶ

ಮಹಾತ್ಮರು ಈ ವಿಷಯವನ್ನು ಕುರಿತು ಒಂದಡಗ ಹೀಗೆ ಬರೆದಿರುವರು:— "ನಾನು ನನ್ನ ಒಳಗಣ್ಣಿದುರು ಚಿತ್ರಿಸಿದ ಭಾರತವು ಬಡತನದಲ್ಲಿದ್ದ ಬಳಲುವ ಅಜ್ಞ ಜನರಿಂದ ತುಂಬಿದ ಭಾರತವಲ್ಲ. ಅದು ತನ್ನ ಸರ್ವ ಪರಂಪರೆಗನುಗುಣವಾಗಿ ಪ್ರಗತಿ ಮೆಟ್ಟಿಲುಗಳನ್ನೇರುತ್ತಿರುವ ಭಾರತವು. ಅದು ಪಶ್ಚಿಮದ ಸಾಯಲಿರುವ ನಾಗರಿಕತೆಯ ಮಾರನೆಯ ತರಗತಿಯ ಅನುಕೃತಿಯಲ್ಲ. ನನ್ನ ಕನಸು ಕೈಗೂಡಿದರೆ, ನನ್ನ ಭಾರತದಲ್ಲಿಯ ಪ್ರತಿಯೊಂದು ಹಳ್ಳಿಯು ಒಂದು ಸ್ವಯಂ ಶಾಸನ ರಾಜ್ಯವಾಗುವದು. ಅದರಲ್ಲಿ ಅಶಿಕ್ಷಿತರಿರಲಾರರು; ಕೆಲಸಿಲ್ಲದ ಅಲಸಿಗರಿರಲಾರರು; ಪ್ರತಿಯೊಬ್ಬನಿಗೆ ಸಾಕಷ್ಟೇ ಉಪಯುಕ್ತ ಕೆಲಸವೂ, ಹೊಟ್ಟೆತುಂಬ ಪೋಷಕ ಅನ್ನವೂ, ಮೈತುಂಬ ಖಾದಿಯ ಬಟ್ಟೆಯೂ, ಗಾಳಿ ಬೆಳಕುಳ್ಳ ನಿರ್ಮಲವಾದ ಮನೆಯೂ ಇರುವದು. ಅಲ್ಲಿ ಪ್ರತಿಯೊಬ್ಬನು ಆರೋಗ್ಯದ ನಿಯಮಗಳನ್ನರಿತು ಅವುಗಳನ್ನು ಪ್ರತಿನಿತ್ಯ ಜೀವನದಲ್ಲಿ ಅನುಸರಿಸುವನು."

ಮೇಲ್ಕಾಣಿಸಿದ ಭಾರತದ ಚಿತ್ರವು ನಮ್ಮ ವರ್ಧಾಯೋಜನೆಯರು ಇಟ್ಟ ಆದರ್ಶ. ಭರತಖಂಡದಲ್ಲಿ ಒಂದು ಸಂಯುಕ್ತ – ಸಹಕೃತ – ಸಮಾಜವು ನೆಲೆಗೊಳ್ಳಬೇಕೆಂದು ಅವರ ಮನೀಷೆ – ಸಹಕಾರವು ಮುಂದಿನ ಯುಗ ಧರ್ಮ. ಬಾಳು ಬಾಳಗೊಡು – ದು ಮುಂದಿನ ಮಹಾಮಂತ್ರ. ನಮ್ಮ ನಾಡು ಸಾವಿರಾರು ಮತ ಪಂಥಗಳ ನೆಲೆವೀಡಾದುದರಿಂದ ಅವರಲ್ಲಿ ಅಹಿಂಸಾಮಯ ಪ್ರೀತಿಯ ವಾತಾವರಣವು ಹುಟ್ಟುವದವಶ್ಯ. ಇದಾಗವೆ ಅವರೆಲ್ಲರೂ ಒತ್ತಟ್ಟಿಗೆ ಸೇರಿ ರಾಷ್ಟ್ರೀ ಸೇವೆಯನ್ನು ಮಾಡುವವೇ ಸಾಧ್ಯವಿಲ್ಲ. ಪರಸ್ಪರ ಕಲಹವು ಅವರಲ್ಲಿಯ ಬಲವನ್ನು ಕುಗ್ಗಿಸಿ, ನಮ್ಮ ನಾಡನ್ನು ಹಾಳುಮಾಡದಿರದು.

ಮೇಲಾಗಿ ನಮ್ಮ ನಾಡು ಅಜ್ಞ ಹಳ್ಳಿಗರ ನಾಡು – ಬಡ ಒಕ್ಕಲಿಗರ ಬೀಡು. ಅವರ ಕಷ್ಟಮಯ ಜೀವನದ ಕಗ್ಗತ್ತಲೆಯಲ್ಲಿ ಒಂದು ಆಶೆಯ ಕಿರಣವನ್ನು – ಸುಖದ ವಿಶ್ವಾಸವನ್ನು ಬೀರುವದು ಅವಶ್ಯ. ಅವರ ಅಜ್ಞಾನವನ್ನು ಕಳೆದು ಅವರಿಗೆ ಜ್ಞಾನದ ಬೆಳಕನ್ನು ದಯಪಾಲಿಸುವದು ಅಗತ್ಯ. ಅವರಲ್ಲಿ ಮನೆಮಾಡಿಕೊಂಡಿರುವ ಅಜ್ಞಾನ ಜನ್ಯ ಅಪನಂಬಿಕೆಗಳನ್ನೂ ದುಶ್ಚಟಗಳನ್ನೂ ಅಲ್ಲಗಳೆದು ಅವರ ಜೀವನವನ್ನು ಹಸನಾಗಿಸುವದು ಅತ್ಯಗತ್ಯ. ಅವರಿಗೆ ಮುಂದಿನ ಯುಗದಲ್ಲಿ ನವನಾಗರಿಕತೆಯ ಯೋಗ್ಯತೆಯನ್ನು ಪಡೆದು, ಎಲ್ಲರಂತೆ ತಲೆಯೆತ್ತಿ ಸ್ವಾತಂತ್ರ್ಯದ ಪವಿತ್ರ ಗಾಳಿಯನ್ನುಸುರುತ್ತ ತಮ್ಮ ಬೆಳೆದ ಶಕ್ತಿಗಳನ್ನೆಲ್ಲ ನಾಡ ದೇವಿಗೆ ಅರ್ಪಿಸಿ, ಆಕೆಯ ವೈಭವವನ್ನು ಹೆಚ್ಚಿಸುತ್ತ ನಡೆಯಲು ಸಿದ್ಧರಾಗುವದು ಅತ್ಯಗತ್ಯ.

ಮುಂದಿನದು ಪ್ರಜಾಪ್ರಭುತ್ವದ ಯುಗವು. ಆಗ ಪ್ರಜೆಗಳೇ ಪ್ರಭುಗಳು. ಅವರ ಪ್ರತಿನಿಧಿಗಳೆ ನಾಡನ್ನಾಳುವವರು. ನಾಡಿನ ಆಡಳಿತದ ಕೆಲಸವೆಲ್ಲ ಅವರಿಂದಲೇ ಸಾಗುವದು. ಎಲ್ಲ ಅಧಿಕಾರ ಸೂತ್ರಗಳು ಅವರ ಕೈಯಲ್ಲಿ ಪಂಚಾಯತ – ಸಹಕಾರ ಸಂಘ – ಸ್ಥಾನಿಕಸ್ವರಾಜ್ಯ – ನಗರಸಭೆ – ಕೊನೆಗೆ ವಿಧಿಮಂಡಲದ ವರೆಗೆ ಎಲ್ಲ ಚಿಕ್ಕ-ದೊಡ್ಡ ಸಂಸ್ಥೆಗಳ ಲೋಕ ಕಲ್ಯಾಣದ ಕಾರ್ಯವು ಈ ಪ್ರತಿನಿಧಿಗಳ ಮುಖಾಂತರವೇ ಸಾಗತಕ್ಕದ್ದು. ಇವರ ನಿಸ್ವಾರ್ಥ ಜಾಣ್ಮೆಯೇ ಈ ಸಂಸ್ಥೆಗಳ ಜೀವಾಳ. ಇವರ ಕಾರ್ಯಕೌಶಲ್ಯವೇ ಅವುಗಳ ಕಾರ್ಯವಿಸ್ತಾರವನ್ನೂ ಉಪಯುಕ್ತತೆಯನ್ನೂ ಬೆಳೆಯಿಸುವ ಸಾಧನ. ಆದುದರಿಂದ ನಮ್ಮ ನಾಡಿನಲ್ಲಿಯ ಎಲ್ಲ ಯುವಕರಿಗೆ ಈ ವಿಷಯದ ಸಂಪೂರ್ಣ ಜ್ಞಾನವಿರದೆ ನಡೆಯುವಂತಿಲ್ಲ. ಕೆಲಸವ ಪ್ರತ್ಯಕ್ಷಾನುಭವವಿದ್ದರಂತೂ ಬಹಳೇ ಮೇಲು.

ಇನ್ನೊಂದು ಸಂಗತಿ. ಇಂದು ನಮ್ಮ ನಾಡಿನ ಸಂಬಂಧವು ಪ್ರಪಂಚದಲ್ಲಿಯ ಎಲ್ಲ ನಾಡುಗಳೊಂದಿಗೆ ಬಂದಿದೆ. ಇನ್ನದನ್ನು ತಪ್ಪಿಸುವದು ಸಾಧ್ಯವೂ ಇಲ್ಲ– ಇಷ್ಟವೂ ಇಲ್ಲ. ಇಂದಿನ ಪ್ರಪಂಚವೇ ಒಂದು ರಾಷ್ಟ್ರವಾಗಲಿದೆ. ವೇಗವುಳ್ಳ ವಾಹನಗಳ ಮತ್ತು ವಾರ್ತಾವಾಹಿನಿಗಳ ಸೌಕರ್ಯಗಳು ಜಗತ್ತಿನಲ್ಲಿ ಭಿನ್ನ ಭಿನ್ನ ಜನಾಂಗಗಳಲ್ಲಿ ಬಳಿಕೆಯನ್ನು ಹೆಚ್ಚಿಸಿರುವವು. ವ್ಯಾಪಾರವೂ ಇವರನ್ನು ತೀರ ಸಮೀಪ ತಂದಿರುವದು. ಧ್ವನಿಕ್ಷೇಪ ಚಿತ್ರಕ್ಷೇಪಗಳಂತೂ ಈ ಸಂಬಂಧವನ್ನು ಅತಿಯಾಗಿ ಬೆಳೆಸಿರುವವು. ಹೀಗಿರಲು ನಮ್ಮ ನಾಡವರಿಗೆ ಪ್ರಪಂಚದ ಪರಿಚಯವಿಲ್ಲದೆ ಹೇಗೆ ಸಾಗಬಹುದು ? ಅಲ್ಲಲ್ಲಿ ನಡೆದ ಹೊಸ ಶಾಸ್ತ್ರೀಯ ಸಂಶೋಧನೆಗಳು ಗೊತ್ತಾಗದಿದ್ದರೆ ನಡೆಯಬಹುದೇ ? ಆದುದರಿಂದ ನಮ್ಮ ಮುಂದಿನ ಶಿಕ್ಷಣದ ಆದರ್ಶವು ಎಷ್ಟು ವಿಶಾಲವಾದುದಿರಲೇ ಬೇಕೆಂಬುದು ತಿಳಿಯದಿರದು. ಇದು ನಮ್ಮ ವರ್ಧಾ-ಯೋಜನೆಯ ಆದರ್ಶ !

೮. ಅದರ ತಳಹದಿ

ಆದರೆ ಆದರ್ಶವು ವಿಶಾಲವಿದ್ದಷ್ಟು ನಮ್ಮ ಮುಂದಿನ ಶಿಕ್ಷಣದ ತಳಹದಿಯೂ ಆಳವಾದುದು – ಸ್ಥಿರವಾದುದು ಇರಲೆಬೇಕು; ಇದೆ. ಈ ವರೆಗೆ ಶಿಕ್ಷಣ ಶಾಸ್ತ್ರದಲ್ಲಿ ನವ ಸಂಶೋಧನೆಗಳು ನಡೆದೇ ಇವೆ. ಪ್ರಪಂಚದ ಎಲ್ಲ ರಾಷ್ಟ್ರಗಳಲ್ಲಿಯ ಶಿಕ್ಷಣ-ತಜ್ಞರು ಹೊಸ ಹೊಸ ಪ್ರಯೋಗಗಳನ್ನು ಮಾಡಿ, ಹೊಸ ಹೊಸ ತತ್ವಗಳನ್ನು ಹುಡುಕಿ ತೆಗೆಯುತ್ತಲಿರುವರು. ಅವುಗಳನ್ನು ಸರಿಯಾಗಿ ಉಪಯೋಗಿಸಿಕೊಂಡೆಯೆ ನಮ್ಮವರು ಮುಂದುವರಿಯತಕ್ಕದ್ದು. ಮುಂದುವರಿಯುತ್ತಿರುವರು.

"ಕೆಲಸ ಮಾಡಿ ಕಲಿಯಬೇಕು" (Learning by doing) ಇದು ಇಂದಿನ ಶಿಕ್ಷಣ ಶಾಸ್ತ್ರದಲ್ಲಿಯ ಅತಿ ಮಹತ್ವದ ನವ ತತ್ವವು. ನಮ್ಮ ಯೋಜನೆಯು ಇದನ್ನೆಯೆ ಅಕ್ರಮಿಸಿದೆ. ಇದು ಎಲ್ಲ ದೃಷ್ಟಿಯಿಂದ ಹಿತಕರ. ಕೈಕಾಲುಗಳನ್ನು ಸರಿಯಾಗಿ ಉಪಯೋಗಿಸದಿದ್ದರೆ ಮಿದುಳು ಮಂದವಾಗಿ ಅದು ಸೈತಾನಸಾಹೇಬರ ಕರ್ಮ ಮಂದಿರವಾಗುವದು (without the use of hands & feet our brains would be nothing) ಎಂಬುದು ಸರ್ವ ಮಹನೀಯರ ಮತ.

ಚಟುವಟಿಕೆಯು ಮಕ್ಕಳ ಸಹಜ ಸ್ವಭಾವ. ಅದೇ ಅವರಿಗೆ ಬಾಲ್ಯದಲ್ಲಿ ಅನೇಕ ಸಂಗತಿಗಳನ್ನು ಕಲಿಸುವದು. ಆದಿರುವ ವರೆಗೆ ಅವರಿಗೆ ಹುರುಪು. ಅದಿಲ್ಲವಾದರೇ ಬೇಸರ. ಬಾಲಕರಲ್ಲಿ ತುಂಬಿತುಳುಕುವ ಚೈತನ್ಯವು ಅವರನ್ನು ಸುಮ್ಮನಿರಗೊಡುವದಿಲ್ಲ. ಒಂದಿಲ್ಲೊಂದು ಬಗೆಯಿಂದ ಅದು ಹೊರಬರಲು ಹವಣಿಸುವದು. ಈ ಶಕ್ತಿವಾಹಿನಿಯನ್ನು ತಡೆಯುವುದು ಹಾನಿಕರ. ಆದರ ಸದುಪಯೋಗ ಮಾಡಿಕೊಂಡರೆ, ಅದರಲ್ಲಿಯೆ ಮಕ್ಕಳ ಬೆಳವಣಿಗೆ – ಕಲ್ಯಾಣ. ಇದರಿಂದ "ಪೂರ್ಣ ವ್ಯಕ್ತಿತ್ವದ ವಿದ್ಯಾವಿಕಾಸವು' (Literacy of the whole Personality) ಸಾಧ್ಯವಾಗುವದು.

ಕರ್ಮರತನಾದ ವಿದ್ಯಾರ್ಥಿಯು ಶ್ರಮಜೀವನವನ್ನು ಗೌರವಿಸಲು ಕಲಿಯುವನು. ಅವರು ಯಾವಾಗಲೂ ಅನ್ಯರೊಡನೆ ದುಡಿಯುವದರಿಂದ ಅವನಲ್ಲಿ ತನ್ನ ಬಾಂಧವರ ವಿಷಯವಾಗಿ ಪ್ರೀತಿಯುಂಟಾಗಿ ಕರ್ಮಭಿನ್ನತೆಯಿಂದುಂಟಾದ ಕೃತ್ರಿಮ ಮೇಲ್ಕೀ– ಕೀಳ್ಕೀಗಳ, ಕಲ್ಪನೆಗಳು ಅಳಿದು ಸಮಾಜದಲ್ಲಿ ಐಕ್ಯಮತವು ಹೆಚ್ಚುವದು.

ಆರ್ಥಿಕದೃಷ್ಟಿಯಿಂದಂತೂ ಈ ತತ್ವವು ತೀರ ನಿರ್ದೋಷವಾದುದು. ಅದು ಬಾಲಕರ ಉತ್ಪಾದನ ಶಕ್ತಿಯನ್ನು ಬೆಳೆಸಿ ಅವನನ್ನು ಸ್ವಾವಲಂಬಿಯಾಗಿ ಮಾಡುವದು. ಇದಲ್ಲದೆ ಇದರಿಂದ ಶಿಕ್ಷಣವು ಸುಖಕಾರಕವೂ ವಾಸ್ತವಿಕವೂ ಆಗಿ ಅದು ಜೀವನಕ್ಕೆ ಸಂಬಂಧಿಸಿದುದಾಗುತ್ತದೆ. ಇನಿತು ಲಾಭಗಳಿಂದ ಕೂಡಿದ ಈ ತತ್ವವು ನಮ್ಮ ಯೋಜನೆಯ ಮುಖ್ಯ ತಳಹದಿ.

'ಶಿಕ್ಷಣವು ಜೀವನ ಮಂದಿರದ ಸೋಪಾನವಿರಬೇಕು.' ಎಂಬುದು ಇನ್ನೊಂದು ಪ್ರಮುಖ ಸಿದ್ಧಾಂತ. ಮುಂಬರುವ ಜೀವನದ ಸ್ಥಿರತೆಯನ್ನು ಮಾಡಿಕೊಡುವ ಶಿಕ್ಷಣವು – ಶಿಕ್ಷಣವೇ ಅಲ್ಲ. ಅದೊಂದು ಶಿಕ್ಷೆ. ನಮ್ಮ ಯೋಜನೆಯು ಜೀವನದೊಡನೆ ತೀರ ಬೆರೆತು ಹೋಗಿರುವದು. ಜೀವನದಲ್ಲಿಯ ಪ್ರಸಂಗಗಳೇ ಪಾಠಗಳ ಸನ್ನಿವೇಶಗಳು. ಅವನ್ನು ನಿರೀಕ್ಷಿಸಿಯೇ ಬಾಲಕನು ಪಾಠಗಳನ್ನು ಕಲಿಯತಕ್ಕದ್ದು. ಅವುಗಳನ್ನು ಉಪಯೋಗಿಸಿಯೇ ಅವನು ಹೊಸ ಅನುಭವಗಳನ್ನು ಪಡೆಯತಕ್ಕದ್ದು.

"ಶಿಕ್ಷಣವು ಬಾಲಕರ ಸರ್ವಾಂಗಗಳನ್ನು ಬೆಳೆಯಿಸತಕ್ಕದ್ದು" 'Education is the development of perfection already in man' ಎಂದು ಸ್ವಾಮಿ ವಿವೇಕಾನಂದರು ಉಸುರಿರುವರು. ಉದ್ಯಮವೇ ಇದನ್ನುಂಟು ಮಾಡುವ ಮಿಗಿಲಾದ ಸಾಧನವೊಂದು ಆಧುನಿಕ ಪಂಡಿತರ ಮತ. ಬಾಲಕರು ಕೈಗಾರಿಕೆಯಲ್ಲಿ ತೊಡಗಿದಾಗ

(ಮುಂದಿನ ಪುಟ ನೋಡಿರಿ.)

ರಸನಿವೇದನ

ಒಲುಮೆಯ ತಂಗಿ **ವಿವೇಕವತಿಗ,**

ಇನ್ನೇನು? ಶ್ರೀರಂಗರ ಹರಟೆಗಳ ಸಂಗ್ರಹ ಬೇಕೆಂದು ಬರೆದಿದ್ದಿಯಲ್ಲವೆ? ಸರಿ. ಕನ್ನಡದಲ್ಲಿ ಸಾಮಾನ್ಯವಾಗಿ ಯಾವುದೇ ಪತ್ರಿಕೆಯನ್ನು ಓದಿದರೂ ನಿನಗೊಂದು ಶ್ರೀರಂಗರ ಹರಟೆ ದೊರೆತೇದೊರೆಯುವುದು. ಶ್ರೀರಂಗರು ಈ ವೃಷ್ಟಿಯಿಂದ ಬಹು ಧನವಂತರು. ಏಕೆಂದರೆ ಸಂಪಾದಕರು ಅವರನ್ನು ಇನ್‌ಕಂಟ್ಯಾಕ್ಸ್ ಆಫೀಸರರಂತೆ ನಡೆಸಿಕೊಳ್ಳುವರೆಂದು ಅವರೇ ಒಪ್ಪಿಕೊಂಡಿದ್ದಾರೆ.ನಿಜವಾಗಿಯೂ ಶ್ರೀರಂಗರ ಯೋಗ್ಯತೆ ಅಂತಹದೇ ಇದೆ. ಇದೀಗ ನಾನು ಅವರ ಹರಟೆಗಳ ಬಿಸಿಬಿಸಿ ಸಂಗ್ರಹವಾದ'ಋತುಸಂಹಾರ'ದ ಪರಿಚಯವೊಂದಿಷ್ಟು ನಿನಗೆ ಮಾಡಿಕೊಡಬೇಕೆಂದಿರುವೆ. ಆದರೆ ಅವರ ಸಾಹಿತ್ಯದ ಪರಿಚಯ ಮಾಡಿಕೊಡುವ ಮೊದಲು ಅವರ ಪರಿಚಯವೊಂದಿನಿಸನ್ನು ಮಾಡಿಕೊಡುವುದು ಯುಕ್ತವಲ್ಲವೆ?

ಶ್ರೀರಂಗರೆಂದಕೂಡಲೆ ಇವರು ಪ್ರೊ. ಆರ್. ಪ್ಹಿ ಜಾಗಿರದಾರ, ಎಂ.ಎ. ಲಂಡನ್ ಎಂಬುದನ್ನು ಮರೆತೇ ಬಿಡುತ್ತೇವೆ. ಆದುದರಿಂದ Jagirdar as a Professor and Jagirdar as a writer (ಪ್ರೊ. ಜಾಗೀರದಾರ ಮತ್ತು ಶ್ರೀರಂಗ) ಎಂಬೀ ದೃಷ್ಟಿಯಿಂದ ಪೃಥಕ್ಕರಿಸಿ ಅವರ ಪರಿಚಯ ಮಾಡಿಕೊಡುವುದು ಉತ್ತಮ.... ಆದರೆ, ತಡೆ. ಅಲ್ಲ, ಪ್ರೊ. ಜಾಗೀರದಾರರ ಪರಿಚಯವನ್ನಾಗಲಿ ಶ್ರೀರಂಗರ ಪರಿಚಯವನ್ನಾಗಲಿ ನಿನಗೆ ಮಾಡಿಕೊಡುವುದರಲ್ಲಿ ಉದ್ದೇಶವೇನು?— ನಿನ್ನ ದಡ್ಡತನ ತೋರಿಸಲೆಂದೊ, ನನ್ನ ದೊಡ್ಡಿಸ್ತನ ತೋರಿಸಲೆಂದೊ? ಕರ್ನಾಟಕವೇ ಶ್ರೀರಂಗರ ದೊಡ್ಡಿಸ್ತಿಕೆಯನ್ನು ಬಾರಿಬಾರಿಗೂ ಸಾರಿಸಾರಿ ಹೇಳುವಾಗ ಅವರ ಪರಿಚಯವನ್ನು ಮಾಡಹೋ! ಅದೇನೊ ಹೇಳುವರಲ್ಲ 'holding a candle to the sun'- ಸೂರ್ಯನೆದುರಿಗೆ ಮೇಣ ಬತ್ತಿಯನ್ನು ಹಿಡಿದಂತೆ-. ಜನಿವಾರವನ್ನು ಹರಿದು ವೈಷ್ಣವ ಸಮಾಜದಲ್ಲಿ ಕ್ರಾಂತಿಮಾಡಿದ ರಂಗಾಚಾರ್ಯರನ್ನರಿಯದ ಬ್ರಾಹ್ಮಣರಿಹರೆ? 'ವಿಶ್ವಾಮಿತ್ರನ ಸೃಷ್ಟಿ'ಯಿಂದ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ಹೊಸ ಸೃಷ್ಟಿಯನ್ನೆ ನಿರ್ಮಾಣ ಮಾಡಿದ ಶ್ರೀರಂಗರನ್ನರಿಯದ ಕನ್ನಡಿಗರಿಹರೆ? ತಮ್ಮ ವಿನೋದವ್ಯೂರಿತ ಶೈಲಿಯ ಭಾಷಣದಿಂದ ಮುಗ್ಧಗೊಳಿಸುವ ಜಾಗಿರದಾರರನ್ನರಿಯದ ವಿದ್ಯಾರ್ಥಿಗಳಿಹರೆ? ಭಾಷಾಶಾಸ್ತ್ರದ ಪಾಂಡಿತ್ಯದಿಂದ ಚಿರವಿದಿತರಾದ 'ಶಾರದೆಯ ಸಂಸಾರ'ದ ಕರ್ತೃಗಳನ್ನರಿಯದ ಪಂಡಿತರಿಹರೆ?— ಯಾರಿರುವರು ಇವರನ್ನರಿಯದವರು? ನೀನಾದರೂ (ಅರಿಯದವಳು) ಇರುವಿಯೆಂದು ನನಗೆ ತೋರುವದಿಲ್ಲ. ಏಕೆಂದರೆ, ಅವರ 'ಮಿಮಾಂಸೆ'ಗಳ ಮಾಲೆಯನ್ನೂ 'ಸ್ವರ್ಗೀಯ ಶತ್ರುಗಳ'ನ್ನೂ 'ಮಂಗನ ಮಲ್ಲಿನಾಥತನ'ವನ್ನೂ, 'ನಾನು-ಆಗಿದ್ದರೆ'ಯ ಆಡಿ ಮುತ್ತು ಹಾರಗಳನ್ನೂ ಪ್ರೀತಿಯಿಂದ ಓದಿ ಅವರ 'ಋತು ಸಂಹಾರ'ವನ್ನು ಕಳಿಸು ಎಂದು ನನಗೆ ಬರೆದಿರುವೆಯೆಂದಮೇಲೆ- ಹಾಗೂ-ಹೂಂ. ಅಲಮತಿ ವಿಸ್ತರೇಣ.

ಶ್ರೀರಂಗರ 'ಋತು ಸಂಹಾರ'ಕ್ಕೂ ಕಾಳಿದಾಸನ 'ಋತು ಸಂಹಾರ'ಕ್ಕೂ ಎರಡು ಸಾವಿರ ವರುಷದಷ್ಟು ಅಂತರ. ಋತು ಸಂಹಾರವನ್ನು ಬರೆದ ಕಾಳಿದಾಸನನ್ನು ಕಾಲನು ಸಂಹಾರ ಮಾಡಿದನು. ಆದರೆ ಕಾಲನನ್ನೆ ಸಂಹಾರ ಮಾಡುವ ಸಾಮರ್ಥ್ಯವು ಶ್ರೀರಂಗರ 'ಋತು ಸಂಹಾರ'ದಲ್ಲಿಬ್ಬೆ; ಏಕೆಂದರೆ ಅದರ ಉದ್ದೇಶದ ಜೀವಾಳವೆ Time-killing. ವೇಳೆಯನ್ನು ಕೊಂದು ಶ್ರೀರಂಗರು ಯಾವ ಪಾಪಕ್ಕೀಡಾಗುವರು ಎಂದು ಪ್ರಶ್ನೆಮಾಡಬೇಡ. ಏಕೆಂದರೆ ಪಾಪಕ್ಕೆ ಹೆದರುವ ಹೇಡಿತನ ಅವರಿಗಿಲ್ಲ. ಅಥವ ಅವರು ಪಾಪಭೀರುಗಳಲ್ಲವೆನ್ನುವುದಕ್ಕಿಂತ ಅವರು ಪಾಪಿಗಳೆ ಅಲ್ಲವೆನ್ನು. ಇಲ್ಲವಾದರೆ ತ್ರೇತಾಯುಗದೊಳಗಿನ ರಾಮರಾಜ್ಯದ ರಾಮಚಂದ್ರನನ್ನು ಕಲಿಯುಗದರಾಮ ರಾಮರಾಜ್ಯಕ್ಕೆ ಕಾಲ ತಿರುಗಿಸಿ ತಂದು ಶಿವನ ಬಿಲ್ಲಿನ ಬದಲಾಗಿ ಶಾರದಾಬಿಲ್ಲನ್ನು ಮುರಿಸಹಚ್ಚುವ ಮಹತ್ಕಾರ್ಯ ಆಗುತ್ತಿದ್ದಿತೆ ಅವರಿಂದ? ಇಷ್ಟೇ ಏಕೆ- ಸಾಹಿತಿಗಳೂ ಸಾಕ್ಷಾತ್ ಸೃಷ್ಟಿಕರ್ತರೇ ಅಲ್ಲ!

ಇನ್ನೇನು? ಋತುಸಂಹಾರದಲ್ಲಿ ಕಂಡುಬರುವ ಶ್ರೀರಂಗರ ಗುಣಗಳನ್ನು ಬಣ್ಣಿಸಲೆ? ಆದರೆ ನೀನೇ ಆ ಕೆಲಸವನ್ನು ಮಾಡುವುದು ಹೆಚ್ಚು ಒಳಿತೆನ್ನುತ್ತೇನೆ. ಎಂದರೆ ನಿನ್ನಲ್ಲಿ ವಿಮರ್ಶಾತ್ಮಕ ಬುದ್ಧಿಯು ಎಷ್ಟರ ಮಟ್ಟಿಗೆ ಬೆಳೆಯುತ್ತಲಿದೆ ಎಂಬುದೂ ತಿಳಿದುಬರುತ್ತದೆ. ಋತುಸಂಹಾರವನ್ನು ಮೊದಲಿಂದ ತುದಿಯ ವರೆಗೆ ಓದಬೇಕಾದರೆ ಹೊಟ್ಟೆಯ ಬಗ್ಗೆ ವಿಶೇಷ ಜಾಗರೂಕತೆ ಇರಬೇಕು ಆಂ ಮುತ್ತೆ! ಏಕೆಂದರೆ ಹೊಟ್ಟೆಹುಣ್ಣಾಗುವ ಸಂಭವವೇ ಹೆಚ್ಚಿದೆ. 'ರವಿಕಾಣದುದಂ ಕವಿಕಾಣುವನು'ಎಂದು ನೇಮಿಚಂದ್ರಾದಿಗಳು ಹೇಳಲ್ಲವೆ? ಆ ರವಿಕಾಣದ ವಿಷಯಗಳೆಂದರೆ ರಾತ್ರಿ

ರತಿ ಬೆಳದಿಂಗಳಂತೆ! ಸ್ವೇಚ್ಛಾಚಾರ ಟಿಕೆಟಿನ ವರ್ಣನೆಯನ್ನು ಒಂದೇ ಓದಿದರೆ ಸಾಕು- ಶ್ರೀರಂಗರ ಹಾಸ್ಯ ಚಮತ್ಕೃತಿಯು ಎಷ್ಟಿದೆಯೆಂಬು ತಾನಾಗಿಯೆ ಗೊತ್ತಾಗುತ್ತದೆ. ಇದರಲ್ಲಿ ವ್ಯಕ್ತವಾದ ಚಿತ್ರಕ ಶಕ್ತಿಯಂತೂ ಹುಚ್ಚು ಹಿಡಿಸುವಂತಿದೆ.

"ಒಳಗಿನವರು ಯಾರೋ ನನ್ನನ್ನು ನೂಕಬೇಕೆನ್ನುವಾಗ ಅವನ ಕೈಯನ್ನೆ ಗಟ್ಟಿಯಾಗಿ ಹಿಡಿದೆ. ಇಷ್ಟರಲ್ಲಿ ಟ್ರೇನು ಕೊಂಕು ದಾರಿಗೆ ಸೇರಿ ಜೋಲಿಹೊಡೆಯಲು ಕೈಹಿಡಿದವನ ಜೋಲಿಯ ಜೋರಿಗೆ ನಾನು ಒಳಗೇ ಸಿಡಿದುಬಿಟ್ಟೆ." ಎಷ್ಟಿದೆ ನೋಡು ಈ ವರ್ಣನೆಯಲ್ಲಿ ಶ್ರೀರಂಗರ ಸೂಕ್ಷ್ಮ ನಿರೀಕ್ಷಣ ಶಕ್ತಿ. ಇಂತಹ ಸೂಕ್ಷ್ಮ ನಿರೀಕ್ಷಣಾತ್ಮಕ ದೃಷ್ಟಾಂತಗಳನ್ನು ಸಾಲು ಸಾಲಿಗೂ ಕೊಡಬಹುದು. "ನನ್ನ ನುಂದೆ ಕುಳಿತವನು ಬಲಗಾಲನ್ನು ಎಡಗಾಲ (ಎರಡೂ ಕಾಲು ಅವನವು) ಮೇಲಿಟ್ಟರೆ ನನ್ನ ಎಡಗಾಲನ್ನು ಬಲಗಾಲ ಮೇಲಿಡುತ್ತಿದ್ದೆ" ಇಂತಹ ವರ್ಣನೆ ಬರಬೇಕಾದರೆ ಶ್ರೀರಂಗರು ಅದೆಷ್ಟು ಸಲ ಜನಸಂದಣಿ ಕೂಡಿದ ಟ್ರೇನಿನಲ್ಲಿ ಪ್ರವಾಸ ಮಾಡಿರಬೇಡ! ನಿನಗೂ ಇಂತಹ ಪ್ರಸಂಗಗಳು ಬಂದಿರಬೇಕಲ್ಲವೆ? ಆ ಪ್ರಸಂಗಗಳ ನೆನಪಾಗಿ ಶ್ರೀರಂಗರ ವರ್ಣನಾ ವೈಖರಿಯು ಮತ್ತಿಷ್ಟು ಸಮೀಪ (familiar) ದ್ದೆನಿಸುವದಿಲ್ಲವೆ? ಉಸಿರಾಡಿಸುವ ಹವೆಯ ಧಾರಣೆ ಏರಲು ಬೆವರು ಇಳಿಯಿತಂತೆ. ಎಷ್ಟು ಚಮತ್ಕಾರವಿದೆ ನೋಡಿದಿಯಾ ಈ ಏರಿಳಿತದಲ್ಲಿ? ಧೋತರಗಳು ಒಣಗದೆ ಇದ್ದ ಕಾಲವೇ ಮಳೆಗಾಲವೆಂಬ ತರ್ಕ ಧಾರವಾಡ ನಿವಾಸಿಗಳಿಗೆ ಅತ್ಯಂತ ಅನುಭವದ ಮಾತು. ಅಲ್ಲಲ್ಲಿ ಶ್ರೀರಂಗರೂ ವಾಚಕರನ್ನು ನಗಿಸಿಯೆ ಬಿಟ್ಟೇನು ಎಂದು ಪಣತೊಟ್ಟು ಹೊರಟಾಗ ಮಾತ್ರ ವಿಷಯಾಂತರವು ಅತಿಯಾಗಿ ನಗೆಯ ಧಾರಣೆ ಇಳಿಯುವ ಸಂಭವ ಕಂಡುಬರುತ್ತದೆ. ಧಾರಣೆ ಇಳಿದರೂ ನಗೆಯು ಮಾತ್ರ ಇಲ್ಲದೆ ಇಲ್ಲ ಎಂಬ ಸಮಾಧಾನ ಮಾತ್ರ ಇರುತ್ತದೆ.

'ಆಶ್ಚರ್ಯ ಗೊಂಬೀಭೂತ — ವಿಚಾರ ಹುಂಬೀಭೂತ' ಎಂಬಲ್ಲಿ ಪ್ರಾಸ ಛಲವು ತುಸು ಅತಿಯಾದಂತೆ ಕಾಣುತ್ತದೆ. ಪ್ರೀಯೆ- ಬಿ. ಏ.- ಮುಂತಾದೆಡೆಗಳಲ್ಲಿ ಹೋಲಿಕೆಗಳ ಎಳೆದಾಟ ತುಸುವೆ ದೀರ್ಘಕ್ಕೆಳೆದಂತೆ ಭಾಸವಾಗುತ್ತದೆ. ಆದರೆ ಅದೇ ಕಾಲಕ್ಕೆ ಇನ್ನಿತರ ಹೋಲಿಕೆಗಳು- ಲೇಖಕರ ಪ್ರತಿಭಾ ಶಕ್ತಿಗೆ ವಾಚಕರು ಬೆರಳು ಕಚ್ಚುವಂತಾಗುವಂತೆ ಚಿತ್ರಿಸಲ್ಪಟ್ಟಿವೆ. ಇದಕ್ಕೆ ಒಂದೇ ಒಂದು ದೃಷ್ಟಾಂತವೆಂದರೆ 'ವರ್ಷಾಕಾಲದ ವಾಮನಾವತಾರ.' ಚಳಿಯಿಂದ ಬೆಚ್ಚಗಾಗಿರುವುದಕ್ಕಾಗಿ ಜ್ವರ ಮಿತ್ರನ ಮೊರೆ ಹೋಗುವ ಸೋಜಿಗತೆಯು ಹೇಗಿದೆ?..... ಅಂತೂ ಶ್ರೀರಂಗರ ಹರಟೆಗಳು ಹುಚ್ಚು ಹಿಡಿಸುವಂತಹವು.....ಇದಕ್ಕಾಗಿ ತಾರಾ ವಿಹಾರ ಗ್ರಂಥಮಾಲೆಯವರಿಗೆ ಅಭಿನಂದನೆಗಳು. ನಿನ್ನ ಪತ್ರವೂ ಬೇಗ ಬರಲಿ.

ನಿನ್ನಣ್ಣ, ರಸಿಕ

(೨೯ನೆಯ ಪುಟದಿಂದ)

ಕೈಯು ಕೆಲಸಮಾಡುವುದು. ಕಣ್ಣು ಸೂಕ್ಷ್ಮವಾಗಿ ನೋಡುವದು. ಮನಸ್ಸು ಏಕಾಗ್ರವಾಗಿ ನಿರೀಕ್ಷಿಸುವದು. ಹೀಗಾಗಿ ಅವನ ಎಲ್ಲ ಪ್ರಮುಖ ಅಂಗಗಳಿಗೆ ಒಂದು ಬಗೆಯ ವ್ಯಾಯಾಮ ಸಿಗುವದು.

ತಾಯಿಯ ಹಾಲು ಬಾಲಕನ ದೇಹ -- ಪೋಷಣೆಗೆ ಬೇಕಾದ ಸಾತ್ವಿಕ ಅನ್ನವನ್ನು ನೀಡುವಂತೆ, ತಾಯ್ನುಡಿಯು ಅವನ ಬುದ್ಧಿಯನ್ನು ಬಲಿಸಲು ಅರಿವಿನ ಅನ್ನವನ್ನು ನೀಡುವದು ತಾಯ್ಹಾಲಿನಂತೆ. ತಾಯ್ನುಡಿಯು ಪ್ರತಿ ಬಾಲಕನ ಸಹಜ ಅನ್ನವಾಹಿನಿ. ಹುಟ್ಟಿದಂದಿನಿಂದ ಅದನ್ನುಂಡು ಅವನು ತನ್ನ ಶಕ್ತಿಯನ್ನು ಬಲಿಸುವನು. ದಾಯಿಯ ಹಾಲು ಎನಿತು ಸವಿಯಿದ್ದರೂ ಅದು ತಾಯಿಯ ಹಾಲನ್ನು ಸರಿಗಟ್ಟಬಹುದೇ? ಅಷ್ಟು ಪೋಷಣೆಯನ್ನು ಕೊಡಬಹುದೇ? ಆದರೆ ಇಂಥ ಸುಸ್ಪಷ್ಟವಾದ ಮಾತನ್ನು ನಮ್ಮ ವಿದ್ಯಾವಂತರು ಈವರೆಗೆ ಮರೆತಿದ್ದರು. ಆವರಿಗೇನೊ ಆಂಗ್ಲದಾಯಿಯ ಮಿತಿಮೀರಿದ ಮೋಹ. ಅವಳ ಬೆಡಗೂ – ವೈಭವವೂ ಅವರನ್ನು ಬಲವಾಗಿ ಸೆಚ್ಚಿಸಿತು. ಅವಳ ಸೇವೆಯನ್ನು ಮಾಡಲು ಹಚ್ಚಿ ಅವರು ನಮ್ಮ ಬಾಲಕರಲ್ಲಿಯ ಶಕ್ತಿಯನ್ನೆಯೆ ಕಳೆಯಲು ಕಾರಣರಾದರು. ಈ ಆಂಗ್ಲ ಭಾಷೆಯ ಮುಖಾಂತರ ಕಲಿಸುವ ಅಸ್ವಾಭಾವಿಕ ರೀತಿಯಿಂದ ಅವರ ಕಾಲ-ಉತ್ಸಾಹ-ದ್ರವ್ಯಗಳ ಅಪವ್ಯಯವಾಗಿ, ಅವರು ತಮ್ಮ ಮನೆಯಲ್ಲಿಯೆ ಪರಕೀಯರಾದರು. ಅವರು ಕಲಿತುದು ಅವರ ಮಿದುಳಿನಲ್ಲಿಯೇ ಉಳಿಯಿತು. ತಾಯ್ನುಡಿಯೆಲ್ಲದನ್ನು ಅರುಹಲು ಬಾರದ್ದರಿಂದ ಅದು ಬಾಂಧವರಲ್ಲಿ ಸಮಾಜದಲ್ಲಿ ಇಳಿಯಲಿಲ್ಲ. ಆದುದರಿಂದ ಕಲಿತವರಲ್ಲಿ ಹಿರಿದಾದ ಅಗಲಿಕೆಯುಂಟಾಯಿತು.

ಈ ಅಸಹಜ ಮೋಹಜಾಲವನ್ನು ಹರಿದೊಗೆದು ನಮ್ಮ ಯೋಜನೆಯೆ ಮಾತೃಭಾಷೆಗೆ ತನ್ನ ಯೋಗ್ಯವಾದ ಸ್ಥಾನವನ್ನು ಕೊಡಲೆಳಸುವದು. ಎಲ್ಲ ವಿಷಯಗಳನ್ನು ತಾಯ್ನುಡಿಯಲ್ಲಿಯೆ ಕಲಿಸಲಾಗುವದು.

ಜುಲೈ
ತಿಂಗಳದ

ಆಕಾಶಸ್ಥ ಗ್ರಹಗಳ ಆದೇಶ

ಡಾ. ಕೃಷ್ಣ ಮುಳಬಾಗಲ, ಮುಂಬಯಿ

★

— ಮೇಷ —

ಉದ್ಯಮವು ಮುಂದೆಸಾಗಿದರೂ ಆದರಲ್ಲಿ ವ್ಯತ್ಯಾಸ ಚಂಚಲತ್ವಗಳು ಮನಸ್ಸನ್ನು ಉದ್ವಿಗ್ನಮಾಡುವವು. ಆಪ್ತ ಮತ್ತು ಸ್ನೇಹಿತರ ಬಗ್ಗೆ ಹಣ ವೆಚ್ಚವಾಗುವಂತಿದೆ. ಒಡಹುಟ್ಟಿದವರಿಂದ ಸಹಾಯ ಸೌಖ್ಯಗಳುಂಟಾದಾವು ಹೆಂಡತಿಯಿಂದಲೂ ಸೌಖ್ಯವೇ ಇದೆ. ಮಕ್ಕಳ ಕೃತ್ಯಗಳು ಅಪಕೀರ್ತಿಗೆ ಗುರಿಮಾಡುವವು. ಅಭ್ಯಾಸ ಮಾಡುವವರು ಆಲಸ್ಯದಿಂದ ಅಪಮಾನಕ್ಕೆ ಒಳಗಾದಾರು. ಕೃಷೀವಲದಿಂದ ಉಪಜೀವಿಸುವವರಿಗೆ ಪಶುಲಾಭವುಂಟು. ಕೆಲವರು ಸೈತ್ಯದಿಂದ ಗೋಳಾಡಬಹುದು. ಲೋಕೋಪಯೋಗಿ ಕರ್ಮಗಳಿಂದ ಯಶಸ್ಸೂ ಲಾಭವೂ ಸಿಗುವದು. ವಸ್ತ್ರಾಲಂಕಾರಗಳ ಸಲುವಾಗಿ ಹಣದ ಚೀಲವನ್ನು ಬಿಚ್ಚೀತಿರಬೇಕಾಗುವದು. ವ್ಯವಸಾಯದಲ್ಲಿ ಎಚ್ಚರಿಕೆ; ಆಪ್ತ ಬಂಧುಗಳ ಕೂಡ ವ್ಯಾಜ್ಯ ಆಗುವ ಸಂಭವವದೆ. ಪ್ರಕೃತಿ ಜಪ್ಪಿಸರಿ. ತಾ. ೬, ೧೫, ೨೪ ಒಳ್ಳೇಯವು.

— ವೃಷಭ —

ವ್ಯವಸಾಯವು ಕಳೆಗುಂದಿದರೂ ಇತರ ವ್ಯಾಪಾರದಿಂದ ಹಣದ ಲಾಭಉಂಟು. ಒಡಹುಟ್ಟಿದವರ ಉತ್ಕರ್ಷ ಕಾಣುತ್ತದೆ. ಅವರಿಂದ ಸಹಾಯವೂ ಆದೀತು. ಮಕ್ಕಳ ಪ್ರಕೃತಿ ಸಲುವಾಗಿ ಭಯಉಂಟು ಸಟ್ಟಾ ವ್ಯಾಪಾರದವರು ಜಾಗ್ರತೆಯಾಗಿರಬೇಕು. ಅಕಸ್ಮಾತ್ ಹಾನಿಯು ತೋರುತ್ತದೆ. ಶತ್ರುಗಳಿಂದ ಪೀಡೆಯು ತಗಲುವದು. ಹೆಂಡಂದಿರ ಪ್ರಕೃತಿಯ ಬಗ್ಗೆ ಮನಸ್ತಾಪವ್ಯಾಧಿ ಸಂಭವಿಸುತ್ತದೆ. ಗೆಳೆಯರಿಂದ ಸಹಾಯವಾಗುವದು ಅಧಿಕಾರಸ್ಥರೂ ಸಹ ಸಹಾನುಭೂತಿಯನ್ನು ತೋರಿಸುವರು. ನೌಕರದಾರರು ಮೇಲಧಿಕಾರಿಗಳ ವಿರುದ್ಧ ಏನು ಮಾಡಕೂಡದು. ವಿನಃಕಾರಣ ಅಪವಾದಕ್ಕೆ ಮೂಲಭೂತವಾಗುವಿರಿ. ಹೆಣ್ಣುಮಕ್ಕಳ ಬಗ್ಗೆ ಧನ ವೆಚ್ಚವಾಗುವಂತಿದೆ ಸೋದರ ಮಾವ ಇಲ್ಲವೇ ಕೈಕೆಳಗಿನವರಿಂದ ಸ್ವಲ್ಪ ಲಾಭಉಂಟು. ಕಣ್ಣು ಬೇನೆಯಿಂದ ಎಚ್ಚರಿಕೆ. ತಾ ೯, ೧೭, ೨೭ ನೆಟ್ಟಗೆ

— ಮಿಥುನ —

ಉದ್ಯೋಗದಲ್ಲಿ ಪ್ರಗತಿಯಿದೆ. ವ್ಯವಸಾಯದಲ್ಲಿ ಶತ್ರುಗಳ ಆಟ ನಡೆಯುವಂತೆ ಇಲ್ಲ. ಒಡಹುಟ್ಟಿದವರ ಕರ್ಮಗಳು ನಿಮಗೆ ಆಂಟಿಕೊಂಡು ಭಯವನ್ನುಂಟುಮಾಡುವವು. ಹೊಲದ ಮೂಲಕ ನಡೆದ ವ್ಯಾಜ್ಯದಲ್ಲಿ ಯಶಉಂಟು. ಮಕ್ಕಳಿಂದ ಸಮಾಧಾನವದೆ. ಮಡ್ಡಿನ ಕೊರತೆ ಅಕಸ್ಮಾತ್ ನಿವಾರಣೆಯಾಗುವದು ಆಳುಮಕ್ಕಳಿಂದಾಗಲಿ ಇಲ್ಲವೆ ಹಡೆದ ತಾಯಿಯ ಕಡೆಯ ಬಂಧುಗಳಿಂದ ನಿಮಗೆ ಮನೋಭಂಗದ ಕೃತ್ಯಗಳು ಆದಾವು. ಚಳಿಮಾನದಿಂದ ಎಚ್ಚರಿಕೆ. ಹೆಂಡಂದಿರಿಂಪ ಸುಖವುಂಟಾಗುವದು. ಅವರ ಅಣ್ಣತಮ್ಮಂದಿರಿಂದ ಸಹಾಯದೊರಕುವದು. ಸ್ನೇಹಿತರಿಂದ ಮೋಸದ ಪ್ರಸಂಗಗಳು ತಲೆದೋರುವವು. ಕಾಗದ ಪತ್ರಗಳನ್ನು ಮಾಡುವದರಲ್ಲಿ ಕಣ್ಣಲ್ಲಿ ಎಣ್ಣೆಹಾಕಿಕೊಂಡು ಇದ್ದರೆ ಒಳ್ಳೇಯದು. ಹಲವರಿಗೆ ಸಾಲಗಳ ಸಂಬಂಧಿ ಅತಿ ಜಡಚಣಿಗಳು ಉಂಟಾಗುವವು. ಪುಪ್ಪುಸಗಳ ಬೇನೆಗೆ ಒಳಗಾಗಬೇಡಿರಿ. ತಾ. ೧, ೧೧, ೨೦ ನೆಟ್ಟಗೆ.

— ಕರ್ಕ —

ಉದ್ಯಮವು ಆತಂಕವಿಲ್ಲದೇ ನಡೆಪರೂ ವೆಚ್ಚ ಬಹಳ. ಋಣ ಉಂಟಾಗುವದು. ಮನಸ್ಸು ಬಹಳೇ ಉದ್ವಿಗ್ನವಾಗುವದು. ಒಡಹುಟ್ಟಿದವರ ಬಗ್ಗೆ ಹಣ ವೆಚ್ಚವಾಗುವದು. ಸ್ವಂತ ಪರಾಕ್ರಮದಿಂದಲೇ ಫಳಿಕೆಯಾಗಿ ಶತ್ರುಗಳ ಆಟವು ಸಾಗದೇ ಇರುವದು. ಮಕ್ಕಳ ಬಗ್ಗೆ ಚಿಂತೆಯುಂಟು. ವ್ಯಾಪಾರದಲ್ಲಿ ಯಶವಿದ್ದರೂ ಒಳ್ಳೇ ಜಾಗ್ರತೆಯು ಬೇಕೇ ಬೇಕು. ಹೆಂಡರ ಬಗ್ಗೆ ಅತಿ ಖರ್ಚು ಆಗಿ ಅವರ ಪ್ರಕೃತಿಯನ್ನು ಕುರಿತು ವ್ಯಸನವಾಗುವದು. ಸ್ನೇಹಿತರಿಂದಲೂ ಸಮಾಜ ಧುರೀಣರಿಂದಲೂ ಅಧಿಕಾರಿಗಳಿಂದಲೂ ಸಹಾಯ ದೊರಕುವದು. ತಂದೆತಾಯಿಗಳ ಪ್ರಕೃತಿ ಜಪ್ಪಿಸಬೇಕು. ಬರಹದಿಂದ ಲಾಭವದೆ. ವೈರಿಗಳ ಹಾವಳಿಯು ಬಹಳ ಆದರೂ ಭಯಪಡುವ ಕಾರಣವಿಲ್ಲ. ಪಾಲಿನಿಂದ ಯಾವದೇ ವ್ಯವಹಾರ ಮಾಡಕೂಡದು. ಅಕಸ್ಮಾತ್ತಾಗಿ ಗುಪ್ತ ಲಾಭ

ಕಾಣುತ್ತದೆ. ಪ್ರಕರ್ತಿ ಬಗ್ಗೆ ಎಚ್ಚರಿಕೆ. ಅಜೀರ್ಣ ಹೆಚ್ಚೀತು. ತಾ. ೧೩, ೨೭, ೩೦ ನೆಟ್ಟಗೆ.

— ಸಿಂಹ —

ಉದ್ಯಮದಲ್ಲಿ ಒಳ್ಳೇ ಸುಖವುಂಟು. ಸ್ವಂತದ ಬಗ್ಗೆ ಹಣವ್ಯಯ ಉಂಟು. ಮನೆತನದವರ ಬಗ್ಗೆ ಖರ್ಚು ಬಹಳವಾದೀತು. ಒಡಹುಟ್ಟಿದವರಿಂದ ಸಹಾಯ ಸಿಗುವದು. ಹೊಲಮನೆಗಳಿಂದ ಲಾಭದ ಮಾತುಗಳಾದಾವು. ಮಕ್ಕಳ ಬಗ್ಗೆ ವ್ಯತ್ಯಾಸವು ಕಾಣುತ್ತದೆ. ಸಟ್ಟಾ ವ್ಯಾಪಾರದಿಂದ ಹಾನಿ ಆದೀತು. ಶತ್ರುಗಳ ಆಟವು ನಿಲ್ಲುವದು. ಹೆಂಡಂದಿರ ಬಾಬಿನಲ್ಲಿ ಮನೋವೇಧಕ ಸಂಗತಿಗಳು ಉದ್ಭವಿಸುವವು. ಸ್ನೇಹಿತರಿಂದ ಎಚ್ಚರಿಕೆ. ಅವರು ನಿಮ್ಮ ಒಳ್ಳೇತನದ ಲಾಭವನ್ನು ತಕ್ಕೊಳ್ಳುವರು. ಲೋಕಾಪವಾದಕ್ಕೆ ಅಂಜಬೇಡಿರಿ. ಹತ್ತಿ, ಬೆಳ್ಳಿ ಮುಂತಾದ ವ್ಯಾಪಾರದಲ್ಲಿ ಲಾಭ ಕಾಣುತ್ತದೆ. ಪ್ರಕರ್ತಿಗೆ ಕೇಡು ಉಂಟು. ಜಾಗ್ರತೆಯಿಂದ ನಡೆಯರಿ. ವಿನಃಕಾರಣ ಹೆಂಡರ ಆಪ್ತರಿಂದ ಅಪಕೀರ್ತಿಯುಂಟಾದೀತು. ಎದೆಯ ಬೇನೆಯಿಂದ ಜಪ್ಪಿಸರಿ. ಪ್ರವಾಸದಿಂದ ಅಕಸ್ಮಾತ ಅಪಘಾತಗಳು ತಲೆದೋರ್ಯಾವು. ತಾ. ೩, ೧೫, ೨೫ ನೆಟ್ಟಗೆ.

— ಕನ್ಯಾ —

ವ್ಯವಸಾಯವು ನೆಟ್ಟಗೆ ಸಾಗುವದು. ಆದರೂ ಖರ್ಚಿನ ಬಾಬುಗಳು ಅತಿ ತ್ರಾಸುಕೊಟ್ಟಾವು. ಒಡಹುಟ್ಟಿದವರಿಂದ ಜಗಳಗಳುಂಟು. ಕುಟುಂಬದವರ ಸಹಾಯ ಸಿಕ್ಕರೂ ಅಸಮಾಧಾನಕ್ಕೆ ಗುರಿಯಾಗಬೇಕಾಗುವದು. ಮಕ್ಕಳ ಸಲುವಾಗಿಯೂ ಚಿಂತೆಯುಂಟಾಗುವದು. ಪ್ರಕರ್ತಿಯು ಕೆಡುವ ಸಂಭವವದೆ. ಕೈಕೆಳಗಿನವರಿಂದಲೂ ಆಳುಮಕ್ಕಳಿಂದಲೂ ಅತ್ತೆ ಮಾವಂದಿರಿಂದಲೂ ಮೋಸದ ಪ್ರಸಂಗಗಳು ಬಂದಾವು. ಅಧಿಕಾರಸ್ಥರೂ ಸ್ನೇಹಿತರೂ ಸಹಾಯ ಸಹಾನುಭೂತಿಯನ್ನು ತೋರಿಸುವರು. ಹೆಂಡಂದಿರಿಂದ ಸುಖ ಉಂಟು. ಹಲವರ ಹೆಂಡಂದಿರು ಅತಿಸಾರದಿಂದ ಬಳಲುವರು. ಹಿರಿಯರು ವ್ಯವಸಾಯದಲ್ಲಿ ಅತಂಕಗಳನ್ನು ತಂದಾರು. ಕಾಯಿಲೆಯ ಬಾಧೆಯಾದೀತು. ತಾ. ೫, ೬, ೭, ೧೭ ನೆಟ್ಟಗೆ.

— ತುಲಾ —

ಉದ್ಯಮದಲ್ಲಿ ಪ್ರಗತಿಯುಂಟು. ಹಿರಿಯರಾಗಲೀ ವರಿಷ್ಠರಾಗಲೀ ಕರ್ತೃತ್ವದಿಂದ ನಡೆದಾರು. ಮನೆತನದವರು ಸೌಖ್ಯದ ಹಾಲಿನಲ್ಲಿ ಉಪ್ಪನ್ನು ಕಲಿಸುವಂತೆ ಕಾಣುತ್ತದೆ. ಉದ್ಯೋಗದ ಬಗ್ಗೆ ಪ್ರವಾಸವಾಗುವದು. ಅದರಲ್ಲಿ ಕೊಂಚು ಉಂಟು. ಹೊಲಮನೆಯ ಮಾತು ಸಮಾಧಾನವಾಗುವಂತೆ ನಡೆದಾವು. ಆಕಸ್ಮಾತವಾಗಿ ಹೆಂಡರಿಂದ ಲಾಭವಾಗುವದು. ಆವರ ಪ್ರಕೃತಿ ಮಾತ್ರ ಜಪ್ಪಿಸರಿ. ಕೊಳ್ಳೋ ಮಾರೋ ವ್ಯಾಪಾರದಲ್ಲಿ ಬಹಳ ಚಂಚಲತ್ವವಿದೆ. ಜೋಕೆ; ಸ್ನೇಹಿತರು ಸಹಾಯ ಮಾಡುವರು. ಅಜೀರ್ಣ ವಿಕಾರಕ್ಕೆ ಒಳಗಾಗಬೇಡಿರಿ. ತಮ್ಮವರೇ ಹಾನಿಯನ್ನುಂಟು ಮಾಡ್ಯಾರು. ಸಣಬಿನ ವ್ಯಾಪಾರವು ಲಾಭವನ್ನಿಯುವದು. ಕೆಲವರಿಗೆ ಶಸ್ತ್ರಕ್ರಿಯೆಯಿಂದ ಅಂಜಿಕೆಯದೆ. ತಾ. ೬,೧೮,೨೯ ನೆಟ್ಟಗೆ.

— ವೃಶ್ಚಿಕ —

ವ್ಯವಸಾಯದಲ್ಲಿ ವ್ಯತ್ಯಾಸವುಂಟು. ಆದರೂ ಸ್ವಪರಾಕ್ರಮದಿಂದ ಸ್ವಲ್ಪು ಫಳಿಕೆಯಾಗುವದು. ಮನೆತನದವರಿಂದ ಬಂಧು ಬಳಗದವರಿಂದ ಮಕ್ಕಳಿಂದ ಸುಖಕ್ಕೆ ಒಳಮಾಡುವ ಕೃತ್ಯಗಳಾದಾವು. ಹೊಲಮನೆಗಳಿಂದ ಸ್ವಲ್ಪು ತೊಂದರೆ ಉಂಟಾಗುವದು. ಹೆಂಡಂದಿರ ಕಡೆಯರಿಂದ ಸಹಾಯ ದೊರಕೀತು. ಅಧರ್ಮನಲ್ಲಿ ಮನಸ್ಸು ಹೋಗಿ ಜನನಿಂದೆಗೆ ಪಾತ್ರರಾಗುವಿರಿ. ಸ್ನೇಹಿತರ ಬಗ್ಗೆ ಜೋಕಗೊಳ್ಳುವ ಪ್ರಸಂಗ ಒದಗುವವು. ಮನೆಯಲ್ಲಿ ಕಳವು ಆಗುವ ಸಂಭವವದೆ. ಬೆಂಕಿ ಅಂಜಿಕೆಯೂ ಉಂಟು. ಮಕ್ಕಳ ಬಗ್ಗೆ ಖರ್ಚು ವ್ಯಸನವೂ ಬಹಳವಾದೀತು. ಕಿವಿ ನೋವುಗಳಿಂದ ತ್ರಾಸಾದೀತು. ಅಧಿಕಾರಸ್ಥರಲ್ಲಿ ನಿಮ್ಮ ಬಗ್ಗೆ ಸಂಶಯ ಉಂಟಾದೀತು. ಅಣ್ಣ - ತಮ್ಮಂದಿರಲ್ಲಿ ಅಪಘಾತ ಕಾಣತದೆ. ಗುಹ್ಯೇಂದ್ರಿಯಗಳ ಬೇನೆಯು ಸಂಭವಿಸಬಹುದು. ತಾ. ೩, ೧೩, ೨೨ ನೆಟ್ಟಗೆ.

— ಧನು —

ವ್ಯವಸಾಯದಲ್ಲಿ ಸಾಧಾರಣ ಪ್ರಗತಿಯೇ ಆದೆ. ಕುಟುಂಬದ ಸಲುವಾಗಿ ಬಹಳ ಧನ ಹಾನಿ ಆಗುವದು. ಒಡಹುಟ್ಟಿದವರ ಕಾರಸ್ಥಾನದಿಂದ ಕ್ಲೇಶ ಉಂಟಾದೀತು. ಮಕ್ಕಳ ಬಗ್ಗೆನೂ ಅಸಮಾಧಾನವೇ ಸರಿ. ಮನೆ-ಹೊಲಗಳ ಕುರಿತು ಸ್ವಲ್ಪು ಹಾನಿಯಾದರೂ ಸಮಾಧಾನಕಾರಕವಾಗಿ ಅವುಗಳ ಬಗ್ಗೆ ಕಡೆಗೆ ವ್ಯವಹಾರಗಳು ಒದಗುವವು. ಹೆಂಡತಿ ಪ್ರಕೃತಿ ಬಗ್ಗೆ ಆಲೋಚನೆ ಅವಳ ಕೃತ್ಯಗಳ ಬಗ್ಗೆ ಅನಾದರ ಉಂಟಾಗುವವು. ಸ್ನೇಹಿತರು ಕೂಡ ಮನೋವ್ಯಥೆಯನ್ನೇ ಹೆಚ್ಚಿಸುವರು. ಇಷ್ಟಿದ್ದಾಗ್ಯೂ ಒಮ್ಮೊಲೆ ಸಂತೋಷ ಜನಕ ವ್ಯವಹಾರಗಳು ತಲೆದೋರುವವು. ವಿದ್ಯಾಖಾತೆಯಲ್ಲಿರುವರಿಗೂ ವೃತ್ತಪತ್ರಕಾರರಿಗೂ ಸಮಾಧಾನಕಾರಕವಾಗಿ ಉದ್ಯೋಗವು ಸಾಗುವದು. ಕಂಠ ಬೇನೆಯಾಗಿ ಸ್ವಲ್ಪು ವ್ಯಥೆಯುಂಟಾಗುವ ಸಂಭವವದೆ. ತಾ. ೬, ೧೨, ೨೦ ನೆಟ್ಟಗೆ.

— ಮಕರ —

ಉದ್ಯಮದಲ್ಲಿ ಪ್ರಗತಿಯು ಕಾಣುವದಿಲ್ಲ. ಆದರೂ ಸ್ವಕಷ್ಟಗಳಿಂದಲೂ ಸ್ನೇಹಿತರ ಸಹಾಯದಿಂದಲೂ ಅದರ ಬಗ್ಗೆ ಕ್ಲೇಶವಾಗಲಿಕ್ಕಿಲ್ಲ. ಕುಟುಂಬದ ಸಲುವಾಗಿ ವೆಚ್ಚ ಬಹಳವಾಗುವದು. ಒಡಹುಟ್ಟಿದವರ ಸಹಾಯ ದೊರಕುವದಿಲ್ಲ. ಮಕ್ಕಳ ಬಗ್ಗೆ ಚಿಂತೆಯೇ ನಿಮ್ಮ ಪಾಲು. ಆವರ ಪ್ರಕೃತಿಯು ಕೃತ್ಯಗಳು ನಿಮ್ಮನ್ನು ವಿವಂಚನೆಗೆ ಪಾತ್ರ ಮಾಡುವವು. ಪ್ರವಾಸವಾಗಿ ಸ್ವಲ್ಪು ಸಮಾಧಾನವಾಗುವದು. ಕೈಕೆಳಗಿನವರೂ ಆಳುಮಕ್ಕಳೂ ತೊಂದರೆ ಕೊಟ್ಟಾರು. ಹೆಂಡಂದಿರ ಕೂಡ ಕಲಹದ ಚಿನ್ಹಗಳಿವೆ. ಅವರ ಪ್ರಕರ್ತಿ ನೆಟ್ಟಗಿರುವದು. ಹ್ಯಾಗೋ ಏಕೋ. ಸಿಟ್ಟಿನಿಂದ ಯಾವದೇ ವ್ಯವಹಾರ ಮಾಡಕೂಡದು. ಅದರಿಂದ ಹಾನಿಯುಂಟಾದೀತು. ನಾಲಿಗೆಯನ್ನು ಲಗಾಮಿನಿಂದ ಬಿಗಿ ಹಿಡಿಯದಿದ್ದರೆ ಮಾನಭಂಗವಾಗುವಂತಿದೆ. ತಾರೀಖು ೧೬, ೨೬, ೩೧ ನೆಟ್ಟಗೆ.

— ಕುಂಭ —

ಉದ್ಯೋಗದಲ್ಲಿ ಲಾಭವೂ, ಹಾನಿಯೂ ಸರಿಯಾಗಿರುವವು. ವ್ಯಾಪಾರದಲ್ಲಿ ಲಾಭವದೆ. ಸ್ಥಲಾಂತರ ಇಲ್ಲವೇ ಎರಡನೇ ವ್ಯವಹಾರದು ಕೊಳ್ಳಲ್ಲಿ ಬಿದ್ದಾವು. ಒಡಹುಟ್ಟಿದವರು ಸಹಾಯ ಮಾಡುವದಿಲ್ಲ. ಮಕ್ಕಳ ಉತ್ಕರ್ಷೆಯು ಸೌಖ್ಯಕ್ಕೆ ಕಾರಣವಾಗುವದು. ಸಟ್ಟಾದಿಂದಲೂ ಸ್ವಲ್ಪು ಲಾಭ ಉಂಟು. ಶತ್ರುಗಳ ಪರಾಜಯವಾಗುವದು. ಸ್ನೇಹಿತರಿಂದಲೂ ಅಧಿಕಾರಸ್ಥರಿಂದಲೂ ಕೀರ್ತಿ ಬೆಳೆಯುವದು. ಪ್ರವಾಸದಲ್ಲಿ ಗಂಡಾಂತರ ಸಂಭವಿಸೀತು. ಹೆಂಡಂದಿರಿಂದ ಸಮಾಧಾನವದೆ. ಕಾಗದಪತ್ರದಲ್ಲಿ ಸಿಕ್ಕು ಒದ್ದಾಡದಂತೆ ಎಚ್ಚರಿಕೆಯಿಂದ ಇರುವದು ಲೇಸು. ಮನೆತನದ ಬಗ್ಗೆ ಖರ್ಚು ಬಹಳ ಆದೀತು. ಬಂಧುಗಳ ಸಂಕಟಗಳು ಕ್ಲೇಶವನ್ನು ಕೊಟ್ಟಾವು. ವೃತ್ತಪತ್ರಕಾರರಿಗೆ ಒಳ್ಳೇ ಸಮಾಧಾನದಾಯಕವದೆ. ಕಣ್ಣು ಮತ್ತು ತೊಡೆ ಬೇನೆಗಳಿಂದ ಜಪ್ಪಿಸರಿ. ತಾ. ೧೧, ೧೪, ೨೯ ನೆಟ್ಟಗೆ.

— ಮೀನ —

ಉದ್ಯಮದಲ್ಲಿ ಉತ್ಕರ್ಷೆಯುಂಟು. ಕುಟುಂಬದವರಿಂದ ಲಾಭವದೆ. ಒಡಹುಟ್ಟಿದವರಿಂದಲೂ ಸಹಾಯ ಸಹಾನುಭೂತಿ ದೊರಕುವವು. ಮನೆ ಹೊಲಗಳಿಂದ ಲಾಭವುಂಟು. ಮಕ್ಕಳಿಂದಲೂ ಸಟ್ಟಾದಿಂದಲೂ ಸೌಖ್ಯ ಉಂಟಾದೀತು ಆದರೂ ಮಿತಿಮೀರಿ ಹಣ ವೆಚ್ಚವಾಗುವದು. ಗಂಡ-ಹೆಂಡಂದಿರಲ್ಲಿ ಸುಖಸಂತೋಷಗಳು ಅನುಭವಕ್ಕೆ ಬಂದಾವು. ಎಚ್ಚರಿಕೆ ಇಲ್ಲದೆ ವ್ಯವಹಾರದಲ್ಲಿ ನಂಬಿಗೆಯಿಂದ ಹಾನಿ ಸಂಭವಿಸುವದು. ಸ್ನೇಹಿತರಿಂದ ಕುಟುಂಬದವರಲ್ಲಿ ವ್ಯಾಜ್ಯವು ಕಾಲೂರೀತು. ವಿದ್ಯಾರ್ಜನೆಗೂ ಧರ್ಮದ ಪ್ರಗತಿಗೂ ಒಳ್ಳೇಯದು. ಸೋದರ ಮಾವ ಆಳುಮಕ್ಕಳುಗಳಿಂದ ಲಾಭವುಂಟು. ಪ್ರಕೃತಿಯು ಅಜೀರ್ಣದ ಮೂಲಕ ಕೆಡಬಹುದು. ಕನಸುಗಳು ಭವಿಷ್ಯವನ್ನು ಸೂಚಿಸುವವು. ವ್ಯಾಪಾರಸ್ಥರು ಹಣವನ್ನು ನಿರಾಂತವಾಗಿ ಹೆಚ್ಚಿನ ಲಾಭಕ್ಕೆ ಉಪಯೋಗಿಸಬಹುದು. ಆಕಸ್ಮಾತ್ತಾಗಿ ಧನಲಾಭವದೆ. ತಾ. ೧೪, ೨೦, ೩೧ ನೆಟ್ಟಗೆ.

ಸಾದರ ಸ್ವೀಕಾರ

೧. ಸುಳಿವು ಹೊಳಿವು- ಮನೋಹರ ಗ್ರಂಥ ಪ್ರಕಾಶನದ ೩೫ನೆಯ ಕುಸುಮ. ೨೬ ಹರಟೆಗಳ ಸಂಗ್ರಹ. (ವಿವಿಧ ಹರಟೆಗಾರರಿಂದ) ಕ್ರೌನ್ ೧೮೨ ಪುಟ. ಬೆಲೆ ೧ ರೂ.

೨. ದೇವದಾಸ- ಶರಚ್ಚಂದ್ರ ಚಟರ್ಜಿಯವರ ಕಾದಂಬರಿಯ ಕನ್ನಡ ಅನುವಾದ. ಅನುವಾದಕರು- ಶ್ರೀ. ಗುರುನಾಥ ಜೋಶಿ. ಪ್ರಕಾಶಕರು- ಸಾಹಿತ್ಯ ಭಾಂಡಾರ ಹುಬ್ಬಳ್ಳಿ. ಪುಟ ೧೬೪. ಸಾದಾ ಪ್ರತಿ- ೧ ರೂ. ಕ್ಯಾಲಿಕೊ- ೧.೪.೦

೩. ಚಂದ್ರಹಾಸ— ಲಘ್ವೀಕರಣ ಭಾರತದೊಳಗಿನ ಒಂದು ಸಂಗ್ರಹ. ಸಂಪಾದಿಸಿದವರು- ಶ್ರೀ. ದ. ರಾ. ಬೇಂದ್ರೆ ಎಂ. ಎ. ಬೆಲೆ ಎಂಟು ಆಣೆ. ಪ್ರಕಾಶಕರು-ಮನೋಹರ ಗ್ರಂಥಭಾಂಡಾರ.

೪. ನಾಮಧಾರಿ ಪ್ರೊ. ಮುಗಳಿಯವರ ಸಾಮಾಜಿಕ ನಾಟಕ. ಬೆಲೆ- ಸಾದಾ ೦.೧೨.೦. ಕ್ಯಾಲಿಕೊ ೧ ರೂ.

೫. ಪಾರ್ವತೀ ಸತ್ವಪರೀಕ್ಷೆ — ಕೈ. ವಾ. ವಾಸುದೇವಾಚಾರ ಮಾಸ್ತರರಿಂದ ಅನುವಾದಿಸಲ್ಪಟ್ಟ ನಾಟಕ. ಬೆಲೆ ೧ ರೂಪಾಯಿ. ಪ್ರಕಾಶಕರು- ವೆ. ವಾ. ಸವಣೂರ ಧಾರವಾಡ.

೬. ವಯಸ್ಕ ವಿದ್ಯಾಭ್ಯಾಸದ ಮೊದಲನೆಯ ಪುಸ್ತಕ – ಬೆಲೆ ೦-೧-೬. ಬರೆದವರು- ಶ್ರೀ. ಎಂ. ಆರ್. ಶ್ರೀನಿವಾಸ ಮೂರ್ತಿ ಬಿ. ಎ.

೭. ಶಿಕ್ಷಕ ಮಿತ್ರ — ಶಿಕ್ಷಣಕ್ಕಾಗಿ ವಿಶೇಷವಾದ ಮಾಸಪತ್ರ ಬಿಡಿಸಂಚಿಕೆ ಮೂರಾಣೆ. ವಾ. ಚಂ. ೨ ರೂ. ಸಂಪಾದಕರು- ಶ್ರೀ. ಜೋಶಿ ಆರವಿಂದರಾಯರು ಬಿ.ಎ. ಬಿ.ಟಿ.

೮. ಕೊಡಗು ಚಂದ್ರಿಕೆ— ಕನ್ನಡ ಮಾಸಪತ್ರ. ಬಿಡಿ ಸಂಚಿಕೆ- ೦.೨.೬

ಸಾಹಿತ್ಯಾವಲೋಕನ

ಹಸ್ತಸಾಮುದ್ರಿಕ - - - - -

ಕ್ರೌನ್ ಅಷ್ಟಮಾಂಶದ ೧೩೬ ಪುಟಗಳು ಬೆಲೆ ೧ ರೂ. ಲೇಖಕರು:- ಶ್ರೀಮಾನ್ ಕಲಮದಾನಿ ಗುರುರಾಯರು ಧಾರವಾಡ.

ಭವಿಷ್ಯದಂತೆ ಹಸ್ತಸಾಮುದ್ರಿಕವಾದರೂ ಒಂದು ಶಾಸ್ತ್ರ ವೆಂದೇ ಹೇಳುತ್ತಾರೆ. ಈ ಬಗ್ಗೆ ಹಲಕೆಲವು ಆಧಾರಗಳನ್ನೂ ತೋರಿಸುತ್ತಿದ್ದಾರೆ. ಸ್ಥೂಲವಾಗಿ ಕೆಲವಂಶದ ಮಟ್ಟಿಗೆ ಈ ಬಗೆಯ ಶಾಸ್ತ್ರಗಳ ಸತ್ಯತ್ವವನ್ನು ನಾವು ಒಪ್ಪಿಕೊಳ್ಳ ಬಹುದು.

ಪ್ರಸ್ತುತಗ್ರಂಥದಮಟ್ಟಿಗೆ ಹೇಳುವುದಾದರೆ ಈ ಗ್ರಂಥಕರ್ತ್ರ ಗಳು ಹಸ್ತ ಸಾಮುದ್ರಿಕವನ್ನು ಚೆನ್ನಾಗಿ ಆಳವಾಗಿ ಅಭ್ಯಾ ಸಿಸಿ ಅದರ ಮರ್ಮವನ್ನು ಕಂಡು ಹಿಡಿದಿದ್ದಾರೆಂದು ಕಂಡು ಬರುತ್ತದೆ. ಮುಖ್ಯವಾಗಿ ಇದು ಇಂಗ್ಲಿಷಿನಲ್ಲಿಯ ಚಿರೋನ ಗ್ರಂಥದ ರೂಪರೇಷೆಯನ್ನನುಸರಿಸುವಂತೆ ಕಂಡುಬರುತ್ತದೆ. ಕೆಲ ಕೆಲವೆಡೆಗಳಲ್ಲಿ ವಿಷಯವು ಅಸ್ಪಷ್ಟವಾಗಿ ಸಾಮಾನ್ಯ ಅಭ್ಯಾಸಿಗಳಿಗೆ ಒಮ್ಮಿಗೆಲೆ ತಿಳಿಯುವಂತಿಲ್ಲ. ಅದರಿಕನ್ನಡದಲ್ಲಿ ಇದೊಂದೆ ಹೊಸ ಮಾದರಿಯ ಗ್ರಂಥವಾಗಿದ್ದುದರಿಂದ ಇದನ್ನು ಅತ್ಯಾದರದಿಂದ ಬರಮಾಡಿಕೊಳ್ಳುವೆವು. ಸಾಕಷ್ಟು ಚಿತ್ರಗಳಿರುವುದರಿಂದ ಸ್ವಂತವಾಗಿ ಸಾಮುದ್ರಿಕವನ್ನ ಭ್ಯಾಸಿಸ ಬೇಕೆನ್ನುವವರಿಗೆ ಇದು ಅತ್ಯುಪಯುಕ್ತವಾಗಿದೆ.

ಪ್ರೇಮಕಲಾ

ಕ್ರೌನ್ ೮ ಬೆಲೆ ೧ ರೂಪಾಯಿ. ಲೇಖಕರು- ಡಾ. ಎಂ. ಗೋಪಾಲಕೃಷ್ಣರಾಯರು. ಪ್ರಕಾಶಕರು:- ಭಾಲಚಂದ್ರ ಘಾಣೇಕರ.

ಡಾ. ಗೋಪಾಲಕೃಷ್ಣರು ಕಾಮಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸ ಮಾಡಿದವರಿದ್ದಾರೆ. ಕೆಲವರಿಗೆ ಈ ಬಗೆಯ ವಿಷಯದ ಲೇಖ-ಗ್ರಂಥ ಬರೆಯುವುದೆಂದರೆ ಅಸಹ್ಯವೆನಿಸ ಬಹುದು. ಇಂತಹ ವಿಷಯಗಳನ್ನೋದಲು ಸಂಕೋಚ ಪಡಬಹುದು. ಆದರೆ ಈ ವಿಷಯಗಳನ್ನೊಳಗೊಂಡ ಗ್ರಂಥ ಗಳು ವಿದ್ಯಾರ್ಥಿಗಳ ದೆಸೆಯಿಂದ ಬರೆಯಲ್ಪಟ್ಟಿರದೆ ಗೃಹ-ಸ್ಥಾಶ್ರಮಿಗಳಿಗಾಗಿ ಬರೆಯಲ್ಪಟ್ಟಿವೆ ಎಂಬುದನ್ನು ಗಮನಿಸಿ-ದರೆ ಪ್ರಕೃತ ಗ್ರಂಥಕರ್ತರು ಪಟ್ಟಿಶ್ರಮವು ಸಾರ್ಥಕವಾಗು ತ್ತದೆ. ಆದರೆ ತಿಳಿವುಗೆಟ್ಟ ಬಾಲಕರನೇಕರು ಇಂತಹ ಪುಸ್ತಕಗಳನ್ನು ಪ್ರಸಂಗವಶಾತ್ ಓದಿ ಅದರಿಂದ ಮನ-ಸ್ಸನ್ನು ಕದಡಿಕೊಳ್ಳುವ ಸಂಭವವೂ ಇಲ್ಲದಿಲ್ಲ. ಇದೊಂದಂಶ ವನ್ನು ಬಿಟ್ಟರೆ ದಾಂಪತ್ಯ ಜೀವನದ ಸೌಖ್ಯ ಹಾದಿಯ ಗುಟ್ಟನ್ನು ಬೊಟ್ಟುಮಾಡಿ ತೋರಿಸುವ ಈ ಗ್ರಂಥವನ್ನು ಆದರದಿಂದ ಬರಮಾಡಿಕೊಳ್ಳಬಹುದು. ವಿಷಯನಿರೂಪ-ಣೆಯ ಮಟ್ಟಿಗೆ ಬರೆಹಗಾರರು ತುಂಬಾ ಯಶಸ್ವಿಯಾಗಿದ್ದಾ ರೆಂದೇ ಹೇಳಬೇಕು. —ನಾ. ಕು.

ನಮ್ಮೂರ ನಡತೆ

ಕ್ರೌನ್ ೮ ಬೆಲೆ ನಾಲ್ಕಾಣೆ. ಶ್ರೀಮಾನ್. ಪಾಟೀಲ ಕೃಷ್ಣರಾಯರ ಏಕಾಂಕ ನಾಟಕಗಳ ಸಂಗ್ರಹ. ಪ್ರೊ. ಜಾಗೀರದಾರರ ಮುನ್ನುಡಿಯೊಡನೆ.

ಇದರಲ್ಲಿ ಶ್ರೀ ಕೃಷ್ಣರಾಯರು ನಿಜವಾದ ನಾಟಕಕಾರ ನಲ್ಲಿರಬೇಕಾದ ಅವಶ್ಯಕ ಗುಣಗಳನ್ನು ಅಲ್ಲಲ್ಲಿ ತೋರ್ಪಡಿ ಸಿದ್ದಾರೆ. ಎಲ್ಲ ನಾಟಕಗಳಲ್ಲಿಯೂ ಶೈಲಿ-ಕಥಾವಸ್ತು-ಸನ್ನಿ-ವೇಶ ಪಾತ್ರ ರಚನೆಗಳು ವಾಸ್ತವಿಕವಾಗಿವೆ. ಆದರೆ ಬಳ-ಕೆಯ ಶೈಲಿಯು ಒಮ್ಮೊಮ್ಮೆ ಅತಿಯಾಗಿ ಆಸಹ್ಯವೆನ್ನುವ ಮಟ್ಟಿಗೆ ಇಳಿದಿದೆ. ಆದರೂ ಶ್ರೀ. ಕೃಷ್ಣರಾಯರಲ್ಲಿ ನಾಟಕ ಕಾರನ ಕೈವಾಡವಿದೆಯೆಂದು ಧೈರ್ಯವಾಗಿ ಹೇಳಬಹುದು. ಇವರಿಂದ ಇನ್ನೂ ಅನೇಕ ನಾಟಕಗಳು ಹುಟ್ಟಲೆಂದು ಹಾರೈಸುತ್ತೇವೆ.

ಹೆಚ್ಚಾವುದು ? (ಸಣ್ಣ ಕತೆಗಳ ಸಂಗ್ರಹ)

ಲೇಖಕರು- ಶ್ರೀ "ರಘು" ಬೆಲೆ ೮ ಆಣೆ

ಏಳು ಎಸಳುಗಳನ್ನು ಒಳಗೊಂಡ ಕುಸುಮವಿದು. ಎಲ್ಲ ಕಥೆಗಳಲ್ಲಿಯೂ "ದೈವಲೀಲೆಗಿಂತ ಹೆಚ್ಚಾವುದು" ಎಂಬ ಭಾವನೆಯೇ ಮೂಡಿಬಂದಿದೆ. "ದೇವರು ದೊಡ್ಡವನು" ಎಲ್ಲಿ ಪ್ರೇಮವೋ ಅಲ್ಲಿ ನಾವು ಅವನನ್ನು ಕಾಣಬಹುದು. "ಸರಸಾಕಕ್ಕೆ"ಯ ಕಥೆಯನ್ನೊಂದು ಬಿಟ್ಟರೆ, ಉಳಿದೆಲ್ಲ ಕಥೆಗಳಲ್ಲಿ ದೇವರು ತನ್ನ ಶುಭಾಗಮನವನ್ನು ತೋರಿಸಿದ್ದಾನೆ.

ಮುಂದಾಗುವ ಸಂಗತಿಗಳನ್ನು ಮೊದಲೇ ಬಿಚ್ಚಿಬಿಟ್ಟಂತೆ ನೀರಸವಾವ- ವಿಷಯವೈವಿಧ್ಯವಿಲ್ಲದ ಕೆಲವು ಕಥೆಗಳಿವೆ.

ಇವರಲ್ಲಿ ಸೂಕ್ಷ್ಮ ನಿರೀಕ್ಷಣೆಯ ಕಣ್ಣಿದೆ. ಇವರ ಶೈಲಿಯಲ್ಲಿ ಹಾಸ್ಯವು ವಿರಳವಾಗಿದ್ದರೂ, ಮನಸ್ಸನ್ನು ಆಕರ್ಷಿಸುವ ಮಾಧುರ್ಯವಿದೆ. ಆ ಶೈಲಿಯ ಗುಣಗಳನ್ನು ಬೆಳೆಯಿಸಿ, ಕನ್ನಡಿಗರಿಗೆ ಹೆಚ್ಚು ಕಥೆಗಳನ್ನು ತೋರಿಸುವ-ರೆಂದು ಭಾವಿಸಿದ್ದೇವೆ. —V. R.

ದಿಗಂತದೃಷ್ಟಿ

ಪುರೋಗಾಮಿ ಪಕ್ಷದ ಪರಿಷತ್ತೂ-ಎ. ಆಯ್. ಸಿ. ಸಿ. ಯ ಅಧಿವೇಶನವೂ

ಪುರೋಗಾಮಿ ಪಕ್ಷದ ಮೊದಲನೆಯ ಹಾಗೂ ಮಹತ್ವದ ಪರಿಷತ್ತು ಕಳೆದ ತಿಂಗಳಿನೆಯ ತಾರೀಖಿಗೆ ಮುಂಬಯಿಯ ಕಾವಸಜಿ ಜಾಹಾಂಗೀರ ಹಾಲಿನಲ್ಲಿ ಕೊನೆಗಂಡಿತು. ಈ ಅಧಿವೇಶನದಿಂದ ಕಾಂಗ್ರೆಸ್ ಇತಿಹಾಸಿನಲ್ಲಿಯೆ ಒಂದು ಹೊಸ ಪ್ರಕರಣದ ಆರಂಭವಾಯಿತೆಂದು ದೇಶಗೌರವ ಬೋಸರು ಸಾರಿಹೇಳಿದ್ದಾರೆ. ಹಾಗೆನ್ನುವಂತೆಯೆ ಅದು ತನ್ನ ಗೊತ್ತುಗುರಿಯನ್ನು ಮಾಡಿಕೊಂಡು ಅದಕ್ಕವಶ್ಯವಾದ ಗೊತ್ತುವಳಿಗಳನ್ನೂ ಸರ್ವಾನುಮತದಿಂದ ಸ್ವೀಕರಿಸಿದೆ.

ಇನ್ನು ಅದೇ ಕಾಲಕ್ಕೆ ಮುಂಬಯಿಯಲ್ಲಿ ಎ. ಆಯ್. ಸಿ. ಸಿ. ಯ ಅಧಿವೇಶನವಾದುದೂ ಅತ್ಯಂತ ಮಹತ್ವದ ಮಾತಾಗಿದೆ. ಮುಖ್ಯವಾಗಿ ಎರಡೂ ಅಧಿವೇಶನದಲ್ಲಿ ಸರ್ವ-ಸಾಮಾನ್ಯವಾಗಿ ಒಂದೇ ಬಗೆಯ ಠರಾವುಗಳು ಪಾಸಾಗಿವೆ-ಯೆಂದು ಹೇಳಲು ಅಡ್ಡಿಯಿಲ್ಲ. ಎರಡೂ ಪಕ್ಷದವರು ಕಾಂಗ್ರೆಸ್ಸಿನಲ್ಲಿ ಒಕ್ಕಟ್ಟು ಬೆಳೆಯುವಂತೆಸಗುತ್ತಿದ್ದು,ಕಾಂಗ್ರೆಸ್ ಶುದ್ಧಿಕರಣ, ಅಂತಃಕಲಹ, ಮತಭೇದ – ಜಾತಿಭೇದಗಳ ನಿವಾರಣ, ರೈತರ ಉದ್ಧಾರ, ಸಂಸ್ಥಾನ ಪ್ರಜೆಗಳಿಗೆ ಬೆಂಬಲ, ಸಂಯುಕ್ತ ಘಟನೆಗೆ ನಿರೋಧ, ಪರದೇಶಿ ವಸ್ತು ಬಹಿಷ್ಕಾರ ಇವೇ ಮೊದಲಾದ ಗೊತ್ತುಗುರಿಗಳನ್ನಿಟ್ಟುಕೊಂಡಿದ್ದಾರೆ. ಎರಡೂ ಪಕ್ಷಗಳು ಕ್ಯಾಂಗ್ರೆಸ್ಸಿನಲ್ಲಿ ಶಿಸ್ತು–ಒಕ್ಕಟ್ಟುಗಳನ್ನು ಕಾಯ್ದುಕೊಳ್ಳಬೇಕೆಂದು ಹವಣಿಸುತ್ತಿವೆ. ಇಷ್ಟೇ ಅಲ್ಲದೆ, ಪುರೋಗಾಮಿ ಪಕ್ಷದ ಧ್ಯೇಯವಾದರೂ ಎ.ಆಯ್.ಸಿ.ಸಿ.ಯ ಧ್ಯೇಯವನ್ನೆ ಅನುಸರಿಸುತ್ತದೆಂದು ಸಾರಿಹೇಳಿದೆ. ಅದರಂತೆಯೆ ಇದರ ಅಂತಿಮ ಧ್ಯೇಯವಾದರೂ "ನ್ಯಾಯವಾದ ಹಾಗೂ ಅಹಿಂಸಾತ್ಮಕವಾದ ಸಾಧನಗಳಿಂದ ಸಂಪೂರ್ಣ ಸ್ವರಾಜ್ಯ ದೊರಕಿಸುವುದಾಗಿದೆ."

ಆದರೆ ಈ ಪಕ್ಷದವರ ಸಾಧನಮಾರ್ಗವು ಅತ್ಯಂತ ಆವೇಶಪೂರ್ಣ ಕ್ರಾಂತಿಕಾರಕವಾಗಿರುವುದೆಂಬುದನ್ನು ಮರೆ-ಯಲಾಗದು. ಹಾಗೂ ಇಂತಹ ಸಾಧನವಿರವ ಹೊರತು ಸ್ವರಾಜ್ಯವು ಸಾಧ್ಯವಿಲ್ಲವೆನ್ನುವ ಮಟ್ಟಿಗೆ ಎಂ.ಎನ್.ರಾಯ ಅವರು ಭಾಷಣ ಮಾಡಿದ್ದಾರೆ. ಸರ್ದಾರ ಶಾರ್ದೂಲಸಿಂಗ-ರಂತೂ ಗಾಂಧಿಯವರ ಸತ್ಯಾಗ್ರಹ ಸೂತ್ರವನ್ನು ಅತ್ಯಂತ ಜಿಗುಪ್ಸಾತ್ಮಕವಾಗಿ ಟೀಕಿಸಿದ್ದಾರೆ.

ಪರಿಷತ್ತಿನಲ್ಲಿ ನಡೆದುಹೋದ ಈ ಬಗೆಯ ಭಾಷಣಗಳನ್ನೂ ಅವುಗಳ ಆಶಯವನ್ನೂ ಸೂಕ್ಷ್ಮದೃಷ್ಟಿಯಿಂದ ನೋಡಿದರೆ ಹಿಂದುಸ್ಥಾನದ ಸ್ವಾತಂತ್ರ್ಯದ ಅಂತಿಮ ಧ್ಯೇಯಕ್ಕಿಂತ ಒಂದುಪಕ್ಷವು ಮತ್ತೊಂದು ಪಕ್ಷವನ್ನು ಹೇಗೆ ಬಗ್ಗುಬಡಿಯ-ಬೇಕು ಎಂಬ ಧ್ಯೇಯವೆ ರೂಢವಾಗಿದ್ದಂತೆ ಒಮ್ಮೊಮ್ಮೆ ಭಾಸವಾಗುತ್ತದೆ.

ಒಟ್ಟಾರೆ ಎರಡೂ ಪಕ್ಷಗಳು ಹಿಂದುಸ್ಥಾನದ ಸ್ವರಾಜ್ಯ-ಸಾಧನೆಗಾಗಿಯೆ ಹೆಣಗಾಡುವಂತಹ ಶಸ್ತ್ರಗಳು. ಶಸ್ತ್ರಗಳು ಆಕಾರಮಾನದಲ್ಲಿ ತುಸು ಹೆಚ್ಚುಕಡಿಮೆ ಕಂಡರೂ ಅವು ಮಾಡತಕ್ಕ ಕಾರ್ಯ ಒಂದೇ ಆಗಿದೆ.

ಆಶ್ರಿತರಾಜರ ಪರಿಷತ್ತೂ ಸಂಯುಕ್ತ ಘಟನೆಯ ಪರಿಸ್ಥಿತಿಯೂ

ಮುಂಬಯಿಯಲ್ಲಿ ಜರುಗಿದ ಆಶ್ರಿತರಾಜರ ಪರಿಷತ್ತಿನ-ಲ್ಲಿಯೂ ಸಂಯುಕ್ತ ಘಟನೆಯ ನಿರಾಕರಣೆಯೇ ಘೋಷಿಸ-ಲ್ಪಟ್ಟಿತು. ಅಂತೂ ಹಿಂದುಸ್ಥಾನದ ಕಾಂಗ್ರೆಸ್ಸು, ಮುಸ್ಲಿಂ ಲೀಗ, ನರೇಂದ್ರರು ಎಲ್ಲರೂ ಈ ಘಟನೆಯನ್ನು ನಿರಾಕರಿಸಿದ ಮೇಲೆ ಇದರ ಬಗ್ಗೆ ಬ್ರಿಟಿಶರು ಯಾವ ಬಗೆಯ ಧೋರಣೆ-ಯನ್ನು ತಾಳುವರೊ ನೋಡಬೇಕು.

ಸರ್ವರಿಂದ ಇದು ನಿರಾಕರಿಸಲ್ಪಟ್ಟ ಮೇಲೆ, "ಭಾರತೀ-ಯರ ಆಶೆಆಕಾಂಕ್ಷೆಗಳು ಪೂರೈಸಲ್ಪಡುವಂತೆ ಆಂತರಿಕ ಹಾಗೂ ಬಾಹ್ಯ ಸಂಪೂರ್ಣ ಅಧಿಕಾರವುಳ್ಳ ಯೋಗ್ಯ ಸಂಯುಕ್ತ ಘಟನೆಯನ್ನು ರಚಿಸುವ ಪರಿಸ್ಥಿತಿ ಉದ್ಭವಿಸಿದೆ." ಎಂದು ಸತ್ಯಮೂರ್ತಿಯವರು ಸಾರಿದ್ದಾರೆ. ಭಾರತೀಯರಿಗೆ ಬೇಜವಾಬದಾರಿಯ ಕೇಂದ್ರ ಸರಕಾರವು ನಡೆಯಲಾರದೆಂಬ ಅರಿವಾದರೂ ಬ್ರಿಟಿಶರಿಗೆ ಆಗಿರಲು ಸಾಕು. ಸಂಯುಕ್ತ ಘಟನೆಯು ಸತ್ತುಹೋಯಿತು. ಅಳುವವರೇ ಇಲ್ಲವೆಂದು ಸತ್ಯಮೂರ್ತಿಯವರು ಟೀಕಿಸಿದ್ದಾರೆ.

ಮದ್ಯಪಾನ ನಿರೋಧ

ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ದೊರೆಯದಿದ್ದರೂ ಅಡ್ಡಿ-ಯಿಲ್ಲ. ಆದರೆ ಮದ್ಯಪಾನದಿಂದ ಮುಕ್ತರಾಗಬೇಕೆಂದು ಆಚಾರ್ಯ ಕೃಪಲಾನಿಯವರು ಸಾರಿದ್ದಾರೆ. ಈ ಧ್ಯೇಯ-ವನ್ನು ಸಾಧಿಸಬೇಕಾದರೆ ಜನತೆಯ ಮನಸ್ಸಿನ ಮೇಲೆ ಸರಿ-ಯಾಗಿ ಬಿಂಬಿಸುವಂತೆ ಯತ್ನಮಾಡಬೇಕು. ಈಗಿನ ಮಟ್ಟಿಗೆ

ಆದೆಲ್ಲವೂ ಆಗಿದೆ. ಆ ಬಗ್ಗೆ ಕೆಲವು ಸಂಕುಚಿತ ಸ್ವಾರ್ಥ ಧ್ವನಿಗಳು ವಿರುದ್ಧವಾಗಿ ಕೂಗಿದರೂ ಅದಕ್ಕೆ ಬೆಲೆಯಿಲ್ಲ. ಏಕೆಂದರೆ ಅದರಿಂದ ಭಾರತಕ್ಕಾಗುವ ಹಾನಿ ಅಪಾರವಾಗಿದೆ. ಈ ಮದ್ಯಪಾನ ನಿರೋಧದ ಕೆಲಸ ಉಳಿದಿರುವುದೆಂದರೆ ಸರಕಾರದ ಕೈಯಲ್ಲಿ. ಮದ್ಯದಿಂದ ಸರಕಾರಕ್ಕೆ ಉತ್ಪನ್ನ ಹೆಚ್ಚಾಗಿರಬಹುದು. ಆದರೆ ಅಷ್ಟೇ ಹೆಚ್ಚಾಗಿ, ಏಕೆ ಇನ್ನೂ ಹೆಚ್ಚಾಗಿ ಅದರಿಂದ ಜನತೆಗೆ ಹಾನಿಯಿದೆ ಎಂಬುದನ್ನು ಗಮನಿಸಿ ಅದನ್ನು ನಿರೋಧಿಸುವ ಕಾರ್ಯವನ್ನು ಸರಕಾರವು ಸ್ವೀಕರಿಸಿಯೆ ಇದೆ. ಈಗಾಗಲೆ ಇದರಿಂದಾಗಬಹುದಾದ ನೈತಿಕ, ಸಾಮಾಜಿಕ, ಧಾರ್ಮಿಕ, ಆರ್ಥಿಕ ಹಿತಕಾರ್ಯಗಳ ರೇಷೆಗಳು ಹಳ್ಳಿಹಳ್ಳಿಯಲ್ಲಿ ಕಂಡುಬರುತ್ತವೆ.

ಹಿಟ್ಲರನಿಗೆ ಹ್ಯಾಲಿಫಾಕ್ಸರ ಯಾಚನೆ

ಕಳೆದ ವಾರದ ಭಾಷಣದಲ್ಲಿ ಬ್ರಿಟಿಶ್ ವಿದೇಶ ಮಂತ್ರಿಗಳಾದ ಹ್ಯಾಲಿಫಾಕ್ಸರು ಯುರೋಪಿನ ಪ್ರಶ್ನೆಗಳು ಪರಸ್ಪರ ವ್ಯವಹಾರದಿಂದ ಬಗೆಹರಿಸಲ್ಪಡಬೇಕೆಂದು ಹಿಟ್ಲರನಿಗೆ ಪ್ರೇಮಸಂಧಾನವನ್ನು ಸೂಚಿಸಿದ್ದಾರೆ. ಹಿಟ್ಲರನು ಜಾತ್ಯಾ ಹೇಗಿರುವನೆಂಬುದು ಗೊತ್ತಿಲ್ಲವೆ? ಬ್ರಿಟಿಶ್ ಧೋರಣೆ ಮಾತ್ರ ಹ್ಯಾಲಿಫಾಕ್ಸರ ಮಟ್ಟಿಗಾದರೂ ಒಪ್ಪಂದದ ಕಡೆಗೆ ಒಲಿದಿರುತ್ತದೆಂದು ತಿಳಿಯುತ್ತದೆ. ಆದರೆ ಇನ್ನೂ ರಶಿಯದೊಡನೆ ಒಪ್ಪಂದವು ಅಸ್ಪಷ್ಟವಾಗಿಯೆ ಇರುವುದರಿಂದ ಇನ್ನೂ ಏನೂ ಹೇಳಲಾಗುವುದಿಲ್ಲ. ಹ್ಯಾಲಿಫಾಕ್ಸರಿಗೆ ಗೊಂದಲವು ಬೇಡವಾದರೆ ಮಿ. ಚೇಂಬರಲೀನರು "ಸೋ" ಎಂದು ಧ್ವನಿಗೂಡಿಸುವವರೇ.

ರಾಷ್ಟ್ರೀಯ ಕನ್ನಡ ಶಿಕ್ಷಣ

ಶ್ರೀ. ಆಲೂರ ವೆಂಕಟರಾಯರು

"ಮುಂಬಯಿಯಂಥ ಕೇಂದ್ರ ಪಟ್ಟಣದಲ್ಲಿ, ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯಂಥ ಸಂಸ್ಥೆ ಹೊರಟಿದ್ದು ಕರ್ನಾಟಕದ ಭಾಗ್ಯೋದಯವೆಂದೇ ಭಾವಿಸುತ್ತೇನೆ. ಏಕೆಂದರೆ, ಮುಂಬಯಿಯಲ್ಲಿ ವಾಸಿಸುವ ೫೦ ಸಾವಿರ ಕನ್ನಡಿಗರಲ್ಲಿ ಕರ್ನಾಟಕತ್ವದ ಜಾಗ್ರತಿಯಾಗುವದು ಅನೇಕ ದೃಷ್ಟಿಯಿಂದ ಅವಶ್ಯವಾಗಿದೆ. ಕರ್ನಾಟಕದ ಸಾಂಸ್ಕೃತಿಕ ಮತ್ತು ರಾಜಕೀಯ ಏಕೀಕರಣದಲ್ಲಿ ಮುಂಬಯಿಗೆ ಮಹತ್ತರ ಸ್ಥಾನವಿದೆ. ೧. ಮುಂಬಯಿಯಲ್ಲಿ ಕರ್ನಾಟಕದ ಎಲ್ಲ ಭಾಗಗಳ ಜನರು ವಾಸಿಸಿದ್ದಾರೆ. ಇವರೆಲ್ಲರೂ ತಮಗೆ ಮೈಸೂರಿನವರು, ಕ್ಯಾನರಾಯಿಟ್ಸ, ಮೊಗವೀರರು, ಕೊಡಗರು ಎಂದು ಮುಂತಾಗಿ ಮಾತ್ರವೇ ಹೇಳಿಕೊಳ್ಳದೆ ಎಲ್ಲರೂ ತಾವು ಕರ್ನಾಟಕ ಎಂಬ ಅಭಿಮಾನವನ್ನು ತಾಳುವುದು ಕರ್ನಾಟಕದ ಜಾಗ್ರತಿಯ ಪ್ರಥಮ ಲಕ್ಷಣವು. ೨. ಮುಂಬಯಿಗೆ ಹೋಗುವ ಕನ್ನಡಿಗರು ಸಾಮಾನ್ಯತ. ವಿಶೇಷ ಬುದ್ಧಿವಂತರೂ ಸಾಹಸಿಗರೂ ಮಹತ್ವಾಕಾಂಕ್ಷಿಗಳೂ ಆಗಿರುವದರಿಂದ, ಅವರಲ್ಲಿ ಜಾಗ್ರತಿಯುಂಟಾದರೆ, ಕರ್ನಾಟಕದ ಅಭ್ಯುದಯಕ್ಕೆ ಸಹಾಯವಾಗುವದು. ೩. ಈಗ ಕರ್ನಾಟಕದ ಆರ್ಥಿಕ ಸೂತ್ರಗಳೆಲ್ಲವೂ ಪರಪ್ರಾಂತೀಯರ ಕೈಯಲ್ಲಿವೆ. ಆದದರಿಂದ, ಕರ್ನಾಟಕದ ಸಂಪತ್ತು ಪರಪ್ರಾಂತಕ್ಕೆ ಹರಿದುಹೋಗಹತ್ತಿದೆ. ಅದನ್ನು ತಡೆಯುವುದೂ ಅವಶ್ಯವಿದೆ. ಮುಂಬಯಿ ಕನ್ನಡಿಗರಲ್ಲಿ ಸ್ವಾಭಿಮಾನವು ಉಂಟಾದರೆ, ರಾಜಕಾರಣದಲ್ಲಿ ಕನ್ನಡಿಗರ ವರ್ಚಸ್ಸು ಬೆಳೆದು ಅದರಿಂದ, ಕರ್ನಾಟಕದ ರಾಜಕೀಯ ಏಕೀಕರಣವು ತೀವ್ರ ಸಾಧ್ಯವಾಗುವುದಕ್ಕೆ ಅನುಕೂಲವಾಗುವುದು. ೫. ವಿಶ್ವವಿದ್ಯಾಲಯವೇ ಮುಂತಾದ ಮಹತ್ವದ ಸಂಸ್ಥೆಗಳಲ್ಲಿ ಮುಂಬಯಿ ಕನ್ನಡಿಗರಿಂದ ಹೆಚ್ಚಿಗೆ ಕರ್ನಾಟಕದ ಸೇವೆಯಾಗುವ ಸಂಭವವಿದೆ. ೬. ಅಲ್ಪ ಸಂಖ್ಯಾಕರೆಂಬ ದೃಷ್ಟಿಯಿಂದಲೂ ಮುಂಬಯಿಯಲ್ಲಿ ಈ ತರಹದ ಸ್ವಸಂರಕ್ಷಕ ಸಂಸ್ಥೆಗಳು ಹೊರಡುವುದೂ ಅವಶ್ಯವಿದೆ. ಏಕೆಂದರೆ, ಕರ್ನಾಟಕದ ಅನೇಕ ರಾಜಕೀಯ ಮುಖಂಡರು ಕರ್ನಾಟಕದಲ್ಲಿಯ ಅಲ್ಪ ಸಂಖ್ಯಾಕರಾದ ಮರಾಟಿಗರೇ ಮುಂತಾದವರ ಹಕ್ಕುಗಳ ವಕೀಲಿಯನ್ನು ತಾನಾಗಿಯೇ ಹಿಡಿದು, ಬುದ್ಧಿಭೇದವನ್ನು ಹುಟ್ಟಿಸುವದರಲ್ಲಿಯೇ ಮಗ್ನರಾಗಿದ್ದಾರಲ್ಲದೆ, ಅಲ್ಪ ಸಂಖ್ಯಾಕರಾದ ತಮ್ಮ ಭಾಷಾಬಾಂಧವರು ಮುಂಬಯಿಯಂಥ ಪಟ್ಟಣಗಳಲ್ಲಿಯೂ ಗಡಿನಾಡುಗಳಲ್ಲಿಯೂ ಅನುಭವಿಸುತ್ತಿರುವ ದುಃಖಗಳನ್ನು ನಿವಾರಿಸುವುದಕ್ಕೆ ಕಿರಿಬೆರಳನ್ನು ಕೂಡ ಎತ್ತಿರುವುದಿಲ್ಲ. ೭. ಮುಂಬಯಿ ಕನ್ನಡಿಗರಿಗೆ ಮಿಕ್ಕ ಪ್ರಾಂತದವರೊಡನೆ ಸಂಬಂಧವು ವಿಶೇಷವಾಗಿ ಬರುತ್ತಿರುವುದರಿಂದ ಕರ್ನಾಟಕತ್ವಕ್ಕೂ ರಾಷ್ಟ್ರೀಯತ್ವಕ್ಕೂ ತಿಲಪ್ರಾಯವೂ ವಿರೋಧವಿಲ್ಲವೆಂಬುದನ್ನು ತಮ್ಮ ರಾಷ್ಟ್ರೀಯ ವೃತ್ತಿಯಿಂದ ಮನಗಾಣಿಸಿಕೊಡುವ್ರದಕ್ಕೆ ಅವರಿಗೆ ಹೆಚ್ಚಿಗೆ ಆಸ್ಪದವಿದೆ. ಹೀಗೆ ನಾನಾದೃಷ್ಟಿಯಿಂದ ಇಂಥ ಸಂಸ್ಥೆಗಳಿಗೆ ಮಹತ್ವವಿದೆ.

ಇದೇ ಹೊರಟಿದೆ— **ದೇವದಾಸ!** ಬಿಸಿಬಿಸಿ ರಸದೂಟ!

ಪ್ರಖ್ಯಾತ ವಂಗದೇಶದ ಕಾದಂಬರಿಕಾರರಾದ ಶರಚ್ಚಂದ್ರ ಚಟರ್ಜಿಯವರು ರಚಿಸಿದ
ಹಾಗೂ ನ್ಯೂ ಥಿಯೇಟರ್ಸಿನವರು ಚಿತ್ರಿಸಿದ ಪ್ರಖ್ಯಾತ ಕಾದಂಬರಿ!

ಇಂದು ಕನ್ನಡದಲ್ಲಿ ಶ್ರೀ. ಗುರುನಾಥ ಜೋಶಿ ಅವರಿಂದ ಅನುವಾದಿಸಲ್ಪಟ್ಟಿದೆ.

ಇಂದೇ ಆರ್ಡರ ಕೊಡಿರಿ!

ಕನ್ನಡ ಸಾಹಿತ್ಯದ ಯಾವ ಪುಸ್ತಕ ಬೇಕಾದರೂ ನಮ್ಮಲ್ಲಿ ಸಿಗುತ್ತದೆ. ನಮ್ಮ ಹೊಸ ಕ್ಯಾಟಲಾಗಿಗೆ ಬರೆಯಿರಿ.

ಬೆಲೆ:— ಸಾದಾ ಪ್ರತಿ ೧-೦-೦. ಕ್ಯಾಲಿಕೊ ಪ್ರತಿ ೧-೮-೦

ಪ್ರಕಾಶಕರು:— **ಸಾಹಿತ್ಯ ಭಾಂಡಾರ**

ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು, **ಹುಬ್ಬಳ್ಳಿ**

ಔಷಧ ಗನೋರಿಯಾ ಪರಮಾರೋಗ (ಉಷ್ಣರೋಗ) ದ ಮೇಲೆ **ಔಷಧ**

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟಿ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಕಲಿ ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ಚೆಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ ಉಡುಚು ಆಗಿದ್ದರೆ, ಮೂಲವಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲೆ, ಅರ್ಧಾಂಗ ವಾಯು, ನಡನೋಯುವದು, ಸ್ತ್ರೀಯರ ಬಿಳಿ-ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು, ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ. ಸರಿಯಾಗಿ ಭೇದಿಯಾಗಗಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲ ಬೇನೆಗಳಿಗೆ ನಮ್ಮ ಈ ಔಷಧವು ಗುಣಕಾರಿ ಆಗಿದೆ. ಮೊದಲನೆಯ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧವನ್ನು ಅರ್ಧ ತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. **ಮೊದಲ** ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ-ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. **ಪತ್ಯೆ**— ಹಸೀಖಾರ, ಕುಂಬಳಕಾಯಿ, ಒಳೈಣ್ಣಿ ಬಿಡಬೇಕು. **ಬಾಟ್ಲಿ ೧ಕ್ಕೆ ೫ ರೂ. ಪೋಸ್ಟೇಜ ೮ ಆ.**

ಮಕ್ಕಳನ್ನು ಹಡೆಯುವದು ಸಾಕು! (ಬರ್ಥ ಕಂಟ್ರೋಲ)

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂಪೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿ ತಿಂಗಳ ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರಿಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ:— ಪ್ರತಿ ದಿವಸ ಮುಂಜಾನೆ ೧ ಮಧ್ಯಾನ್ಹ ೧ ಸಂಜಿಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು. **ಪತ್ಯೆ**— ಹರವೀಪಲ್ಲೆ ಬಿಡಬೇಕು. ೭ ದಿವಸ ಪೂರ್ಣ ಔಷಧದ ಕಿಮ್ಮತ್ತು ರೂ. ೪-೮-೦. **ಪೋಸ್ಟೇಜ ೮ ಆ.**

ವಿಳಾಸ:- **ಹಾಲಪ್ಪಾ ಡಾವಣಗೇರಿ,** ಆಯುರ್ವೇದ ಔಷಧಗಳ ದವಾಖಾನೆ, **ಗದಗ.**

ಏಜೆಂಟರು— ಗದಗ ಫಾರ್ಮಸಿ, ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ ಫಾರ್ಮಸಿ.

ಮಗುವು ಯೌವನಾವಸ್ಥೆಗೇರುವದು--
ವೃದ್ಧರು ಜೀರ್ಣಾವಸ್ಥೆಗೆ ಮುಟ್ಟುವರು.
ಹಾರುವ ಹೊತ್ತನ್ನು ಹಿಡಿಯುವವರಾರು ?

★

- ಉತ್ಕೃಷ್ಟ ಕಲಾಕೌಶಲ್ಯ
- ತೈಲಚಿತ್ರ, ಭಾವಚಿತ್ರ ಮುಂತಾದ
  ಹಸ್ತಕೃತಿಗಳಲ್ಲಿ ನೈಪುಣ್ಯ
- ಮಗುವಿನ ನಗುಮೊಗದ ಸೊಬಗನ್ನು
  ಸವಿಯಬೇಕಾಗಿದ್ದರೆ— ಒಂದೇ ಒಂದು ಸ್ಥಳ !

ಅದಾವುದೆಂದರೆ

ದಿ ನ್ಯಾಶನಲ್ ಫೋಟೊ
ಆರ್ಟ ಸ್ಟುಡಿಯೋ

ರಾಧಾಕೃಷ್ಣ ಗಲ್ಲಿ ಹುಬ್ಬಳ್ಳಿ ಸ್ಟೇಶನ್ ರೋಡ ಗದಗ

ಸುಲಭ ಬೆಲೆಯಲ್ಲಿ ತೃಪ್ತಿಕರ ಕೆಲಸ
ಇದೇ ನಮ್ಮ ಉತ್ಕರ್ಷೆಯ ಗುಟ್ಟು !

★ ಬುದ್ಧಿಬಲ ಬಳಗ ★

ಮುಂಜಾವಿನ ಬಿಸಿ ದೋಸೆಗಳಿಗಾಗಿ ಕಿರುಚಿಟ್ಟು ಕಚ್ಚಾಡುವ ಗ್ರಾಹಕರಂತೆ ವಸಂತದ ವಾಚಕರ ಸಂಖ್ಯೆಯು ಪ್ರತಿ ತಿಂಗಳೂ ಬೆಳೆಯುತ್ತಲಿದೆ. ಅದರ ಸವಿಯು ಎಲ್ಲರನ್ನೂ ಮರುಳು ಮಾಡಿದೆ, ಉತ್ಸಾಹವನ್ನು ಉಕ್ಕಿಸುತ್ತಲಿದೆ. ಅಷ್ಟೇ ಉತ್ಸಾಹವನ್ನು ಹುಟ್ಟಿಸಿ ಬುದ್ಧಿಯನ್ನು ಬಲಿಸಿ ಬಲಿತ ಬುದ್ಧಿಯನ್ನು ಪ್ರದರ್ಶಿಸಲು ಅವಕಾಶವನ್ನು ನೀಡುತ್ತಿರುವ ನಮ್ಮ ಬುದ್ಧಿಬಲ ಸ್ಪರ್ಧೆಯಾದರೂ ಅದೆಷ್ಟೋ ಜನರ ಮೆಚ್ಚುಗೆಗೆ ಪಾತ್ರವಾಗಿದೆ. ಇದೆಲ್ಲವೂ ನಮಗೆ ಸಂತೋಷದ ಮಾತಾಗಿದೆ. ಆದರೆ ನಿಮಗೂ ಇಂಥದೊಂದು ಸಂದೇಶವನ್ನು ತಿಳಿಸಬೇಕಾಗಿಯೇ ಇಷ್ಟೆಲ್ಲ ಹರಟಿದ್ದು. ಅದಾವುದು ?

ಬುದ್ಧಿಬಲ ಬಳಗ

— ಈ ಬಳಗದ ಸದಸ್ಯರಾದವರಿಗೆ —

ಈ ಕೆಳಗಿನ ಸೌಲಭ್ಯಗಳು.

(೧) ಪ್ರತಿ ತಿಂಗಳೂ ವಸಂತದ ಸಂಚಿಕೆಯೊಂದನ್ನು ಅಂಚೆವೆಚ್ಚ ಸಹ ಇಲ್ಲದೆ ಉಚಿತವಾಗಿ ನಿಮ್ಮ ವಿಳಾಸಕ್ಕೆ ರವಾನಿಸಲ್ಪಡುವದು.

(೨) ಎಷ್ಟೂ ಪ್ರವೇಶಧನವಿಲ್ಲದೆ ಪ್ರತಿ ಸಲವೂ ನಮ್ಮ ಬುದ್ಧಿಬಲ ಸ್ಪರ್ಧೆಯಲ್ಲಿ ಭಾಗವಹಿಸಿ ರೋಖ ಬಹುಮಾನವನ್ನು ಪಡೆಯಬಹುದು.

(೩) ಸದಸ್ಯರಾದವರ ಹೆಸರನ್ನು ಆ ತಿಂಗಳಪ ವಸಂತ ಸಂಚಿಕೆಯಲ್ಲಿ ಸದಸ್ಯತ್ವದ ನಂಬರ ಸಹಿತವಾಗಿ ಪ್ರಕಟಿಸುವದು.

(೪) ನಿಮ್ಮ ಭಾವಚಿತ್ರದ ಜೊತೆಯಲ್ಲಿ ಒಂದುರೂಪಾಯಿ ಮಾತ್ರ ಕಳಿಸಿದಲ್ಲಿ ಅದನ್ನಾದರೂ ಪ್ರಸಿದ್ಧಿಸಲಾಗುವದು.

(೫) ಇದೇ ವರುಷದ ಕೊನೆಯಲ್ಲಿ ಹೊರಡಲಿರುವ ನಮ್ಮ ವಸಂತದ ವಿಶೇಷ ಸಂಚಿಕೆಯನ್ನು ಉಚಿತವಾಗಿ ಕಳುಹಿಸುವೆವು.

(೬) ೧೯೪೦ನೇ ಇಸ್ವಿಯ ವಸಂತದ ಅಂದವಾದ ಕ್ಯಾಲೆಂಡರೊಂದನ್ನು ಸಲ್ಲಿಸುವೆವು.

— ನಿಯಮಗಳು —

(೧) ಮೇಲ್ಕಂಡ ಎಲ್ಲ ಸೌಲಭ್ಯಗಳನ್ನು ಪಡೆಯಲಿಚ್ಛಿಸುವವರು ತಮ್ಮ ಸದಸ್ಯತ್ವದ ಮೊದಲನೇ ವರ್ಷದ ವರ್ಗಣಿಬಗ್ಗೆ ರೂ. ೧-೮-೦ ಮಾತ್ರ ಕಳಿಸಬೇಕು.

(೨) ಸ್ಪರ್ಧೆಯಲ್ಲಿ ಭಾಗವಹಿಸಿ ಉತ್ತರ ಕಳಿಸುವವರು ತಮ್ಮ ಸದಸ್ಯತ್ವದ ನಂಬರನ್ನು ಅದರಲ್ಲಿ ಕಾಣಿಸಬೇಕು.

(೩) ರೂ. ೧-೮-೦ ಕಳಿಸಿ ಈ ಬಳಗದ ಸದಸ್ಯರಾದವರ ಹೊರ್ತಾಗಿ ಉಳಿದವರು ಸ್ಪರ್ಧೆಯಲ್ಲಿ ಭಾಗವಹಿಸಲು ಬರಲಾರದು.

(೪) ಮೇಲ್ಕಂಡ ಧನವನ್ನು ಕೆಳಗಿನ ವಿಳಾಸಕ್ಕೆ ಆಯಾ ತಿಂಗಳಿನ ೨೦ನೇ ತಾರೀಖಿನ ಒಳಗಾಗಿ ಮನಿಯಾರ್ಡರ ಅಥವಾ ಪೋಸ್ಟಲ್ ಆರ್ಡರ ಮುಖಾಂತರ ಕಳಿಸತಕ್ಕದ್ದು.

ಬು ದ್ಧಿ ಬ ಲ ಬ ಳ ಗ
ವಸಂತ ಆಫೀಸ, ಗದಗ.

ಬುದ್ಧಿಬಲ ಬಳಗದ ಸದಸ್ಯತ್ವದ ಅರ್ಜಿ ನಮೂನೆ

ಇದನ್ನೇ ಕತ್ತರಿಸಿ ತುಂಬಿ ಕಳಿಸಿರಿ

ಬುದ್ಧಿಬಲ ಬಳಗ– ವಸಂತ ಆಫೀಸ, ಗದಗ

ಮಹಾಶಯರೆ, ನಿಮ್ಮ ಬಳಗದ ಸದಸ್ಯನಾಗಲು ಇಚ್ಛಿಸುತ್ತೇನೆ. ಮೊದಲನೇ ವರುಷದ ವರ್ಗಣಿಬಗ್ಗೆ ರೂ. ೧-೮-೦ ಈದಿನ $\frac{\text{ಮನಿಯಾರ್ಡರ}}{\text{ಪೋ. ಆರ್ಡರ}}$ ಮೂಲಕ ಕಳಿಸಿದ್ದೇನೆ. ಕಾರಣ ಎಲ್ಲ ಸೌಲಭ್ಯಗಳನ್ನು ನನಗೆ ಒದಗಿಸಿ ಕೊಟ್ಟು, ನನ್ನ ಹೆಸರನ್ನು ಸದಸ್ಯತ್ವದ ನಂಬರ ಸಹಿತ ವಸಂತದಲ್ಲಿ ಪ್ರಕಟಿಸಬೇಕು.

ತಾ.

ಹೆಸರು

ವಿಳಾಸ

॥साहसे श्रीः प्रतिवसति॥

DHANANJAYA

A Monthly, Published by
the Akhil Karnatak Swadeshi Sabha, DHARWAR.
December 1934.

ಮರಣೋನ್ಮುಖವಾದ ಗ್ರಾಮಗಳ ಪುನರುಜ್ಜೀವನವಾಗಬೇಕು.

ನನಗ ಕೃತಕವಾದ ರಾಜಕೀಯ ಹೊಂದಿಕೆಗಳಲ್ಲಿ ಜನಂದವಿಲ್ಲ ಘಟನಾಯಂತ್ರದಲ್ಲಿ ಮಾಡುವ ಅದಲು ಬದಲುಗಳಿಂದಲೆ ಸ್ವರಾಜ್ಯ ಸಿದ್ಧಿಯಾಗಬಹುದೆಂದು ನನಗೆ ನಂಬಿಕೆಯಿಲ್ಲ.

ದೇಶದೆದುರು ಇಂದಿರುವ ಮಹತ್ವಪೂರ್ಣವಾದ ಸಮಿಸ್ಯೆಯೆಂದರೆ ಬೇರೆ ಬೇರೆ ಪ್ರಾಂತಗಳನ್ನೂ ಜಾತಿಗಳನ್ನೂ ಏಕೀಕರಿಸಿ ಅವುಗಳಲ್ಲಿ ಬಾಂಧವ್ಯ ಸಹಾನುಭೂತಿಗಳನ್ನು ಬೆಳೆಸುವದು. ಭಾರತದ ಜೀವ ಜೀವಾಳವಿರುವದು ಗ್ರಾಮಗಳಲ್ಲಿ. ಮರಣೋನ್ಮುಖವಾದ ಹಳ್ಳಿಗಳಲ್ಲಿ ಮರಳಿ ಜೀವ ಕಳೆಯನ್ನುಂಟು ಮಾಡುವ್ದು ಅತ್ಯಗತ್ಯ

ಭಾರತೀಯ ನ್ಯಾಗರಿಕತೆಯ ಜೀವಸ್ವರವಿರುವದು ಹಳ್ಳಿಗಳಲ್ಲಿ. ಅದುವರೆಗೂ ನಂದುತ್ತಿರುವ ಅಲ್ಲಿಯ ಜೀವನ ಜ್ಯೋತಿಯನ್ನು ಪುನಃಪ್ರಜ್ವಲಿಸುವದೇ ನಮ್ಮ ರಾಷ್ಟ್ರೀಯ ಧ್ಯೇಯ ದರ್ಶನದ ಸುಲಭವಾರ್ಗ.

ಕವಿ ರವೀಂದ್ರನಾಥ ಟಾಗೋರ.

R[illegible] No. M. 3262 June 1935
[illegible] ಪಂಡಾ ೧ ರೂ. ಬಿಡಿ ಸಂಚಿಕೆ ೧ ಆಣೆ.

ಗೃಹಲಕ್ಷ್ಮಿ

ವಿಷಯ ಸೂಚಿಕೆ

ಪ್ರಾರ್ಥನಾ ಕುಸುಮಗಳು
ಶಾಸ್ತ್ರದಲ್ಲಿ ಅಸ್ಪೃಶ್ಯತೆ ಇದೆಯೇ ?
ಕಸವನ್ನು ರಸವಾಗಿ ಮಾಡುವುದು
ಹೆಣ್ಣಿಗರ ವಿಷಯದಲ್ಲಿ ನಮ್ಮ ಕರ್ತವ್ಯವೇನು ?
ಸಮಾಜಸೇವೆ
ಗಣ್ಯಪ್ರಜೆ
ಗ್ರಾಮ ಕೈಗಾರಿಗೆ
ನರಸ
ಸ್ತ್ರೀಯರ್ಜನೆಯ ಮಹತ್ವ
ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ
ಮಾದರಿ ಮಾನವ
ಟಿಪ್ಪಣಿ
ಸಂಪಾದಕೀಯ

ಶಾಲ್ಮಲಿ ಕಾರ್ಯಾಲಯದಿಂದ ಪ್ರಕಟಿತ ಪತ್ರಿಕೆಯೊಂದಿಗೆ ಉ

ಕರ್ನಾಟಕ ವೃತ್ತಪತ್ರಿಕಾ ಪ್ರ
6—1—1962.

ಪತ್ರಿಕೆ ನೆಸರು
ಅಂಚೆ ದಿನಾಂಕ
ಪ್ರಕಟಣಾ ಸ್ಥ
ಸಂಪಾದಕರ ಹೆಸರು
ಮುದ್ರಕರ ಹೆಸರು
ಹೆಸರಿನ ಕ್ರಮ

ಸಂಪುಟ ೧
ಸಂಚಿಕೆ ೧೦



KANNADA SAVINGS CERTIFICATES

Cashed even before maturity

available in denominations Rs. 10 and above

TOTAL YIELD Rs. 4—6—0% P. A.

at 3½% p. a.
on maturity

FROM:—

Limited

licut, Cochin, Ernakulam,
galur, Mangalore-Bunder,
Buntwal, Karkala,
Mangoli.

Deposits	Working Capital
58,62,000	73,49,000

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು .....

ಆರಂಭ ದಿನಾಂಕ .....

ಪ್ರಕಟನಾ ಸ್ಥಳ .....

ಸಂಪಾದಕರ ಹೆಸರು .....

ಮಾಲಿಕರ ಹೆಸರು .....

ಸೌಜನ್ಯ ಕ್ಕಾಗಿ

AUGUST 1935 ಸಂಪುಟ ೨ ವಾರ್ಷಿಕ ಚಂದಾ ರೂ. 1—8—0
ಸಂಚಿಕೆ ೧೦ ಮಾಸಂಚಿಕೆ ೦—2—0

SWADESHI PRACHARAK, MANGALORE.

L-2-K-35

R.N.M. 2227.

ವಿದ್ಯಾದಾಯಿನಿ

ಸಂಪುಟ ೯] ಜುಲೈ ೧೯೩೫ [ಸಂಚಿಕೆ ೧೧

ವಿಷಯಸೂಚಿಕೆ.

ಪುಟ

I. ಪಾಠದಕ್ರಮ ೩೧೭-೩೨೮

II. ಚಿಕ್ಕವರ ಪ್ರಾಬಲ್ಯ ಅಥವಾ ಮೂರ್ಸಿ ಚಿಕ್ಕದಾದರೂ ಕೀರ್ತಿ ದೊಡ್ಡದು ೩೨೯-೩೩೯

III. ನಮ್ಮ ವಿದ್ಯಾಭ್ಯಾಸವೂ ಉಪಾಧ್ಯಾಯ ಸಂಘಗಳೂ ೩೩೯-೩೪೫

IV. ಶಿವಮೊಗ್ಗ ಡಿಸ್ಟ್ರಿಕ್ಟ್ ಎಜುಕೇಷ್ ವೀಕ್ ಕಮಿಟಿ ವಿಾಟಂಗಿನ ತೀರ್ಮಾನಗಳು ೩೪೬-೩೪೮

ಪ್ರಕಾಶಕರು :

ನೂತನ ವಿದ್ಯಾಸಮಿತಿ, ಮೈಸೂರು.

ಸಾಹಿತ್ಯದ ಅಂಚೆಯಾಪಲು ಹಲ್ಲದೆ ಬೇರೆಲ್ಲಿಯೂ. ಬಿಡಿ ಪ್ರತಿಗೆ ಅಣೆ.

ನವಜೀವಾತು ಎಂಬ ಸೂತಿಕಾ ರಸಾಯನ.

(ಇದು ರಿಜಸ್ಟರು ಮಾಡಲ್ಪಟ್ಟಿದೆ)

ಇದು ಬಾಣಂತಿಯರಿಗಾಗಿಯೇ ವೈದ್ಯಶಾಸ್ತ್ರಗಳ ದೀರ್ಘ ವಿಚಾರದಿಂದ
ತಯಾರಿಸಲ್ಪಟ್ಟ ಶ್ರೇಷ್ಠ ರಸಾಯನವು.

ನವಜೀವಾತುವನ್ನು ಸೇವಿಸುವ ಬಾಣಂತಿಗೆ ಬೇರೆ ಔಷಧೋಪಚಾರಗಳು ಬೇಡ.
ಇದರ ಸಾಮಾನ್ಯಫಲ, ವಿಶೇಷಫಲ, ಗೃಹ್ಯಸೂಕ್ಷ್ಮವನ್ನು ಆಲೋಚಿಸಿ ನಿರ್ಧರಿಸಿರಿ.

ಬಾಣಂತಿಗೆ ಬೇಕಾದ ಸಾಮಾನ್ಯಫಲ.

ಮಗುವು ಮತ್ತು ಕಸವು ಗರ್ಭಕೋಶದಿಂದ ಹೊರಗ ಬಂದ ಮೇಲೆ ನವಜೀವಾತುವನ್ನು ಅದರಲ್ಲಿ ಹೇಳಿರುವ ಕ್ರಮದಂತೆ ಪಾನ ಮಾಡಿರಿ. ಇದರಿಂದ ಗರ್ಭಕೋಶವು ಸ್ವಸ್ಥಾನದಲ್ಲಿ ನಿಲ್ಲಲ್ಪಡುವದು, ದುಷ್ಟ ರಕ್ತವು ಗರ್ಭಕೋಶದಲ್ಲಿ ಜಮೆಯಾಗದೆ ಹೊರಗೆ ಸುರಿದು ಹೋಗುವದು. ಕೋಶದೊಳಗಿನ ವ್ರಣಗಳು ಶೀಘ್ರವೇ ಒಣಗುವವು. ಗರ್ಭಕೋಶವು ಸಂಕುಚಿತವಾಗಿ ಸಪ್ರಮಾಣದಲ್ಲಿ ನಿಲ್ಲುವದು. ಗರ್ಭ ಕಾಲದಲ್ಲಿ ಕಳಕೊಂಡ ಶರೀರದ ಸರ್ವ ಧಾತುಗಳು ಮೊದಲಿನಂತೆಯೇ, ತುಂಬುವವು. ಪ್ರಸವವೇದನೆ, ಗರ್ಭೋದಕಪ್ರಸ್ರವಣ, ರಕ್ತಸ್ರಾವ ಮತ್ತು ಸರ್ವಧಾತುಗಳ ಶೈಥಿಲ್ಯಗಳಿಂದ ಉಂಟಾಗುವ ಧಾತುದೌರ್ಬಲ್ಯ ಕಾಯದಾರ್ಢ್ಯಗಳು ದೂರವಾಗುವವು. ಶಿಶುವಿಗೆ ಸಮೃದ್ಧಿಯಾಗುವಷ್ಟು ಮೊಲೆಯಲ್ಲಿ ಹಾಲು ಉಂಟಾಗುವದು.

ಬಾಣಂತಿಗೆ ಬೇಕಾದ ಗೃಹ್ಯಸೂಕ್ಷ್ಮ.

ಸೂಕ್ಷ್ಮ ವಿಚಾರದಲ್ಲಿ ನವಜೀವಾತುವು ಉತ್ಕೃಷ್ಟವಾಗಿದೆ. ಬರೇ ಎರಡೇ ಬಾಟ್ಲಿಗಳು ಅಂದರೆ ನಾಲ್ಕೈರೂಪಾಯಿಗಳಿಂದ ಬಾಣಂತಿಗೆ ಕನ್ನ ಬಾಣಂತಿತನವನ್ನು ಸುಧಾರಿಸಿಕೊಳ್ಳಬಹುದು. ಪರಿಚಾರಕರಿಗೆ ಚಾಕರರು ಸಿಕ್ಕದಿರುವ ಈ ಸಮಯದಲ್ಲಿ ನವಜೀವಾತುವು ಬಹಳ ಅನುಕೂಲ. ಒಬ್ಬಳು ಬಾಣಂತಿಗೆ ಕಡಿಮೆಪಕ್ಷ 2 ಬಾಟ್ಲಿಗಳು ಬೇಕಾಗುವವು.

೨ ಬಾಟ್ಲಿಗಳಿಗೆ 4-0-0 ಕ್ರಯ. ಅಂಚೆಪೆಚ್ಚ ಬೇರೆ.
ವಿಶೇಷ ಮಾಹಿತ್ಯಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ,
ಪೋಷ್ಟು ಕೊಡಿಯಾಲಬೈಲು, ದ. ಕ.

ಏಜಂಟರು:—
ಓರಿಯಂಟ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, 8 ಕ್ರಾಸ್ ರೋಡು, ಮಲ್ಲೇಶ್ವರ ಪೋಸ್ಟು, ಬೆಂಗಳೂರು.

ಸಾಬೂನುಗಳನ್ನು ಉಪಯೋಗಿಸದವನು ಯಾರು?

ಪ್ರಾಯೆಶಃ ಯಾರೂ ಇಲ್ಲ. ಆದರೆ, ಕೇವಲ ಬೆಲೆಯ ದೃಷ್ಟಿಯಿಂದ ಉತ್ತಮವಾವುದು
ಕನಿಷ್ಟವಾವುದೆಂಬುದನ್ನು ಗುರುತಿಸುವವರಿಲ್ಲ.

WISICO

ನಾವೀಗ ಅತ್ಯಾಧುನಿಕ ಯಂತ್ರವನ್ನು ತರಿಸಿ, ಸಾಬೂನು ಸಿದ್ಧತೆಯಲ್ಲಿ ಉತ್ಕ್ರಾಂತಿಯನ್ನೇ ಆರಂಭಿಸಿರುವೆವು
ಸಂಪೂರ್ಣ ಸ್ವದೇಶಿಯಷ್ಟೆ ಅಲ್ಲ -- ಪೂರ್ಣ ಶುದ್ಧವಾದುವೂ, ಶುದ್ಧೀಕಾರಕವಾದ
ಸಮಸ್ತ ಗುಣಗಳನ್ನುಳ್ಳವೂ ಆಗಿವೆಯೆಂಬುದು ನಮ್ಮ ಹೆಮ್ಮೆ.

ಇದು ಮಾತ್ರ ನೆನಪಿರಲಿ!

303

ಇದು ನಮ್ಮ ಸಾಬೂನುಗಳ
ಗುರುತಿನ ಸಂಖ್ಯೆ.

ಪಿಸಿಕೋರವರ ಬಾರ್‌ಸೋಪ್ ಮತ್ತು ಇತರ ಸುಗಂಧ ಸಾಬೂನುಗಳಲ್ಲಿ ಈ ಸಂಖ್ಯೆ ಇದೆ.
ಇದನ್ನು ನೋಡಿಯೇ ಕೊಂಡುಕೊಳ್ಳುವ ಎಚ್ಚರವಿರಲಿ.

Western India Soap & Industrial Co.,

FLOWER MARKET SOUTH, MANGALORE.

H.P. Seminary Library

ಸರ್ಕಾರಿ ಗಜಾನನ ಪುಸ್ತಕ ಭಂಡಾರ
ಅಮೃತಪುರ ಪೋಸ್ಟ್
(ಹಾಸನ ಜಿಲ್ಲೆ)
ಬಿ ಕ್ಕ ಳ

॥ ಕಲಹಂಸಮಾಕೀರ್ಣಮಾಗಿದ್ದು ಕಾಳಗದ ಕಳಮಲ್ಲ ॥

ಸಂಪಾದಕ—ಎಮ್. ಬಾಬುರಾಯ ಪ್ರಭು, ಬಿ. ಎ.

ಸಂಪುಟ ೩	ಯುವ ಸಂ| ಶ್ರಾವಣ	ಸಂಚಿಕೆ ೧೧

ಗ್ರಾಮೋದ್ಯೋಗಗಳ ಪುನರುಜ್ಜೀವನ.

(ಲೇಖಕರು: ಶ್ರೀ। ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ, ಕಾರ್ಕಳ.)

ಶಿಕ್ಷಿತ ಯುವಕರ ನಿರುದ್ಯೋಗ ಬಡತನಗಳ ಭೀಷಣ ಚಿತ್ರವಿದು! ಕಳೆದ ಮಾರ್ಚಿ ತಿಂಗಳ ತಾರೀಕು 18. ಕಲ್ಕತ್ತಾ ನಗರ. ಹೇರ್ ಸ್ಟ್ರೀಟ್ ನಂಬ್ರ 7ನೆ ಮನೆಯಲ್ಲಿ ಇರುವ ರಿಜರ್ವ ಬೇಂಕಿನಲ್ಲಿ ತಾತ್ಕಾಲಿಕವಾಗಿ ಖಾಲಿ ಬಿದ್ದ 80 ಗುಮಾಸ್ತರ ಸಾನಗಳಿಗೆ ಉಮೇದುವಾರರಿಂದ ಅರ್ಜಿಗಳು ಅಪೇಕ್ಷಿಸಲ್ಪಟ್ಟಿದ್ದುವು. ಒಂದಲ್ಲ, ಎರಡಲ್ಲ, ನೂರಲ್ಲ, ಇನ್ನೂರಲ್ಲ, 10,000 (ಹತ್ತುಸಾವಿರ) ಅರ್ಜಿಗಳು ಆ ದಿನ ದೊಳಗಾಗಿ ಕಾರ್ಯಾಲಯವನ್ನು ಸೇರಿದ್ದುವು. ಆರಿಸಿ ಬಂದ ಪ್ರತಿಯೊಬ್ಬ ಉಮೇದ್ವಾರನಿಗೆ ತಿಂಗಳಿಗೆ ದೊರೆಯುವದು ಸುಮಾರು 40 ರೂಪಾಯಿ ಮಾತ್ರ! ಆದರೂ ಆ ಅರ್ಜಿದಾರರೊಳಗೆ ವಿಶ್ವವಿದ್ಯಾಲಯಗಳ ಪದವಿಧಾರಿಗಳೂ ಇದ್ದರು. ಉಮೇದುವಾರರೆಲ್ಲರಿಗೆ ಮಾರ್ಚಿ ತಿಂಗಳ ತಾರೀಕು 18ರ ದಿನ ಕಾರ್ಯಾಲಯದಲ್ಲಿರುವ ಮುಖ್ಯಾಧಿಕಾರಿಯನ್ನು ಬಂದು ಕಾಣಬೇಕೆಂದು ಸೂಚನೆಯಾಗಿತ್ತು. ಆ ದಿನ ಪ್ರಾತಃಕಾಲ 8 ಗಂಟೆಯಾಗಜೇಕಾದರೇನೆ ಹತ್ತುಸಾವಿರ ಮಂದಿ—ಆ ನಮ್ಮ ನಿರ್ಭಾಗ್ಯ ಬಂಧುಗಳೆಲ್ಲರೂ—ತಪ್ಪದೆ ಬಂದಿದ್ದರು. ಕೂತುಕೊಳ್ಳಲಿಕ್ಕೆ ಸ್ಥಳವಿಲ್ಲದೆ ಎಲ್ಲರೂ ಕಾರ್ಯಾಲಯವನ್ನು ಮುತ್ತಿಗೆಹಾಕಿದ್ದಾರೋ ಎಂಬ ಹಾಗೆ ನಿಂತುಕೊಂಡೇ ಇದ್ದರು; ಮತ್ತು ಹೇರ್‌ಸ್ಟ್ರೀಟಿನ ಆ ನಂಬ್ರ 7ನೆ ಮನೆಯ ಮುಂಭಾಗದ ಬೀದಿಯಲ್ಲಿ ನಿಂತ ಉಮೇದುವಾರರ ಸಂಖ್ಯೆಯೂ ಕಡಿಮೆಯಾಗಿರಲಿಲ್ಲ. ಕೆಲವು ಸಮಯದ ವರೆಗೆ ಜನಸಂಚಾರಕ್ಕೂ ಮೋಟಾರು, ಗಾಡಿ, ಟ್ರೇಮುಗಳ

ಚಲಾವಣೆ, ವ್ಯಾಪಾರವಹಿವಾಟುಗಳಿಗೂ ದೊಡ್ಡ ಆತಂಕ ಉಂಟಾಗಿತ್ತೆಂದ ಮೇಲೆ ಈ ನಿರುದ್ಯೋಗ ಜಡತನಗಳ ಆಕರಾಳ ವಿಕರಾಳ ಸ್ವರೂಪವನ್ನು ಓದುಗರು ತಾವೇ ಕಲ್ಪಿಸಿಕೊಳ್ಳಬಹುದು. ಈ ನಿರುದ್ಯೋಗಿ ಬಂಧುಬಾಂಧವರ ದೃಷ್ಟಿಯಲ್ಲಿ ಆ ಖಾಲಿಬಿದ್ದ 80 ಸ್ಥಾನಗಳಿಗೆ ಆರಿಸಿ ಬಂದ 80 ಮಂದಿಯೂ ದೇವತೆಗಳೋ ಎಂಬ ಹಾಗೆ ತೋರಿ ಬಹುದು! ಅಷ್ಟು ಭಾಗ್ಯಶಾಲಿಗಳು ಅವರೆಂದು ಇವರು ಎಣಿಸಿರಬಹುದು!!

ಬಂಗಾಳದಲ್ಲಿ ಮಾತ್ರ ಈ ನಿರುದ್ಯೋಗವಿರುವದೆಂದಲ್ಲ. ಹಿಂದೂದೇಶದ ಯಾವ ಪ್ರಾಂತವಾದರೂ ಇದರಿಂದ ದೂರವಾಗಿರುವುದಿಲ್ಲ. ಪ್ಲೇಗ, ಸಿಡುಬು ಮೊದಲಾದ ಅಂಟು ರೋಗಗಳಂತೆ ಈ ನಿರುದ್ಯೋಗ ಜಡತನಗಳು ಕೂಡ ದೇಶದ ಸಂದುಗೊಂದುಗಳನ್ನೂ ಬಿಡದೆ ಎಲ್ಲಾ ಭಾಗಗಳನ್ನು ವ್ಯಾಪಿಸಿವೆ. ಇತ್ತೀಚಿಗೆ ಕೆಲವು ವರ್ಷಗಳಿಂದ ಸಮಾಜದಲ್ಲಿ ತೋರಿಬರುತ್ತಿರುವ ಅಶಾಂತಿಕ್ಷಿ ಕ್ರಾಂತಿಕಾರಿಗಳ ವ್ಯಾಪಕ್ಯ-ಇವುಗಳೆಲ್ಲ ಈ ನಿರುದ್ಯೋಗ ಜಡತನಗಳೇ ಮುಖ್ಯಕಾರಣಗಳೆಂದು ವಿಚಾರಿಗಳಾದವರ ಅಂಬೋಣವಾಗಿದೆ. ನಿರುದ್ಯೋಗಿಯು ಜಡವನೂ ಆದವನು ಏನನ್ನು ಮಾಡಬಹುದು ಏನನ್ನು ಮಾಡದೆ ಇರಬಹುದು? ಜಡರಾಶಿಯಿಂದ ಬೆಂದು ಹೋದ ಜಡಪಾಯಿಯು ಸಾರಾಸಾರ ವಿಚಾರವಿಲ್ಲದೆ ಎಲ್ಲವನ್ನು ಮಾತಲಿಕ್ಕೆ ಸಿದ್ಧವಾಗುತ್ತಾನೆ. ಆದ್ದರಿಂದ ನಿರುದ್ಯೋಗಿಯಾದ ಜಡವನು ಸಮಾಜದ ಅಸ್ತಿಕ್ಯಕ್ಕೆ ಸಂಕಾರದ ಧಕ್ಕೆತರಲೂ ದೊಡ್ಡ ಅವಕ್ತು ಆಗಿದ್ದಾನೆ; ಇಲ್ಲವಾದರೆ ವಿಘ್ನಕಾರಿಯಾದರೂ ಆಗುತ್ತಾನೆ. ಈ ಕಾರಣವನ್ನು ಮನಗೊಂಡು ಈಗಿನ ಸರಕಾರವು ಎಚ್ಚೆತ್ತು ತನ್ನ ಕರ್ತವ್ಯದ ಕಡೆಗೆ ಲಕ್ಷ್ಯವನ್ನಿಟ್ಟಿಂತೆ ತೋರುತ್ತದೆ. ಬಂಗಾಳ ಮಾತ್ರ ವಲ್ಲ ಮದ್ರಾಸು, ಬಾಂಬಾಯಿ, ಮಧ್ಯ ಪ್ರಾಂತ, ವಿಹಾರ, ಯುನೈಟೆಡ್ ಪ್ರವಿನ್ಸಗಳ ಗವರ್ನರುಗಳೂ ಅವರ ಸರಕಾರಗಳೂ ನಿರುದ್ಯೋಗನಿವಾರಣೋಪಾಯಗಳನ್ನು ಚಿಂತಿಸುತ್ತಲಿವೆ. ಇಂಡಿಯಾ ಸರಕಾರವು ಆ ಕಾರ್ಯಕ್ಕಾಗಿ ಈ ವರ್ಷ ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ನಿಶ್ಚೀಕರಿಸಿದೆ. ಸಂಯುಕ್ತಪ್ರಾಂತಗಳ ಸರಕಾರವು ಸಾ ಕೋಟಿ ಬಹುಮಾನ ಕೊಡುವ ಮಹಾಯೋಜನೆಯನ್ನು ಅಮಲ್ಗತೆಯಲ್ಲಿ ಒಂದು ಸಮಿತಿಯನ್ನೇರ್ಪಡಿಸಿ ನಿರುದ್ಯೋಗನಿವಾರಣೋಪಾಯಗಳನ್ನು ಆಲೋಚಿಸಿ ವರದಿಮಾಡಲಿಕ್ಕೆ ಕೇಳಿಕೊಂಡಿದೆ. ಸಪ್ತ ಮಹಾಯೋಜನೆಗಳಿಂದೇ ಸಂಚಾರ ಮಾಡಿ ಹಿಂದಿರುಗಿದ್ದಾರೆ. ಅವರ ವರದಿಯು ಇನ್ನು ಸ್ವಲ್ಪ ಸಮಯದಲ್ಲಿಯೇ ಹೊರಬೀಳುವದು.

ನಮ್ಮ ದೇಶದ ಪರಿಸ್ಥಿತಿಯ ಪರ್ಯಾಲೋಚನೆಮಾಡಿದರೆ ಶಿಕ್ಷಿತ ಅಥವಾ ಅಶಿಕ್ಷಿತ ನಿರುದ್ಯೋಗದ ನಿವಾರಣೆಗೆ ಇರುವ ಮುಖ್ಯಸಾಧನಗಳು ಎರಡು— ಕೃಷಿಸುಧಾರಣೆ ಮತ್ತು ಕೈಗಾರಿಕೆಗಳ ಪ್ರಚಾರ. ಕೃಷಿಪ್ರಧಾನವಾದ ನಮ್ಮ ದೇಶದ 60,000 ಹಳ್ಳಿಗಳಲ್ಲಿ ವಾಸವಾಗಿರುವ ಶೇಕಡ 90ರಷ್ಟು ಜನರು ಕೃಷಿಯಿಂದಲೇ ಜೀವನವಾಡುವವರಾಗಿದ್ದಾರೆ. ಈ ಕೃಷಿಕರು ವರ್ಷದ 6 ತಿಂಗಳುಗಳನ್ನು ಮಾತ್ರ ಕೃಷಿಕಾರ್ಯದಲ್ಲಿ ಕಳೆದು, ಉಳಿದ ೬ ತಿಂಗಳನ್ನು ಯಾವ ಉದ್ಯೋಗವನ್ನೂ ಮಾಡದೆ ಸೋಮಾರಿತನದಿಂದ ಕಳೆಯುತ್ತಾರೆ. ಹೀಗೆ ೬ ತಿಂಗಳ ಅವರ ದುಡಿತವು ಒಂದು ವರ್ಷದ ಪರಿಗೆ ಸಾಕಾಗಬೇಕು. ಶಿಕ್ಷಣದ ಅಭಾವ, ಸುಧಾರಿತ ಕೃಷಿ ವಿಧಾನಗಳ ಅಪರಿಚಯ, ಕಂದಾಯವೆತ್ತುವ ಪದ್ಧತಿಯಲ್ಲಿರುವ ದೋಷಗಳು, ಒಕ್ಕಲುಗಳ ಮೇಲೆ ಭೂಮ್ಯಾಲಿಕರಿಂದಾಗುವ ಅತ್ಯಾಚಾರ, ಭೂವಿಭಾಗ ಕ್ರಮದಲ್ಲಿರುವ ಕೊರತೆಗಳು, ಬಡತನ ಮೊದಲಾದ ಅನೇಕ ಕಾರಣಗಳಿಂದ ಕೃಷಿಕರು ಕೈಯಿಂದ ಎತ್ತಿದ್ದು ಬಾಯಿಗೆ ಬರುವದಿಲ್ಲ. ಆದ್ದರಿಂದ ಮೇಲ್ಕಂಡ ದೋಷಗಳು ದೂರವಾಗಬೇಕಾಗಿರುವದು ಮಾತ್ರವಲ್ಲ, ನಿರುದ್ಯೋಗವೂ ದೂರವಾಗಬೇಕಾದರೆ ಶಿಕ್ಷಿತ ಯುವಕರು ಕೃಷಿಕಾರ್ಯವನ್ನವಲಂಬಿಸಬೇಕು; ಮತ್ತು ಪ್ರಧಾನವೃತ್ತಿಯಾದ ಕೃಷಿಯೊಡನೆ ವಿರಾಮಕಾಲದ ಅನುಸರಣೆಗೋಸ್ಕರ ಅವರಿಗೊಂದು ಸುಲಭಸಾಧ್ಯ ಉಪವೃತ್ತಿಯೂ ಇರಬೇಕು.

ಪಾಶ್ಚಾತ್ಯ ನಾಗರಿಕತೆಯ ಥಳಕು ಬೆಳಕುಗಳಿಗೆ ಮನಸೋತ ವಿದ್ಯಾವಂತರೆನ್ನಿಸಿಕೊಳ್ಳುವ ಜನವರು ಅನುಕೂಲ ಕೇಂದ್ರಗಳಲ್ಲಿ ದೊಡ್ಡದೊಡ್ಡ ಯಂತ್ರಾಲಯಗಳನ್ನಿಟ್ಟು ಕೈಗಾರಿಕೆಗಳ ಪ್ರಚಾರಮಾಡಿದರೆ ನಿರುದ್ಯೋಗದ ನಿವಾರಣೆ ಆಗಲಾರದೆ? ಎಂದು ಪ್ರಶ್ನಿಸುತ್ತಿರುವುದುಂಟು. ಆದರೆ ಎಲ್ಲಿ ಆ ದೊಡ್ಡದೊಡ್ಡ ಕಾರ್ಖಾನೆಗಳ ಪ್ರಾಬಲ್ಯವಿರುವದೋ ಅಂಥ ಪಾಶ್ಚಾತ್ಯ ದೇಶಗಳಿಂದ ನಮ್ಮ ದೇಶದ ಪರಿಸ್ಥಿತಿಯು ತೀರಾ ಭಿನ್ನವಾಗಿರುವುದನ್ನು ಅವರು ನೆನಪಿಗೆ ತಂದುಕೊಳ್ಳುವದೇ ಇಲ್ಲ. ರಾಜ್ಯವಿಸ್ತಾರವೂ ಜನಬಲವೂ ಕಡಿಮೆ ಆಗಿರುವ ನೇತಗಳಲ್ಲಿ ತಮ್ಮ ಆವಶ್ಯಕತೆಗಳನ್ನು ಪೂರೈಸುವ ಕೆಲಸಗಾರರು ಹತ್ತಿರವಿರಬೇಕೆಂಬ ಕಟ್ಟಳೆಯನ್ನು ಒಪ್ಪಿಗೆ ಮಾಡಿ ತೀರಿಸಬೇಕಾದ ಸಂದರ್ಭಗಳು ಬರುತ್ತವೆ. ಅಂಥ

ದೇಶಗಳಲ್ಲಿ ಯಂತ್ರಾಲಯಗಳು ಪರಿಸ್ಥಿತಿಗೆ ಅನುಕೂಲವಾಗ ಬಹುದು. ಆದರೆ ನಮ್ಮದು ವಿಸ್ತಾರವಾದ ದೇಶ. ಜನ ಸಂಖ್ಯೆಯೂ ಸಿಬಡವಾಗಿದೆ. ಅಲ್ಲದೆ ಈ ದೇಶವು ಕೃಷಿ ಪ್ರಧಾನವಾಗಿರುವದರಿಂದ ಮುಖ್ಯ ವೃತ್ತಿಯಾದ ಕೃಷಿ ಯನ್ನು ಬಿಟ್ಟು ೧೦೦ಕ್ಕೆ ೯೦ ಮಂದಿಯೂ ಕೈಗಾರಿಕೆ ಕೇಂದ್ರ ಗಳನ್ನಾಶ್ರಯಿಸುವದು ದುಸ್ತರವಾದ್ದು. ಹೀಗೆ ಮಾಡುವದು ಸಾಧ್ಯವೆಂದು ಬರೇ ತರ್ಕಕ್ಕೋಸ್ಕರ ಒಪ್ಪಿಕೊಂಡರೂ ಕೂಡ ಯಂತ್ರಸಾಧನಗಳ ಮೂಲಕ ಕೈಗಾರಿಕೆ ಪ್ರಚಾರಮಾಡುವ ಯೋಜನೆಯು ದೋಷಗಳಿಂದ ನಿರ್ಲೇಪವಾಗಿರುವದಿಲ್ಲ. ಈ ಪದ್ಧತಿಯ ಸಂಪೂರ್ಣ ವಿಕಾಸವಾಗಿರುವ ಯುರೋಪು ಅಮೇರಿಕಗಳಲ್ಲಿಯೇ ನಿರುದ್ಯೋಗವು ವಿಷಮಾವಸ್ಥೆಗೆ ಬಂದುಮುಟ್ಟಿದೆ. ಅಲ್ಲಿ ಯಂತ್ರಸಾಧನೆಗಳಲ್ಲಿ ಹೆಚ್ಚೆಚ್ಚು ಸುಧಾರಣೆಗಳಾದಂತೆ ಹೆಚ್ಚೆಚ್ಚು ಮಂದಿ ತಮ್ಮ ವೃತ್ತಿಗೆ ನಮಸ್ಕಾರ ಕೊಟ್ಟು ಪುನೇದಾರಿ ಹಿಡಿಯುವ ಪ್ರಸಂಗಗಳು ಬಂದಿವೆ. ಇಷ್ಟು ಮಾತ್ರವಲ್ಲ, ಈ ಯಂತ್ರಾಲಯಗಳಿಂದ ಆಯಾ ದೇಶಗಳ ಆವಶ್ಯಕತೆಗಳಿಗೆ ಏರಿ ಸಾಮಾನುಗಳು ಸಿದ್ಧವಾಗಿ ಬಿಕರಿಗೆ ಬರುವದರಿಂದ ಆ ದೇಶಗಳವರು ತಮ್ಮ ಮ್ಹಾಲುಗಳ ವಿಕ್ರಯಕ್ಕಾಗಿ ವಿದೇಶಿ ಸಂತೆಗಳನ್ನು (markets) ಬಲಾತ್ಕಾರವಾಗಿಯಾದರೂ ತಮ್ಮ ವಶದ ಲ್ಲಿಟ್ಟುಕೊಳ್ಳಲಿಕ್ಕೆ ವಿವಶರಾಗುತ್ತಾರೆ. ಇದರಿಂದ ರಾಷ್ಟ್ರ ರಾಷ್ಟ್ರಗಳೊಳಗೆ ಮನೋಮಾಲಿನ್ಯವುಂಟಾಗಿ ತತ್ಸಂಬಂಧ ಉಂಟಾದ ಜಗಳಗಳು ಯುದ್ಧದಲ್ಲಿ ಪರ್ಯವಸಾನವಾಗುವ ದಿದೆ. ನಮ್ಮ ದೇಶವಂತೂ ಪರದೇಶಿ ಮಾರ್ಕೆಟ್ಟುಗಳನ್ನು ಆಶ್ರಯಿಸುವದಕ್ಕಿಲ್ಲ. ಆದ್ದರಿಂದ ಈ ದೇಶದ ನಿರುದ್ಯೋಗ ನಿವಾರಣೋಪಾಯಗಳನ್ನು ಚಿಂತಿಸುವ ಮೊದಲು ಕೆಳಗಿನ ಎರಡು ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

(1) ಬಹು ಸಂಖ್ಯೆಯಲ್ಲಿರುವ ಕೃಷಿಕರು ತಮ್ಮ ಪ್ರಧಾನ ವೃತ್ತಿಯಾದ ಕೃಷಿಯನ್ನು ಬಿಟ್ಟರಲಕ್ಕಾಗುವದಿಲ್ಲ. ಆದ್ದರಿಂದ ಅವರಿಗೊಂದು ವಿರಾಮಕಾಲದ ಉಪವೃತ್ತಿಯ ಆವಶ್ಯಕತೆ ಇದೆ.

(2) ದೊಡ್ಡ ದೊಡ್ಡ ಯಂತ್ರಾಲಯಗಳನ್ನಿಟ್ಟು ಕೊಂಡು ಕೈಗಾರಿಕೆ ಪ್ರಚಾರ ಮಾಡುವದು ನಮ್ಮ ದೇಶದಲ್ಲಿ ಸಾಧ್ಯವಲ್ಲ; ಸಾಧ್ಯವಾದರೂ ಹಿತಕರವಾಗಿಲ್ಲ.

ಆದ್ದರಿಂದಲೇ ನಮ್ಮ ದೇಶದ ನಿಜವಾದ ಹಿತೇಚ್ಛು ಗಳು ಇಲ್ಲಿಯ ಗ್ರಾಮೋದ್ಯೋಗಗಳ ಪುನರುಜ್ಜೀವನ ಮಾಡಲಿಕ್ಕೆ ಹಗಲಿರುಳು ಹೆಣಗಾಡುತಿದ್ದಾರೆ. ಗ್ರಾಮೋ ದ್ಯೋಗಗಳಿಗೆ ಬಂಡವಾಳವು ಹೆಚ್ಚು ಬೇಕಾಗಿರುವದಿಲ್ಲ. ಸಿಕ್ಕ [illegible] ಲಾಭವು ದೇಶದ ಎಲ್ಲಾ ಹಳ್ಳಿಗಳಿಗೂ ಹಂಚಿ ಹೋಗುವದು. ಗ್ರಾಮೋದ್ಯೋಗಗಳನ್ನು ನಡೆಸಲಿಕ್ಕೆ ಯಂತ್ರಬಲಕ್ಕಿಂತಲೂ ಜನಬಲವು ಹೆಚ್ಚು ಬೇಕಾಗಿರುವುದ ರಿಂದ ನಿರುದ್ಯೋಗಿಗಳಿಗೆ ಉದ್ಯೋಗವೂ ದೊರೆಯುವದು. ವಿರಾಮಕಾಲದಲ್ಲಿ ಈ ವೃತ್ತಿಗಳನ್ನು ಅವಲಂಬಿಸಬಹುದಾ ಗಿರುವದರಿಂದ ಮುಖ್ಯ ವೃತ್ತಿಯಾದ ಕೃಷಿಕಾರ್ಯ ವನ್ನು ಬಿಟ್ಟರಬೇಕಾಗಿಲ್ಲ. ಬೇರೆ ಬೇರೆ ಪ್ರದೇಶಗಳಿಗೆ ಬೇಕಾಗಿರುವಷ್ಟು ಮಾತ್ರ ಸಾಮಾನುಗಳನ್ನು ಮಾರಾ ಟಕ್ಕೆ ಸಿದ್ಧವಾಗುವವಾದ್ದರಿಂದ ವಿದೇಶೀ ಮಾರ್ಕೆಟು ಗಳನ್ನು ಕೈವಶಮಾಡಿಟ್ಟುಕೊಳ್ಳಲಿಕ್ಕೆ ಹೊಂಚು ಹಾಕಿ ಕೂತುಕೊಳ್ಳಬೇಕಾಗಿಲ್ಲ. ಇಂಥ ದೇಶೀ ಬಂಡವಾಳ, ದೇಶೀ ಪರಿಶ್ರಮ, ದೇಶೀ ಕಚ್ಚಾಪದಾರ್ಥಗಳಿಂದ ತಯಾರಾದ ಸಂಪೂರ್ಣ ಸ್ವದೇಶೀ ಮ್ಹಾಲುಗಳ ಪ್ರೋತ್ಸಾಹ ಮಾಡುವದೇ ಪ್ರತಿಯೊಬ್ಬ ಭಾರತೀಯನ ಹೆಗ್ಗುರಿಯಾಗಿರಬೇಕೆಂದು ಮಹಾತ್ಮಾಜೀಯವರ ಆದೇಶವಾಗಿರುತ್ತದೆ.

ಗ್ರಾಮೋದ್ಯೋಗಗಳ ಪುನರುಜ್ಜೀವನವನ್ನೇ ಯಾಕೆ ಮಾಡಬೇಕೆಂಬುದನ್ನು ಇಂಗ್ಲೆಂಡು ಅಮೇರಿಕ ಮೊದಲಾದ ದೇಶಗಳ ಕಡೆಗೆ ಒಮ್ಮೆ ದೃಷ್ಟಿ ಬೀರಿ ಅಲ್ಲಿಯ ಪ್ರಕೃತ ಪರಿ ಸ್ಥಿತಿಯ ಸೂಕ್ಷ್ಮಾವಲೋಕನ ಮಾಡುವದರಿಂದ ತಿಳಿದು ಕೊಳ್ಳಬಹುದು. ವಿಪುಲ ಸಂಪತ್ತು, ಭೂಮ್ಯುತ್ಪನ್ನ, ಜಾಣ ತನ, ವಿಜ್ಞಾನದ ಸಹಾಯವಿರುವ ಆ ದೇಶಗಳವರು ಕೂಡ ಯಂತ್ರಾಲಯಗಳ ದಾಸಾನುದಾಸರಾಗಿ ಅವುಗಳನ್ನೇ ತಮ್ಮ ಜೀವನ ಸರ್ವಸ್ವವೆಂದು ತಿಳಿದುಕೊಂಡೂ ನಿರುದ್ಯೋಗ ವನ್ನು ನಿವಾರಿಸಲಾರದೆ ಹೋದರು. ಮಾತ್ರವಲ್ಲ; ಅಲ್ಲಿ ನಿರುದ್ಯೋಗವು ಉಲ್ಬಣಾವಸ್ಥೆಗೂ ಬಂದಿದೆ. ಆದ್ದರಿಂದ ಈಗ ಅವರು ನಿರುಪಾಯರಾಗಿ ಸಣ್ಣ ಪುಟ್ಟ ಮನೆ ಕೈಗಾರಿಕೆ ಗಳಿಗೆ ಶರಣು ಬಂದಿದ್ದಾರೆ. ಅವರು ಎಷ್ಟೆಷ್ಟು ಗ್ರಾಮೋ ದ್ಯೋಗಗಳ ಪುನರುಜ್ಜೀವನ ಮಾಡುತ್ತ ಬಂದಿದ್ದಾರೋ, ಅಷ್ಟಷ್ಟು ಹೆಚ್ಚಾಗಿ ಅವರಿಗೆ ಸಫಲತೆಯುಂಟಾಗಿ ನಿರುದ್ಯೋ ಗವೂ ಕಡಿಮೆಯಾಗಿದೆ. ಆದ್ದರಿಂದ ಗ್ರಾಮೋದ್ಯೋಗಗಳ ಪುನರುಜ್ಜೀವನದಿಂದಲೇ ಹಿಂದೂದೇಶದ ಬಡತನವು ದೂರ ವಾಗುವದೆಂದು ಮಹಾತ್ಮಾಜಿಯವರೂ, ಅವರಂಥ ವಿಚಾರ ಗಳನ್ನಿಟ್ಟುಕೊಂಡ ಇತರರೂ ಹೇಳುವದರಲ್ಲಿ ಏನೇನೂ ಅತಿ ಶಯೋಕ್ತಿ ಇರುವದಿಲ್ಲ.

ಪರಂತು, ಗ್ರಾಮೋದ್ಯೋಗಗಳ ಪುನರುಜ್ಜೀವನವು ಸುಲಭವೇನೆಯೇ ಆಗಲಾರದು. ಅದಕ್ಕೆ ತಕ್ಕ ತಿಸ್ತು, ವ್ಯವಸ್ಥೆ, ಕಾರ್ಯಾನುಭವ, ಪರಿಪಕ್ವ ಬುದ್ಧಿ, ವಿಜ್ಞಾನದ ಸಹಾಯಗಳು ಬೇಕು. ಎಲ್ಲರಿಗೂ ತಕ್ಕಷ್ಟು ಸಾಮಾನ್ಯಿಕ ಶಿಕ್ಷಣದೊಂದಿಗೆ ವೃತ್ತಿ ಶಿಕ್ಷಣವೂ ದೊರೆಯಬೇಕು. ಅಂಥ ಶಿಕ್ಷಿತರು ಹಳ್ಳಿಗಳಿಗೆ ಹೋಗಿ ಕೃಷಿಕೈಗಾರಿಕೆಗಳನ್ನು ಎತ್ತಿಹಿಡಿಯಬೇಕು. ನವನಾಗರಿಕರು ಸುಟ್ಟುವಂಥ ರೀತಿಯಲ್ಲಿ ಆಂಗ್ಲೇಯರು ಕಳೆದ 200 ವರ್ಷಗಳಿಂದ ನಮ್ಮ ದೇಶವನ್ನಾಳುತ್ತಿದ್ದರಾದರೂ ಅವರಿಂದ ದೇಶೀಯರಿಗೆ ದೊರೆಯುವ ಶಿಕ್ಷಣವು ಗುಮಾಸ್ತಿಕೆ ಮಾಡುವದಕ್ಕೆ ಬಿಟ್ಟು ಬೇರೆ ಯಾವ ಜೀವನವೃತ್ತಿಯನ್ನು ಆಶ್ರಯಿಸಲಿಕ್ಕೂ ಸಾಧಕವಾಗಿಲ್ಲದಿರುವದು ಎಷ್ಟು ಕರುಣಾಜನಕವಾಗಿದೆ! ವೃತ್ತಿ ಶಿಕ್ಷಣದ ವ್ಯವಸ್ಥೆಯಾಗಬೇಕೆಂದು ವುಲಿಂತರು ಬಾಯಿಬಾಯಿ ಬಡಿಕೊಂಡು ದೊಣ್ಣೆನೊಪ್ಪೆ ಭಾಷಣಗಳನ್ನು ಕೊಡುತಿದ್ದಾರಾದರೂ, ಲೇಖಕರು ಉದ್ದುದ್ದ ಲೇಖನಗಳನ್ನು ಬರೆದು ಪ್ರಕಟಿಸುತಿದ್ದಾರಾದರೂ ಅವರಿಂದ ಸಂಕಾರವ ಅಥವಾ ಜನತೆಯ ಮನಸ್ಸಿನ ಮೇಲೆ ಯಾವ ಪರಿಣಾಮವೂ ಆಗಿಲ್ಲವೆನ್ನಬಹುದು. ಇನ್ನೂ ಇನ್ನೂ ಹೊಸ ಹೊಸ ಹೈಸ್ಕೂಲುಗಳೂ ಕಾಲೇಜುಗಳೂ ತೆರೆಯಲ್ಪಟ್ಟು ಅಥವಾ ಇದ್ದವುಗಳಿಗೆ ಧನಸಹಾಯವು ಸಿಕ್ಕಿ ಸಾಮಾನ್ಯಿಕ ಶಿಕ್ಷಣಕ್ಕೇನೇ ಹೆಚ್ಚಿಷ್ಟು ಪ್ರೋತ್ಸಾಹವು ಕೊಡಲ್ಪಡುತ್ತಿದೆ. ಸಾಮಾನ್ಯಿಕ ಶಿಕ್ಷಣವು ಹೊರೆಯಲೇಬಾರದೆಂಬುದು ನಮ್ಮ ಅಭಿಪ್ರಾಯವಲ್ಲ. ಮನೆ ಅವಕ್ಕಿಂತ ಹೆಚ್ಚಾಗಿ ಅಲ್ಲವಾದರೆ, ಅವರಷ್ಟೆಯಾದರೂ ವೃತ್ತಿ ಶಿಕ್ಷಣಕ್ಕೆ ಒತ್ತಯವು ಕೊಡಲೆಂಬುದು ನಮ್ಮ ಆಸೆ.

ಯಾವ ಉದ್ಯೋಗವು ಪುನರುಜ್ಜೀವನವಾಗಬೇಕಾದರೂ ಪರಿಶೋಧನೆಗಳು ನಡೆಯಬೇಕು. ಹಿಂದು ಉದ್ಯೋಗಗಳಲ್ಲಿ ಸ್ಥಳೀಯ ಅನುಕೂಲತೆಗಳನ್ನಿಟ್ಟು ಅವುಗಳಲ್ಲಿ ಯಾವ ಸುಧಾರಣೆಗಳನ್ನು ಮಾಡುವದರಿಂದ ಎಷ್ಟು ಲಾಭವಾಗಬಹುದು? ಆರ್ಥಿಕ ಸ್ಥಿತಿಯು ಎಷ್ಟರಮಟ್ಟಿಗೆ ಉತ್ತಮವಾಗಬಹುದು? ಎಷ್ಟು ಮಂದಿಗೆ ಉದ್ಯೋಗವು ದೊರೆಯಬಹುದು? ಎಂದು ಮುಂತಾದ ಪ್ರಶ್ನೆಗಳ ವಿಚಾರಮಾಡುವ ವಿಜ್ಞಾನಿಗಳ ಮತ್ತು ತಜ್ಞರ ಪರಿಶೋಧನೆಗಳಾಗುವದಾವಶ್ಯಕ. ಇಂತಹದೊಂದು ಪರಿಶೋಧನಾಲಯವೂ, ಅದಕ್ಕೆ ಹೊಂದಿಕೊಂಡು ವಸ್ತು ಸಂಗ್ರಹಾಲಯವೂ ಈ ನಮ್ಮ ದೇಶದ ಗ್ರಾಮೋದ್ಯೋಗಗಳ ಒಂದು ದೊಡ್ಡ ಕೇಂದ್ರವೆನಿಸುವ ವಾರ್ಧಾದಲ್ಲಿ ಆಗುತ್ತಿರುವದು ಶುಭಲಕ್ಷಣವಾಗಿದೆ. ಇಂಥ ವ್ಯವಸ್ಥೆಯು ಬೇರೆ ಕೇಂದ್ರಗಳಲ್ಲಿಯೂ ಆಗಿ ಆ ಪರಿಶೋಧನೆಗಳ ಫಲವು ಸಾಮಾನ್ಯ ಜನತೆಗೆ ದೊರೆಯುವಂತಾದರೆ ಪುನರುಜ್ಜೀವನ ಕಾರ್ಯದ ದೊಡ್ಡಂಶವನ್ನು ಸಾಧಿಸಿದಂತಾಗುವದು.

ಹೀಗೆ ಗ್ರಾಮೋದ್ಯೋಗಗಳ ಪುನರುಜ್ಜೀವನವಾಗಿ ಸಾಮಾನ್ಯಿಕ-ವೃತ್ತಿ ಶಿಕ್ಷಣಗಳನ್ನು ಪಡೆದ ಯುವಕರ ಜೀವನಕ್ಕಾಗಿ ಕೃಷಿ-ಗ್ರಾಮೋದ್ಯೋಗಗಳನ್ನು ಆಶ್ರಯಿಸಿದಾಗ ದೇಶದ ಶೇಕಡ 90 ರಷ್ಟು ಮಂದಿಗೆ ಉದ್ಯೋಗವು ದೊರೆತ ಅವರ ಭಾಗ್ಯೋದಯವಾಗುವುದು ನಿಶ್ಚಯ. ಆಗ ಉಳಿದವು ವ್ಯಾಪಾರ, ನೌಕರಿ, ವೈದ್ಯ, ವಕೀಲಿ ಮೊದಲಾದ ವೃತ್ತಿಗಳನ್ನು ಸುಲಭವಾಗಿ ಅವಲಂಬಿಸಿಕೊಂಡು ಸುಖವಾಗಿ ಜೀವಿಸಿಕೊಂಡಿರಬಹುದು. ಈ ರೀತಿ ನಿರುದ್ಯೋಗವೆಂಬ ಭೂತದ ಉಚ್ಚಾಟನೆಯಾದರೆ ಬಡತನವೂ ದೂರವಾಗಿ ದೇಶದಲ್ಲಿ ಸುಭಿಕ್ಷವೂ, ಸಮಾಜದಲ್ಲಿ ಶಾಂತತೆಯೂ ಉಂಟಾಗುವದು. ಸರಕಾರವೂ ತನ್ನ ಅಸ್ತಿತ್ವದ ಕುರಿತು ನಿಶ್ಚಿಂತವಾಗಿರಬಹುದು.

ಆದ್ದರಿಂದ ಗ್ರಾಮೋದ್ಯೋಗಗಳ ಪುನರುಜ್ಜೀವನವನ್ನು ದೇಶದ ನಿರುದ್ಯೋಗ ಮತ್ತು ಬಡತನಗಳ ನಿವಾರಣೆಗಿರುವ ಒಂದೇ ಒಂದು ಉಪಾಯವೆಂದು ಮತ್ತೊಮ್ಮೆ ತೋರಿಸಿ ಈ ಲೇಖನವನ್ನು ಮುಗಿಸುತ್ತೇವೆ.

ಜೀವನದ ಸೊಗಸು ಕುಪ್ಪಿ ವಾಸುದೇವ ಕೆಸ್ಕೆಯವರು ಬರೆದ ಹದಿನೆಂಟು ಕತೆಗಳ ಸಂಗ್ರಹ

ನಿತ್ಯಜೀವನದಿಂದ ಆರಿಸಿ ತೆಗೆದ ವಿನೋದ ಚಿತ್ರಗಳು.

ಎಷ್ಟೇ ಕಾಲ ಓದಿದರೂ ಅಲ್ಪ ಮಾತ್ರವಾದ ಬೆಲೆ ಅಣೆ 4.

ಪ್ರತಿಯೊಬ್ಬರೂ ಅವಶ್ಯ ಅಂಗಡಿಯಲ್ಲಿ ಕೊಳ್ಳಿಸಿಕೊಳ್ಳಬೇಕು.

ಸಿಗುವ—ಪ್ರಭಾತ ಪುಸ್ತಕ ಭಂಡಾರ, ಮಂಗಳೂರು

ಅಥವಾ ಮಾಲಕರಿಂದ ಮುದ್ರಿಸಲ್ಪಟ್ಟ ಲಿಮಿಟೆಡ್, ಮಂಗಳೂರು.

ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಕಲೆ

(ಲೇಖಕರು:—ಶ್ರೀ। ಬಿ ಶಂಕರಭಟ್ಟ, ವಿದ್ವಾನ್)

ಸಾಹಿತ್ಯ ಗ್ರಂಥವು ಆಯಾ ದೇಶದ ತತ್ಕಾಲೀನ ಸಮಾಜದ ಚಿತ್ರವನ್ನು ನೋಡಲಿರುವ ಕನ್ನಡಿಯು. ಸಾಹಿತ್ಯಗ್ರಂಥದಿಂದ ನಾವು ಆಯಾ ಕಾಲದ ಮಾನವ ಸಮಾಜದ ಆಚಾರ ವಿಚಾರಗಳನ್ನೂ ಮನೋಭಾವಗಳನ್ನೂ ಊಹಿಸಬಹುದು. ಸಮಾಜದೊಂದಿಗೆ ಸಾಹಿತ್ಯದ ಸಂಬಂಧವಿರುವುದರಿಂದ ಸಾಹಿತ್ಯದಲ್ಲಿ ಸಮಾಜ ವಿಚಾರಗಳ ಪ್ರಭಾವವು ಕಾಣದಿರದು. ಪರಿವರ್ತನಶೀಲವುಳ್ಳ ಮಾನವ ವಿಚಾರವು ದೇಶ ಕಾಲಗಳೊಂದಿಗೆ ಬೆರೆತು ಪ್ರವಹಿಸುತ್ತದೆ. ಇದೇ ಕಾರಣದಿಂದ ಲೇಖಕನೊಬ್ಬನಿಂದ ಬರೆಯಲ್ಪಟ್ಟ ಬರಹದಲ್ಲಿ ಮಾನವ ಸಮಾಜದ ವಿಚಾರಗಳ ಪ್ರಭಾವವು ಕಾಣ ಬರುತ್ತದೆ. ನಮ್ಮ ಪ್ರಾಚೀನ ಕಾಲದಲ್ಲಿದ್ದ ಚಿತ್ರಕಲೆಯ ಪ್ರಭಾವವು ಸಂಸ್ಕೃತ ಸಾಹಿತ್ಯದಲ್ಲಿ ಕಂಡು ಬರುತ್ತದೆ. ಅದನ್ನು ಸ್ವಲ್ಪ ಮಟ್ಟಿಗೆ ಸಂಗ್ರಹಿಸಿ ಕೊಡುತ್ತೇನೆ.

ಏಳನೇ ಶತಮಾನದಲ್ಲಿ ಜೀವಿಸಿದ್ದ ಬಾಣ ಭಟ್ಟನ ಕಾದಂಬರೀ ಗ್ರಂಥಕ್ಕೆ ಸಂಸ್ಕೃತ ಸಾಹಿತ್ಯದಲ್ಲಿ ವಿಶೇಷ ಸ್ಥಾನವಿದೆ. ಆ ಕಾಲದ ರಾಜಪುತ್ರರಿಗೆ ಅಸ್ತ್ರಶಸ್ತ್ರಾಭ್ಯಾಸಗಳೊಂದಿಗೆ ಚಿತ್ರಕಲೆಯೂ ಕಲಿಸಲ್ಪಡುತ್ತಿತ್ತೆಂದೂ, ಅವರು ಚಿತ್ರಕರ್ಮದಲ್ಲಿ ದಕ್ಷರಾಗುತಿದ್ದರೆಂದೂ ಕಾದಂಬರಿಯನ್ನೋದಿದವರಿಗೆ ಅರಿಯದ ವಿಷಯವಲ್ಲ. ಆ ಕಾಲದ ಪುರುಷರು ಮಾತ್ರವಲ್ಲ, ಸ್ತ್ರೀಯರು ಕೂಡ ಚಿತ್ರಕರ್ಮ ಕುಶಲೆಯರಾಗಿದ್ದರು. "ಚಿತ್ರಕರ್ಮಣಿಕುಶಲಃ" ಎಂದು ಬಾಣ ಭಟ್ಟನು ವೈಶಂಪಾಯನನನ್ನು ವಿಶೇಷಿಸಿದ್ದಾನೆ. ಚಂದ್ರಾಪೀಡನ ವಿದ್ಯಾಭ್ಯಾಸವನ್ನು ಹೇಳುವಾಗ "ಚಿತ್ರಕರ್ಮಣಿ ಪರಂಕೌಶಲಮವಾಪ"; "ಚಿತ್ರಕೆಲಸದಲ್ಲಿ ವಿಶೇಷ ಕೌಶಲ್ಯವನ್ನು ಹೊಂದಿದನು" ಎಂದಿದ್ದಾನೆ. ಇದಲ್ಲದೆ "ಚಿತ್ರಕರ್ಮಭಿಃ ಕೃತಶ್ರಮಾಭಿಃ ಕೃತ್ಯಾಭಿಃ" ಮತ್ತು "ತಸ್ಯಾಃ ತ್ವದಾಕಾರ ಮಯ ಚಿತ್ರಕಲಾಭ್ಯಾಸಃ" ಎಂದು ಸ್ತ್ರೀಯರು ಕೂಡ ಚಿತ್ರಕಲೆಯನ್ನರಿತಿದ್ದರೆಂದು ಉಲ್ಲೇಖಿಸಿದ್ದಾನೆ.

ಭವಭೂತಿ ಕವಿಯ ಉತ್ತರರಾಮಚರಿತೆಯು ಚಿತ್ರಕಲೆಯ ತವರ್ಮನೆಯು. ಅದರಿಂದ ಒಂದೆರಡು ವಿಷಯಗಳನ್ನೆತ್ತುವ. ಉತ್ತರರಾಮಚರಿತದ ಚಿತ್ರಗಳನ್ನು ನೋಡಿದವರ ಮನಸ್ಸಿನಲ್ಲಿ ಭಾವಗಳು ತರಂಗಗಳಾಗಿ ಏಳದಿರವು. ಲಕ್ಷ್ಮಣನು ಸೀತಾರಾಮರಿಗೆ ಚಿತ್ರಗಳನ್ನು ತೋರಿಸುತ್ತಾ ಪರಶುರಾಮನ ಕಡೆಗೆ ತೋರಿಸಿ—"ಅಯಂಚ ಭಗವಾನ್ ಭಾರ್ಗವಃ" ಎನ್ನುತ್ತಾನೆ. ಪರಶುರಾಮನ ಚಿತ್ರವು ನಿಜವಾಗಿಯೂ ಭಯಂಕರನಾಗಿದ್ದಿರಬೇಕು. ಆಗ ಮುಗ್ಧಳಾದ ಸೀತೆಯು "ಕಂಪಿತಾಸ್ಮಿ" "ನಡುಗುತ್ತೇನೆ" ಎನ್ನುತ್ತಾಳೆ. ಹೀಗೆಯೇ ಶೂರ್ಪನಖೆಯ ಚಿತ್ರದರ್ಶನ ಕಾಲದಲ್ಲಿಯೂ ಆಗಿರಬೇಕು. ಇದೇ ನಾಟಕದಲ್ಲಿ ಪ್ರಾಕೃತಿಕ ದೃಶ್ಯಗಳ ಚಿತ್ರಗಳ ವರ್ಣನೆಯು ಮನೋರಂಜಕವಾಗಿದೆ. ಒಂದು ಕಡೆಯಲ್ಲಿ ಭಗವಾನ್ ಭವಭೂತಿಯು—

ಏ ತಾನಿ ತಾನಿ ಗಿರಿನಿ ಝರಿಣೀ ತಟೀಷು।
ವೈಖಾನಸಾಶ್ರಮಕರೂಣಿ ತಪೋವನಾನಿ ॥
ಯೇ ಶ್ವಾತಿಥೇಯ ಪರಮಾಃ ಶಮಿನೋ ಭಜಂತೇ।
ನೀವಾರ ಮುಷ್ಟಿ ಪಣನಾಃ ಗೃಹಿಣೋ ಗೃಹಾಣಿ ॥"

ಎಷ್ಟು ಸುಂದರ ಪ್ರಾಕೃತಿಕ ದೃಶ್ಯವು? ತಪೋವನವು ಒಂದು ಕಡೆಯಿಂದ ಪರ್ವತದಿಂದ ನೀರಿನ ಪ್ರವಾಹವು ಹರಿಯುತ್ತಿದೆ. ಮತ್ತೊಂದು ಬದಿಯಿಂದ ವೃಕ್ಷರಾಜಿ. ಹೀಗಿರುವ ತಾಪಸಾಶ್ರಮವು ತಪೋಧನರಿಂದ ಸುಶೋಭಿತವಾಗಿದೆ.

ಇನ್ನೊಂದು ಪ್ರಾಕೃತಿಕ ದೃಶ್ಯವೂ ದರ್ಶನೀಯವಾಗಿದೆ, ನೋಡಿ:—

"ಅಯಂ ಅವಿರಲಾನೋಕಹ ನಿವಹ ನಿರಂತರ ಸ್ನಿಗ್ಧ ಸೀಲ ಪರಿಸರಾರಣ್ಯ ಪರಿಣದ್ಧ ಗೋದಾವರೀ ಮುಖರ ಕಂದರಃ ಸಂತತ ಮಭಿಷ್ಯಂದ ಮಾನ ಮೇಘ ಮೇದುರಿತ ನೀಲಿಮಾಜನ ಸ್ಥಾನಮಧ್ಯಗೋ ಗಿರಿಃ ಪ್ರಸ್ರವಣೋನಾಮ ॥"

ಇದು ಪ್ರಸ್ರವಣ ಪರ್ವತದ ಪ್ರಾಕೃತಿಕ ದೃಶ್ಯ ಚಿತ್ರವು. ಚಿತ್ರಕಾರನು ಒಂದು ಪರ್ವತವನ್ನು ರಚಿಸಿ ಪರ್ವತದಲ್ಲೊಂದು ಗುಹೆಯನ್ನು ರಚಿಸಿದ್ದಾನೆ. ಅದರ ಸಮೀಪದಲ್ಲಿ ವೃಕ್ಷಗಳ ಮಧ್ಯದಲ್ಲಿ ಗೋದಾವರೀ ನದಿಯು ಹರಿಯುತ್ತದೆ. ದಟ್ಟವಾದ ಮರಗಳಿದ್ದುದರಿಂದ ಪರ್ವತ ಪ್ರಾಂತವು ನೀಲವರ್ಣದಿಂದ ಶೋಭಿಸುತ್ತದೆ. ಪರ್ವತದ ಮೇಲೆ ಮೋಡಗಳಿರುವುದರಿಂದಲೂ ನೀಲವರ್ಣದಿಂದ ಮನೋಹರವಾಗಿದೆ.

ಮುದ್ರಾರಾಕ್ಷಸದಲ್ಲಿ ಕೂಡ ಚಿತ್ರಕಲೆಯ ರೂಪರೇಖೆಯ ಆಭಾಸವನ್ನು ಕಾಣಬಹುದು. ಒಂದು ಕಡೆ ಮುದ್ರಾರಾಕ್ಷಸನು:—

"ಚಿಂತಾವೇಶ ಸಮೂಳುಲೇನ ಮನಸಾ ರಾತ್ರಿಂದಿವಂ ಜಾಗ್ರತಃ।
ಸೈವೇಯಂ ಮಮ ಚಿತ್ರಕರ್ಮರಚನಾ ಭಿತ್ತಿಂವಿನಾ ವರ್ತತೇ ॥"

"ಗೋಡೆಯಿಲ್ಲದೆ ಚಿತ್ರಕರ್ಮದಂತೆ ನನ್ನ ಪುರುಷಾರ್ಥವು ಆಶ್ರಯವಿಲ್ಲದೆ ನಿಷ್ಫಲವಾಗಿರುತ್ತದೆ." ಆ ಕಾಲದಲ್ಲಿ ಕಾಗದದಲ್ಲೋ ವಸ್ತ್ರದಲ್ಲೋ ಚಿತ್ರ ಬರೆದು ಗೋಡೆಗೆ ತೂಗಾಡಿಸುತ್ತಿದ್ದರೆಂಬದು ಮೇಲಿನ ಮಾತಿನಿಂದ ವಿಶದವಾಗುತ್ತದೆ.

ಕಾಳಿದಾಸನು ದೊಡ್ಡ ಚಿತ್ರಕಲಾಮರ್ಮಜ್ಞನು. ಆತನ ನಾಟಕಗಳಲ್ಲಿ ಚಿತ್ರಕಲೆಯ ಉಲ್ಲೇಖವಿದೆ. ವಿಕ್ರಮೋರ್ವಶೀಯದಲ್ಲಿ ಪುರೂರವನು ಊರ್ವಶೀವಿಯೋಗವಿಹ್ವಲನಾಗಿ ಮನಸ್ಸನ್ನು ಸಮಾಧಾನಗೊಳಿಸುವ ಉಪಾಯವನ್ನು ವಿದೂಷಕನಿಂದನೆ ಕೇಳಿದಾಗ, ವಿದೂಷಕನು: —

"ಸ್ವಪ್ನ ಸಮಾಗಮ ಕಾರಿಣೀಂ ನಿದ್ರಾಂ ಸೇವತಾಂ ಭಗವಾನ್, ಥವಾ ತತ್ರ ಭವತ್ಯಾ ಊರ್ವಶ್ಯಾಃ ಪ್ರತಿಕೃತಿಂ ಚಿತ್ರಫಲಕೇ ಅಭಿಲಿಖ್ಯ ಆಲೋಕಯನ್ನಾತ್ಮಾನಂ ವಿನೋದಯತು"—"ನಿದ್ರೆಮಾಡಿ ಸ್ವಪ್ನದಲ್ಲಿ ಊರ್ವಶಿಯನ್ನು ನೋಡಬಹುದು. ಅಲ್ಲವಾದರೆ ಆ ಊರ್ವಶಿಯ ಚಿತ್ರವನ್ನು ಹಲಗೆಯಲ್ಲಿ ಬರೆದು ಆಕೆಯನ್ನು ನೋಡಿ ಮನಃಶಾಂತಿಯನ್ನು ತಂದುಕೊಳ್ಳಬಹುದು" ಎನ್ನುತ್ತಾನೆ.

ಕಾಳಿದಾಸನ ಇನ್ನೊಂದು "ಮಾಲವಿಕಾಗ್ನಿ ಮಿತ್ರವು" ಒಂದು ಚಿತ್ರವನ್ನು ತೆಗೆದುಕೊಂಡೇ ಪ್ರಾರಂಭವಾಗುತ್ತದೆ. ಅಗ್ನಿಮಿತ್ರನು ಚಿತ್ರಶಾಲೆಯಲ್ಲಿ ಮಾಲವಿಕೆಯ ಚಿತ್ರವನ್ನು ನೋಡಿ ಅವಳ ಸೌಂದರ್ಯಕ್ಕೆ ಮೋಹಿತನಾಗುತ್ತಾನೆ. ಇದಲ್ಲದೆ ಶಾಕುಂತಳದಲ್ಲಿ ಚಿತ್ರಕಲೆಯ ವರ್ಣನೆಯಿದೆ. ಪ್ರಾಚೀನ ಸಾಹಿತ್ಯವನ್ನವಲೋಕಿಸಿದರೆ ನಮ್ಮ ಚಿತ್ರಕಲೆಯು ಅತ್ಯುನ್ನತಾವಸ್ಥೆಗೆ ಮುಟ್ಟಿತ್ತೆಂಬುದು ಖಂಡಿತವಾದ ಮಾತು. ನಮ್ಮ ಪ್ರಾಚೀನ ಚಿತ್ರಕಲೆಯನ್ನು ನೋಡಬೇಕಾದರೆ ಕರ್ನಾಟಕದ ಉತ್ತರ ಭಾಗದ ಅಜಂತೆಯನ್ನು ನೋಡಿದರೆ ಸಾಕು. ಭಗವಾನ್ ಬುದ್ಧದೇವನ ಶಿಷ್ಯರ ಚಿತ್ರಕಲಾತಪಸ್ಸು ಇಂದಿಗೂ ಅಲ್ಲಿ ವಿರಾಜಿಸುತ್ತಿದೆ.

ಹಿಂದುಸ್ಥಾನದ ಪ್ರಥಮ ಅಂಚೆಚೀಟು

ಸನ್ ೧೮೫೪ನೇ ಇಸವಿಯಲ್ಲಿ ಸಿಂಧ್‌ಪ್ರಾಂತ್ಯದಲ್ಲಿ ಅಂಚೆ ಸುಧಾರಣೆಯೊಂದು ಆಯಿತು. ಪತ್ರಗಳನ್ನು ಒಂದು ಊರಿನಿಂದ ಇನ್ನೊಂದು ಊರಿಗೆ 'ರನ್ನರರು' ತೆಗೆದುಕೊಂಡು ಹೋಗಿ ಹಣವನ್ನು ಪಡೆಕೊಳ್ಳುತ್ತಿದ್ದರು. ಅಲ್ಲಿಯ ಹಳ್ಳಿಗಳನ್ನೂ ಪಟ್ಟಣಗಳನ್ನೂ ಜಿಲ್ಲೆಯ ಕೇಂದ್ರ ಸ್ಥಳಗಳೊಂದಿಗೆ ಸರಿಯಾದ ಸಂಬಂಧವನ್ನೂ ಬೆಳೆಸಬೇಕೆಂದಾಲೋಚಿಸಿದರು. ಅದರಲ್ಲೂ ಸರಕಾರಿ ನೌಕರರಿಗೆ ಇದು ಬಹಳ ಅವಶ್ಯವೆನಿಸಿತು. ಜಿಲ್ಲೆಯ ಮುಖ್ಯಾಧಿಕಾರಿ ಮತ್ತು ಇತರ ಊರುಗಳಲ್ಲಿನ ಅವರ ಕೆಳಗಿನ ನೌಕರರೊಳಗಿನ ವ್ಯವಹಾರವು ಸುಸೂತ್ರವಾಗಿ ನಡೆಸಬೇಕಾಯಿತು. ಆದರೆ ಇದನ್ನು ಸಾರ್ವಜನಿಕ ಉಪಯೋಗಕ್ಕೆ ಕಲ್ಪಿಸಿಕೊಡದಿದ್ದರೆ ನಷ್ಟವು ಬೀಳುವುದು. ಆಗ ಸಿಂಧದೇಶದಲ್ಲಿ ಮಿ. ಬಾರ್ಟಲ್ ಫ್ರೆರೆ ಇವರು ಕಮಿಶನರರಾಗಿದ್ದರು. ಅಂಚೆವೆಚ್ಚವು ಆದಷ್ಟು ಕಡಿಮೆಯಾಗಿ ಸರ್ವರಿಗೂ ಅನುಕೂಲವಾಗಿರುವಂತೆ ನಿರ್ಧರಿಸಿದರು. ಈ ಪರಿಸ್ಥಿತಿಯಿಂದಾಗಿ ಹಿಂದೂಸ್ಥಾನದಲ್ಲಿ ಮೊದಲನೆ ಸಲ ಅಂಚೆಖಾತೆಯಲ್ಲಿ ಅಂಚೆಚೀಟಿನ ಜನನವಾಯಿತು

ಎಡ್ವರ್ಡ್ ಲೀ ಕೂಫೆ ಎಂಬವರ ಸಹಾಯದಿಂದ 'ಸಿಂಧ್ ಡಿಸ್ಪ್ಯಾಕ್ಟ್ ಡೊಕ್' ಎಂಬ ಚೀಟನ್ನೂ ತಯಾರು ಮಾಡಿದರು. ಇದುವೇ ಹಿಂದೂಸ್ಥಾನದಲ್ಲಿ ಮೊದಲನೇ

ಬಾರಿ ನೋಡಿದ ಮತ್ತು ಉಪಯೋಗಿಸಿದ ಅಂಚೆ ಚೀಟು. ಅಲ್ಲಿ ಆಗ ಉಪಯೋಗಿಸಿದ ಜನರಿಗೆ ಅದು ಒಂದು ತಾಯಿತ ವೆಂಬಂತಾಯಿತು. ಇದುನೇ ಭಾವೀಜನಾಂಗಕ್ಕೆ 'ಅಂತರ' ವೆಂಬ ಬಂಧನದಿಂದ ಬಿಡುಗಡೆ ಮಾಡುವ ಚಿನ್ಹೆಯಾಯಿತು. ಈ ಚೀಟು ಸಾಧಾರಣ ಒಂದು ಅಂಗುಲದಷ್ಟು ದೊಡ್ಡದಾಗಿ ಉರುಟಾಗಿದ್ದಿತು. ಬಿಳಿ, ಕೆಂಪು ಮತ್ತು ನೀಲಿ ಬಣ್ಣಗಳಲ್ಲಿ ಈ ಚೀಟುಗಳನ್ನು ತಯಾರಿಸಿ ಅರ್ಧ ಆಣೆ ಕ್ರಯವನ್ನಿರಿಸಿದರು. ಪೋಲೀಸು ಮತ್ತು ರೆವಿನ್ಯೂ ಅಧೀಸರರಿಗೂ, ಹಳ್ಳಿಗಳಲ್ಲಿನ ಮುಖ್ಯಾಧಿಕಾರಿಗಳಿಗೂ ಸಾರ್ವಜನಿಕ ಉಪಯೋಗಾರ್ಥವಾಗಿ ಹಂಚಿಕೊಟ್ಟರು. ಮತ್ತು ಎಲ್ಲಾ ಕಡೆಗಳಲ್ಲಿ ಈ ಚೀಟುಗಳನ್ನು ಹಚ್ಚಿಸಿರುವ ಎಲ್ಲಾ ಪತ್ರಗಳನ್ನೂ ಸರಕಾರದವರು ಮುಟ್ಟಿಸುವರೆಂದು ಜಾಹೀರುಪಡಿಸಿದರು. ಈ ಅಧಿಕಾರಿಗಳೇ ಪತ್ರಗಳನ್ನು ಸ್ವೀಕರಿಸಿ ತಮ್ಮ ಆಫೀಸಿನ ಟಪ್ಪಾಲಿನೊಂದಿಗೆ ಕಳುಹಿಸಬೇಕೆಂದೂ ಗೊತ್ತುಪಡಿಸಲಾಯಿತು.

ಆದರೆ, ಮೊಟ್ಟಮೊದಲು ಇದು ಫಲಪ್ರದವಾಗಿ ಪರಿಣಮಿಸಲಿಲ್ಲ. ಶುರುವಿನ ವರ್ಷಾಂತ್ಯಕ್ಕೆ ಇಡೀ ಸಿಂಧ್ ಪ್ರಾಂತ್ಯದಲ್ಲಿ ಕೇವಲ ೭೦ ರೂಪ್ಯಾಗಳ ಅಂಚೆಚೀಟುಗಳು ಮಾರಲ್ಪಟ್ಟವು. ಜನರಿಗೆ ಹೊಸ ಮಾರ್ಪಾಟುಗಳ ಕಡೆಗೆ ಆಕರ್ಷಣೆ ಇಲ್ಲದಿರುವದೇ ಇದಕ್ಕೆ ಕಾರಣ. ಪತ್ರಗಳನ್ನೊಯ್ಯಲು ಇದು ಸುಲಭವಾದ ಉಪಾಯವಾದರೂ ಜನರಿಗೆ ಅಭ್ಯಾಸವಾಗುವದಕ್ಕೆ ಸ್ವಲ್ಪ ಸಮಯ ಬೇಕಾಗುವದು. ಈ ಅಪರಿಚಿತ ಚೀಟಿನ ಮಹತ್ವವೇನು? ಪತ್ರಗಳಿಗೆ ಇದನ್ನು ಅಂಟಿಸುವ ಗೂಢವಾದರೂ ಏನು? ಸರಕಾರಿ ನೌಕರರನ್ನು ಕೂಡಲೇ ಚುರುಕಾಗಿ ಮಾಡುವ ಶಕ್ತಿಯು ಇದರಲ್ಲಾವುದು? ಪತ್ರವು ನಿಶ್ಚಿತ ಗುರಿಗೆ ಮುಟ್ಟುವಂತೆ ಅದರೊಳಗೆ ಶಕ್ತಿಯನ್ನೂ ತುಂಬಬಲ್ಲುದೇ? ಇವೇ ಪ್ರಶ್ನೆಗಳು ಅನೇಕರನ್ನು ಮುಂಕುಮಾಡಿಬಿಟ್ಟವು.

ಈಚೆಗೆ, ಸರಕಾರಿ ನೌಕರರು ತಮ್ಮ ಕೆಲಸವನ್ನು ಮಾಡಿಕೊಳ್ಳುವುದೇ ಕಷ್ಟತಮವಾದಾಗ ಇದೊಂದು ಹೊಸ ಕೆಲಸದ ಹೊರೆಯು ತಮ್ಮ ಮೇಲೆ ಬಿದ್ದಿರುವುದೆಂದು ಅಸಮಾಧಾನವನ್ನು ಸೂಚಿಸಿದರು. ಅವರು ಈ ಚೀಟುಗಳನ್ನು ಮಾರಬೇಕು; ಚೀಟು ಅಂಟಿಸಿದ ಪತ್ರಗಳನ್ನೂ ಪಡೆಕೊಂಡು 'ಟಪ್ಪಾಲು ಪೆಟ್ಟಿಗೆ'ಗಳಾಗಬೇಕು; ಹಿತ್ವಾಳಿನಾಣ್ಯಗಳ ಅಂಚಿಗೆ ಶಾಯಿ ತಾಗಿಸಿ ಚೀಟುಗಳ ಮೇಲೆ ಒತ್ತಿ 'ಮೊಹರು'ಗಳಾಗಬೇಕು; ಕಡೆಗೆ ಆ ಪತ್ರಗಳನ್ನು ಕಳುಹಿಸಲು ಅವರೇ 'ಪೋಸ್ಟಾಫೀಸು'ಗಳಾಗಬೇಕು. ಅಲ್ಲದೆ ಇದು ತಮ್ಮ ಘನತೆಗೆ ಕುಂದು ಎಂಬದಾಗಿಯೂ ಅಸೂಯೆಯನ್ನು ಸೂಚಿಸಿದರು.

ಆದರೆ ಫ್ರೇರೆಯವರು ತಾವು ಕೈಕೊಂಡ ಈ ಉದ್ಯಮವು ಒಂದಲ್ಲ ಒಂದು ದಿನ ಒಳ್ಳೇ ಫಲಕಾರಿಯಾಗುವುದೆಂಬ ನಿಶ್ಚಿತಾಭಿಪ್ರಾಯ ಉಳ್ಳವರಾಗಿ ಮುಂದುವರಿದರು. ಜನರು ಅದರ ಯೋಗ್ಯತೆಯನ್ನೂ ಕಂಡು ಕೊಳ್ಳಬೇಕಾಗಿದೆ. ಟಪ್ಪಾಲನ್ನೊಯ್ಯುವ ಒಳ್ಳೇ ಸಾಧನಗಳನ್ನು ಕಲ್ಪಿಸಿದರು. ಚೀಟುಗಳನ್ನೂ ಹಚ್ಚಿಸದಿರುವ ಪತ್ರಗಳನ್ನೊಯ್ಯಕೂಡದೆಂದು ಅಪ್ಪಣೆಯನ್ನಿತ್ತರು. ಹೀಗಾಗಿ ಎರಡು ವರ್ಷಗಳಲ್ಲಿಯೆ ಮಾರಾಟವು ಹೆಚ್ಚಿ ಜನರು ಇದರ ಉಪಯೋಗವನ್ನು ಕಂಡುಕೊಂಡರು. ಈ ಚೀಟು ಜನರ ವಿನೋದಕ ಮಾತ್ರವಲ್ಲ- ಇದರ ಮಾರಾಟದಿಂದಲೇ ಟಪ್ಪಾಲು ಕೆಲಸವನ್ನು ಸುಸೂತ್ರವಾಗಿ ನಡೆಸಬಹುದೆಂದು ಇಡೀ ಹಿಂದೂದೇಶಕ್ಕೆ ತೋರಿಸಿಕೊಟ್ಟರು.

ಸುಧಾರಣಾಪಥದಲ್ಲಿರುವ ಇದರಲ್ಲಿ ಅಂತರವನ್ನು ಗಣಿಸದೆ, ಭಾರದ ಪ್ರಕಾರ ಚೀಟನ್ನು ಅಂಟಿಸಬೇಕಾಗಿ ಬದಲಾವಣೆಯನ್ನು ಮಾಡಿದರು. ದರವನ್ನಿಳಿಸಲು ಭಾರವನ್ನನುಸರಿಸಿ 'ಟಿಕೇಟು'ಗಳ ಮೂಲಕ ಪತ್ರಗಳನ್ನೊಯ್ಯಲು ಪ್ರಾರಂಭಿಸಿದರು. ಆದರೆ ಇದರ ಪ್ರಕಾರ ದರವು ಹೆಚ್ಚೆಂದು ಕಂಡುಬಂದು, ಕೆಲವೇ ಜನರು ಮಾತ್ರ ಪತ್ರಗಳನ್ನು ಬರೆಯುವುದನ್ನು ನೋಡಿ, ಅಂಚೆಚೀಟನ್ನೇ ಜಲಾವಣೆಯಲ್ಲಿರಿಸಬೇಕಾಗಿ ಮಸಗಂಡರು. ಇದರಿಂದ ಲೆಪ್ಪುಗಳನ್ನಿಡಲು ಸುಲಭವಾಗುವುದು. ಬಡವರಿಗೂ ಇದರ ಉಪಯೋಗವು ದೊರೆತು, ಹೆಚ್ಚೆಚ್ಚು ಜನರು ಇದನ್ನು ಪ್ರೋತ್ಸಾಹಿಸಿ, ಅಂಚೆ ಆದಾಯವನ್ನು ಹೆಚ್ಚಿಸಲು ಹವಣಿಸಿದರು. ಎರಡಾಣೆಯ ಚೀಟುಗಳನ್ನೂ ಜಲಾವಣೆ ಮಾಡಿದರು. ಇದು ಹಿಂದೂದೇಶದಲ್ಲಿ ಸಾಧ್ಯವಾಗುವುದೆಂದೂ ಫಲಪ್ರದವಾಗುವುದೆಂದೂ ಕಂಡುಬಂತು.

ಗಲಿಬಿಲರಲ್ಲಿ "ಪೋಸ್ಟಾಫೀಸು ಏಕ್ಟ್"ನ್ನೂ ಜ್ಯಾರಿಗೆ ತಂದು ಅಂಚೆಚೀಟುಗಳನ್ನೇ ಇಡೀ ಹಿಂದೂಸ್ಥಾನದಲ್ಲಿ ಪ್ರಚಾರಕ್ಕೆ ತಂದರು. ಇದು ಅಸಾಧಾರಣವಾದ ಜಯವನ್ನು ತಂದಿತು. ಈ ಜಯದಲ್ಲಿ "ಸಿಂಧ್ ಚೀಟು" ಇದರ ಪಾಲು ಅಷ್ಟಿಷ್ಟಲ್ಲ! ಈಗ ಬಳಕೆಯಲ್ಲಿಲ್ಲದಿದ್ದರೂ, ನೋಡಲು ಸಿಕ್ಕುವುದು ಕೂಡ ದುರ್ಲಭವಾದರೂ, ಅಂಚೆಯ ಚರಿತ್ರೆಯನ್ನು ತಿಳಿದವರು, ಇದರ ತೇಜೋಮಯ ಸಮಯವಿತ್ತು; ಇದು ಜನರ ರಾಜನಿಷ್ಠೆಯನ್ನು ತಿರುಗಿಕೂಡಿಸುವ ಒಂದು ಹೆಗ್ಗುರುತಾಗಿತ್ತು; ಇದರಿಂದಾಗಿ ನಿಮ್ನಭೇದವನ್ನು ಹೋಗಲಾಡಿಸಿ ಜನರನ್ನು ಮಿತ್ರತ್ವವೆಂಬ ಬಂಧನದೊಳಗ್ಗಿರಿಸಿದ ಇದನ್ನು ಪ್ರೀತಿಸಿ, ಚೆನ್ನಾಗಿ ಗೌರವಿಸಿದರು!

ಆಫ್ರಿಕದ ರಾಜಸಮಾಧಿಗಳ ರಹಸ್ಯ

ಆಫ್ರಿಕವು ಮಾನವವರ್ಗದ ಅತಿ ದೊಡ್ಡದಾದ ಸಮಾಧಿ ಎಂದು ಹೇಳುವರು. ಸಾವಿರಾರು ವರ್ಷಗಳ ಹಿಂದೆ, ರಾಜಮನೆತನದವರು ಮೃತಪಟ್ಟರೆ ಅವರ ಹೆಣಗಳು ಕೆಡದಂತೆ ಒಂದು ತರದ ಲೇಪವನ್ನು ಹಚ್ಚಿ, ವಸ್ತ್ರವನ್ನು ಸುತ್ತಿ, ಸಮಾಧಿ ಮಾಡುತ್ತಿದ್ದರು. ಅದರೊಂದಿಗೆ ಅವರ ಜೀವಮಾನದಲ್ಲಿ ಗಳಿಸಿಟ್ಟ ದ್ರವ್ಯವನ್ನೂ ಅರಮನೆ ಸಾಮಾನುಗಳನ್ನೂ ಇಟ್ಟು ಅಭೇದ್ಯವಾದ ದೊಡ್ಡದೊಡ್ಡ ಗೋರಿ (Pyramid)ಗಳನ್ನು ಕಟ್ಟುತ್ತಿದ್ದರು. ಇಂಥಾ ಅನೇಕ ರಾಜಸಮಾಧಿಗಳು ಇಂದಿನವರೆಗೂ ಅಭೇದ್ಯವಾಗಿಯೇ ನಿಂತು ಪ್ರಪಂಚದ ಅದ್ಭುತಗಳಲ್ಲೊಂದಾಗಿ ಮೆರೆಯುತ್ತಿವೆ. ಆದರೆ, ಕೆಲವು ಆಧುನಿಕ ಶಾಸ್ತ್ರಜ್ಞರು ಇಂಥಾ ಅನೇಕ ಸಮಾಧಿಗಳನ್ನು ಪರಿಶೋಧಿಸಿ, ಸಾವಿರಾರು ವರ್ಷಗಳಿಂದಲೂ ಒಂಚಿಷ್ಟೂ ಕೆಟ್ಟುಹೋಗದ ಹೆಣ (mummy)ಗಳನ್ನು ಕಂಡುಹಿಡಿದಿರುವರು. ಈ ಸಮಾಧಿಗಳ ಗುಪ್ತ ದ್ವಾರಗಳನ್ನು ಕಂಡುಹಿಡಿದೇ 'ಅಲಿಬಾಬರು' ದ್ರವ್ಯವನ್ನೂ ಶೇಖರಿಸಿದುದು!

ಚಿಯೋಪ್ಸ್‌ನೆಂಬ ಅರಸನು ತನ್ನ ಮಾತೆಯ ಹೆಣವನ್ನು ಕಳ್ಳರು ದ್ರವ್ಯಾಭಿಲಾಷೆಯಿಂದ ದೋಚಿಕೊಂಡು ಹೋದುದನ್ನು ಕಂಡು, ತನ್ನ ಸಮಾಧಿಯು ಎಂದೆಂದಿಗೂ ಅಭೇದ್ಯವಾಗಿ ನಿಲ್ಲಬೇಕೆಂದಾಲೋಚಿಸಿದನು. ೧,೦೦,೦೦೦ ಗುಲಾಮರನ್ನು ಮೂವತ್ತು ವರ್ಷಗಳ ಪರ್ಯಂತರ ಇದನ್ನು ಕಟ್ಟಿಸಲು ದುಡಿಯಿಸಿದನು. ಚರಿತ್ರೆಯಲ್ಲಿ ಅತೀ ದೊಡ್ಡದಾದ ಗೋಪುರವನ್ನು(Great Pyramid)ಕಟ್ಟಿಸಲು ತನ್ನ ಹಿರಿಯರು ಶೇಖರಿಸಿಟ್ಟ ಹಣವನ್ನೆಲ್ಲಾ ವೆಚ್ಚಮಾಡಿದನು. ಇತರ ರಾಜ್ಯಗಳ ಮೇಲೆ ದಂಡೆತ್ತಿ ಹೋಗಲಿಲ್ಲ. ತನ್ನ ಹೆಣವು ಯಾರಿಗೂ ಸಿಗದ ರೀತಿಯಲ್ಲಿ ಗೋಪ್ಯವಾಗಿಡುವ ಅಭೇದ್ಯವಾದ ಸಮಾಧಿಯನ್ನು ಕಟ್ಟಿಸುವುದರಲ್ಲೇ ನಿರತನಾಗಿ ತನ್ನ ಜೀವಮಾನವನ್ನು ಕಳೆದನು.

ಕಲ್ಲುಗಳನ್ನು ಕಡಿಯುವ ದೊಡ್ಡದೊಡ್ಡ ಗಣಿಗಳು ತೆರೆಯಲಾದುವು. ಗುಲಾಮರನ್ನು ಒಟ್ಟುಗೂಡಿಸಲಾಯಿತು. ಚಬುಕಿನಿಂದ ಪೆಟ್ಟುತಿನ್ನುತ್ತಾ, ಬಿಸಿಲಿನಲ್ಲಿ ಬೆವರನ್ನಿಳಿಸುತ್ತಲೇ ಸುಮಾರು ೪,೪೦,೦೦೦ ರಾತ್ಲು ಭಾರದ ಒಂದೊಂದು ಕಲ್ಲನ್ನು ಎಳೆದುತರುತ್ತಿದ್ದರು. ಈ ಗೋಪುರಕ್ಕೆ ೭೫,೦೦೦,೦೦೦ ಚದರಡಿ ಕಲ್ಲು ಬೇಕಾಯಿತು. ಭಾರವು ಸುಮಾರು ಆರುವರೆ ಮಿಲ್ಲಿಯ ಟನ್ನುಗಳಿಗೂ ಮಿಕ್ಕಿದೆ. ಹೀಗಿದ್ದು, ಆಧುನಿಕ ಇಂಜಿನಿಯರರು ತಲೆದೂಗುವಂತಿದ್ದುದೇನೂ ಆಶ್ಚರ್ಯವಲ್ಲ! ಪ್ರಪಂಚದ ಸಪ್ತಾಶ್ಚರ್ಯಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟುದೇನೂ ವಿಶೇಷವಲ್ಲ!!

ನಿಪುಣರಿಗೂ ಅದರ ಬಿರುಕುಗಳು ಕೂಡ ತಿಳಿಯದ ರೀತಿಯಲ್ಲಿ ಈ ಗೋರಿಯು ಕಟ್ಟಲ್ಪಟ್ಟಿದೆ. ಅದರ ದ್ವಾರವು 45 ಅಡಿ ಎತ್ತರಕ್ಕಿದೆ. ಒಂದು ತಲೆಮೊಳೆಯ ಮೇಲೆ ತೂಗಾಡುವ ದೊಡ್ಡ ಕಲ್ಲು ಒಳಕ್ಕೆ ಹೋಗುವಂತೆ ಮಾಡಿದರೆ ದ್ವಾರವು ಮುಚ್ಚಿ ಸಂದು ಕೂಡ ತಿಳಿಯದಂತಿರುವುದು. ಈ ಸಮಾಧಿಯೊಳಗಣ ದ್ರವ್ಯದ ಅಭಿಲಾಷೆಗಾಗಿ ಅನೇಕ ದರೋಡೆಕಾರರು ಪ್ರಯತ್ನಿಸಿದರು. ಕೊನೆಗೆ ಒಬ್ಬನು ಯಶಸ್ವಿಯಾಗಿ ಅದರ ದ್ವಾರವನ್ನು ಮಾತ್ರ ಕಂಡು ಹಿಡಿದನು. ಆದರೆ ಈ ಅರಸನ ಶವದ ಪೆಟ್ಟಿಗೆಯನ್ನು ಕಂಡು ಹಿಡಿದಿದ್ದಾನೋ ಇಲ್ಲವೋ ಎಂದು ಹೇಳಲಸಾಧ್ಯ. ಏಕೆಂದರೆ ದ್ವಾರದ ಬಳಿಯಲ್ಲೇ 350 ಅಡಿ ಉದ್ದದ ಕತ್ತಲೆಯ ಸುರಂಗ ಮಾರ್ಗವು ಆ ಗೋರಿಯ ಅಡಿಗಲ್ಲಿನ ಕೆಳಗಿಂದ ಹಾದು ಹೋಗುವುದು. ಇನ್ನೊಂದು ಕಡೆಯಲ್ಲಿ ಬಂಡೆಯ ಅಡಿಯಿಂದ 50 ಅಡಿ ಉದ್ದದ ಗವಾಕ್ಷಿ ಇರುವುದು. ಆದರೆ ಇದು ಕಳ್ಳರನ್ನು ಹಾದಿತಪ್ಪಿಸಲು ಮಾತ್ರವೆಂದು ತೋರುವುದು. ಈ ದೊಡ್ಡ ಸುರಂಗ ಮಾರ್ಗದ ಕೊನೆಯಲ್ಲಿ ಹೊಗಿನ ದ್ವಾರದಂತೆಯೇ ಒಂದು ದ್ವಾರವಿದ್ದು ಅದರಂತೆ ಮುಚ್ಚಬಲ್ಲುದು. ಇಲ್ಲಿ ಒಬ್ಬ ಅರಸನ ಸಮಾಧಿ ಇರುವುದು ಇಲ್ಲಿಯೂ ಭ್ರಮೆಗೊಳಿಸುವ ಒಂದು ದೊಡ್ಡ ಕಲ್ಲು ಇರುವುದು. ಇದನ್ನು ಕೂಡ 'ಗೋರಿ ಕಳ್ಳರು' ಭೇದಿಸಿ, ಅರಸನ ಕೊಠಡಿಯನ್ನು ಹೊಕ್ಕಿ, ಚಿಯಾಪ್ಸ್‌ನ ದೇಹವನ್ನೂ ಅದರೊಂದಿಗೆ ಹುಗಿದಿಟ್ಟ ದ್ರವ್ಯವನ್ನೂ ಅಪಹರಿಸಿಕೊಂಡು ಹೋದರು. ದೇಹದ ಮೇಲಿದ್ದ ದ್ರವ್ಯವನ್ನು ತೆಗೆದ ಮೇಲೆ ಅದನ್ನು ಎಲ್ಲಿಯೋ ಮರುಭೂಮಿಯಲ್ಲಿ ಅಲಕ್ಷ್ಯದಿಂದ ಹುಗಿದಿಟ್ಟಿರಬೇಕು. ತನ್ನ ಜೀವಮಾನದಲ್ಲಿ ಸಾವಿರಾರು ಜೀವಂತ ಜನರ ಮಾಂಸವನ್ನೂ ರಕ್ತವನ್ನೂ ತನ್ನ ಮಹಾ ದೊಡ್ಡ ಗೋರಿಯನ್ನು ಕಟ್ಟಿಸಲು, ಸವೆಯಿಸಿದ ಈ ಅರಸನಿಗೆ ನಿಂದಾಜನಕ ಅಂತ್ಯವಿದು! ಆದರೂ ಆಫ್ರಿಕದ ಮರಳು ಮೃತಶರೀರವನ್ನು ಕೆಡದಂತಿಡುವಂತೆ ಪ್ರಪಂಚದಲ್ಲಿ ಆತ ಹೆಚ್ಚಾದ ಶಕ್ತಿಯುಳ್ಳವರಿಂದ, ಚಿಯೋಪ್ಸನ ಜಡ ದೇಹವು ಒಂದಲ್ಲ ಒಂದು ದಿನ ಸಿಗಬಹುದೆಂಬ ಭರವಸೆಯನ್ನು ಇನ್ನೂ ಬಿಡಲಾಗುವುದಿಲ್ಲ!

ಒಂದು ಚಿತ್ರ

(ಬರೆದುದು—ಭಾರತೀಸುತ.)

೧.

(ರಾಜಪ್ರಾಸಾದದಲ್ಲಿ)

'ಜೀವನ!'

'ಅನ್ನದಾತಾ!'

'ನಾನಾರು?'

'ಮಹಾರಾಜಾಧಿರಾಜ.'

'ಮಹಾರಾಜಾಧಿರಾಜ?'

'ಅಹುದು, ಅನ್ನದಾತಾ! ಮಹಾರಾಜಾಧಿರಾಜ.'

'ಅಲ್ಲ. ಜೀವನ! ನೀನು ತಪ್ಪಾಗಿ ತಿಳಿದುಕೊಂಡಿದ್ದಿ. ನಿಜ ಹೇಳು. ನಾನಾರು?'

'ನಿಜ ಹೇಳುತ್ತೇನೆ. ಶ್ರೀಮಾನ್! ನೀವು ಈ ದೇಶದ ನರೇಶರು, ಮತ್ತು ಈ ಪ್ರದೇಶವು ನಿಮ್ಮ ಶಾಸಿತ ಪ್ರಜೆಯು.'

'ಸುಳ್ಳು, ಜೀವನ! ಖಂಡಿತ ಸುಳ್ಳು..... ಇರಲಿ. ನೀನಾರು?'

'ನಾನೇ? ಒಡೆಯ! ನಿಮ್ಮ ದಾಸ.'

'ಮತ್ತು?'

'ಮತ್ತು ನಿಮ್ಮ ಪ್ರಜೆ; ಈ ರಾಜ್ಯದ ಆಶ್ರಿತ'

'ಮತ್ತು?'

'ಮತ್ತು, ಅನ್ನದಾತಾ! ಮನುಷ್ಯ!'

'ಇದು ಸರಿ. ಆದರೆ ನಾನು ಮನುಷ್ಯನಲ್ಲವೆ?'

'ಯಾಕೆ ಅನ್ನದಾತಾ?'

'ನೀನು ಮನುಷ್ಯನಾಗಿದ್ದಿ; ಆದರೂ ಅಗಿರುವಿ ನನ್ನ ಸೇವಕ! ಈಗ ನಾನು ನಿನ್ನ ಆಕಾಂಕ್ಷೆಗಳ, ನಿನ್ನ ಆತ್ಮ ಸನ್ಮಾನದ, ಪರವೆಯನ್ನು ನಾನೆಣಿಸುವುದಿಲ್ಲವಾದರೆ, ನೀನೇನು ಮಾಡುವಿ?'

'ಅಂತಾದರೆ, ಅನ್ನದಾತಾ! ನಾನು ನಿಮ್ಮ ಆಶ್ರಯವನ್ನು ತ್ಯಜಿಸುವೆನು.'

'ಸಾಕು. ಇದೇ ಅಲ್ಲವೇ ಮನುಷ್ಯತ್ವ? ನಾನು ನಾಮಧಾರೀ ನರೇಶನಾದರೂ, ನಿನ್ನ ಆಕಾಂಕ್ಷೆ, ಆತ್ಮ ಸನ್ಮಾನಗಳ ರಕ್ಷಣೆಮಾಡಲಾರೆ!'

ಜೀವನನು ಅರಸನ ಮೊಗವನ್ನು ಟಕಮಕನೆ ನೋಡ ಹತ್ತಿದ.

'ಜೀವನ!'

'ಅನ್ನದಾತಾ!'

'ಈ ಆಂಗ್ಲರೆಂದರಾರು?

'ಮನುಷ್ಯರು, ಒಡೆಯ!'

'ಅಲ್ಲ. ಅವರು ಅರಸರಾಗಿದ್ದಾರೆ. ಮಹಾರಾಜಾಧಿರಾಜರಾಗಿದ್ದಾರೆ.'

ಜೀವನನು ಮೌನವಾಗಿದ್ದ.

ಅರಸನು ಕ್ಷಣಕಾಲದ ಮೇಲೆ ಪ್ರಶ್ನಿಸಿದ. 'ಜೀವನ! ಈ ಅರಸರು ಸಹ ಯಾವ ಪ್ರಕಾರದಿಂದಲಾದರೂ ಮನುಷ್ಯರಾಗಬಲ್ಲರೇ?'

ಜೀವನನ ಮಂತ್ರಿತ್ವವು ಆ ಪ್ರಶ್ನೆಯ ಉತ್ತರಕ್ಕೆ ಅಪರ್ಯಾಪ್ತವಾಗಿ ಹೋಗಿತ್ತು.

ರಾಜನು ಪುನಃ ಕೇಳಿದ. 'ಈ ರಾಜ್ಯಭಾರವನ್ನು ತ್ಯಜಿಸಿ, ಅರಸರು ಮನುಷ್ಯರಾಗಬಲ್ಲರಾದರೆ ಎಷ್ಟು ಚೆನ್ನಾಗಿತ್ತು! ಸರ್ವಸಾಧಾರಣವಾಗಿ ಉನ್ಮತ್ತ ಅಧಿಕಾರಗಳ ನೀಚ ಅರಸರ ಮನುಷ್ಯತ್ವವು ಬಹುಶಃ ಚೂರುಚೂರಾಗಿ ಹೋಗಿದೆ. ಇದೆಂದಾದರೂ ಪುನಃ ಜೀವಗೊಳ್ಳುವ ಆಸೆಯಿದೆಯೇ?'

ಜೀವನನು ಇನ್ನೂ ಮೌನವಾಗಿರಲಸಮರ್ಥನಾದನು. ತನ್ನ ಸ್ವಾಮಿಯ ಆಂತರಿಕ ವೇದನೆಯನ್ನು ಕಂಡು ಅತನ ಮನವು ತಳಮಳಗೊಂಡಿತು. ಅವನೆಂದ: 'ಅನ್ನದಾತಾ! ಇದೆಮ್ಮ ದುರ್ಭಾಗ್ಯ. ನಾವು ಮನುಷ್ಯರಾಗಿದ್ದೂ ನಮ್ಮೊಡೆಯನ ರಕ್ಷಣೆಯನ್ನು ಮಾಡಲಾರೆವು.'

'ಏನು? ಅದಕ್ಕೇನಾದರೂ ನಿರಸನೋಪಾಯವಿಲ್ಲವೇ?'

'ಇಲ್ಲ. ಅನ್ನದಾತಾ!'

'ಹಾಗಾದರೆ?'

'ಕೇವಲ ಮೌನದಿಂದ ಈ ಪದವಮರ್ಯಾದೆಯ ವೇದನೆಗಳಿಂದ ಪಾರುಗೊಂಡು ಹೋಗುವುದು, ಇಂದಿನ ಅರಸರ ಕರ್ತವ್ಯ.'

ಅರಸನೊಮ್ಮೆ ತೀಕ್ಷ್ಣದೃಷ್ಟಿಯನ್ನು ಜೀವನನ ಮೇಲೆ ಬೀರಿದ.

೨.

'ಸಂತೋಷ!'

'ಮಹಾರಾಜಾಧಿರಾಜ!'

'ಈಗ ಎಲ್ಲಿರುವಿ?'

'ತ್ರೀವಾಸ'! ಇಲ್ಲಿಂದ ದೂರ ಪಶ್ಚಿಮದಲ್ಲಿ.'

'ಎಂದಿನಿಂದ?'

'ಮೊಗಲರ ಶಾಸನದ ತರುವಾಯ ಅತ್ತ ನಡೆದಿದ್ದೆ.'

'ಏಕೆ?'

'ನನಗಿಂತೇ ರಾಜಾಜ್ಞೆಯಿತ್ತು. ಮತ್ತು ಅನುದಿನವೂ ಇಲ್ಲಿನ ಮಾನಸಿಕ ಯಾತನೆಗಳಿಂದ ನನಗಿಲ್ಲಿ ಶ್ವಾಸಬಿಡುವುದೂ ಕಷ್ಟವಾಗಿತ್ತು.'

'ಮತ್ತಲ್ಲಿ?'

'ಅಲ್ಲಿ, ಮಹಾರಾಜಾಧಿರಾಜ! ನನ್ನದೇ ಏಕಾಧಿಪತ್ಯವಾಗಿತ್ತು. ಕೆಲವು ರಾಜನೀತಿಜ್ಞರ ಶಾಸನಗ್ರಹಗಳನ್ನು ಬಿಟ್ಟು; ಉಳಿದ ಸಂಪೂರ್ಣ ಜನತೆಯ ಮೇಲೆ ನನ್ನ ವರ್ಚಸ್ಸಿತ್ತು. ಕೇವಲ ಸೈನಿಕರ ಸಾಮ್ರಾಜ್ಯರಕ್ಷಣೆಯ ಸಮಯದಲ್ಲಿ ನನಗೆ ಅಲ್ಪ ಅವಕಾಶವು ಸಿಗುತಿತ್ತು. ಆ ಸಮಯವು ಮನುಷ್ಯೋಚಿತ ಆಕಾಂಕ್ಷೆಗಳ ಅಧ್ಯಯನಮಾಡುವುದರಲ್ಲಿ ಕಳೆದುಹೋಗುತಿತ್ತು.'

'ಹಾಗಾದರಿಲ್ಲಿಗೇಕೆ ಬಂದೆ?'

'ರಾಜಾಜ್ಞೆಯು ದೊರಕಿದೆ, ಸ್ವದೇಶಕ್ಕೆ ನಿರ್ಗಮಿಸಲು. ನಾನು ಹೋದುದರಿಂದ ಬ್ರಿಟಿಷ್ ಜನತೆಯ ಸೊಕ್ಕು ತಲೆಗೇರಿದೆಯಂತೆ. ಆದರಿಂದ ಅವರ ರಾಜನೈತಿಕ ಉದ್ದೇಶಗಳಲ್ಲಿ ಶಿಥಿಲತೆಯುತ್ಪನ್ನವಾಗಿದೆಯಂತೆ.'

'ಇಲ್ಲೇನು ಕೆಲಸವನ್ನು ಮಾಡುವಿ?'

'ತಮ್ಮ ಸೇವೆ. ಈ ರಾಜನೈತಿಕ ಅಸಂತುಷ್ಟಿಯ ವಿನಾಶ.'

'ಕಠಿಣದಂಡನೆಯು ದೊರಕಿದೆಯೇ?'

'ಅಹುದು. ಅದು ಕಾರಣದಿಂದಲೇ ಇತ್ತ ಬಂದೆ. ನೀವೇ ನನ್ನ ರಕ್ಷಣೆಯನ್ನು ಮಾಡಿರುವಿರಿ, ಆದರೆ ರಾಜನೀತಿಯೇ ನನಗೆ ವಿರೋಧವಾಯಿತು.'

'ಹಾಗಾದರೆನ್ನ ನಲ್ಮೆಯ ಗೆಳೆಯ! ಇಲ್ಲೇ ಅಭಯನಾಗಿ ಇರು. ಇಲ್ಲಿನ ಸರ್ವಸ್ವವನ್ನು ಪಾಶ್ಚಿಮಾತ್ಯರು ಸೆಳೆದುಕೊಂಡು ಹೋಗುತ್ತಿರೆ, ನಾವು ನಿನ್ನ ಸಹಾಯದಿಂದ ಅವನ್ನು ಪುನಃ ವಶಪಡಿಸಿಕೊಳ್ಳುವೆವು.'

ಸಂತೋಷ ಗದ್ಗದನಾಗಿ ಮಹಾರಾಜಾಧಿರಾಜನ ಚರಣತಲದಲ್ಲಿ ಬಿದ್ದ.

೩.

'ಜೀವನ!'

'ಅನ್ನದಾತಾ!'

'ಹಿಂದಿನ ಗಲಭೆಯಿಲ್ಲಿಗಿಲ್ಲ.'

'ಇಂದಿನ ಅರಸರಿಗೆ ಗಲಭೆಯಿರಲು ಕಾರಣವೇ ಇಲ್ಲ. ಅನ್ನದಾತ!'

'ಏಕೆ?'

'ಈ ಬ್ರಿಟಿಷರು ಶಾಸನವೆಂಬ ಆವ ವಸ್ತುವನ್ನು ಸಿದ್ಧಪಡಿಸಿರುವರೋ, ಅದರ ಮೂಲವು ಸ್ವಾರ್ಥವೇ ಆಗಿದೆ. ಅನಂತವಿಲಾಸಲಾಲಸೆಗಳ ಗಾಳಿಯು ವಿಲಾಯತಿಯಿಂದಲೇ ಬೀಸಲಾರಂಭಿಸಿದೆ.'

'ಹಾಗಾದರಿವಕ್ಕೆ ಅಂತವಿಲ್ಲವೇ?'

'ಇದೆ. ಅದು ಭವಿಷ್ಯದ ಗರ್ಭದಲ್ಲಿದೆ.'

'ಹಾಗಾದರೆ ಧರ್ಮರಕ್ಷಣೆ, ಪ್ರಜಾಪಾಲನೆ ಮುಂತಾದುವು?'

'ಅನ್ನದಾತಾ! ಅವುಗಳೆಲ್ಲ ಹೆಸರಿಂದ ಮಾತ್ರ ದೊಡ್ಡದಾಗಿವೆ. ಆದರೆ ವ್ಯವಹಾರದಲ್ಲಿ ರೂಪಾಂತರಿತವಾಗುತ್ತವೆ.'

'ಹಾಗಾದರೆ ಅಶಾಂತಿಯು ಹೆಚ್ಚಬೇಕಿತ್ತು.'

'ಅವನ್ನು ಇಲ್ಲದಂತೆ ಮಾಡಲು ಈ ನವೀನಯುಗವು ಅನೇಕ ಸಾಧನೆಗಳನ್ನು ಕಂಡುಹಿಡಿದಿದೆ. ಪ್ರಾರಂಭಿಕ ಶಿಕ್ಷೆಯೆಂಬ ಪದಾರ್ಥವನ್ನು ರಾಜಕುಮಾರರ ಗಂಟಲಿಂದ ಕೆಳಗಿಳಿಸುವ ಸಮಯದಲ್ಲಿ, ರಾಜ್ಯದ ಮಹಿಮೆಯು ಕಂಠಸ್ಥವಾಗುತಿತ್ತು. ಇನ್ನೂ ತಿಳಿಯದಾದರೆ ವಿಲಾಯತಿಯ ಯಾತ್ರೆಯು ಸಂಪೂರ್ಣವಾಗಿ ತಿಳಿಸುತ್ತದೆ.'

'ಹಾಗಾದರೆ ಏಲಾಯತಿಗೆ ಹೋಗಿ ಬರೋಣವೇ?'

'ಅವಶ್ಯ! ಅನ್ನದಾತಾ! ರೋಗವು ಈಗ ಇಲ್ಲವಾದರೂ, ಮುಂದೆ ಬಾರದಿರುವುದೆಂಬುದರ ಧೈರ್ಯವಿಲ್ಲ.'

೪.

(ಇಂಗ್ಲಾಂಡಿನಲ್ಲಿ)

'ವಿಜ್ಞಾನ!'

'ಅನ್ನದಾತಾ!'

'ನೀನು ಈ ಯುರೋಪಿನ ಮೇಲೆ ಅಧಿಕ ಮಮತೆಯನ್ನು ತೋರಿ, ಪಕ್ಷಪಾತವನ್ನು ಮಾಡಿದಿ?'

'ಶ್ರೀಮಾನ್! ನಿಮ್ಮ ದೇಶದಲ್ಲಿ ನನ್ನ ನಿರ್ವಾಹವು ಸಾಗದುದರಿಂದ.'

'ಏಕೆ?'

'ನಾನು ಸ್ವತಂತ್ರಭೂಮಿಯಲ್ಲೇ ಹುಟ್ಟಿ ಬೆಳೆಯತಕ್ಕವನು.'

* * * *

'ಮತ್ತು ಪೌರುಷ! ನೀನು?'

'ನಾನು, ಅನ್ನದಾತಾ! ನಿಮ್ಮ ದೇಶದಲ್ಲಿ ಚಿರಕಾಲವಸಿಸುವೆನು. ಇದು ನನ್ನ ಪೂರ್ವದ ಮನೆ. ಆದರೆ ಇತ್ತ ಈ ಜನರಿಗೂ ನನಗೂ ಸರಿಯಿಲ್ಲ.'

'ಏಕೆ?'

'ನನ್ನ ಮತ್ತು ಅವರ ಸ್ವಭಾವವು ಭಿನ್ನವಾಗಿರುತ್ತದೆ.'

'ಎಂದು ಒಂದಾಗುವುದು?'

'ಭಗವಂತನೇ ಬಲ್ಲ.'

* * * *

'ಮತ್ತು ಸಾಹಸ! ನೀನು?'

'ನನ್ನ ಕ್ರಯವು ಅಧಿಕವಾಗಿರುತ್ತದೆ. ತಮಗೆ ಕ್ರಯ ಕಟ್ಟುವುದು ಸಾಧ್ಯವಿಲ್ಲ.'

'ಏನು ಕ್ರಯ?'

'ನಿಮ್ಮಂತಹ ದೀನಹೀನರಿಗೆ ಒಪ್ಪುವ ಮಾತಲ್ಲ ಅದು.'

'ಅದರೂ?'

'ಜೀವನದ ಲೋಭದ ನಿಸರ್ಜನ.'

* * * *

'ರಾಷ್ಟ್ರೀಯತಾ! ನೀನು?'

'ನಾನೇ?'

'ಅಹುದಹುದು ದೇವಿ!'

'ಸ್ವಾತಂತ್ರ್ಯಲಾಲಸೆಯೇ ಮುಖ್ಯವಾಗಿದೆ ನನಗೆ. ತಮಗೆ ನನ್ನ ಅವಶ್ಯಕತೆಯಿಲ್ಲ. ಬೇಕಾದಾಗ ಬರುವೆನು.'

* * * *

'ಮತ್ತು ಸ್ವಾಸ್ಥ್ಯ! ನೀನು?'

'ನಾನು ಗುಲಾಮನಂತಿರುವ ದೇಶದ ನೆರಳನ್ನೂ ಒಪ್ಪಲಾರೆ. ಶಾಸಿತಜಾತಿಗೂ ನನಗೂ ಬದ್ಧವೈರ.'

* * * *

'ಜೀವನ!'

'ಅನ್ನದಾತಾ!'

'ಈ ಯಾತ್ರೆಯೂ ಸಫಲವಾಗಲಿಲ್ಲ.'

'ಅದೇನು? ಅನ್ನದಾತಾ!'

'ಇವೆಲ್ಲಾದರಲ್ಲಿ ಒಂದಾದರೂ ನಮ್ಮೊಂದಿಗೆ ಬರುವುದಿಲ್ಲ.'

'ಅವು ಬರದಿದ್ದರೆ ಚಿಂತೆಯೇನು?'

'ಯಾರಾದರೂ ಮಿತ್ರರಿಗೆ ಸರದಾರರಿಗೆ ಕೊಡಲಿಕ್ಕೆ.'

'ಅವೆಲ್ಲವನ್ನೂ ಕೊಂಡಿದ್ದೇವೆ.'

'ಏನು?'

'ಫ್ಯಾಶನು!'

'ಮತ್ತು?'

'ವಿಲಾಸ!'

'ಮತ್ತು?'

'ವಾಸನೆಗಳು!'

'ಮತ್ತು?'

'ಅವುಗಳನ್ನುಪಯೋಗಿಸುವ ಬುದ್ಧಿ.'

'ಇವುಗಳಿಂದೇನು?'

'ಇವುಗಳನ್ನಿಲ್ಲಿಂದಲೇ ಕಲಿಯತಕ್ಕದ್ದು, ಅನ್ನದಾತಾ! ಇವನ್ನು ಕಲಿಯಲಿಕ್ಕೆಂದೇ ಶ್ರೀಮಂತಯುವಕರು ಇತ್ತ ಬರುತಿದ್ದಾರೆ.'

'ಇವುಗಳನ್ನೆಲ್ಲಾ ಕಲಿಸುವವರಾರು?'

'ಇಲ್ಲಿನ ಸುಂದರಿಯರು ತಮ್ಮ ಮೃದುಭಾಷಣಗಳಿಂದ ಮೃದು ವ್ಯವಹಾರಗಳಿಂದ ಈ ಭವ್ಯಸಭ್ಯತೆಯ ಪಾಠವನ್ನು ಸಫಲತೆಯಿಂದ ಕಲಿಸುತ್ತಾರೆ. ಮತ್ತು ಅದರಿಂದಲೇ ಈ ಹೃದಯಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ.'

'ಅಂತಾದರೆ ಸರಿ. ಜೀವನ! ಆ ದೇಶಕ್ಕೆ ಕರಕೊಂಡು ಹೋಗುವುದೇ ಎಲ್ಲಾದಕ್ಕಿಂತಲೂ ಉಪಕಾರಕರವಾದ ಕೆಲಸ'

(ಹಿಂದೀ ಮಾಸಿಕವೊಂದರಿಂದ)

ಸ್ವಾತಂತ್ರ್ಯವೆಲ್ಲಿ?

೧

ನಸುಕಿನ ಸಮಯದಿ
ಭಾವದ ಬಯಲಲಿ
ವಿಂಚಿತು, ಮೂಡಿತು ಬಗೆಯೊಂದು.
'ಭಾರತೀಯ ಸ್ವಾತಂತ್ರ್ಯದೇವಿಯು
ಇಂದವಳಡಗಿಹಳೆ'ಲ್ಲಿಂದು.

೨

ಅಮ್ಮನ ಕೇಳಿದೆ,
ಅಣ್ಣನ ಕೇಳಿದೆ
ಪೂಜ್ಯಪಿತನ ನಾ ಪ್ರಶ್ನಿಸಿದೆ.
ತಲೆಯನು ತೂಗುತ ನಗುತಲಿ ಸರ್ವರು
ನುಡಿದರು. 'ನಾವರಿಯೆವದನ್ನು.'

೩

ವೆಂಕಟರಮಣನ
ಗುಡಿಯರ್ಚಕನ
ಬಳಿಗೈ ತಂದೆ'ಲೆ ಅರ್ಚಕನೇ!
ನಿನ್ನಯ ದೇವರ ಗರ್ಭದ ಗುಡಿಯೊಳು
ವಸಿಸಿಹುದೇನೈ ಸ್ವಾತಂತ್ರ್ಯ?"

೪

ದೇಗುಲದೊಡೆಯರ
ಸನ್ನಿಧಿಗೋಡಿದೆ.
'ಪೂಜ್ಯರೆ! ಭವ್ಯ ರುಮಾಳಲ್ಲಿ
ನಿಡಿದಾಗಿರುವಾವಣದ ಬೆಡಗಲಿ
ಅಡಗಿಹುದೇನೈ ಸ್ವಾತಂತ್ರ್ಯ?'

೫

ಕಿಲಕಿಲ ನಕ್ಕನು
ಬಳಿಕಿಂತೆಂದನು
'ಇಲ್ಲೆಲ್ಲಿರುವುದು ಸ್ವಾತಂತ್ರ್ಯ?
ದೇಗುಲದೊಡೆಯರಧೀನನು ನಾನು
ಮೂರ್ತಿಯು ಎನ್ನಯ ಕೈಯೊಳು'.

೬

'ಇಲ್ಲಿಲ್ಲೆ'ಂದರು;
ಹಾಸ್ಯವ ಗೈದರು;
ನಾಚಿಕೆಯಿಂ ನಾ ಧಾವಿಸಿದೆ.
ಅತ್ತಲು ಹುಡುಕಿದೆ; ಸುತ್ತಲು ಅರಸಿದೆ;
ಆದರೂ ಕಾಣೆನು ಸ್ವಾತಂತ್ರ್ಯ.

೭

ಗೊಂಡಾರಣ್ಯದಿ
ತಪವನು ಗೈಯುತ
ಕುಳಿತಿಹ ಮುನಿವರನರಸುತಲಿ,
ಭಕ್ತಿಯ ಭಾವದಿ, ವಿನಮಿಸಿ ಕೇಳಿದೆ.
'ಎಲ್ಲಿದೆ, ಪೂಜ್ಯರೆ! ಸ್ವಾತಂತ್ರ್ಯ?"

೮

ಕಣ್ಣುಗಳರಳಿಸಿ
ಶಾಂತಿಯ ಭಾವನಿ
ನಗುತಲಿ ಮುನಿವರರುಹಿದರು.
ಐಕಮತ್ಯದಾ ಬಂಧನದೊಳಗಿದೆ
ನೀನರಸುತಲಿಹ ಸ್ವಾತಂತ್ರ್ಯ'.

—ಭಾರತೀಸುತ.

ಜಾಗ್ರತೆ

(ಕರ್ತೃಗಾರರು:—ಶ್ರೀ। ಜಿ. ಶಿಶುಪಾಲ ಪಾರ್ಶ್ವನಾಥ ಶಾಸ್ತ್ರಿ, "ವ್ಯಾಖ್ಯಾನ ವಿಚಕ್ಷಣ.")

೧

ಕಲ್ಕತ್ತ ಶಹರಿನಲ್ಲಿ ರಮೇಶ ಚಂದ್ರದತ್ತರ ಹೆಸರನ್ನು ಅರಿಯದವರು ಅತಿ ವಿರಳ. ಇಲ್ಲವೆಂದರೂ ತಪ್ಪಾಗದು. ಅಲ್ಲಿಯ ಅಬಾಲ ವೃದ್ಧರ ವರೆಗೂ ಅವರ ಪರಿಚಯವು ಚೆನ್ನಾಗಿತ್ತು. ಅವರು ಕಲ್ಕತ್ತದ ಸುಪ್ರಸಿದ್ಧ ಹಾಗೂ ಗಣ್ಯ ಮಾನ್ಯ ಶ್ರೀಮಂತ ವ್ಯಕ್ತಿಗಳಲ್ಲೊಬ್ಬರಾಗಿದ್ದರು. ಇವರಿಗೆ ಗಂಡು ಮಕ್ಕಳಿರಲಿಲ್ಲ. ನಳಿನಿಯು ಇವರಿಗೆ ಏಕಮಾತ್ರ ಪುತ್ರಿ. ಹೆಂಡತಿ—ನಳಿನಿಯ ತಾಯಿಯು ಅವಳ ಬಾಲ್ಯದಲ್ಲೇ ಗತಿಸಿ ಹೋದ್ದರಿಂದ ರಮೇಶಚಂದ್ರದತ್ತರಿಗೆ ನಳಿನಿಯೇ ಸರ್ವಸ್ವವಾಗಿದ್ದಳು. ನಳಿನಿಗೆ ಈಗ ಹದಿನೈದು ವರ್ಷ ವಯಸ್ಸು. ಅತೀವ ಸುಂದರಿ. ಸೌಂದರ್ಯಕ್ಕೆ ತಕ್ಕಂತೆ ಶೀಲವೂ ಅವಳಲ್ಲಿ ಪೂರ್ಣ ತುಂಬಿ ತುಳುಕುತ್ತಿತ್ತು. ವಿವಾಹ ವಯಸ್ಕಳಾದ ಇವಳನ್ನು ಹರಿಹರಪುರದ ಜಮೀನ್ದಾರ ರಾಜೇಂದ್ರ ಕುಮಾರರ ಏಕಮಾತ್ರ ಪುತ್ರ ಸುರೇಶ ಕುಮಾರನಿಗೆ ಕೊಡುವುದಾಗಿ ಈ ಮೊದಲೇ ನಿಶ್ಚಯವಾಗಿತ್ತು. ಸುರೇಶ ಕುಮಾರನು ಅದೇ ವರ್ಷ ಎಂ. ಎ., ಕ್ಲಾಸಿಗೆ ಪರೀಕ್ಷೆ ಕೊಟ್ಟಿದ್ದನು. ಫಲಿತಾಂಶವು ಇನ್ನೂ ಗೊತ್ತಾಗಿರಲಿಲ್ಲ. ಅದು ಗೊತ್ತಾ ದೊಡನೆಯೇ ವಿವಾಹಮಾಡುವುದೆಂದು ಅವನ ತಂದೆ ರಾಜೇಂದ್ರರು ಅದುವರೆಗೆ ಸುಮ್ಮನಿದ್ದರು.

ಪರೀಕ್ಷಾಫಲವು ಹೊರಬಿತ್ತು. ಸುರೇಶಕುಮಾರನು ಉತ್ತಮ ಶ್ರೇಣಿಯಲ್ಲಿ ವಿಶೇಷ ಪುರಸ್ಕೃತನಾಗಿ ಉತ್ತೀರ್ಣನಾಗಿದ್ದನು. ವೈಶಾಖ ಶುದ್ಧ ಪಂಚಮಿಗೆ ಲಗ್ನದ ಮುಹೂರ್ತವು ಗೊತ್ತಾಯಿತು.

೨

ಪ್ರಾತಃಕಾಲದ ಪ್ರಶಾಂತ ಸಮಯ. ಗೃಹೋದ್ಯಾನದಲ್ಲೊಂದು ಶ್ವೇತ ಶಿಲಾ ನಿರ್ಮಿತವಾದ ಆಸನದ ಮೇಲೆ, ತನ್ನ ಬಾಲ್ಯ ಸಖಿ ಉಮಾಸುಂದರಿಯೊಡನೆ ಮಾತನಾಡುತ್ತಾ ಕುಳಿತಿದ್ದ ನಳಿನಿಯ ಲಕ್ಷ್ಯವು ಅಕಸ್ಮಾತ್ ದೂರದಲ್ಲಿ ಸುಮಧುರವಾಗಿ ಹಾಡುವ ಅದೊಂದು ದಿವ್ಯ ಸಂಗೀತ ಧ್ವನಿಯ ಕಡೆಗೆ ಹರಿಯಿತು. ಸಂಗೀತವು ಸುಲಲಿತಕಂಠನಿಂದ ಹಾಡಲ್ಪಡುತಿದ್ದು ಭಾವಪೂರ್ಣವೂ ಕರ್ಣಮನೋಹರವೂ ಆಗಿತ್ತು. ನಳಿನಿಯು ಒಮ್ಮೆಲೆ ಒಂದು ಕ್ಷಣಕಾಲ ತಟಸ್ಥಭಾವವನ್ನು ತಾಳಿದ್ದು ಮತ್ತು ಉಮಾಸುಂದರಿಯ ಕಡೆಗೆ ತಿರುಗಿ, 'ಉಮಾ—ಸಂಗೀತವು ಎಷ್ಟೊಂದು ಮಧುರವಾಗಿರುವುದು!' ಎಂದಳು. ಬರ ಬರುತ್ತಾ ಸಂಗೀತವು ಸಮೀಪಿಸಿತು. ಸಂಗೀತವು ಹತ್ತಿರ ವಾದಂತೆ ನಳಿನಿಗೆ ಅದನ್ನು ಕೇಳಬೇಕೆಂಬ ಅವಲಿಕೆಯು ವಿಶೇಷವಾಗಿ ಹೃದಯವು ತಲ್ಲಣಗೊಂಡಿತು. ಸಂಗೀತ ಹಾಡುವವರಾರೆಂದು ನೋಡಿಬರುವಂತೆ ಉಮೆಗೆ ಸೂಚಿಸಿದಳು. ಉಮೆಯು ಹೋಗಿ ನೋಡಲಾಗಿ ತೋಟದಾಚೆ ಮಾರ್ಗದಲ್ಲೊಬ್ಬ ಬೈರಾಗಿಯು ಹಾಡುತ್ತಾ ಹೋಗುತ್ತಿದ್ದನು. ಹಾಗೆಯೇ ಹೇಳಿದಳು. ನಳಿನಿಯು ಅವನನ್ನು ಕರೆಯುವಂತೆ ಹೇಳಿದಳು. ಉಮೆಯು ಮತ್ತೊಮ್ಮೆ ಹೋಗಿ ನೋಡಿದಾಗ ಬೈರಾಗಿಯು ಸ್ವಲ್ಪ ದೂರ ಮುಂದರಿದು ಹೋಗಿದ್ದನು. ಆದರೂ ಅದಷ್ಟು ಉಚ್ಚಸ್ವರದಿಂದ ಅತನನ್ನು ನಿರ್ದೇಶಿಸಿ ಕರೆದಳು. ಎಡನೇ ಸಲದ ಕೂಗು ಬೈರಾಗಿಗೆ ಕೇಳಿಸಿತು. ಹಿಂದಿರುಗಿ ನೋಡಿದನು. ಸ್ವಲ್ಪ ದೂರದಲ್ಲಿ ತೋಟದ ಗೋಡೆಯಾಚೆಯಿಂದ ಯಾರೋ ಸ್ತ್ರೀ ವ್ಯಕ್ತಿಯೊಂದು ತನ್ನನ್ನು ಕರೆಯುತ್ತಿದೆ ಎಂದು ತಿಳಿದು ವ್ಯಕ್ತಿಯ ಸಮೀಪಕ್ಕೆ ಬಂದನು. ಉಮೆಯು ಅವನಿಗೆ ತನ್ನ ಹಿಂದೆ ಬರುವಂತೆ ಸೂಚಿಸಿ, ನಳಿನಿಯು ಕೂತುಕೊಂಡಲ್ಲಿಗೆ ಕರೆದೊಯ್ದಳು. ನಳಿನಿಯು ಬೈರಾಗಿಗೆ ಕುಳಿತುಕೊಳ್ಳುವಂತೆ ಕೈಯಿಂದ ಸೂಚಿಸಿದಳು. ಬೈರಾಗಿಯು ಒಮ್ಮೆ ನಳಿನಿಯ ಮುಖದ ಕಡೆಗೆ ದೃಷ್ಟಿಸಿ ಎತ್ತಿದ ಮುಖ ತಗ್ಗಿಸಿ ಮೌನವಾಗಿ ಕುಳಿತುಕೊಂಡನು. ಬೈರಾಗಿಯು ಶ್ಯಾಮಲ ವರ್ಣದ ಒರ್ವ ಸುಂದರ ಯುವಕನಾಗಿದ್ದನು. ಅವನ ವಯಸ್ಸು ಇಪ್ಪತ್ತೈರಡಕ್ಕೆ ಮಿರಿರಲಾರದೆಂದು ಅವನ ಹೃಷ್ಟ ಪುಷ್ಟವಾಗಿದ್ದ ಭವ್ಯಾಕೃತಿಯ ಶರೀರ ಘಟನೆಯಿಂದಲೇ ಊಹಿಸಬಹುದಾಗಿತ್ತು. ಪ್ರಫುಲ್ಲ ಮುಖಕಮಲ, ಆಗಲವಾದ ಹಣೆ, ತೀಕ್ಷ್ಣದೃಷ್ಟಿಯ ಉಜ್ವಲಕಣ್ಣುಗಳು, ವಿಶಾಲವಾದ ಎದೆ, ನೀಳವಾದ ತೋಳುಗಳು, ಅನತಿದೀರ್ಘವಾದ ದೇಹದ ಸಿಲುವಿಕೆ ಮೊದಲಾದುವುಗಳಿಂದ ಅವನು ಯಾವುದೋ ಒಂದು ಉಚ್ಚ ಕುಲ ಪ್ರಸೂತನೆಂದೂ, ಕಾರಣವಿಶೇಷದಿಂದ ಬ್ರಹ್ಮಚಾರಿಯಾದನನೆಂದೂ ತಟ್ಟನೆ ಕಾಣುತ್ತಿತ್ತು.

ನಳಿನಿಯು ಬೈರಾಗಿಗೆ ಹಾಡುವಂತೆ ಹೇಳಲು ಉಮೆಯ ಕಡೆಗೆ ನೋಡಿದಳು. ಅದನ್ನು ತಿಳಿದ ಉಮೆಯು ಬೈರಾಗಿಯ ಕಡೆಗೆ ಅರ್ಥಯುಕ್ತ ದೃಷ್ಟಿಯಿಂದ ನೋಡಿ ಹಾಡುವಂತೆ ಸೂಚಿಸಿದಳು. ಬೈರಾಗಿಯು ಕೈಯ್ಯಲ್ಲಿದ್ದ ಸಾರಂಗದ ಧ್ವನಿಗೆ ತನ್ನ ಧ್ವನಿಯನ್ನು ಸೇರಿಸಿ ಸ್ವಲ್ಪ ಹೊತ್ತು ಮನೋಮೋಹಕವಾಗಿ ಹಾಡಿದನು. ಆ ಮೇಲೆ ಗಂಭೀರವಾಗಿ ಹೊರಡಲನುವಾದನು. ನಳಿನಿಯು ಬೈರಾಗಿಗೆ ಕೊಡಲು, ಉಮೆಯ ಕೈಯಲ್ಲ ಒಂದು ಚಿನ್ನದ ನಾಣ್ಯವನ್ನು ಇರಿಸಿದಳು. ಉಮೆಯು ಕೊಟ್ಟ ನಾಣ್ಯವನ್ನು ಆದರದಿಂದ ಸ್ವೀಕರಿಸಿ ಅವರಿಬ್ಬರಿಗೂ ಧನ್ಯವಾದವರ್ಪಿಸಿ ಬೈರಾಗಿಯು ಹೊರಟುಹೋದನು. ನಳಿನಿಯು ಬೈರಾಗಿಯು ತೋಟವನ್ನು ದಾಟುವ ವರೆಗೂ ಆ ಕಡೆಗೆ ಎವೆಯಿಕ್ಕದ ದೃಷ್ಟಿಯಿಂದ ನೋಡುತ್ತಿದ್ದು ಅವನು ಕಣ್ಮರೆಯಾದೊಡನೆ ದೃಷ್ಟಿಯನ್ನು ಹಿಂದೆ ಎಳಕೊಂಡಳು. ಹುಚ್ಚು ಮನಸ್ಸು ಮಾತ್ರ ಅವನ ಜೊತೆಯಲ್ಲೇಕೆ ಹೋಯಿತೆಂಬುದು ನಳಿನಿಗೆ ಎಷ್ಟು ಯೋಚಿಸಿದರೂ ಬಗೆಹರಿಯಲಿಲ್ಲ. ಆದರೆ ಉಮೆಯು ಮಾತ್ರ ಆಗಲೇ ತಿಳಿದುಬಿಟ್ಟಿದ್ದಳು. ರಮಣೀಮನೋಹರನಾದ ಯುವಕನ ಕಡೆಗೆ ಯುವತಿಯಾದ ರಮಣಿಯ ಮನಸ್ಸು ಓಡುವುದು ಅಸ್ವಾಭಾವಿಕವಲ್ಲವೆಂದು!

೫

ನಳಿನಿಯ ವಿವಾಹಕ್ಕೆ ದಿನವು ಸವಿಹಿಸಿತು. ವೈಶಾಖ ಶುದ್ಧ ಪಂಚಮಿಯು ಸವಿಹಿಸಿದಂತೆ ನಳಿನಿಯ ಹೃದಯವೂ ಕೂಡಾ ಒಳಗೆಯೇ ವಿದೀರ್ಣವಾಗಹತ್ತಿತ್ತು. ಯಾವುದೋ ಒಂದು ಅನಿವಾರ್ಯ ದುಃಖಭಾರದಿಂದ ಅವಳ ಪ್ರಫುಲ್ಲ ಮುಖ ಮಂಡಲವು ಸದಾ ಮಾಲಿನ್ಯವನ್ನು ತಳೆದಿರುತಿತ್ತು. ಇದರ ಕಾರಣವು ನಳಿನಿಗೂ ಉಮೆಗೂ ಮಾತ್ರ ಗೊತ್ತಿತ್ತು. ಉಮೆಯು ತನ್ನ ಬಾಲ್ಯ ಸಖಿಯ ದುಃಖನಿವಾರಣೆಗಾಗಿ ಪ್ರಯತ್ನಿಸಿದಳು. ಎಲ್ಲಿ ಹುಡುಕಿದರೂ ಆ ಬೈರಾಗಿಯು ಮರಳಿ ಕಾಣಲಿಲ್ಲ. ನಳಿನಿಯು ಹತಾಶಳಾದಳು. ಒಮ್ಮೆ ಆತ್ಮಹತ್ಯೆಮಾಡುವೆನೆಂದು ನಿಶ್ಚಯಿಸುವಳು. ಉತ್ತರಕ್ಷಣದಲ್ಲೇ ಆತ್ಮಹತ್ಯೆಯ ಪಾಪರಾಶಿಯೂ, ತಂದೆಯ ದೀನ ಮುಖಮುದ್ರೆಯೂ ಅವಳ ಮುಂದೆ ನಲಿದಾಡಿ ಪೂರ್ವಸಂಕಲ್ಪವನ್ನು ನಿರ್ನಾಮಮಾಡುತ್ತಿದ್ದವು. ಬೈರಾಗಿಯನ್ನು ಮರೆಯಬೇಕೆಂದು ಎಷ್ಟೋ ಬಾರಿ ಯೋಚಿಸಿದಳು; ಪ್ರಯತ್ನವನ್ನೂ ಮಾಡಿದಳು. ಆದರೆ ಅವನ ಆ ಸೌಂದರ್ಯವನ್ನು ಮರೆಯುವುದು ಅವಳಿಂದಾಗಲಿಲ್ಲ. ಬದಲಾಗಿ ಅವನ ಚಿಂತೆಯು ದ್ವಿಗುಣವಾಗಿ ಅವಳನ್ನು ಆವರಿಸಿತು. ಅವನ ಚಿತ್ರವನ್ನು ಹೃದಯಪಟದಿಂದ ಅಳಿಸಲಾರದಾದಳು.

ಮತ್ತೊಮ್ಮೆ ಹೀಗೆ ಯೋಚಿಸುವಳು. ತಾನು ಒಬ್ಬ ಕುಲೀನ ಹಾಗೂ ಅಗರ್ಭ ಶ್ರೀಮಂತನ ಪುತ್ರಿಯಾಗಿದ್ದು, ಯಾವನೋ ಒಬ್ಬ ಬಡಬೈರಾಗಿಯಲ್ಲಿ ಅನುರಕ್ತಳಾದುದು ಅನುಚಿತ ಮಾತ್ರವೇ ಅಲ್ಲದೆ ಹಾಸ್ಯಾಸ್ಪದವೂ ಆಗಿದೆ. ಆದರೆ-

ಬೈರಾಗಿಯ ಆ ಕರ್ಣಮನೋಹರವಾದ ಸಂಗೀತವು ಅವಳನ್ನು ಪೂರ್ಣ ಪರವಶಳನ್ನಾಗಿ ಮಾಡಿತ್ತು. ಹೀಗೆಯೇ ಯೋಚನೆಗಳು ಒಂದರ ಹಿಂದೊಂದು ಬಂದು ನಳಿನಿಯನ್ನು ಅಲ್ಲೋಲಕಲ್ಲೋಲ ಮಾಡುತ್ತಿದ್ದವು. ಒಂದು ದಿನ ಅವಳೂ ಉಮೆಯೂ ಕೂಡಿ ಏನೇ ಆಗಲಿ -ಸುರೇಶಕುಮಾರನನ್ನೇ ವರಿಸುವುದೆಂದೂ ಹಾಗೆ ಮಾಡದಿದ್ದರೆ ತಂದೆಗೆ ತುಂಬಾ ಅಪಮಾನವೂ ದುಃಖವೂ ಸಂಭವಿಸುವುದರಿಂದ ಬೈರಾಗಿಯನ್ನು ಮರೆತುಬಿಡುವುದೆಂದೂ ಅಂತಿಮ ನಿಷ್ಕರ್ಷೆಯನ್ನು ಮಾಡಿಕೊಂಡರು.

೬.

ಸುರೇಶನೊಡನೆ ನಳಿನಿಯ ಮದುವೆಯಾಗಿ ಇಂದಿಗೆ ಎರಡು ವಾರ ಕಳೆದುಹೋಯಿತು. ಸುರೇಶನು ನಳಿನಿಯನ್ನು ಪ್ರೇಮದಿಂದ ಕಾಣುತ್ತಿದ್ದನು. ನಳಿನಿಯು ಕೂಡಾ ಬಾಹ್ಯಕ್ಕೆ ಸುರೇಶನನ್ನು ಪ್ರೇಮವಿಶ್ವಾಸಗಳಿಂದಲೇ ಕಾಣುತ್ತಿದ್ದಳು. ಹಾಗೆ ಮಾಡದೆ ಅವಳಿಗೆ ಬೇರೆ ಉಪಾಯವಿರಲಿಲ್ಲ. ಆದರೆ ಅವಳ ಹೃದಯಸಿಂಹಾಸನದಲ್ಲಿ ಬೈರಾಗಿಯ ಮನೋಹರ ಮೂರ್ತಿಯು ಈ ವರೆಗೂ ಸ್ಥಾನವನ್ನು ಪಡೆದೇ ಇತ್ತು. ಹೊರಗೆ ಪ್ರಫುಲ್ಲಿತಳಾಗಿ ತೋರುತ್ತಿದ್ದ ನಳಿನಿಯ ಅಂತರಂಗದ ನಿಜ ವಿಚಾರವನ್ನು ಸುರೇಶನು ತಿಳಿಯದಿದ್ದರೂ ಅವಳಿಗೆ ಯಾವುದೊ ಒಂದು ವಸ್ತುವಿನ ಕೊರತೆಯು ಇರಬೇಕೆಂದು ಊಹಿಸಿದ್ದನು. ಅವನು ಅವಳನ್ನು ಏನೋದಪಡಿಸುವುದಕ್ಕಾಗಿ ಆಗಾಗ್ಗೆ ತೋಟಕ್ಕೊ ನದಿಯ ದಂಡೆಗೊ ಬೆಟ್ಟಕ್ಕೊ ಕೊಂಡುಹೋಗುತ್ತಿದ್ದನು. ಕೊರತೆಯನ್ನು ದೂರಮಾಡುವುದಕ್ಕೋಸ್ಕರ ಅವನು ಬಹಳ ಪ್ರಯತ್ನಪಡುತಿದ್ದನು. ಆದರೆ ಕೊರತೆ ಏನೆಂದು ತಿಳಿಯದ ಮೇಲೆ ಅದನ್ನು ನಿವಾರಿಸುವುದಾದರೂ ಹೇಗೆ? ಹೀಗಾಗಿ ಸುರೇಶನು ಬಹಳ ವಿಚಾರಕ್ಕೊಳಗಾದನು. ಬಹಳ ದಿನೆ ಮೇಲೆ ಅವನು ತಾನಾಗಿ ನಳಿನಿಯನ್ನು ಕೇಳಿ ನೋಡಿದನು. ನಳಿನಿಯ, ಯಾವ ಕೊರತೆಯೂ ಇಲ್ಲವೆಂದೂ

ತಾನು ಸ ಖಿಯಾಗಿರುವೆನೆಂದೂ ಹೇಳಿಬಿಡುತ್ತಿದ್ದಳು. ಆದರೆ ಆ ಉತ್ತರವು ಸುರೇಶನಿಗೆ ಸಮರ್ಪಕವಾಗಿರುತ್ತಿರಲಿಲ್ಲ.

೫೫.

ಒಂದು ದಿನ ಮಧ್ಯಾಹ್ನ ಎರಡು ತಾಸು ಮೀರಿ ಹೋಗಿತ್ತು. ಸುರೇಶನು ಯಾವುದೋ ಒಂದು ಪತ್ರಿಕೆಯನ್ನು ಓದುತ್ತಿದ್ದನು ಕೆಲಸದವಳೊಬ್ಬಳು ಗಾಬರಿಯಿಂದ ಬಂದು ಕರೆದಳು. ಸುರೇಶನು ಎದ್ದು ನಿಂತು ಏನಾಯಿತೆಂದು ಕೇಳಿದನು. ಯಜಮಾನಿಯವರು ನಿಮ್ಮ ಚಿತ್ರಶಾಲೆಯ ಯಾವುದೋ ಒಬ್ಬ ಸಾಧುವಿನ ಚಿತ್ರವನ್ನು ನೋಡುತಿದ್ದಂತೆ ಮೂರ್ಛೆ ಬಂದು ಬಿದ್ದಿರುವರೆಂದೂ ಕೂಡಲೇ ಬರಬೇಕೆಂದೂ ಹೇಳಿ ಬೇಗಬೇಗನೆ ಹೊರಟು ಹೋದಳು. ಸುರೇಶನು ಹೋಗಿ ನೋಡಿದನು. ಪರಿಚಾರಕಿಯವರ ಉಪಚಾರದಿಂದ ಆಗಲೇ ನಳಿನಿಗೆ ಸ್ವಲ್ಪ ತಿಳಿವು ಬಂದಿತ್ತು. ಪೂರ್ಣ ಮೂರ್ಛೆ ತಿಳಿದ ಮೇಲೆ ಸುರೇಶನು ಮೂರ್ಛೆಗೆ ಕಾರಣವನ್ನು ಕೇಳಿದನು. ನಳಿನಿಯು ಉತ್ತರ ಕೊಡಲಿಲ್ಲ. ಸುರೇಶನು ಪುನಃ ಕೇಳಿದನು—'ಈ ಚಿತ್ರದಲ್ಲಿ ಚಿತ್ರಿಸಿರುವ ಬೈರಾಗಿಯನ್ನು ನೀನು ಬಲ್ಲೆಯಾ?'

ಚಿತ್ರವು ನಳಿನಿಯ ಪರಿಚಿತ ಬೈರಾಗಿಯದಾಗಿತ್ತು. ನಳಿನಿಗೆ ಈಗೇನು ಮಾಡುವುದೆಂದು ತಿಳಿಯಲಿಲ್ಲ. ಕೊನೆಗೆ ಸ್ವಲ್ಪ ಧೈರ್ಯ ತಾಳಿ—'ಹೌದು, ನಾನು ಇವನನ್ನು ನಮ್ಮ ಉದ್ಯಾನವನದ ಹೊರಗಡೆ ಹಾಡುತ್ತಿದ್ದಾಗ ಒಮ್ಮೆ ನೋಡಿದ್ದೆನು.'

ಸುರೇಶ—ನಗುತ್ತ—'ಸುಳ್ಳು, ತೀರಾ ಸುಳ್ಳು. ಅವನನ್ನು ನೀನು ದಾರಿಯಲ್ಲಿ ಹೋಗುವಾಗ ತೋಟಕ್ಕೆ ಕರೆಸಿ ಸಂಗೀತವಮಾಡಿಸಿರುವಿ ಎಂದೂ ಅವನ ಸಂಗೀತಕ್ಕೆ ಮೆಚ್ಚಿ ಮತ್ತೊಮ್ಮೆ ಬರುವಂತೆ ಹೇಳಿ ಅವನಿಗೆ ಒಂದು ಚಿನ್ನದ ನಾಣ್ಯವನ್ನು ತೆಗೆದುಕೊಟ್ಟೆಯೆಂದೂ ಅವನ ಬಾಯಿಂದಲೇ ಕೇಳಿರುವೆನು. ಅವನು ನಿತ್ಯವೂ ಇಲ್ಲಿಗೆ ನನ್ನ ಅಪೇಕ್ಷೆಯ ಮೇರೆಗೆ ಸಂಗೀತ ಹಾಡಲು ಬರುತ್ತಿರುತ್ತಾನೆ. ನಾನು ಕೂಡಾ ಅವನನ್ನು ತೃಪ್ತಿಪಡಿಸುತ್ತಿರುತ್ತೇನೆ.

ನಳಿನಿ—(ಸ್ವಲ್ಪ ಸಿಟ್ಟಾದವಳಂತೆ ನಟಿಸಿ) ನೀವು ಹೇಳುವುದು ಪೂರ್ಣ ಅಸತ್ಯವಾಗಿದೆ. ನಾನು ಹಾಗೆಂದೂ ಹೇಳಿರಲಿಲ್ಲ.

ಸುರೇಶನು ಹೇಳಿದನು—'ಅವನು ಇಷ್ಟು ಹೊತ್ತಿಗೆ ಇಲ್ಲಿಗೆ ಬಂದಿರಬಹುದು. ಹೋಗಿ ಅವನನ್ನೆ ಇಲ್ಲಿಗೆ ಕರೆತರುತ್ತೇನೆ. ನೀನೆ ಕೇಳಿ ವಿಚಾರಿಸು. ಹೀಗೆಂದು ಹೇಳಿ ಹೊರಗೆ ಹೊರಟುಹೋದನು. ಅವನು ಹೊರಟು ಹೋದ ಸ್ವಲ್ಪ ಹೊತ್ತಿನಲ್ಲೇ ಸ್ವಯಂ ಬೈರಾಗಿಯು ಅಲ್ಲಿಗೆ ಬಂದನು ಅದೇ ಮುಖ, ಅದೇ ಕಣ್ಣುಗಳು, ಅದೇ ಸೌಂದರ್ಯ. ನಳಿನಿಗೆ ಈಗೇನು ಮಾಡಬೇಕೆಂದು ತಿಳಿಯಲಿಲ್ಲ. ಹೃದಯವು ದಡದಡನೆ ಹೊಡೆದುಕೊಳ್ಳುತಿತ್ತು. ನಳಿನಿಯು ಈ ಮೊದಲು ಕೊಟ್ಟಿದ್ದ ಅದೇ ಚಿನ್ನದ ನಾಣ್ಯವು ಬೈರಾಗಿಯ ಕೈಯಲ್ಲಿ ಪಳಪಳನೆ ಹೊಳೆಯುತ್ತಿತ್ತು. ನಳಿನಿಯ ಗುಲಾಬಿಸದೃಶ ಮುಖವು ರಕ್ತವರ್ಣವನ್ನು ತಾಳಿತು. ಶರೀರವು ನಡುಗುತ್ತಿತ್ತು. ಬೈರಾಗಿಯು ತೀರಾ ಸಮೀಪಕ್ಕೆ ಬಂದು ತನ್ನ ಜಡೆಗೆ ಕೈಹಾಕಿದನು. ಹಾ! ಇದೇನು? ಜಡೆಯು ಬೈರಾಗಿಯ ಕೈಯಲ್ಲಿ ಕಿತ್ತು ಬಂತು. ಜಡೆಯು ಕೃತ್ರಿಮದ್ದಾಗಿತ್ತು.

ನಳಿನಿಯು ಅವಾಕ್ಕಾದಳು. ಬೈರಾಗಿಯು ಬೇರೆ ಯಾರೂ ಆಗಿರದೆ ಬೈರಾಗಿಯ ವೇಷ ತಳೆದ ಸ್ವಯಂ ಸುರೇಶಕುಮಾರನಾಗಿದ್ದನು. ಅವನ ಮುಖವು ನಳಿನಿಯನ್ನು ಅಣಕಿಸುತ್ತಿತ್ತು.

ನಳಿನಿಯು ಸುರೇಶನನ್ನು ಬಿಗಿಯಾಗಿ ಅಪ್ಪಿಕೊಂಡಳು. ಸುರೇಶನ ಸೀಳವಾದ ತೋಳುಗಳು ನಳಿನಿಯನ್ನು ದೀರ್ಘ ಸಮಯದ ವರೆಗೆ ಬಂಧಿಸಿದ್ದವು. ಸ್ವಲ್ಪ ಹೊತ್ತು ಇಬ್ಬರೂ ಮೌನವಾಗಿದ್ದರು. ಕೊನೆಗೆ ಸುರೇಶನೇ ಮೊದಲು ಮಾಡಿ 'ನಾನು ವಿವಾಹಕ್ಕೆ ಮೊದಲು ನಿನ್ನ ಪರಿಚಯಮಾಡುವುದು ನಿನ್ನ ತಂದೆಯವರಿಗೆ ಇಷ್ಟವಿಲ್ಲದ್ದರಿಂದ ಈ ವೇಷದಲ್ಲೇ ನಿನ್ನನ್ನು ಕಾಣುವುದು ಯುಕ್ತವೆಂದು ನಿಶ್ಚಯಿಸಿ ತಾನು ಮಾಡಿದ ಚಮತ್ಕಾರಗಳೆಲ್ಲವನ್ನೂ ವಿವರಿಸಿ ಹೇಳಿದನು.—ನಳಿನಿಯು ನಗುತ್ತ ನಗುತ್ತ ಹೇಳಿದಳು—'ಅಬ್ಬ! ನಿಮ್ಮದಿಂತಹ ಮೋಸ! —ಇನ್ನೆಂದಿಗೂ ಇಂತಹ ಮೋಸಮಾಡದಿರಿ! ಜಾಗ್ರತೆ!'

ಸ್ವಸ್ಥಚಿತ್ತ ವ ಆರೋಗ್ಯ ಸೂತ್ರಗಳು

(ಲೇಖಕರು:—ಶ್ರೀ। ಐ. ಕೆ. ಪಿ. ಶರ್ಮಾ, ಎ. ಯಮ್. ಎ. ಸಿ.
ಆಯುರ್ವೇದ ವಿಶಾರದ ಮತ್ತು ಭೂಷಣ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

೨೨. **ಕೇಶಕೃಶ್ಮಶ್ರುನಖಾದಿಗಳ ಕರ್ತನ:**—ಆರೋಗ್ಯ ಶಾಸ್ತ್ರದಲ್ಲಿ ಪಕ್ಷಕ್ಕೆ ಮೂರು ಸಲ ಅಂದರೆ ಪ್ರತಿ 5 ದಿನಕ್ಕೊಮ್ಮೆಯಾದರೂ ಕೇಶ, ಗಡ್ಡ, ಮೀಸೆ, ನಖ, ನೀಚ ರೋಮಗಳನ್ನು ಕತ್ತರಿಸಿಕೊಳ್ಳಬೇಕೆಂದು ಅಂದರೆ ಕ್ಷೌರ ಮಾಡಿಸಿಕೊಳ್ಳಬೇಕೆಂಬ ನಿಯಮವನ್ನು ಇಟ್ಟುಕೊಂಡಿರುವರು. ಇದರಿಂದ ಪುಷ್ಟಿ ಜನನ, ವೃಷ್ಯ, ಆಯುಷ್ಯ, ಶುಚಿ, ಸೌಂದರ್ಯಕರ, ಪಾಪೋಪಶಮನ, ಸೌಭಾಗ್ಯ ಮತ್ತು ಉತ್ಸಾಹವರ್ಧನ ಮುಂತಾದ ಅಮೂಲ್ಯ ಗುಣಗಳು ಉಂಟಾಗುವವು. ಏಷಂಚ "ನಿತ್ಯ ಮನುಪಹತವಾಸಾಃ ಸುಮನಾಃ ಸುಗಂಧಿಃ; ಸಾಧುವೇಶಃ ಪ್ರಸಾಧಿತ ಕೇಶಃ ಮೂರ್ಧಶ್ರೋತ್ರಘ್ರಾಣ, ಪಾದ ನಿತ್ಯ ತೈಲಃ ಸ್ಯಾತ್" ॥ ಪ್ರತಿನಿತ್ಯವು ಒಳ್ಳೇ ಪರಿಶುದ್ಧವಾದ ವೋಷಾಕನ್ನು ಧರಿಸುವಂಥವನಾಗಿ ಒಳ್ಳೇ ಮನಸ್ಸು (ಅಂದರೆ ನಿರ್ಮಲಚಿತ್ತನಾಗಿ) ಳ್ಳವನಾಗಿ ಸುಗಂಧ ದ್ರವ್ಯವನ್ನು ಸೇವಿಸುವಂತವನಾಗಿ, ಸಾಧುವೇಶ, ಒಳ್ಳೇ ಶೋಭನಡ್ರೆಸ್ಸನ್ನು ಅಥವಾ ತಿಷ್ಟಜನೋಚಿತವಾದ ಡ್ರೆಸ್ಸು ಪ್ರಯೋಗಿಸುವಂತವನಾಗಿ ತಲೆಕೂದಲನ್ನು ಬಾಚಣಿಕೆ, ಬ್ರುಶ್ ಮೊದಲಾದ ಪ್ರಸಾದನೀಗಳಿಂದ ಬಾಚಿ (Toilet) ನಿರ್ಮಲವಾಗಿಟ್ಟುಕೊಳ್ಳುವಂಥವನಾಗ ಬೇಕಲ್ಲದೆ ಶಿರಸ್ಸು, ಕಿವಿ, ಮೂಗು, ಪಾದಕ್ಕೆ ನಿತ್ಯ ತೈಲ ಪ್ರಯೋಗಮಾಡುವಂಥವನಾಗಬೇಕೆಂಬ ಚರಕಾಚಾರ್ಯನ ಮಾತು ಅಕ್ಷರಶಃ ಸತ್ಯವಾಗಿದೆಂಬ ವಿಷಯದಲ್ಲಿ ಈವತ್ತಿಗೂ ಕೂಡ ಸಂದೇಹಪಡಬೇಕಾಗಿಲ್ಲ. ನಾನು ಹಿಂದೆ ಹೇಳಿದಂತೆ ಚರಕಾಚಾರ್ಯನ ಕಾಲದಲ್ಲಿ ಅಂದರೆ ಸುಮಾರು ೨೦೦೦ ವರ್ಷಗಳ ಹಿಂದೆಯೇ ಡ್ರೆಸ್ಸು, ಟೋಯಿಲೆಟ್ (ಕ್ರಾಫ್ ವಗೈರೆ) ಕ್ಷೌರ ಮತ್ತು ಸೆಂಟ್ಸಿನ ಪ್ರಯೋಗವನ್ನು ಭಾರತೀಯರು ಎಷ್ಟರಮಟ್ಟಿಗೆ ಆರೋಗ್ಯವಿಧಿಗೆ ಅನುಕೂಲವಾಗಿ ಅನುಸರಿಸುತ್ತಿದ್ದರೆಂಬ ವಿಷಯವು ಪರಿಷ್ಕೃತರಾದ ಆಧುನಿಕರನ್ನು ಆಶ್ಚರ್ಯಗೊಳಿಸದೆ ಇರಲಿಕ್ಕಿಲ್ಲ.

೨೩. **ಪಾದರಕ್ಷೆಧಾರಣೆ:**—ಪಾದರಕ್ಷೆ ಧಾರಣೆಮಾಡುವುದರಿಂದ ನೇತ್ರಹಿತ, ಪಾದಸ್ಪರ್ಶಕ್ಕೆ ಹಿತ, ಕಂಟಕಾದಿ ವಸ್ತುಗಳಿಂದಾಗುವ ಅಭಿಘಾತವನ್ನು ತಪ್ಪಿಸುವದು, ಬಲಕರ, ಸಂಚಾರಸುಖ, ಶುಕ್ರವೃದ್ಧಿಕರ, ಮೊದಲಾದ ಗುಣಗಳು ಉಂಟಾಗುವದೆಂದು ಚರಕಾಚಾರ್ಯನು ನಿರೂಪಿಸಿರುವನು.

೨೪. **ಛತ್ರಧಾರಣ:**—ಛತ್ರಧಾರಣಮಾಡುವದರಿಂದ ರೋಗಾದಿ ದುರ್ದೈವಪ್ರಶಮನ, ಬಲಕರ, ರಕ್ಷಾ ಆವರಣ, ಮಂಗಲಕರ, ಬಿಸಿಲು, ವಾಯುಧೂಳು, ಮಳೆಹಿಮಾದಿಗಳ ನಿವಾರಣೆ ಮತ್ತು ನೇತ್ರಹಿತ, ಓಜಸ್ಕರ, ಮುಂತಾದ ಗುಣಗಳುಂಟಾಗುವವು.

೨೫. **ದಂಡಧಾರಣ:**—ದಂಡಧಾರಣದಿಂದ ಜಾರಿ ಬೀಳುವ ಸಂದರ್ಭದಲ್ಲಿ ಆಧಾರವನ್ನು ಕೊಡುವದು, ಶತ್ರುಗಳ ಭಯವನ್ನು ನಿವಾರಿಸುವದು, ಆಯುಷ್ಯಹಿತ, ನಾಯಿ, ಸರ್ಪ ಮುಂತಾದವುಗಳ ಭಯವನ್ನು ಹೋಗಲಾಡಿಸುವದು. ಅದರಲ್ಲೂ ವೃದ್ಧರಿಗೆ ಅತ್ಯಂತ ಆಧಾರ ಮತ್ತು ಬಲವನ್ನು ಕೊಡುವದು. ಒಟ್ಟಾರೆ ಪ್ರತಿ ಒಬ್ಬ ವ್ಯಕ್ತಿಯು ತನ್ನ ಆರೋಗ್ಯಕಾಪಾಡುವಿಕೆಯ ಲಕ್ಷ್ಯದಲ್ಲಿ ಪಾದರಕ್ಷೆ, ಛತ್ರ, ದಂಡ, ಶಿರೋವೇಷ್ಟನ (ರುಮಾಲು) ಗಳನ್ನು ಧರಿಸದೆ ಹೊರಗೆ ಹೋಗಕೂಡದೆಂಬ ನ್ಯಾಯವನ್ನು ಆರೋಗ್ಯ ಶಾಸ್ತ್ರದಲ್ಲಿ ಪ್ರತಿಪಾದಿಸಿರುವರು. ಅದರಲ್ಲಿಯೂ ರಾತ್ರಿ ಸರ್ವಥಾ ಇವುಗಳನ್ನು ಧರಿಸದೆ ಹೋಗಕೂಡದು.

೨೬. **ತಾಂಬೂಲಚರ್ವಣ:**— ತಾಂಬೂಲಚರ್ವಣವನ್ನು ದಿನಕ್ಕೊಂದೆರಡು ಸಲವಾದರೂ ಕೇಸರ, ಪಚ್ಚಕರ್ಪೂರ, ಲವಂಗ, ಪತ್ರೆ, ಜಾಯಿಕ್ಕಾಯಿ, ಕಸ್ತೂರಿ, ಪೂಗಫಲ ಸಮೇತಮಾಡುವದರಿಂದ ವಾತಘ್ನ, ಕ್ರಿಮಿನಾಶನ, ಕಫಹರ, ದುರ್ಗಂಧಿನಿವಾರಕ, ರಕ್ತಶುದ್ಧಿ, ಕಾಮಾಗ್ನಿಸಂದೀಪನ, ರುಚಿಕರ, ಜೀರ್ಣಶಕ್ತಿ ಮೊದಲಾದ ಗುಣಗಳುಂಟಾಗುವವು. ಆದರೆ ಹೊಗೆಸೊಪ್ಪನ್ನು ಮಾತ್ರ ಪ್ರಯೋಗಿಸುವದು ಆರೋಗ್ಯದೃಷ್ಟ್ಯಾ ಹಿತವಲ್ಲ. ಈ ರೀತಿ ಸಾಮಾನ್ಯವಾಗಿ ದಿನಚರ್ಯವನ್ನು ವರ್ಣಿಸಿದ್ದಾಯಿತು.

೨೭. **ರಾತ್ರಿಚರ್ಯಾ:**— ಈಗಲಾದರೋ ಯಾವ ಕ್ರಮ ರಾತ್ರಿಚರ್ಯವನ್ನು ವಿವರಿಸುವಃ— ರಾತ್ರಿ ಆಚರಿ

ವಂಥ ಕಾರ್ಯಗಳಲ್ಲಿ ಮುಖ್ಯವಾಗಿ ಆಹಾರ, ಮೈಥುನ ಮತ್ತು ನಿದ್ರಾವಿಷಯಗಳು. ಸಾಯಂಕಾಲದ ಭೋಜನವನ್ನು ರಾತ್ರಿಯ ಪ್ರಥಮ ಪ್ರಹರದೊಳಗೆ ಅಂದರೆ ೮-೯ ಘಂಟೆಯ ಒಳಗೆ ಮುಗಿಸತಕ್ಕದ್ದು. ಕಷ್ಟದಿಂದ ಜೀರ್ಣವಾಗುವ ವಸ್ತುಗಳನ್ನು ವರ್ಜಿಸಬೇಕು. ಲಘುವಾದ ಮತ್ತು ಪ್ರಮಾಣದಲ್ಲಿ ಸ್ವಲ್ಪ ಕಮ್ಮಿಯಾಗಿಯೇ ಆಹಾರವನ್ನು ಪ್ರಯೋಗಿಸತಕ್ಕದ್ದು. ರಾತ್ರಿಯ ಹೆಚ್ಚಿನ ಅಂಶದಲ್ಲಿ ಶರೀರವು ವಿರಾಮದಲ್ಲಿರುವದರಿಂದ ಮತ್ತು ನಿದ್ರಾಭಂಗವಾಗದ ಹಾಗೆ ಈ ಮೇಲಿನ ವಿಧಿಯನ್ನು ವಿಧಿಸಿದ್ದಾಗಿರುತ್ತದೆ. ಅಲ್ಲದೆ ಮಲಗುವ ಪೂರ್ವದಲ್ಲಿಯೇ ಹೆಚ್ಚಿನ ಅಂಶದ ಆಹಾರವು ಜೀರ್ಣವಾಗಿರಬೇಕು. ವಾಜೀಕರಣ ವಸ್ತುಗಳನ್ನು ಸೇವಿಸಿ ಬೃಂಹಿತನಾದವನು ಮಿತವಾಗಿ, ಶರೀರ ಮತ್ತು ಕಾಲಪ್ರಕೃತಿಯನ್ನು ಅನುಸರಿಸಿ ಮೈಥುನವನ್ನು ಆಚರಿಸತಕ್ಕದ್ದು.

೨೮. ನಿದ್ರಾ:—"ಯದಾತುಮನಸಿಕ್ಲಾಂತೇ ಕರ್ಮಾತ್ಮಾನಃ ಕ್ಲಮಂಗತಾಃ। ವಿಷಯೇಭ್ಯೋ ನಿವರ್ತಂತೇ ತದಾ ಸ್ವಪಿತಿಮಾನವಃ" ॥ ಚ ॥ ಯಾವಾಗ್ಯೆ ಮನುಷ್ಯನು ಮನಃ ಕ್ಲಾಂತನಾಗುತ್ತಾನೋ ಮತ್ತು ಶ್ರಮಹೊಂದಿದ ಇಂದ್ರಿಯಗಳು ವಿಷಯಗಳಿಂದ ನಿವೃತ್ತವಾಗುತ್ತದೋ ಆವಾಗ್ಯೆ ಮನುಷ್ಯನು ನಿದ್ರೆಯನ್ನು ಹೊಂದುತ್ತಾನೆ. ಸುಶ್ರುತೋಕ್ತಿಯಂತೆ ನಿದ್ದೆಗೆ ತಮೋಗುಣವೇ ಕಾರಣ ಮತ್ತು ಬೋಧೆಗೆ ಸತ್ವವೇ ಕಾರಣ ಅಥವಾ ಸ್ವಭಾವವೇ ಬಲವತ್ತರವಾದ ಕಾರಣವೆಂದು ಇನ್ನೊಂದು ಮತ. ನಿದ್ರೆ ಎಂಬದು ಮನುಷ್ಯನಿಗೆ ಆರೋಗ್ಯವಾಗಿರುವದೇ ಅತ್ಯಂತ ಅವಶ್ಯವಾದ ವಿಷಯಗಳಲ್ಲೊಂದಾಗಿದೆ. ಆದ್ದರಿಂದಲೇನೇ ನಮ್ಮ ಶಾಸ್ತ್ರಕಾರರು "ನಿದ್ರಾಯತ್ತಂ, ಸುಖಂ, ದುಃಖಂ, ಪುಷ್ಟಿಃ, ಕಾರ್ಶ್ಯಂ, ಬಲಾಬಲಮ್। ವೃಷತಾ ಕ್ಲೀಬತಾ ಜ್ಞಾನಂ ಅಜ್ಞಾನಂ ಜೀವಿತಂ ನಚ" ॥ ಚ ॥ ಸುಖ—ದುಃಖ, ಪುಷ್ಟಿ—ಕಾರ್ಶ್ಯ ಬಲಾ—ಕ್ಲೀಣತಾ, ವೃಷತಾ—ನಪುಂಸಕತ್ವ, ಜ್ಞಾನ—ಅಜ್ಞಾನ, ಆಯುಃ-ಮೃತ್ಯು ಕೂಡ ನಿದ್ರೆಯ ಅಧೀನವಾಗಿದೆ ಎಂದರೆ ನಿದ್ದೆಯು ಮನುಷ್ಯನಿಗೆ ಎಷ್ಟು ಮುಖ್ಯವಾದ ವಿಷಯವೆಂಬುದನ್ನು ಪಾಠಕರೇ ಗ್ರಹಿಸಲಿ. ಮನುಷ್ಯನ ಮನಸ್ಸಿಗೆ ವಿರಾಮ ಸಿಕ್ಕಬೇಕಾದರೆ ಅದು ನಿದ್ರಾವಸ್ಥೆಯಲ್ಲಿಯೇ ಸರಿ. "ಅದಪ್ರಯುಕ್ತ ಬುದ್ಧಿಮಾನ್ ಮನುಷ್ಯನು ಹಿತಾಹಿತವನ್ನು ತಿಳಿದು ಸುಖವಾಗಿ ನಿದ್ರಿಸತಕ್ಕದ್ದು." ಸಾಮಾನ್ಯ ವ್ಯಕ್ತಿಗೆ ಸುಮಾರು ೭ ಘಂಟೆಯ ಕಾಲ ನಿದ್ರೆಯು ಸಾಕಾಗುವದು. ನಿದ್ದೆ ಮಾಡದೆ ಹೋದರೆ ಶರೀರಕ್ಕೆ ಆಗುವ ಪರಿಣಾಮವು ಸಾಮಾನ್ಯ ಜನರಿಗೂ ತಿಳಿಯುವದು. ನಿದ್ದೆ ಬಾರದೆ ಹೋಗುವರೇ ಚರಕಾಚಾರ್ಯನ ಅಭಿಪ್ರಾಯದಂತೆ ಮುಖ್ಯವಾಗಿ ಐದು ಕಾರಣಗಳಿರುವವು. ಅವಾವುವೆಂದರೆ—"ಕಾರ್ಯಂಕಾಲೋ ವಿಕಾರಶ್ಚ ಪ್ರಕೃತಿಃ ವಾಯು ರೇವಚ। ಏತಏವಚ ವಿಜ್ಞೇಯಾ ನಿದ್ರಾನಾಶಸ್ಯಹೇತವಃ" ॥ (ಚರಕ). ಅಂದರೆ ಕಾರ್ಯವಿಚಾರವನ್ನು ಮನಸ್ಸಿನಲ್ಲಿ ಹೆಚ್ಚಾಗಿ ಹಚ್ಚಿಕೊಳ್ಳುವದರಿಂದ, ಕಾಲಸ್ವಭಾವದಿಂದ, ವ್ಯಾಧಿಗಳಿಂದ, ಪ್ರಕೃತಿ ಪ್ರಭಾವದಿಂದ ಮತ್ತು ವಾಯುವಿನಿಂದಲೂ ಕೂಡ ನಿದ್ರಾನಾಶವಾಗುವದೆಂಬರ್ಥ.

೨೯. ನಿದ್ರಾಕಾಲ:—ರಾತ್ರಿಯೇ ನಿದ್ದೆಗೆ ಪ್ರಕೃತಿ ಸಿದ್ಧವಾದ ಕಾಲವು. ಆದರೆ ಮೇದಸ್ವಿ, ನಿತ್ಯಸ್ನೇಹ—ಪಾನ ಮಾಡುವವರು, ಶ್ಲೇಷ್ಮಪ್ರಕೃತಿ ಮತ್ತು ಕಫರೋಗಿಗಳು, ದೂಷೀ ವಿಷದಿಂದ ಪೀಡಿತರಾದವರು ಹೊರತು, ಇತರರು ಅಂದರೆ ಸಂಗೀತ, ಅಧ್ಯಯನ, ಮದ್ಯ, ಸ್ತ್ರೀ, ಹೆಚ್ಚು ಕರ್ಮ, ಭಾರ, ಪ್ರಯಾಣದಿಂದ ಕರ್ಶಿತರಾದವರು, ಕ್ಷತ ಕ್ಷೀಣ ಮುಂತಾದವರು ಮತ್ತು ಹಗಲು ನಿದ್ರಾಭ್ಯಾಸವುಳ್ಳವರು, ಕ್ರೋಧ, ಶೋಕ, ಭಯದಿಂದ ಪೀಡಿತರಾದವರು ಹಗಲು ಸ್ವಲ್ಪ ಹೊತ್ತು ನಿದ್ದೆಮಾಡುವದು ಉಚಿತ; ಅದರಲ್ಲಿಯೂ, ಗ್ರೀಷ್ಮಋತುವಿನ ರಾತ್ರಿಯು ಸಂಕ್ಷೇಪವಾಗಿರುವದರಿಂದ ಆ ಕಾಲದ ಹಗಲುನಿದ್ದೆಯು ಬಹಳ ಪ್ರಶಸ್ತವಾಗಿರುವದು. ಹಗಲು ನಿದ್ದೆಯಿಂದ ಧಾತುಸಾಮ್ಯ ಮತ್ತು ಅವುಗಳ ಬಲ ಕೂಡ ಉಂಟಾಗುವದಲ್ಲದೆ ಆಯುಷ್ಯವೃದ್ಧಿ ಮತ್ತು ಅಂಗಗಳು ಪುಷ್ಟಿಯಾಗುವವು.

(ಸಶೇಷ)

ದಾಸರಲ್ಲಿ ಮೂರು ತರವಿಹರು; "ವರದಾಸ", "ಹರಿದಾಸ", "ದೇಶಮಾತೆಯ ದಾಸ".
ವರದಾಸನು ಪಾಪಿ, ಹರಿದಾಸನುತ್ತಮನು, ದೇಶಮಾತೆಯ ದಾಸನು ಧರೆಯಲ್ಲಿ ಶ್ರೇಷ್ಠನು.
ಹರಿದಾಸನಿಗೆ ವರಲೋಕವೊಂದಿಹುದು; ವರದಾಸನೆಂಬವನು ಇಹಪರಗಳಿಲ್ಲದ ವರದೇಶಿ;
ದೇಶಮಾತೆಯ ದಾಸನು ಎಲ್ಲವುಗಳಲ್ಲಿಯೂ ಅಗ್ರಾಸನಾರ್ಹನು.

ಸಾಮುವೇಲ್ ಇನ್ಸಲ್

ಎ. ಅವನತಿ

ಇನ್ಸಲ್ಲರು ಜಗತ್ಪ್ರಸಿದ್ಧ ವ್ಯಕ್ತಿಯಾದರೂ ಮಿಲ್ಲಿಯಾಧಿಪತಿಯಾಗಿದ್ದರೂ ಅನೇಕ ಸಂಗತಿಗಳಲ್ಲಿ ಬಹಳ ಸರಳರಾಗಿದ್ದರು.

೩೯ ವರ್ಷ ವಯಸ್ಸಾಗುವ ವರೆಗೆ ಮದುವೆ ಮಾಡಿಕೊಳ್ಳಲು ಇವರಿಗೆ ಸಮಯವಿರಲಿಲ್ಲ. ಸುಂದರಿಯಾದ ಒಬ್ಬ ನಟಿಯನ್ನು ಆ ಮೇಲೆ ವಿವಾಹವಾದರು. ಅವಳಿಗಾಗಿ ತನ್ನ ಯೋಗ್ಯತೆಗನುಸರಿಸಿ ಒಂದು ಭವ್ಯವಾದ ಮನೆಯನ್ನು ಕಟ್ಟಿಸಿದರು. ಹೀಗಾಗಿ ಅಪೇಕ್ಷಿಸಬಹುದಾದ ಎಲ್ಲವೂ ಅವರಿಗೆ ಲಭಿಸಿತ್ತು.

ಪಟ್ಟಣದ ಹೊರಗಣ ೪೦೦ ಎಕ್ರೆ ಸ್ಥಳವನ್ನು ಪಡಕೊಂಡು ಆಸ್ತಿಯೊಂದನ್ನು ನಿರ್ಮಿಸಲು ಯೋಚಿಸಿದರು. ಒಂದು ಮಿಲ್ಲಿಯ ಪವನಿಗಿಂತ ಹೆಚ್ಚು ವ್ಯಯಮಾಡಿ ಸುಂದರವಾದ ಒಂದು ಬಂಗಲೆಯನ್ನು ಕಟ್ಟಿಸಿದರು. ಅತಿ ಹೆಚ್ಚಿನ ಖರ್ಚಿನಿಂದ ಪ್ರತಿಯೊಂದು ಕೆಲಸವೂ ವಿದ್ಯುಚ್ಛಕ್ತಿಯಲ್ಲೇ ಸಾಗುತ್ತಿತ್ತು. ತನ್ನ ಹೆಂಡತಿಗೆಂದೇ ವರ್ಷಕ್ಕೆ ೫೦,೦೦೦ ಪವನು ಖರ್ಚಿಗೆ ಕೊಡುತ್ತಿದ್ದರು. ೪,೦೦೦,೦೦೦ ಪವನಿನ ಖರ್ಚಿನಿಂದ ಒಂದು ನಾಟಕ ಶಾಲೆಯನ್ನು ತನಗಾಗಿ ಮತ್ತು ತನ್ನ ಹೆಂಡತಿಗಾಗಿ ಕಟ್ಟಿಸಿದರು.

ಹೀಗಾಗಿ, ಲೋಕದಲ್ಲಿ ಒಬ್ಬನು ಮಾಡಬಹುದಾದುದೆಲ್ಲವನ್ನೂ ಇನ್ಸಲ್ಲರು ಮಾಡಿದರು. ಇನ್ಸಲ್ ಬುಗ್ಗೆಯು ಬಹಳ ಅಪರಿಮಿತವಾದ ಪರಿಮಾಣವನ್ನು ಹೊಂದಿತು. ಆ ಮೇಲೂ ದೊಡ್ಡದಾಗಲು ಅಸಾಧ್ಯವಿರುವಾಗ ಅದು ಒಡೆದೇ ಹೋಗಬೇಕು. ಆದರೆ, ಇದು ಒಡೆದುಹೋಗಲು ಮೂರು ವರ್ಷಗಳ ಸಮಯ ತಗಲಿತು. ಅವರ ೪೦೦,೦೦೦ ಪಾಲುಗಾರರಿಗೂ ಅವರಲ್ಲಿ ತುಂಬಾ ಭರವಸೆಯಿತ್ತು. ಉಷ್ಣವನ್ನೂ ಬೆಳಕನ್ನೂ ಶಕ್ತಿಯನ್ನೂ ಅವರು ಒದಗಿಸುತ್ತಿದ್ದರು. ಅವರು ಬೀಳುವುದಾದರೂ ಹೇಗೆ? ಇನ್ಸಲ್ಲರ ಧನಸಂಬಂಧವಾದ ರಚನೆಯ ನಿರ್ಬಲತೆಯನ್ನು ಅವರು ಕಾಣದಾದರು.

ಕ್ಲೀವ್‌ಲೇಂಡಿನ ಇನ್ನೊಬ್ಬ ಮಿಲ್ಲಿಯಾಧಿಪತಿಯು ಇವರನ್ನು ಎಡಿಸನ್ ಕೋಮನ್‌ವೆಲ್ತಿನ ವಿಷಯ ಪರೀಕ್ಷಿಸಲಾಲೋಚಿಸಿದನು. ಇದರಲ್ಲೂ ಇನ್ಸಲ್ಲರ ಪಾಲಿಗೇ ಜಯವು ಒಲಿಯಿತು. ಆದರೆ, ಇದರಿಂದಾಗಿ ಇನ್ಸಲ್ಲರ ಖಜಾನೆಯು ಬರಿದಾಯಿತು. ಇಲ್ಲಿಂದ ಮೆಲ್ಲನೆ ಬರೇ ಕಾಗದದಿಂದ ನಿರ್ಮಿಸಿದ ಅವರ ಮಹಾರಾಜ್ಯದ ಅಧಪತನಕ್ಕೆ ಪ್ರಾರಂಭವಾಯ್ತು. ಪಾಲುಗಳ ಮೌಲ್ಯವು ಇಳಿಯಿತು. ೧೯೩೨ರ ಒಳಗಾಗಿ ೫೦,೦೦೦ ಮೂಲಧನದ ಕಂಪೆನಿಯು ಚಲುಗಾಡಲು ಪ್ರಾರಂಭವಾಯಿತು. ಎಷ್ಟು ಪ್ರಯತ್ನಪಟ್ಟರೂ ಸ್ಥಿರಪಡಿಸಲಾಗಲಿಲ್ಲ. ಇನ್ಸಲ್ಲರ ಪಾಲುಗಳ ಮೌಲ್ಯವು ಒಂದೇ ಸವನೆ ಇಳಿಯಿತು. ಇದರಿಂದಾಗಿ ಜೂನ್ ತಿಂಗಳೊಳಗೆ ಬೇಂಕಿನಿಂದ ಸಾಧ್ಯವಾದಷ್ಟು ಹೆಚ್ಚಿನ ಹಣವನ್ನು ಪಡಕೊಂಡಾಯಿತು. ತನ್ನ ಆಸ್ತಿಪಾಸ್ತಿಗಳೆಲ್ಲವೂ ಕೈತಪ್ಪಿದವು. ಆದರೂ ಏನೊಂದೂ ಪ್ರಯೋಜನವಿಲ್ಲ!

ಇನ್ಸಲ್ ಬುಗ್ಗೆಯು ಒಡೆಯಲು ಕೇವಲ ೩೦ ಪವನುಗಳ ಪಾಲುಗಳನ್ನು ಪಡಕೊಂಡ ಹೆಲೆನ್ ಸೇಮುವೆಲ್ಸ್‌ಳೆಂಬವಳೇ ಕಾರಣಳಾದಳು. ಇನ್ಸಲ್ಲರ 'ಇನ್ಸೊಲ್ವೆನ್ಸಿ'ಗಾಗಿ ದಾವೆ ಮಾಡಿದಳು. ಶುರುವಿಗೆ ಜನರೆಲ್ಲರೂ ನೆಗಾಡಿದರು. ಆದರೆ, ಇನ್ಸಲ್ಲರೂ ಅವರ ಸಂಗಾತಿಗಳೂ ಮಾತ್ರ ಇದರಲ್ಲಿ ಭಾಗವಹಿಸಲಿಲ್ಲ.

ಒಂದು ತಿಂಗಳ ಬಳಿಕ ಇಡೀ ಇನ್ಸಲ್ ರಾಜ್ಯವೇ ಒಮ್ಮಿಂದೊಮ್ಮೆ ಬಿದ್ದು ಹೋಯಿತು. ಇದರ ಮಧ್ಯದಲ್ಲಿದ್ದ ಇನ್ಸಲರು ದಿಕ್ಕುತೋಚದಾದರು. ಅಲ್ಲಿಂದ ಏಮಾನ ವೇರಿ ಹಾರಿಹೋದರು. ಲೋಕಕ್ಕೆ ತಿಳಿಯಪಡಿಸಬಾರದೆಂಬ ಅನೇಕ ರಹಸ್ಯಗಳವರಲ್ಲಿದ್ದುವು. ಅವರ ತಮ್ಮನಿಗೆ ತನ್ನ ಸ್ಥಾನವನ್ನು ಸ್ಥಿರಪಡಿಸಿಕೊಡಲು ಬೇಕಾಗಿದ್ದ ಬರೇ ೩೪,೦೦೦ ಪವನುಗಳನ್ನು ಇವರಲ್ಲಿ ಕೇಳಿದಾಗ ಕೊಡಲಿಕ್ಕೆ ಇರಲಿಲ್ಲ. ವಿದ್ಯುಚ್ಛಕ್ತಿಯ ದೊರೆಯಾದ, ೫೦೦,೦೦,೦೦೦ ಪವನುಗಳ ಒಡೆತನದ ಕಂಪೆನಿಗಳ ಒಡೆಯರಾದ ಇವರ ಹತ್ತಿರ ತನ್ನ ಸಹೋದರನ ಸ್ಥಿತಿಯನ್ನು ಕಾಪಾಡಲು ಈ ಅಲ್ಪ ಹಣವು ಕೂಡ ಇರಲಿಲ್ಲ! ಇಷ್ಟು ಹಣವು ಅವರ ಹೆಂಡತಿಯ ಒಂದೇ ಒಂದು ಆಭರಣಕ್ಕೆ ಕೊಟ್ಟ ಮೌಲ್ಯವಾಗಬಹುದು. ಆದರೂ ಇದು ಕೂಡ ಇಂದು ಅವರಲ್ಲಿಲ್ಲವಾಯಿತು! ಇಡೀ ಪ್ರಪಂಚವನ್ನೇ ಬೆರಗುಗೊಳಿಸಿದ ಇನ್ಸಲರು ಇಂದು ತಲೆಯೆತ್ತದೆ ಎಲ್ಲೋ ಅಮೇರಿಕದ ಒಂದು ಮೂಲೆಯಲ್ಲಿ ಸಾಮಾನ್ಯವಾದ ಒಂದು ಜೀವನವನ್ನು ನಡೆಸುತ್ತಿರುವರು

ಸಂಗೀತ ಸುಧಾ

ಲೇಖಕ:—ಮಾಸ್ಟರ್ ಯು‌ಜ್. ನಾರಾಯಣರಾವ್,
ಲಲಿತ ಕಲಾದರ್ಶಕ ಸಂಗೀತ ಶಾಲೆ, ಮಂಗಳೂರು.

(Rights Reserved)

ತಾಳ—ಲಯ—ವಿಚಾರ

ಸಂಗೀತದ ಮುಖ್ಯ ಆಧಾರವು ತಾಳದ ಮೇಲೆ ಹೊಂದಿಕೊಂಡಿರುತ್ತದೆ. ತಾಳದ ಯೋಗದಿಂದ ಸಂಗೀತವು ಸುಲಭವಾಗುತ್ತದೆ. ತಾಳವಿಲ್ಲದ ಗಾಯನವು ಅಥವಾ ವಾದನವು ನೀರಸವಾಗಿರುತ್ತದೆ. ತಾಳ ರಹಿತವಾದ ಗಾಯನ ವಾದನಕ್ಕೆ ಸಶಾಸ್ತ್ರ ಸಂಗೀತ ವೆಂದು ಹೇಳುವುದಿಲ್ಲ. ಹೇಗೆ ಗಾಯನದ ಆಧಾರವು ತಾಳವನ್ನು ಹೊಂದಿರುತ್ತದೋ—ಹಾಗೆಯೇ ತಾಳವು ಲಯವನ್ನು ಹೊಂದಿಕೊಂಡಿರುತ್ತದೆ.

ಕ್ರಮವಾಗಿರುವ ಸಂಗೀತದಲ್ಲಿ ಅಥವಾ ವಾದನದಲ್ಲಿ ಅಯಾಯಾ ಅಕ್ಷರಗಳ ಕ್ರಮವು ಕೆಲವು ದೀರ್ಘವಾಗಿಯೂ, ಕೆಲವು ಹ್ರಸ್ವವಾಗಿಯೂ ಇರುತ್ತವೆ. ಅವನ್ನು ಎಷ್ಟು ಎಳೆಯಬೇಕೋ ಎಲ್ಲಿ ನಿಲ್ಲಿಸಬೇಕೋ ಎಲ್ಲಿ ಪ್ರಾರಂಭಿಸಬೇಕೋ ಅದನ್ನು ತಿಳಿಯುವುದಕ್ಕೋಸ್ಕರ ನಿಯಮಿತ ಅಕ್ಷರಗಳ ಕಾಲಕ್ಕನುಸಾರವಾಗಿ ಕೈತಟ್ಟುವುದು ಅಥವಾ ತಾಳಹಾಕುವುದು ಅಥವಾ ಯಾವುದೇ ಒಂದು ಸಾಧನದಿಂದ ಆಘಾತ ಮಾಡುವುದು,—ಇದಕ್ಕೆ ತಾಳವೆನ್ನುತ್ತಾರೆ.

ಮಾತ್ರೆ ಅಥವಾ ಅಕ್ಷರ

ತಾಳಪ್ರಮಾಣಕ್ಕನುಸಾರವಾಗಿ ಕೋರಿಸತಕ್ಕ ಒಂದು ಘಾತದಿಂದ ಇನ್ನೊಂದು ಘಾತದ ವರೆಗೆ ಅವಕಾಶದಲ್ಲಿರುವ "ಸಮಯ"ವನ್ನು ತಿಳಿಯುವುದಕ್ಕಾಗಿಯೇ ಮಾತ್ರೆ ಅಥವಾ ಅಕ್ಷರಗಳೆಂಬುದನ್ನು ನಿರೂಪಿಸಿರುವರು. ಅಂತಹ ಮಾತ್ರೆ (ಅಕ್ಷರ)ಗಳ ಲೆಕ್ಕಾಚಾರವು ಅಯಾಯಾ ಹೆಸರಿನ ತಾಳಗಳನ್ನು ಹೊಂದಿರುತ್ತದೆ.

ಮನುಷ್ಯನ ನಾಡಿಯ ಎರಡು ಹೊಡೆತದ ಮಧ್ಯೆ ಸಮಯಕ್ಕೆ ಒಂದು ಮಾತ್ರೆಯ ಕಾಲವೆನ್ನಬಹುದು ಅಥವಾ ಒಂದು ಅಕ್ಷರವನ್ನು ಉಚ್ಚರಿಸುವ ಸಮಯಕ್ಕೆ ಒಂದು ಮಾತ್ರೆಯ ಕಾಲವೆನ್ನಲೂ ಬಹುದು. ಅಕ್ಷರಕಾಲವನ್ನು ತೀಫ್ರವಾಗಿಯಾಗಲಿ, ನಿಧಾನವಾಗಿಯಾಗಲಿ ಲೆಕ್ಕಮಾಡುವುದು ಹಾಡುವವನನ್ನು ಅಥವಾ ಬಾರಿಸುವವನನ್ನು ಹೊಂದಿಕೊಂಡಿರುತ್ತದೆ.

ಮನುಷ್ಯನ ನಾಡಿಯ ಒಂದೊಂದು ಹೊಡತಕ್ಕೆ ಒಂದೊಂದು ಮಾತ್ರೆಯನ್ನಾಗಿ ತೆಗೆದುಕೊಂಡರೆ, ಅದಕ್ಕೆ ಸಾಧಾರಣವಾಗಿ "ಮಧ್ಯ"ಕಾಲವೆನ್ನುತ್ತಾರೆ ಅದಕ್ಕಿಂತ ತೀಫ್ರವಾಗಿ ತೆಗೆದುಕೊಂಡರೆ "ಧೃತ"ಕಾಲವೆಂದೂ, ನಿಧಾನವಾಗಿ ತೆಗೆದುಕೊಂಡರೆ, "ವಿಲಂಬಿತ" ಕಾಲವೆಂದೂ ಹೇಳುತ್ತಾರೆ.

ಲಯ

ಒಂದು ಕೀರ್ತನೆ ಅಥವಾ ಒಂದು ಪದವನ್ನು ಯಾವ ಕಾಲದಿಂದ ಆರಂಭಮಾಡುತ್ತೇವೋ ಅದೇ ಕಾಲದಲ್ಲಿ ಕ್ರಮದಂತೆ ಮುಗಿಸುವುದಕ್ಕೆ "ಲಯ" ವೆನ್ನುವರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪ್ರತಿ ಮಾತ್ರೆಯ (ಅಕ್ಷರದ) ಉಚ್ಚಾರಣೆಯ ಇರುವಿಕೆಯು, ಅಥವಾ ಉಚ್ಚರಿಸುವ ಸಮಯವು ಸರಿಸಮಾನವಾಗಿರುವುದಕ್ಕೆ "ಲಯ"ವೆಂದು ಹೆಸರು.

ಮುಖ್ಯ ಪ್ರಾಚೀನ 7 ತಾಳಗಳು.

ದ್ರುವೊ, ಮಠೊ ರೂಪಕಶ್ಚ, ಜಂಪಾ,
ತಿವಡಾ ತಥಾ ॥
ಅಟತಾಲ, ಏಕತಾಲ, ಸಪ್ತತಾಲ
ಪ್ರಕೀರ್ತಿತಾಃ ॥

ದ್ರುವ, ಮಠ್ಯ, ರೂಪಕ, ಝಂಪಾ, ತ್ರಿಪುಟ, ಅಟತಾಳ, ಏಕತಾಳ ಹೀಗೆ ? ತಾಳಗಳು.

ಈ 7 ತಾಳಗಳಿಗೆ ಹಿಂದುಸ್ಥಾನಿ ಗಾಯಕರು 1. ಆಡಾ ಚೌತಾಲ್, 2. ಸುಲಫಾಕ್, 3. ರೂಪ ತಾಲ್ ಅಥವಾ ಯೆಕ್ಕಾ, 4. ಜಪತಾಲ್, 5. ತ್ರಿವಟ್ ಅಥವಾ ತ್ರಿತಾಲ್, 6. ಚೌತಾಲ್ 7. ಏಕತಾಲ್ ಅಥವಾ ಕೇರವ ಎಂದು ಹೇಳುತ್ತಾರೆ.

ಸಾಮುವೇಲ್ ಇನ್ಸಲ್

ಶ್ರೀ. ಅವನತಿ

ಇನ್ಸಲ್ಲರು ಜಗತ್ಪ್ರಸಿದ್ಧ ವ್ಯಕ್ತಿಯಾದರೂ ಮಿಲ್ಲಿಯಾಧಿಪತಿಯಾಗಿದ್ದರೂ ಅನೇಕ ಸಂಗತಿಗಳಲ್ಲಿ ಬಹಳ ಸರಳರಾಗಿದ್ದರು.

೩೯ ವರ್ಷ ವಯಸ್ಸಾಗುವ ವರೆಗೆ ಮದುವೆ ಮಾಡಿಕೊಳ್ಳಲು ಇವರಿಗೆ ಸಮಯವಿರಲಿಲ್ಲ. ಸುಂದರಿಯಾದ ಒಬ್ಬ ನಟಯನ್ನು ಆ ಮೇಲೆ ವಿವಾಹವಾದರು. ಅವಳಿಗಾಗಿ ತನ್ನ ಯೋಗ್ಯತೆಗನುಸರಿಸಿ ಒಂದು ಭವ್ಯವಾದ ಮನೆಯನ್ನು ಕಟ್ಟಿಸಿದರು. ಹೀಡಾಗಿ ಅಪೇಕ್ಷಿಸಬಹುದಾದ ಎಲ್ಲವೂ ಅವರಿಗೆ ಲಭಿಸಿತ್ತು.

ಪಟ್ಟಣದ ಹೊರಗಣ ೪೦೦ ಎಕ್ರೆ ಸ್ಥಳವನ್ನು ಪಡೆಕೊಂಡು, ಆಸ್ತಿಯೊಂದನ್ನು ನಿರ್ಮಿಸಲು ಯೋಚಿಸಿದರು. ಒಂದು ಮಿಲ್ಲಿಯ ಪವನಿಗಿಂತ ಹೆಚ್ಚು ವ್ಯಯಮಾಡಿ ಸುಂದರವಾದ ಒಂದು ಬಂಗಲೆಯನ್ನು ಕಟ್ಟಿಸಿದರು. ಅತಿ ಹೆಚ್ಚಿನ ಖರ್ಚಿನಿಂದ ಪ್ರತಿಯೊಂದು ಕೆಲಸವೂ ವಿದ್ಯುಚ್ಛಕ್ತಿಯಲ್ಲೇ ಸಾಗುತ್ತಿತ್ತು. ತನ್ನ ಹೆಂಡತಿಗೆಂದೇ ವರ್ಷಕ್ಕೆ ೫೦,೦೦೦ ಪವನು ಖರ್ಚಿಗೆ ಕೊಡುತ್ತಿದ್ದರು. ೪,೦೦೦,೦೦೦ ಪವನಿನ ಖರ್ಚಿನಿಂದ ಒಂದು ನಾಟಕ ಶಾಲೆಯನ್ನು ತನಗಾಗಿ ಮತ್ತು ತನ್ನ ಹೆಂಡತಿಗಾಗಿ ಕಟ್ಟಿಸಿದರು.

ಗಾಗಿ, ಲೋಕದಲ್ಲಿ ಒಬ್ಬನು ಮಾಡಬಹುದಾದು
ಇನ್ಸಲ್ಲರು ಮಾಡಿದರು. ಇನ್ಸಲ್ ಬುಗ್ಗೆಯು
ಆಪಾರವಾದ ಪರಿಮಾಣವನ್ನು ಹೊಂದಿತು.
ದೊಡ್ಡದಾಗಲು ಅಸಾಧ್ಯವೆನುವಾಗ ಅದು
ಹೋಗಲೇಕು. ಆದರೆ, ಇದು ಒಡೆದುಹೋಗಲು
ಗಳ ಸಮಯ ತಗಲಿತು. ಅವರ ೪೦೦,೦೦೦
ಅವರಲ್ಲಿ ತುಂಬಾ ಭರವಸೆಯಿತ್ತು. ಉಷ್ಣ
ಯನ್ನು ಅವರು ಒದಗಿಸುತ್ತಿದ್ದರು.
ನ್ಸಲ್ಲರ ಧನಸಂಬಂಧ
ವರು ಕಾಣದಾದರು.
ಮಿಲಿಯಾಧಿಪತಿಯು

ಬರಿದಾಯಿತು. ಇಲ್ಲಿಂದ ಮೆಲ್ಲನೆ ಬರೇ ಕಾಗದದಿಂದ ನಿರ್ಮಿಸಿದ ಅವರ ಮಹಾರಾಜ್ಯದ ಅಧಃಪತನಕ್ಕೆ ಪ್ರಾರಂಭವಾಯ್ತು. ಪಾಲುಗಳ ಮೌಲ್ಯವು ಇಳಿಯಿತು. ೧೯೩೨ರ ಒಳಗಾಗಿ ೫೬೦,೦೦೦ ಮೂಲಧನದ ಕಂಪೆನಿಯು ಬಲುಗಾಡಲು ಪ್ರಾರಂಭವಾಯಿತು. ಎಷ್ಟು ಪ್ರಯತ್ನಪಟ್ಟರೂ ಸ್ಥಿರಪಡಿಸಲಾಗಲಿಲ್ಲ. ಇನ್ಸಲ್ಲರ ಪಾಲುಗಳ ಮೌಲ್ಯವು ಒಂದೇ ಸವನೆ ಇಳಿಯಿತು. ಇದರಿಂದಾಗಿ ಜೂನ್ ತಿಂಗಳೊಳಗೆ ಬೇಂಕಿನಿಂದ ಸಾಧ್ಯವಾದಷ್ಟು ಹೆಚ್ಚಿನ ಹಣವನ್ನು ಪಡಕೊಂಡಾಯಿತು. ತನ್ನ ಆಸ್ತಿಪಾಸ್ತಿಗಳೆಲ್ಲವೂ ಕೈತಪ್ಪಿದವು. ಆದರೂ ಏನೊಂದೂ ಪ್ರಯೋಜನವಿಲ್ಲ!

ಇನ್ಸಲ್ ಬುಗ್ಗೆಯು ಒಡೆಯಲು ಕೇವಲ ೩೦೦ ಪವನುಗಳ ಪಾಲುಗಳನ್ನು ಪಡಕೊಂಡ ಹೆಲೆನ್ ಸೇಮುವೆಲ್ಸ್‌ಳೆಂಬವಳೇ ಕಾರಣಳಾದಳು. ಇನ್ಸಲ್ಲರ 'ಇನ್ಸೊಲ್ವೆನ್ಸಿ'ಗಾಗಿ ದಾವೆ ಮಾಡಿದಳು. ಶುರುವಿಗೆ ಜನರೆಲ್ಲರೂ ನೆಗಾಡಿದರು. ಆದರೆ, ಇನ್ಸಲ್ಲರೂ ಅವರ ಸಂಗಾತಿಗಳೂ ಮಾತ್ರ ಇದರಲ್ಲಿ ಭಾಗವಹಿಸಲಿಲ್ಲ.

ಒಂದು ತಿಂಗಳ ಬಳಿಕ ಇಡೀ ಇನ್ಸಲ್ ರಾಜ್ಯವೇ ಒಮ್ಮಿಂದೊಮ್ಮೆ ಬಿದ್ದು ಹೋಯಿತು. ಇದರ ಮಧ್ಯದಲ್ಲಿದ್ದ ಇನ್ಸಲರು ದಿಕ್ಕುತೋಚದಾದರು. ಅಲ್ಲಿಂದ ವಿಮಾನವೇರಿ ಹಾರಿಹೋದರು. ಲೋಕಕ್ಕೆ ತಿಳಿಯಪಡಿಸಬಾರದೆಂಬ ಅನೇಕ ರಹಸ್ಯಗಳವರಲ್ಲಿದ್ದುವು. ಅವರ ತಮ್ಮನಿಗೆ ತನ್ನ ಸ್ಥಾನವನ್ನು ಸ್ಥಿರಪಡಿಸಿಕೊಡಲು ಬೇಕಾಗಿದ್ದ ಬರೀ ೫೪,೦೦೦ ಪವನುಗಳನ್ನು ಇವರಲ್ಲಿ ಕೇಳಿದಾಗ ಕೊಡಲಿಕ್ಕೆ ಇರಲಿಲ್ಲ. ವಿದ್ಯುಚ್ಛಕ್ತಿಯ ದೊರೆಯಾದ, ೫೦೦,೦೦,೦೦೦ ಪವನುಗಳ ಬಂಡವಾಳದ ಕಂಪೆನಿಗಳ ಒಡೆಯರಾದ ಇವರ ಹತ್ತರ ತನ್ನ ಸಹೋದರನ ಸ್ಥಿತಿಯನ್ನು ಕಾಪಾಡಲು ಅಲ್ಪ ಹಣವು ಕೂಡ ಇರಲಿಲ್ಲ! ಇಷ್ಟು ಹಣವು ಅವರ ಪತ್ನಿಯ ಒಂದೇ ಒಂದು ಆಭರಣಕ್ಕೆ ಕೊಟ್ಟ ಮೌಲ್ಯವಾಗಿತ್ತು. ಆದರೂ ಇದು ಕೂಡ ಇಂದು ಅವರಲ್ಲಿಲ್ಲವಾಯಿತು. ಇಡೀ ಪ್ರಪಂಚವನ್ನೇ ಬೆರಗುಗೊಳಿಸಿದ ಇನ್ಸಲರು ಇಂದು ತಲೆಮರೆತ್ತದೆ ಎಲ್ಲೋ ಅಮೇರಿಕದ ಒಂದು ಮೂಲೆಯಲ್ಲಿ ಸಾಮಾನ್ಯವಾದ ಒಂದು ಜೀವನವನ್ನು ನಡೆಸುತ್ತಿರುವರು.

ಸಂಗೀತ ಸುಧಾ

ಲೇಖಕ:—ಮಾಸ್ತರ್ ಯಚ್. ನಾರಾಯಣರಾವ್,
ಲಲಿತ ಕಲಾದರ್ಶಕ ಸಂಗೀತ ಶಾಲೆ, ಮಂಗಳೂರು.

(Rights Reserved)

ತಾಳ—ಲಯ—ವಿಚಾರ

ಸಂಗೀತದ ಮುಖ್ಯ ಆಧಾರವು ತಾಳದ ಮೇಲೆ ಹೊಂದಿಕೊಂಡಿರುತ್ತದೆ. ತಾಳದ ಯೋಗದಿಂದ ಸಂಗೀತವು ಸುಲಭವಾಗುತ್ತದೆ. ತಾಳವಿಲ್ಲದ ಗಾಯನವು ಅಥವಾ ವಾದನವು ನೀರಸವಾಗಿರುತ್ತದೆ. ತಾಳರಹಿತವಾದ ಗಾಯನ ವಾದನಕ್ಕೆ ಸಶಾಸ್ತ್ರ ಸಂಗೀತವೆಂದು ಹೇಳುವುದಿಲ್ಲ. ಹೇಗೆ ಗಾಯನದ ಆಧಾರವು ತಾಳವನ್ನು ಹೊಂದಿರುತ್ತದೋ—ಹಾಗೆಯೇ ತಾಳವು ಲಯವನ್ನು ಹೊಂದಿಕೊಂಡಿರುತ್ತದೆ.

ಕ್ರಮವಾಗಿರುವ ಸಂಗೀತದಲ್ಲಿ ಅಥವಾ ವಾದನದಲ್ಲಿ ಆಯಾಯಾ ಅಕ್ಷರಗಳ ಕ್ರಮವು ಕೆಲವು ದೀರ್ಘವಾಗಿಯೂ, ಕೆಲವು ಹ್ರಸ್ವವಾಗಿಯೂ ಇರುತ್ತವೆ. ಅವನ್ನು ಎಷ್ಟು ಎಳೆಯಬೇಕೋ ಎಲ್ಲಿ ನಿಲ್ಲಿಸಬೇಕೋ ಎಲ್ಲಿ ಪ್ರಾರಂಭಿಸಬೇಕೋ ಅದನ್ನು ತಿಳಿಯುವುದಕ್ಕೋಸ್ಕರ ನಿಯಮಿತ ಅಕ್ಷರಗಳ ಕಾಲಕ್ರಮಾನುಸಾರವಾಗಿ ಕೈತಟ್ಟುವುದು ಅಥವಾ ತಾಳಹಾಕುವುದು ಅಥವಾ ಯಾವುದೇ ಒಂದು ಸಾಧನದಿಂದ ಆಘಾತ ಮಾಡುವುದು,—ಇದಕ್ಕೆ ತಾಳವೆನ್ನುತ್ತಾರೆ.

ಮಾತ್ರೆ ಅಥವಾ ಅಕ್ಷರ

ತಾಳಪ್ರಮಾಣಕ್ರಮಾನುಸಾರವಾಗಿ ತೋರಿಸತಕ್ಕ ಒಂದು ಘಾತದಿಂದ ಇನ್ನೊಂದು ಘಾತದ ವರೆಗೆ ಅವಕಾಶದಲ್ಲಿರುವ "ಸಮಯ"ವನ್ನು ತಿಳಿಯುವುದಕ್ಕಾಗಿಯೇ ಮಾತ್ರೆ ಅಥವಾ ಅಕ್ಷರಗಳೆಂಬುದನ್ನು ನಿರೂಪಿಸಿರುವರು. ಅಂತಹ ಮಾತ್ರೆ (ಅಕ್ಷರ)ಗಳ ಲೆಕ್ಕಾಚಾರವು ಆಯಾಯಾ ಹೆಸರಿನ ತಾಳಗಳನ್ನು ಹೊಂದಿರುತ್ತದೆ.

ಮನುಷ್ಯನ ನಾಡಿಯ ಎರಡು ಹೊಡೆತದ ಮಧ್ಯೆ ಸಮಯಕ್ಕೆ ಒಂದು ಮಾತ್ರೆಯ ಕಾಲವೆನ್ನಬಹುದು ಅಥವಾ ಒಂದು ಅಕ್ಷರವನ್ನು ಉಚ್ಚರಿಸುವ ಸಮಯಕ್ಕೆ ಒಂದು ಮಾತ್ರೆಯ ಕಾಲವೆನ್ನಲೂಬಹುದು. ಅಕ್ಷರಕಾಲವನ್ನು ಶೀಘ್ರವಾಗಿಯಾಗಲಿ, ನಿಧಾನವಾಗಿಯಾಗಲಿ ಲೆಕ್ಕಮಾಡುವುದು ಹಾಡುವವನನ್ನು ಅಥವಾ ಬಾರಿಸುವವನನ್ನು ಹೊಂದಿಕೊಂಡಿರುತ್ತದೆ.

ಮನುಷ್ಯನ ನಾಡಿಯ ಒಂದೊಂದು ಹೊಡೆತಕ್ಕೆ ಒಂದೊಂದು ಮಾತ್ರೆಯನ್ನಾಗಿ ತೆಗೆದುಕೊಂಡರೆ, ಅದಕ್ಕೆ ಸಾಧಾರಣವಾಗಿ "ಮಧ್ಯ"ಕಾಲವೆನ್ನುತ್ತಾರೆ ಅದಕ್ಕಿಂತ ಶೀಘ್ರವಾಗಿ ತೆಗೆದುಕೊಂಡರೆ "ದ್ರುತ"ಕಾಲವೆಂದೂ, ನಿಧಾನವಾಗಿ ತೆಗೆದುಕೊಂಡರೆ, "ವಿಲಂಬಿತ" ಕಾಲವೆಂದೂ ಹೇಳುತ್ತಾರೆ.

ಲಯ

ಒಂದು ಕೀರ್ತನೆ ಅಥವಾ ಒಂದು ಪದವನ್ನು ಯಾವ ಕಾಲದಿಂದ ಆರಂಭಮಾಡುತ್ತೇವೋ ಅದೇ ಕಾಲದಲ್ಲಿ ಕ್ರಮದಂತೆ ಮುಗಿಸುವುದಕ್ಕೆ "ಲಯ" ವೆನ್ನುವರು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಪ್ರತಿ ಮಾತ್ರೆಯ (ಅಕ್ಷರದ) ಉಚ್ಚಾರಣೆಯ ಇರುವಿಕೆಯು, ಅಥವಾ ಉಚ್ಚರಿಸುವ ಸಮಯವು ಸರಿಸಮಾನವಾಗಿರುವುದಕ್ಕೆ "ಲಯ"ವೆಂದು ಹೆಸರು.

ಮುಖ್ಯ ಪ್ರಾಚೀನ 7 ತಾಳಗಳು.

ದ್ರುವೋ, ಮಠೋ ರೂಪಕಶ್ಚ, ಜಂಪಾ,
ತಿವಡಾ ತಥಾಟ ॥
ಅಟತಾಲ, ಏಕತಾಲ, ಸಪ್ತತಾಲ
ಪ್ರಕೀರ್ತಿತಾಃ ॥

ದ್ರುವ, ಮಠ್ಯ, ರೂಪಕ, ಝಂಪಾ, ತ್ರಿಪುಟ, ಅಟತಾಳ, ಏಕತಾಳ ಹೀಗೆ 7 ತಾಳಗಳು.

ಈ 7 ತಾಳಗಳಿಗೆ ಹಿಂದುಸ್ಥಾನಿ ಗಾಯಕರು 1. ಆಡಾ ಚೌತಾಲ್, 2. ಸುಲಫಾಕ್, 3. ರೂಪ ತಾಲ್ ಅಥವಾ ಯೆಕ್ಕಾ, 4. ಜಪತಾಲ್, 5. ತ್ರಿವಟ್ ಅಥವಾ ತ್ರಿತಾಲ್, 6. ಚೌತಾಲ್ 7. ಏಕತಾಲ್ ಅಥವಾ ಕೇರವ ಎಂದು ಹೇಳುತ್ತಾರೆ.

ಪ್ರತಿಯೊಂದು ತಾಳದಲ್ಲಿ ಚತುಶ್ರ, ತಿಶ್ರ, ಮಿಶ್ರ, ಖಂಡ ಸಂಕೀರ್ಣವೆಂದು 5 ಜಾತಿಯಾಗಿ ವಿಂಗಡಿಸಿರುತ್ತಾರೆ. ಹೀಗೆ 7 ತಾಳಗಳು 35 ಜಾತಿಗಳಾಗಿ ಪರಿಣಮಿಸಿರುತ್ತವೆ. (ಇವುಗಳ ಕಾರಣ ಮತ್ತು ತಾಳಪದ್ಧತಿಗಳನ್ನು ಮುಂದಿನ ಲೇಖನಗಳಲ್ಲಿ ಬರೆಯುವೆವು)

ಉತ್ತರಾದಿ (ಔದೀಚ್ಯ) ಗಾಯನದ ಮುಖ್ಯ ತಾಳಗಳು ಮತ್ತು ಅವುಗಳ ಅಕ್ಷರಕ್ರಮಗಳು:—

1.	ತ್ರಿತಾಲ್	16	ಅಕ್ಷರ.
2.	ದಾದರಾ	6	,,
3.	ರೂಪತಾಳ	6	,,
4.	,,	5	,,
5.	ಖೋಮಟಾ	6	,,
6.	ತೇವರಾ	7	,,
7.	ಚೌತಾಲ್	12	,,
8.	ಚೌತಾಲ್	14	,,
9.	ದೀಪಚಂದಿ	14	,,
10.	ಬಿಲಂದಿ ಹೋರಿ	14	,,
11.	ಜಪತಾಲ	10	,,
12.	ಸೂಲಪಾಕ್	10	,,
13.	,,	8	,,
14.	ಆಡಾಚೌತಾಲ್	14	,,
15.	,,	11	,,
16.	ಝುಮರಾ	14	,,
17.	ಗಝಲ್	7	,,
18.	ಕೇರವ	4	,,
19.	ಧಮಾಳಿ	8	,,
20.	ಝಂಪಾ	10	,,
21.	ಝುಂಪಾ	7	,,
22.	ಧಮಾರ್	14	,,
23.	ಅಷ್ಟಾಧಮಾರ್	9	,,
24.	ಪಂಜಾಬಿ	16	,,
25.	ಟಪ್ಪಾ	64	,,
26.	ಖ್ಯಾಲ್	32	,,
27.	ಆದಾತ್ರಿತಾಲ್	8	,,
28.	ಟುಮುರಿ	8	,,
29.	ಧ್ರುಪದ್	12	,,
30.	ಖವಾಲಿ	8	,,
31.	,,	4	,,
32.	ಸವಾರಿ	16	,,
33.	,,	15	,,
34.	ಧೀಮಾ	16	,,
35.	ಗಜಲ್ ಖವಾಲಿ	3	,,
36.	,,	6	,,
37.	ಫಿರೋಧಸ್ತ್	13	,,
38.	ಪ್ರಮಾಣ್	17	,,

ಹೀಗೆ 38 ತಾಳಗಳು ಮರಾಠಿ ಹಿಂದುಸ್ಥಾನಿ ಗಾಯನದಲ್ಲಿ ಪ್ರಚಾರದಲ್ಲಿವೆ. ಇವುಗಳ ಸಂಪೂರ್ಣ ವಿಚಾರಗಳನ್ನೂ– ಜಾತಿಬೇಧ– ತಾಳಟೀಕ ಮುಂತಾದುವುಗಳನ್ನೂ ದಕ್ಷಿಣಾತ್ಯದಲ್ಲಿನ ತಾಳಗಳ ವಿಷಯವನ್ನೂ ಮುಂದಿನ "ದೀಪಕ"ರಾಗದ ಲೇಖನದಲ್ಲಿ ವಿವರಿಸುವೆವು.

ದೇಶ–ವಿದೇಶ ವಾರ್ತೆ. ಕತೆಗಳು, ಮುಂತಾದವುಗಳನ್ನೋದಲು–
ವಾರಪತ್ರಿಕೆಗೆ ಚಂದಾದಾರರಾಗಲು ಮರೆಯದಿರಿ.



(ಸಂಗ್ರಹಕರ್ತ:—ಶ್ರೀ। ಬಿ. ರಾಮಕೃಷ್ಣಾಚಾರ್ಯ, ಬಿ ಎ., "ವಿಶಾರದ")

ನಿರ್ಣಯ

ಎರಡನೆಯ ತರಗತಿಯ ಟಿಕೇಟನ್ನು ಪಡಕೊಂಡು, ಅದನ್ನು ನನ್ನ ಮೇಲಂಗಿಯ ಜೇಬಿನೊಳಗೆ ಇಟ್ಟು, ನೆಟ್ಟಗೆ ರೈಲುಗಾಡಿಯಲ್ಲಿ ಕುಳಿತುಕೊಳ್ಳಲು, ಕಿಟಕಿಯ ಸವಿೂಪ ಗೋಶಾಲೆಯ ಕಾರ್ಯದರ್ಶಿಯು ಕೆಂಪು ಪಗಡಿಯನ್ನು ಇಟ್ಟುಕೊಂಡು, ಚಂದಾಹಣದ ಪಬ್ಬಿಯನ್ನು ಝಣಝಣ ಎಂದು ಅಲುಗಾಡಿಸುತ್ತಾ 'ಗೋರಕ್ಷಾ! ಬಾಬೂ!' ಎಂದು ಕೂಗುತ್ತ ಸಾರುತ್ತಿದ್ದನು. ಅವನ ಮೂಗಿನ ಸೊಳ್ಳೆಯಲ್ಲಿ ತುಂಬಿದ್ದ ಗಾಳಿಯನ್ನು ಒಂದೇ ಸವನೆ ನನ್ನ ಮುಖದ ಮೇಲೆ ತೋಪಿನ ಗುಂಡಿನಂತೆ ಬಿಟ್ಟುಬಿಟ್ಟನು! ಆಗಲೇ ನಾನು ಇಂದು ಹೊರಟ ಶಕುನವು ಒಳ್ಳಿತಲ್ಲವೆಂದು ನಿಶ್ಚಯಿಸಿದೆನು. ಅವಶ್ಯ ಏನೋ ತೊಂದರೆಯಾಗಬಹುದು. ಆದರೂ ಕಲ್ಲು ಮನಸ್ಸಿನಿಂದ ಕುಳಿತೆನು.

ನಮ್ಮ ಗಾಡಿಯ ಮುಂದುಗಡೆ ಮೂರನೆಯ ತರಗತಿಯ ಟಿಕೇಟ್ ಆಫೀಸು ಇದ್ದಿತು. ಅಲ್ಲಿ ಜನರ ಗುಂಪು ಬಹಳ ವಿದ್ದಿತು. ೨೦-೨೫ ಟಿಕೇಟುಗಳನ್ನು ಕೊಡುವಷ್ಟರಲ್ಲಿಯೇ ಟಿಕೆಟ್ ಬಾಬುವು (Booking Clerk) ಬಳಲಿ, ಹುಕ್ಕಾ ಪಾನ ಮಾಡದೆ ಕಂಗೆಟ್ಟಿದ್ದನು. ನಮ್ಮ ಗ್ರಾಮದ ವೃದ್ಧ ಮುಮತಾಜವಿ್ಯಾನು, "ಬಾಬೂ ಸಾಹೇಬ! ನೋಮ ವಾರ ಮಗನ ಮದುವೆ. ಅಲ್ಲಾನ ಮೆಹರ್ಬಾನಿಯಿಂದ ನಡೆಯಬೇಕು. ನಾಲ್ಕು ಕಾಸು ಬೇಕಾದರೂ ಹೆಚ್ಚಿಗೆ ತೆಗೆದುಕೊಂಡು ಒಂದು ಸಲ ಟಿಕೇಟನ್ನು ದಯಪಾಲಿಸಿರಿ!" ಎಂದನು.

ಸವಿೂಪದಲ್ಲಿಯೇ ಕಿಟಕಿಯ ಸರಳನ್ನು ಹಿಡಿದು ಕೊಂಡು ಓರ್ವ ಮುದುಕಿಯು, "ಬಾಬೂ! ಪರ್ವಕಾಲ ತಪ್ಪಿ ಹೋಗುವುದು. ಸ್ವಲ್ಪ ದಯಮಾಡಿ!" ಎಂದಳು.

ಒಬ್ಬ ಜವಾನನು ಇನ್ನೊಬ್ಬನನ್ನು ಆಚೆಗೆ ತಳ್ಳಿ, ಟಿಕೆಟ್ ಕಿಂಡಿಯ ಬಳಿ ಹೋಗಲು ಯತ್ನಿಸುತ್ತಿದ್ದನು. ಬಹಳ ಗಲಿಬಿಲಿಯಾಗಿದ್ದಿತು. ಕೊನೆಗೆ ಟಿಕೆಟ್ ಬಾಬುವು ಪ್ರತಿಯೊಂದು ಟಿಕೇಟಿಗೆ ಅರ್ಧಾಣೆಯಂತೆ ತೆಗೆದುಕೊಂಡು, ಪ್ರಮಾಣಿಕತನದಿಂದ ತನ್ನ ಯಜಮಾನನ ಉಪ್ಪನ್ನು ತೀರಿಸಿದನು.

ಟಿಕೇಟನ್ನು ಪಡೆದ ಕೂಡಲೇ ಪ್ರಯಾಣಿಕರು ತಂತಮ್ಮ ಭಾಗ್ಯವನ್ನು ಹೊಗಳುತ್ತ, ಬಾಣದಂತೆ ನೆಟ್ಟಗೆ ಗಾಡಿಯ ಕಡೆಗೆ ಓಡತೊಡಗಿದರು. ಯಾವನಾದರೂ ಒಂದು ಗಾಡಿಯ ಬಾಗಿಲನ್ನು ತೆರೆದನೆಂದರೆ ಎಲ್ಲರೂ ಅದೇ ಗಾಡಿಯೊಳಗೆ ನುಗ್ಗುವರು. ಐದೇ ನಿಮಿಷಗಳಲ್ಲಿ ಜನ್ಮದಲ್ಲೆಂದೂ ಕೇಳದ ಬೈಗಳು-ನಿಂದೆ ಕೇಳಬರುತ್ತಿದ್ದಿತು.

ಸೀಟಿಯ ಶಬ್ದವಾಯಿತು. ಜನರು ಲಗುಬಗೆಯಿಂದ ತಂತಮ್ಮ ಬಂಧುಮಿತ್ರರೊಡನೆ ಸಂದೇಶವನ್ನು ಹೇಳತೊಡಗಿದರು. ವೃದ್ಧ ರಾಮದೀನನು ಮಗನ ಕೈಯಲ್ಲಿ ರೂಪಾಯಿಗಳನ್ನು ಕೊಟ್ಟು, "ಮಗೂ, ಗೃಹಸ್ಥಿಕೆಯನ್ನು ಸರ್ವಿಯಾಗಿ ನೋಡಿಕೋ! ಈಗ ಎಲ್ಲಾ ನಿನ್ನ ಮೇಲೆ ಭರವಸೆ ಇಟ್ಟಿದೇನೆ. ಸಮಯ ನೋಡಿ ಕೆಲಸಮಾಡು!" ಎನುತಿದ್ದನು

ಕಚೇರಿಯ ಮುನ್ಸೀ ರಾಮಸಾರಾಯಣನು ತನ್ನ ಜೇಬಿನಲ್ಲಿ ಚಿಲುಮೆಯನ್ನು ತಡವುತ್ತ, ತನ್ನ ಸಂಗಡಿಗ ನೊಡನೆ "ಶ್ರೀರಾಮನ ಇಚ್ಛೆಯಿಂದ ಹದಿನೈದು ದಿನಗಳಲ್ಲಿ ಹಿಂದಿರುಗಿ ಬರುತ್ತೇನೆ. ಓಹೋ! ಕೊಡೆ—ಎಳ್ಳ್ಯದಪೆಟ್ಟಿಗೆ ಯನ್ನು ಮನೆಯಲ್ಲೇ ಮರೆತುಬಂದೆನು. ಅದನ್ನು ಸರಿ—"

ಮುಂದೆ ಏನು ಹೇಳಿದನೋ ಅದು ನನಗೆ ಕೇಳಿಸಲಿಲ್ಲ. ಗಾಡಿಯು ಹೊರಟಿದ್ದಿತು.

ನನ್ನ ಮುಂದೆ ಬೆಂಚಿನ ಮೇಲೆ ಇಬ್ಬರು ಪ್ರಯಾಣಿ ಕರು ಕುಳಿತಿದ್ದರು. ಒಬ್ಬನು ಬಂಗಾಲೀ, ಇನ್ನೊಬ್ಬನು ಪಂಜಾಬಿ! ಬಂಗಾಲೀ ಬಾಬುವು ತೆಳುವಾದ ಧೋತ್ರವನ್ನು ಉಟ್ಟು, ಸುಂದರವಾದ ಕೋಟು-ಶಾಲುಗಳನ್ನು ಧರಿಸಿದ್ದನು. ಪಂಜಾಬಿಯ ಪಗಡಿಯ ಹೊರತು ಇತರ ಉಡುಪು ಪಶ್ಚಿಮೊ ಸಾಹೇಬರದಾಗಿದ್ದಿತು. ಅವನು ಉದ್ದಕ್ಕೆ ಸರಿಯಾಗಿ ಪುಷ್ಟ ನಾಗಿರಲಿಲ್ಲ. • ಸಂಗಡ ತಂದಿದ್ದ ಜೂಲುನಾಯಿಯ ಬೆನ್ನನ್ನು ಆಗಾಗ ಸವರುತಿದ್ದನು.

ಗಾಡಿಯು ಹೊರಟ ಮೇಲೆ ಬಂಗಾಲೀ ಬಾಬುವು ತನ್ನ ಜೇಬಿನಿಂದ ಒಂದು ದೊಡ್ಡ ಚುರುಟನ್ನು ತೆಗೆದು ಬಾಯ ಲ್ಲಿಟ್ಟು, ಅದನ್ನು ಹತ್ತಿಸಿದನು. ಅನಂತರ ಆ ಪಂಜಾಬಿಯ ಬೆಂಚಿನ ಮೇಲೆ ಕುಳಿತು ಸೇದತೊಡಗಿದನು. ಆತನು ಹಿಂದು ಗಡೆ ಕುಳಿತಿದ್ದುದರಿಂದ ಬತ್ತಿಯ ಹೊಗೆಯು ಪಂಜಾಬಿಯ ಮುಖಕ್ಕೇ ಬೀಸುತ್ತಿದ್ದಿತು. ಆತನು ಮುಂದಕ್ಕೆ ಬಗ್ಗಿ, "ಬಾಬೂ ಸಾಹೇಬರೇ! ಸಿಗರೇಟಿನ ಹೊಗೆಯು ನಮಗೆ ಅಪ್ರಿಯವಾದುದು. ಗಾಡಿಯು ನಿಂತ ಮೇಲೆ ನಿಲ್ದಾಣ (Station) ದಲ್ಲಿ ಸೇದಬಹುದು!" ಎಂದನು.

ಬಾಬುವು ಒಂದು ಸಲ ದುರದುರನೆ ಪಂಜಾಬಿಯ ಕಡೆಗೆ ನೋಡಿ, ಬಾಯಿ ತುಂಬಾ ಹೊಗೆ ತುಂಬಿಸಿ, ಒಂದೇ ಉಸಿರಿನಲ್ಲಿ ಬಿಟ್ಟುಬಿಟ್ಟನು.

ಪಂಜಾಬಿಯು ಸ್ವಲ್ಪ ಬೆಚ್ಚಗಾಗಿ, "ಜನಾಬ್, ತಾವು ದಯವಿಟ್ಟು ಚುರುಟನ್ನು ನೊಂದಿಸಬೇಕು!" ಎಂದನು.

ಬಂಗಾಲೀ ಮಹಾಶಯನು ಉತ್ತರವಿತ್ತನು—"ನೀನೊ ಬ್ಬನೇ ರೈಲುಗಾಡಿಯನ್ನು ಕ್ರಯಕ್ಕೆ ಪಡೆಯಲಿಲ್ಲ. ನನ್ನೊಡ ನೆಯೂ ಕೆಂಪು ಟಕೇಟು ಇದೆ!"

"ಆದರೆ ರೈಲ್ವೇ ಕಾನೂನಿಗನುಸಾರ ತಾವು ಚುಟ್ಟಾ ವನ್ನು ನೊಂದಿಸಲೇ ಬೇಕಾಗುವುದು!" ಇಷ್ಟು ಹೇಳಿದರೂ ಬಂಗಾಲಿಯು ಬತ್ತಿಯನ್ನು ಸೇದುತ್ತಲೇ ಇರುವುದನ್ನು ನೋಡಿ, ಪಂಜಾಬಿಯು ತನ್ನ ಕೋಪವನ್ನು ತಡೆಯಲಾರ ದಾದನು. ಅವನು ಎದ್ದು ಬಂಗಾಲೀ ಮಹಾಶಯನ ಬಾಯಿಂದ ಸಿಗಾರನ್ನು ಕಿತ್ತು, ನೆಟ್ಟಗೆ ಓಡುತ್ತಿದ್ದ ಗಾಡಿಯ ಹೊರಗೆ ಎಸೆದನು!

ಚುಟ್ಟಾ ಗಾಡಿಯ ಕಿಟಕಿಯ ಹೊರಗೆ ಹೋಯಿತೋ ಇಲ್ಲವೋ ಎನ್ನುವಷ್ಟರಲ್ಲಿಯೇ ಬಂಗಾಲೀ ಬಾಬುವು ಪಂಜಾ ಬಿಯ ಜೂಲುನಾಯಿಯನ್ನು ಎತ್ತಿ ಗಾಡಿಯ ಹೊರಗೆ ಬೀಸಿ ಎಸೆದನು!! ಈ ಸಂಗತಿಯು ರೆಪ್ಪೆ ಬಡೆಯುವುದರೊಳಗೇ ನಡೆಯಿತು. ಒಂದು ಕ್ಷಣಕ್ಕೆ ಮೊದಲು ಶಾಂತತೆಯಿದ್ದ ಗಾಡಿಯಲ್ಲಿ ಈಗ ಬಹಳ ಕೊಳೆಭೆಯುಂಟಾಯಿತು! ಬಂಗಾಲೀ ಬಾಬುವು ತನ್ನ ಶಾಲು-ಕೋಟನ್ನು ಬಿಚ್ಚಿದನು. ಪಂಜಾ ಬಿಯು ಕೋಟಿನ ಕೈಗಳನ್ನು ಮೇಲಕ್ಕೆ ಸರಿಯಿಸಿದನು. ನೋಡುವಷ್ಟರಲ್ಲಿಯೇ ಇಬ್ಬರೂ ದ್ವಂದ್ವಯುದ್ಧಕ್ಕೆ ಸನ್ನದ್ಧ ರಾದರು.

ಪಂಜಾಬಿಯು, "ಸೂಕರನೇ! ಒಂದೇ ಗುದ್ದಿನಿಂದ ನಿನ್ನ ಒಸಡನ್ನು ಮುರಿಯುತ್ತೇನೆ!" ಎಂದನು.

ಬಂಗಾಲಿಯು, "ಅರೇ ಶ್ವಾನ! ನಿನ್ನನ್ನು ಹೊರಗೆ ಎಸೆಯುತ್ತೇನೆ!!" ಎಂದುತ್ತರವಿತ್ತನು.

ಪಂಜಾಬಿಯು ಬಾಬುವಿನ ಮುಖಕ್ಕೆ ಗುರಿಯಿಟ್ಟು ಹೊಡೆದ ಗುದ್ದು, ಆತನು ಸ್ವಲ್ಪ ಬಗ್ಗಿದುದರಿಂದ ಬಲಹೆಗಲ ಮೇಲೆಯೂ, ಬಾಬುವಿನ ಹೊಡೆತವು ಗುರಿತಪ್ಪಿದುದರಿಂದ ಪಂಜಾಬಿಯ ಕೋಟಿನ ಜೇಬನ್ನು ಮುಟ್ಟಿ, ಬೆಂಚಿನ ದಿಂಬಿನ ಮೇಲೆಯೂ ತಗಲಿದುವು. ಇನ್ನು ಕೊಲೆಯಾಗಲಿಕ್ಕೆ ಹೆಚ್ಚಿಗೆ ತಡವಿಲ್ಲವೆಂದು ತಿಳಿದು, ಅವರನ್ನು ನಾನು ಸಂತ ಯಿಸ ಹೋಗಲು, ಇಬ್ಬರೂ ನನ್ನ ಮಧ್ಯಸ್ಥಿಕೆಯನ್ನು ಒಪ್ಪ ಲಾರದೆ ಹೋದರು. ಇವರು ಕಲಹ ಮಾಡಿದರೆ ಸಾಕ್ಷಿ ಕೊಡಲು ಕಚೇರಿಗೆ ನಾನು ಹೋಗಬೇಕಾಗುವುದೆಂದು ಯೋಚಿಸಿ, ನಾನು ಗಾಡಿಯಲ್ಲಿದ್ದ ಅಪಾಯದ ಸರಪಣಿಯ ನ್ನೆಳೆದೆನು!

ಗಾಡಿಯು ನಿಂತಿತು. ಗಾರ್ಡ್ ಸಾಹೇಬನನ್ನು ಕರೆದು ಎಲ್ಲಾ ವೃತ್ತಾಂತವನ್ನು ಹೇಳಿದೆನು. ಆಗಲೂ ಇಬ್ಬರೂ ಜಗಳವಾಡುತ್ತಿದ್ದರು. ಸಾಹೇಬನು ನಡುವೆ ಬಾಯಿಹಾಕಿ ದುದನ್ನು ನೋಡಿ, ಪಂಜಾಬಿಯು, "ನೀನಾರಯ್ಯಾ?" ಎಂದೂ, ಬಂಗಾಲಿಯು "ನಮ್ಮಿಬ್ಬರ ನಡುವೆ ಬಂದೆ ಏಕೆ?" ಎಂದೂ ಕೇಳಿದರು.

ಜನರ ಗುಂಪು ಸೇರಿತು. "ಏನಾಯಿತು? ಏನಾಯಿತು? ಎಂಬ ಗಲಭೆಯೆದ್ದಿತು. ಪಂಜಾಬಿಯು ಜನಸಂದಣಿಯನ್ನು ತನ್ನ ಕಡೆಗೆ ಮಾಡಿಕೊಳ್ಳುವ ಆಸೆಯಿಂದ, "ಈ ಅನ್ನ ತಿನ್ನುವ ದುಷ್ಟನು ನನ್ನ ನಾಯಿಯನ್ನು ಏಕೆ ಹೊರಗೆ ಎಸೆದನು?" ಆವನ ಸಂಗಡಲೇ ಬಂಗಾಲೀ ಬಾಬುವು, "ಈ ಕಾಡು ಮನುಷ್ಯನು ನನ್ನ ಚುಟ್ಟಾವನ್ನೇಕೆ ಹೊರಗೆ ಬಿಸಾಡಿದನು?"

ಇಷ್ಟರಲ್ಲಿಯೇ ಇನ್ನೊಂದು ಘಟನೆಯು ನಡೆಯಿತು!

ಜನರ ಕೋಲಾಹಲದ ಮಧ್ಯದಿಂದ ಒಂದು ನಾಯಿಯು ಉರಿಯುತ್ತಿರುವ ಸಿಗಾರನ್ನು ಬಾಯಿಯೊಳಗೆ ಕಚ್ಚಿಕೊಂಡು, ಗಾಡಿಯ ಮೇಲೇರಿ ಬಂದಿತು. ಚುಟ್ಟಾವನ್ನು ನೆಲದ ಮೇಲೆ ಹಾಕಿ ಉಸಿರುಬಿಡತೊಡಗಿತು. ಕೂಡಲೇ ಬಂಗಾಲಿಯು ತನ್ನ ಸಿಗಾರನ್ನು ಹೆಕ್ಕಿ ಮುಂಚಿನಂತೆಯೇ ಆನಂದದಿಂದ ಕುಡಿಯಲಾರಂಭಿಸಿದನು. ಇತ್ತ ಪಂಜಾಬಿಯು ತನ್ನ ಪ್ರೀತಿಯ ನಾಯಿಯನ್ನು ಎತ್ತಿ, ದೂರದಲ್ಲಿ ಕುಳಿತು, ಬೆನ್ನ ಮೇಲೆ ಕೈಯಾಡಿಸಿದನು.

ಹೇಗೆ ಒಂದು ಕ್ಷಣದಲ್ಲಿಯೇ ಕಲಹವಾಯಿತೋ, ಅಂತೆಯೇ ಆಗಲೇ ಅದರ ನಿರ್ಣಯವೂ ಆಯಿತು!

ADVERTISERS & SUBSCRIBERS!

Swadeshi Pracharak

SPECIAL ANNUAL NUMBER

WILL BE ISSUED DURING THE FIRST WEEK OF OCTOBER 1935.

FREE TO SUBSCRIBERS!

A SOUND MEDIUM FOR SUPPLIERS' ADVERTISEMENTS!!

Demonstrate the high quality & specialised nature of your goods IN THIS ANNUAL!

FOR RATES ETC., *Apply To* **THE ADVERTISEMENT MANAGER, Swadeshi Pracharak, MANGALORE.**

ಜಾಹೀರಾತುದಾರರೂ ಚಂದಾದಾರರೂ ಗಮನಿಸಿರಿ!

ಸ್ವದೇಶಿ ಪ್ರಚಾರಕದ

ವಿಶೇಷ ಸಂಚಿಕೆಯು

ನಯನ ಮನೋರಂಜಕವಾಗಿ ಅಕ್ಟೋಬರ ಮೊದಲನೇ ವಾರದಲ್ಲಿ ಹೊರಬೀಳುವದು.

ಅನೇಕ ಚಿತ್ರಗಳು! ಸ್ವಾರಸ್ಯಮಯ ಕಥೆಗಳು!! ಪ್ರಸಿದ್ಧ ಲೇಖಕರ ಲೇಖನಗಳು!!!

ಚಂದಾದಾರರಿಗೆ ಮುಫತ್ತು! ಚಂದಾದಾರರಲ್ಲದವರು ಇಂದೇ ಚಂದಾಹಣವನ್ನು ಕಳುಹಿಸಿರಿ!!

ಜಾಹೀರಾತುದಾರರಿಗೆ ಸುಸಂಧಿ! ಅಖಿಲ ಕರ್ನಾಟಕದಲ್ಲಿ ಒಳ್ಳೇ ಪ್ರಶಸ್ತಿ ಇರುವ ಈ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಿ ಅಲಭ್ಯಲಾಭವನ್ನು ಹೊಂದಿರಿ!

ದರಗಳಿಗೂ ಇತರ ಮಾಹಿತಿಗೂ ಇಂದೇ ಬರೆಯಿರಿ.

ಮೆನೇಜರ್, ಸ್ವದೇಶಿ ಪ್ರಚಾರಕ, ರಥಬೀದಿ, ಮಂಗಳೂರು.

ಆಯುರ್ವೇದ ಮಾರ್ತಾಂಡ.

ಆಯುರ್ವೇದ ಮತ್ತು ಆರೋಗ್ಯವಿಚಾರಗಳನ್ನೊಳಗೊಂಡ

ಮಾಸಪತ್ರಿಕೆ

ಸಂಪಾದಕರು –

ಪ್ರಾಣಾಚಾರ್ಯ ವೈದ್ಯ ವಿದ್ವಾ

ಡಾ. ವೈ. ಪಾರ್ಥಸಾರಾಯಣ ಪಂಡಿತರು

ಶಿವಮೊಗ್ಗ.

ಸಂಚಿಕೆ ೫ ಸಂಪುಟ ೧	ಟಿಪ್ಪಣಿಗಳು	ಏಪ್ರಿಲ್ 1935

ಯುವನಾಮಸಂವತ್ಸರದ ಚೈತ್ರ

ವಾರ್ಷಿಕ ಚಂದಾ
ರೂ. 2—0—0.

ಬಿಡಿ ಸಂಚಿಕೆ
ಆಣೆ 0—3—0.

ಅಕ್ಟೋಬರ 1936



VOL. 2 NO. 1

The Canara Industrial & Banking Syndicate Limited.

(INCORPORATED IN BRITISH INDIA)

ESTD) HEAD OFFICE: "MUKUNDA NIVAS," UDIPI (1925

BRANCHES:

1 MANGALORE	8 GADAG	15 HUNGARCUTTA
2 HUBLI	9 CANNANORE	16 HONAVAR
3 BELGAUM	10 UDIPI	17 KUMTA
4 BELLARY	11 KANHANGAD	18 KARWAR
5 ADONI	12 PAYYANUR	19 ANKOLA
6 HOSPET	13 COONDAPOOR	20 SIRSI
7 BANGALORE CITY	14 BRAHMAVAR	21 BHATKAL

22 KARKALA 23 UPPINANGADI

ANNOUNCEMENT

We have great pleasure in announcing that TWO BRANCHES of THE SYNDICATE, ONE at **KASARGODE** (S. Kanara Dt.) and the OTHER at **SAGAR** (Shimoga Dt.) WILL BE OPENED in OCTOBER 1936, on the 24th and the 29th respectively, where all kinds of Banking Business will be transacted. The public are requested to take advantage of the numerous facilities offered by us.

PAID UP CAPITAL above Rs. 2 lakhs. Deposits above Rs. 19 lakhs
Total Resources above Rs. 29 lakhs.

"MUKUNDA NIVAS,"
UDIPI
30—9—1936

P. A. Pai Brothers,
Managing Agents.

ವಾರ್ಷಿಕ ಚಂದಾ ರೂ. ೦—೮—೦. ಬಿಡಿ ಸಂಚಿಕೆ ಬೆಲೆ ೦—೨—



1936

BANKERS' CHOICE

WHY NOT YOURS?

WE CARRY ON OUR BOOKS THE ACCOUNTS OF SEVERAL BANKS OF REPUTE.

WHEN BY OUR INTEGRITY AND BY THE QUALITY OF SERVICE RENDERED WE HAVE WON THE APPROVAL OF SUCH DISCRIMINATING CUSTOMERS MAY WE NOT HOPE TO CARRY YOURS?

EVERY FACILITY EXTENDED TO SMALL AS WELL AS BIG ACCOUNTS

ESTD. 1906

CANARA BANK

LIMITED.

TRIVENI

Incorporating Swadeshi Prachar, k'' '03

Vol. V

MARCH 1936

ಬಿಡಿಸಂಚಿಕೆ ಜೆಟಿ 0—2—6.

॥ ಸತ್ಯಂವದ ॥ ಸಂಪಾದಕ:—ಬಿ. ಲಕ್ಷ್ಮಣದೇವ ವಿದ್ಯಾರ್ಥಿ. ॥ ಧರ್ಮಂ ಚರ॥

ಸಂಪುಟ ೧ ಜನವರಿ ೧೯೩೬. ಸಂಚಿಕೆ ೧

ಪ್ರಭುಸನ್ನಿಧಿಯಲ್ಲಿ

ಲೀಲಾಮಯನಾದ ಭಗವಂತನೇ! ನಿನ್ನ ಲೀಲಾರಹಸ್ಯವನ್ನು ಯಾರು ತಾನೆ ಬಲ್ಲರು? ಯಾವ ಯಾವ ಕಾಲದಲ್ಲಿ ಎಷ್ಟೆಷ್ಟು ವಿಧವಾಗಿ ನೀನು ಕ್ರೀಡಿಸುತ್ತಿರುವಿ ಎಂಬುದನ್ನು ನಾವು ಹೇಗೆ ತಿಳಿಯುವೆವು! ಈ ಜಗತ್ತಿನಲ್ಲಿ ಎಂಥೆಂಥಾ ವರಿವರ್ತನೆಗಳು ಆಗಿ ಹೋದವು, ಆಗುತ್ತಿವೆ, ಮುಂದಕ್ಕೆ ಆಗಲಿವೆ ಇವೆಲ್ಲವುಗಳ ಮೂಲರಹಸ್ಯವನ್ನು ಅರಿತವರಾರು! ಈ ವರಿವರ್ತನೆಗಳ ಅಂತಿಮ ಪರಿಣಾಮವೇನೆಂಬುದನ್ನೂ ನಿನ್ನ ಲೀಲೆಯ ಕ್ಷಣಕ್ಷಣದ ವಿವಿಧ ದೃಶ್ಯಗಳನ್ನೂ ನಮಗೆ ತಿಳಿಯಪಡಿಸುವವರ್ಯಾರು? ನಾವು ನೋಡುತಿದ್ದಂತೆಯೇ ಪರಿವರ್ತನೆಗಳಾಗಿ ಹೋದವು. ಆಧುನಿಕ ತೀಕ್ಷ್ಣದ ಪ್ರಭೆಯಲ್ಲಿ ಬಿದ್ದಿರುವ ಅನೇಕ ಜನ ಸಮೂಹವು ನಿನ್ನ ಅಸ್ತಿತ್ವವನ್ನೇ ನಾಶಮಾಡಲು ಮುಂದುವರಿಯುತಿದ್ದಾರೆ. ಇನ್ನೊಂದೆಡೆ ಸೋಮಾರಿಗಳೂ, ಅವಿಶ್ವಾಸಿಗಳೂ ಲಭದ ಅನೇಕರು ನಿನ್ನ ಹೆಸರಲ್ಲಿ ಧರ್ಮಗುರುಗಳಾಗಿ ಮಾನವರನ್ನು ಮೋಸಗೊಳಿಸುತಿದ್ದಾರೆ. ದೇವಸ್ಥಾನ, ಮಠ ಮಂದಿರಗಳಲ್ಲಾಗಲೀ, ತೀರ್ಥಸ್ನಾನಗಳಲ್ಲಾಗಲೀ ಧರ್ಮಾರ್ಥ ಕಾಮಮೋಕ್ಷಾದಿ ಪುರುಷಾರ್ಥಗಳೆನ್ನು ಲಭಿಸುವ ಸುಯೋಗವು ಇಂದಿನ ಮಾನವರಿಗಿಲ್ಲ. ಮಾನವ ಸಮಾಜಕ್ಕೆ ಕಾಲಕಾಲಕ್ಕೂ ನ್ಯಾಯಪಥವನ್ನು ತೋರಿಸುವವನು ನೀನೇ ಆಗಿರುವಿ.

ದಯಾನಿಧಿ! ನೀನು ನಿನ್ನ ಅಗಾಧ ಲೀಲೆಯೊಂದಿಗೆ ರಮಿಸುತ್ತಿರುವಂತೆಯೇ ನಮ್ಮೆಲ್ಲರನ್ನೂ ನೀರಿಸಿಕೋ. ನಾವೆಲ್ಲವರೂ ನಿತ್ಯಧರ್ಮಾನುಷ್ಠಾನದಲ್ಲಿ ಸದಾನಿರತರಾಗಿರುವಂತೆ ನಮ್ಮನ್ನು ಆಶೀರ್ವದಿಸು. ಮಾನವ ಸೇವೆಯೇ ನಿನ್ನ ಸೇವೆಯೆಂಬುದನ್ನರಿತು ನಾವು ಕೈಕೊಂಡಿರುವ ಕಾರ್ಯವು ಸತ್ವರಿಣಾಮಕಾರಿಯಾಗಿ ಮಾನವರೆಲ್ಲರಿಗೂ ಉಪಕಾರಿಯಾಗುವಂತೆ ಎಲ್ಲಾ ವಿಧದ ಅನುಕೂಲತೆಗಳನ್ನು ಒದಗಿಸಿಕೊಡು. ಇದೇ ನಾವು ನಿನ್ನಲ್ಲಿ ಶ್ರದ್ಧಾ ಮತ್ತು ಭಕ್ತಿಪೂರ್ವಕವಾಗಿ ಮಾಡುವ ಪ್ರಾರ್ಥನೆಯು.

ಓಂ ಶಾಂತಿಃ ಶಾಂತಿಃ ಶಾಂತಿಃ


VIMA VANIJYA
1936
MANGALORE
CANARA BANK, LIMITED.
ಕೆನರಾ ಬ್ಯಾಂಕ್ ಲಿಮಿಟೆಡ್
68. Avenue Road, BANGALORE CITY
Subscribed Capital ... 6,00,000
Paid up Capital ... 3,33,000
Reserves ... 4,50,000
Deposits ... 61,92,000
Working Capital ... 73,40,000
OFFICES AT
DEPOSIT RATES UP TO 4 PER ANNUM
೧೨ ಸೆಪ್ಟಂಬರ್ ೧೯೩೬
ವ್ಯವಸ್ಥಾಪಕ-ಸಂಪಾದಕ : ಜೆ. ವಿ. ದೊಡ್ಡವೀರಪ್ಪ.

ಪ್ರಭಾಸಿ

ಮಾಸಪತ್ರಿಕೆ

ಪರಿವಿಡಿ

ನಮ್ಮ ಮಾತು
ನಾಗರೀಕತೆಯ ರಕ್ಷಣೆ
ಆಗುಂಬೆಯಲ್ಲಿಯ ದೃಶ್ಯಗಳು
ಕವ್ವವರು ಯಾರು?
ಗೋಪಾಲಕೃಷ್ಣ ದೇವಧರ
ಎಬಿಸಿನಿಯಾ ಮತ್ತು ಹಬಸಿಯರು
ಹಳ್ಳಿಯ ಹಾಡುಗಳು
ಕೈಗೆಲಸಗಳು
ವಿವಿಧ ವಿಷಯಗಳು
ದಿವಂಗತ ಸಾರ್ವಭೌಮರು
ವರ್ತಮಾನ ಸಂಗ್ರಹ

ಗ36

ಫೆಬ್ರುವರಿ 1936 ಸಂಚಿಕೆ 1 ಸಂಪುಟ 1

ಕಾಸರಗೋಡು, ದಕ್ಷಿಣ ಕನ್ನಡ.

ವಾರ್ಷಿಕ ಚಂದಾ ರೂ. 3—8—0 ಬಿಡಿ ಸಂಚಿಕೆ 0—5—0

Vol V. No 11] Anual Subscription 1—8—

ಶ್ರೀಕೃಷ್ಣ ಸಂದೇಶ

ವೈದಿಕ ಧರ್ಮವೀರಸಂಘ ಉಡುಪಿ ಕಾ ಮುಖಪತ್ರ 1937

"नहि कल्याणकृत्कश्चित् दुर्गतिं तात गच्छति" भगवान्.

ಶ್ರೀ ಕೃಷ್ಣ ಸುಸಂದೇಶ ವ ।
ಶೀಕೃತ ನರನಂ ಸುವೀರನೆನಿಸಿದ ತೆರದೊಳ್ ॥
'ಶ್ರೀಕೃಷ್ಣ ಸುಸಂದೇಶ' ವ ।
ಶೀಕೃತ ನರರಂ ಸುವೀರರೆನಿಸದೆ ತೆರೆಯೊಳ್ ॥

ಉಭಯ ಕವಿ.

RI KRISHNA SANDESHA

A SANATANI KANARESE MONTHLY JOURNAL

EDITOR
Pt. M. Janardanacharya, SHIROMANI
PUBLISHER
Pt. U. Venkataramanacharya, SHIROMANI-VIDWAN

MBER 1937

ಸಂಪಾದಕರು:
ಬಾಲಚಂದ್ರ ಕಾಸರಗೋಡು
ಬಸವೇಶ್ವರ ಚಿತ್ರಮಂದಿರ

ಪ್ರಭಾತ್ ಕಲಾಕೃತಿ
"ಸುಧಾ" ವೆಚ್ಚದ
ಲೀಲಾ ಚಿತ್ರಣ

Pledge yourself to a saving programme

Resources of

a Crore

Estd. 1906

Canara Bank Limited

Estd : 1906. *Head Office :* MANGALORE

CANARA BANK, LIMITED.

INCORPORATED IN BRITISH INDIA.

ಕೆನರಾ ಬ್ಯಾಂಕ್ ಲಿಮಿಟೆಡ್

68, Avenue Road, BANGALORE CITY.

Subscribed Capital	...	6,00,000
Paid up Capital	...	3,33,000
Reserves	...	4,50,000
Deposits	...	61,92,000
Working Capital	...	73,40,000

OFFICES AT

BOMBAY-FORT, BOMBAY-MANDVI, HUBLI, CALICUT,
COCHIN, ERNAKULAM, ALLEPPEY, DAVANGERE,
CHIKMAGALUR, MANGALORE-BUNDER
MANGALORE-CITY, KASARAGOD,
PUTTUR, BANTAVAL, KARKALA,
UDIPI, COONDAPOOR
& GANGULI.

DEPOSIT RATES UP TO 4% PER ANNUM

ಅಕ್ಟೋಬರ್ ೧೯೩೬

ವ್ಯವಸ್ಥಾಪಕ-ಸಂಪಾದಕ : ಜೆ. ವಿ. ದೊಡ್ಡವೀರಪ್ಪ.

1937 ಶ್ರೀ ಬಸವನ ಸಾಚಿ

REG. NO. B 3887

● ANTISEPTEC
● SCIENTIFIC
● AND MODERN

KARCHEW

Special Action

TOOTH-PASTE

FOR HARD & HEALTHY GUM

ತಾಯಿತ

The L

Leading Nationalist Kannada Daily Pa

ಸಂಪಾದಕರು— ವೀ. ಬ. ಪುರಾಣಿಕ ಬಿ. ಎ.

ಸಂಪುಟ ೧ [ಹುಬ್ಬಳ್ಳಿ-- ಟೋಕಮತ, ಕ್ರಿ. ಶ. ೧೯೩೭ ನೆಯ ಸಪ್ಟಂಬ

ವಿರೋಧಿಗಳಿಗೆ ಶರಣಾಗತರಾಗು

ಜಪಾನಿಗೆ ಚೀನದ ಸೇನಾ ಪ್ರಮುಖರ ಖಂಡ

ತುಂಡ ಉತ್ತರ

ಜಪಾನ ಸೈನಿಕರ ಪ್ರಾಣಹಾನಿ

(ರೂಟರ ತಂತಿ)

" ಚೀನೀಯರು ಪ್ರತಿಭಟಿಸುವದನ್ನು ಬಿಟ್ಟು, ಶರಣಾಗತರಾಗಬೇಕೆನ್ನುವದೇ ಜಪಾನೀಯರ ಈ " ಅನುಕೂಲ ಪರಿಸ್ಥಿತಿ " ಎಂಬ ಶಬ್ದ ಅರ್ಥವಾಗಿರುತ್ತದೆ. ಶರಣಾಗತರಾಗುವದು ಸರ್ವಥಾ ಸಾಧ್ಯವಿಲ್ಲ.!

ಜಪಾನವು ತನ್ನ ಆಕ್ರಮಣ ಶೀಲವನ್ನು ಬಟ್ಟು ಕೊಡಲಿ; ಆಮೇಲೆ ಸಂಧಾನದ ವಿಚಾರವನ್ನು ಚರ್ಚಿಸೋಣ. "

ಟೋಕಿಯೊ ತಾ|| ೩೭

ಪೂರ್ವ ತೀರದ ಚೀನ-ಜಪಾನ್ ಸಂಗ್ರಾಮದ ಬಗ್ಗೆ ವಿಚಾರವಿನಿಮಯ

ಜಪಾನೀ ಸೈನಿಕರ ಪ್ರಾಣಹಾನಿ

—: ೦ :—

(ರೂಟರ ತಂತಿ)

ಮದ್ರಾಸ ಅಸೆಂಬ್ಲಿಯ ಬಗ್ಗೆ ಸರ್ ಮಹಮ್ಮದ ಯಾಕೂಬರ ಕಳಕಳಿ !

ಅಧ್ಯಕ್ಷರ ಸಮಯೋಚಿತ ವರ್ತನ

[ಎ. ಸಿ ಆಯ್. ತಂತಿ]

ಸಿಮಲಾ ತಾ|| ೩೭

" ಮದ್ರಾಸ ಅಸೆಂಬ್ಲಿಯಲ್ಲಿ ಮುಸಲ್ಮಾನ ಸದಸ್ಯರು ವಂದೇ ಮಾತರಂ ಗೀತದ ಬಗ್ಗೆ ತೋರ್ಪಡಿಸಿದ ನಿಷೇಧವನ್ನನುಲಕ್ಷಿಸಿ ಹಿಂಮಸ್ಥಾನ ಸರಕಾರವು ತನ್ನ ಮೇಲ್ವಿಚಾರಣಾಧಿಕಾರವನ್ನು ಉಪಯೋಗಿಸಲಿಲ್ಲ " ಎಂಬೀ ವಿಷಯವನ್ನು ಚರ್ಚಿಸುವದಕ್ಕಾಗಿ ಸರ್ ಮಹಮ್ಮದ [illegible]

ಪಾಟೀಲ ಹಿಳ್ಳೂರ - ವಳಸಿ
ಬಾಗಲಕೋಟೆ

ಲಕ್ಷ್ಮಿ

)kamat

r published every day except on Monday

Editor— V. B. PURANIK B. A.

ಕೊನೆಯ ಮುದ್ರಣ



ತಾ|| ೨೮ ನೆಯ ಮಂಗಳವಾರ (28—9—1937) [ಸಂಚಿಕೆ ೨೨೯

ನದಕ್ಕಿಂತ ಸಾಯುವದೇ ಮೇಲು

ಸ್ವತಂತ್ರ ಭಾರತದಲ್ಲಿ ತಲೆತಿರುಕ ಜಾತ್ಯಂಧರಿಗೆ ಸ್ಥಳವಿರಕೂಡದು

ಹಿಂದೂ-ಮುಸ್ಲಿಂ ಐಕ್ಯವೇ ಸ್ವರಾಜ್ಯ ಸೌಧದ ಅಸ್ತಿವಾರ
ಸೈಯದ್ ಹುಶೇನರ ಸ್ಪಷ್ಟೋಕ್ತಿ

[ಎ. ಪಿ. ಆಯ್. ತಂತಿ]

ಮುಂಬಯಿ ತಾ|| ೨೬

"ಸ್ವತಂತ್ರ ಹಿಂದುಸ್ಥಾನವು, ಸಮರ್ಥ ಹಿಂದುಸ್ಥಾನವೂ ಆಗತಕ್ಕದ್ದು. ಸ್ವತಂತ್ರ ಭಾರತದಲ್ಲಿ ಯಾವ ತರದ ತಲೆತಿರುಕ ಜಾತ್ಯಂಧರಿಗೂ, ಭ್ರಮಿಷ್ಟರಿಗೂ ಜಾಗವಿರಕೂಡದು" ಎಂಬುದಾಗಿ, ಹಿಂದುಸ್ಥಾನವನ್ನು ಕಳೆದ ೧೭ ವರ್ಷಗಳಿಂದಲೂ ಆಗಲಿನ್ನ ಈಗ ತಾನೇ "ಸ್ವಾತಂತ್ರವಾ" ಸ್ಟೀಮರಿನಿಂದ ಬಂದಿಳಿದಿರುವ ಶ್ರೀಮತಿ ಸೈಯದ್ ಹುಸೇನರು ಬಿಮ್ಮೋಷಿಸಿದರು ಮತ್ತೆ ಹೀಗೆಂದರು:—

"ಹಿಂದುಸ್ಥಾನಕ್ಕೆ ಮೊರೆಯಬಹುದಾದ ಸ್ವರಾಜ್ಯವು ಭದ್ರವೆನಿಸಬೇಕಾದರೆ, ರಾಷ್ಟ್ರೀಯ ಸ್ವಾತಂತ್ರ್ಯ ರಕ್ಷಣೆಗೆ ಅತ್ಯವಶ್ಯಕವಾದ ಹಿಂದೂ-ಮುಸ್ಲಿಂ ಐಕ್ಯವೇ

ಪೋಲಿಸ್ ಅಧಿಕಾರಿಗಳ ಕರ್ತವ್ಯ.

ತಾ|| ಮುನಸಿಯರ ಉಪದೇಶ

— ೫೦ —

[ಎ. ಪಿ ಐಯ್. ತಂತಿ]

ಪುಣೆ ತಾ|| ೨೭



REG NO M.3419

—ಶ್ರೀಃ—

ಸರ್ವಾರ್ಥ ಸಿದ್ಧಿ

1937

ಮಾಸ ಪತ್ರಿಕೆ

ನಮಃ ಶ್ರೇಯೋಜಿನೇಂದ್ರಾಯ ಯತ್ಪಾದಾಶ್ರಯವರ್ತಿನೇ।
ಶ್ರೇಯಾಂಸಿ ಬಹುವಿಘ್ನಾನೀತ್ಯುಕ್ತೇರರ್ಥೋ ನಿರಾಶ್ರಯಃ॥

ಸಂಪಾದಕರು :

ಸ್ಯಾದ್ವಾದ ಭಿಷಜ್ಮಣಿ ವೈದ್ಯರಾಜ ಪಂಡಿತ ಎಂ. ಎಲ್ಲಪ್ಪ

ಎಲ್. ಎ. ಎಂ. ಅವರು.

ಸಂಪುಟ ೨ | ಶ್ರೀ ಮಹಾವೀರ ನಿರ್ವಾಣ ಶಕ ೨೪೬೩ ಕಲಿ ೫೦೩೭ ನೇ ಚೈತ್ರ ಮತ್ತು ವೈಶಾಖ | ಸಂಚಿಕೆ ೧೨-೧೩

ಚಂದಾ ವಿವರ

ವಾರ್ಷಿಕ ಚಂದಾ :— ಪೋಸ್ಟ್ ಸ್ಟ್ಯಾಂಪು .
ಆಶ್ರಯದಾತರ ಚಂದಾ :— ಆಶ್ರಯದಾತರು ತಮ್ಮ ಲಾಭದಲ್ಲಿ ತೆಗೆದಿರಿಸಿದ ಒಂದು ಭಾಗ

—: ಬೆಂಗಳೂರು ಸಿಟಿ :—
ಪ್ರತ್ನೇರಸಿಂಹ ಪ್ರೆಸ್‌ನಲ್ಲಿ ವಾಲೀಕರಾಗಿ ಶ್ರೀ ಕೆ. ಶಿಂಗಳಾಚಾರ್ಯರಿಂದ ಸಂಪಾದಕರಿಗಾಗಿ ಮುದ್ರಿಸಲ್ಪಟ್ಟಿದೆ.

1937

1937

20 ನವಂಬರ್ 1937

ಶ್ರೀ ಪೂರ್ಣ ಬೋಧ

Udupi Dist, Karanataka State, INDIA

ಸಂಪುಟ ೩	ಈಶ್ವರ ಸಂ॥ ಆಶ್ವಯುಜ.	ಸಂಚಿಕೆ ೪.

ಸಂಪಾದಕರು,

ಕಾಶೀ ಪ್ರಾಣೇಶಾಚಾರ್ಯರು.

ವಿಷಯಗಳು.

೧. ಮಾಧ್ವ ವೈಷ್ಣವ ಸಮಾಜದ ಒಗ್ಗಟ್ಟು	೬೦
೨. ಶ್ರೀ ವೆಂಕಟೇಶಸ್ತೋತ್ರಂ	೪೪
೩. ಉಗಾಭೋಗ	೪
೪. ಬೃಹದಾರಣ್ಯಕೋಪನಿಷತ್ಸಾರ	೪೫—೫೬
೫. ದ್ವಾದಶಸ್ತೋತ್ರದ ಉಪೋದ್ಘಾತ	
೬. ದೇವಯಾನೀ	೬—೧೦
೭. ವಿಷ್ಣುಸಹಸ್ರನಾಮ	೫೧—೫೪
೮. ಶ್ರೀಮದ್ಭಾಗವತ	೧೨೨—೧೫೧
೯. ಅನುತಾನ	

ಸಹ ಸಂಪಾದಕರು,

ಕಾ. ರಾಮಚಂದ್ರಾಚಾರ್ಯರು

74
1938

ಮಹಿಳೆಯರ ಉನ್ನತಿಗೆ ಮಾಸಲಾದ ಮಾಸಪತ್ರಿಕೆ.

ಸಂಪುಟ ೧.	೧೯೩೮ ಸೆಪ್ಟಂಬರ್	ಸಂಚಿಕೆ ೫.

ನ ನ್ನ ಪ್ರಿ ಯ ಳು

ನನ ಪ್ರಿಯಳ ನಿಜ್ವ ಸೊಬಗು
ಇಲ್ಲ ನಾಕದಿ
ಅವಳ ಹೋಲ್ವ ಚೆಂದವಿಲ್ಲ
ನಮ್ಮ ಲೋಕದಿ. ॥ ೧ ॥

ಮನೆಗೆ ರನ್ನದೊಡವೆಯವಳು
ಉರ ತಾರೆಯು
ನಾಡಿಗೆಲ್ಲ ಅಚ್ಚುವೆಚ್ಚು
ನನ್ನ ನೀರೆಯು. ॥ ೩ ॥

ಕಾಂತಿಯಂತೆ ಅವಳ ಚಿಂತೆ
ಬಹಳ ವಿಮಲವು
ಎದೆಯ ರಾಗ ಕುಸುಮದಂತೆ
ಬಹಳ ಮೃದುಲವು. ॥ ೫ ॥

ಕಲ್ಪನೆಯಲು ಕಾಣಲಾರೆ
ಇಂಥ ಸೊಬಗನು
ಕನಸಿನಲ್ಲು ನೋಡಲಾರೆ
ಇಂಥ ಬೆಡಗನು. ॥ ೨ ॥

ಅವಳ ಮೊಗದೊಳೊಮ್ಮೆ ಸಿಲ್ಕಿ
ನಿನ್ನ ದೃಷ್ಟಿಯು
ಮರಳಿ ಗೆಲ್ದು ಬಾರದಯ್ಯ
ಎಂಥ ಸೃಷ್ಟಿಯು ! ॥ ೪ ॥

ಕಾಂತೆ ಬಹಳ ಜಾಣೆ, ಅವಳೆ
ನನ್ನ ಗರ್ವವು
ಅವಳಿಗಿಂತ ಪ್ರಿಯರ ಕಾಣೆ
ಅವಳೆ ಸರ್ವವು. ॥ ೬ ॥

ರೂಪು ಎಂಬೊ ಮಿಗಿಲು ಅಂತೆ
ಅವಳ ತಿಳಿವದು
ರೂಪು ತಿಳಿವ ನಿಧಾರಿಸಿಹುದು
ಅವಳ ಒಲವದು. ॥ ೮ ॥

—ಶ್ರೀ॥ ಮೂರ್ತಿ,
ಎಂ.ಎ., ಬಿ.ಟಿ.

ಶ್ರೀ ಶೇಷಾಚಲ-

ಸದ್ಬೋಧ ಚಂದ್ರಿಕೆ

पद्माकरं दिनकरो विकची करोति । चन्द्रो विकासयति कैरवचक्रवालं ॥
नाभ्यर्थितो जलधरोपि जलं ददाति । संतःस्वयं परहितेषु कृताभियोगाः॥

ವರ್ಷ	ಆಶ್ವೀಜ ಶಕೆ ೧೮೫೯	ಸಂಚಿಕೆ
30	October 1937	7

ಬಿನ್ನಪ.

(ಬಾಗೇ ಶ್ರೀ)

ಓಂ

ಬಿನ್ನಪವ ಸಲಿಸುವೆನು ।
ನನ್ನೊಡೆಯ ನಿನಗಿನ್ನು ॥ ॥ ಪಲ್ಲ ॥
ನನ್ನೆದೆಯಲಡಗಿರ್ಪ ।
ಭಿನ್ನತೆಯನಳಿಸೆಂದು ॥ಅ. ಪ.॥

ನೀನೇ ಸೃಜಿಸಿಹ ಜಗದಿ । ನಶ್ವರದ ಭಿಕ್ಷೆಯದು ।
ನಾನೊಂದು ಕ್ರಿಮಿ ದೇವಾ ॥ ವಿಶ್ವನಾಥನೆ ಬೇಡಾ ॥
ನೀನೇ ದಯದಿಂ ನೋಡಿ । ವಿಶ್ವಪ್ರೇಮಕೆ ಎನ್ನ ।
ಜ್ಞಾನವನು ನೀಡೆಂದು ॥೧॥ ಈಶ್ವರನ ಮಾಡೆಂದು ॥೩॥

ಅಂಧನಾಗುತೆ ಜಗದ । ಚಿನ್ಮಯನೆ ನಿನ್ನಾಮ ।
ಬಂಧನದಿ ಸಿಲುಕಿಪ್ಪೆ ॥ ದುನ್ಮಾದ ದಿಂದೆನ್ನ ॥
ತಂದೆಯೇ ದಯೆಗೈದು । ಹೃನ್ಮನೋ ವಾಕ್ಕಾಯ ।
ಬಂಧನದಿ ಬಿಡಿಸೆಂದು ॥ ೨ ॥ ತನ್ಮಯವ ಮಾಡೆಂದು॥೪॥

ಮುಂದಲ

ಸತೀತ್ವದ ಬೆಲೆ

ಬರೆದವರು:—
ಭಾರತೀಸುತ

1

ಮಂಚದ ಮೇಲೆ ರೋಗಗ್ರಸ್ತನಾದ ಮನುಷ್ಯನು ಪವಡಿಸಿದ್ದಾನೆ. ಕೇಶವನಿಗೆ-ಆದಾಗಿದ್ದಿತು ಅವನ ಹೆಸರು-ಎರಡು ತಿಂಗಳುಗಳಿಗಿಂತ ಹೆಚ್ಚು ಕಾಲವಾಗಿದ್ದಿತು, ಮನುಷ್ಯನನ್ನು ಕ್ರಮೇಣ ಸತ್ವಶೂನ್ಯನನ್ನಾಗಿ ಮಾಡಿ, ಮೃತ್ಯುವಿನ ಕ್ರೂರ ದವಡೆಗಳಲ್ಲಿ ದೂಡುವ ಕ್ಷಯ ರೋಗವು ಅವನನ್ನು ಬಾಧಿಸಿತು. ನೀರು ಸಿಗದ ಗಿಡದಂತೆ ಅವನು ಬಲವಿಲ್ಲದೆ ಒಣಗುತ್ತಲಿದ್ದನು. ಧನಿಕರಿಗೇ ಈ ರೋಗನಿವಾರಣೆಯು ಸುಲಭವಲ್ಲದಿರುವಾಗ, ದರಿದ್ರನಾದ ಕೇಶವನ ಪಾಡೇನು?

ಕೇಶವನು ಒಬ್ಬ ಬಡ ಕೂಲಿಗಾರನು. ಅವನಿಗೆ ಸಿಗುವ 12 ರೂಪಾಯಿ ವೇತನದಿಂದ ಆ ಕುಟುಂಬವು ಜೀವನವನ್ನು ಕಳೆಯಬೇಕು. ದಾರಿದ್ರ್ಯದಲ್ಲಿ ಹುಟ್ಟಿ ಬೆಳೆದವನು. ಸೌಖ್ಯವೆಂಬುದೇನೆಂದು ಅವನಿಗೆ ತಿಳಿದಿರಲಿಲ್ಲ. ವಿದ್ಯಾಭ್ಯಾಸಕ್ಕೆ ಬೇಕಾದ ಸೌಕರ್ಯವು ಲಭಿಸಿರಲಿಲ್ಲ. ನಾಲ್ಕನೇ ಇಯತ್ತೆಯಲ್ಲಿ ಓದುತ್ತಿರುವಾಗಲೇ ತಂದೆಯು ಮೃತ್ಯುವಶನಾದುದರಿಂದ, ಚಿಕ್ಕಪ್ರಾಯದಲ್ಲಿಯೇ ಕುಟುಂಬದ ಭಾರವನ್ನು ಹೊರಬೇಕಾಗಿ ಬಂದಿತು. ತಂದೆಯು ಮೃತನಾಗಿ ಎರಡು ವರ್ಷಗಳು ಕಳೆಯುವುದರೊಳಗಾಗಿ, ತಾಯಿಯು ತಂದೆಯು ತೆರಳಿದ ದಾರಿಯಲ್ಲಿ ಗಮಿಸಿದಳು ದಿಕ್ಕಿಲ್ಲದಾದನು ಕೇಶವನು.

ದಾರಿದ್ರ್ಯದಿಂದ ಮುಕ್ತನಾಗುವ ಮಾರ್ಗವನ್ನು ಕಾಣದೆ, ಒಂದು ಗಿರಣಿಯಲ್ಲಿ ಕೇಶವನು ಕೂಲಿಯ ಕೆಲಸಕ್ಕೆ ನಿಂತನು. ತಿಂಗಳಿಗೆ 4 ರೂಪಾಯಿ ಸಂಬಳವಾಗಿದ್ದಿತು. ಪ್ರಾರಂಭದಲ್ಲಿ ಆದರೆ ನಾಲ್ಕೈಂಟು ವರ್ಷಗಳ ನಂತರ 12 ರೂಪಾಯಿಗಳ ಸಂಬಳವು ಲಭಿಸತೊಡಗಿತು.

ಕೇಶವನು ವ್ಯಾಯಕ್ಕೆ ಬಂದನು. ಗಂಗಕ್ಕ ನೊಡನೆ ಮದುವೆಯಾಯಿತು. ಗಂಗಕ್ಕ ಸುಂದರಿಯಾದ ಹುಡುಗಿ. ನೋಡಲಿಕ್ಕೆ ಅಂದವಾಗಿದ್ದಳು. ಕೇಶವನಿಗಿರುವ ಏಕಬಂಧುವೆಂದರೆ ಅವಳೇ. ಅವಳು ಕೇಶವನಂತೆ ದಾರಿದ್ರ್ಯದಲ್ಲಿ ಹುಟ್ಟಿ ಬೆಳೆದವಳು. ಚಿಕ್ಕಂದಿನಲ್ಲಿಯೇ ಅವಳ ತಾಯ್ತಂದೆಗಳು ತೀರಿಹೋಗಿದ್ದರು. ಈಗ ಅವಳ ಸರ್ವಸ್ವವೂ ಕೇಶವನಾಗಿದ್ದನು

ಕೇಶವನಿಗೆ ಆನಂದವನ್ನೂ, ಸುಖವನ್ನೂ ಕೊಡುತ್ತಿದ್ದವಳು ಗಂಗಕ್ಕ. ಗಂಗಕ್ಕನೆಂದರೆ ಕೇಶವನು ಪ್ರಾಣ ಬಿಡಲು ಸಿದ್ಧನಾಗಿದ್ದನು. ಗಂಗಕ್ಕನ ನಗುಮೊಗವು ಕೇಶವನ ಸರ್ವಚಿಂತೆಗಳನ್ನೂ ದೂರಮಾಡುತ್ತಿದ್ದಿತು. ಬಡವನಿಗೂ

ಆನಂದವಿಲ್ಲ ಎಂದು ತೋರಿಸುವುದಕ್ಕೋಸ್ಕರವೋ ಎಂಬಂತೆ, ಗಂಗಕ್ಕ ಕೇಶವ ಇವರ ನಾಂಸತ್ಯಜೀವನವು ಸುವ್ಯವಸ್ಥೆಯುಂದಲೂ ಸುಖಮಯವಾಗಿಯೂ ಸಾಗುತ್ತಲಿದ್ದಿತು. ಈ ಸ್ಥಿತಿಗಳ ಫಲವೇ ರಾಮುವು. ರಾಮುವಿಗೆ ಈಗ ಮೂರು ವರ್ಷ ಪ್ರಾಯ. ಕೇಶವನ ಏಕಮಾತ್ರ ಪುತ್ರನು ಗಂಗಕ್ಕನ ಜೀವಾಳ ಅವನಾಗಿದ್ದನು.

ಆದರೆ ಕಾಲಚಕ್ರವು ಎಲ್ಲರನ್ನೂ ಅದೇ ಸ್ಥಿತಿಯಲ್ಲಿ ನೆಲೆಸಲು ಸಮ್ಮತಿಸುವುದಿಲ್ಲ. ಅದು ಕೇಶವನ ಸುಖಮಯ ಜೀವನವನ್ನು ನೋಡಿ ಅಸೂಯಾಕುಲವಾಯಿತು. ಕೇಶವನು ರೋಗಬಾಧಿತನಾದನು. ಅದು ಸಾಧಾರಣ ರೋಗವಲ್ಲ. ಮೃತ್ಯುವಿನ ಕ್ರೂರ ದವಡೆಯೊಳಗೆ ಎಳೆಯುತ್ತಿರುವ ಕ್ಷಯರೋಗ ಸಾಶವದು. ರೋಗದಿಂದ ಕೇಶವನಿಗೆ ಗಿರಣಿಯಲ್ಲಿ ಕೆಲಸಕ್ಕೆ ಹೋಗಲು ಸಾಧ್ಯವಾಗಲಿಲ್ಲ. ಹಾಸಿಗೆಯನ್ನು ಅವಲಂಬಿಸಿದ ರೋಗಿಯು ಹೇಗೆ ತಾನೇ ದುಡಿಯುವನು? ಅವನಿಗೆ ಕೆಲಸವು ಇಲ್ಲದಾಯಿತು. ಕುಟುಂಬಕ್ಕೆ ಆಧಾರವು ತಪ್ಪಿತು. ಆನಂದದಿಂದ ಸಂತೃಪ್ತವಾಗಿದ್ದ ಕುಟುಂಬವು ದಾರಿದ್ರ್ಯ ಹಸಿವೆಗಳ ಕಗ್ಗತ್ತಲೆಯಲ್ಲಿ ದೂಡಲ್ಪಟ್ಟಿತು.

2

ಸಂಧ್ಯಾಸಮಯ. ಅಸ್ತಂಗತವಾಗಲು ಹೊರಟಿರುವ ದಿನಮಣಿಯ ಕಿರಣಗಳು ಮೇಷರಾಶಿಯ ಮೇಲೆ ಬಿದ್ದು ಅತ್ಯಂತ ರಮಣೀಯವಾಗಿ ತೋರುತ್ತಲಿದ್ದುವು. ಮಂದವಾಗಿ ಬೀಸುತ್ತಲಿರುವ ಮಂದಮಾರುತನು ಭಾಸ್ಕರದೇವನ ಅಸ್ತಮಾನ ಸಂದೇಶವಾಹಕನಾಗಿದ್ದನು. ದೂರದಲ್ಲಿದ್ದ ಹುಲ್ಲುಗಾವಲುಗಳಿಂದ ಬರುತ್ತಿರುವ ಪಶುವೃಂದದ "ಅಂಬಾ" ರವವು ಕರುಗಳಿಗೆ ತಮ್ಮ ಜನನಿಯ ಆಗಮನವಾರ್ತೆಯನ್ನು ಸೂಚಿಸುವ ಸಂಜ್ಞೆಯಾಗಿದ್ದಿತು. ಆಟದ ಬಯಲುಗಳಿಂದ ಹಿಂದಿರುಗಿ ಬರುತ್ತಿರುವ ಬಾಲಕರ ನಿಷ್ಕಲಂಕವೂ, ನೈಸರ್ಗಿಕವೂ ಆದ ನಗುವು ತನ್ನ ಗುಡಿಸಲಿನಲ್ಲಿ ಹಾಸಿಗೆಯಲ್ಲಿ ನರಳುತ್ತಿರುವ ಕೇಶವನ ಕರ್ಣಗಳಲ್ಲಿ ಬೀಳುತ್ತಲಿದ್ದಿತು; ಆದರೆ ಆ ಬಡಪಾಪಿಯು ಪ್ರಕೃತಿ ದೇವಿಯ ರಮಣೀಯತೆಯನ್ನು ನೋಡಲು ಸಮರ್ಥನಾಗಲಿಲ್ಲ.

ಕೇಶವನು ತನ್ನ ಮಂಚದ ಮೇಲೆ ನರಳುತ್ತಲಿದ್ದನು. ಅವನ ರಕ್ತವಿಲ್ಲದ ಮುಖವೂ, ಇಳಿದು ಹೋದ ಕಣ್ಣುಗಳೂ ನೋಡುವವರ ಮನಸ್ಸಿನಲ್ಲಿ ಭೀತಿಯನ್ನುಂಟು ಮಾಡುತ್ತಿದ್ದವು. ಅವನು ಆಗಾಗ ಕೆಮ್ಮುತ್ತ ಎದೆಯ ನೋವನ್ನು ಸಹಿಸಲಾರದೆ "ಅಯ್ಯೋ" "ಅಮ್ಮಾ" ಎಂದು ಹೇಳುತ್ತಲಿದ್ದನು. ಆಗಾಗ ಕಿಟುಕಿಗಳ ಸಂದಿಗಾಗಿ, ಮಾರ್ಗದ ಕಡೆಗೆ ನೋಡುತ್ತಲಿದ್ದನು. ತಮ್ಮ ಹಟ್ಟಿಗೆ ತೆರಳುತ್ತಿರುವ ಪಶುಗಳನ್ನೂ ಆಟದ ಬಯಲಿನಿಂದ ಹಿಂದಿರುಗುವ ಬಾಲಕರನ್ನೂ, ಗಣೇಶಕ್ಷೇತ್ರದಲ್ಲಿ ವಂದಿಸಲು ಹೋಗುತ್ತಲಿರುವ ಜನರನ್ನೂ ನೋಡುತ್ತಲಿದ್ದನು. ತಾನೂ ಅವರಂತೆ ನಡೆದು ಸಂಚರಿಸುವೆನೆಂಬ ಆಶೆಯು ಅವನ ಹೃದಯದಲ್ಲಿ ಜನಿಸಿರಬಹುದು; ಆದರೆ ಅದೆಲ್ಲ ಸಾಧ್ಯವಾಗಬಹುದು?

ಗಂಗಕ್ಕನು ಅಡಿಗೆ ಮನೆಯಲ್ಲಿ ಗಂಜಿಯನ್ನು ಬೇಯಿಸುತ್ತಿದ್ದಳು. ಆ ನಿನ್ನಾ ಹಾಯಳಾದ ಹೆಂಗಸು ತನ್ನ ದುಃಖಗಳನ್ನೆಲ್ಲಾ ಸಹಿಸಿಕೊಂಡು ಗೃಹಕೃತ್ಯದಲ್ಲಿ ನಿರತಳಾಗಿದ್ದಳು. ಅವಳ ಆರಾಧನಾಪುರುಷನು ರೋಗಗ್ರಸ್ತನಾಗಿ ನರಳುತ್ತಲಿದ್ದಾನೆ. ಕುಟುಂಬದ ಭಾರವು ಅವಳ ಮಸ್ತಕದ ಮೇಲೆ ಬಿದ್ದಿರುವುದು. ಭಾವೀ ಅಂತರಿಕ್ಷವು ಶೂನ್ಯವಾಗಿದೆ; ಆದರೆ ವನಿತಾಹೃದಯವು ಸಹನೆಯ ಕೂಪವು. ಯಾವ ವಿಭ್ರಮವೂ ಅಲ್ಲಿಲ್ಲ. ಅಲ್ಲಿ ಸಹನೆಯ ನೀರು ಬತ್ತುವುದಿಲ್ಲ. ಹೆಂಗುಸು ಎಲ್ಲಾ ದುಃಖಗಳನ್ನೂ ಮೌನದಿಂದ ಸಹಿಸುತ್ತಾಳೆ!

ಗಂಜಿಯಾಯಿತು. ಕೇಶವನಿಗೆ ಅವಳು ಅದನ್ನು ನೀಡಿದಳು. ಅವನು ಮೆಲ್ಲನೆ ಹಾಸಿಗೆಯಿಂದ ಎದ್ದು ಕುಳಿತು ಅದನ್ನು ಕುಡಿದನು. ಅನಂತರ ಮೆಲ್ಲನೆ "ಗಂಗಾ! ನಾನಿನ್ನು ಅಧಿಕಕಾಲ ಬದುಕಲಾರೆನು. ಈ ಹತಭಾಗ್ಯನಿಂದ ನಿನ್ನ ಭಾವೀ ಜೀವನವು ಶೂನ್ಯವಾಗಬಹುದು. ಅದನ್ನು ಕುರಿತು ನಾನು ಚಿಂತಿಸುತ್ತೇನೆ." ಎಂದು ಹೇಳಿದನು.

"ನೀವು ಈ ರೀತಿ ಅಮಂಗಳ ಮಾತುಗಳನ್ನು ನುಡಿಯಬಾರದು. ಸ್ವಸ್ಥವಾಗಿ ಮಲಗಿರಿ. ನಾಳಿಗೆ ಸ್ವಲ್ಪ ಕಡಿಮೆಯಾಗಬಹುದು. ದೇವರು ಹಣವನ್ನು ಕೊಟ್ಟಿದ್ದರೆ ಡಾಕ್ಟರನನ್ನು ಕರೆದು ತರಬಹುದಾಗಿದ್ದಿತು" ಎಂದು ಹೇಳಿದಳು ಗಂಗಕ್ಕ.

ಗಂಗಕ್ಕನು ತನ್ನ ಪ್ರಾಣಕಾಂತನ ರೋಗ ನಿವೃತ್ತಿಗಾಗಿ ಏನನ್ನು ಗೈಯ್ಯಲೂ ಸಿದ್ಧಳು. ಹೊನ್ನು-ಮಣ್ಣುಗಳು ಅವಳಿಗಿಲ್ಲ. ನಾಳೆ ದಿನದ ಆಹಾರಕ್ಕೆ ಬೇಕಾದ ಅಕ್ಕಿ-ಬೇಳೆಗಳು ಗುಡಿಸಿಲಲ್ಲೆ ಇಲ್ಲ. ನಾಳೆ ಅನ್ಯರ ಮನೆಯಲ್ಲಿ ದುಡಿದು ಸಂಪಾದಿಸಿಯೇ ತರಬೇಕು; ಆದರೆ ರೂಪ-ಯೌವನಗಳು ಅವಳಿಗಿದ್ದುವು. ಅವುಗಳನ್ನು ವಿಕ್ರಯಿಸುವುದೇ? ಹಾಗಾದರೆ ಲೋಕದಲ್ಲಿ ಅವಳಿಗೆಲ್ಲಿಯ ಸ್ಥಾನ? ತನ್ನ ಸರ್ವಸ್ವವಾದ ಪ್ರಿಯತಮನನ್ನು ಅದಲ್ಲದೆ ರಕ್ಷಿಸಲು ಬೇರೆ ಯಾವದಾರಿಯಿರುವುದು? ಒಮ್ಮೆ ಅವಳಿಗೆ ತನ್ನ ಮಾನವನ್ನು ವಿಕ್ರಯಿಸಿಯಾದರೂ ತನ್ನ ಜೀವನದ ಜೀವನವನ್ನು ರಕ್ಷಿಸಬೇಕೆನಿಸುತ್ತಲಿದ್ದಿತು.

ಈ ವಿಚಾರಗಳಿಂದ ತುಂಬಿದ ಅವಳ ಹೃದಯವು ಈ ವೇದನೆಯನ್ನು ಸಹಿಸಲು ಶಕ್ಯವಾಗಲಿಲ್ಲ. ನೇತ್ರಗಳಿಂದ ಕಂಬನಿಗಳು ಪ್ರವಹಿಸಿ, ಅವಳ ಸುಂದರವಾದ ಕೆನ್ನೆಗಳನ್ನು ತೊಯ್ಸಿದುವು. ಕೇಶವನು ಇದೆಲ್ಲವನ್ನೂ ನೋಡುತ್ತಲಿದ್ದನು. ಗಂಗಕ್ಕ ಅಳುತ್ತಿರುವುದನ್ನು ಕಂಡು ಅವನು "ಗಂಗಾ, ಅದೇಕೆ ಅಳುತ್ತಿರುವೆ?" ಎಂದು ಕೇಳಿದನು.

ಗಂಗಕ್ಕನು ಸಹಿಸಲಾರದೆ ಇನ್ನಷ್ಟು ರೋದಿಸಿದಳು. ಸ್ವಲ್ಪ ನೇರ ಗತಿಸಿದನಂತರ:—"ನೀವು ಈ ರೀತಿ ನೆರಳುತ್ತಿರುವದನ್ನು ನಾನು ಸಹಿಸಲಾರೆನು. ನನ್ನ ಹೃದಯಭಾಸ್ಕರನು ಗ್ರಹಣಗ್ರಸ್ತನಾಗಿ ಸವೆಯುತ್ತಿರುವುದನ್ನು ಹೇಗೆ ನೋಡುತ್ತಿರಲು ಸಾಧ್ಯವಿದೆ? ಹತಭಾಗ್ಯಳ ವಿಧಿಯೆಂದೇ ಹೇಳಬೆಕು. ನನ್ನ ಜೀವಿತೇಶ್ವರ

ನನ್ನು ನಾನು ಕಳೆದುಕೊಳ್ಳಲಾರೆನು. ನನ್ನ ಸರ್ವಸ್ವವನ್ನಾದರೂ ತ್ಯಜಿಸಿ ಯಾದರೂ ಹೃದಯೇಶ್ವರನನ್ನು ಕಾಪಾಡುವೆನು." ಎಂದು ಹೇಳಿದಳು ಆ ಹೆಂಗಸು.

ಗಂಗಕ್ಕ, 'ತನ್ನ ಸರ್ವಸ್ವವನ್ನೂ ತ್ಯಜಿಸಿ' ಎಂದು ಹೇಳಿದ ಮಾತಿನ ಅರ್ಥವು ಕೇಶವನಿಗೆ ಹೊಳೆಯಿತು. ಅವನ ತೇಜೋಹೀನ ನೇತ್ರಗಳಿಂದ ಅಶ್ರುಧಾರೆಯು ಹರಿಯತೊಡಗಿತು. ಸ್ವಲ್ಪ ನೇರದವರೆಗೆ ಅವನು ಮೌನವಾಗಿಯೇ ಇದ್ದನು. ಅವನು ಯಾವ ವಿಧದ ಯಾತನೆಯನ್ನು ಅನುಭವಿಸುತ್ತಲಿದ್ದನೆಂಬುದು ಹೇಳಲು ಅಶಕ್ಯನು. ಎರಡು ನಿಮಿಷಗಳು ಗತಿಸಿದ ನಂತರ:—"ಗಂಗಾ, ನೀನು ನನ್ನ ಈ ಪರಿತಾಪಕರ ಅವಸ್ಥೆಯನ್ನು ಕಂಡು ಸರ್ವವಿನಾಶಕ್ಕೆ ಹೊರಡದಿರು. ನನಗೆ ಬದುಕುವ ಆಶೆಯಿಲ್ಲ. ನನ್ನ ಸ್ವಾರ್ಥತೆಗಾಗಿ ನಿನ್ನ ಜೀವನವು ಮಾಲಿನ್ಯವನ್ನು ಹೊಂದುವು ದನ್ನು ನಾನು ನೋಡಲಾರೆನು. ಗಂಗಾ, ನನಗೆ ನಿನ್ನ ಮಾನವನ್ನು ಮಾರಿ ಬದುಕಬೇಕೆಂದು ಬಯಕೆ ಇರುವುದಿಲ್ಲ. ರಾಮುವಿನ ತಾಯಿಯು ಸತೀತ್ವಶೂನ್ಯ ಳೆಂದು ಜನರು ನುಡಿಯುವದನ್ನು ನಾನು ಕೇಳಲಾರೆನು" ಎಂದನು.

ಗಂಗಕ್ಕನು ಅಳತೊಡಗಿದಳು. ಕೇಶವನ ನೇತ್ರಗಳಿಂದಲೂ ಕಂಬನಿಗಳು ಹೊರಬೀಳುತ್ತಲಿದ್ದವು. ಬಡತನದ ಬಾಳು ನರಕದ ಬಾಳೇ ಸರಿ.

ರೋಗಿಯ ಮಂಚದ ಮೇಲಿ ಕುಳಿತು ಗಂಗಕ್ಕನು ರೋಗಿಯ ಕಾಲುಗಳನ್ನು ಒತ್ತತೊಡಗಿದಳು. ರೋಗಿಯು ಮೆಲ್ಲನೆ:—"ಗಂಗಾ, ನಾನು ಬದುಕಬೇಕೆಂದು ಇಚ್ಛಿಸುವದಿಲ್ಲ. ನರಕರೂಪವಾದ ಈ ಭೂಮಿಯಲ್ಲಿ ನಾನು ಬಾಳಿದುದು ನಿನ ಗಾಗಿ ಮಾತ್ರವಾಗಿದೆ. ರಾಮು-ಆ ರತ್ನವನ್ನು ಕಾಪಾಡುವ ಭಾರವು ನಿನ್ನದು." ಎಂದನು. ಗಂಗಕ್ಕ ಮಾತಾಡಲಿಲ್ಲ. ಅವಳ ಹೃದಯದ ವಿಷಾದವು ಅವಳನ್ನು ಮಾತಾಡಗೊಡಲಿಲ್ಲ.

ಗಂಗಕ್ಕನು ಕೇಶವನ ಸೊರಗಿದ ದೇಹವನ್ನು ಅಪ್ಪಿಕೊಂಡಳು. ಅವಳ ಕಣ್ಣೀರಿನಿಂದ ರೋಗಿಯ ದೇಹವು ನೆನೆದು ಹೋಯಿತು.

3

ನೇರವು ಪ್ರಭಾತವಾಯಿತು. ಕೋಗಿಲೆಯೇ ಉದಯ ಭಾಸ್ಕರನ ಆಗಮ ವಾರ್ತೆಯನ್ನು ತನ್ನ ಮನೋಹರ ಗಾನದಿಂದ ನಿದ್ರಾಸಕ್ತವಾಗಿರುವ ವಿಶ್ವಕ್ಕರುಹಿ, ಚಿತ್ರಭಾನುವಿನ ಆರಾಧನಾರ್ಥವಾಗಿ ಅದು ಲೋಕವನ್ನು ಎಚ್ಚರಿಸಿತು. ನೂತನ ವಿಕಸಿತ ಕುಸುಮಗಳು ಶಿರಬಾಗಿ ವಿಭಾವಸುವಿಗೆ ವಂದಿಸಿದುವು. ಮಧುಕರನು ಪುಷ್ಪಗಳ ಮಧುವನ್ನು ನಿರಾಂತಕವಾಗಿ ಅಪಹರಿಸತೊಡಗಿದನು. ಕರ್ಮಯೋಗಿ ಯಾದ ಕೃಷಿಗಾರನು ತನ್ನ ಎತ್ತುಗಳನ್ನು ಹಟ್ಟಿಯಿಂದ ಹೊರಗೆ ತಂದು, ನೇಗಿಲನ್ನು ಹೆಗಲಮೇಲಿಟ್ಟುಕೊಂಡು ಎತ್ತುಗಳೊಡನೆ ಹೊಲಕ್ಕೆ ತೆರಳುತ್ತಲಿರುವನು. ಗ್ರಾಮದ ಕನ್ಯೆಯರು ತಮ್ಮ ಮನೆಗಳನ್ನು ಗೂಡಿಸಿ, ಸಾರಿಸಿ, ಹತ್ತಿರದ ನದಿಯಿಂದ ಕೊಡ ಗಳಲ್ಲಿ ನೀರು ಗುಂಬಿ ತಲೆಯಮೇಲಿಟ್ಟುಕೊಂಡು. ಗೃಹಾಭಿಮುಖವಾಗಿ ಬರುತ್ತಿರು

ವಾಗ, ಅವರಾಡುತ್ತಿರುವ ನುಡಿಗಳೂ, ಅವರ ಕೈಗಳಲ್ಲಿರುವ ಬಳೆಗಳೂ ಒಂದ ಕ್ಕೊಂದು ತಗಲಿದುದರಿಂದುಂಟಾಗುವ ನಿನಾದವು ಅತ್ಯಂತ ಕರ್ಣಮಧುರವಾಗಿದ್ದವು. ಹಳ್ಳಿಯ ವೈದಿಕರು ಪ್ರಭಾತದಲ್ಲಿ ಜಾಗೃತರಾಗಿ, ನದಿಯಲ್ಲಿ ಸ್ನಾನವನ್ನು ಗೈದು, ಮೂಡಲದ ಗುಡ್ಡದ ಬಳಿ ಹೊನ್ನುತೇರಿನಲ್ಲಿ ವಿರಾಜಮಾನನಾಗಿರುವ ಭಗವಾನ್ ಸೂರ್ಯನಾರಾಯಣನಿಗೆ ಅತ್ಯಂತ ಭಕ್ತಿಯಿಂದ ಅರ್ಘ್ಯವನ್ನು ನೀಡುತ್ತಿರುವ ಆ ದೃಶ್ಯವು ನಾಸ್ತಿಕನ ಕಲ್ಲೆದೆಯನ್ನು ಸಹ ಕರಗಿಸುವಂತಹದಾಗಿದ್ದಿತು. ಬಾಲಕರು ಬೆಳಗ್ಗೆ ಎದ್ದು, ಮುಖಗಳನ್ನು ತೊಳೆದು ಆ ದಿನ ಪಾಠಗಳನ್ನು ಓದುತ್ತಲಿದ್ದರು. ಕರುಗಳು ತಮ್ಮ ತಾಯಂದಿರ ದರ್ಶನೋತ್ಸುಕತೆಯಿಂದ 'ಅಂಬಾ' ಎಂದು ಕೂಗುತ್ತಲಿದ್ದುವು.

ಪ್ರಭಾತವು ಮಂಗಳವು. ಜೀವನದ ಕದನದಲ್ಲಿ ಬಳಲಿ ಬೆಂಡಾಗಿರುವ ಮಾನವನಿಗೆ ಅದು ನವಚೈತನ್ಯವನ್ನೂ ಹೊಸ ಆಶೆಯನ್ನೂ ನೀಡುವುದು. ನವ ತೇಜವನ್ನು ಕೊಡುವುದು. ಈ ಸುಂದರವಾದ ಪ್ರಾತಃಕಾಲದಲ್ಲಿ ಜನರು ಆನಂದ ಮಯರಾಗಿ ತಮ್ಮ ದೈನಂದಿನ ಕೃತ್ಯಗಳಲ್ಲಿ ನಿರತರಾಗಿದ್ದರು.

ಗಂಗಕ್ಕನು ಮೆಲ್ಲನೆ ಎದ್ದು ಗುಡಿಸಿಲಿನಿಂದ ಹೊರಗೆ ಬಂದಳು. ಅವಳಿಗೆ ಹರ್ಷವಿರಲಿಲ್ಲ. ಉದಯಭಾಸ್ಕರನು ಅವಳ ಹೃದಯದಲ್ಲಿ ತುಂಬಿರುವ ಚಿಂತೆಯೆಂಬ ತಮೋರಾಶಿಯನ್ನು ಹೊರದೂಡಿ, ಬೆಳಕನ್ನು ನೀಡಲು ಸಮರ್ಥನಾಗಲಿಲ್ಲ. ಅವಳು ವಿಷಾದಯುತ ಮನಸ್ಕಳಾಗಿ ತನ್ನ ಹರಿದ ಸೀರೆಯನ್ನುಟ್ಟುಕೊಂಡು ಮೆಲ್ಲನೆ ತನ್ನ ಧನಿಯ ಮನೆಗೆ ಗಮಿಸುತ್ತಲಿರುವಳು. ಅವಳು ಶ್ರೀಮಂತ ರಾಮಮೋಹನ ಬಾಬುವಿನ ಗೃಹದಲ್ಲಿ ಒಬ್ಬ ದಾಸಿಯು. ಬೆಳಿಗ್ಗೆ ಹೋದರೆ ಮಧ್ಯಾಹ್ನದ ವರೆಗೆ ಅಲ್ಲಿ ಕೆಲಸವಿರುವುದು. ಮನೆಯನ್ನು ಗುಡಿಸಿ ಸಾರಿಸುವದು, ಪಾತ್ರೆಗಳನ್ನು ಬೆಳಗುವುದು, ಹೂ ಗಿಡಗಳಿಗೆ ನೀರನ್ನು ಎರೆಯುವದು, ಇವೇ ಅವಳ ಕೆಲಸಗಳು. ಈ ದಾಸ್ಯವೃತ್ತಿಯಿಂದ ಅವಳಿಗೆ ತಿಂಗಳಿಗೆ ಐದು ರುಪಾಯಿಗಳ ವೇತನವು ಲಭಿಸುತ್ತಲಿದ್ದಿತು.

ಗಂಗಕ್ಕನು ದಾರಿದ್ರ್ಯದಿಂದ ಬಳಲಿ ಕುಂದಿದರೂ ಅವಳ ರೂಪವು ಕಡಿಮೆಯಾಗಿರಲಿಲ್ಲ. ಅವಳ ವಿಷಾದವೂ, ಕಷ್ಟದ ಬದುಕೂ ಅವಳ ವದನಾರವಿಂದಕ್ಕೆ ಒಂದು ಹೊಸ ಕಾಂತಿಯನ್ನು ನೀಡಿದ್ದುವು

ರಾಮಮೋಹನನು ಧನಿಕನು. ಧನವಿದ್ದರೆ ಏನು ಮಾಡಲೂ ಸಾಧ್ಯವಿದೆ ಎಂದು ಅವನು ತಿಳಿದಿದ್ದನು. ಅವನಿಗೆ ೨೪ ವರ್ಷ ಪ್ರಾಯವಿರಬಹುದು. ಚಿಕ್ಕಂದಿನಲ್ಲಿಯೇ ತಂದೆ ತೀರಿಹೋದುದರಿಂದ, ವಿಶಾಲ ಸಂಪತ್ತಿಗೆ ಒಡೆಯನಾದನು. ಅವನಿಗೆ ತಾರುಣ್ಯಕಾಲದಲ್ಲಿ ಲಭಿಸಿದ ಸಂಪತ್ತು ಅವನ ನಡತೆಯನ್ನು ದೋಷಪರಿಪೂರ್ಣವಾಗಿ ಮಾಡಿತು. ಅವನು ವಿವಾಹಿತನಾಗಿದ್ದರೂ, ಅವನು ತನ್ನ ಪತ್ನಿಯ ಸುಖಭೋಗದಿಂದ ಸಂತೃಪ್ತನಾಗಲಿಲ್ಲ. ಸ್ವಲ್ಪ ಸೌಂದರ್ಯವಿರುವ ಹೆಂಗಸರನ್ನು

ಕಂಡರೆ, ಅವರನ್ನು ಸೇರಬೇಕೆಂಬ ಬಯಕೆಯು ಅವನ ಮನಸ್ಸಿನಲ್ಲಿ ಉದಯಿಸುತ ಲಿದ್ದಿತು. ಅವನ ಧನಕ್ಕೂ ವೈಭವಕ್ಕೂ ಮರುಳಾಗಿ ಅವೆಷ್ಟೋಮಂದಿ ವನಿತೆಯರು ಕೆಟ್ಟದಾರಿಯನ್ನು ಹಿಡಿದಿದ್ದರು. ಅವನು ಹಣದಿಂದ ಹೆಂಗಸಿನ ಮಾನವನ್ನು ಅಳೆಯಬಹುದೆಂದು ನಂಬುವ ಮನುಷ್ಯನಾಗಿದ್ದನು. ಈ ಕಾಲದಲ್ಲಿ ಅವನಿಷ್ಟೋ ಮಂದಿ ಲಲನೆಯರ ಮಾನವನ್ನು ಧನವನ್ನು ಕೊಟ್ಟು ಕೊಂಡುಕೊಂಡಿದ್ದನು. ಅವನು ಸ್ವಭಾವತಃ ಚಂಚಲನು. ಒಂದು ಸಾಧನದಿಂದ ಅವನು ತೃಪ್ತನಾಗುವವನಲ್ಲ. ಮಧುಕರೀಕದಂತೆ ಅನೇಕ ಕುಸುಮಗಳ ರಸವನ್ನು ಹೀರಿ ಆಸ್ವಾದಿಸುವ ಸ್ವಭಾವವು ಅವನದಾಗಿದ್ದಿತು.

ಗಂಗಕ್ಕನ ರೂಪರಾಶಿಯನ್ನು ನೋಡಿದ ಕೂಡಲೇ, ಆ ಪಾಪಾತ್ಮನಿಗೆ ಸ್ವಭಾವಗುಣಕ್ಕನುಸಾರವಾಗಿ ತನಗೆ ಗೋಚರವಾದ ನೂತನ ಪುಷ್ಪವನ್ನು ಗಿಡದಿಂದ ಕಿತ್ತು ಅದರ ವಾಸನೆಯನ್ನು ಆಘ್ರಾಣಿಸಿ ಸವಿಯಬೇಕೆಂಬ ಬಯಕೆಯುಂಟಾಯಿತು. ಅವನು ಸುಲಭವಾಗಿ ಈ ಹೂವನ್ನು ಕಿತ್ತು ತನ್ನ ಹೂದೊಟ್ಟಿಯಲ್ಲಿ ಹಾಕಿಕೊಳ್ಳಬೇಕೆಂದು ನಿಶ್ಚಯಿಸಿದನು. "ತನಗೆ ಧನವಿದೆ. ಯಾವುದನ್ನು ಬೇಕಾದರೂ ಕೊಂಡುಕೊಳ್ಳುವ ಸಾಮರ್ಥ್ಯವು ತನಗಿದೆ. ತನ್ನ ಸಂಪತ್ತಿಗೂ ವೈಭವಕ್ಕೂ ಬೆರಗಾಗಿ ಆ ಹೆಂಗಸು ಪಾದಾಕ್ರಾಂತಳಾಗುತ್ತಾಳೆ." ಎಂದು ವಿಚಾರಿಸಿದ್ದನು.

ಆದರೆ ಅವನ ಆ ಕಲ್ಪನೆಯು ವಿಫಲವಾಯಿತು. ಅವನು ತನ್ನ ದುರಾಗ್ರಹವನ್ನು ಅವಳಿಗೆ ಅರುಹುತ್ತಲೆ, ಹುತ್ತದಲ್ಲಿ ಕೆಣಕಲ್ಪಟ್ಟ ಭುಜಂಗದಂತೆ, ಅವಳು ಕೋಪಾವಿಷ್ಟಳಾಗಿ ಅವನ ವಾಕ್ಯವನ್ನು ನಿರಸನ ಮಾಡಿದಳು. ತನ್ನ ಮಾನಕ್ಕೆ ಬೆಲೆ ಗಟ್ಟಲು ರಾಮಮೋಹನನಿಗೆ ಅಸಾಧ್ಯವೆಂದುತಿಳಿಸಿದಳು; ಆದರೆ ಆ ಪಾಪಿಯು ತನ್ನ ಆಗ್ರಹವನ್ನು ತ್ಯಜಿಸಲಿಲ್ಲ. ಗಂಗಕ್ಕನಿಗೆ ಲೋಕದ ಪರಿಚಯವು ಲಭಿಸಿರಲಿಲ್ಲವೆಂದೂ, ಧನದ ಮಹಿಮೆಯು ತಿಳಿದಿಲ್ಲವೆಂದೂ, ಅವನು ತಿಳಿದಿದ್ದನು ಸ್ವಲ್ಪ ಕಾಲ ಗತಿಸಲು ಲೋಕದ ದುಃಖಗಳನ್ನೂ, ಕಷ್ಟ ಪರಿಪೂರ್ಣತೆಯನ್ನೂ, ಅನುಭವಿಸಬೇಕಾಗಿ ಬಂದಾಗ, ತನ್ನ ಸಹಜವಾದ ಹಟಮಾರಿತನವನ್ನು ಅವಳು ತ್ಯಜಿಸುವಳೆಂದು ಅವನು ಬಗೆದಿದ್ದನು.

ಗಂಗಕ್ಕನು ಎಂದಿನಂತೆ ರಾಮಮೋಹನನ ವಸತಿಗೆ ಬಂದು ತನ್ನ ದೈನಂದಿನ ಕೆಲಸಗಳಲ್ಲಿ ನಿರತಳಾದಳು. ಅವಳು ಒಂದು ಕೋಣೆಯನ್ನು ಗುಡಿಸುತ್ತಿರುವಾಗ, ಬಾಬುವು ಅಲ್ಲಿಗೆ ಬಂದನು. ಬಾಬುವನ್ನು ಕಾಣುತ್ತಲೆ ಅವಳ ಹೃದಯವೊಂದು ಬಾರಿ ಕಂಪಿಸಿತು.

"ಗಂಗೂ, ನಿನ್ನ ಹುಚ್ಚು ವಿಚಾರವನ್ನು ಬಿಡು. ಚಾರಿತ್ರ್ಯವು ಮನುಷ್ಯನ ಹೊಟ್ಟೆಗೆ ಹಿಟ್ಟು ತರುವಂತಿಲ್ಲ. ನೀನೇಕೆ ನನ್ನ ಬಯಕೆಯನ್ನು ಪೂರ್ತಿಮಾಡ ಕೂಡದು? ನೀನೇಕೆ ಈ ದಾರಿದ್ರ್ಯವನ್ನೂ, ದುಃಖವನ್ನೂ, ಅನುಭವಿಸುವುದರ

ಬದಲು, ಸಂಪತ್ತನ್ನು ಪಡೆದು ಸುಖಿಯಾಗಬಾರದು?'' ಎಂದು ರಾಮಮೋಹನ ಬಾಬುವು ಕೇಳಿದನು.

ಅವಳು ಮಾತಾಡಲಿಲ್ಲ. ನಾನಾವಿಧದ ಚಿಂತೆಗಳು ಅವಳ ಹೃದಯದಲ್ಲಿ ತುಂಬಿ, ಅವಳ ಮನಸ್ಸನ್ನು ಅಲ್ಲೋಲ ಕಲ್ಲೋಲ ಪಡಿಸಿದ್ದುವು. ಅವಳು ತನ್ನ ಮನದಲ್ಲಿ ''ಹೌದು, ಬಾಬುವು ಹೇಳುವಂತೆ ಸತೀತ್ವದಿಂದೇನು? ಅದು ಹೊಟ್ಟೆಗೆ ಹಿಟ್ಟನ್ನು ತರಲಾರದು. ತನ್ನ ಪತಿಯ ರೋಗವನ್ನು ದೂರಗೊಳಿಸಲಾರದು. ಬಾಬುವಿನ ಇಚ್ಛೆಯನ್ನು ಪೂರೈಸಿ ತನ್ನ ಪತಿಯ ರೋಗವನ್ನು ಏಕೆ ನಿವಾರಣೆ ಗೊಳಿಸ ಬಾರದು? ರಾಮುವಿನ ಭಾವೀಜೀವನವನ್ನು ಏಕೆ ಶೋಭಾಯಮಾನವಾಗಿ ಮಾಡ ಬಾರದು? ಈ ವಿಚಾರಗಳು ಅವಳ ಹೃದಯದ ಸ್ಥಿರತೆಯನ್ನು ಚಂಚಲಗೊಳಿಸಿದುವು. ಆ ಆಶೆಯು ಅವಳನ್ನು ಬೇರೆ ದಾರಿ ಹಿಡಿಯಲು ಪ್ರೇರೇಪಿಸಿತು. ಪರಿಶುದ್ಧವಾದ ಆ ಸ್ತ್ರೀ ಹೃದಯವು ವಿಕಾರಗಳಿಗೆ ಪರವಶವಾಯಿತು.

ರಾಮಮೋಹನನು, "ಗಂಗೀ, ಆಲೋಚಿಸು. ನಿನ್ನ ಮುಂದಿನ ಜೀವನವು ನಿನ್ನ ಕೈಯಲ್ಲಿಯೇ ಇರುವದು. ಸತೀತ್ವವೆಂಬ ಹುಚ್ಚನ್ನು ಬಿಡು. ಯೌವನದ ಹೂವು ಸುಮ್ಮನೆ ಒಣಗಿಹೋಗುತ್ತಿರುವದು. ಅದರ ಸವಿಯನ್ನೇಕೆ ಪರಿತ್ಯಜಿಸ ಬೇಕು? ನಿನ್ನ ಭಾವೀ ಜೀವನವನ್ನು ಏಕೆ ಶುಭಪ್ರದವಾಗಿ ಮಾಡಬಾರದು?" ಎಂದು ನುಡಿದನು.

ಗಂಗಕ್ಕನು ಮೆಲ್ಲಗೆ:—''ಸರಿ. ಹಾಗೇ ಆಗಲಿ'' ಎಂದು ಹೇಳಿ ಲಜ್ಜೆಯಿಂದ ತನ್ನ ಮೋರೆಯನ್ನು ತಗ್ಗಿಸಿದಳು. ತನ್ನ ಸರ್ವಸ್ವವಾದ ಸತೀತ್ವವನ್ನು ಮಾರಿ ತನ್ನ ಸರ್ವವಿನಾಶಪಥವನ್ನು ಹಿಡಿದಾದರೂ, ಕೇಶವನ ಜೀವರಕ್ಷಣೆಯೆನ್ನು ಮಾಡ ಬೇಕೆಂಬ ದೃಢ ಸಂಕಲ್ಪದಿಂದ ಮೇಲಿನ ನುಡಿಗಳನ್ನು ನುಡಿದಿದ್ದಳು. ತನ್ನ ಪರ್ತ ನೆಯ ಪರಿಣಾಮವು ಏನೆಂಬುದು ಅವಳಿಗೆ ತಿಳಿದಿದ್ದಿತು. ಸರ್ವತ್ಯಾಗ ಸನ್ನದ್ಧೆಯ ಭೀಷಣ ಸಂಕಲ್ಪವು ಅವಳ ಮುಖಕಮಲದಲ್ಲಿ ಪ್ರತಿಬಿಂಬಿಸಿದ್ದಿತು.

ಆದರೆ ಪಾಪಿಯಾದ ರಾಮಮೋಹನನಿಗೆ ಅವಳ ಆ ಮುಖಮುದ್ರೆಯ ಅರ್ಥ ವನ್ನು ತಿಳಿಯಲು ಸಾಧ್ಯವಾಗಲಿಲ್ಲ. ತನ್ನ ವೇದಾಂತವು ಇಂದಿಗೆ ಫಲಿಸಿತೆಂದು ಅವನು ಆನಂದ ಪಡೆದನು. ಇದುವರೆಗೆ ಗಂಗಕ್ಕನ ರೂಪದರ್ಶನ ಮಾತ್ರದಿಂದ ತೃಪ್ತಿಯನ್ನು ಪಡೆಯುತ್ತಿದ್ದನು. ಆದರೆ ಇದುವರೆಗೆ ಬಂಧಿಸಲ್ಪಟ್ಟಿದ್ದ ನಾಕದ ಕದಗಳು ಈಗ ತೆರೆಯಲ್ಪಟ್ಟಿವೆ! ಇದುವರೆಗೆ ಅಲಭ್ಯವಾಗಿದ್ದ ಸುಂದರವಾದ ಕುಸುಮವೊಂದನ್ನು ಕಿತ್ತು ಅದರ ರಸವನ್ನು ಆಸ್ವಾದಿಸುವ ಮಹಾಭಾಗ್ಯವು ಪ್ರಾಪ್ತವಾಗಿದೆ! ಆ ದುರಾತ್ಮನು ಅವಳು ತನ್ನ ಪತಿಯ ರೋಗಚಿಕಿತ್ಸೆಯ ಏಕ ಉದ್ದೇಶಕ್ಕಾಗಿ ಮಾನವನ್ನು ಮಾರಲು ಹೊರಟಿರುವಳೆಂದು ತಿಳಿಯಲಿಲ್ಲ. ಆ ಮನುಷ್ಯನ ದುಷ್ಟವಿಷಯವಾಸನೆಯಿಂದ ತುಂಬಿದ ಬುದ್ಧಿಗೆ ಆ ಮಹಾತ್ಯಾಗವನ್ನು ತಿಳಿಯಲು ಸಾಧಿಸಲಿಲ್ಲ.

ರಾಮಮೋಹನನು ಗಂಗಕ್ಕನನ್ನು ತನ್ನ ಆಫೀಸುಕೋಣೆಗೆ ಕರೆದುಕೊಂಡು ಹೋದನು. ಪೆಟ್ಟಿಗೆಯಿಂದ ಹತ್ತುರೂಪಾಯಿಗಳ ನೋಟುಗಳ ಎರಡು ಕಟ್ಟುಗಳನ್ನು ತೆಗೆದು ಗಂಗಕ್ಕನ ಕೈಗಳಲ್ಲಿ ಕೊಟ್ಟನು. ಅನಂತರ ಅವನು "ಈಗ ಇದು ೨೦೦ರೂಪಾಯಿಗಳಿವೆ. ಇಂದು ರಾತ್ರಿಗೆ ಇಲ್ಲಿಗೆ ಬಾ. ನನ್ನ ಶಯನ ಗೃಹದಲ್ಲಿ ರಾತ್ರಿ ದೀಪವು ಉರಿಯತ್ತಿರಲಿರುವುದು. ನೀನು ಬಂದು ಬಾಗಿಲು ತಟ್ಟಿದರೆಸಾಕು. ಆ ಮೇಲೆ ನಿನಗೆ ಬೇಕಾದಷ್ಟು ಹಣವನ್ನು ನೀಡುವೆನು." ಎಂದುಹೇಳಿದನು.

"ಹೂಂ" ಎಂಬ ಸಮ್ಮತಿಯನ್ನಿತ್ತಳು ಗಂಗಕ್ಕ. ಆ ಹಣವನ್ನು ಅವಳು ತನ್ನ ಮಡಿಲಲ್ಲಿ ಅಡಗಿಸಿಕೊಂಡಳು.

ಅಂದಿನ ಕೆಲಸಗಳನ್ನು ಪೂರೈಸಿ ನೇರವು ಹನ್ನೊಂದು ತಾಸಾಗುವ ವೇಳೆಯಲ್ಲಿ ೨೦೦ ರೂಪಾಯಿಗಳ ಗಂಟಿನೊಡನೆ ತನ್ನ ಗುಡಿಸಲಿಗೆ ತೆರಳಿದಳು.

4

ರಾತ್ರಿ ಹತ್ತುತಾಸಿನ ಸಮಯ. ತನ್ನ ಹಗಲಿನ ಕಾರ್ಯಕಲಾಪಗಳಿಂದ ಬಳಲಿ ಬೆಂಡಾದ ಮಾನುಷ ಲೋಕವು ನಿದ್ರಾಂಗನೆಯ ಕೃಪೆಗೆ ಪಾತ್ರೀಕರಿಸಿ, ವಿಶ್ರಾಂತಿಯನ್ನು ಪಡೆಯುತ್ತಲಿರುವುದು. ದೂರಲ್ಲಿರುವ ಒಂದು ಮರದ ಮೇಲಿರುವ ಗೂಬೆಯ ನಿನಾದವೂ, ಹಳ್ಳಿಯ ನಾಯಿಗಳ ಕಚ್ಚಾಟದ ಶಬ್ದವೂ ಬಿಲ್ಲದೆ ಬೇರೆ ಯಾವದೂ ಲೋಕದ ಶಾಂತತೆಯನ್ನು ಭಂಗಪಡಿಸುತ್ತಿರಲಿಲ್ಲ. ಈ ವೇಳೆಯಲ್ಲಿ ಗಂಗಕ್ಕನು ತನ್ನ ಪತಿಯ ಮಂಚದ ಮೇಲೆ ಕುಳಿತು ವಿಚಾರಾಸಕ್ತಳಾಗಿರುವಳು. ಎರಡು ಕಣ್ಣುಗಳೊಳಗಿಂದಲೂ ಒಂದೇ ಸವನೆ ಅಶ್ರುಪ್ರವಾಹವು ಉಕ್ಕಿಬರುತ್ತಲಿರುವುದು. ಆವಳು ನಿದ್ರಿಸುತ್ತಿರುವ ರೋಗಿಯ ಕಡೆಗೆ ಆಗಾಗ ತನ್ನ ದೃಷ್ಟಿಯನ್ನು ಇರಿಸುವಳು. ಅವಳ ಹೃದಯವು ಮಂಚದ ಕೆಳಗೆ ಒಂದು ಚಾಪೆಯಲ್ಲಿ ನಿದ್ರಿಸುತ್ತಲಿರುವ ರಾಮುವಿನೊಡನೆ, "ರಾಮೂ, ಪ್ರಭಾತವಾದರೆ ನಿನ್ನ ತಾಯಿಯು ಓರ್ವ ವ್ಯಭಿಚಾರಿಣಿ-ವೇಶ್ಯೆಯಾಗುವಳು" ಎಂದು ಹೇಳಿತು. ಅನಂತರ ತನ್ನ ಪ್ರಾಣ ಕಾಂತನ ಕಡೆಗೆ ತಿರುಗಿ, "ತಮ್ಮ ರೋಗನಿವಾರಣೆಯೇ ನನ್ನ ಏಕಾಗ್ರಹ. ತಮ್ಮ ಚಿಕಿತ್ಸೆಗಾಗಿ-ನನ್ನ ಮಾನವನ್ನೂ ರೂಪವನ್ನೂ ವಿಕ್ರಯಿಸುವೆನು. ಈ ಕಲಂಕರಹಿತ ಅಧರಗಳಿಂದ ತಮ್ಮ ಮುಖಚಂದ್ರನನ್ನು ಅತ್ಯಂತ ಬಾರಿ ಚುಂಬಿಸುವೆನು. ಈಗ ಇದು ಪರಿಶುದ್ಧವಾಗಿದೆ. ಬೆಳಗಾದರೆ ಮಲಿನತೆಯನ್ನು ಪಡೆಯುವದು. ನನ್ನ ತುಟಿಗಳು ಪರ ಪುರುಷನನ್ನು ಚುಂಬಿಸಿ ವಿಷಪರಿಪೂರ್ಣವಾಗುವವು." ಎಂದು ಮೆಲ್ಲಗೆ ನುಡಿದಳು.

ಅತ್ಯಂತ ಬಾರಿ ಕೇಶವನ ಹಣೆಯನ್ನು ಅವಳು ಚುಂಬಿಸಿದಳು. ಪ್ರೇಮಮಯವಾದ ಆ ಚುಂಬನವು-ಕಲಂಕವಿಲ್ಲದ ಆ ಚುಂಬನವು-ಅಂತ್ಯದ ಚುಂಬನವೆಂದು ಅವಳು ತಿಳಿದಳು. ಮೆಲ್ಲಗೆ ಮಂಚದ ಮೇಲಿನಿಂದ ಎದ್ದು ಚಾಪೆಯಲ್ಲಿ ನಿದ್ರಿಸುತ್ತಿರುವ ರಾಮುವನ್ನು ಮುದ್ದಿಟ್ಟಳು. ಯಾತನೆಯನ್ನು ಸಹಿಸಲಾರದೆ ಶೋಕಾಗ್ನಿಯನ್ನು ಶಾಂತಗೊಳಿಸಲು ನೇತ್ರಗಳಿಂದ ಹರಿಯುತ್ತಿರುವ ಅಶ್ರುಪ್ರವಾಹವು ಪರ್ಯಾಪ್ತವಾಗಲಿಲ್ಲ.

ತಾನು ಉಟ್ಟಿದ್ದ ವಸ್ತ್ರವನ್ನು ಸರಿಪಡಿಸಿಕೊಂಡು, ಅವಳು ಕೈಯಲ್ಲಿ ಒಂದು ಹಣತೆಯನ್ನು ಹಿಡಿದು, ತನ್ನ ವಚನವನ್ನು ನಿರ್ವಹಿಸುವದಕ್ಕೆ ತನ್ನ ಗುಡಿಸಿಲಿನಿಂದ ಹೊರಬಿದ್ದಳು ಮೆಲ್ಲನೆ ಚರಣಗಳನ್ನಿಡುತ್ತಾ, ಗುಡಿಸಿಲಿನ ಕದಗಳನ್ನು ಮುಚ್ಚಿ ಹೊರಬಂದಳು ಗಂಗಕ್ಕ. ಬುದ್ಧಿಪೂರ್ವಕವಾಗಿ ಆಕೆ ಅಂಧಕಾರದ ಬಳಿಗೆ ಗಮಿಸುತ್ತಲಿರುವಳು.

ಅವಳು ಮೆಲ್ಲನೆ ರಾಮಮೋಹನ ಬಾಬುವಿನ ಗೃಹದ ಬಳಿಗೆ ಗಮಿಸತೊಡಗಿದಳು. ಅವಳು ತನ್ನಲ್ಲಿ ತಾನೇ ನುಡಿಯುತ್ತಿರುವಳು. "ಈಗ ಶುದ್ಧತೆಯಿಂದಲೂ, ಸತೀತ್ವದಿಂದಲೂ ಕೂಡಿದವಳಾಗಿ, ಬಾಬುವಿನ ಮನೆಗೆ ಗಮಿಸುತ್ತಿರುವೆನು. ಬಾಬುವಿನ ಮನೆಯಿಂದ ಹೊರಬೀಳುವಾಗ ನಾನು ಯಾರು? ಸತೀತ್ವವೂ, ಪರಿಶುದ್ಧತೆಯೂ ನನ್ನನ್ನು ಪರಿತ್ಯಜಿಸುವುವು. ಬಡತನದ ಮತ್ತು ಸುಖದ ಬೆಂಕಿಯಲ್ಲಿ ಬೇಯುತ್ತಿದ್ದರೂ ಈ ವರೆಗೆ ಸಮುದಾಯದಲ್ಲಿ ತಲೆ ಎತ್ತಿ ನಡೆದಿದ್ದೆನು. ದರಿದ್ರಳಾದರೂ ಚಾರಿತ್ರ್ಯವೆಂಬ ರತ್ನವು ನನ್ನ ಬಳಿಯಲ್ಲಿ ಇರುವುದು ಎಂಬುದಾಗಿ ಅಭಿಮಾನಿಸುತ್ತಲಿದ್ದೆನು. ಆದರೆ ಬಾಬುವಿನ ಮನೆಯಿಂದ ಹಿಂದಿರುಗಿ ಬರುವಾಗ, ಮುಂಚಿನಂತೆ ಸಮುದಾಯದಲ್ಲಿ ತಲೆಯೆತ್ತಿ ನಡೆಯಲೂ, ಲೋಕದ ಸ್ತ್ರೀತ್ವದೊಡನೆ ಅಭಿಮಾನದಿಂದ ಬೇವಿಸಲೂ, ಸಾಧ್ಯವೇ? ಲೋಕವು ವ್ಯಭಿಚಾರಿಣಿಯೆಂದು ನನ್ನನ್ನು ದೂರೀಕರಿಸುವುದು. ಹುಚ್ಚುನಾಯಿಯನ್ನು ಹೊಡೆದೋಡಿಸುವಂತೆ, ನನ್ನನ್ನು ಜನರು ದೂರ ಮಾಡುವರು. ರಾಮುವು ಎಷ್ಟು ಧನಿಕನೂ ವಿದ್ಯಾಸಂಪನ್ನನೂ ಆದರೂ ವೇಶ್ಯಾಪುತ್ರನೆಂದು ಜನರು ಅವನನ್ನು ಹಿಯ್ಯಾಳಿಸುವರು. ರೋಗದಿಂದ ಪ್ರಾಣಕಾಂತನನ್ನು ರಕ್ಷಿಸುವದಕ್ಕಾಗಿ ಈ ಅಕೃತ್ಯವನ್ನು ಗೈವುದುಚಿತವೇ? ಹಾಗೆ ವರ್ತಿಸಿದ್ದು ನನ್ನ ಪತಿಗೆ ತಿಳಿದರೆ, ಅಪಮಾನಕ್ಕಿಂತ ಪ್ರಾಣತ್ಯಾಗವು ಲೇಸೆಂದು ಅವನು ಜೀವತ್ಯಾಗ ಮಾಡುವುದಿಲ್ಲವೇ? ನನಗಾಗಿ ನಿರಪರಾಧಿಯಾದ ರಾಮುವು ಅಪಮಾನ ಸಹಿಸಬೇಕಾಗಿ ಬರುವುದಿಲ್ಲವೇ? ಸಂಸಾರದಲ್ಲಿ ಪವಿತ್ರಮಾರ್ಗದಲ್ಲಿ ದುಡಿದು ಪುರುಷನ ಅರ್ಧಾಂಗಿಯಾಗಿರುವ ನಾನು ನಾಳೆಯದಿನದಿಂದ ಬರಿಯ ಒಬ್ಬ ದುಷ್ಟಪುರುಷನ ಇಂದ್ರಿಯ ವಾಸನೆಯನ್ನು ಸಂತೃಪ್ತಿಗೊಳಿಸಲಿರುವ ಒಂದು ಮಾನುಷ ಯಂತ್ರಮಾತ್ರವಾಗುವೆನು. ಹಾಗಾದರೆ ನನ್ನ ವಚನವುಲ್ಲಂಘನವಾಗುವುದು"

ಈ ರೀತಿ ಚಿಂತಿಸುತ್ತಾ ಬಾಬುವಿನ ವಸತಿಗೆ ತಿರಳಿದಳು ಗಂಗಕ್ಕ.

ಬಾಬುವಿನ ಮಾಳಿಗೆಯಲ್ಲಿ ಬೆಳಕು ಒಂದು ಉರಿಯುತ್ತಲಿರುವುದು. ಮಹಡಿಯ ಜಗಲಿಯಲ್ಲಿ ಒಬ್ಬ ಪುರುಷನು ನಿಂತಿರುವಂತೆ ಅವಳಿಗೆ ಭಾಸವಾಯಿತು. ಆವನು ಅವಳ ಆಗಮನವನ್ನು ನಿರೀಕ್ಷಿಸುತ್ತಲಿರುವ ಬಾಬುವಾಗಿರಬಹುದು. "ಗಂಗಕ್ಕಾ, ನಿನ್ನ ಸತೀತ್ವವನ್ನು ಮಾರಲು ಗಮಿಸುತ್ತಿರುವೆಯೊ?—ವ್ಯಭಿಚಾರಿಯತೆಯ ಬಳಿಗೆ ಧಾವಿಸುತ್ತಿಲಿರುವೆಯೊ?" ಎಂದು ನುಡಿಯುತ್ತಲಿದ್ದಿತು ಅವಳ ಹೃದಯವು.

ಗಂಗಕ್ಕನು ಜಗಲಿಯಲ್ಲಿ ನಿಂತಳು. ಇನ್ನೇನು ಏಣಿಯ ಹತ್ತಿ ಮಹಡಿಗೆ ಹೋಗಬೇಕು. ಅಷ್ಟರಲ್ಲಿ ಕಳೆದ ದಿನವ ರಾತ್ರಿ ಕೇಶವನು ಹೇಳಿದ "ಗಂಗಾ, ಮಾನವನ್ನು ಮಾರಿ ಜೀವಿಸಲು ನಾನು ಬಯಸುವುದಿಲ್ಲ. ರಾಮುವಿನ ತಾಯಿಯು ವ್ಯಭಿಚಾರಿಣಿಯು ಎಂಬ ನುಡಿಯನ್ನು ನಾನು ಕೇಳಲಾರೆನು." ಎಂಬ ವಚನಗಳು, ಅವಳ ಸ್ಮೃತಿಪಥದಲ್ಲಿ ಪ್ರತಿಧ್ವನಿಸತೊಡಗಿದುವು. ಹೃದಯವು ಕಂಪಿಸಿತು. ಎದೆಯು ನಡುಗಿತು. ಹೃತ್ಕಂಪನದಿಂದ ಮೈಮೇಲಿನ ರೋಮುಗಳು ಎದ್ದು ನಿಂತುವು.

"ಸಾಧ್ಯವಿಲ್ಲ. ಪ್ರಾಣಕಾಂತನೂ, ರಾಮುವೂ ಅಪಮಾನದಲ್ಲಿ ಜೀವಿಸುವಂತೆ ಮಾಡಲಾರೆನು. ಧಿಕ್ಕಾರವಿರಲಿ. ಆತ್ಮತ್ಯಾಗವನ್ನಾದರೂ ಮಾಡುವೆನು; ಆದರೆ ಸತೀತ್ವವನ್ನು ವಿಕ್ರಯಿಸಲಾರೆನು" ಎಂಬುದಾಗಿ ಗಂಗಕ್ಕನು ನಿರ್ಧರಿಸಿದಳು. "ಮಿಥ್ಯವಾದ ಜಗತ್ತಿನಲ್ಲಿ ಪ್ರಾಣಕಾಂತನ ಅಲ್ಪವಾದ ಸುಖಕ್ಕಾಗಿ ಚಾರಿತ್ರ್ಯವನ್ನು ಮಾರುವುದು ಸರಿಯಲ್ಲ. ಲೋಕದ ಸಕಲ ಸಂಪತ್ತುಗಳು ಲಭಿಸಿದರೂ, ಸತೀತ್ವವನ್ನು ತ್ಯಾಗಮಾಡಲಾರೆನು." ಎಂಬ ಉದ್ಗಾರಗಳೊಡನೆ, ಪಾಪ ಕೂಪದ ಬಳಿಗೆ ಬಂದಿದ್ದ ಗಂಗಕ್ಕನು ಹಿಂದಿರುಗಿದಳು.

5

ಗಂಗಕ್ಕನು ಹಿಂದಿರುಗಿ ಬಂದು ತನ್ನ ಗುಡಿಸಿಲನ್ನು ಪ್ರವೇಶಿಸಿದಳು. ಅವಳು ಹಣತೆಯನ್ನು ನೆಲದ ಮೇಲಿಟ್ಟು ಮೆಲ್ಲಗೆ ಹೋಗಿ ಪತಿಯ ಮಂಚದ ಮೇಲೆ ಕುಳಿತಳು. ಅವನ ಹಣೆಯನ್ನು ತನ್ನ ಹಸ್ತದಿಂದ ಮುಟ್ಟಿದಳು. ಅದು ತಣ್ಣಗಾಗಿದ್ದಿತು ಭಯದಿಂದ ಎದೆಯನ್ನು ಮುಟ್ಟಿ ನೋಡಿದಳು. ಕೇಶವನ ಹೃದಯ ಸ್ಪಂದನವು ನಿಂತು ಹೋಗಿದ್ದಿತು.

ಕೇಶವನ ರೋಗವು ಹೆಚ್ಚಿ ಅವನುತನ್ನ ಜೀವನ ಯಾತ್ರೆಯನ್ನು ಸಮಾಪ್ತಿಗೊಳಿಸಿದ್ದನು. ಅವನು ತನ್ನ ವಿಷಾದ ಪರಿಪೂರ್ಣವಾದ ಜೀವಿತ ಯಾತ್ರೆಯನ್ನು ಸಮಾಪ್ತಿ ಗೊಳಿಸಿದ್ದನು.

ಪತಿಯ ದೇಹವಿಯೋಗವಾದುದನ್ನು ಕಂಡು ಗಂಗಕ್ಕನು ಅಳತೊಡಗಿದಳು. ಅತ್ತೇನು ಪ್ರಯೋಜನ? ಮರಣಹೊಂದಿದ ಪತಿಯು ಹಿಂದಿರುಗಿ ಬರುವಂತಿರಲಿಲ್ಲ. ಯಾರಿಗೋಸುಗ ತನ್ನ ಚಾರಿತ್ರ್ಯವನ್ನು ಮಾರಲುದ್ಯುಕ್ತಳಾಗಿದ್ದಳೋ, ಯಾರ ಸುಖವೇ ತನ್ನ ಸುಖವೆಂದು ಭಾವಿಸುತ್ತಲಿದ್ದಳೋ, ಆ ಪತಿದೇವನು ತನ್ನ ಲೋಕ ಯಾತ್ರೆಯನ್ನು ಅಂತ್ಯಗೊಳಿಸಿ ವಿಶ್ರಾಮಪಡೆದಿರುವಾಗ, ಇನ್ನು ಯಾರಿಗೆ ಬೇಕಾಗಿ ತಾನು ಜೀವಿಸುವುದು? ಯಾರಿಗೆ ಬೇಕಾಗಿ ತಾನು ದುಡಿಯುವುದು?

ಆ ರಾತ್ರಿಯಲ್ಲಿ ಅವಳು ಮೆಲ್ಲನೆ ತನ್ನ ಪೆಟ್ಟಿಗೆಯಿಂದ ಒಂದು ಕಾಗದದ ತುಂಡನ್ನು ತೆಗೆದು ಕಂಬನಿ ಸುರಿಸುತ್ತ ಏನನ್ನೋ ಬರೆದಳು. ಅನಂತರ ಆ ಕಾಗದವನ್ನೂ, ಬಾಬುವಿನಿಂದ ತನಗೆ ಲಭಿಸಿದ ನೋಟುಗಳನ್ನೂ ಒಂದು ಲಕ್ಕೋಟೆಯಲ್ಲಿ ಹಾಕಿದಳು. ಆ ಲಕ್ಕೋಟೆಯನ್ನು ಮಂಡದ ಮೇಲೆ ಮಡಗಿದಳು. ಸ್ವಲ್ಪ ಕಾಲ ಅವಳು ಜಿಂತಿಸುತ್ತ ಮಂಚದ ಮೇಲೆ ಕುಳಿತಿದ್ದಳು.

ಎಣ್ಣೆಯು ತೀರಿ ಹೋದುದರಿಂದ ದೀಪವು ನಂದಿ ಹೋಯಿತು. ಅನಂತರ ಅಂಧಕಾರಮಯವಾದ ಆ ರಾತ್ರಿಯಲ್ಲಿ ಏನು ಸಂಭವಿಸಿತು ಎಂದು ಹೇಳಲು ಬರುವಂತಿರಲಿಲ್ಲ.

6

ಬೆಳಗಾಗಲು ರಾಮಮೋಹನ ಬಾಬುವು ಗಂಗಕ್ಕನು ತನ್ನನ್ನು ವಂಚಿಸಿದಳೆಂದು ತಿಳಿದನು. ದ್ವೇಷದಿಂದ ಅವನ ದೇಹವು ಕಂಪಿಸಿತು. ಯಾವ ಮೋಹನ ರೂಪಕ್ಕೆ ಬೆರಗಾಗಿ ತಾನು 200ರೂತ್ಲಯಿಗಳನ್ನು ಕೊಟ್ಟಿದ್ದನೋ, ಆ ಲಾವಣ್ಯವು ತನ್ನನ್ನು ವಂಚಿಸಿತೆಂದು ಅವನು ರೋಷಾಕುಲನಾದನು. ತನ್ನನ್ನು ಧಿಕ್ಕರಿಸಿ ನಡೆದ ಆ ಚಾಂಡಾಳಿಗೆ ಖಂಡಿತವಾಗಿಯೂ ಒಂದು ಪಾಠವನ್ನು ಕಲಿಸಲೇಬೇಕೆಂದು ಅವನು ಬಗೆದನು.

ಬಾಬುವು ತನ್ನ ವಸತಿಯಿಂದ ಗಂಗಕ್ಕನನ್ನು ಶಿಕ್ಷಿಸುವುದಕ್ಕಾಗಿ, ಹೊರಬಿದ್ದನು. "ಆ ಚಂಡಾಲಿನಿಯ ಗುಡಿಸಿಲನ್ನು ನೆಲಸಮಪಡಿಸಿ, ಅಗ್ನಿದೇವನಿಗೆ ಆಹುತಿಯನ್ನು ನೀಡಬೇಕು. ಆ ದಂಪತಿಗಳನ್ನು ಹೊರದೂಡಿ, ಅಲೆಯುವಂತೆಮಾಡಬೇಕು" ಎಂದು ಸಂಕಲ್ಪಿಸಿ, ಬಾಬುವು ಗಂಗಕ್ಕನ ಗುಡಿಸಿಲದ ಬಳಿಗೆಬಂದನು.

ಆದರೆ ಗುಡಿಸಲನ್ನು ಪ್ರವೇಶಿಸುತ್ತಲೆ, ಅವನು ಕಂಡ ದೃಶ್ಯವು ಅವನ ಹೃದಯವನ್ನು ಕಂಪಿಸುವಂತೆ ಮಾಡಿತು. ಅಲ್ಲಿಯ ಭಯಂಕರ ವ್ಯಾಪಾರವು ಅವನ ಸಂಕಲ್ಪಸ್ತಂಭವನ್ನು ಅಡಿಮೇಲು ಮಾಡಿತು. ಮೆಲ್ಲಗೆ ಬಾಬುವು ಮಂಚದ ಬಳಿಗೆ ತೆರಳಿದನು. ಒಬ್ಬ ಪುರುಷನ ಮತ್ತು ಒಬ್ಬ ಹೆಂಗಸಿನ ಮೃತ ಶರೀರಗಳು ಅವನಿಗೆ ಗೋಚರವಾದುವು. ಆ ಶರೀರಗಳು ಗಂಗಕ್ಕನದೂ ಅವಳ ಪತಿಯದೂ ಆಗಿದ್ದುವು. ಹತ್ತಿರ ಕೆಳಗೆ ಒಂದು ಚಾಪೆಯಲ್ಲಿ ರಾಮುವು ಪ್ರಜ್ಞಾರಹಿತನಾಗಿ ಬಿದ್ದಿದ್ದನು. ಗಂಗಕ್ಕನ ಎದೆಯೆಲ್ಲಿ ಕತ್ತಿಯಿಂದ ತಿವಿದುಕೊಂಡ ಒಂದು ಗಾಯವಿದ್ದಿತು. ಗಾಯದಿಂದ ಹೊರಬಿದ್ದ ರಕ್ತವು ಅವಳ ಸೀರೆಯ ಸ್ವಲ್ಪಭಾಗವನ್ನು ಒದ್ದೆ ಮಾಡಿದ್ದಿತು ಅವಳ ಕೈಗಳು ಕೇಶವನ ಮೃತ ಶರೀರವನ್ನು ಬಿಗಿದಪ್ಪಿದ್ದುವು.

ಬಾಬುವಿಗೆ ಒಂದು ಲಕ್ಕೋಟೆಯು ಕಾಣಿಸಿತು. ನಡುಗುವ ಕೈಗಳಿಂದ ಅವನು ಅದನ್ನು ತೆಗೆದು ನೋಡಿದನು. ಅದರೊಳಗೆ ಒಂದು ಕಾಗದವೂ ನೋಟುಗಳ ಎರಡು ಕಟ್ಟುಗಳೂ ಇದ್ದುವು. ಅವನು ಆ ಕಾಗದವನ್ನು ಓದಿದನು:

"ಹತಭಾಗ್ಯಳಾದ ನನ್ನ ಮರಣಾಂತರವೂ ನಾನು ಇತರರಿಗೆ ತೊಂದರೆಯನ್ನು ನೀಡಿದುದರಲ್ಲಿ ಪರಿತಪಿಸುವೆನು. ನನ್ನ ಜೀವನವು ಒಂದು ವಿಷಾದಾಂತ ನಾಟಕವಾಗಿ ಪರಿಣಮಿಸಬೇಕೆಂದು ವಿಧಿಸಂಕಲ್ಪವೆಂದು ತೋರುತ್ತದೆ.

ನನ್ನ ಜೀವೇಶ್ವರನ ರಕ್ಷಣಾರ್ಥವಾಗಿ ಸತೀತ್ವವನ್ನು ಮಾರಲು ಮೊದಲು ನನ್ನ ಮನಸ್ಸು ನನ್ನನ್ನು ಪ್ರೇರೇಪಿಸಿತು; ಆದರೆ ಆ ಪ್ರಮಾದವು ಸಂಭವಿಸಲು,

ನನ್ನ ಆತ್ಮನು ಸಮ್ಮತಿಸಲಿಲ್ಲ. ಯಾರಿಗೋಸುಗ ನಾನು ನನ್ನ ಮಾನವನ್ನು ಮಾರಲು ಹೊರಟಿದ್ದೆನೋ, ಆ ಪ್ರಾಣಕಾಂತನು ತನ್ನ ಜಡದೇಹವನ್ನು ತ್ಯಜಿಸಿ ಚಿರಶಾಂತಿಯನ್ನು ಪಡೆದಿರುವನು. ನಾನಿನ್ನು ಜೀವಿಸಿ ಫಲವೇನು?

ನಾನು ಜೀವಿಸುವುದೇತಕ್ಕೆ? ರಾಮುವಿಗಾಗಿಯೇ. ಆದರೆ ವಚನಭಂಗ ಅಪ ಮಾನಗಳನ್ನು ಹೇಗೆ ಸಹಿಸಲಿ? ನನ್ನ ಹೃದಯೇಶ್ವರನು ಜೀವನಯಾತ್ರೆಯನ್ನು ಸಮಾಪ್ತಿಗೊಳಿಸಲು ನನಗೆ ಬದುಕುವ ಭಯಕೆಯಿಲ್ಲ.

ಆದರೆ ಒಂದು ಮಾತು. ಈ ದರಿದ್ರಳ ಸತೀತ್ವಕ್ಕೆ ನೀಡಿದ ಬೆಲೆಯಾಗಿವೆ ಈ ಲಕ್ಕೋಟೆಯೊಳಗಿನ ನೋಟುಗಳು!

ಈ ಕಾಗದವನ್ನು ಓದುವ ಭಾಗ್ಯವು ಲಭಿಸಿದ ಮನುಷ್ಯನು ಈ ಕಾಗದ ವನ್ನೂ, ನೋಟುಗಳನ್ನೂ ಭಸ್ಮೀಕರಿಸಬೇಕೆಂದು ನನ್ನ ಅಂತಿಮದ ಪ್ರಾರ್ಥನೆ. ದಯಾರ್ದ್ರ ಹೃದಯರು ರಾಮುವನ್ನು ಕಾಪಾಡಬೇಕೆಂಬ ವಿಜ್ಞಾಪನೆ.

ಹತಭಾಗಿನಿ ಗಂಗಕ್ಕ"

ರಾಮಮೋಹನನು ಕಾಗದವನ್ನು ಓದಿದ ಕೂಡಲೆ, ಅವನ ನೇತ್ರಗಳಿಂದ ಅಶ್ರುಗಳು ಧಾರಧಾರೆಯಾಗಿ ಸುರಿಯತೊಡಗಿದುವು. ಅವನು ಗಂಗಕ್ಕನ ಮೃತ ಶರೀರದ ಬಳಿಗೆ ಹೋಗಿ ಅವಳ ಕಾಲುಗಳಮೇಲೆ ತಲೆಯನ್ನಿಟ್ಟು ಅಳುತ್ತಾ:— "ದೇವೀ, ತಾಯಿ ಗಂಗಕ್ಕಾ, ನಾನು ಮಹದಪರಾಧಿಯು. ವಿಷಯಾಂಧನಾದ ನಾನು ನಿನ್ನ ಸತೀತ್ವದ ಪ್ರಭಾವವನ್ನು ತಿಳಿಯಲಿಲ್ಲ. ನೀನು ಆತ್ಮಹತ್ಯೆಯನ್ನು ಗೈಯ್ಯಲು ಪ್ರೇರಿಸಿದ ಮಹಾಪಾಪಿಯಾದ ಈ ಅಧಮನನ್ನು ಕ್ಷಮಿಸುವೆಯಾ? ನಿನ್ನ ಆತ್ಮ ಬಲಿಯು ವಿಷಯಾಂಧನಾದ ನನ್ನ ಕಣ್ಣುಗಳನ್ನು ತೆರೆದುವು. ಈ ದಿನದಿಂದ ನಾನು ಪರಸ್ತ್ರೀಲಂಪಟವನ್ನೂ ವಿಷಯಾಂಧತೆಯನ್ನೂ ತ್ಯಜಿಸುವೆನು. ದೇವಿ, ನೀನು ಈ ಚಾಂಡಾಲನನ್ನು ಕ್ಷಮಿಸು!" ಎಂದು ನುಡಿದನು.

ಗಂಗಕ್ಕನ ಬಲಿದಾನವು ರಾಮಮೋಹನನ ವಿಷಯಾಸಕ್ತಿಯನ್ನು ದೂರ ಮಾಡಿತು. ಅವನು ಆ ನೋಟುಗಳನ್ನು ಬೆಂಕಿಯಲ್ಲಿ ಹಾಕಿದನು; ಆದರೆ ಆ ಕಾಗದ ವನ್ನು ಬಹುಭದ್ರವಾಗಿ ಕಾಪಾಡಿದನು. ಅವನನ್ನು ಪಾಪಮಾರ್ಗದಿಂದ ರಕ್ಷಿಸಿದ ದೇವಿಯ ಸ್ಮಾರಕವಾಗಿದ್ದಿತು ಅದು.

ಹೌದು. ಒಬ್ಬ ಮನುಷ್ಯನ ಪಾಪ ದೋಷಗಳಿಂದ ಪರಿಪೂರ್ಣವಾದ ಜೀವನ ವನ್ನು ಶುದ್ಧಿಗೈಯಲು ಎರಡು ನರಜೀವಿಗಳು ತಮ್ಮ ಪ್ರಾಣಗಳನ್ನು ಬಲಿಯರ್ಪಿಸ ಬೇಕಾಗಿ ಬಂದಿತು!

7

ಮೇಲಿನ ಸಂಭವಗಳು ನಡೆದು ಒಂದು ವರ್ಷವು ಕಳೆದಿದೆ. ಕೇಶವ ಮತ್ತು ಗಂಗಕ್ಕ ವಾಸಿಸುತ್ತಿದ್ದ ಗುಡಿಸಿಲಿದ್ದ ಸ್ಥಳದಲ್ಲಿ ಈಗ ಭವ್ಯವಾದ ಒಂದು ಮಂದಿ ರವು ನಿಂತಿದೆ. ಅದರ ಹೆಸರು "ಗಂಗಾನಿವಾಸ"ವೆಂದು.

"ಗಂಗಾ-ನಿವಾಸವು" ಅನಾಥ ವನಿತೆಯರ ರಕ್ಷಾಗೃಹವು. ದಾರಿತಪ್ಪಿದ ಹೆಂಗಸರನ್ನು ಸರಿಯಾದ ಮಾರ್ಗದಲ್ಲಿ ತಂದು ಸಲಹುವುದೇ ಅದರ ಉದ್ದೇಶ. ಹತ್ತಿಪ್ಪತ್ತು ಮಂದಿ ವನಿತೆಯರು "ಗಂಗಾ-ನಿವಾಸ"ದಲ್ಲಿ ವಾಸಿಸಿ ವಿವಿಧ ಕೈಗಾರಿಕೆಗಳಲ್ಲಿ ನಿರತರಾಗಿರುವರು.

"ಗಂಗಾ-ನಿವಾಸ"ದ ಸ್ಥಾಪಕನು ರಾಮಮೋಹನ ಬಾಬುವು. ಅವನ ಮೇಲ್ನೋಟದಲ್ಲಿ ಅದು ಈಗ ನಡೆಯುತ್ತಿರುವುದು. ಬಾಬುವು ತನ್ನ ದುರ್ಗುಣಗಳನ್ನು ಪರಿತ್ಯಜಿಸಿ ಸಾತ್ವಿಕನಾಗಿರುವನು. ಸತೀತ್ವವನ್ನು ಹಣದಿಂದ ಅಳೆಯಲು ಸಾಧ್ಯವಿಲ್ಲವೆಂದೂ, ಆ ಅಮೂಲ್ಯ ರತ್ನಕ್ಕೆ ಧನವು ಬೆಲೆಯಾಗದೆಂದೂ ಈಗ ಅವನು ಅರಿತಿರುವನು.

ರಾಮುವು ಶುಕ್ಲಪಕ್ಷದ ಚಂದ್ರನಂತೆ ಪ್ರವರ್ಧಮಾನನಾಗಿ, ರಾಮಮೋಹನ ಬಾಬುವಿನ ರಕ್ಷಣೆಯಲ್ಲಿ ಬೆಳೆಯುತ್ತಲಿರುವನು.

ಶ್ರೀ ವಿದ್ಯಾರಣ್ಯ ಗ್ರಂಥಮಾಲೆಯ ಹೊಸ ಪುಸ್ತಕಗಳು.

ಬೆಲೆ ೧ ಶ್ರೀ ಕಣ್ವಮಠ ಚರಿತ್ರಾಮೃತ [೧೦ ಆಣೆ

ಇದರಲ್ಲಿ ಸುರಪುರ (ವೀರಘಟ್ಟ ಸಂಸ್ಥಾನ)ದ ಶ್ರೀಕಣ್ವಮಠದ ಸುಬೋಧ ಇತಿಹಾಸವು ಐತಿಹಾಸಿಕ ಆಧಾರಗಳಿಂದಲೂ ವಿಶ್ವಸನೀಯವೂ ಆದ ಸಂಗತಿಗಳನ್ನು ಅನುಲಕ್ಷಿಸಿ ಬರೆಯಲ್ಪಟ್ಟಿದೆ. ಶ್ರೀ ಮಠದ ಇತಿಹಾಸವು ಸಕಲರಿಗೂ ತಿಳಿಯಬೇಕೆಂದು ಸಕಲ ಶ್ರೀಪಾದಂಗಳವರ ಚರಿತ್ರೆಯೂ ಭಕ್ತಿಪರವಾಗಿ ಬರೆಯಲ್ಪಟ್ಟಿದೆ. ಪುಸ್ತಕವು ಸುಂದರಚಿತ್ರಗಳನ್ನೊಳಗೊಂಡಿದೆ.

೨ ಲಂಚದ ಪ್ರಪಂಚ:-ಚಿಕ್ಕಕಥಾಕೋಂಜ ಬೆಲೆ ೩ ಆಣೆ

೩ ಬೆಳಧಡಿ ಬ್ರಹ್ಮಾನಂದ ಮಹಾರಾಜರ ಚರಿತ್ರ(ಸಚಿತ್ರ)ಬೆಲೆ ೮ ಆಣೆ

೪ ಶ್ರೀ ವಿದ್ಯಾವಿಜಯ ಕ್ಯಾಲೆಂಡರ:-ನೂರು ವರ್ಷಗಳ ಸಚಿತ್ರ ಕ್ಯಾಲೆಂಡರು. ಶ್ರೀ ಮಧ್ವಾಚಾರ್ಯ, ಶ್ರೀ ಜಯತೀರ್ಥಾಚಾರ್ಯ, ಶ್ರೀಕೃಷ್ಣ, ಶ್ರೀ ವಿದ್ಯಾವಿಜಯ ಮತ್ತು ಶ್ರೀ ಮಾಧವತೀರ್ಥ ಇವರ ಚಿತ್ರಗಳಿಂದ ಕೂಡಿದೆ ಬೆಲೆ ೧॥ ಆಣೆ

ಇವಲ್ಲದೆ, ಶ್ರೀಕಣ್ವಮಠದ ವಿದ್ಯಾವಿರಾಜ ತೀರ್ಥರು, ಶ್ರೀ ವಿದ್ಯಾವಿಜಯ ತೀರ್ಥರು, ಶ್ರೀಕೃಷ್ಣ, ಶ್ರೀಮದಾನಂದತೀರ್ಥರು, ಶ್ರೀ ಟೀಕಾಚಾರ್ಯರು, ಸುರೇಶ್ವರಾಚಾರ್ಯ, ಮಾಧವತೀರ್ಥರ ಫೋಟೋಗಳೂ ದೊರೆಯುವವು.

ಬೆಲೆ ೧ ಕ್ಕೆ ಅರ್ಧಾಣೆ ಮಾತ್ರ

-೧೨೩]

ವಿಳಾಸ:-ಮ್ಯಾನೇಜರ ವಿದ್ಯಾರಣ್ಯ ಗ್ರಂಥಮಾಲಾ ಆಫೀಸ ಮುಳಗುಂದ (ಗದಗ)

ನವರಾತ್ರಿಯಲ್ಲಿ ಪಾರಾಯಣಕ್ಕೆ ಉಪಯೋಗವಾಗುವ ಪುಸ್ತಕಗಳು

(೧) ವೆಂಕಟೇಶ ಮಾಹಾತ್ಮ್ಯ ೧ ರೂ (೨) ಮಲ್ಲೂರಿ ಮಾಹಾತ್ಮ್ಯ ೮ ಆಣೆ. ೩) ಚಿದಂಬರ ವಿಜಯ ೧॥॥ ರೂ. (೪) ಆನಂದರಾಮಾಯಣ ೧॥ ರೂ. (೫) ರೇಣುಕಾ ಮಾಹಾತ್ಮ್ಯ ೪ ಆಣೆ ವಿಳಾಸ:—ಖಿ ಪ. ಕಾಳೆ, ಆನಂದವನ

ಹಿಂದುಸ್ಥಾನದಲ್ಲಿಯ ವಿದ್ಯಮಾನ ಆಚಾರ್ಯರಿಗೂ ಸಾಧು-ಸಂತಮಹಂತರಿಗೂ ಧರ್ಮಪೀಠಸ್ಥರಿಗೂ ಪ್ರಾರ್ಥನೆ.

ಶ್ರೀಕೇಶವಾನಂದ ಸರಸ್ವತೀಸ್ವಾಮಿಗಳು ಹಿಂದುಸ್ಥಾನದಲ್ಲಿಯ ವಿದ್ಯಮಾನ ಆಚಾರ್ಯರಿಗೂ, ಸಾಧು-ಸಂತಮಹಂತರಿಗೂ, ಧರ್ಮಪೀಠಸ್ಥ ಗುರುಗಳಿಗೂ ನಮ್ರ ಪೂರ್ವಕವಾಗಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಪ್ರಾರ್ಥಿಸುವದೇನೆಂದರೆ:— "ಮಹನೀಯರೇ, ನೀವು * ಶ್ರೀಮದ್ದ್ಯಾನಂದರಂತೆ ಹಿಂದುಧರ್ಮ ಜಾಗೃತಿಯ ಚಳವಳಿಯನ್ನು ಮಾಡಿರಿ. ನಿಮಗೆ ಪರಮೇಶ್ವರನ ಕೃಪೆಯಿಂದ ಧರ್ಮಕಾರ್ಯ ಗಳಿಗಾಗಿ, ಪೂರ್ವದ ಹಾಗು ಈಗಿನ ಸರಕಾರದವರೂ, ಶ್ರೀಮಂತಜನರೂ ವಿಪುಲ ವಾದ ಧನವನ್ನು ಕೊಟ್ಟಿರುವರು. ಆವರು ನಿಮಗೆ ಎಷ್ಟೋ ಗ್ರಾಮಗಳ ಜಹಾ ಗೀರನ್ನು ಹಾಕಿಕೊಟ್ಟಿರುವರು; ಎಷ್ಟೋ ಭೂಮಿಗಳನ್ನು ಇನಾಮಾಗಿ ಕೊಟ್ಟಿರು ವರು; ವಾರ್ಷಿಕನಕ್ತನೇಮಣೂಕ-ವರ್ಷಾಶನ-ವನ್ನು ಹಾಕಿಕೊಟ್ಟಿರುವರು; ನಿಮಗೆ ನಿಮ್ಮ ಶಿಷ್ಯರಿಂದ ಪಾದ್ಯಪೂಜೆ, ಗುರುದಕ್ಷಿಣೆ ಮೊದಲಾದವುಗಳಿಂದ ಲಕ್ಷಾವಧಿ ರೂಪಾಯಿಗಳು ದೊರಕುತ್ತಲಿವೆ. ನೀವು ಇವೆಲ್ಲವುಗಳ ವಿನಿಯೋಗವನ್ನು ದೇಶ ಕಾಲಮಾನ ವರ್ತಮಾನ ಪರಿಸ್ಥಿತಿಗಳಿಗನುಸರಿಸಿ, 'ಹಿಂದುಧರ್ಮ ಜಾಗೃತಿ'ಯ ಸಲುವಾಗಿ ಮಾಡುತ್ತಿವಿರುವಿರಾ? ಮಹಾರಾಜರೇ, ತಾವು ಮಠದಲ್ಲಿ ಕುಳಿತು ಏನು ಮಾಡುತ್ತಿರುವಿರಿ? ನೀವು ನಿಮ್ಮ ಉಪಾಸ್ಯದೇವರ ಮೂರ್ತಿಗಳಿಗೆ ಕಸ್ತೂರಿ ಚಂ- ದನಗಳ ಲೇಪದ ಮೇಲೆ ಲೇಪನನ್ನು ಮಾಡುತ್ತ ಹೋಗುವದರಿಂದ, ಹಿಂದುಧರ್ಮದ ಕಲ್ಯಾಣವಾಗುವದೆಂದು ನೀವು ತಿಳಿದಿರುವಿರಾ? "ನನಗೆ ಘುಟ್ಟಬೇಡ. ನೀನು

---

*ಶ್ರೀಮದ್ದ್ಯಾನಂದರು ವಿಕ್ರಮಸಂವತ್ ೧೮೫೮ರಲ್ಲಿ ಉತ್ತರಹಿಂದುಸ್ಥಾನದಲ್ಲಿ ಜನ್ಮ ತಾಳಿ ವಿ. ಸಂ. ೧೯೪೦ರಲ್ಲಿ ಸಮಾಧಿಸ್ಥರಾದರು. ಇವರು ಹಿಂದುಧರ್ಮಜಾಗೃತಿಯ ಸಲು ವಾಗಿ ದೀರ್ಘೋದ್ಯೋಗ ಮಾಡಿದರು. ಅವರು ಅದರ ಬಗ್ಗೆ ಅಂತಃಕರಣಪೂರ್ವಕ ಚಳವಳಿ ಯನ್ನು ನಡೆಯಿಸಿ, ಹಿಂದುಧರ್ಮಸಂಘಟನ ಪತಿತ ಪರಾವರ್ತನಗಳಂಥ ಮಹತ್ ಕಾರ್ಯ ಗಳನ್ನು ಮಾಡಿ, ಹಿಂದುಧರ್ಮದ ಉದ್ಧಾರಕ್ಕಾಗಿ ಅವ್ಯಾಹತ ಪ್ರಯತ್ನಗಳನ್ನು ಮಾಡಿದರು. "ಶ್ರೀಮದ್ದ್ಯಾನಂದ ಪರಾಕ್ರಮ" ಎಂಬ ಗ್ರಂಥವು ಶ್ರೀ ಕೇಶವಾನಂದ ಸರಸ್ವತಿಸ್ವಾಮಿ ಗಳಿಂದ ಹಿಂದುಸ್ಥಾನಿ ಭಾಷೆಯಲ್ಲಿ ಬಹು ಸುರಸವಾಗಿ ಬರೆಯಲ್ಪಟ್ಟಿದೆ ಈ ಪುಸ್ತಕವು ಅ- ಹಮ್ಮದಾಬಾದದಲ್ಲಿ 'ಉತ್ಕೃಷ್ಟಮುದ್ರಾಲಯದಲ್ಲಿ ಸಂವತ್ ೧೯೪೪ರಲ್ಲಿ ಮುದ್ರಿಸಿ ಪ್ರಕಟಿ ಸಲ್ಪಟ್ಟಿರುವದು.' ಈ ಚರಿತ್ರವನ್ನು ನಮ್ಮ ಹಿಂದುಸ್ಥಾನದ ಸಾಧು-ಸಂತರೂ, ಧರ್ಮಪೀಠ ಸ್ಥರೂ, ಗುರುಗಳೂ-ಆಚಾರ್ಯರೂ ಹಿಂದುಧರ್ಮದ ಉದ್ಧಾರದ ಬಗ್ಗೆ ನಿರ್ಮಲಾಂತಃಕರಣ ವುಳ್ಳ ಹಿಂದುಸಮಾಜದ ಮುಖಂಡರೂ, ಸಾಮಾನ್ಯವಾಗಿ 'ಹಿಂದು'ಗಳೆಂದೆನಿಸಿಕೊಳ್ಳುವ ಜನರೂ ಓದಿ, ಅದರಲ್ಲಿಯ ರಾಮಾನಂದರ ತತ್ವಗಳ ಮನನ ಮಾಡಿ, ಹಿಂದುಧರ್ಮಜಾಗೃತಿಯ ಉದ್ಯೋಗ ವನ್ನು ತನುಮನ ವಾಣಿಗಳಿಂದಲೂ ಅವ್ಯಾಹತವಾಗಿಯೂ ಮಾಡಬೇಕೆಂದು ಶ್ರೀ ಕೇಶವಾನಂದ ಸ್ವಾಮಿಗಳು ಬಹುಕಳಕಳಿಯಿಂದ ಹೇಳುತ್ತಿರುವರು.

ಮುಟ್ಟಿದರೆ, ನನಗೆ ಮೈಲಿಗೆಯಾಗುವದು." ಎಂಬ ಮಂತ್ರಜಪಮಾಡುವದರಿಂದ, ಗ್ಲಾನಿಯನ್ನು ಹೊಂದಿ ನಿರ್ಜೀವವಾಗಿ ಬಿದ್ದಿರುವ ಹಿಂದು ಧರ್ಮವು ಬದುಕಿರುವ ದೆಂದು ನೀವು ನಂಬುವಿರೇನು? ಮಹಾರಾಜರೇ, ನಿಮಗೆ ಹಿಂದುಧರ್ಮದ ಹ್ರಾಸವೂ ಗ್ಲಾನಿಯೂ ನಿಮ್ಮ ಕಣ್ಣಿಗೆ ಕಾಣುವದಿಲ್ಲವೇನು? ಹಿಂದುಗಳ ಸಂಖ್ಯೆಯು ಮೊದಲು ೧೦೦ ಕೋಟಿ ಇದ್ದದ್ದು ಈಗ ೩೦ ಕೋಟಿಗೆ ಬಂದಿರುವದು. ಇಂಥ ಶೋಚನೀಯ ಸ್ಥಿತಿಯು ಪ್ರಾಪ್ತವಾದರೂ, ನಿಮಗೆ ಹಿಂದುಸಮಾಜವೂ ಹಿಂದುಧರ್ಮವೂ ನಷ್ಟ ವಾಗುವನೆಂಬ ಭಯವೂ ಖೇದವೂ ನಿಮ್ಮಂತರಂಗದಲ್ಲಿ ಹುಟ್ಟುವದಿಲ್ಲವೇ? ಯಾವನ ಹೊಟ್ಟೆಯಲ್ಲಿ ತಿಂದ ಆಹಾರವು ನಿಲ್ಲುವದಿಲ್ಲವೋ ಹಾಗು ಯಾವನು ತಿಂದದ್ದನ್ನು ಅರಗಿಸಲಾರನೋ ಅಂಥ ರೋಗಿಯ ಮುಖಚೋನ್ಮುಖ ಸ್ಥಿತಿಯಂತೆ, ಹಿಂದುಧರ್ಮ ಹಿಂದುಸಮಾಜಗಳ ಅವಸ್ಥೆಯಾಗಿರುವದನ್ನು ನೀವು ನಿಮ್ಮ ಕಣ್ಣುಗಳಿಂದ ನೋಡುವದಿಲ್ಲವೋ? ಹಿಂದುಧರ್ಮ ಹಿಂದುಸಮಾಜಗಳ ಹೀನಸ್ಥಿತಿಯ ಬಗ್ಗೆ ನಿಮಗೆ ದುಃಖವೆನಿಸದಿದ್ದರೆ, ಅವುಗಳ ಉನ್ನತಿಯ ಬಗ್ಗೆ ನಿಮ್ಮಲ್ಲಿ ತಳಮಳ(ಚಿಂತೆಯು) ಇಲ್ಲದಿದ್ದರೆ, ಮತ್ತು ಅವುಗಳ ಉದ್ಧಾರದ ಬಗ್ಗೆ ಚಳವಳವನ್ನೂ ಉದ್ಯೋಗವನ್ನೂ ಮನಃಪೂರ್ವಕವಾಗಿ ಮಾಡಲಿಕ್ಕೆ ನಿಮಗೆ ಅಧಿಕಾರವಿಲ್ಲದಿದ್ದರೆ, ಮತ್ತಾವ ಅನ್ಯ ಮನುಷ್ಯನಿಗೆ ಅವುಗಳ ಬಗ್ಗೆ ದುಃಖ, ಚಿಂತೆ ಅಧಿಕಾರಗಳಿರುವವು?

ಮಹಾರಾಜರೇ, ೫೦೦ ವರ್ಷಗಳ ಹಿಂದೆ ಶ್ರೀಮದ್ರಾಮಾನಂದರೆಂಬ ಮಹಾತ್ಮರಿಗೆ ಹಿಂದುಧರ್ಮ-ಸಮಾಜಗಳ ಉದ್ಧಾರದ ಸಂಪೂರ್ಣ ಚಿಂತೆಯು ಇದ್ದುದರಿಂದ, ಅವರು ಹಿಂದುಧರ್ಮಜಾಗೃತಿಯ, ಹಿಂದುಧರ್ಮಸಂಘಟನದ, ಪತಿತ ಪರಾವರ್ತನದ ಯಾವ ಮೊಡ್ಡ ಚಳವಳವನ್ನು ಮಾಡಿದರೋ, ಅಂಥ ಚಳವಳವನ್ನು ಮಾಡಲಿಕ್ಕೆ ನಿಮಗೆ ಅಶಕ್ಯವಾಗಿದೆಯೇನು? ಶ್ರೀರಾಮಾನಂದಮಹಾರಾಜರಂತಹ ತಪಶ್ಚರ್ಯೆ ತಳಮಳಗಳು ನಿಮ್ಮಲ್ಲಿರುವದಿಲ್ಲವೇನು? ಮಹಾರಾಜರೇ, ಶ್ರೀಮದ್ರಾಮಾನಂದರು ಮುಸಲ್ಮಾನ ಧರ್ಮದಲ್ಲಿ ಹೋದ ಅನೇಕ ಹಿಂದುಗಳನ್ನು ತಿರುಗಿ ಹಿಂದುಧರ್ಮದಲ್ಲಿ ತೆಗೆದುಕೊಂಡು, ಅವರನ್ನು ವೈಷ್ಣವ ಧರ್ಮಾನುಯಾಯಿಗಳನ್ನಾಗಿ ಮಾಡಿದರು. "ಮ್ಲೇಚ್ಛಾಸ್ತೇ ವೈಷ್ಣವಾಶ್ಚಾಸನ್ ರಾಮಾನಂದ ಪ್ರಭಾವತಃ" ಅವರು ವೇದವಿರೋಧಿಗಳಾದ ಜೈನರನ್ನು ವೈದಿಕ ಧರ್ಮಾನುಯಾಯಿಗಳನ್ನಾಗಿ ಮಾಡಿದರು. ಹೀಗೆ ಹಿಂದುಧರ್ಮವನ್ನೂ ಹಿಂದುಸಮಾಜವನ್ನೂ ಬದುಕಿಸಿ, ಸಂಕಟಗಳೊಳಗಿಂದ ಮುಕ್ತಮಾಡಿ, ಅವುಗಳನ್ನು ಬಲಿಷ್ಠವನ್ನಾಗಿ ಮಾಡಿದರು. ಅವರಂತೆ ಆ ಕಾರ್ಯಗಳನ್ನು ಮಾಡಲಿಕ್ಕೆ ನಿಮಗೆ ಯಾವ ಪ್ರತಿಬಂಧವಿರುವದು? "ಧರ್ಮರಕ್ಷಣೆ ಮಾಡುವದಕ್ಕಾಗಿಯೇ ನಾವು ಕಷ್ಟಪಡಬೇಕಾಗುವದು." ಎಂದು ತುಕಾರಾಮಮಹಾರಾಜರು ಹಿಂದುಧರ್ಮರಕ್ಷಣಕ್ಕೆ ತಮ್ಮ ತನುಮನವಾಣಿ ಪ್ರಾಣಗಳನ್ನೂ ಸಹ ಅರ್ಪಿಸಿ, ಅದನ್ನೂ ಹಿಂದುಧರ್ಮವನ್ನೂ ಬದುಕಿಸಿದರು. ಅದರಂತೆ ನಿಮಗೆ ಧರ್ಮರಕ್ಷಣಕ್ಕಾಗಿ ಕಷ್ಟಪಡಬೇಕೆಂದೆನಿಸುವದಿಲ್ಲವೋ?

ಮಹಾಶಯರೇ. ದೇಶಕಾಲಪರ್ಯಮಾನಗಳಿಗನುಸರಿಸಿ, ನೀವು ಸಮಾಜದ ಅನುಚಿತ ರೂಢಿಯಲ್ಲಿ ಬದಲು ಮಾಡಲಿಕ್ಕೆ ಬೇಡವೆ? ಅನುಚಿತ ವಿಚಾರಗಳ ವರ್ಚಸ್ಸು ಹಿಂದು ಜನರ ಮನಸ್ಸಿನ ಮೇಲೆ ಕುಳಿತಿರುವದು. ಅದನ್ನು ನೀವು ತಳ್ಳಿ ಹಾಕಿ, ನೀವು ಅವರ ಮನಸ್ಸಿನ ಮೇಲೆ ಸುವಿಚಾರಗಳ ಪರಿಣಾಮವನ್ನುಂಟು ಮಾಡ ಬಾರದೇನು? ನಾಸ್ತಿಕತ್ವ, ಧರ್ಮದಹುಚ್ಚು, ಧರ್ಮಭೋಳೆತನ (ಮೂಢಭಾವನೆ) ಈ ಮೂರು ರೋಗಗಳಿಂದ ಜರ್ಜರವಾದ ಹಿಂದು ಸಮಾಜವು ಈಗ ಮೃತಪ್ರಾಯ ವಾಗಿರುವದು ನಿಮ್ಮ ಕಣ್ಣಿಗೆ ಕಾಣುವದಿಲ್ಲವೊ ಹೇಗೆ? "ಕಣ್ಣುಗಳನ್ನು ತೆರೆಯಿರಿ, ಜಾಗೃತರಾಗಿರಿ. ಇಲ್ಲದಿದ್ದರೆ ನಿಮಗೆ ಮುಂದೆ ಹಾನಿಯುಂಟಾಗುವದು." ಎಂದು ತುಕಾರಾಮಸಾಧುಗಳು ಹೇಳಿದ್ದನ್ನು ಸ್ಮರಣದಲ್ಲಿಡಿರಿ.

ಶ್ರೀಮದ್ರಾಮಾನಂದರು,"ಭಾರತದ ಇಂಥ ದೀನಸ್ಥಿತಿಯಾಗಿರುವದು; ಆದರೆ ನೀವು ಮಾತ್ರ ಸತ್ತುಹೋಗಿರುವದಿಲ್ಲ. ನಿಮ್ಮ ಶರೀರದಲ್ಲಿಯ ನಿಮ್ಮ ಪೂರ್ವಜರ ರಕ್ತವು ಆಟ್ಟಿಸಿ ಬತ್ತಿಹೋಗಿದೆಯೊ ಹೇಗೆ? ಹಿಂದು ಜಾತಿಯಲ್ಲಿ ದಿನದಿನಕ್ಕೆ ದುರ್ಬಲತೆಯು ಬೆಳೆಯುತ್ತ ಹೋಗುತ್ತಲಿದೆ ಹಿಂದುತ್ವವು ಈಗ ಭರತಖಂಡ ದಿಂದ ಹೊರಟು ಹೋಗುತ್ತಲಿದೆ." ಎಂದು ಹೇಳುತ್ತಿದ್ದರು. ರಾಮಾನಂದರ ಹೃದ ಯವು ಹೀಗೆ ಹಗಲಿರಳು ಚಡಪಡಿಸುತ್ತಿತ್ತು. ಅವರ ಹೃದಯದಲ್ಲಿ ಹೀಗೆ ದುಃಖಾ ಗ್ನಿಯು ಹುಟ್ಟಿ ಉರಿಯುತ್ತಿತ್ತು. ಅಂಥ ದುಃಖಚಿಂತೆಗಳು ನಿಮ್ಮ ಹೃದಯದಲ್ಲಿ ಇರುವದಿಲ್ಲವೆ? ಮಹಾರಾಜರೇ, ಆಚಾರ್ಯರೂ, ಸಾಧು-ಸಂತರೂ, ಮಹಂತರೂ, ಗುರುಪೀಠಸ್ಥರೂ ಆದ ನೀನೆಲ್ಲರೂ ಶ್ರೀರಾಮಾನಂದರಂತೆ ಆಗಿರಿ. ಅದರಂತೆ ಪ್ರಚಂಡ ಧರ್ಮಜಾಗೃತಿಯನ್ನು ಮಾಡಿ ಹಿಂದು ಸಮಾಜವನ್ನು ಸುಸಂಘಟಿತವಾಗಿ ಮಾಡಿ ಅದು ಧೀರವೂ ಬಲಿಷ್ಠವೂ ಆಗುವಂತೆ ಮಾಡಿರಿ. ನಾನು ನಿಮಗೆ ಕೈಜೋಡಿಸಿ ಸೆರಗೊಡ್ಡಿ ತಮ್ಮ ಪೀಠಗಳ ಚರಣಗಳಲ್ಲಿ ಮಸ್ತಕವನ್ನಿಟ್ಟು ಬೇಡಿಕೊಳ್ಳುವೆನು.

ಅಸ್ಥಮಾಕ್ಯೂರ್.

ಬಹಳ ಹಳೆಯದಾದ ಕೆಮ್ಮು, ಉಬ್ಬಸ, ಕ್ಷಯದ ಕೆಮ್ಮು, ಮಕ್ಕಳ ನಾಯಿ ಕೆಮ್ಮು ಮುಂತಾದ ಘುಪ್ಪುಸ ರೋಗಗಳಿಗೆ ಜನಗಳು ಈ ಪ್ರಭಾವಶಾಲಿಯಾದ ಔಷಧವನ್ನೇ ಉಪಯೋಗಿಸುತ್ತಾರೆ. ತೆಗೆದುಕೊಂಡ ಸ್ವಲ್ಪ ಹೊತ್ತಿನಲ್ಲಿಯೇ ಕಫವು ನೀರಾಗಿ ಹೊರಬಿದ್ದು, ಎದೆ ಮತ್ತು ಘುಪ್ಪುಸಗಳು ಹಗುರಾಗುತ್ತವೆ. ಕೆಲವು ದಿನಗಳ ವರೆಗೆ ಸೇವಿಸುವವರಿಂದ ಬಹಳ ಹಳೆಯದಾದ ಕೆಮ್ಮು, ದಮ್ಮು, ಉಬ್ಬುಸ ಗಳನ್ನು ಖಾತ್ರಿಯಾಗಿಯೂ ಗುಣ ಮಾಡುತ್ತದೆ. ಬೆಲೆ ಬಾಟ್ಲಿಗೆ ೦-೧೦-೦ ಮಾತ್ರ. ಟ. ಖ. ಬೇರೆ. ತಯಾರಿಸುವವರು —

೧೨-೯] ಡಿ. ಎಸ್ ಕೋಳಿವಾಡ, ಸಾಗರ (ಶಿವಮೊಗ್ಗ)

ಕನ್ನಡ ವಾಙ್ಮಯ ಪ್ರಸಾರಕ ಸಂಘದಿಂದ ಹೊರಡುವ

ಢಂ! ಢಂ!! ಢಂ!!! ರಾಷ್ಟ್ರೀಯ ವಾರಪತ್ರಿಕೆ ಬೆಲೆ ಅರ್ಧಾಣೆ

ಸಂದೇಶ

The Sandesh
BELGAUM

ಸಂಪಾದಕ--ದೇಶಕೂಂಡೆ ಗೋಪಾಳರಾಯರು

ಪ್ರತಿ ಶುಕ್ರವಾರ ಹೊರಬರುವದು

ಸಂಪುಟ ೧ | ಬೆಳಗಾವಿ ಸೋಮವಾರ ತಾ. ೨-೫-೧೯೩೮ | ಸಂಚಿಕೆ ೧

2-5-38

ದೇವರ ಮೇಲೆ ಫೌಜದಾರಿ ಖಟ್ಲೆ

ಷಿರ್ಯಾದಿ ವಿರುದ್ಧ ನಿರ್ಣಯ

ಕಾಂಗ್ರೆಸ್ ಮಂತ್ರಿಗಳ ಕಛೇರಿ ಆಫೀಸಲು

(ಒಳಗೆ ನೋಡಿರಿ)

ವಾರದ ವರದಿ

(ಸಂದೇಶದ ಸವಿಗಾರಸಿಂದ)

ಕಾಂಗ್ರೆಸ ಶಕ

ಶಾಲಿವಾಹನ, ಚಾಲುಕ್ಯವಿಕ್ರಮ ಇವರು ನಮ್ಮ ಪೂರ್ವಜರಿಗೆ ಕಲ್ಯಾಣ ಮಾಡಿದ್ದರಿಂದ ನಮ್ಮ ಪೂರ್ವಜರು ಅವರ ಶಕವನ್ನು ಆಚರಿಸುತ್ತ ಬಂದರು ಈಗ ಕಾಂಗ್ರೇಸದವರು ನಮ್ಮ ಕಲ್ಯಾಣ ಮಾಡುತ್ತಿರುವದರಿಂದ ನಾವು ಕಾಂಗ್ರೆಸ ಶಕವನ್ನೇಕೆಪ್ರಾರಂಭಿಸಬಾರದು? ಸಂದೇಶ ದಂತೂ ಕಾಗ್ರೇಸ ಶಕವನ್ನು ಪ್ರಾರಂಭಿಸಿದೆ. ಉಳಿದ ಅಖಿಲ ಭಾರತ ರಾಷ್ಟ್ರೀಯ ಪತ್ರಗಳು ಇದನ್ನು ಅನುಸರಿಸುವವೋ?

\+ +

ಒಂದೇ ಲಕ್ಷ

ಕರ್ನಾಟಕ ಏಕೀಕರಣವು ಇಂಗ್ಲಂಡ ದಲ್ಲಿ ಸಿಕ್ಕುವದೆಂದೂ ಅದಕ್ಕಾಗಿ ಒಂದು ಲಕ್ಷರೂ ಕೂಡಿಸಬೇಕೆಂದೂ ಮಾಡಿ ದ್ದಾರೆ. ಒಂದು ಕೋಟಿ ಜನಸಂಖ್ಯೆಯು ಒಂದೇ ಲಕ್ಷದಿಂದ ಈ ಪ್ರಶ್ನೆಯ ಕಡೆಗೆ ನೋಡಿದರೆ ಸಾಲದೆ ?

ಜಿನ್ನಾ--ಮ. ಗಾಂಧಿ ಕುಸ್ತಿ ?

ಹಿಂದೂ ಮುಸಲ್ಮಾನರ ಒಕ್ಕಟ್ಟಿಗಾಗಿ ಪ್ರಾರಂಭವಾಗಿದೆ. (ಮುಂಬೈಯಲ್ಲಿ) ಜಿನ್ನಾರವರು ೨೧ ಅಸ್ತ್ರಗಳಿಂದ ಸಿದ್ಧರಾಗಿರುವರು ಮ ಗಾಂಧಿಯವರು ಕೈಜೋಡಿಸಿಕೊಂಡು ಪ್ರಾರ್ಥಿಸುತ್ತಿರುವರ ಏನಾಗುವದೋ ನೋಡಬೇಕು!

೭೨ ಮಗ್ಗಿ

ಜಿನ್ನಾರವರು ಬ್ಯಾರಿಸ್ಟರಿದ್ದರೆ. ಪ್ರಾಥಮಿಕ ಶಾಲೆಯ ಹುಡುಗನ ಹಾಗೆ ಇನ್ನೂ ೭೨ ಮಗ್ಗಿ ಮುನ್ನು ಪಾಠ ಮಾಡುತ್ತಿದ್ದಾರೆ. ಗಾಂಧಿಜಿಯವರ ಕಾಲಕ್ಕೆ ೭ ಏರಡಲೆ ೧೪ ಎನ್ನುತ್ತಿದ್ದರು. ಈಗ ೭ ಮೂರಲೆ ೨೧ ಎನ್ನುತ್ತಿದ್ದಾರೆ. ೭೨ ಮಗ್ಗಿಯು ತಪ್ಪಿಲ್ಲ

\+ +

ಹತ್ಯಾಕಾಂಡದ ತಾಂಡವ ನೃತ್ಯ

ಮೈಸೂರಿನ ದಬ್ಬಾಳಿಕೆಯ ಶಾಸನದಿಂದ ಸುರುವಾಗಿ ಈಗ ಗುಂಡಿನ ಸುರಿಮಳೆಗೆ ಬಂದಿದೆ. ಮಾಡಿಯ ನಾಶಿನಿಸಿದ ಮೈಸೂರಿಗೆ ಇದು ಭೂಷಣವೇ ?

ಪ್ರಾಂತೀಕರಣ

ಕೆಲವರು ಏಕೀಕರಣಕ್ಕೆ ಪ್ರಾಂತೀಕರಣವೆಂದು ಹೆಸರಿಡಲು ಸೂಚಿಸುತ್ತಾರೆ. ಏಕೀಕರಣದಲ್ಲಿ ಅಖಿಲ ಕರ್ನಾಟಕ ಏಕೀಕರಣವು ಆಡಕೆವಾಗಿರುವದರಿಂದ ಬ್ರಿಟಿಶ ಕರ್ನಾಟಕದ ಮಟ್ಟಿಗೆ ಪ್ರಾಂತೀಕರಣವಾದರೂ ಏಕೀಕರಣದ ಆಂದೋಲನವು ಮುಂದೆ ಸಾಗಲಕ್ಕದಿದೆ ಇದು ಇನ್ನೂ ಬಹುಜನರಿಗೆ ಹೊಳೆದಿಲ್ಲ ದುರ್ದೈವ !

\+ +

ಒಪ್ಪಂದವೇ ಒಪ್ಪಂದ

ಬ್ರಿಟನವು ಇಟಲಿಯಕೂಡ ಒಪ್ಪಂದ ಮಾಡಿಕೊಂಡಿತು. ಆಯರ್ಲಂಡಕೂಡ ಒಪ್ಪಂದವನ್ನು ಮಾಡಿಕೊಂಡಿತು. ಜಗಳವು ಬೇಡೆಂದು ಅತ್ತ ಹಿಟ್ಲರನ ಕೂಡ ಮಾತುಕತೆಗಳು ನಡೆದಿವೆ ಇವೆಲ್ಲ ದೊಡ್ಡ ಮನಸಿನಿಂದೋ ? ಕಾರ್ಯಸಾಧಕತನದಿಂದೋ ? ದೊಡ್ಡ ಮನಸಿಂದಾದರೆ ಮ. ಗಾಂಧಿಯವರೊಕೂಡ ಒಪ್ಪಂದವು ಎಂದಾಗುವದು ?

ವಿನೋದದ ಬೆಲೆ ೪ ಳ ಲಕ್ಷ ಪೌಂಡು

ಮುಸೋಲಿನಿಯು ಆಮಂತ್ರಣದ ನೆರೆಗೆ ಹಿಟ್ಲರನು ಬೆರುವ ಮೇ ತಿಂಗಳಿಗೆ ಇಟಲಿಗೆ ಬರತಕ್ಕವನು. ಕೇವಲ ಒಂದು ದಿನ ವಿನೋದಕ್ಕೆ ೪ ಲಕ್ಷ ಪೌ. ಮಂಜೂರಾಗಿದೆಯಂತೆ ! ದೊಡ್ಡವರದಲ್ಲ ದಂಡ!

ಬೆಕ್ಕಿಗೆ ಆಟ ಇಲಿಗೆ ಪ್ರಾಣಸಂಕಟ!

ಆಸ್ಟ್ರಿಯವನ್ನು ನುಂಗಿದ ಹಿಟ್ಲರನು ಈಗ ರುಮೇನಿಯೋವಾಕಿಯಾದ ಕೂಡ ತಿಕ್ಕಾಟವನ್ನು ಹೂಡಿರುತ್ತಾನೆ. ಹಿಟ್ಲರನಿಗೆ ಆಟ ರುಮೇನಿಯೋ ಜನರಿಗೆ ಪ್ರಾಣಸಂಕಟ !

\+ +

ಟೆನಸ್ಸಿ ಬಿಲ್ (ಕಾಯಂಕುಳ)

ಮುಂಬೈ ಅಸೆಂಬ್ಲಿಯಲ್ಲಿ ಈ ಕಾಯದೆಯು ಬರುವದೆಂದು ಜನರು ಹಾಹಾಕಾರ ಪಡಿಸುತ್ತಿದ್ದಾರೆ. ಕೆ. ಪಿ. ಸಿ. ಯವರು ಗಾಬರಿಯಾಗಬೇಡಿರಿವು. ಧೈರ್ಯ ಕೊಡುತ್ತಿದ್ದಾರೆ. ಫಾಸಿಸ್ಟರವರು ಪ್ರಸಿದ್ಧಿಸುವರೇ ?



ಸರ್ವೋದಯ

ಪ್ರಜಾಪ್ರಭುತ್ವ ಸಂಚಿಕೆ

SARVODAYA

JOINT EDITORS:
K. K. Shetty S Kille.

ಪ್ರಜಾರಾಜ್ಯೋದಯ

ಗಳಿಸಿದನೇ ಅಗೋ
ಶಾ. ೧೫ರಂದು ಹಿಂ
ಧ್ವರ ತ್ರಿವರ್ಣ ಪತಾ
ನ್ನು, ಬ್ರಿಟಿಷ್ 'ಯೂ
ನಿಯನ್ ಜೇಕ್'ನ ಸ್ಥಾನ
ದಲ್ಲಿ ರಿಸಲ್ಪಟ್ಟು, ಹಿಂದು
ಸ್ಥಾನವು ಸ್ವತಂತ್ರವಾಯಿ
ಸ್ಥಾನ ಇಂದೀಗ ಜನವರಿ ಶಾ. ೨೬ರಲ್ಲು ಭಾರತದಲ್ಲಿ ಸಾರ್ವಭೌಮ ಪ್ರ
ಜಾರಾಜ್ಯ ಸ್ಥಾಪಿತವಾಗುವುದು. ಗವರ್ನರ್ ಜನರಲ್ ರಾಜಾ
ಗುವರ ಅಧಿಕಾರ ಕೊನೆಗೊಂಡು ಬಾಬುರಾಜೇಂದ್ರ ಪ್ರಸಾ
ದರು ಪ್ರಜಾರಾಜ್ಯಾಧ್ಯಕ್ಷರಾಗಿ ಪ್ರತಿಷ್ಠಿತರಾಗುವವರು. ಕನ್ಯಾ
ಕುಮಾರಿಯಿಂದ ಕಾಶ್ಮೀರ, ಮತ್ತು ಕಾಥಿಯಾವಾಡದಿಂದ
ಕೋಕನಾಡದ ತನಕ, ಸೋವಿಯೆಟ್ ರಸ್ಯವನ್ನು ಬಿಟ್ಟುಳಿದ
ಯುರೋಪು ಖಂಡದಷ್ಟು ವಿಶಾಲ ಪ್ರದೇಶವು, ಇತಿಹಾಸದಲ್ಲಿ
ಇದೇ ಪ್ರಥಮವಾಗಿ, ಒಂದು ಸಂಘಟನೆ, ಒಂದು ಧ್ವಜ, ಮತ್ತು
ಏಕಸೂತ್ರಬದ್ಧ ಆಡಳಿತದೊಳಗೆ ಒಂದಾಗಿ ಪ್ರಜಾ ರಾಜ್ಯೋದಯ
ವಾಗುವುದೆಂದರೆ ಲೋಕದ ಅದ್ವಿತೀಯ ವಿದ್ಯಮಾನವದು.

ಸಮುದ್ರಗುಪ್ತ, ಅಶೋಕ ಚಕ್ರವರ್ತಿಗಳ ಕಾಲದಲ್ಲಾ
ಗಲಿ, ಮೊಗಲ್ ಶಾಹಿಯಲ್ಲಾಗಲಿ, ಭಾರತವು ಈ ರೀತಿ ಏಕ
ಪ್ರಭುತ್ವಕ್ಕೊಳಗಾಗಿದ್ದುದು ಎಂದೂ ಇಲ್ಲ. ಬಹುಮಟ್ಟಿಗೆ
ಅಖಂಡ ಹಿಂದುಸ್ಥಾನವನ್ನೇ ಒಂದೇ ಆಳ್ವಿಕೆಯೊಳಗೆ ತಂದವರೆಂ
ದರೆ ಬ್ರಿಟಿಷರು. ಅದರೆ ಅದು ವಿದೇಶೀಯದಬ್ಬಾಳಿಕೆಯ ಬೆದರಿಕೆ
ಒತ್ತಾಯ ಮತ್ತು ಬಲಾತ್ಕಾರದ ಐಕ್ಯವಾಗಿದ್ದಿತದು.

ಇಂದು ಸ್ವತಂತ್ರ ಹಿಂದು ಸ್ಥಾನದ ಬೇರೆಬೇರೆ ಪ್ರಾಂ
ತ ಮತ್ತು ದೇಶೀಯ ಸಂ
ಸ್ಥಾನಗಳು ಸ್ವೇಚ್ಛೆಮತ್ತು
ಆತ್ಮ ಸಂತೋಷದಿಂದಲೇ
ಒಕ್ಕೂಟವಾಗಿ, ಒಂದೇ
ಪ್ರಜಾ ಪ್ರಭು ತ್ವದೊಳಗೆ
ಸೇರಿ ನಡೆಯಲೊಪ್ಪಿವೆ. ಸುಮಾರು ಸಾವಿರ ವರ್ಷಗಳಿಂದ ಬೇರೆ
ಬೇರೆ ರೀತಿಯ ಪರಾಧೀನತೆ ದೌಡು ದಬ್ಬಾಳಿಕೆಗೊಳಗಾಗಿ ಭಿನ್ನ
ಭಿನ್ನವಾಗಿ ಬಿದ್ದು ಬಳಲುತ್ತಿದ್ದ ಭಾರತೀಯರಿಂದು ಸ್ವತಂತ್ರರಾಗಿ
ಸ್ವರಾಜ್ಯ ಪಡೆದು ಸ್ವಾಭಿಮಾನದಿಂದ ತಲೆಯೆತ್ತಿ ನಿಲ್ಲುವುದೆಂದರೆ,
ಹಿರಿಹಿರಿ ಹಿಗ್ಗಿ ಆವೇಗದಿಂದ ತುಂಬಿ ಉಬ್ಬಿಹೋಗದ ಭಾರತೀ
ಯ ಹೃದಯವಾದರೂ ಯಾವುದಿದೆ?

ಈ ಸುಮೂರ್ಹದಲ್ಲಿ ಬಾರತೀಯರೆಲ್ಲರೂ ಪ್ರಥಮವಾಗಿ
ಭಕ್ತಿಯಿಂದ ಶಿರಭಾಗಿ ನಮಿಸಿ ಸ್ಮರಿಸುವುದೆಂದರೆ ಆ ಪರಮ
ಪೂಜ್ಯನೀಯ ಬಾಪುವನ್ನು. ಆ ಮಹಾತ್ಮರ ಸುಮಾರು ೩೦
ವರ್ಷಗಳ ತಪಸ್ಸಿನ ಸಂಪೂರ್ಣ ಸಿದ್ಧಿಯಾಗಿರುವುದಿಂದು.
ಸೈತಾನಿ ವೈರಿಯ ಹೃದಯವನ್ನಾದರೂ ಮಾರ್ಪಡಿಸಿ, ಪ್ರೇಮ
ಪೂರ್ವಕವಾಗಿ ಜೈಸಿ, ಅಹಿಂಸಾತ್ಮಕ ಕ್ರಾಂತಿ ಸಾಧಿಸುವ ಅವರ
ನೂತನ ಮಹಾಪ್ರಯೋಗದ ಕನಸಿಂದು ನೆನಸಾಗಿ, ಜಗತ್ತಿನ
ಹಾಗೂ ಮಾನವ ಸಮಾಜದ ಉದ್ಧಾರದ ದಿವ್ಯಮಾರ್ಗವೊಂದು
ಬೆಳಗಿಸಲ್ಪಟ್ಟಿರುವುದು. ಇದೀಗ ಮತ್ತೂ ಅಭಿಮಾನದ ವಿಷಯ
ಹಿಂದೀಯರಿಗೆಲ್ಲ.

ಸಂಪಾದಕೀಯ ಬರೆಹಗಳನ್ನು ಬಿಟ್ಟು ಇದರಲ್ಲಿ ಪ್ರಸಿದ್ಧಿಸಲ್ಪಟ್ಟ ಇತರ ಬರೆಹಗಳಲ್ಲಿ ತೋರ್ಪಡಿಸಿದ ಅಭಿಪ್ರಾಯಗಳಿಗೆ ಸಂಪಾದಕರು ಹೊಣೆಗಾರರಲ್ಲ.

ಮೊಗವೀರ

ಸುರತ್ಕಲ್.

ನವಂಬರ 1963.

ಶೈಕ್ಷಣಿಕ, ಸಾಮಾಜಿಕ ಔದ್ಯೋಗಿಕ ಹಾಗೂ ಆರ್ಥಶಾಸ್ತ್ರಕ್ಕೆ ಸಂಬಂಧಿಸಿದ ಮತ್ತು ಸಮಾಜ ಬೆಳವಣಿಗೆಗೆ ಪೋಷಕವಾದ ಬರೆಹಗಳಿಗೆ ಸದಾ ಸುಸ್ವಾಗತವಿದೆ.

ಸಂಪುಟ 25] ಮೊಗವೀರ ವ್ಯವಸ್ಥಾಪಕ ಮಂಡಳಿಯ ತ್ರೈಮಾಸಿಕ ಪತ್ರಿಕೆ [ಸಂಚಿಕೆ 5.

ಮಂಡಳಿಯ ಪಾರುಪತ್ಯಗಾರರು:
ಬಿ. ಶಿವ ಸಾಲಿಯಾನ್,
ನಾರಾಯಣ ಬಿ. ಬಂಗೇರ,
ಎಂ. ಪಿ. ಕರ್ಕೇರ,
ಎಸ್. ಸಿ. ಪಡುಬಿದ್ರಿ,
ಎಲ್ಲಪ್ಪ ಕೆ. ಕೋಟಿಂಕಾರ್.

ಮೊ. ವ್ಯ. ಮಂಡಳಿಯ ಅಧ್ಯಕ್ಷ:
ನಾರಾಯಣ ಬಿ. ಬಂಗೇರ.

ಮಂಡಳಿಯ ಪ್ರ! ಕಾರ್ಯದರ್ಶಿ:
ಯಚ್. ಕೆ. ಪುತ್ರನ್.

ಸಂಪಾದಕ:
ರಮಾನಂದ ಅಮಿನ್,

ಸಹಾಯಕ ಸಂಪಾದಕ:
ಭಾಸ್ಕರ್ ಪಡುಬಿದ್ರಿ.

ಮೆನೇಜರ್:
ಎಂ. ಟಿ. ಪುತ್ರನ್,

ಸಹಾಯಕರು:
ಆರ್. ಜೆ. ಅಮಿನ್,
ನಾಗಪ್ಪ ಪಿ. ಸುವರ್ಣ.

ಪ್ರಕಾಶಕ:
ಟಿ. ಸಿ. ಕರ್ಕೇರ.

ವಜ್ರಮಹೋತ್ಸವ ಪ್ರಕಟಣೆ–9

ಮೊಗವೀರ ವ್ಯವಸ್ಥಾಪಕ ಮಂಡಳಿ

ಮಂಡಳಿಯ ವಜ್ರಮಹೋತ್ಸವವನ್ನು ಬರುವ ಮಾರ್ಚಿ ತಿಂಗಳ 6, 7, 8 ರಲ್ಲು ಅಂದರೆ ಶುಕ್ರವಾರ, ಶನಿವಾರ ಮತ್ತು ಆದಿತ್ಯವಾರ ದಿನಗಳಲ್ಲಿ ಮುಂಬಯಿಯ 'ಕವಾಸ್ಜಿ ಜಹಾಂಗೀರ್ ಸಭಾಸದನ'ದಲ್ಲಿ ನೆರವೇರಿಸಬೇಕೆಂದು ನಿಶ್ಚಯಿಸಲಾಗಿದೆ. ಇಂದಿನ ವರೆಗೆ ಮುಹೂರ್ತ ಸ್ವರೂಪದಲ್ಲಿದ್ದುದು ಈಗ ನಿಶ್ಚಿತರೂಪಧರಿಸಿದಂತಾಯಿತು. ಈ ಮೊದಲಿನ ಪ್ರಕಟಣೆಗಳಲ್ಲಿ ಮಂಡಳಿಯ ಕಾರ್ಯಕಲಾಪಗಳ ಬಗೆಗೂ ಮುಂದೆ ಆಗಲಿರುವ ಯೋಜನೆಗಳ ಬಗೆಗೂ ಸಹಾಯ ಸಹಾನುಭೂತಿಯನ್ನು ಸಲ್ಲಿಸಬೇಕೆಂದು ಕೇಳಿಕೊಂಡಿದ್ದೆವು. ಈಗ ವಜ್ರಮಹೋತ್ಸವದ ದಿನಗಳು ನಿಶ್ಚಯಿಸಲ್ಪಟ್ಟಿರುವುದರಿಂದ, ಮಂಡಳಿಯ ಪ್ರಸ್ತುತ ಕಾರ್ಯಕಲಾಪಗಳ ವೈಶಾಲ್ಯತೆಗೆ ಪ್ರಯತ್ನಿಸುತ್ತಿರುವಂತೆ ಮುಂದಿನ ಧ್ಯೇಯಧೋರಣೆಗಳನ್ನು ವಿಷದೀಕರಿಸಿ ದೃಢೀಕರಿಸಿಕೊಳ್ಳಬೇಕಾಗುವುದು. ವಜ್ರಮಹೋತ್ಸವ ಸಮಾರಂಭಕ್ಕೆ ಪೋಷಕವಾಗಿ ಯೋಗ್ಯವಮಟ್ಟದ ಲೇಖನಗಳನ್ನೊಳಗೊಂಡ 'ಸಂಚಿಕೆ'ಯನ್ನು ಹೊರಡಿಸುವ ಕಾರ್ಯ ತ್ವರೆಯಿಂದ ಸಾಗುತ್ತಲಿದೆ. ಅನುಕೂಲವಂತ ಸದಸ್ಯರು ಹಾಗೂ ಹಿತಚಿಂತಕರು ಸಾಧ್ಯವಿದ್ದಷ್ಟು ಜಾಹೀರಾತುಗಳನ್ನು ಒದಗಿಸಿಕೊಟ್ಟರೆ, ಮಂಡಳಿಗೆ ಆರ್ಥಿಕ ದೃಷ್ಟಿಯಿಂದ ಸಹಾಯ ಮಾಡಿದಂತಾಗುವುದಲ್ಲದೆ, ವಜ್ರಮಹೋತ್ಸವ ಸಂಚಿಕೆಗೆ ಹೆಚ್ಚಿಗೆ ಮಹತ್ವವೊದಗಿದಂತಾಗುವುದು.

ಇಂದಿನ ವರೆಗೆ ಸದಸ್ಯರಿಂದ ಹಾಗೂ ಹಿತಚಿಂತಕರಿಂದ ಸಹಾಯವನ್ನು ಕೇಳುತ್ತಾ ಬಂದಿದ್ದೆವು. ಈಗ ವಜ್ರಮಹೋತ್ಸವವನ್ನು ಮಂಡಳಿಯ ಘನತೆಗೆ ತಕ್ಕಂತೆ ಯೋಗ್ಯ ರೀತಿಯಿಂದ ನೆರವೇರಿಸುವ ಜವಾಬ್ದಾರಿಯು ಬ್ರಹದಾಕಾರವಾಗಿ ಎದುರು ನಿಂತಿದೆ. ಈ ವಿಷಯವನ್ನು ಪ್ರತಿಯೊಬ್ಬರೂ ಮನಗಂಡು, ಮಂಡಳಿಯ ಕಾರ್ಯಕರ್ತರೇ ತಮ್ಮನ್ನು ಸ್ವತಃ ಬಂದು ಕಾಣಬೇಕೆಂದು ಆಶಿಸದೆ ತಮ್ಮಿಂದ ಸಾಧ್ಯವಿದ್ದ ಸಹಾಯವನ್ನು ಒದಗಿಸಿಕೊಡಲು ಮುಂದೆ ಬರಬೇಕೆಂದು ಅತ್ಯಂತ ವಿಶ್ವಾಸದಿಂದ ವಿನಂತಿಸುವೆವು.

ವ್ಯವಸ್ಥಾಪಕ ಸಮಿತಿಯ ಪರವಾಗಿ
ಯಚ್. ಕೆ. ಪುತ್ರನ್,
ಗೌ॥ ಪ್ರ॥ ಕಾರ್ಯದರ್ಶಿ.

8. ನಾನಾಭಾಯಿ ಲೇನ್,
ಕೋಟೆ, ಮುಂಬಯಿ.

Regd. No. B. 2304

1931

Kumta No 31

ಕರ್ನಾಟಕ ಧುರೀಣ

THE KARNATAK LEADER.

೧೯೧೯ ರಲ್ಲಿ ಪ್ರಾರಂಭಿಸಲ್ಪಟ್ಟಿತು.

ಪ್ರತಿ ಮಂಗಳವಾರವೂ ಪ್ರಕಟವಾಗುವ ಉಜ್ವಲ ರಾಷ್ಟ್ರಪಕ್ಷದ ವಾರ ಪತ್ರಿಕೆ.

ಸಂಪಾದಕ:-ಗಣೇಶ ರಾವು ಯಾಜಿ. (*Editor*:-G. R. YAJI.)

ವಾರ್ಷಿಕ ವರ್ಗಣಿ ಬ. ಖ.ಸೇರಿ ೩-೦-೦.

ನಿಸರ್ಗದಿರಾಮೆ ತಲ್ಕುಲಸಮಾರೋಪ ಸುಕೃತಿ ॥ ಕೃತಿಮಾಲಾಕಾರಿ ಕಲ್ಕುಲಮಪಿ ಕ್ಷುತಾಪಿ ನಿರ್ಧಿ ॥
ಇದಂ ಕೋ ಜಾನೀತೆ ಯದಯಮಿಹ ಕೋಣಾನ್ತರಗತೋ ॥ ಜಗಜ್ಜಾಲೆ ಕರ್ತಾ ಕ್ಷುಮಭರಸೌಂದ್ಯಭರಿತಮ್ ॥

ಪತ್ರಿಕೆಯ ವಿಳಾಸ ಮತ್ತು ಕಛೇರಿ ೧೮ ಆಣೆ ಪಾತ್ರ.

ಪತ್ರಿಕೆಯ ವಿಳಾಸ Vol 13 } ಕುಮಟಾ—ಮಂಗಳವಾರ, ತಾರೀಕು ೭ ನವಂಬರ ೧೯೩೧ನೇ ಇಸವಿ. { ಸಂಚಿಕೆ ೦೭ No. 17

"ಧೃವಿಕ್ಸ್"
ದ್ರಾಕ್ಷಾಸವ.
24-12]

ಈ ದ್ರಾಕ್ಷಾಸವವು ಪ್ರಸಿದ್ಧ ಆಯುರ್ವೇದಿಕ ಪದ್ಧತಿಯಿಂದ ಸಶಾಸ್ತ್ರವಾಗಿ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ಪ್ರಥಮಾವಸ್ಥೆಯಲ್ಲಿರುವ ಕ್ಷಯವೂ, ಪಮ್ಮು, ಕೆಮ್ಮು ಇತ್ಯಾದಿ ಎದೆಯ ವಿಕಾರಗಳೂ ಶೈತ್ಯ, ನೆಗಡಿ, ಅರುಚಿ, ಅಪಚನ, ಮಲಬದ್ಧತೆ, ಹುಳತೇಗು ಬರೋಣ, ಅವ್ಲುಪಿತ್ತ, ವಾಂತಿ, ಕಂಠರೋಗ ಇತ್ಯಾದಿ ವಿಕಾರಗಳೆಲ್ಲಾ ಸಂಪೂರ್ಣವಾಗಿ ನಾಶ ಹೊಂದುವವು. ಸಣ್ಣ ಹುಡುಗರ ನಾಯಿಕೆಮ್ಮಿನ ಮೇಲೆ ಇದರ ಉತ್ತಮ ಉಪಯೋಗವಾಗುತ್ತದೆ. ಇದು ಸೇವಿಸಲಿಕ್ಕಾದರೂ ಮಧುರವಾಗಿದ್ದು ಇದರ ನಿಯಮಿತ ಸೇವನೆಯಿಂದ ಮಲ ಶುದ್ಧಿಯಾಗಿ ಜಠ್ಠಾಗ್ನಿ ಹಸಿವೆಯಾಗುವದು. ಪಚನಶಕ್ತಿಯು ಬೆಳೆದು ಬಾಯಿಗೆ ರುಚಿಯುಂಟಾಗುವುದು. ರಾತ್ರಿ ಮಲಗುವ ಸಮಯದಲ್ಲಿ ಈ "ಧೃವಿಕ್ಸ್ ದ್ರಾಕ್ಷಾಸವ" ವನ್ನು ಉಪಯೋಗಿಸಿದರೆ ನಿದ್ದೆ ಚನ್ನಾಗಿ ಹತ್ತುವುದಲ್ಲದೆ ಬೆಳಿಗ್ಗೆ ಎದ್ದಮೇಲೆ ಕೆಲಸವಾಡುವ ಉತ್ಸಾಹವೂ, ಚುರುಕುತನವೂ ಪ್ರಾಪ್ತವಾದದ್ದು ಕಂಡುಬರುವದು.

೧॥ ಪೌಂಡಿನ ಕ್ರಯ ೧-೧೨-೦, ೧ ಪೌಂಡಿನ ಕ್ರಯ ೧-೪-೦, ಅರ್ಧ ಪೌಂಡಿನ ಕ್ರಯ ೦-೧೨-೦. ವ್ಹಿ. ಪಿ. ಖರ್ಚು ಪ್ರತ್ಯೇಕ.

ವಿಳಾಸ:— The Zenith Chemical Works,
1-11 B.] Arab Building, BOMBAY, No. 2.

ಎಸ್. ಎಲ್. ಧಾಕಪ್ಪ ಎಂಡ್ ಬ್ರದರ ಕೆಮಿಸ್ಟ್ಸ ಎಂಡ್ ಡ್ರಗಿಸ್ಟ್ಸ ಸಿಸಿರ.

ಪ್ರೋತ್ಸಾಹಿಸಿರಿ. ಸ್ವದೇಶೀ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ!

ಅಖಿಲ ಕ. ಸ್ವದೇಶಿ ಸಭಾ ಧಾರವಾಡ ಇವರಿಂದ ಸರ್ಟಿಫಿಕೇಟು ಪಡೆದ

ಕರ್ನಾಟಕ ಸೋಪ್ ವರ್ಕ್ಸ, ಉಡುಪಿ.

ಎಂಬ ಶುದ್ಧ ಸ್ವದೇಶೀ ಸಂಸ್ಥೆಯವರಿಂದ ತಯಾರಿಸಲ್ಪಟ್ಟ ಸಾಬೂನುಗಳು.

"ಶಕ್ತಿ ಬಾರ್ಸ್" "ಶಕ್ತಿ ಟೇಬ್ಲೆಟ್ಸ್" "ಕರ್ನಾಟಕ ಬಾರ್ ಸೋಪು" "ಡಂಬೆಲ್ಸ್ ಬಾರ್ ಸೋಪು" "ಸ್ವಾನ್ ಬ್ರೇಂಡ್ ವೇಲ್ ಸೋಪು" "ಲಕ್ಷ್ಮೀ ವಿಲಾಸ ಬ್ರೌನ್ ವಿಂಡ್ಸರ ಸೋಪು" "ಟರ್ಕಿಶ್ ಬಾತ್" "ಕರ್ನಾಟಕ ಕೃಷ್ಣ ಬೊರೆಕ್ಸ್ ಸೋಪು" "ಕರ್ನಾಟಕ ಬೊರೆಕ್ಸ್ ಟೇಬ್ಲೆಟ್ಸ್" "ಕರ್ನಾಟಕ ವೊಶ್ ಸೋಪು" ಇತ್ಯಾದಿ.

ಈ ಸಾಬುನುಗಳಲ್ಲಿ ಪ್ಯಾಜಿಗಳ ಕೊಬ್ಬು ಮೊದಲಾದ
24-12] ಯಾವ ಹಾನಿಕರ ಪದಾರ್ಥಗಳೂ ಮಿಶ್ರವಾಗಿಲ್ಲ.

ಒಮ್ಮೆ ತರಿಸಿ ವಿದೇಶೀಯ ಸೋಪುಗಳೊಡನೆ ಹೋಲಿಸಿ ನೋಡಿ.

ಬಹುಮಾನ!! ಬಹುಮಾನ!! ಬಹುಮಾನ!!!

ಪಮ್ಮು ಕರ್ನಾಟಕ ಕೃಷ್ಣಾ ಬೊರೆಕ್ಸ್ ಸೋಪಿಗೆ ಸುತ್ತಿದ ೧೨ ರೆಪರುಗಳನ್ನು ಕೆಳಗಿನ ವಿಳಾಸದವರಿಗೆ ತಂದುಕೊಟ್ಟರೆ ಪಮ್ಮು ಸುಪ್ರಸಿದ್ಧ ಶಕ್ತಿ ಟೇಬ್ಲೆಟ್ಸ್ ಎರಡಪ್ಪು ಇನಾಮಾಗಿ ಕೊಡಲಾಗುವದು.

ಹೆಚ್ಚಿನ ಮಾಹಿತಿ ಮತ್ತು ಕಿವ್ಮತ್ತು ಪಟ್ಟಿಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

KARNATAKA SOAP WORKS, UDIPI(South Kanara)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಹೆಡ್ ಆಫೀಸು—ಉಡುಪಿ.

ಬ್ರಾಂಚ ಆಫೀಸುಗಳು—ಬ್ರಹ್ಮಾವರ, ಕುಮಟಾ ಮತ್ತು ಕಾರವಾರ.

ನಿರಖುಠೇವಣಾತಿಗಳಮತ್ತು ಬಡ್ಡಿದರ

3	ತಿಂಗಳಿಂದ	6 ತಿಂಗಳ ವರೆಗೆ	೫-೮-೦
6	,,	9 ,,	6-0-0
9	,,	12 ,,	6-8-0
12	,,	18 ,,	6-12-0
18	ಂಗಳ ಮೇಲೆ		7-0-0

ಮೇಲೆ ಕಾಣಿಸಿದ ಬಡ್ಡಿಯಿಂದ ನಿರಖು ಠೇವಣಾತಿಗಳು ಅಂಗೀಕರಿಸಲ್ಪಡುವವೆ ಇತರ ವಿಷಯಗಳ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಿರಿ

Kumta, 1-9-31 | A. S. Kini. Agent, The Canara Industrial & Banking Syndicate, Ltd, KUMTA.

ಕರ್ಣಿಕ್

ಎಗ್ಯುಮಿಕ್ಶ್ಚರ್.

ಮಲೇರಿಯಾ, ಇನ್‌ಫ್ಲುಯೆಂಜಾ, ನಡುಕಜ್ವರಗಳ ಮೇಲೆ ಇದನ್ನು ಉಪಯೋಗಿಸಿರಿ. ಇದರಿಂದ ಮಲಶುದ್ಧಿಯಾಗಿ ಬೆವರು ಬಂದು, ಜ್ವರವು ಬಿಡುತ್ತದೆ. ಬೆಲೆ ಬಾಟ್ಲೆ ಒಂದಕ್ಕೆ ೧೪ ಆಣೆ. ಟಪಾಲು ಖರ್ಚು ಬೇರೆ.

ಕರ್ಣಿಕ ಬ್ರದರ್ಸ,
56, ಗಿರಗಾಂವ, ಮುಂಬಯಿ.

ಶಿರ್ಸಿಯಲ್ಲಿ ಏಜಂಟರು:— [25-11
ಎಸ್. ಎಲ್. ಧಾಕಪ್ಪ ಎಂಡ್ ಬ್ರದರ್ಸ್.

ರೀತಿ ಕಸರು ಆಗುವುದು ಸ್ವಾಭಾವಿಕವೇ ಸರಿ. ಈ ರಸ್ತೆಗೆ ಒಳ್ಳೇ ತರದ ಮಣ್ಣನ್ನೂ ಹಾಕುವಂತೆ ತೋರಲಿಲ್ಲ. ರಸ್ತೆಯ ಎಡಬಲದ ಗುಟಾರಿನಿಂದಲೇ ಕೆಟ್ಟಮಣ್ಣು ತೆಗೆದು ಅದನ್ನು ಹರವಿದುದು ಕಂಡುಬರುತ್ತಿದೆ. ಆದರಿಂದ ತುಸು ಮಳೆ ಬಿತ್ತೆಂದರೆ ವಾಹನಗಳು ಓಡ್ಯಾಡುವುದೂ ಹಾಗಿರಲಿ ನಡೆದಾಡುವುದೂ ಬಹು ಕಷ್ಟವಾಗುತ್ತದೆ. ವಾಹನಗಳು ಹುಗಿದುಬೀಳುತ್ತಿವೆ. ಕೆಲವು ದಿನಗಳ ಹಿಂದೆ ಒಂದು ಮೋಟರು ಲಾರಿಯು ಈ ದಾರಿಯಿಂದ ಹೋಗುತ್ತಿರುವಾಗ ೨-೩ ಕಡೆಗೆ ಜಾರಿ ಗಟರಿನಲ್ಲಿ ಬಿದ್ದುದು ನಮಗೆ ತಿಳಿದುಬಂದಿದೆ. ಇಂಜಿನಿಯರ ಖಾತೆಯವರು ಈ ರಸ್ತೆಯನ್ನು ಹೀಗೆ ದುರ್ಲಕ್ಷಿಸಿರುವುದು ತೋಚಿನ್ನೀಯವು. ಸರ್ಕಿಯು ಅಡಿಕೆ ವ್ಯಾಪಾರದ ಕೇಂದ್ರವಾಗಿದ್ದು ಸ್ವಾದಿ, ಭರತನಳ್ಳಿ, ಯಲ್ಲಾಪುರ ಮೊದಲಾದ ಕಡೆಗಳಿಂದ ಹಂಗಾಮಿನಲ್ಲಿ ನೂರಾರು ಗಾಡಿಗಳು ತಿರುಗಾಡುತ್ತಿರುವವು. ಇಂತಹ ರಸ್ತೆಯಲ್ಲಿ ಗಾಡಿಗಳನ್ನು ನಡಿಸುವುದು ಕಷ್ಟ ಸಾಧ್ಯವೇ ಸರಿ. ಮೊದಲೇ ಮಿಗು ಇಳಕಲು, ಉಳ್ಳ ಇಕ್ಕಟ್ಟಾದ ರಸ್ತೆ. ಮೇಲೆ ಹೇಳಿದ್ದಾಗೆ ವಿಪರೀತ ಕಸರು ಬಿಸಿಲು ಬಿದ್ದಾಗ ವಿಪರೀತ ಧೂಳು. ಇಂತಹ ರಸ್ತೆಯಲ್ಲಿ ವ್ಯವಹಾರ ನಡಿಸಬೇಕಾದ ಜನರ ಹಾಗೂ ವಾಹನಗಳ ಕಷ್ಟವನ್ನು ಪ್ರತ್ಯಕ್ಷ ನೋಡಿಯೇ ಅನುಭವಿಸಬೇಕು. ಸಿರ್ಸಿ ಸಿದ್ದಾಪುರ ರಸ್ತೆಯನ್ನು ಒಳ್ಳೆಯ ಸ್ಥಿತಿಗೆ ತಂದಂತೆ ಈ ರಸ್ತೆಯನ್ನೂ ತರುವುದಕ್ಕೆ ಇಂಜಿನಿಯರ ಖಾತೆಯವರು ಲಕ್ಷ್ಯವೂರೈಸುವರೇ?

ಪುಣ್ಯಕುಮಿಣ್ಯಕು!!

ದಿ ಪೀಪಲ್ಸ ಓನ ಪೈಸಾ ಪಿಡೆಂಟ್ ಮತ್ತು ಜನರಲ್ ಇನ್ಯೂರನ್ಸ ಎಂಬ ವಿಮಾಕಂಪನಿಯು ಈ ಚಿಗೆ ಕೆಲವು ಜಹರ್ಗಳಿಂದ ಮೆರೆಯಿತು. ಜನರನ್ನು ತನ್ನ ಬೇರೆ ಬೇರೆ ಆಶ್ವಾಸನೆಗಳಿಂದ ಮರುಳು ಮಾಡಿತು. ಶಾಖೋಪಶಾಖೆಗಳನ್ನು ಹಬ್ಬಿಸಿತು. ಜನರಿಂದ ಲಕ್ಷಾವಧಿ ರೂ. ಗಳನ್ನು ನೆಗಳಿಂಡಿತು. ಕೊನೆಗೆ ಅದರ ನಿಜರೂಪವು ಬೈಲಿಗೆ ಬಂತು. ಅದರ ಚಾಲಕರು ಪಂಚರ ಕೂಟದವರೆಂದು ಗೊತ್ತಾಯಿತು. ಅವರ ಮೇಲೆ ಖಟ್ಲೆಯಾಯಿತು. ವಿಚಾರಣೆಗಾಗಿ ಶ್ರೀ. ಗುಂಡಿಲ ನಾರಾಯಣ ರಾಯರು ಜಜ್ಜರಾಗಿ ನೇಮಿಸಲ್ಪಟ್ಟರು.

* * *

ವಿಚಾರಣೆಯಲ್ಲಿ ೨೩ಕ್ಕೂ ಸಾಕ್ಷಿಗಳು ತಕ್ಕೊಳ್ಳಲ್ಪಟ್ಟವು. ಜಜ್ಜರು ೧೫ಳ ಪುಟಿಗಳ ದೀರ್ಘವಾದ ತೀರ್ಪನ್ನು ಬರೆದು ಆರೋಪಿಕರನ್ನು ದಂಡನೆಗೆ ಗುರಿಮಾಡಿದರು. ಆರೋಪಿಗಳಿಗೆ ೩ ವರ್ಷಗಳ ವರೆಗೆ ಶಿಕ್ಷೆಯೂ ಮೂರು ಸಾವಿರ ರೂ. ಗಳ ವರೆಗೆ ದಂಡವೂ ವಿಧಿಸಲ್ಪಟ್ಟಿತು. ಆರೋಪಿಗಳಲ್ಲಾ ವೇಕರು ಸುಶಿಕ್ಷಿತರಾದ ನಲ್ವರೂ ಕಿರಿವಯಸ್ಕರೂ ಇದ್ದಾರೆ ಜಜ್ಜರು ಆರೋಪಿತರ ಅಪರಾಧವನ್ನು ಕಠಿಣವಾಗಿ ಟೀಕಿಸಿ ಇಂತಹ ಕಂಪನಿಗಳ ಪಿಡುಗನ್ನು ಕಾಯಿದೆಯಿಂದ ಪ್ರತಿಬಂಧಿಸಬೇಕೆಂದು ಅಭಿಪ್ರಾಯ ಕೊಟ್ಟಿದ್ದಾರೆ. ಈ ತೀರ್ಮಾನದಿಂದ ಜನರು ಜಾಗೃತರಾಗಿ ಇಂತಹ ಪಂಚರ ಕೂಟಗಳಿಗೆ ಮೋಸ ಹೋಗದಂತೆ ಎಚ್ಚರಿಕೆಯಿಂದಿರಬೇಕು!

* * *

ಇಂಗ್ಲಂಡದಲ್ಲಿ ಶ್ರೀಮತಿ ಸರೋಜಿನಿ ದೇವಿಯವರು ಮಾಡಿದ ಒಂದು ಭಾಷಣದಲ್ಲಿ ಅಂದ ಮಾತು:— "ಹಿಂದುಸ್ಥಾನವು ನಿರ್ವೀರ್ಯವಾಗುವುದಕ್ಕೆ ಬ್ರಿಟಿಷರೇ ಕಾರಣ. ಸೈನ್ಯ ಮತ್ತು ಆರ್ಥಿಕ ವಿಷಯಗಳಲ್ಲಿ ಸ್ವಾಯತ್ತಕ್ರಮವಿಲ್ಲದಿದ್ದರೆ, ಯಾವ ರಾಷ್ಟ್ರವೂ ತಲೆಯೆತ್ತಲಾರದು. ಹಿಂದುಸ್ಥಾನದ ಮುಖಂಡರ ಹಾಗೂ ಬ್ರಿಟಿಷರ ನಂಬಿಕೆ ಇವೇ ಇಂಗ್ಲಂಡವು ಹಿಂದುಸ್ಥಾನವನ್ನಾಳುವದಕ್ಕೆ ಕಾರಣ. ಇಂಗ್ಲಂಡ ಹಿಂದುಸ್ಥಾನಗಳ ಸಂಬಂಧದಿಂದ ಹಿಂದುಸ್ಥಾನದ ನೈತಿಕ ಅಧಃಪಾತವೂ ಇಂಗ್ಲಂಡದ ಕೀಳುತನವೂ ವ್ಯಕ್ತವಾಗುತ್ತದೆ. ಇನ್ನು ಮುಂದೆ ಹಿಂದುಸ್ಥಾನವು ಇಂಗ್ಲಂಡಕ್ಕೆ ತಲೆಬಗ್ಗಿಸುವಂತಿಲ್ಲ."

* * *

'ಹಿಂದೀಯರು ಅನುಸರಿಸಿದ ಶಾಂತ ಮಾರ್ಗವು ಹೇಡಿಗಳ ಮಾರ್ಗವಲ್ಲ. ಹಿಂದೀಯರು ಹೇಡಿಗಳಲ್ಲ, ಅವರು ತಮ್ಮ ರಕ್ತವನ್ನು ಚಲ್ಲಲು ಸಿದ್ಧರಿದ್ದಾರೆ. ತಮ್ಮ ಹೃದಯದಲ್ಲಿ ಉರಿಯುತ್ತಿರುವ ಸ್ವಾತಂತ್ರ್ಯದ ಜ್ಯೋತಿಯನ್ನು ತಮ್ಮ ರಕ್ತದಿಂದ ಉರಿಸಲು ಅವರು ಸಿದ್ಧರಾಗಿರುವರು.' ಎಂದು ಶ್ರೀಮತಿಯವರು ನುಡಿದಿದ್ದಾರೆ. "ಹಿಂದುಸ್ಥಾನವು ಖಾಸಿಕ ಶಕ್ತಿಯ ಬೆದೆಯೊಳಗಿರಕೂಡದು ಹಿಂದುಸ್ಥಾನದಲ್ಲಿ ರಕ್ತಕ್ರಾಂತವಾಗಬಾರದೆಂದು ಮಹಾತ್ಮರು ಇಂಗ್ಲಂಡಕ್ಕೆ ಮತ್ತೊಂದು ಸಂಧಿಯನ್ನು ಕೊಟ್ಟಿದ್ದಾರೆ." ಎಂದೂ ದೇವಿಯವರು ಎಚ್ಚರಿಕೆ ಹೇಳಿದ್ದಾರೆ.

* * *

ಬಂಗಾಲ ಪ್ರಾಂತದ ಹಿಜಲಿ ಎಂಬ ಜೈಲಿನಲ್ಲಿದ್ದ ರಾಜಕೀಯ ಕೈದಿಗಳ ಮೇಲೆ ಪೋಲಿಸರು ಗುಂಡು ಹಾರಿಸಿ ಅನೇಕರನ್ನು ಗಾಯ ಪಡಿಸಿ ಕೆಲವರನ್ನು ಕೊಂದದ್ದು, ಸರಕಾರವೂ ಅದನ್ನು ಸಮರ್ಥಿಸಿಕೊಂಡಿಗಳು ಆದರಿಂದ ಬಂಗಾಲದಲ್ಲಿ ಕೋಲಾಹಲವುಂಟಾಯಿತು. ಕವಿ ರವೀಂದ್ರರಂತಹರೂ ಕ್ಷುಬ್ಧರಾದರು. ಕೊನೆಗೆ ಸರಕಾರದವರು ಒಂದು ವಿಚಾರಣಾ ಕಮಿಟಿಯನ್ನು ನೇಮಿಸಿದರು. ಆ ಕಮಿಟಿಯು ಪೋಲೀಸರ ಕ್ರೂರಕೃತ್ಯವನ್ನು ಪ್ರಕಟಿಸಿತಿದೆ. 'ಪೋಲೀಸರು ವಿಪ್ಲವಾಗಿ ಗುಂಡುಹಾರಿಸಿದರು. ಪೋಲೀಸರ ಅಂಬೋಣವು ಸುಳ್ಳು ಎಂದು ಮುಂತಾಗಿ ಕಮಿಟಿಯು ಪೋಲೀಸರ ಮೇಲೆ ಉಗ್ರ ಆರೋಪಗಳನ್ನು ಹೊರಿಸಿರುವುದು. ಕೈದಿಗಳ ಮೇಲೆ 'ಇಂತಹ ಅತ್ಯಾಚಾರ ನಡಿಸಿದ ಪೋಲೀಸರನ್ನು ಸರಕಾರವು ಯಾವ ರೀತಿಯಿಂದ ದಂಡಿಸುವುದೋ ನೋಡಬೇಕು!

* * *

ನಿಂಧವನ್ನು ಸ್ವತಂತ್ರ ಪ್ರಾಂತವಾಗಿ ಮಾಡಬೇಕೆಂದು ಮುಸಲ್ಮಾನರ ಆಗ್ರಹ. ಈ ಕುರಿತು ಒಂದು ಕಮಿಟಿ ನೇಮಿಸಲ್ಪಟ್ಟಿತ್ತು. ಆ ಕಮಿಟಿಯು 'ನಿಂಧವನ್ನು ಬೇರೆ ಮಾಡಿದರೆ ಪ್ರತಿವರ್ಷ ೧೧೦ ಲಕ್ಷ ರೂ. ವರೆಗೆ ತೋಟೆ ಬರುವುದು. ೨೬ ಕೋಟಿ ರೂಪಾಯಿಗಳ ಸಾಲದ ಹೊರೆ ನಿಂಧದ ಮೇಲೆ ಬರುವುದು. ಸಕ್ಕರೆಯ ಆಕ್ಟಿನ ಬಗ್ಗೆ ೨೩ ಕೋಟಿ ರೂ. ವೆಚ್ಚ ಮಾಡಿದರೂ ಇನ್ನು ೩೦ ವರ್ಷದ ಮೇಲಾದರೂ ೨೪ ಲಕ್ಷ ರೂ. ನಿಕ್ಕಿ ಲಾಭವುಳಿಯುವುದೇ ಹೇಗೆಂಬ ಸಂದೇಹವಿದೆ. ನಿಂಧದ ವೆಚ್ಚಕ್ಕಾಗಿ ಈಗ ಲ್ಯಾಪಿಹರ ೧ ಕೋಟಿ ರೂ. ಮುಂಬೈ ಇಲಾಖೆಯ ತಲೆಯ ಮೇಲೆ ಬೀಳುತ್ತಿದೆ.' ಎಂಬುವು ಅಭಿಪ್ರಾಯ ಪಟ್ಟಿದೆ. ಮುಸಲ್ಮಾನರು ನಿಂಧದ ಈ ಅನಪೇಕ್ಷಿತವನ್ನು ಹೇಗೆ ಪರಿಹರಿಸುವರೋ!

* * *

ಇಂಗ್ಲಂಡದಲ್ಲಿ ಮಿ॥ ಹೆಳಿಡಾಕ್ಸ್‌ರವರು ಹೊಸ ರಾಷ್ಟ್ರೀಯ ಮಂತ್ರಿ ಮಂಡಲವನ್ನು ರಚಿಸಿದರು. ಹಳೇ ಮಂತ್ರಿ ಮಂಡಲದಲ್ಲಿ ೧೦ ಜನ ಮಂತ್ರಿಗಳಿದ್ದರು. ಈಗ ಇಪ್ಪತ್ತು! ಮೊದಲು ಮಿ॥ ಸ್ಕೋಡಸ್ಸರು ಭಾಂಡಾರ ಮಂತ್ರಿಗಳಾಗಿದ್ದರು. ಈಗ ಆ ಸ್ಥಾನಕ್ಕೆ ಮಿ॥ ವೆಲಿಲ್‌ಚೆಂಬರಲೇನರು. ಲಾರ್ಡ ರೀಡಿಂಗರ ಬದಲು ಸರ್ ಸ್ಯಾಮ್ಯುಯೆಲ್ಸರು ಪರರಾಷ್ಟ್ರಮಂತ್ರಿಗಳು ಸರ್ ಸ್ಯಾಮ್ಯುಯೆಲ್ ಹೋರೇರ ಭಾರತ ಮಂತ್ರಿಗಳು. ಲಾರ್ಡ ಹೆರ್ಬ್ಯಾಮರು ಯುದ್ಧಮಂತ್ರಿಗಳು. ಮಿ. ಬಾಲ್ಡ್‌ವಿನ್ನರು ಕೌನ್ಸಿಲಿನ ಅಧ್ಯಕ್ಷರು. ಸರ್ ಹರ್ಬರ್ಟ ಸ್ಯಾಮ್ಯುಯೆಲ್ಲರು ಗೃಹಮಂತ್ರಿಗಳು. ಮಿ. ಸ್ಕೋಡಸ್ಸರು ಲಾರ್ಡ ಪ್ರಿವ್ಹಿ ಸೀಲರಾಗಿ ನೇಮಿಸಲ್ಪಟ್ಟಿದ್ದಾರೆ.

* * *

ಈ ಹೊಸ ಮಂತ್ರಿಮಂಡಲದಲ್ಲಿ ಕಾನ್ಸರೆ ವೇಟಿವ್ಸ ಪಕ್ಷದವರು ೧೧, ಲಿಬರಲ್ಲರು ೫, ರಾಷ್ಟ್ರೀಯ ಕೂಲಿಕಾರ ಪಕ್ಷದವರು ೩, ಹೀಗೆ ಮೂರು ಪಕ್ಷಗಳ ಸಮಾವೇಶವಾಗಿದೆ. ಮಂತ್ರಿಮಂಡಲದ ಶೇ ಕಾನ್ಸರೇವೇಟಿವರ ಪ್ರಾಬಲ್ಯವೇ ಬಹಳವೆಂಬುದು ಈ ಅಂಕೆಯಿಂದ ವ್ಯಕ್ತವಾಗುತ್ತದೆ. ಲಾರ್ಡ ರೀಡಿಂಗ, ಲಾರ್ಡ ಕ್ರೂ, ಲಾರ್ಡ ಎಬಿಲರೀ ಹಾಗೂ ಸರ್ ಆಸ್ಟಿನ್ ಚೆಂಬರಲೇನ ಇವರು ಈ ಹೊಸ ಮಂತ್ರಿಮಂಡಲದಲ್ಲಿ ಸೇರಿ ಬಯಸಲಿಲ್ಲ. ಈ ಮಂತ್ರಿಮಂಡಲವು ೬ ತಿಂಗಳಿಗಿಂತ ಹೆಚ್ಚಿಗೆ ಕಾಲ ಬಾಳಲಿಕ್ಕಿಲ್ಲೆಂದೂ ಮುಂದೆ ಕಾನ್ಸರೇವೇಟಿವರ ಮಂತ್ರಿಮಂಡಲವನ್ನು ಅಕ್ಕಾಸಿಸಬಹುದೆಂದೂ ಅಂದಾಜಿದೆ.

* * *

ಮಿ. ಗಾರ್ಡನ್ನರು ಬಾರ್ಡೋಲೀ ಚೌಕಶಿಯನ್ನು ನಡಿಸಿದ್ದರು. ಸರಕಾರೀ ಕಾಗದಪತ್ರಗಳನ್ನು ಕಮಿಟಿಯ ಮುಂದೆ ತರಲು ಬರಲಾರದೆಂದು ನಿರ್ಣಯ ಕೊಟ್ಟುದರಿಂದ ಕಾಂಗ್ರೆಸ್ ಪಕ್ಷದವರೂ ನಕಲಾದ ಶ್ರೀ ಭುಲಾಭಾಯಿ ದೇಸಾಯಿಯವರು ಆಗ್ರಹ ಮಾಡಿದರು. ಆದರೆ ಮಿ. ಗಾರ್ಡನ್ನರು ಆ ಕಾಗದಪತ್ರಗಳನ್ನು ಕಮಿಟಿಯ ಮುಂದೆ ತರಲು ಬರಲಾರದೆಂದು ನಿರ್ಣಯ ಕೊಟ್ಟುದರಿಂದ ಕಾಂಗ್ರೆಸ್ ಪಕ್ಷದವರೂ ನಕಲಾದ ಶ್ರೀ ಭುಲಾಭಾಯಿ ದೇಸಾಯಿಗಳೂ ಕಮಿಟಿಗೆ ಬಹಿಷ್ಕಾರ ಹಾತಿರುವರು. ಅಂತೂ ಇತ್ತ ವಿಲಾಯತಿಯಲ್ಲಿ ರೌಂಡಟೇಬಲ್ ಕಾನಫರೆನ್ಸನ್ನು ಮುರಿದು ಹೋಗುತ್ತಿದ್ದುದರ ದೆಸ್ಸಿ ಇತ್ತ ಬಾರ್ಡೋಲೀ ಚೌಕಶಿಗೂ ಬಡಿದಂತೆ ಕಾಣುತ್ತಿದೆ.

* * *

ಕಳೆದ ಜೂನ ತಿಂಗಳಾಮ್ಯ ಅರಮನೆಯಲ್ಲಿ ಅರಸರ ಔತಣ. ಮಹಾತ್ಮರು ಆತಿಥಿಗಳು. ಅವರು ತಮ್ಮ ವಾಡಿಕೆಯ ಉಡುಪಿನಲ್ಲಿ ಬರಿ ತಲೆಯಿಂದ ಅರಮನೆಗೆ ನಡೆದಿದ್ದರು. ಅವರು ಅರಮನೆಯನ್ನು ಪ್ರವೇಶಿಸಿ ರಾಜಾಂಗಣದಲ್ಲಿ ಹಸ್ತಾಂದೋಲನ ಮಾಡಿದರು. ಯುವನರಾಜರೂ ಈ ಸಮಾರಂಭಕ್ಕೆ ಲವಪೂರ್ಣವಿಂದ ನಿಮಾನದಿಂದ ಬಂದಿದ್ದರು ೩೦ ವರ್ಷದ ಹಿಂದೆ ದಕ್ಷಿಣಾಫ್ರಿಕೆಗೆ ಜಾರ್ಜ ಪಾದರಶರು ಹೋದಾಗ ಮಹಾತ್ಮರು ಅವರಿಗೆ ಬೆಟ್ಟಿಯಾಗಿದ್ದರು. ಬಾದರಶರು ಅರ್ಧಬತ್ತಲೆಯ ಫಕೀರನನ್ನು ಈ ರೀತಿ ಸೌರವಿಸಿದ್ದನ್ನು ಕಂಡು ಮಿ. ಚರ್ಚಿಲ್ಲರ ಹೊಟ್ಟೆಯುರಿ ಎಷ್ಟು ದೊಡ್ಡದಾಗಿ ಹಬ್ಬಿರುವುದೋ!

* * *

ಮುಸಲ್ಮಾನ ಜಾತಿವಾದಿಗಳ ಬೇಡಿಕೆಯ ಬಾಲವು ಬೆಳೆಯುತ್ತ ನಡೆದಿದೆ ಅವರ ಕದಿಸಾಲ್ಕು ಮುದ್ದೆಗಳಿಂದ ನಮತ್ತ ಮೂರು ಮುದ್ದೆ. ೧. ಸಂಸ್ಥಾನಗಳ ಕಾಯಿದೆ ಮಂಡಲ ಹಾಗೂ ಸ್ಥಾನಿಕ ಸಂಸ್ಥೆಗಳಲ್ಲಿ ಮುಸಲ್ಮಾನರಿಗೆ ಸ್ಥಳಗಳನ್ನು ಕಾದಿಡಬೇಕು. ೨. ಸಂಸ್ಥಾನಗಳ ವಿಂಗಡಾನ್ತರ ಸಂಕ್ರಮಣ ಮಾಡುವುದಕ್ಕಾಗಿ ಸಂಸ್ಥಾನ ಮಂತ್ರಿ ಮಂಡಲದಲ್ಲಿ ಒಬ್ಬ ಬ್ರಿಟಿಷ ಅಧಿಕಾರಿಯನ್ನು ನೇಮಿಸಬೇಕು. ಸಂಸ್ಥಾನಗಳಿಂದ ಫೆಡರಲ್ ಕಾಯಿದೆ ಮಂಡಲಗಳಿಗೆ ಕಳುಹಿಸಲ್ಪಡುವ ಪ್ರತಿನಿಧಿಗಳಲ್ಲಿ ೪ ಜನರು ಮುಸಲ್ಮಾನರಿರಬೇಕು. ಇವು ಅವರ ಹೊಸ ಮುದ್ದೆಗಳು ಈ ಮುದ್ದೆಗಳು ಎಲ್ಲೆಲ್ಲಿ ಉರುಳಾಡುವುವೋ ನೋಡಬೇಕು!

* * *

ಮಹಾತ್ಮರು ಲಂಡನ್ನಿನಲ್ಲಿ ಮಾಡಿದ ಒಂದು ಭಾಷಣದಲ್ಲಿ ಸಂಸ್ಥಾನಿಕರ ವಿಷಯವಾಗಿ ಅಂದಿರುವುದೇನೆಂದರೆ 'ಕಾಶ್ಮೀರದಲ್ಲಿ ಹಿಂದೂ ಮುಸಲ್ಮಾನರು ಪ್ರೇಮದಿಂದ ಇರದಿರುವುದಕ್ಕೆ ಬ್ರಿಟಿಷರೇ ಜವಾಬದಾರರು ಪಡೆಯ ಹಿಂಭಾಗದಲ್ಲಿ ನಡೆದಿರುವ ಕಾರಸ್ಥಾನೆವೇ ಕಾರಣ. ಸಂಸ್ಥಾನಿಕರಿಗೆ ಬರುವಿಕೆ ಮಾಲೆಯಿದ್ದರೂ ೨೧ ತೋಪಿನ ಸಲಾಮಿದ್ದರೂ ಅವರು ಅರಮನೆಯಲ್ಲಿನವ ಕೈದಿಗಳು ಸಂಸ್ಥಾನದ ಸೈನ್ಯದ ಮೇಲೆ ಬ್ರಿಟಿಷ ಸರಕಾರದ ಬಲವಾದ ನಿಯಂತ್ರಣವಿರುವುದರಿಂದ ಸಂಸ್ಥಾನಿಕರು ಅರಸಾಯರು ಮಹಾತ್ಮರು ಸಂಸ್ಥಾನಿಕರಿಗೆ ಕೊಟ್ಟ ಈ ಸರ್ಟಿಫಿಕೇಟನ್ನು ಎಲ್ಲರೂ ಮನನ ಮಾಡುವಂತಿದೆ!

*

ತಾ ೧೫ಕ್ಕೆ ಮಹಾತ್ಮರು ಲಂಡನ್ನಿನಲ್ಲಿ ಮಾಡಿದ ಒಂದು ಭಾಷಣದಲ್ಲಿ "ಸಾಂ. ಟೀ. ಕಾನಫರನ್ಸು ಅಪಯಶಸ್ವಿಯಾಗುವ ಚಿಕ್ಕ ತೋರುತ್ತಿದೆ ಇದಕ್ಕೆ ಕಾರಣವೇನು? ಕಾನಫರೆನ್ಸಿನ ಪ್ರತಿನಿಧಿಗಳು ಹಿಂದೀ ರಾಷ್ಟ್ರದ ನ್ಯಾಯವಾದ ಪ್ರತಿನಿಧಿಗಳಲ್ಲ ಹಿಂದುಸ್ಥಾನದ ಹೊಸ ರಾಜ್ಯಶಾಸ್ತ್ರಾಭಾದಂದ ಹೊರೆಯುಷ್ಟು ಹೊರಲು ಕಾಂಗ್ರೆಸ್ಸು ಸಿದ್ಧವಿದೆ. ಇವುದಿಂದ ಅದು ನಿಶ್ಯಬ್ದವಿದ್ದರೆ ಅಶ್ಯಕ್ತಾಗಿ ಮಾಡಿ ಅದನ್ನು ದೊರಕಿಸಬೇಕಾಗುವುದು. ನಾವು ಅ ಬಗ್ಗಾಗಿ ಸ್ವಾರ್ಥತ್ಯಾಗ ಮಾಡಿದ್ದೇವೆ ನಾವೇ ಹಿಂದೀ ರಾಷ್ಟ್ರದ ನ್ಯಾಯವಾದ ಪ್ರತಿನಿಧಿಗಳು. ಆದಕಾರಂದಲೇ ಲಾರ್ಡ ಇರ್ವಿನರು ಇಪ್ಪೆಲ್ಲ ಕೈದಿಗಳನ್ನು ಬಿಡುಗಡೆ ಮಾಡಿ ಸನ್ನಾಹವೆ ಸಂಧಾನ ಮಾಡಿಕೊಂಡರು' ಎಂದು ನುಡಿದಿದ್ದಾರೆ.

* *

ಇನ್ನೊಂದು ಭಾಷಣದಲ್ಲಿ ಮಹಾತ್ಮರು ಸಾಂ. ಟೀ. ಬಲ್ ಕಾನಫರನ್ಸಿನಲ್ಲಿ ಪ್ರತ್ಯಕ್ಷವಾಗಿ ಭಾಗ ತಕ್ಕೊಳ್ಳುವುದಕ್ಕಿಂತ ಜೈಲಿನ ಹಿಂದೆ ಕುಳಿತು ಸಂಧಾನ ಮಾಡಿಕೊಳ್ಳುವುದು ಹೆಚ್ಚು ಸುಲಭವೆಂದು ನಾವು ತಿಳಿಯುತ್ತೇವೆ. ಈ ಸಂಧಾನದಿಂದ ಹಿಂದಿಯರಿಗೆ ಸ್ವಾತಂತ್ರ್ಯವನ್ನು ದೊರಕಿಸುವಲ್ಲಿ ಯಶಸ್ಸು ಸಿಕ್ಕದಿದ್ದರೆ ಪುನಃ ಕಾಯಿದೆಭಂಗ ಮಾಡಲು ನನ್ನ ಬಂಧು ಭಗಿನಿಯರಿಗೆ ಉಪದೇಶಿಸುವೆನು. ಹಾಗೂ ಈ ಸ್ವಾತಂತ್ರ್ಯ ಯುದ್ಧದಲ್ಲಿ ೧೦ ಲಕ್ಷ ಜನರ ಆಹುತಿಯನ್ನು ಆನಂದದಿಂದ ಕೊಡುವೆನು' ಎಂದು ನುಡಿದು ಮಹಾತ್ಮರು ತಮ್ಮ ವೀರ ವೃತ್ತಿಯನ್ನು ವ್ಯಕ್ತಪಡಿಸಿದ್ದಾರೆ

जननी जन्मभूमिश्च स्वर्गादपि गरीयसी ॥

ಕರ್ನಾಟಕ ಧುರೀಣ

ಶಕೆ ೧೮೫೩ನೇ ಪ್ರಜಾಪತಿ ಸಂ| ದ ಕಾರ್ತಿಕ ಶು|| ೮ ಮಂಗಳವಾರ.

ನಿರಾಶಾಮಯ ವಾತಾವರಣ.

ಅಂತೂ ಮಹಾತ್ಮಾ ಗಾಂಧಿಯವರೂ ಇತರ ಹಿಂದೀ ಪ್ರತಿನಿಧಿಗಳೂ ಕಳೆದ ಎರಡು ತಿಂಗಳ ವರೆಗೆ ಮಾಡಿದ ಪ್ರಯತ್ನವು ನೀರ್ಫೊಳಗಣ ಹೋಮವಾಗಿ ಪರಿಣಮಿಸಿದ್ದು ಅವರು ಕೇವಲ ನಿರಾಶೆಯಿಂದ ತಿರುಗಿ ಬರುವ ಪರಿಸ್ಥಿತಿಯುಂಟಾಗಿರುವುದು ಕಂಡು ಬರುತ್ತಿದೆ. ಪ್ರತ್ಯಕ್ಷದ ಇಂಗ್ಲೆಂಡದ ಮಂತ್ರಿ ಮಂಡಲವು ಹಿಂದೀಯರ ಕುತ್ತಿಗೆಗೆ ಪ್ರಾಂತಿಕ ಸ್ವರಾಜ್ಯದ ಹಳಸಿದ ಕಡಬನ್ನು ಕಟ್ಟಿ ಕಳುಹಿಸಬೇಕೆಂದು ಹೊಂಚುಹಾಕಿರುವುದು ಪ್ರತ್ಯಕ್ಷವಾಗಿ ಕಂಡು ಬರುತ್ತಿದೆ. ಅದಕ್ಕೆ ಇಂಗ್ಲೆಂಡದಲ್ಲಿರುವ ಅಲ್ಪ ಸಂಖ್ಯಾಕರ ಪ್ರತಿನಿಧಿಗಳ ಸಮ್ಮತಿಯನ್ನು ತಕ್ಕೊಂಡು ಬ್ರಿಟಿಷ ಮುತ್ಸದ್ದಿಗಳು ತಮ್ಮ ಶೈಯ್ಯವನ್ನು ಬಲಪಡಿಸಿಕೊಂಡಿರುವರು. ಜಾತಿವಾದೀ ಮುಸಲ್ಮಾನರೂ ಡಾ|| ಅಂಬೇಡಕರರೂ ಅಂಗ್ಲೋ ಇಂಡಿಯನ್ ಪ್ರತಿನಿಧಿಗಳೂ ಒಂದು ಕೂಟ ಮಾಡಿಕೊಂಡು ೧೧ ಬೇಡಿಕೆಗಳು ಎಂಬ ಶಿರೋ ಲೇಖದಲ್ಲಿ ಅತ್ಯಂತ ಪ್ರತಿಗಾಮಿಯಾದ ಒಂದು ಯೋಜನೆಯನ್ನು ಮುಂದಿಟ್ಟಿದ್ದು ಮುಖ್ಯ ಮಂತ್ರಿ ಮಿ॥ ಮೆಕಡನಾಲ್ಡ ಸಾಹೇಬರೂ ಅದನ್ನು ಸ್ವೀಕರಿಸಿ ಅಲ್ಪ ಸಂಖ್ಯಾಕರ ಬೆನ್ನು ತಟ್ಟಿದ್ದಾರೆ. ಈ ಯೋಜನೆಯನ್ನು ರಾಷ್ಟ್ರೀಯತ್ವದ ಕರಣ ಬಿದ್ದ ಯಾವಾತನೂ ಕಣ್ಣೆತ್ತಿ ನೋಡಲಿಕ್ಕಿಲ್ಲ. ಆದರೆ ಮಿ॥ ಮೆಕಡನಾಲ್ಡರು ಅದು ೧೦೦ ಕ್ಕಿಳ್ಟರಷ್ಟು ಹಿಂದೀಯರ ಅಭಿಪ್ರಾಯವೆಂದು ಮುದ್ರಿಟ್ಟು ಅದನ್ನು ಸ್ವೀಕಾರ ಮಾಡಿದ್ದಾರೆ. ಇದರ ಮೇಲಿಂದ ಮಿ॥ ಮೆಕಡನಾಲ್ಡರ ಕಲ್ಮಷವಾದ ಹೇತುವು ವ್ಯಕ್ತವಾಗುವಂತಿದೆ. ಈ ಯೋಜನೆಯು ತಿರಸ್ಕರಣೀಯವಾಗಿದ್ದು, ಮಹಾತ್ಮಾ ಗಾಂಧಿಯವರು ಇಂತಹ ಯೋಜನೆಯನ್ನು ಸ್ವೀಕರಿಸುವುದಕ್ಕಿಂತ ಅರಣ್ಯವಾಸವೇ ಲೇಸೆಂದೂ ಆ ಯೋಜನೆಯಿಂದ ಸ್ವಾತಂತ್ರ್ಯದ ವೃಕ್ಷವು ಎಂದೂ ಬೆಳೆಯಲಾರದೆಂದೂ ಸ್ಪಷ್ಟವಾಗಿ ಅಭಿಪ್ರಾಯಪಟ್ಟಿದ್ದಾರೆ. ಒಟ್ಟಿಗೆ ಬ್ರಿಟಿಷ ಮುತ್ಸದ್ದಿಗಳು ಇಂತಹ ಪ್ರತಿಗಾಮಿಗಳಾದ ಸ್ವಾರ್ಥ ಪರಾಯಣರ ಬೆಂಬಲ ತಕ್ಕೊಂಡು ಹಿಂದೀಯರ ಪ್ರಾಂತಿಕ ಸ್ವರಾಜ್ಯದ ಒಂದು ಕಂತು ಕೊಟ್ಟು ಕಳುಹಿಸಬೇಕೆಂದು ಕಾರಸ್ಥಾನ ಹೂಡಿರುವರು. ಆದರೆ ಈ ಕಂತು ಯಾರಿಗೂ ಬೇಕಿಲ್ಲ. ಹಾಗೂ ಇದಕ್ಕೆ ಯಾರೂ ಮೋಸ ಹೋಗಲಾರರು. ಮುಮ್ಮೈವರ್ತಿ ಸರಕಾರದಲ್ಲಿ ಜವಾಬ್ದಾರಿಯು ದೊರೆತ ಹೊರತು ಪ್ರಾಂತಿಕ ಸ್ವರಾಜ್ಯವು ಎಂದೂ ಸುರಸ್ಪೆತವಾಗಿ ಬಾಳಲಾರದು. ಸರ್ ಸಪ್ರು, ಸಾ॥ ಶಾಸ್ತ್ರಿ ಮತ್ತು ಶ್ರೀ॥ ಜಯಕರ ಇವರೂ ಸಹ ಹೀಗೇ ಅಭಿಪ್ರಾಯಪಟ್ಟಿದ್ದಾರೆ. ಮಹಾತ್ಮಾ ಗಾಂಧಿಯವರಂತೂ ಇಂತಹ ಪ್ರಾಂತಿಕ ಸ್ವರಾಜ್ಯವನ್ನು ಮ್ಯುನಿಸಿಪಾಲಿಟಿಗಳಂತಹ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೋಲಿಸಿದ್ದಾರೆ. ಹಿಂದೀಯರು ರೌಂ. ಟೀ. ಕಾನಫರೆನ್ಸಿಗೆ ಪ್ರಾಂತಿಕ ಸ್ವರಾಜ್ಯದ ಅಲ್ಪ ಭಿಕ್ಷೆಯನ್ನು ಬೇಡುವುದಕ್ಕೆ ಹೋಗಿಲ್ಲ. ಹಿಂದೀಯಂಗೆ ಮಧ್ಯವರ್ತಿ ಸರಕಾರದಲ್ಲಿ ಸಂಪೂರ್ಣ ಜವಾಬ್ದಾರಿಯೂ ಮಹಾತ್ಮರು ಅಂದಿರುವಂತೆ ಸೈನ್ಯ ಮತ್ತು ಭಾಂಡಾರಗಳ ಮೇಲಿನ ಸ್ವಾಮಿತ್ವವೂ ದೊರೆತರೇನೇ ಹಿಂದೀಯರಿಗೆ ಸಮಾಧಾನವಾಗುವುದು ಶಕ್ಯವಿದೆ. ಮಹಾತ್ಮರು ಬ್ರಿಟಿಷರ ಪ್ರಾಮಾಣಿಕತನವನ್ನು ಪರೀಕ್ಷಿಸುವುದಕ್ಕೆಂದು ಕೂಡಲೇ ಸಂಪೂರ್ಣ ಪ್ರಾಂತಿಕ ಸ್ವರಾಜ್ಯವನ್ನು ಕೊಡಿರಿ ಎಂದು ಮಾಡಿದ ಸೂಚನೆಯನ್ನು ತಮ್ಮ ಬೇಟಿಯಲ್ಲಿ ತೊಡಗಿರುವ ಬ್ರಿಟಿಷ ಮುತ್ಸದ್ದಿಗಳು ಮನ್ನಿಸಿದಂತೆ ತೋರಲಿಲ್ಲ. ಒಟ್ಟಿಗೆ ರೌಂಡ ಟೇಬಲ್ ಕಾನಫರೆನ್ಸಿನ ವಾತಾವರಣವು ದಿವ ದಿನಕ್ಕೂ ಕಾರ್ಮೋಡದಿಂದ ಮುಚ್ಚುತ್ತ ನಡೆದಿದ್ದು ಮಹಾತ್ಮಾ ಗಾಂಧಿಯವರು ಬರಿಕೈಯಿಂದ ಬರಬೇಕಾದ ಸಂಭವವೇ ಪ್ರಕಟವಾಗಿ ಕಾಣಹತ್ತಿದೆ. ಪ್ರಾಂತಿಕ ಸ್ವರಾಜ್ಯದ ಒಂದು ಇಲಿಯನ್ನು ಹಿಂದೀಯರ ಉಡಿಯಲ್ಲಿ ಹಾಕುವುದಕ್ಕೆ ಕಾನಫರೆನ್ಸಿನಂತಹ ಒಂದು ಗುಡ್ಡವನ್ನು ಅಗಿದು, ಹಣ, ಕಾಲ, ಶ್ರಮಗಳ ಅಪವ್ಯಯ ಮಾಡಿದ ಬ್ರಿಟಿಷ ಮುತ್ಸದ್ದಿಗಳ ಕಾರಸ್ಥಾನವು ತೀರಮಾನ್ಯಾಸ್ಪದವಿದೆ. ಬ್ರಿಟಿಷ ಮುತ್ಸದ್ದಿಗಳು ಕೆಲವು ಪರಮ ಸ್ವಾರ್ಥಿಗಳನ್ನು ಉಬ್ಬಿಸಿ ಎಬ್ಬಿಸಿ, ನೆಪ ನಿಮಿತ್ತಗಳನ್ನು ಮುಂದೊಡ್ಡಿ ಹಿಂದೀ ರಾಷ್ಟ್ರವನ್ನು ನಿರಾಶೆಗೊಳಿಸುತ್ತಿರುವುದರಿಂದ ಹಿಂದುಸ್ಥಾನ ವಾತಾವರಣದಲ್ಲಿ ಕೋಲಾಹಲವುಂಟಾಗದೆ ಇರದು. ಬಲಿಷ್ಠವಾದ ಪಕ್ಷದ ಬೆಂಬಲದಿಂದ ಇಂಗ್ಲೆಂಡದ ಮಂತ್ರಿ ಮಂಡಲವು ಹಿಂದೀಯರ ನ್ಯಾಯವಾದ ಬೇಡಿಕೆಯನ್ನು ಧಿಕ್ಕರಿಸಕೊಡಗಿದಂತೆ ಕಾಣುತ್ತಿದೆ ಆದರೆ ಅವರ ಈ ದರ್ಪಕ್ಕಾಗಿ ಪಶ್ಚಾತ್ತಾಪಪಡುವ ದಿನಗಳು ಬಾರದೆ ಇರಲಿಕ್ಕಿಲ್ಲೆಂದು ತಿಳಿಯುತ್ತೇವೆ

ವಾರ್ತಾವಾಹಿನೀ.

ಕುಮಟಾ:—

ಕಳೆದ ೨-೩ ದಿನಗಳಿಂದ ಮುಳಿಯುಲ್ಲಿ ಮೂಡಿಗಾಳಿಯು ಬೀಸಹತ್ತಿದೆ ಭತ್ತದ ಕೊಯಿಲು ಮುಗಿಯುವತ್ತ ಬಂದಿದೆ. ಅಡಿಕೆಯ ಧಾರಣೆ ಇಳಿಯ ತೊಡಗಿದೆ. ಧಾರಣೆ ಈ ಕೆಳಗಡಂತೆ ಇದೆ

ರಾಶಿ ಬೆಟ್ಟಿ ದರ	೧೦—೧೫—೧೦೦
ಗೋಟು ದರ	೪೫ —೫೫—೬೫
ಚಾಲಿ ದರ	೫೫—೬೫

ಕಳೆದ ಗುರುವಾರ ಸಾಯಂಕಾಲ ೫ ಘಂಟೆಗೆ ಇಲ್ಲಿಯ ಹುಬಲಿ ಲಾಯಬ್ರರಿಯಲ್ಲಿ ಸಬಜಜ್ಜ ವಿ. ದೇವಧರ ಇವರ ಅಧ್ಯಕ್ಷತೆಯಲ್ಲಿ ಕಾರವಾರ ಪಟ್ಟಿ ಸೇರುವ ಸಾಹಿತ್ಯ ಸಮ್ಮೇಲನ ವಿಷಯವಾಗಿ ಸಭೆಸೇರಿತು. ನಾಗರಿಕರಲ್ಲಿ ಹಲವರು ಸೇರಿದ್ದರು. ಸಾಹಿತ್ಯ ಸಮ್ಮೇಲನದ ಸ್ವಾಗತ ಮಂಡಲದ ಕಾರ್ಯದರ್ಶಿಗಳಾದ ಶ್ರೀ. ಪೋತದಾರ, ಬಿ. ಎ., ಯವರು ಸಮ್ಮೇಲನದ ವಿಷಯವಾಗಿ ಮಾಡಬೇಕಾದ ಕಾರ್ಯವನ್ನು ವಿವರಿಸಿದರು. ಶ್ರೀ ಯಾಜಿ ಹಾಗೂ ಶ್ರೀ. ರಾಮಕೃಷ್ಣ ಶಾಸ್ತ್ರಿ ಇವರ ಭಾಷಣಗಳೂ ಆದುವು. ಶ್ರೀ. ದೇವಧರರು ತಮ ಸಮಾರೋಪ ಭಾಷಣದಲ್ಲಿ ಮಾತೃಭಾಷೆಯನ್ನು ಪೋಷಿಸಿ, ಬೆಳಿಸಿ ಅದನ್ನು ಉನ್ನತಿಗೆಯ್ಯುವುದು ಪ್ರತಿಯೊಬ್ಬನ ಕರ್ತವ್ಯವೆಂದೂ ಸಾಹಿತ್ಯ ಸಮ್ಮೇಲನಕ್ಕೆ ತನುಮನಧನಗಳಿಂದ ಸಹಾಯ ಮಾಡಬೇಕೆಂದೂ ನುಡಿದರು.

ಕಳೆದ ಗುರುವಾರ ಇಲ್ಲಿಯ ಮ್ಯುನಿಸಿಪಾಲಿಟಿಯ ಇತರ ಅಧಿಕಾರಿಗಳ ಚುನಾವಣೆ ಜರಿಯಿತು. ವಿ. ಮಂಜಪ್ಪಯ್ಯ ಸಾಹೇಬ ಇವರು ಉಪಾಧ್ಯಕ್ಷ; ಶ್ರೀ. ಆರ್. ಎಸ್. ಕಾಮತ ಇವರು ಮ್ಯಾನೇಜಿಂಗ ಕಮಿಟಿಯ ಚೆಯರಮನ್ ಹಾಗೂ ಶ್ರೀ. ಪುಂಡ್ಲಿಕ ಶೇಷಗಿರಿ ಶಾನಭಾಗ ಇವರು ಡಿಸ್ಪೆನ್ಸರೀ ಕಮಿಟಿಯ ಚೆಯರಮನ್ನರಾಗಿ ಆರಿಸಲ್ಪಟ್ಟರುವರು.

ಕಳೆದ ೩ ನೇ ತಾರೀಖಿನ ದಿವಸ ಶೇತಕೇ ಖಾತೆಯ ಡಿರೆಕ್ಟರರು ಬಂದಿದ್ದರು. ಆ ನಿಮಿತ್ತ ಇಲ್ಲಿಯ ಬೇಸಾಯದ ಫಾರ್ಮಿನಲ್ಲಿ ಪ್ರಾತ್ಯಕ್ಷಿಕೆ ಏರ್ಪಡಿಯಿತು. ಬೇಸಾಯ ಖಾತೆಯ ಶ್ರೀ ಹಬ್ಬು, ಶ್ರೀ ನೋಕರ್ಜಾ, ಶ್ರೀ. ಹೆಗಡೆಕಟ್ಟೆ ಇವರು ಬೇರೆ ಬೇರೆ ಪ್ರಯೋಗಗಳ ವಿಷಯವಾಗಿ ಭಾಷಣ ಮಾಡಿದರು. ಮುಜ್ಜೆ ವಿಷ್ಣು ಭಟ್ಟ, ಶ್ರೀ. ಜಟ್ಟಿಪ್ಪ ಶಾನಭಾಗ, ಶ್ರೀ. ಗಂಗೊಳ್ಳಿ ಎಂ. ಎಲ್. ಸಿ, ಶ್ರೀ ಗಣೇಶ ಹೆಗಡೆ ಇವರು ರೈತರಿಗೂ ಬೇಸಾಯಕ್ಕೂ ಇರುವ ಅಡಚಣೆಗಳನ್ನು ವಿವರಿಸಿದರು. ಡಿರೆಕ್ಟರ ಸಾಹೇಬರು ರೈತರ ಅಡಚಣೆಗಳ ವಿಷಯವಾಗಿ ವಿಚಾರ ಮಾಡುವೆವೆಂದೂ ಶೇತಕೇ ಸುಧಾರಣಾ ಸಂಘ ಜಂಘ ಸಂಸ್ಥೆಗಳಿಂದ ಹೆಚ್ಚಿನ ಪ್ರಯೋಜನವಾಗುವುದೆಂದೂ ನುಡಿದರು.

ANTARANGA

22-2-1944



ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ

6—1—1962.

ಪತ್ರಿಕೆ ಹೆಸರು .....

ಆರಂಭ ದಿನಾಂಕ .....

ಪ್ರಕಟನಾ ಸ್ಥಳ .....

ಸಂಪಾದಕರ ಹೆಸರು .....

ಮ್ಯಾಲಿಕರ ಹೆಸರು .....

ಸೌಜನ್ಯ ಕೃಪೆ .....

1906] RECORD OF OVER 38 YEARS [1944

THE CANARA BANKING CORPORATION LIMITED

UDIPI

ಕೊರಡ್ಕಲ್ ಶ್ರೀನಿವಾಸರಾಯರು ಬರೆದ ಹಾಸ್ಯರಸಪ್ರಧಾನವಾದ ಮೂರು ಏಕಾಂಕ ನಾಟಕಗಳ ಸಂಗ್ರಹ.

ಪ್ರಕಾಶಕರು:
ಕರಿಯರ ಪ್ರಪಂಚ ಉಡುಪಿ.

ಪ್ರತಿಗಳಿಗೆ ನವಭಾರತ ಪುಸ್ತಕ ಭಂಡಾರಕ್ಕೆ ಬರೆಯಿರಿ.

ಅಂತರಂಗ
ANTARANGA

ವಾರ ಪತ್ರಿಕೆ • Weekly

ಸಂಪುಟ ೧೨. ಸಂಚಿಕೆ ೨೮೭.

Vol. 12. No. 287.

22—2—1944

ಸಂಪಾದಕರು:
ಕೆ. ಎಚ್. ಶೆಟ್ಟಿ
ಎಂ. ವಿ. ಹೆಗ್ಡೆ.

ಸಲಹೆಗಾರರ ಮಂಡಲ:
ಶ್ರೀಗಳಾದ ಬಿ. ವಾಸುದೇವ ರಾವ್ ಬಿ. ಎ., ಬಿ. ಎಲ್.; ಕೊರಡ್ಕಲ್ ಶ್ರೀನಿವಾಸ ರಾವ್; ಪಿ. ವಿ. ಉಪಾಧ್ಯಾಯ ಬಿ. ಎ. ಎಲ್. ಎಲ್. ಬಿ.; ಪಿ ದಯಾನಂದ ನಾಯಕ್, ಬಿ. ಎ. ಎಲ್. ಎಲ್. ಬಿ.; ಎಚ್. ಆರ್. ನಾಯಕ್; ಕಡಪಾಡಿ ಶ್ರೀನಿವಾಸ ಶೆಣೈ, ವಿಶಾರದ.

• ನಮ್ಮ ಗೋಲ್ಡನ್ ಜುಬಿಲಿ ಸೆವೆನೀರ್‌ಗೆ



ದಯಮಾಡಿ ನಿಮ್ಮ ಸಂದೇಶಗಳನ್ನು ಕಳುಹಿಸಿರಿ.
ಅಮೃತಾಂಜನ ಲಿ., ಮದ್ರಸ್.

ತಾಳ—ಮೇಳ



ಕೋರ್ಟಿಗೆ ಕೊಟ್ಟ ಅರ್ಜಿ ಪೋಲೀಸರು ನುಂಗಿದರು—ಒಂದು ತಲೆ ಬರಹ.

ಆಷ್ಟೂ ಹಸಿವಾಗಿತ್ತೇನೋ ಪಾಪ!

o

ಶ್ರೀ ವಿದ್ಯಾವಲ್ಲಭರ ವಿದ್ಯೆ!-ಬಾತ್ಮಿಯೊಂದರ ಹೆಡ್ಡಿಂಗ್!

'ವಿದ್ಯೆ' ಇಲ್ಲದೆ 'ವಿದ್ಯಾವಲ್ಲಭ'ರಾಗುವ್ರದೆಂತು ಬಾತ್ಮೀದಾರರೆ!

o

ಮಂಗಳೂರಿನ ಹಂಚಿನ ಕಾರ್ಖಾನೆಯೊಂದರ ಕೆಲಸಗಾರರು ತುಟ್ಟಿ ಭತ್ತೆ, ಸಂಬಳ ಹೆಚ್ಚಿಸಬೇಕೆಂದು ತಾ. 8ರಲ್ಲಿ ಮುಷ್ಕರ ಹೂಡಿದರಂತೆ.

ಮಂಗಳೂರಿನ ಹಂಚು ಕಾರ್ಖಾನೆಯವರು ದೇಶ ಪ್ರಸಿದ್ಧಿಯ ಹಂಚನ್ನಷ್ಟೇ ಹಂಚಿದರೆ ಸಾಕೆ? ಅದನ್ನು ತಯಾರಿಸುವ ಕೆಲಸಗಾರರಿಗೆ ಸಂಬಳವನ್ನೂ ಕೊಂಚ ಹೆಚ್ಚಿಗೆ ಹಂಚಲೂ ಬೇಡವೆ?

o

ಮಂಗಳೂರಲ್ಲಿ ಇತ್ತೀಚೆಗೆ ಸಮ್ಮೇಳನಗಳ ಸುರಿಮಳೆ ವಿದ್ಯಾರ್ಥಿ ಸಮ್ಮೇಳನವಾಯಿತು. ಮಜೂರ ಪರಿಷತ್ತಾಯಿತು. ಈಗ ತಾನೆ ಪತ್ರಿಕೋದ್ಯೋಗಿ ಸಮ್ಮೇಳನ!

ಸಾಮಾನ್ಯವಾಗಿ ಈಗಿನ ಸಮ್ಮೇಳನಗಳನ್ನು ನೋಡಿ ತೃಪ್ತಿಪಡೆಯುವುದೇನಿಲ್ಲವಾದರೂ ವರದಿ ಓದಿ ಮೋದ ಗೊಳ್ಳಬಹುದಲ್ಲವೆ.

o

ದಿಗ್ಬಂಧನದಲ್ಲಿದ್ದ ಶ್ರೀ ಕೆ. ಆರ್. ಕಾರಂತರು ಆಸ್ಪತ್ರೆಯಲ್ಲಿರುವ ತಮ್ಮ ತಾಯನ್ನು ನೋಡಲು 'ಪೆರೋಲ್'ದ ಮೇಲೆ ಬಿಡಲ್ಪಟ್ಟು ಸ್ವಸ್ಥಾನಕ್ಕೆ ಬಂದಿರುವರು.

ಇದು ಬರೇ ಕೆಲವು ದಿನಗಳ ಮಟ್ಟಿಗೆ ಮಾತ್ರ. ಆನಂತರ ಅವರು ತಮ್ಮ ಈಗಿನ ಸ್ವಸ್ಥಾನವನ್ನೇ ನೇರಬೇಕಾಗಿದೆ.

o

ಉಡುಪಿ ಮುನ್ಸಿಪಾಲಿಟಿಯವರು ರಸ್ತೆಗಳಿಗೆ ನೀರುಹಾಕುವ ವ್ಯವಸ್ಥೆ ಇನ್ನೂ ಮಾಡಿಲ್ಲ. ಧೂಳಿನ ಹಾವಳಿ ವಿಶೇಷವಾಗಿದೆ. ಎಂದೂ ಇಲ್ಲದ ದೂಳು!' ಎಂದು ಬೊಬ್ಬೆಎದ್ದಿದೆ.

ಕೂಳಿಲ್ಲವೆಂದು ಬೊಬ್ಬೆ ಎದ್ದಿರುವ ಈ ಕಾಲದಲ್ಲಿ ದೂಳನ್ನಾದರೂ - ಮುಕ್ಕಲಿ ಎಂದು ಮುನ್ಸಿಪಾಲಿಟಿಯವರು ಮೌನವಾಗಿರುವರೇ?

o

ಸುಮಾರು 40ಜನ ಪಾರ್ಲಿಮೆಂಟ್ ಸದಸ್ಯರು ಸರೋಜಿನಿ ದೇವಿಯವರಿಗೆ ತಂತಿಬಿಟ್ಟು ಲಂಡನಿಗೆ ಬರಬೇಕೆಂಬ ಕರೆಕೊಟ್ಟಿರುವರ ಹಿಂದುಸಾನದ ಸ್ವಾತಂತ್ರ್ಯ ಬೇಡಿಕೆಯನ್ನು ಪ್ರಪಾದಿಸಲಿಕ್ಕೆ?!

'ಓ' ಕೊಳ್ಳೋಣವೆಂದರೆ ?
ಗೆ ಬಿದ್ದಿದೆಯಲ್ಲ ಬೀಗ ಮುದ್ರೆ

o

"ಸ್ಥಾಯಿ ಸಮಿತಿಯಲ್ಲಿನ ಧ್ಯೇಯಕ್ಕಾಗಿ ಇರಬೇ'
ಬ್ಬರು ಬರೆಯುತ್ತಾರೆ ಪ
ಎಚ್ಚರಗೊಳ್ಳಲಿಕ್ಕೆ!

ಅಂತಹ ಫ್ರಿಪಾ
ಕೆಂದೀ ಚಳವಳನ'



ಕೆಲವು ಸಂಕೇತ ನುಡಿಗಳು

1. ಮಹತ್ಕಾರ್ಯದ ಸೋಗಿನಿಂದ ಅಪವ್ಯಯಕ್ಕೆ ದುಡ್ಡು ಸೆಳೆಯುವ ಹಂಚಿಕೆಗೆ—'ದೇವರ ಸೇವೆ'.

2. ತ್ಯಾಗಿಯ ಸೋಗಿನಿಂದ ಮಹಾ ಭೋಗಿಯಾಗಿರುವುದಕ್ಕೆ— 'ಇಂದಿನ ಸನ್ಯಾಸಿ'.

3. ಮುಂದಿಗೆ ನಾಳಿನಾಶೆ ತೋರಿಸಿ ಇಂದು ತನ್ನಾಶೆಯನ್ನು ಪೂರೈಸಿಕೊಳ್ಳುವುದಕ್ಕೆ—'ಜೋಯಿಸ ವೃತ್ತಿ'

4. ತನಗೇ ಅರ್ಥವಾಗದ ದೊಡ್ಡ ದೊಡ್ಡ ಮಾತುಗಳನ್ನಾಡುವುದಕ್ಕೆ— 'ಮಂತ್ರ ಪಠಣ'.

5. ಇದ್ದೂ ಇಲ್ಲವೆನ್ನುವವನಿಗೆ— 'ಅಕ್ಕಿ ವ್ಯಾಪಾರಿ'.

6. ಪರಸ್ಪರ ಹೊಗಳಿಕೊಳ್ಳುವ ಸಭೆಗೆ—'ಸಾಹಿತ್ಯ ಸಮ್ಮೇಲನ'

7. ಭಾಷಾ ಸೇವೆಯಲ್ಲಿ ಗೈಮೆಗೆ ತಕ್ಕ ಕೀರ್ತಿ ದೊರಕದಿರುವವನಿಗೆ— 'ದಕ್ಷಿಣ ಕನ್ನಡ'.

8. ಯಾವುದೂ ಯಾರಿಗೂ ಸ್ಪಷ್ಟವಾಗಿ ತಿಳಿಯದಿರುವ ವ್ಯವಸ್ಥೆಗೆ— 'ರೇಶನಿಂಗ್'.

9. ಮುಂದೆ ಹೇಗೆಂದು ಹೇಳಲಾಗುವುದಿಲ್ಲವಾದ ವಿಷಯಕ್ಕೆ -'ಇಂದಿನ ಯುದ್ಧ'

10. ಮುಂದಮತಿಯಾಗಿ ಇದ್ದುದನ್ನೂ ಕಳೆದುಕೊಳ್ಳುವ ಉದ್ಯೋಗಕ್ಕೆ- 'ಸೆಟ್ಟಾ'.

11. ಮುಂದಿಯಲ್ಲಿ ಅಜ್ಞಾನವನ್ನು ಮತ್ತಷ್ಟು ಪ್ರಬಲಗೊಳಿಸುವ ಉದ್ಯಮಕ್ಕೆ—'ಕಂಪೆನಿಯ ಪೌರಾಣಿಕ ನಾಟಕ'.

12. ಏಕಕೇನಾಪ್ಯುಪಾಯೇನ ತನ್ನ ಹೆಸರು ಚಿರಸ್ಥಾಯಿಯಾಗಬೇಕೆಂದು ಸಲ್ಲದ ಜಾಗದಲ್ಲಿಯೂ ತುರುಕಿಸಿಕೊಳ್ಳುವವನಿಗೆ—'ವೀರಣ್ಣ'.

ಕಾವಿಯುಟ್ಟೊಡನೆ ಕಾಮವಡಗೀತೆ? ಸ್ಥಾನವೇರಿದೊಡನೆ ಹೀನತೆಯುಳಿದೀತೆ?

ಂಂ ಂಂ ಂಂ

ಗದ್ದಲವೆದ್ದಲ್ಲಿ ಕಾರ್ಯ ಕಡಿಮೆ; ಸದ್ದಿಲ್ಲದ್ದಲ್ಲಿ ಕೆಲಸವಧಿಕ.

ಂಂ ಂಂ ಂಂ

ಕಲುಷಿತವಾದಲ್ಲಿ ಚೆನ್ನಾಗಿ ಕದಡಿಯೇ ಶುದ್ಧಗೊಳಿಸಬೇಕು.

ಂಂ ಂಂ ಂಂ

ಬಚ್ಚಿ ಮುಚ್ಚಿಡುವ ಹುಚ್ಚುಬೇಡ, ಚುಚ್ಚಿ ಮಾತಾಡುವ ಕೆಚ್ಚುಬೇಡ.

ಂಂ ಂಂ ಂಂ

ಇಲಿಯಂತೆ ಬಂದವನು ಹುಲಿಯಾಯಿಂದಾನು.

ಂಂ ಂಂ ಂಂ

ಕಡೆಗಣಿಸಿದ ಕಡ್ಡಿಯೇ ಕಡೆಗಾದ ಕಾರ್ಯಕ್ಕೆ ಬಿದ್ದೀತು.

ಂಂ ಂಂ ಂಂ

ತುಂತುರು:

ಕಂದಕವನ್ನು ಹುಡುಕುತ್ತದೆ ಊರಹಂದಿ; ಕುಂದನ್ನೇ ಅರಸುತ್ತದೆ ಊರಮಂದಿ.

ಂಂ ಂಂ ಂಂ

ಸ್ತೋತ್ರವಾಡಿದಾಕ್ಷಣ ಲೋಭಿ ದಾತಾರನಾಗಲಾರ; ಮೂದಲಿಸಿದೊಡನೆ ಶೂರ ಹೇಡಿಯಾಗಲಾರ.

ಂಂ ಂಂ ಂಂ

ಉಪದೇಶ ಮಾಡುವುದು ಉಪದ್ರವನ್ನು ಆಮಂತ್ರಿಸಿದಂತೆ.

ಂಂ ಂಂ ಂಂ

ಮುತ್ತಿನಹಾರ ಕತ್ತಿನಲಿದ್ದೊಡನೆ ತೊತ್ತು ಒಡತಿಯಲ್ಲ; ಆಡಂಬರ ಪ್ರದರ್ಶನ ಮಾತ್ರಕ್ಕೆ ದೊಡ್ಡಸ್ತನವಿಲ್ಲ.

ಂಂ ಂಂ ಂಂ

ಕೈಯಲ್ಲಿ 'ತುಳಸೀಮಣಿ'! ಬಾಯಲ್ಲಿ 'ಚೂಡಾಮಣಿ', ಮನದಲ್ಲಿ ಜಾರರ ಮಣಿ.

ಂಂ ಂಂ ಂಂ

ನೀಚನಿಗೆ ಮಣಿಯಬೇಡ, ಸಜ್ಜನನನ್ನು ದಣಿಸಬೇಡ.

ಂಂ ಂಂ ಂಂ

ತುಂಬು ನೀರ ಸಾಗರಕ್ಕಿಂತ ಹರಿದು ಹೋಗುವ ತೊರೆಯು ವಾಸಿ ಸಂಪತ್ತುಳ್ಳ ಲೋಭಿಗಿಂತ ಹಂಚಿಬಿಡುವ ಬಡವಲೇಸು.

ಂಂ ಂಂ ಂಂ

ಕಲ್ಲೊಂಬೆಗೆ ಸಮರ್ಪಣೆ! ಹಸಿವೆಂಬವರಿಗೆ ನಿರಾಕರಣೆ!

ಂಂ ಂಂ ಂಂ

'ಸ್ವಾಮಿ' ಎಂದೊಡನೆ ಪ್ರೇಮದ ಬುಗ್ಗೆಯೇ ಇದೆಯೆಂದರಿಯಲಾಗದು. 'ಏನು' ಎಂದೊಡನೆ ಕಠಿಣ ಹೃದಯ ಎಂದು ಗ್ರಹಿಸಲಾಗದು.

ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

ಶ್ರೀ. ಯಸ್. ಯಂ. ಗೌಡ ತುಂಗಭದ್ರ.

ಯಾವುದಾಬರೊಂದು ಹಿತಸಾಧನೆಗಾಗಿ ಸರ್ವರೂ ಒಮ್ಮನಸ್ಸಿಂದ ಕಾರ್ಯಪ್ರವರ್ತರಾಗಿ ಮುಂದರಿಯುವುದು ಒಳ್ಳೆಯದೊ? ಒಬ್ಬಬ್ಬರು ಹಿಂದೆ ನಿಲತು ಸೋತರೂ ಒಂದೇ, ಗೆದ್ದರೂ ಒಂದೇ ಎಂದೆನಿಸುವುದು ಚೆಂದವೊ?

ಸತ್ಕಾರ್ಯಕ್ಕಾದರೆ ಒಳ್ಳೇದೇ. ಹಿಂದೆ ನಿಲ್ಲುವುದೂ ಮುಂದೆ ಬರುವುದೂ ಅವರವರ ಮನೋ ಭಾವವನ್ನು ಹೊಂದಿಕೊಂಡಿದೆ.

ಶ್ರೀ. ಯಸ್. ಯಂ. ಗೌಡ, ತುಂಗಭದ್ರ.

ಆಯುರ್ವೇದ ತಿಳಿಯದ ಎಲೊಪೆಥಿಯವರೇ ಮೊದಲಾದ ಅಗ್ರಗಣ್ಯ ಡಾಕ್ಟರರೇ ಗುಣ ಮಾಡಲು ಅಸಾಧ್ಯವಾದ ಎಷ್ಟೋ ರೋಗಗಳನ್ನು ಆಯುರ್ವೇದೀಯರು ಗುಣಮಾಡುತ್ತಾರೆಂದ ಮೇಲೆ ಸರಕಾರದವರು ಆ ತತ್ವಕ್ಕೆ ಯಾಕೆ ಪ್ರೋತ್ಸಾಹ ಕೊಡಲು ಮುಂದೆ ಬರುವದಿಲ್ಲ?

ನಮ್ಮವರೇ ನಮಗೆ ಪ್ರೋತ್ಸಾಹ ಕೊಡದಿರುವಾಗ ಸರಕಾರವನ್ನೇಕೆ ದೂರಬೇಕು?

ಶ್ರೀ ಬಿ. ಕೆ. ಯಸ್. ಕುಂದಾಪುರ.

ಕೆಲವು ಕಡೆಗಳಲ್ಲಿ ಆಕಸ್ಮಾತ್ತಾಗಿ ಅಕ್ಕಿಗೆ ಮುಟ್ಟುಗೋಲು ಹಾಕಿದ್ದರಿಂದ ದಿನನಿತ್ಯ ಅಕ್ಕಿಕೊಂಡುಹೋಗುವ ಬಡಬಗ್ಗರು ಉಪವಾಸಬಿದ್ದು ಸಂಕಷ್ಟ ಪಡಬೇಕಾಯಿತು. ಅಕ್ಕಿ 'ಸೀಲ್' ಮಾಡಿವಲ್ಲಿ ಆಗಲಿ ಅಕ್ಕಿ ಹಂಚುವ ವ್ಯವಸ್ಥೆಯನ್ನು ಮಾಡದಿದ್ದುದು ಸರಿಯೆ?

ಉಪವಾಸಕ್ಕೆ ತರ್ಬೇತುಮಾಡುವ ರೀತಿ ಇರಬಹುದಿದು. ಬಂಗಾಲವನ್ನು ನೆನಸಿಕೊಂಡರೆ ಇದೇನು ಮಹಾ? ಎಂದವರ ಅಭಿಪ್ರಾಯವಿರಬಹುದೇನೊ!

ಶ್ರೀ. ಕೆ. ಬಿ. ಭಟ್. ಪುತ್ತೂರು.

ದಕ್ಷಿಣ ಕನ್ನಡದ ಆಧುನಿಕ ಕವಿತೆಗಳಿಗೂ ಸಣ್ಣ ಕತೆಗಳಿಗೂ ಮೂಲವಾಗಿರುತ್ತ, ಶ್ರೀ ಪಂಜೆಯವರೇ ಅವರಿಂದರ ತಾತರಾಗಿರುತ್ತ, ಮೈಸೂರವರು ಶ್ರೀ. ಬಿ. ಯಂ. ಶ್ರೀಕಂಠಯ್ಯನವರನ್ನು ಆಧುನಿಕ ಕವಿತೆಗಳ ತಾತನೆಂದೂ 'ಶ್ರೀ. ಮಾಸ್ತಿಯವರನ್ನು ಸಣ್ಣ ಕತೆಗಳ ತಾತನೆಂದೂ ಕರೆಯುತ್ತಿರುವರಲ್ಲ? ಈ ಕುರಿತು ನಿಮ್ಮ ಅಭಿಪ್ರಾಯವೇನು?

ಅಳಿದ ಊರಿಗೆ ಉಳಿದವರೇ ಗೌಡರೆಂದು ನಿಮಗರಿಯದೆ?

ಶ್ರೀ. ಆರ್. ಎಸ್. ಕುಲಕರ್ಣಿ, ಬಿಜಾಪುರ.

ಕರ್ನಾಟಕದ ಯಾವ ಜಿಲ್ಲೆಯಲ್ಲೂ ಇರದಷ್ಟು ಕನ್ನಡ ಪತ್ರಿಕೆಗಳು ಮುಂಗಳೂರು ಜಿಲ್ಲೆಯಲ್ಲಿವೆಯಂತೆ. ಅವಾವುವೆಂದು ಅವುಗಳಲ್ಲಿ ಉತ್ತಮವಾದುದಾವುದೆಂದೂ ತಿಳಿಸಬಲ್ಲಿರಾ?

ನಮ್ಮಲ್ಲಿಯ ಪತ್ರಿಕೆಗಳ ಹೆಸರುಗಳನ್ನು ಇಲ್ಲಿ ಕೊಟ್ಟಿದ್ದೇವೆ. ಅವುಗಳಲ್ಲಿ ಉತ್ತಮವಾದುದಾವುದೆಂಬುದಕ್ಕೆ ಅವುಗಳ ಮಾದರಿಗೇ ಬರೆದುಕೊಳ್ಳಿ (1) ಸ್ವದೇಶಾಭಿಮಾನಿ, (2) ಕಂಠೀರವ, (3) ನವಯುಗ, (4) ರಾಷ್ಟ್ರಬಂಧು (5) ಪ್ರಭಾತ, (6) ಸ್ವತಂತ್ರಭಾರತ, (7) ಅಂತರಂಗ, (8) ಧುರೀಣ, (9) ನವಭಾರತ (10) ಬಡವರಬಂಧು, (11) ಕುದೆಯಭಾರತ, (12) ಬಾಲಚಂದ್ರ, (13) ವಿದ್ಯೋದಯ (14) ಪ್ರಕಾಶಿನಿ.

ನುದನ ಮುಂಜರಿ
ಮಾತ್ರೆಗಳು

ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ಶೀಘ್ರದಲ್ಲೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ.

ಕ್ರಯ: 40 ಮಾತ್ರೆಗಳ ಡಬ್ಬಿ ರೂ 1

ನುದನಮುಂಜರಿ ಫಾರ್ಮಸಿ,
184 ಕ್ಲೈನ್ ಬಜಾರ್ ರೋಡ್, ಮದ್ರಾಸ್.
ಪುತ್ತೂರು ಏಜಂಟರು:—ಪೈ ಪಾರ್ಮೆಸಿ

'ಹೊಟೆಲ್'ವಾಸಿ ಶಿವಮೊಗ್ಗ

ಹೊಟೇಲ್ ವ್ಯಾಪಾರಿಗಳಿಗೆ ಅಕ್ಕಿ, ಸಕ್ಕರೆ ಹಿಟ್ಟು ಮೊದಲಾದ ಸಾಮಾನುಗಳು ನಿಯಂತ್ರಣದಲ್ಲಿ ದೊರೆಯದಿರುವಾಗ, ಊಟ, ಕಾಫಿ, ತಿಂಡಿಗಳಿಗೆ ದುಬಾರಿಯೆಷ್ಟು, ತ್ರಿಬಾರಿಯೆಷ್ಟು ದರವಿಟ್ಟಿರುವುದು ಸರಿಯೆ?

ಊಟ, ಕಾಫಿ, ತಿಂಡಿಗಳ ದರವನ್ನೂ ಸರಕಾರವು ನಿಯಂತ್ರಿಸ ಬೇಕೆಂದು ನಿಮ್ಮ ಅಭಿಪ್ರಾಯವೊ?

ಶ್ರೀ. ಪಿ. ಆರ್. ಶೆಟ್ಟಿ, ಕಾರ್ಕಳ.

ದ. ಕನ್ನಡದಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಮಾಡಿದ ರಿಕ್ವಿಶಿಶನ್ ಕುರಿತು ಪ್ರತಿಯೊಬ್ಬರಿಂದಲೂ ಆಕ್ಷೇಪಣೆಗಳು ಹೋಸಿದ್ದುವಲ್ಲಾ—ಅವುಗಳ ಗತಿಯೇನಾಯಿತು? ಜಿಲ್ಲಾ ಭೂಮಾಲಿಕ ಸಂಘದವರು ಈ ಕುರಿತು ಏನುಮಾಡಿದ್ದಾರೆ? ತಿಳಿಸುವಿರಾ?

ಪುತ್ತೂರು ತಾಲೂಕಿನ ರಿಕ್ವಿಶಿಶನ್ ಆಕ್ಷೇಪಣೆಗಳ ತನಪಿ ತೀರಿತೆಂದೂ, ಮಂಗಳೂರು ತಾಲೂಕಿನದ್ದು ಈಗ ನಡೆಯುತ್ತಿರುವುದೆಂದೂ ಬಳಿಕ ಒಂದೊಂದೇ ತಾಲೂಕಿನ ತನಪಿ ಆಗಲಿರುವುದೆಂದೂ ತಿಳಿಯುತ್ತೇವೆ. ಭೂಮ್ಹಾಲಿಕರು ತಮ್ಮಲ್ಲಿ ಮಾರಾಟದ ಅಕ್ಕಿಇದ್ದರೆ ಅದನ್ನು ಕೂಡಾ ಕೂಡಲೇ ಸ್ಟೋರುಗಳಿಗೆ ಕೊಡಬೇಕೆಂಬ ಪ್ರಜಾರಕ್ಕೆ ತೊಡಗಿದಂತಿದೆ ಭೂಮ್ಹಾಲಿಕ ಸಂಘದವರು.

ಯುಗಾಂತಕಾರೀ ಲೆನಿನ್

ರಷ್ಯದ ಉದ್ಧಾರಕನ ಜೀವನ

1887ನೇ ಇಸವಿಯ ವಸಂತ ಕಾಲ, ಒಬ್ಬ ತರುಣನು ತ್ಸಾರ್‌ನನ್ನು ಕೊಲ್ಲಲು ಪ್ರಯತ್ನಿಸಿದನೆಂದು ಗಲ್ಲಿಗೇರಿಸಲ್ಪಟ್ಟನು. ಇವನ ಹೆಸರು ಅಲೆಕ್ಸಾಂಡರ್. ಆ ಕಾಲದಲ್ಲಿ ಯಾರೂ ಇದನ್ನು ಗಣನೀಯವಾಗಿ ಭಾವಿಸುತ್ತಿರಲಿಲ್ಲ. ಸಾವಿರಾರು ಯುವಕರು ಜಾರ್ ಚಕ್ರವರ್ತಿಯ ದಮನ ನೀತಿಗೆ ಆಹುತಿಯಾಗಿದ್ದರು.

ಸಿಂಬರ್ಸ್ಕ್ ಹೈಸ್ಕೂಲಿನ ಒಬ್ಬ ವಿದ್ಯಾರ್ಥಿ, ಅವನು ಮತ್ತೇನೂ ಅಪರಾಧ ಮಾಡಲಿಲ್ಲ. ಅಲೆಕ್ಸಾಂಡರಿನ ಕೊಲೆಯ ನೆನವು ಅವನ ಹೃದಯದಲ್ಲಿ ಗುಪ್ತ ರೀತಿಯಿಂದ ಇದ್ದು ಕೊನೆಗೂ ಜಾರ್‌ಶಾಹಿಯನ್ನು ಕೊನೆಗಾಣಿಸಿಯೇ ತೃಪ್ತಿಯನ್ನು ಹೊಂದಿದನು. ಈ ಯುವಕನಾರು? ಇವನೇ ಅಲೆಕ್ಸಾಂಡರನ ತಮ್ಮನಾದ ವ್ಲಾಡೀಮೀರ್ ಇಲಿಯಚ್ ಯೂಲಿಯಾನೋಫ್. ಆದರೆ ಇಷ್ಟು ದೊಡ್ಡ ಹೆಸರು ಈಗ ಗುಪ್ತವಾಗಿದೆ. ರಾಜಕೀಯ ವಿಚಾರದಲ್ಲಿ ಜನತೆಯ ಬಾಯಿಯಲ್ಲಿ ಒಂದು ಚಿಕ್ಕ ಹೆಸರು ಪ್ರಚಲಿತವಾಗಿದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಆ ಹೆಸರೇ ಲೆನಿನ್.

ಲೆನಿನನು 1870ನೇ ಇಸವಿ ಎಪ್ರಿಲ್ 20ನೇ ತಾರೀಖಿನಲ್ಲಿ ಸಿಂಬರ್ಸ್ಕ್‌ನಲ್ಲಿ ಜನಿಸಿದನು. ಇವನ ತಂದೆಯಾದ ಇಲಿಯಾ ನಿಕೋಲಾಯರಿಯಾ ಯೂಲಿಯಾನೋಫ ಎಂಬವನು ಪ್ರೈಮರಿ ಸ್ಕೂಲಿನ ಇನ್‌ಸ್ಪೆಕ್ಟರಾಗಿದ್ದನು. ಅವನಿಗೆ ಒಟ್ಟು 6 ಮಕ್ಕಳು. ಅವರಲ್ಲಿ ಓಲಗ ಎಂಬುವನು ರೋಗದಿಂದ ಸತ್ತನು. ಅಲೆಕ್ಸಾಂಡರನು ಗಲ್ಲಿಗೇರಿಸಲ್ಪಟ್ಟನು. ಉಳಿದ ಡಿಮಿಟ್ರೀಅನ್ನಾ ಮತ್ತು ಮೇರಿ ಇವರು ರಶ್ಯದ ಕಮ್ಯೂನಿಸ್ಟ್ ಅಂದೋಳನದಲ್ಲಿ ಸೇರಿದ್ದರು.

1887ನೇ ಶರದ್ಋತುವಿನಲ್ಲಿ ಲೆನಿನ್ನನು ಹೈಸ್ಕೂಲಿನಲ್ಲಿ ಪಾಸಾಗಿ ಕಾಲೇಜಿಗೆ ಸೇರಿದನು. ಆದರೆ ಮುಂದಿದ ಡಿಶಂಬರೆನಲ್ಲೇ ವಿದ್ಯಾರ್ಥಿಗಳು ಬಂಡೆಬ್ಬಿಸಲು ಲೆನಿನ್ನನು ಹೊರಗಟ್ಟಲ್ಪಟ್ಟನು. ಅವನನ್ನು ಅವರಜ್ಜನ ವಶದಲ್ಲಿಟ್ಟು ಪೋಲೀಸರು ಉಸ್ರುವಾರಿಯಲ್ಲಿದ್ದರು.

ಈ ರೀತಿ ವಿದ್ಯಾರ್ಥಿದೆಶೆಯಿಂದ ರಾಜಕೀಯಕ್ಕೆ ಆರಂಭವಾಯಿತು. ಇವನು ತನ್ನನ್ನು ಕಾಲೇಜಿಗೆ ಪುನಃ ತೊಗಿಸಿಕೊಳ್ಳಬೇಕೆಂದು ಅನೇಕ ಸಾರಿ ಬರೆದುಕೊಂಡನು. ಯಾರೂ ಕೇಳಲಿಲ್ಲ. 1891ರಲ್ಲಿ ಪೀಟರ್ಸ್ ಬರ್ಗ್‌ನಿಂದ ಸ್ವಂತ ವ್ಯಾಸಂಗಿಯಾಗಿ ಪರೀಕ್ಷೆಗೆ ಕೂರಲು ಅನುಮತಿ ಸಿಕ್ಕಿತು. ಅಲ್ಲಿ ಡಿಗ್ರಿಯನ್ನು ಹೊಂದಿ ಒಂದು ವರ್ಷದ ವರೆಗೆ ಒಬ್ಬ ವಕೀಲರ ಬಳಿ ಕೆಲಸ ಮಾಡಿದನು. ಆದರೆ ದೇವರು ಅವನನ್ನು ಸೃಷ್ಟಿಸಿದ್ದು ವಕೀಲಿಗಾಗಿ ಅಲ್ಲ. ಜಗತ್ತಿನ ಲಕ್ಷೋಪಲಕ್ಷ ಪೋಷಿತರ ಪರವಾಗಿ ಕ್ರಾಂತಿಕಾರಕ ವಕೀಲಿಯನ್ನು ಮಾಡಲಿಕ್ಕಾಗಿ! ಲೆನಿನ್ನನು ಜಾರ್ ಸರ್ಕಾರದ ನ್ಯಾಯಾಲಯಕ್ಕೆ ನಮಸ್ಕಾರ ಹೊಡೆದು ಸಾಮ್ಯವಾದದ ಪ್ರಚಾರದಲ್ಲಿ ತೊಡಗಿದನು.

ಲೆನಿನ್ನನಿಗೆ ಈ ಜನ ಸೇವೆಯ ಪುರಸ್ಕಾರದಿಂದ ದೊರತು ದಾದರೂ ಏನು? ಸೈಬೀರಿಯಾದಲ್ಲಿನ ತಪಸ್ಸು, ವಿದೇಶಗಳಲ್ಲಿ ಸಂಚಾರ, ಸ್ವಿಜ್ಜರ್‌ಲೆಂಡ್, ಮತ್ತು ಫ್ರಾನ್ಸ್‌ಗಳಲ್ಲಿನ ಅಲೆದಾಟ ಇವೇ. ಆದರೆ ಈ ಯಾತನೆಗಳಿಂದ ಲೆನಿನ್ನನು ಎಳ್ಳಷ್ಟು ಕುಗ್ಗಲಿಲ್ಲ ಇವನಿಗೆ ತೊಂದರೆಗಳು ಬಂದಷ್ಟೂ ಅವನ ಚಿತ್ತಸ್ಥೈರ್ಯವು ಮತ್ತಷ್ಟು ಬಲವಾಯಿತು. ಅವನ ವೈರಿಗಳು ಸಹ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತಾಯಿತು.

ಈಮೆನ್‌ಜೆವಿಕ್ ದಳದ ಮುಖಂಡನಾದ ಡಾನ್ಯನು ರೀತಿ ಹೇಳಿದ್ದಾನೆ, "24ಗಂಟೆಯೂ ಕ್ರಾಂತಿಯಲ್ಲೇ ಮುಳಗಿ ಕ್ರಾಂತಿಯ ಹೊರತು ಮತ್ತೇನನ್ನೂ ಯೋಚಿಸದ, ಮತ್ತು ನಿದ್ದೆಮಾಡುವಾಗಲೂ ಕೂಡ ಕ್ರಾಂತಿಯ ಸ್ವಪ್ನಗಳನ್ನೇ ಕಾಣುವ ಇಂತಹ ವ್ಯಕ್ತಿಯು ಬೇರೆ ಯಾರೂ ಇಲ್ಲ" ಇದರಿಂದ ಲೆನಿನ್ನಗೆ ಕ್ರಾಂತಿಯ ಹುಚ್ಚು ಎಷ್ಟು ಮಟ್ಟಿಗೆ ಹಿಡಿದಿತ್ತೆಂಬುದು ಗೊತ್ತಾಗುತ್ತದೆ.

ಲೆನಿನ್ನನು ವಿಶ್ವದ ಕ್ರಾಂತಿಕಾರದಲ್ಲಿ ಅಗ್ರಗಣ್ಯನಾಗಿದ್ದರೂ ಸಾಮಾಜಿಕ ವಿಚಾರಗಳಲ್ಲಿ ಸಹ ಉತ್ತಮನಾದ ವಿಚಾರಕನಾಗಿದ್ದನು. ಇವನು ರಾಜಕೀಯ, ಸಾಮಾಜಿಕ, ನೈತಿಕ ಮೊದಲಾದ ಅನೇಕ ವಿಚಾರಗಳಲ್ಲಿ ತನ್ನ ಅಭಿಪ್ರಾಯವನ್ನು ಪ್ರಕಟಿಸಿರುವನು. ಕ್ರಾಂತಿಯ ನಂತರ ರಷ್ಯದಲ್ಲಿ ಮುಕ್ತ ಪ್ರೇಮದ ಬಿರುಗಾಳಿಯು ಬೀಸಿತು. ಲೆನಿನನು ಇದನ್ನು ವಿರೋಧಿಸಿದನು. "ಪ್ರೇಮದ ಈ ಹೊಸಸಿದ್ಧಾಂತವು ನನಗಂತೂ ಬುರ್ಜುವಾ ಪದ್ಧತಿಯಂತೆ ತೋರುತ್ತಿದೆ. ಈ ಪದ್ಧತಿಯು ವೇಶ್ಯಾಲಯಗಳು ವೃದ್ಧಿ ಹೊಂದಲು ಅನುಕೂಲವಾಗಿದೆ. ಒಬ್ಬ ಕಮ್ಯೂನಿಸ್ಟನ ದೃಷ್ಟಿಯಿಂದ ನನಗೆ ಇದರಲ್ಲಿ ಸಹಾನುಭೂತಿಯಿಲ್ಲ" ಇದೇ ಲೆನಿನ್ನನ ಅಭಿಪ್ರಾಯ.

ಲೆನಿನ್ನನು ಕುಡುಕನಲ್ಲ. ವ್ಯಕ್ತಿಗತ ಜೀವನವು ಲೆನಿನ್ನನಿಗೆ ಆಗದು. ಇಸ್ಕಾಯಿ ಸಂಪಾದಕೀಯ ಸಮಿತಿಯವರು ಒಬ್ಬ ಕಾಮರೇಡಿನ ಮೇಲೆ ಆಕ್ಷೇಪಗಳನ್ನು ಹೊರಿಸಿದರು. ವಿಚಾರಣೆಯಲ್ಲಿ ಅನೇಕ ವ್ಯಕ್ತಿಗತ ವಿಷಯಗಳು ಮುಂದಿಡಲ್ಪಟ್ಟವು. ಕೂಡಲೇ ಲೆನಿನ್ನನು ಸಿಟ್ಟುಗೊಂಡು ಆ ಸಮಿತಿಯಿಂದ ದೂರ

ವಾದನು. ರಾಜಕೀಯ ಕಾರಣಗಳಿಂದ ಪರಸ್ಪರ ಸಂಬಂಧವು ಮುರಿಯುವ ಸಂಭವ ಒದಗಿದರೆ ಲೆನಿನನು ವಿಚಲಿತವಾಗಿ ಹೋಗುತ್ತಿದ್ದನು. ಕಾರಣ ಇವನು ಮನುಷ್ಯ ಮನುಷ್ಯರಲ್ಲಿ ಅಷ್ಟು ಪ್ರೇಮವನ್ನು ಇಡುತ್ತಿದ್ದನು. ಲೆನಿನನ ಪತ್ನಿಯಾದ ಶ್ರೀಮತಿ ಕೃಪಸ್ಕಾ ಈ ರೀತಿ ಬರೆದಿರುವಳು. "ಮೆಂಷವಿಕ್ ಜನರ ಸಂಬಂಧವು ಮುರಿಯುವ ಸಮಯ ಬಂದಾಗ ನನ್ನ ಪತಿಯು ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಸಂಕಟಪಡುತ್ತಿದ್ದನು".

ಆದರೆ ಈ ವ್ಯಕ್ತಿಗತ ಸ್ನೇಹದಿಂದ ರಾಜಕೀಯ ಕಾರ್ಯಗಳಿಗೆ ತೊಂದರೆಯಾಗಗೊಡುತ್ತಿರಲಿಲ್ಲ. ಒಂದು ಕಡೆ ಇಷ್ಟು ಪ್ರೇಮ ಇನ್ನೊಂದು ಕಡೆ ಸಾರ್ವತ್ರಿಕ ಹಿತದ ದೃಷ್ಟಿಯಲ್ಲಿ ನಿರ್ದಾಕ್ಷಿಣ್ಯ. ಗೋರ್ಕಿಯು ಧರ್ಮ ಮತ್ತು ಸಂಸ್ಕೃತಿಗಳ ಸಮರ್ಥನೆ ಮಾಡಲು ಲೆನಿನ್ನನು ಅವನಿಗೆ ಮೂಗು ಮುರಿಯುವಂತೆ ಉತ್ತರ ಕೊಟ್ಟನು. ಆದರೂ ಆ ಮಹಾ ಕಲಾಕಾರನಿಗೆ ಆದರ ತೋರಿಸುತ್ತಿದ್ದನು. ಅನೇಕ ಹಳೆ ಕ್ರಾಂತಿಕಾರಿಗಳ ಅಭಿಪ್ರಾಯಕ್ಕೆ ವಿರೋಧವಾಗಿದ್ದರೂ, ಸಮಯ ದೊರೆತಾಗ ಲೆಲ್ಲಾ ಅವರಿಗೆ ಸಹಾಯ ಮಾಡುತ್ತಿದ್ದನು. ಆದರೆ ಸುವಿಧಾವಾದಿಗಳನ್ನು ಕಂಡರೆ ಮಾತ್ರ ಲೆನಿನ್ನನಿಗೆ ಆಗದು. ಬ್ರಿಟಿನ್ನಿನ ಲೇಬರ್ ಪಾರ್ಟಿ ಮತ್ತು ಮೆಕ್ಡೊನಾಲ್ಡ್ ಪಂಥದವರನ್ನು ಕಂಡರೆ ಬಹಳ ಸಿಟ್ಟು. ಇದಲ್ಲದೆ ಬಂಡವಾಳಗಾರರ ದೇಶಗಳಲ್ಲಿನ ರಾಷ್ಟ್ರೀಯತೆಯನ್ನು ದ್ವೇಷಿಸುತ್ತಿದ್ದರು. ಅವರು ಈ ರೀತಿ ಹೇಳುತ್ತಿದ್ದರು. "ಮಾನವರ ಐಕ್ಯತೆಯ ಆವರಣದಲ್ಲಿ ಬಂಡವಾಳಗಾರರು ಕಾನೂನಿನ ಸಮಾನತೆಯನ್ನು ಮುಂದಿಟ್ಟು ಪೋಷಿತ ಜನರನ್ನು ತಪ್ಪು ದಾರಿಗೆ ಎಳೆಯುವರು. ಎಲ್ಲಿ ವರೆಗೆ ಆರ್ಥಿಕ ಸ್ಥಿತಿಯು ಸಮಾನವಾಗಿರುವುದಿಲ್ಲವೊ ಅಲ್ಲಿಯ ವರೆಗೆ ಕಾನೂನಿನ ಸಮಾನತೆಯು ಅರ್ಥರಹಿತವಾದುದು. ಸೋವಿಯೆಟ್ ರಾಜ್ಯದಲ್ಲಿ ವಯಸ್ಕರೆಲ್ಲರಿಗೂ ಮತಾಧಿಕಾರವಿದೆ. ಆದರೆ ಇದಕ್ಕೂ ಮೊದಲು ಅಲ್ಲಿ ಆರ್ಥಿಕ ಸಮಾನತೆಯು ಇದೇ ಹೊರತು ಕಾನೂನಿನ ಸಮಾನತೆಯಲ್ಲಿ ಈ ರೀತಿಯಾದ ವಾಸ್ತವಿಕ ಸಮಾನತೆಯ ಆಧಾರದ ಮೇಲೆ ಅಲ್ಲಿಯ ಭವನವನ್ನು ಕಟ್ಟಲಾಗಿದೆ.

ಲೆನಿನ್ನನು ಉತ್ತಮ ಸಾಹಿತಿಯಲ್ಲ. ಲೇಖಕನೂ ಅಲ್ಲ. ಒಬ್ಬ ಕ್ರಾಂತಿಕಾರಿ ಮುಖಂಡನಾಗಿದ್ದನು. ತನ್ನ ಕೆಲಸಕ್ಕೆ ಬೇಕಾಗುವಷ್ಟನ್ನು ಮಾತ್ರ ಬರೆಯುತ್ತಿದ್ದನು. ಅವನ ರಚನೆಗಳಲ್ಲಿ ಶಬ್ದಾಡಂಬರಗಳಿರಲಿಲ್ಲ. ಆಡಂಬರ ಹೀನವೂ ಸಂಕ್ಷೇಪವೂ ಶುದ್ಧವೂ ಹೃದಯದ ಮೇಲೆ ಪರಿಣಾಮವನ್ನು ಮಾಡುವದೂ ಆದ ಭಾಷೆಯೇ ಅವನ ಭಾಷೆ.

ಲೆನಿನ್ನನು ಕ್ರಾಂತಿಯ ಸಂಬಂಧದಲ್ಲಿ ಹೇಳಿರುವುದನ್ನು ತಿಳಿಯುವುದು ಅಗತ್ಯ. ಅದೇನೆಂದರೆ. "ಕ್ರಾಂತಿಯು ಎಲ್ಲಿ ಮೊದಲಾಗುವುದೆಂಬುದನ್ನು ಈಗಲೇ ಹೇಳುವುದು ಅಸಾಧ್ಯ ಆದರೆ ಇಷ್ಟನ್ನು ಮಾತ್ರ ಹೇಳಬಹುದು. ಎಲ್ಲ ಸಾಧಾರಣ ಜನತೆಯು ಜಡವಾಗಿದೆಯೋ, ಅಲ್ಲಿ ಕ್ರಾಂತಿಯಾಗುವುದು ಅಸಂಭವ. ಆದರೆ ಭಂಡವಾಳಗಾರರು ಎಲ್ಲಿ ದುರ್ಬಲರಾಗಿರುವರೋ ಅಲ್ಲಿ ಕ್ರಾಂತಿಯಾಗಬಹುದು."

ಜನತೆಯು ತನ್ನ ಪ್ರೇಮದ ಮುಖಂಡನನ್ನು ವಿಶ್ವ ಕ್ರಾಂತಿಯ ಪ್ರೇರಣ ಶಕ್ತಿಯನ್ನು, ಸೋವಿಯಟ್ ಸರ್ಕಾರದ ಮೊದಲನೆ ನಾಯಕನನ್ನು ಕಳೆದುಕೊಂಡಿತು. ಲೆನಿನ್ನನು ಹತ್ತಿಸಿರುವ ದೀಪವು ತನ್ನ ಪ್ರಕಾಶವನ್ನು ವಿಶ್ವದಲೆಲ್ಲಾ ಬೀರಲಿ. ಜನತೆಯು ಮುಕ್ತಿಯ ಮಾರ್ಗವನ್ನು ಹುಡುಕುತ್ತಿದೆ. ರಷ್ಯದ ಭೂಮಿಯಲ್ಲಿ ಲೆನಿನ್ನನು ಕೂಲಿಗಾರರ ರೈತರ ಸರ್ಕಾರದ ಯಾವ ಬೀಜವನ್ನು ಬಿತ್ತಿದ್ದನೋ ಅದು ಇಂದು ದೊಡ್ಡ ಮರವಾಗಿ ನಿಂತಿದೆ.

'ಪ್ರಕಾಶಿನಿ'ಯಿಂದ

ಹಾವು-ಚೇಳು-ವಿಷಕ್ಕೆ ಮಾಂತ್ರಿಕ ಚಿಕಿತ್ಸೆ:—ಶ್ರೀಮಾನ್ ಟಿ. ಎಸ್. ರಾಮಚಂದ್ರರಾವ್, ಕ್ಲೇವ್ಸ್ ಇನ್ಸ್ಪೆಕ್ಟರ್, ಎನ್. ಎಸ್ ರೈಲ್ವೆ, ಸಿಕಂದರಾಬಾದ್ ಎಂಬವರಿಗೆ ಒಬ್ಬ ಮಹಾತ್ಮರು ಮಂತ್ರೋಪದೇಶಮಾಡಿ, ಅದನ್ನು ಸಿದ್ಧಿ ಮಾಡಿಕೊಂಡ ಬಳಿಕ ಅವರ ಹೆಸರನ್ನು ಉಚ್ಚರಿಸಿ ನೀರನ್ನು ಪ್ರೋಕ್ಷಿಸುವುದರಿಂದ ಹಾವು, ಚೇಳು ಮತ್ತೆ ಯಾವ ವಿಷ ಜಂತುಗಳ ವಿಷವಾದರೂ ನಿವಾರಣೆಯಾಗುವುದೆಂದು ತಿಳಿಸಿದರು. ಅವರಂತೆ ಅವರು ಈಗ 2-3 ವರುಷಗಳಿಂದ ಅನೇಕರಿಗೆ ಚಿಕಿತ್ಸೆಮಾಡಿರುವರು. ಸಾರ್ವಜನಿಕರಿಗೆ ಅದು ಉಪಯೋಗವಾಗುವಂತೆ ಈಗ ಅವರು ಅದನ್ನು ಬಹಿರಂಗವಾಗಿ ಇಲ್ಲಿ ಪ್ರಕಟಿಸಿರುವರು. ಹಾವು ಕಡಿದ ಮನುಷ್ಯನ ಹತ್ತಿರವಿರುವವರು ಯಾರಾದರೂ ಸರಿ ಅವರು ರೋಗಿಯ ಮುಖದ ಮೇಲೆ ನೀರು ಸಿಂಪಡಿಸುತ್ತ, ಶ್ರದ್ಧಾಪೂರ್ವಕವಾಗಿ—"ನಿನಗೆ ವಿಷನಿವಾರಣೆಯಾಯಿತು ಎದ್ದೇಳು. ಟಿ. ಎಸ್. ರಾಮಚಂದ್ರ ರಾವ್ ಅವರ ಆಪ್ಪಣೆಯಾಗಿದೆ. ಎದ್ದೇಳು ಏಳು". ಹೀಗೆ ರೋಗಿಯು ಏಳುವವರೆಗೆ ಮಧ್ಯೆಮಧ್ಯೆ ಮುಖದ ಮೇಲೆ ನೀರು ಚಿಮುಕಿಸುತ್ತ, ಮನಸ್ಸು ಊರಿ ಸಂಕಲ್ಪವನ್ನು ಮನಸ್ಸಿನಲ್ಲಿಯೆ ಉಚ್ಚರಿಸುತ್ತಿರಬೇಕು. ಅನಂತರ ಗುಣಹೊಂದಿದ ರೋಗಿಯ ಹೆಸರು,ವಯಸ್ಸು, ವಿಳಾಸಗಳನ್ನು ಈ ಕೆಳಗಿನ ವಿಳಾಸಕ್ಕೆ. ಗುಣವು ಶಾಶ್ವತಗೊಳ್ಳುವುದಕ್ಕಾಗಿ ಕಾರ್ಡು ಬರೆದು ತಿಳಿಸಬೇಕು. ಈ ಚಿಕಿತ್ಸೆ ಮಾಡಿದವರು ಯಾವ ಪ್ರತಿಫಲವನ್ನೂ ತೆಗೆದುಕೊಳ್ಳಕೂಡದು. ಚೇಳು ಕಡಿದವರಿಗೆ ಕೂಡ ಇದೇ ರೀತಿ ಚಿಕಿತ್ಸೆ ಮಾಡಿ 3-4 ಸಲ ಕಡಿದ ಕೈಕಾಲುಗಳನ್ನು ಒದರು (ಝಾಡಿಸು)ವಂತೆ ಮಾಡಿದರೆ ಗುಣವಾಗುವುದು.

ಕಾರ್ಡು ಬರೆಯಬೇಕಾದ ವಿಳಾಸ:—ಶ್ರೀ. ಟಿ. ಎಸ್. ರಾಮಚಂದ್ರ ರಾವ್, C o ವೈದ್ಯಗುರು ಡಿ. ಕೆ. ಬಾರದ್ವಾಜರು ಪೋಸ್ಟ್ ಬಸವನಗುಡಿ, ಬೆಂಗಳೂರು.

ಯುರೋಪಿನಲ್ಲಿ ಸ್ತ್ರೀಯರ ಮಾರಾಟ!

ಬಾಲಕಿಯರನ್ನು ದುರ್ಮಾರ್ಗಕ್ಕೆಳೆಯುವ — ಸಾರ್ವತ್ರಿಕ ವ್ಯಾಪಾರ! —

ಮನುಷ್ಯ ಸಮಾಜದ ಚರಿತ್ರೆಯಲ್ಲಿ ಒಂದು ಕಡೆ ನಾಗರಿಕತೆ, ಪ್ರಗತಿ ಮತ್ತು ಹೊಸ ಹೊಸ ಸಂಶೋಧನೆಗಳಿದ್ದರೆ, ಮತ್ತೊಂದು ಕಡೆ ನಾಶ, ಅನಾಗರಿಕತೆ, ಬಲ ಪ್ರಯೋಗಗಳೂ ಕಂಡುಬರುತ್ತವೆ. ನಿಗ್ರೋ ಜನರನ್ನು ಗುಲಾಮರನ್ನಾಗಿ ಮಾಡುವುದು, ರೆಡ್ ಇಂಡಿಯನರ ಜೀವ ಸಹಿತ ಸುಡುವುದೇ ಮುಂತಾದ ವಿಷಯಗಳು ಯಾರ ಹೃದಯವನ್ನು ತಾನೇ ಕದಲಿಸುವುದಿಲ್ಲ? ಆದರೆ ಸ್ತ್ರೀ ಮತ್ತು ಮಕ್ಕಳ ವ್ಯಾಪಾರವು ಇದಕ್ಕಿಂತ ಹೆಚ್ಚು ಭಯಂಕರವಾಗಿದೆ. ಈ ರೀತಿಯ ಘಟನೆಗಳು ಭಾರತ ಮತ್ತು ಏಷ್ಯದ ಇತರ ದೇಶಗಳಲ್ಲಿ ಮಾತ್ರವಲ್ಲದೆ, ತಾವು ಬಹಳ ಮುಂದರಿದವರೆಂದು ಹೇಳಿಕೊಳ್ಳುತ್ತಿರುವ ಯೂರೋಪಿನಲ್ಲಿ ಸಹ ನಡೆಯುತ್ತವೆ.

ಏನೂ ಅರಿಯದ ಬಾಲಕಿಯರನ್ನು ಮಾರಾಟದ ಸರಕಿನಂತೆ ಕೊಂಡು ಮಾರುವುದು ಅತ್ಯಂತ ಅಕ್ಷಮ್ಯವಾದ ಅಪರಾಧ, ಹೀನವಾದ ಪಾಪಕೃತ್ಯ ಸಾವಿರಾರು ವರ್ಷಗಳಿಂದ ಈ ದುರ್ವ್ಯಾಪಾರವು, ಈ ನಾಚಿಕೆಗೇಡಿನ ವ್ಯಾಪಾರವು ಸಾರ್ವತ್ರಿಕವಾಗಿ ನಡೆಯುತ್ತಿದೆ. ಆದರೂ ಇದುವರೆಗೆ ಯಾರೂ ಇದಕ್ಕೆ ವಿರೋಧವಾಗಿ ನಿಂತು ಪರಿಣಾಮಕಾರಿಯಾಗುವಂತೆ ಕೆಲಸಮಾಡಿರುವುದಿಲ್ಲ.

ಭಾರತದಲ್ಲಿ ಸಹ ಈ ವ್ಯಾಪಾರವು ಬಹಳ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ಸ್ತ್ರೀಯರಲ್ಲಿ ಪ್ರಲೋಭನೆಯನ್ನು ಹುಟ್ಟಿಸಿ ಅವರು ಮನೆಯಿಂದ ಓಡಿಬರುವಂತೆ ಮಾಡಿ, ನಂತರ ಅವರನ್ನು ಮಾರಿಬಿಡುವರು. ಹುಡುಗಿಯರ ವ್ಯಾಪಾರವು ವಿಶೇಷವಾಗಿ ಮಧ್ಯ ಪ್ರಾಂತ್ಯದಲ್ಲಿ ನಡೆಯುತ್ತದೆ. ಅಲ್ಲಿ ಹುಡುಗಿಯರನ್ನು ಓಡಿಸಿಕೊಂಡು ಹೋಗುವ ಸುವ್ಯವಸ್ಥಿತವಾದ ಸಂಸ್ಥೆಗಳೇ ಇವೆ. ಇವರು ಹುಡುಗಿಯರನ್ನು ಪಂಜಾಬ್ ಮತ್ತು ಸರಹದ್ದು ಪ್ರಾಂತ್ಯಗಳಲ್ಲಿ ಮಾರುವರು. ಕೆಲವರು ಇವರನ್ನು ತಮ್ಮ ಪತ್ನಿಯರನ್ನಾಗಿ ಮಾಡಿಕೊಳ್ಳುವರು ಆದರೆ ಕೆಲವು ವೇಳೆ ಆ ಪತಿಗಳೇ ತಮ್ಮ ಪತ್ನಿಯರನ್ನು ಪುನಃ ಇತರರಿಗೆ ಮಾರುವರು. ಈರೀತಿ ಒಬ್ಬೊಬ್ಬ ಸ್ತ್ರೀಯು ಅನೇಕ ಕಡೆ ಹರಾಜು ಮಾಡಲ್ಪಡುವಳು.

ಭಾರತದಂತಹ ಪರಾಧೀನವು, ಬಹಳ ದರಿದ್ರವೂ ಆದ ದೇಶದಲ್ಲಿ ಈ ವ್ಯಾಪಾರವು ನಡೆಯುವುದು ಆಷ್ಟೇನೂ ಆಶ್ಚರ್ಯಕರವಾದುದಲ್ಲವಾದರೂ, ಅಮೆರಿಕ ಮತ್ತು ಯೂರೋಪಿನಂತಹ ನಾಗರಿಕ ದೇಶಗಳಲ್ಲಿ ಸಹ ಸ್ತ್ರೀಯರು ಮಾರಾಟವಾಗುವುದು ಬಹಳ ಆಶ್ಚರ್ಯಕರವಾದುದಲ್ಲವೇ?

19ನೇ ಶತಮಾನದಲ್ಲಿ ಯೂರೋಪಿನಲ್ಲಿ ಸಾಮಾನ್ಯವಾಗಿ ಪ್ರತಿ ದೇಶದಲ್ಲಿಯೂ ಸ್ತ್ರೀಯರನ್ನು ಮಾರುವ ಸಂಸ್ಥೆಗಳಿದ್ದುವು. ಪ್ರತಿ ವರ್ಷವೂ ಸಾವಿರಾರು ಸ್ತ್ರೀಯರನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ, ಅವರಿಗೆ ವ್ಯಭಿಚಾರವನ್ನು ಕಲಿಸಿ, ತನ್ಮೂಲಕ ತಮ್ಮ ಜೀವನ ನಿರ್ವಾಹ ಮಾಡುತ್ತಿದ್ದರು. ಕ್ರಿ.ಶ. ಮೊದಲನೆ ಶತಮಾನದಿಂದ ಏಳನೆ ಶತಮಾನದ ವರೆಗೆ ಇಂಗ್ಲೆಂಡಿನ ಮೇಲೆ ಆದ ಆಕ್ರಮಣಗಳು ಇದೇ ಉದ್ದೇಶದಿಂದ ನಡೆದುವು. ಯುದ್ಧದಲ್ಲಿ ಕೈಗೆಸಿಕ್ಕಿದ ಸಾಮಾನನ್ನು ದೋಚುವುದರ ಜೊತೆಗೆ, ಸಾವಿರಾರು ಮುಂದಿ ಸುಂದರಿಯರನ್ನು ಸಹ ಅಪಹರಿಸಿಕೊಂಡು ಯೂರೋಪಿನಲ್ಲೆಲ್ಲಾ ಮಾರುತ್ತಿದ್ದರು ಡೆನ್ಮಾರ್ಕಿನವರಿಗೆ ಈ ವ್ಯಾಪಾರದಲ್ಲಿ ಬಹಳ ಲಾಭ ದೊರೆಯಿತು. ವಿಲಿಯಂ ಆಫ್ ಆರೆಂಜ್‌ನ ಕಾಲದ ವರೆಗೆ ಈ ವ್ಯಾಪಾರವು ವಿಶೇಷವಾಗಿ ನಡೆಯುತ್ತಿದ್ದು ಅವನ ಕಾಲದಲ್ಲಿ ಇಂಗ್ಲೆಂಡಿನಿಂದ ಹುಡುಗಿಯರನ್ನು ತೆಗೆದುಕೊಂಡು ಹೋಗುವುದು ಅಪರಾಧವೆಂ

ದು ಕಾನೂನಾಯಿತು. ಆದರೆ ಈ ವ್ಯಾಪಾರವು ಗುಪ್ತ ರೀತಿಯಿಂದ ನಡೆಯುತ್ತಲೇ ಇತ್ತು. ಹುಡುಗಿಯರನ್ನು ಐರ್ಲೆಂಡಿಗೆ ಗುಪ್ತ ರೀತಿಯಲ್ಲಿ ಕರೆದುಕೊಂಡು ಹೋಗಿ, ಅಲ್ಲಿಂದ ಹಡಗಿನ ಮೇಲೆ ಬೇರೆ ಬೇರೆ ದೇಶಗಳಿಗೆ ಕಳುಹಿಸುತ್ತಿದ್ದರು.

ಫ್ರಾನ್ಸಿನಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ದಳ್ಳಾಲಿಗಳ ಮೂಲಕ ಸುಂದರ ಹುಡುಗಿಯರನ್ನು ತರಿಸಿಕೊಳ್ಳುತ್ತಿದ್ದರು. ಈ ದಳ್ಳಾಲಿಗಳು ಸುಂದರ ಯುವತಿಯರಿಗೆ ಆಸೆ ಹುಟ್ಟಿಸಿ ಅವರನ್ನು ಐಶ್ವರ್ಯವಂತರ ಮನೆಗೆ ಕರೆದೊಯ್ಯುವುದಾಗಿ ಹೇಳಿ, ಫ್ರಾನ್ಸಿನ ಧನಿಕ ಜಮೀನ್ದಾರರಿಗೆ ಮಾರುತ್ತಿದ್ದರು. 1875ರಲ್ಲಿ ಯೂರೋಪಿನಲ್ಲಿ ಒಟ್ಟು 90 ಸಾವಿರ ಸ್ತ್ರೀಯರು ಆಪಹರಿಸಲ್ಪಟ್ಟಿದ್ದರಿಂದ ಮೇಲೆ ಈ ವ್ಯಾಪಾರವು ಎಷ್ಟು ಹೆಚ್ಚಾಗಿ ನಡೆಯುತ್ತಿತ್ತೆಂಬುದನ್ನು ಊಹಿಸಬಹುದು.

ಇಂದಿನ ತುರ್ಕಿ ಇರುವ ಪ್ರದೇಶವು ಆಗ ಈ ವ್ಯಾಪಾರಕ್ಕೆ ಪ್ರಸಿದ್ಧಿಯಾಗಿದ್ದಿತಂತೆ. ಅಲ್ಲಿಂದ ಹುಡುಗಿಯರನ್ನು ಓಡಿಸಿಕೊಂಡು ಈಜಿಪ್ಟ್ ರಶ್ಯಗಳಲ್ಲಿ ಮಾರುತ್ತಿದ್ದರು. ಆ ಭಾಗದ ರಾಜನೆದುರಲ್ಲಿ ಪ್ರತಿನಿತ್ಯವೂ 50 ಮಂದಿ ಸ್ತ್ರೀಯರನ್ನು ತಂದು ನಿಲ್ಲಿಸಲಾಗುತ್ತಿತ್ತು. ಆ ಪೈಕಿ ಆವರು 2-3ಸುಂದರಿಯರನ್ನು ಚುನಾಯಿಸಿಕೊಂಡು, ಉಳಿದವರನ್ನು ಒಂದು ಕೋಣೆಯಲ್ಲಿ ರಾತ್ರಿ ಇಟ್ಟು, ಬೆಳಗಾಗುವುದರೊಳಗೆ ಅಲ್ಲೇ ಇದ್ದ ಒಂದು ಭಾವಿಗೆ ನೂಕಿಬಿಡುತ್ತಿದ್ದರು. ತಾನು ಚುನಾಯಿಸಿಕೊಂಡ ಸ್ತ್ರೀಯರಲ್ಲಿ ರಾತ್ರಿ ಸುಖಪಟ್ಟು, ಬೆಳಗಾಗುವುದರೊಳಗೆ ಆವರನ್ನು ಆದೇ ರೀತಿ ಭಾವಿಗೆ ನೂಕಿಸಿಬಿಡುತ್ತಿದ್ದರು.

19ನೆ ಶತಮಾನದಲ್ಲಿ ಯುರೋಪಿನಲ್ಲಿ ಈ ವ್ಯಾಪಾರವು ಅತ್ಯಂತ ಪ್ರಬಲವಾಗಿ, ಜನರು ಇದಕ್ಕೆ ವಿರೋಧವಾಗಿ ಚಳವಳಿಯನ್ನೆಬ್ಬಿಸಿದರು. 1875ರಲ್ಲಿ ಲಿವರ್ ಪೂಲಿನಲ್ಲಿ ಒಂದು ಅಂತರ್ರಾಷ್ಟ್ರೀಯ ಸಭೆ ನಡೆಯಿತು. ಆದರಲ್ಲಿ ಈ ದುಷ್ಟ ವ್ಯಾಪಾರವನ್ನು ನಿಲ್ಲಿಸಲು ಪ್ರಯತ್ನಮಾಡಬೇಕೆಂಬ ನಿರ್ಣಯವಾಯಿತು. ಆಗ ಒಬ್ಬ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ಏರ್ಪಾಡಾಯಿತು 1882ರಲ್ಲಿ ಇದರ ವರದಿಯು ಹೊರಬಿದ್ದಿತು. ಆದರಲ್ಲಿ 21 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಸಂಖ್ಯಾಕ ಇಂಗ್ಲಿಷ್ ಯುವತಿಯರು ಅನೇಕ ವರ್ಷಗಳ ವರೆಗೆ ಮಾರಲ್ಪಡುತ್ತಿದ್ದರೆಂದೂ, ಅವರಿಗೆ ವ್ಯಭಿಚಾರ ವೃತ್ತಿಯನ್ನು ಕಲಿಸಿ, ಸಂಸ್ಥೆಯ ಮಾಲಿಕರಿಂದ ಗೊತ್ತಾದ ಕಮೀಷನ್ ಪಡೆಯುತ್ತಿದ್ದರೆಂದೂ ತಿಳಿದುಬಂದಿತು. ಇದಾದ ನಂತರ ಕಾನೂನಾಗಿ, ನೂರಾರು ದಳ್ಳಾಲಿಗಳ ಬಂಧನವಾಗಿ, ಅವರಿಗೆ ಬಹಳ ಕಠಿಣ ಶಿಕ್ಷೆಯಾಯಿತು. ಇದೇ ರೀತಿ ಫ್ರಾನ್ಸಿನಲ್ಲಿ ಸಹ ಸಭೆ ನಡೆದು, ಎಲ್ಲ ದೇಶಗಳ ಪ್ರತಿನಿಧಿಗಳೂ ಸೇರಿ ಈ ದುರ್ವ್ಯಾಪಾರವನ್ನು ನಿಲ್ಲಿಸುವಂತೆ ಪ್ರಾರ್ಥಿಸಿದರು. ಅದರಂತೆ ಕಾನೂನು ಸಹ ಆಯಿತು.

1908ರಲ್ಲಿ ಅಮೆರಿಕದಲ್ಲಿ ಸಹ ವಿಚಾರಣೆ ನಡೆದು, ಅನೇಕ ಧನಿಕರನ್ನೂ ದಳ್ಳಾಳಿಗಳನ್ನೂ ಬಂಧಿಸಿದರು. ಅಲ್ಲಿ ಸಹ ಈ ವ್ಯಾಪಾರವು ಅಪರಾಧವೆಂದು ತೀರ್ಮಾನವಾಗಿ ಕಾನೂನಾಯಿತು.

6 ವರ್ಷಗಳ ನಂತರ ಬ್ರೆಜಿಲಿನಲ್ಲಿ ಸಹ ಅದೇರೀತಿಯ ಶಾಸನವಾಯಿತು.

1921ರಲ್ಲಿ ಜಿನೀವಾದಲ್ಲಿ ನಡೆದ ಅಂತರ್ರಾಷ್ಟ್ರ ಸಂಘದ ದೊಡ್ಡ ಸಭೆಯಲ್ಲಿ, 44 ದೇಶಗಳ ಪ್ರತಿನಿಧಿಗಳು ಬಂದಿದ್ದರು. ಆಗ ಸ್ತ್ರೀವ್ಯಾಪಾರವನ್ನು ನಿಲ್ಲಿಸಬೇಕೆಂಬ ನಿರ್ಣಯವಾಗಿ ಆ ಬಗ್ಗೆ ಪರಿಣಾಮಕಾರಿಯಾದ ಪ್ರಯತ್ನಗಳು ನಡೆದುವು.

S. L. S.

ತಾ 22—2—1944ರಿಂದ

ನಿಮ್ಮೂರಿನ ಜಾತ್ರೆಯಾರಂಭ!

ಬಸಂತ್ (ಬೊಂಬೆ ಟೋಕಿಸ್)

ಮುಮ್ತಾಜ್ ಶಾಂತಿ, ಉಲ್ಹಾಸ್, ಪ್ರಮೀಳ, ಸುರೇಖ, ಪಿಥಾವಾಲ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್ ಉಡುಪಿ.

ಬರುವ ಚಿತ್ರಗಳು:

ಫಜ್ಲಿಯವರ ಮಾಸುಮ್

M. P. ಯವರ ಜವಾಬ್

ಅಭಿಪ್ರಾಯ

ನವಯುಗ ವಿಶೇಷಾಂಕದ ಕುರಿತು ಧಾರವಾಡದವರೊಬ್ಬರು ಹೀಗೆ ಬರೆಯುತ್ತಾರೆ:—"ಕಾಗದ ಕಾಣದ ದಿನಗಳಲ್ಲಿ ಇಂತಹ ವಿಶೇಷಾಂಕವನ್ನು ಹೊರಡಿಸಿದುದಕ್ಕಾಗಿ ಅಭಿನಂದನೆಗಳು. 'ನವಯುಗ'ದಲ್ಲಿ ಬೆಳಕು ಕಂಡ ಲೇಖನಗಳ ವೈವಿಧ್ಯ, ಸಾಮಾನ್ಯ ನಿಜವಾಗಿಯೂ ಗನ್ನಡಿಗನೆದೆಯನ್ನು ಬ್ಬಿಸುವಂತಹವು ಕಾರಂತರು ಹೊಸದೊಂದು ಶೈಲಿಯಲ್ಲಿ ಬರೆದ 'ಒಂದಾನೊಂದು ಊರಿನಲ್ಲಿ' ಸದ್ಯದ ಪರಿಸ್ಥಿತಿಯನ್ನು ಮನೋವೇಧಕವಾಗಿ ಚಿತ್ರಿಸುತ್ತಿದೆ. ಯುದ್ಧವನ್ನು ಸೂಕ್ಷ್ಮವಾಗಿ ನಿರೂಕಿಸಿ ನಿಟ್ಟುಸಿರಿಟ್ಟ 'ಜಾಗರದಾರೆ'ರ 'ಯುದ್ಧ ಮತ್ತು ಜಾಗತಿಕ ಶಾಂತಿ' ಯುದ್ಧದ ಸ್ವಭಾವದ ಮೇಲೆ ಪ್ರಖರ ಬೆಳಕನ್ನು ಚೆಲ್ಲುತ್ತಿದೆ. 'ಸ್ವಾತಂತ್ರ್ಯ ಸಿಕ್ಕಿತು ಅಮೇರಿ' ಎಂದು ಕೂಗಿದ ಕಶ್ಯಪರ ಕಲ್ಪನಾಚಿತ್ರ ಕಲ್ಪನೆಯ ತೆರೆಯಲ್ಲಿದ್ದ ಸತ್ಯಚಿತ್ರವನ್ನು ಬೈಲಿಗೆಳೆಯುತ್ತಿದೆ. 'ಕನ್ನಡ ವಾಕ್ಪಟುಗಳ ಹಣೆ ಬರೆಹ'ವನ್ನು ಓದಬಲ್ಲ 'ಎನ್ಕೆ'ಯವರು ಗೃಹಶಾಂತಿಯ ವಿಧಾನವನ್ನು ಹೇಳುತ್ತಲಿದ್ದಾರೆ 'ಇಂದಿನ ನುರಿತ ಕನ್ನಡ ಸಾಹಿತಿಗಳು ಇತ್ತ ಗಮನ ಕೊಡಬೇಕು' ಎಂದುಸುರಿ! 'ಕುಮಾರ'ರ 'ಕರುಳಿನ ಕೂಗು' ಕಿರುಗತೆ ಕರುಳಿನ ಕೂಗನ್ನು ಕೂಗಬಲ್ಲವನಿಗೇ ಕರುಳಿನ ಕೂಗು ಕೇಳುತ್ತಿದೆ ಎಂದು ಸಾರುತ್ತಿದೆ.

'ನವಯುಗ'ದಲ್ಲಿ ಮಹಿಳೆಯರ ಲೇಖನಗಳು ಅಲ್ಲಲ್ಲಿ, ಆದೇಕೆ, ಉಳಿದ ಪತ್ರಿಕೆಗಳಲ್ಲಿಗಿಂತ ಹೆಚ್ಚಾಗಿ ಕಂಡುಬರುತ್ತಿವೆ? ಆದರೆ 'ಈ ಲೇಖನಗಳು ಮಹಿಳೆಯರವು' ಎಂದು ಹೇಳುವ ಸ್ಥಿತಿ ಇನ್ನೂ ಇದೆ. 'ಮುಂದಿನ ಸಾಹಿತ್ಯ ಹೇಗಿರಬೇಕು' ಎಂದು ಮಹಿಳೆಯರೂ ವಿಚಾರಮಾಡುತ್ತಿರುವರೆಂದು ತೋರಿದುದಕ್ಕೆ ಶ್ರೀಮತಿ ರಾಜವಾಡೆಯವರಿಗೆ ಅಭಿನಂದನೆಗಳು!

ಕವನಗಳ ಸಂಖ್ಯೆ ಕಡಿಮೆಯೆಂದೆನಿಸಿದವರೂ 'ಸ್ವಗತ'ದಂತಹ ಕವನಗಳು ಆ ವಿಷಾದವನ್ನು ತೊಳೆಯುತ್ತಿವೆ. 'ದುರ್ಗಾದಾಸ'ರ 'ಶ್ರೀಮುಖ' ಕನ್ನಡಿಗರಿಗೆ ತನ್ನ ಸಿರಿಮೊಗವನ್ನು ತೋರಲಿ! ತೊಳಗಲಿ! 'ರಾಮ ವನಗಮನ ಶೋಕಂ' ಸಂಸ್ಕೃತಮಯವಾಗಿರುವದರಿಂದ, 'ಶೋಕರಸ ಕಂಡೊಡನೆ—ಎಲ್ಲರೆದೆ ಕರಗದೇ'ಎಂದು 'ಸುಬ್ರಾಯನ್'ರು ನುಡಿದುದರಿಂದ ವಿಮರ್ಶೆಗೆ ಆಸ್ಪದವಿಲ್ಲ.

ಒಟ್ಟು 'ನವಯುಗ ವಿಶೇಷಾಂಕ' ಸುಂದರವಾಗಿದೆ ಚಂದ್ರನಂತೆ! ಸುಂದರವಾದ ಭಾವಚಿತ್ರಗಳ ಬೆಳದಿಂಗಳೂ ಅಲ್ಲಿದೆ ಎಂದು ತಿಳಿಸಲು ಆನಂದಿಸುತ್ತೇನೆ.

ಆಮೂರ 'ಗುರುರಾಜ'.

ನವಯುಗ ವಿಶೇಷಾಂಕದ ಕೆಲವೇ ಪ್ರತಿಗಳು ದೊರೆಯುತ್ತವೆ. ಬೆಲೆ ಎಂಟಾಣೆ ಒಂಭತ್ತಾಣೆ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ರವಾನಿಸಲಾಗುವುದು.

ಇಂದೇ ಆರ್ಡರು ಕೊಡಿರಿ

ಮೆನೇಜರ್, **ನವಯುಗ**, ಉಡುಪಿ.

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ನಿಮ್ಮಲ್ಲಿ ನವೀನ ಪ್ರಕಾಶವೊಂದು ಉದಯವಾಗಬೇಕೇ?

ಪ್ರಕಾಶ ವನ್ನೋದಿರಿ.

ಸುಪ್ರಸಿದ್ಧ ಹಿಂದೀ ಸಾಹಿತಿಗಳೂ ದೇಶಭಕ್ತರೂ ಆದ **ಶೇಠ್ ಗೋವಿಂದದಾಸ್**, ಎಂ. ಎಲ್. ಎ., ಅವರು ಬರೆದ ಕ್ರಾಂತಿಕಾರಿಕ ಸಾಮಾಜಿಕ–ರಾಜಕೀಯ ನಾಟಕದ ಕನ್ನಡ ಅನುವಾದ.

ಅನುವಾದಕಿ–**ಶ್ರೀಮತಿ ಸರಸ್ವತಿಬಾಯಿ ರಾಜವಾಡೆ.**

ಬೆಲೆ ರೂ. 1—12—0

ರೂ. 2-0-0ರ ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಕಾಶಿನಿ

ಕನ್ನಡ ಮಾಸಪತ್ರಿಕೆ.

ಇದೇ ಕಳದ ಜನವರಿಯಿಂದ ಮೂರನೆ ವರ್ಷಾರಂಭವಾಗಿದೆ

ಚಂದಾ ಮತ್ತು ಜಾಹೀರು ದರಗಳಿಗೆ ಬರೆಯಿರಿ.

ಮೆನೇಜರ್,

'ಪ್ರಕಾಶಿನಿ'

ಉಡುಪಿ, ದ. ಕನ್ನಡ.

Read and Advertise in

'PRAKASHINI' UDIPI.

ಮೇಷ:—ಕೈಗೊಂಡ ಕೆಲಸಗಳೆಲ್ಲಾ ಮನಸಂತೆ ನೆರವೇರುವವು. ಹಣದ ವಿಷಯದಲ್ಲಿಯೂ ನೀವು ಚಿಂತಿಸಬೇಕಾಗಿಲ್ಲ. ಆರೋಗ್ಯವೂ ಸರಿಯಾಗಿರುವುದು. ಗೃಹಕೃತ್ಯ ವಿಚಾರದಲ್ಲಿಯೂ ಕೊರತೆ ಕಾಣದು ಆದರೆ ನಿಮ್ಮ ಕೆಲವು ಕಾರ್ಯಗಳಿಗೆ ಬಾಂಧವರೇ ವಿರೋಧ ತಂದೊಡ್ಡಲಿರುವುದರಿಂದ ಜಾಗ್ರತೆ ಇರಿ. 25, 26, 27. ಧನವ್ಯಯ, ಚೀಸರ.

ವೃಷಭ:—ಪ್ರತಿ ಸ್ಪರ್ಧಿಗಳನ್ನೂ ನಿಮ್ಮ ಪರಾಭವ ಗೊಳಿಸುವಿರಿ. ಧನ ಲಾಭಕ್ಕೆ ತೊಂದರೆಯಿಲ್ಲ. ಸ್ತ್ರೀಸುಖವೂ ಸಿಗಲಿದೆ. ಆರೋಗ್ಯ ತಕ್ಕಮಟ್ಟಿಗಿರುವುದು. ಆದರೂ ನಿಮ್ಮ ಚಿಂತೆಗಳೆಲ್ಲಾ ತೊಲಗಲಾರವು. ಬಂಧುವಿಯೋಗ, ಆಟನ, ಖರ್ಚು, ಕುಟುಂಬದಲ್ಲಿ ಅಸಮಾಧಾನ ಮೊದಲಾದುವುಗಳೆಲ್ಲಾ ಇದ್ದೇ ಇರುವುದು. 22, 28 ಆಯಾಸ, ಉದ್ವೇಗ ಖರ್ಚು.

ಮಿಥುನ:—ತೊಂದರೆಗಳು ಒಂದರ ಮೇಲೊಂದು ಬರಲಿವೆ. ಖರ್ಚಿಗಾಗಿ ಹೆಂಗಸರು ಮಕ್ಕಳ ಕೈಯಿಂದಲೂ ಹಣ ತೆಗೆದುಕೊಳ್ಳ ಬೇಕಾಗುವುದು. ವಿರೋಧಿಗಳು ಸುತ್ತಲೂ ಇರುವರು. ಆದರೂ ಮಡದಿಯು ನಿಮ್ಮ ಕಷ್ಟಗಳಿಗೆ ಸಹಭಾಗಿನಿಯಾಗಿ ನಿಲ್ಲಲಿರುವುದರಿಂದ ಆಷ್ಟೊಂದು ವ್ಯಸನಕಾಣದು. 22, 23, 24 ಭಯ. ಆಯಾಸ.

ಕರ್ಕಾಟಕ:—ನಿಮ್ಮ ಕುಶಾಗ್ರ ಬುದ್ಧಿಯೂ ಕುಂಠಿತವಾಗುವುದರಿಂದ, ಹೆಂಗಸರೊಡನೆ ಕಲಹ, ಧನನಾಶ, ಅನಾರೋಗ್ಯ, ಇತ್ಯಾದಿಗಳನ್ನು ತಂದುಕೊಳ್ಳಲಿರುವಿರಿ. ಆದರೂ ನಿಮ್ಮ ಸ್ಥಾನಮಾನಗಳಿಗೆ ತೊಂದರೆ ಇಲ್ಲ. ಕೈಕೊಂಡಕಾರ್ಯದಲ್ಲಿ ಜಯಿಸುವಿರಿ. ಸಂಪಾದನೆಗೂ ತೊಂದರೆಯಾಗದು. 22, 25, ಸಮಾಜದಲ್ಲಿ ಗೌರವ. ಕಿರಿಯನಸುಖ.

ನಾರ ಭವಿಷ್ಯ

ತಾ. ೨೨-೨-೪೪ರಿಂದ ೨೨-೩-೪೪

ಸಿಂಹ:—ಎಷ್ಟು ರೀತಿಯಿಂದ ಹಣ ಸಂಪಾದಿಸಿದರೂ ಕೈಯಲ್ಲಿ ಕಾಸು ಒಂದು ಕ್ಷಣವೂ ನಿಲ್ಲದು. ಸಣ್ಣ ಸಣ್ಣ ಪ್ರವಾಸ, ಅನಾರೋಗ್ಯ, ಜನನಿಂದೆ, ಹೋದಲ್ಲಿ ಜಗಳ, ಅನಾವಶ್ಯಕವಾದ ಕೆಲಸ, ಮೊದಲಾದುವುಗಳಿಂದ ನಿಮ್ಮ ಮುಖದ ಕಳೆಯೇ ಕುಂದುವುದು. ವ್ಯಾಪಾರಾದಿಗಳಲ್ಲಿ ನಷ್ಟ, 22, 23, 24 ಕಿಂಚಿತ್ ಸುಖ.

ಕನ್ಯಾ:—ಸೋಲಿಗಾಗಿ ಮುಖ ಸಪ್ಪಗೆ ಮಾಡಿಕೊಂಡು ಜನರನ್ನು ನಿಂದಿಸುತ್ತಾ ಕುಳಿತುಕೊಳ್ಳಬೇಡಿರಿ. ಸತತೋದ್ಯೋಗಶೀಲರಾದಲ್ಲಿ ಖಂಡಿತ ಜಯಶೀಲರಾಗುವಿರಿ. ಆರೋಗ್ಯವೂ ಸಾಂಪತ್ತಿಕ ಸ್ಥಿತಿಯೂ ಚನ್ನಾಗಿದ್ದು, ಸ್ಥಾನ ಮಾನಗಳು ವೃದ್ಧಿ ಹೊಂದಲಿವೆ. ಸುಖ ಸಾಧನಗಳಿಗೂ ಕಡಿಮೆಯಾಗದು. 22. 28. ದೀನತೆ, ಅಲ್ಪ ಪ್ರವಾಸ.

ತುಲಾ:—ನಿಮಗೆ ಕಷ್ಟಗಳ ಮೇಲೆ ಕಷ್ಟಗಳು ಬರುತ್ತಿದ್ದರೂ ಧೈರ್ಯ ಗೆಡಬೇಡಿರಿ. ನಿಮ್ಮ ಕೈಯಲ್ಲಿ ಕಾಂಚನ ಕಡಿಮೆಯಾಗಲಿದೆ. ನಿಮ್ಮವರೇ ನಿಮ್ಮನ್ನು ವಿರೋಧಿಸುತ್ತಿರುವರು. ಆದರೂ ನಿಮ್ಮ ಕಾರ್ಯಶಕ್ತಿ ಸರಿಯಾಗಿದ್ದು, ಮಿತ್ರರ ಸಹಾಯವೂ ಸಿಗಲಿರುವುದರಿಂದ ಯಾವುದಕ್ಕೂ ಹೆದರ ಬೇಕಾಗಿಲ್ಲ. 22 23, 24 ಅಪನಂಬಿಕೆ ಅನಾರೋಗ್ಯ.

ವೃಶ್ಚಿಕ:— ಕಿಂಚಿದಸ್ವಾಸ್ಥ್ಯತೆ, ಹೆಂಗಸರಿಂದಾಗಿ ಚೀಸರ, ಪ್ರಯಾಣ ಮೊದಲಾದವುಗಳಿಂದ ನಿಮ್ಮ ನೆಮ್ಮದಿಗೆ ಸ್ವಲ್ಪ ಭಂಗ ಬರಬಹುದಾದರೂ ಬಾಂಧವರ ಸಮಾಗಮ, ಧನ ಲಾಭ, ಶತ್ರುಗಳು ಪರಾಜಯ ಹೊಂದಿ ಕಾರ್ಯ ನೆರವೇರುವಿಕೆ, ಮೊದಲಾದ ಶುಭ ಫಲಗಳೇ ಅಧಿಕವಾಗಿ ಕಾಣಲಿವೆ. 22, 28 ರೋಗಾದಿ ನಾಶ, ಧನ, ಸೌಖ್ಯ, ಲಾಭ.

ಧನು:—ರಾಜಕೀಯ ಹಾಗೂ ಇತರ ವ್ಯವಹಾರಾದಿಗಳಲ್ಲಿ ನಿಮಗೆ ವಿರೋಧಿಗಳು ಹೆಚ್ಚಿರುವುದರಿಂದ ಅಪಾಯ ಜಾಗರೂಕರಾಗಿರುವುದೊಳ್ಳೆಯದು. ಮಿತ್ರರ ಸಹಾಯ ಚನ್ನಾಗಿ ಸಿಗಲಿರುವುದರಿಂದ ಹಿಡಿದ ಕಾರ್ಯದಲ್ಲಿ ಜಯಿಸುವಿರಿ. ಧನಲಾಭಕ್ಕೆ ತೊಂದರೆ ಇಲ್ಲ. ಗೃಹ ಸೌಖ್ಯವೂ ಚನ್ನಾಗಿಯೇ ಇರುವುದು. 23, 24 ಕಾರ್ಯ ಜಯ ಸೌಖ್ಯ.

ಮಕರ:—ಅನಾರೋಗ್ಯ, ಪತ್ನೀ ಪುತ್ರರ ವಿಷಯಕವಾದ ಚಿಂತೆ, ಹಣ, ಕೈಯ್ಯಲ್ಲಿಲ್ಲವಿರುವಿಕೆ. ನಿಮ್ಮ ಸ್ಥಾನಕ್ಕೆ ಸರಿಯಾದ ಮನ್ನಣೆ ಸೊರೆಯದಿರುವಿಕೆ, ಮೊದಲಾದವುಗಳಿಂದ ನಿಮಗೆ ಬಹಳ ಚೀಸರವಾಗಿದ್ದರೂ, ಕಿಂಚಿದ್ಧನ ಲಾಭಕ್ಕೂ ಸ್ತ್ರೀಸುಖಕ್ಕೂ ತೊಂದರೆ ಇಲ್ಲ. ಆಲೋಚನೆ ಹಾಗೂ ಮಾತಿನಲ್ಲಿ ತಪ್ಪಿ ಬೀಳಲಾರಿರಿ. 23, 24, 28 ಒಳ್ಳೆಯದಲ್ಲ.

ಕುಂಭ:—ನೀವು ಒಳ್ಳೆಯ ಮಾತನ್ನೇ ಹೇಳಿದರೂ, ಜನರು ಅನ್ಯಥಾ ತಿಳಿದುಕೊಂಡು, ನಿಮ್ಮ ಗೌರವಕ್ಕೇ ಹಾನಿ ತರಲಿರುವರು. ಖರ್ಚು ಬೆಳೆಯುತ್ತಲೇ ಇರುವುದು. ಹೆಂಗಸರಿಂದಾಗಿ ಸರ್ವತ್ರ ಚೀಸರವೇ ಉಂಟಾಗಲಿದೆ. ಆರೋಗ್ಯ ಸಂಯಾಗಿರದು. ಇಷ್ಟಿದ್ದರೂ ಅಲ್ಪಸ್ವಲ್ಪ ಹಣ ಸಿಗಲಿರುವುದರಿಂದ ಸ್ವಲ್ಪ ಸಮಾಧಾನ. 23, 24, 28 ಕಿಂಚಿತ್ ಶ್ರೇಯಸ್ಕರ.

ಮೀನ:—ಕಿಂಚಿದನಾರೋಗ್ಯದಿಂದಾಗಿ ಸ್ತ್ರೀಸುಖ ವಿಮುಖರಾಗಬೇಕಾದೀತು. ಶತ್ರುಗಳಿಂದಾಗಿ ಸ್ವಲ್ಪ ಪರಾಜಯವನ್ನೂ ಹೊಂದಬೇಕಾಗಬಹುದು. ದೇವರಲ್ಲಿ ಭಕ್ತಿಯಿಟ್ಟಲ್ಲಿ, ಸಮಾಜದಲ್ಲಿ ಗೌರವಾದರಗಳೂ, ವ್ಯಾಪಾರಾದಿಗಳಲ್ಲಿ ಧನ ಲಾಭವೂ ಸಿಗಲಿದೆ. ಕೌಟುಂಬಿಕ ಪರಿಸ್ಥಿತಿಯೂ ಚನ್ನಾಗಿರುವುದು. 23, 24, 28 ಧನ ಹಾನಿ ಕಾರ್ಯ ವಿಘಾತ

Printed and Published by K. H. Shetty at the Navayuga Press, Udipi

1938

ಕರ್ನಾಟಕ ಬಂಧು.

(ಸಂಪಾದಕರು:— ಚೆನ್ನಬಸವಸ್ವಾಮಿ ನಿಮುಪಾಕ್ಷಾರ್ಯ ಹಿರೇಮಠ.)

WORK

ಸವಿತಾದೇವಿ.

KARNATAK BANDHU

ಕರ್ನಾಟಕಬಂಧು

KARNATAK BANDHU A KANNADA WEEKLY GADAG.

ಸಂಪಾದಕರು:— ಚೆನ್ನಬಸವಸ್ವಾಮಿ ವಿರೂಪಾಕ್ಷಾರ್ಯ ಹಿರೇಮಠ

ಸಂಪುಟ ೮] ಗದಗ—ಬುಧವಾರ ತಾ. ೧೫ ನೇ ಜೂನ ೧೯೩೮ [ಸಂಚಿಕೆ ೩೬

ಮೈಸೂರಿನಲ್ಲಿ ಹೊಸಯುಗ

ಮೈಸೂರು ಸಂಸ್ಥಾನ ಸರಕಾರ ಹಾಗೂ ಸಂಸ್ಥಾನ ಕಾಂಗ್ರೆಸ್ಸುಗಳ ಮಧ್ಯೆ ಸಂಧಾನವಾದ ಇತ್ತೀಚೆಗೆ ಮೈಸೂರಿನಲ್ಲೆಲ್ಲ ಮದ್ಯಪಾನವನ್ನು ನಿಲ್ಲಿಸಿಬಿಡಲು ಸರಕಾರವು ನಿಶ್ಚಯಿಸಿದಂತಿದೆ. ಈ ವಿಷಯದಲ್ಲಿ ಮೈಸೂರು ದಿವಾನರವಕಾದ ಸರ್ ಮಿರ್ಜಾ ಇಸ್ಮಾಯಿಲ್‌ರವರು ತುಂಬಾ ಶ್ರದ್ಧೆವಹಿಸಿ ಕಾರ್ಯ ಮಾಡಲು ಸಿದ್ಧರಾಗಿರುವದಂತೂ ಸ್ವಾರಸ್ಯಪೂರ್ಣವಾದ ಸಂಗತಿಯಾಗಿದೆ.

ಜಗತ್ತಿನ ಜನತೆಯನ್ನು ಅಧೋಗತಿಗೊಯ್ಯುವ ಬಲವಾದ ಸಾಧನಗಳಲ್ಲಿ ಮದ್ಯಪಾನಕ್ಕೂ ಒಂದು ಮಹೋನ್ನತ ಸ್ಥಾನ. ಭಾರತದೆಲ್ಲಂತೂ ಈ ಮದ್ಯಪಾನವು ಮಾಡಿರುವ ಜನಾಹುತಗಳು ಅಪಾರವಾಗಿವೆ. ಭಾರತದ ಜನಸಾಮಾನ್ಯರೆಲ್ಲಂತೂ ಮದ್ಯಪಾನದ ಜಟ ಮಿತಿಮೀರಿ ಬೆಳೆದು, ಬಹುಜನ ಭಾರತೀಯರು ತಮ್ಮ ಸ್ವೀ ತಾವು ಮರೆತುಕೊಂಡು ನರಕಜೀವನದಲ್ಲಿ ಕಾಲಕಳೆಯುತ್ತಿರುವುದನ್ನು ಕಣ್ಣಾರೆ ಕಾಣುತ್ತಿದೇವೆ.

ಈ ಭೀಷಣ ನೋಟವನ್ನು ಮರೆಮಾಚುವದಕ್ಕಾಗಿ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸು ಈ ಮೊದಲೊಮ್ಮೆ ಮದ್ಯಕ್ಕೆ ಮೂಲವಾದ ಈಚಲ ಗಿಡಗಳನ್ನೇ ಇಲ್ಲದಾಗಿ ಮಾಡಿಬಿಡುವ ಮಹಾಕಾರ್ಯಕ್ಕೆ ಕೈಹಾಕಿದ್ದಿತು. ಉಗ್ರಧೋರಣವನ್ನು ತಳೆದು ಕಾರ್ಯವನ್ನಾರಂಭಿಸಿತು ಸರಕಾರದ ದಬ್ಬಾಳಿಕೆಯಿಂದಾಗಿ ಅಂದು ಕಾಂಗ್ರೆಸ್ಸಿನ ಕಾರ್ಯ ಯಶಸ್ವಿಯಾಗಲಿಲ್ಲ.

ಕಾಂಗ್ರೆಸ್ಸು ಅಧಿಕಾರ ಸ್ವೀಕರಿಸಿದೊಡನೆಯೇ ಮದ್ಯಪಾನದ ಮಾತಿಗಾರಂಭಿಸಿತು. ಕಾಂಗ್ರೆಸ್ ಮಂತ್ರಿಗಳ ಆಳ್ಳಿಕೆಗೊಳಪಟ್ಟ ಪ್ರಾಂತ್ಯಗಳಲ್ಲಿಯಾದರೂ ಮದ್ಯಪಾನವನ್ನು ಪ್ರತಿಬಂಧಿಸಬೇಕೆಂಬುದಾಗಿ ಯೋಚಿಸಿದರು. ಮದ್ಯಪಾನ ಪ್ರತಿಬಂಧ—ಇದೊಂದು ಸಾಮಾನ್ಯ ಕೆಲಸವಲ್ಲ. ಮೊದಲೊಮ್ಮೆ ಮದ್ರಾಸ ಅಧಿಸತ್ಯದಲ್ಲಿಯ ಸೇಲಮ್ ಜಿಲ್ಲೆಯಲ್ಲಿ ಮದ್ಯಪಾನ ಪ್ರತಿಬಂಧದ ಪ್ರಯೋಗ ನಡಿಸಿ ಅದರ ಜಯಾಪಜಯಗಳನ್ನು ಕಂಡುಕೊಂಡು ಉಳಿದೆಲ್ಲ ಪ್ರಾಂತಗಳಲ್ಲಿಯೂ ಆರಂಭಿಸಬೇಕೆಂಬುದಾಗಿ ಕಾಂಗ್ರೆಸ್ ಮಂತ್ರಿಗಳು ಮಾತನಾಡಿಕೊಂಡರು.

ಆಯಿತು. ಸೇಲಮ್ ಜಿಲ್ಲೆಯಲ್ಲಿಮಾನ್ಯ ರಾಜಗೋಪಾಲಾಚಾರ್ಯರ ನೇತೃತ್ವದಲ್ಲಿ ಪಾನಪ್ರತಿಬಂಧಕ್ಕಾರಂಭವಾಯಿತು. ಕೆಲವೇ ದಿನಗಳಲ್ಲಿ ಜಯ ಕಂಡುಬಂದಿತು. ಇದೀಗ ಎಲ್ಲಮಂತ್ರಿಗಳಗೂ ಮನವರಿಕೆಯಾಗಿಬಿಟ್ಟ ಮದ್ಯಪಾನವನ್ನು ನಿಲ್ಲಿಸಲು ಸಾಧ್ಯವಿದೆಯೆಂಬುದು! ಇನ್ನು ಅಲ್ಪಾವಧಿಯಲ್ಲಿಯೇ ಉಳಿದ ಪ್ರಾಂತ್ಯಗಳಲ್ಲಿ ಪಾನ ಪ್ರತಿಬಂಧಕ್ಕಾರಂಭವಾಗಲಿದೆ.

ಭಾರತ ಕಾಂಗ್ರೆಸ್ಸು ಕೈಕೊಂಡ ಈ ಮಹಾಕಾರ್ಯವನ್ನು ಮೈಸೂರು ಸರಕಾರವು ತಾನಾಗಿಯೇ ಮುಂದಾಗಿ ವಾಡಲು ದ್ಯುಕ್ತವಾಗಿರುವುದು ಪರಮ ಸಂತೋಷದಾಯಕ ಬೆಳವಣಿಗೆಯಾಗಿದೆ. ಪ್ರಜಾ ಹಿತ ಚಿಂತನೆ ಬಯಸುವ ಯಾವದೇ ಸರಕಾರ ಮಾಡಬೇಕಾದ ಮಹತ್ಕಾರ್ಯಗಳಲ್ಲಿ ಪಾನ ಪ್ರತಿಬಂಧದಂತಹ ಪ್ರಾಮುಖ್ಯವಾದುದು ಇನ್ನೊಂದಿಲ್ಲ. ಮೈಸೂರು ಸರಕಾರವು ಪಾನ ಪ್ರತಿಬಂಧವನ್ನಾರಂಭಿಸುವಲ್ಲಿ ಭಾರತದ ಇನ್ನುಳಿದ ಸಂಸ್ಥಾನ ಸರಕಾರಗಳಿಗೆ ಮಾದರಿಯಾಗಿದೆ. ಮೈಸೂರು ಸರಕಾರವು ಪ್ರಾರಂಭಿಸಲಿರುವ ಪಾನ ಪ್ರತಿಬಂಧ ಕಾರ್ಯವಲ್ಲಿ ಮೈಸೂರಿನ ಪ್ರಜೆಗಳು ಸಹಾಯ-ಸಹಾನುಭೂತಿಗಳನ್ನು ತೋರದಿದ್ದಲ್ಲಿ ರೋಪದ್ರೋಹವಲ್ಲದೆ ಬೇರೊಂದಿಲ್ಲ. ಮೈಸೂರು ಸಂಸ್ಥಾನದಲ್ಲಿ ಬೆಳೆಯುತ್ತಲಿದ್ದ ಕಾಂಗ್ರೆಸ್ ಶಕ್ತಿಯನ್ನು ಕುಗ್ಗಿಸಲು, ಪ್ರಜೆಗಳ ಸ್ವಾತಂತ್ರ್ಯಾಭಿಲಾಷೆಯ ಸರ್ವನಾಶ ಮಾಡಲು, ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಹತ್ತಿಡಲು ದಿವಾನರವರಾದ ಸರ್ ಮಿರ್ಜಾರವರು ತೋರಿದ ವೀರ-ಧೀರ ವೃತ್ತಿಯನ್ನು ಪಾನ ಪ್ರತಿಬಂಧ ಕಾರ್ಯದಲ್ಲಿ ತೋರಿದರೆ ಅದರಿಂದ ಲಾಭವೇ ಹೊರ್ತು ನಷ್ಟವಿಲ್ಲ. ಅಂತಹ ವೀರ ವೃತ್ತಿಯನ್ನು ಖಂಡಿತವಾಗಿಯೂ ತೋರಿಸುವರೆಂದು ನಂಬಲಾಗಿದೆ.

ಮೈಸೂರು ಟಾರ್ಝನ್!

ಮೈಸೂರು ಸಂಸ್ಥಾನ ದಿವಾನರವರಾದ ಸರ್ ಮಿರ್ಜಾ ಇಸ್ಮೈಲ್‌ರವರು ಮಧ್ಯನೆಂಬ ಮಹಾ ಕ್ರೂರ ಪಶುವನ್ನು ಸಂಸಾನದಾಳಿ ಹೊಡೆದೋಡಿಸಲು ಟಾರ್ಝನ್ ವೃತ್ತಿಯನ್ನು ತಳೆಯುತ್ತಿರುವುದು ಅಭಿನಂದನಾಸ್ಪದವಾದ-ಆದರ್ಶವಾದ-ಸ್ವಾರಸ್ಯವಾದ ವಿಷಯ!

ರಾಮದುರ್ಗ ಸಂಸ್ಥಾನದಲ್ಲಿ

ಮೈಸೂರು ಈಗ್ಗೆ ಒಂದು ತಿಂಗಳಾನಧಿಯ ಪೂರ್ವದಲ್ಲಿದ್ದ ಯುಗದಲ್ಲಿ ರಾಮದುರ್ಗ ಸಂಸ್ಥಾನ ಈಗೀಗ ಇದೆ ಸಂಸ್ಥಾನ ಸರಕಾರವು ಪ್ರಜೆಗಳ ಹಕ್ಕಿನ ಮೇಲೆ ಬಲವಾಗಿ ಗದಾಪ್ರಹಾರ ಮಾಡುತ್ತಲಿದೆ

ರಾಮದುರ್ಗ ಸಂಸ್ಥಾನ ಪ್ರಜೆಗಳಲ್ಲಿ ಅಖಂಡವಾದ ಜಾಗೃತೆಯುಂಟಾಗಿರುವುದನ್ನು ಶ್ರೀ ಶಂಕರರಾವ ದೇವ, ಗಂಗಾಧರರಾವ ದೇಶಪಾಂಡೆಯವರು ಕಣ್ಣಾರೆ ಕಂಡು ಬಣ್ಣಿಸಿದ್ದಾರೆ. ಸಂಸ್ಥಾನವಲ್ಲೆಲ್ಲ ಸಂಪೂರ್ಣ ಶಾಂತಿ ನೆಲೆಗೊಳ್ಳಬೇಕೆಂದು ಈ ಉಭಯತರುಗಳು ಪ್ರಯತ್ನಿಸಿದರು. ಸಂಸ್ಥಾನದ ದಿವಾನರವರನ್ನು ಹಾಗು ರಾಜಾ ಸಾಹೇಬರನ್ನು ಕಂಡು ಪ್ರಜೆಗಳ ಬೇಡಿಕೆಗಳನ್ನು ತಿಳಿಸಿದರೆಂದೂ, ಅವುಗಳನ್ನು ಸಹಾನುಭೂತಿಪೂರ್ವಕ ವಿಚಾರಿಸುವುದಾಗಿ ಸರಕಾರವು ತಿಳಿಸಿತೆಂದೂ ಶ್ರೀ.ದೇವರವರು ಹೇಳಿದ್ದಾರೆ. ಏನೇನಾಗುವದೋನೋಡಬೇಕು.

ಕರ್ನಾಟಕಬಂಧು

ಜೇಷ್ಠ ಬಹು ೨ ಬುಧವಾರ ಶಕೆ ೧೮೬೦

ಜಪಾನಿನ ಸೋಲಿಗೆ ಮೂಲ ಬಾಂಬಿನ ಬಲಿ !

ಎದೆಗೆಡದ ಚೀನಾ!

ಚೀನಾ – ಜಪಾನ್ ಯುದ್ಧದಲ್ಲಿ ಚೀನೀಯರ ಮೇಲುಗೈಯಾಗುತ್ತಿರುವುದೂ– ಇದರಿಂದಾಗಿ ಜಪಾನಿನ ಸೈನ್ಯದಲ್ಲಿ ಅಸಂತೋಷ–ದಿಗ್ಭಾಂತಿಗಳು ಪಸರಿಸಿದುದೂ ಎಲ್ಲರಿಗೂ ತಿಳಿದ ವಿಷಯ. ಜನರಲ್ ಚಿಯಾಂಗ್–ಕೈ – ಶೇಕ್–ರವರ ನೇತೃತ್ವದಲ್ಲಿ ಚೀನಾದ ಸೈನ್ಯ ಹೆಚ್ಚು ಹೆಚ್ಚಾದ ಹುರುಪಿನಿಂದ ರಣರಂಗದಲ್ಲಿ ಕಾದುತ್ತಿದ್ದು ಜಪಾನೀಯರನ್ನು ವಿಧವಿಧವಾಗಿ ಹಣ್ಣು ಮಾಡುತ್ತಿದೆ.

ಚೀನೀಯರ ಸೈನ್ಯ ಇತ್ತೀಚೆಗೆ ಹೊಸ ಹೊಸ ಯುದ್ಧಕ್ರಿಯೆಗಳಿಂದ ರಣರಂಗದಲ್ಲಿ ಹೋರಾಡುತ್ತಿದೆ. ಇದರ ಪರಿಣಾಮ ಜಪಾನ್ ಸೈನ್ಯದ ಮೇಲೆ ಚೆನ್ನಾಗಿ ಉಂಟಾಗುತ್ತಿದ್ದು ಸಮಸ್ತ ಚೀನವನ್ನೆಲ್ಲ ದವಡೆಗೆ ಸಿಕ್ಕಿಸಿಕೊಂಡು ಅನಂತರ ದೂರ ವ್ಯಾಪ್ತದ ದೇಶಗಳ ಮೇಲೆಲ್ಲ ಸ್ವಾರಿಮಾಡಬೇಕೆನ್ನುವ ಜಪಾನಿನ ಅಸುರೀ ಮಹತ್ವಾಕಾಂಕ್ಷೆಗೆ ತಡೆಯೊದಗುತ್ತಿದೆ

ಕಳೆದ ಹತ್ತು ತಿಂಗಳಿನಲ್ಲಿ ನಡೆದ ಘೋರ ಸಂಗ್ರಾಮದಲ್ಲಿ ಚೀನಾ ಕೋಟಿ ಕೋಟಿ ಪ್ರಾಣಗಳನ್ನು ಬಲಿಕೊಟ್ಟಿದೆ ಜಪಾನೀ ಸೈನ್ಯ ಚೀನಾದ ಹಳ್ಳಿಪಳ್ಳಿಗಳಲ್ಲಿ ನೇರಿ ನಡೆಯಿಸಿದ ರಾಕ್ಷಸೀ ಕೃತ್ಯಗಳಿಗೆ ಕೊರತೆಯಿಲ್ಲ. ಜಪಾನು ಯಾವಯಾವ ಕೃತ್ಯಗಳನ್ನು ಮಾಡಿಯೂ ಚೀನಾ ಅದಕ್ಕೆ ಹಣಿಯದೆ – ಮಣಿಯದೆ – ತಲೆಯೆತ್ತಿ ನಿಂತಿದೆ. ಐಕ್ಯದಿಂದ – ಪ್ರೇಮದಿಂದ ಸಮಸ್ತ ಚೀನವೆಲ್ಲ ಒಕ್ಕಟ್ಟಾಗಿ ಭುಜಕ್ಕೆ ಭುಜವಿರಿಸಿ ನಿಂತು ನಡ್ಡುಹೊಡೆಯುತ್ತಿದ!

ಎದೆಗುಂದುತ್ತಿರುವ ಜಪಾನ್ !

ಚೀನಕ್ಕೆ ಜಗತ್ತಿನ ಎಲ್ಲ ರಾಷ್ಟ್ರಗಳಿವರೂ ನೈತಿಕ ಬೆಂಬಲವಿತ್ತಿರುವುದು ಸ್ವಾಭಾವಿಕವಾದವಿಷಯ ಜಪಾನ್ ಚೀನಾದಮೇಲೆ ಏರಿ ಹೋದಂದಿನಿಂದ ಇಂದಿನವರೆವಿಗೆ ಅದು ಮಹಾ ಮಹಾ ಕಷ್ಟನಷ್ಟಗಳನ್ನು ಅನುಭವಿಸುತ್ತಿದ.

ಚೀನಾಕ್ಕೆ ಸಹಾನುಭೂತಿಯಿರುವ ರಾಷ್ಟ್ರಗಳೆಲ್ಲೆಲ್ಲ ವಿಶೇಷವಾಗಿ ಭಾರತ ಮೊದಲಾದ ದೇಶಗಳಲ್ಲಿ ಜಪಾನ್ ವಸ್ತು ಬಹಿಷ್ಕಾರ ಬಲವಾಗಿಬಿಟ್ಟಿದೆ ವ್ಯಾಪಾರದಿಂದಲೇ ಜಪಾನಿನ ಅಸಂಖ್ಯಾತ ಜನರು ಹೊಟ್ಟೆ ಹೊರೆದುಕೊಳ್ಳುತ್ತಿದ್ದಾರೆ. ಇವರೆಲ್ಲರಿಗೂ ಈ ಬಹಿಷ್ಕಾರದ ಬಿಸಿ ತಗುಲಿದೆ. ವ್ಯಾಪಾರ ವ್ಯವಹಾರಗಳು ಮಂದವಾಗಿರುವುದರ ಪರಿಣಾಮವಾಗಿ ಜಪಾನಿನ ಆರ್ಥಿಕ ಸ್ಥಿತಿ ತೀರ ವೈಪರೀತ್ಯಕ್ಕೆಳಿದಿದೆ. ಆಲ್ಲಪ್ಪ ಯುದ್ಧದ ವೆಚ್ಚವೊ ಗುಡ್ಡದಂತಹದು! ಅದನ್ನೂ ಹೆಚ್ಚಿಸಿಕೊಂಡು ಕುಗ್ಗುತ್ತಿರುವ ಜನರ ಉತ್ಸಾಹವನ್ನೂ ಹೆಚ್ಚಿಸಿಕೊಂಡು ಹೋಗಬೇಕಾದರೆ ಜಪಾನಿಗೆ ಸಾಕಃ ಸಾಕಾಗುತ್ತಿರುವುದರಲ್ಲಿ ಸಂದೇಹವಿಲ್ಲ.

ಇದರ ನಿದರ್ಶಕವಾಗಿ ಈ ಮಧ್ಯೆ ಜಪಾನ್ ಮಂತ್ರಿಮಂಡಲದಲ್ಲಿ ಮಹತ್ವದ ಮಾರ್ಪಾಟುಗಳು ಒದಗಿದುವು. ಯುದ್ಧಮಂತ್ರಿ ಪದವಿಯಲ್ಲಿದ್ದ ಜನರಲ್ ಸುಗಿಯಾಮಾರವರನ್ನು ತೆಗೆದುಹಾಕಿ ಚೀನಾ ರಣರಂಗದಿಂದ ಹಿಂದಕ್ಕೆ ಕರೆಯಿಸಿಕೊಂಡ ಜನರಲ್ ಇಟಗಾರಿಯವರನ್ನು ಅವರಿ ಸ್ಥಳಕ್ಕೆ ನಿಯಮಿಸಲಾಗಿದೆ.

ಚೀನಾದಲ್ಲಿ ಜಪಾನು ಆಧುನಿಕ ಯುದ್ಧ ಸಾಮಗ್ರಿಗಳಿಂದ ಭೀಕರವಾದ ಸಂಗ್ರಾಮ ನಡಾಗಿಸಿದೆ. ಇದಕ್ಕೆ ಬೇಕಾಗುವ ಹಣವನ್ನು ಸಂಪಾದಿಸಲೂ ಆಷ್ಟೇ ಭೀಕರ ಪ್ರಯತ್ನಗಳನ್ನು ಮಾಡಬೇಕಾಗಿ ಬಂದಿದೆ ಜಪಾನು. ಚೀನಾದಲ್ಲಿ ಹೋರಾಡುತ್ತಿರುವ ಅಸಂಖ್ಯಾತರಾದ ಸೈನಿಕರಿಗೆ ಆಹಾರ ಸಾಮಗ್ರಿಯನ್ನೂ ಜಪಾನಿನಿಂದಲೇ ಕಳಿಸಬೇಕಾಗಿದೆ. ಜಪಾನೀಯರಿಗೆ ಚೀನಾದಲ್ಲಿ ತಕ್ಕು ಕೂಲು ಅದೇಕೆ ಗುಟುಕು ನೀರು ದೊರೆಯುವುದೂ ದುಸ್ತರವಾಗಿದೆ ಆಹಾರ ಸಾಮಗ್ರಿಯೆಲ್ಲವೂ ನೇರವಾಗಿ ಜಪಾನಿನಿಂದಲೇ ಬರಬೇಕಾದೆ. ಶಾನ್ಸಿ–ಶಾಂಟುಂಗ್ ಪ್ರಾಂತಗಳನ್ನು ಚೀನೀಯರು ಪುನಃ ಕೈವಶಪಡಿಸಿಕೊಂಡು ಜಪಾನೀಯರನ್ನು ಸುತ್ತೂ ಕಡೆಯಿಂದ ಹಣ್ಣಿಗೆ ತರುತ್ತಿದ್ದಾರೆ ಇವೆಲ್ಲ ಕಾರಣಗಳಿಂದಾಗಿ ಜಪಾನು ತೀರ ಬಲಹೀನವಾಗುತ್ತಿದೆ

ಸೋವಿಯೆಟ್ ಸಹಾಯ

ಇದೀಗ ಸೋವಿಯೆಟ್ ರಷ್ಯ ಚೀನಾಕ್ಕೆ ಸಹಾಯ ಮಾಡಲು ಮುಂದುವರೆದು ಬಂದಿದೆಯೆಂಬುದಾಗಿ ವಾರ್ತೆ ಹರಡಿದೆ. ಜಪಾನ್–ಸೋವಿಯೆಟ್ ರಷ್ಯಗಳಿಗೆ ಮೊದಲಿನಿಂದಲೂ ವೈಮನಸ್ಸು. ಚೀನವನ್ನು ನುಂಗಿ ಆನಂತರ ರಷ್ಯದಮೇಲೆ ಸ್ವಾರಿ ಮಾಡಬೇಕೆಂಬುದಾಗಿ ಜಪಾನಿನ ಇಚ್ಛೆ. ಆದರೆ ಈ ಇಚ್ಛೆಗೆ ಚೀನಾದಲ್ಲೇ ಮಹಾ ಆತಂಕಗಳೊದಗಿ ಅದನ್ನು ಮಧ್ಯದಲ್ಲಿಯೇ ಮುಗಿಸಿಬಿಡುವ ಲಕ್ಷಣಗಳು ತೋರುತ್ತಿವೆ

ಸೋವಿಯೆಟ್ ರಷ್ಯ ಚೀನಾದೊಂದಿಗೆ ಸಂಧಾನಮಾಡಿಕೊಳ್ಳಲು ಉತ್ಸುಕವಾದುದೂ ಇದೇ ಕಾರಣದಿಂದಾಗಿ.

ಚೀನಾದ ಉಗ್ರಸಮತಾವಾದಿ ಪಕ್ಷದ ಮುಂದಾಳುಗಳಾದ ಸನ್‌ಯೋರವರಿಗೂ ಸೋವಿಯೆಟ್‌ರಷ್ಯದ ಸರ್ವಾಧಿಕಾರಿ ಸ್ಟಾಲಿನ್‌ರವರಿಗೂ ಈಚೆಗೆ ಮಾತುಕತೆಗಳು ನಡೆದು ಒಂದು ನಿರ್ಧಾರಕ್ಕೆ ಬಂದಿದೆ.

ಈ ಒಪ್ಪಂದದ ಕರಾರುಗಳೂ ಉಭಯ ರಾಷ್ಟ್ರಗಳಿಗೂ ಸಮ್ಮತಿಯಾಗುವ ಹಾಗೇ ಇವೆ. ಚೀನದ ಪಡೆಯಲ್ಲಿ ಸೋವಿಯೆಟ್ ರಷ್ಯದ ಸೈನ್ಯಾಧಿಕಾರಿಗಳಿರಬೇಕೆಂದೂ ಇನ್ನಿತರ ದೇಶಗಳಿಗೆ ಚೀನಾ ಕೊಡುತ್ತಿರುವ ಸೌಲಭ್ಯಗಳನ್ನು ರಷ್ಯಕ್ಕೂ ಕೊಡುವುದಾಗಿಯೂ ನಿರ್ಧಾರವಾಗಿರುವದಲ್ಲದೆ ೧೫೪ ವಿಮಾನುಗಳುಳ್ಳ ಒಂದು ಸೋವಿಯೆಟ್ ವೈಮಾನಿಕದಳ ಚೀನಾಕ್ಕೆ ಬೇಗನೆ ಬರುವುದಾಗಿ ಗೊತ್ತಾಗಿದೆ

ಚೀನಾದ ಸದ್ಯದ ಪರಿಸ್ಥಿತಿಯಲ್ಲಿ ಇದು ಅನುಕೂಲವೂ ಸಂತಸದಾಯಕವೂ ಆದ ವಿಷಯ.ಇದರಿಂದ ರಷ್ಯಾ-ಚೀನಾ ಉಭಯ ರಾಷ್ಟ್ರಗಳಿಗೂ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ. ಸೋವಿಯೆಟ್ ರಷ್ಯ ತನ್ನ ಸಮೂಹದ ಪೀಡೆಯನ್ನು ನಿವಾರಿಸಿಕೊಳ್ಳುವುದರ ಜೊತೆಗೆ ಜಪಾನಿನ ಸೊಕ್ಕು ಮುರಿಯಲು ಚೀನಕ್ಕೆ ಸಹಾಯವಿತ್ತ ಹಾಗಾಗುವುದು.

ಕೆರಳಿದ ಜಪಾನ್

ಕೈಲಾಗದಿದ್ದಾಗ ಮೈಯೆಲ್ಲ ಹರಿದುಕೊಂಡಿತು ಎಂತ ಒಂದು ಹಳೆಯ ಹೇಳಿಕೆ ಇದೆ. ಇದು ಸದ್ಯದ ಜಪಾನಿನ ವಿಷಯದಲ್ಲಿ ಸರಿಹೋಗುವಂತಿದೆ. ಸುತ್ತೂಕಡೆಯಿಂದಲೂ ನಿರಾಶೆಯಾವರಿಸಿರುವಾಗ ಜಪಾನಿನ ತೊಂದರೆ ಹೇಳಕೂಡದಷ್ಟು ಉಂಟಾಗಿರುವಾಗ ಸೋವಿಯೆಟ್ ರಷ್ಯ ಪ್ರತ್ಯಕ್ಷವಾಗಿ ಚೀನಕ್ಕೆ ಸಹಾಯಮಾಡಲು ಮುಂದುವರೆದು ಬಂದಿರುವಾಗ ಜಗತ್ತೆಲ್ಲವೂ ತನ್ನನ್ನು ತುಚ್ಛೀಕರಿಸುತ್ತಿರುವಾಗ ಜಪಾನಿಗೆ ತಡೆಯಲಾರದ ಕೋಪ ಬಂದುಬಿಟ್ಟಿದೆ. ಕ್ಷಣಭಂಗುರವಾದ ಈ ಕೋಪ ಚೀನಾದ ಗನಿಸ್ಸಹಾಯರೂ ನಿರ್ಬಲರೂ ಆದ ಪ್ರಜೆಗಳನ್ನು ಬಲಿ ತೆಗೆದುಕೊಳ್ಳುತ್ತಿದೆ.

ತನ್ನ ಮುಂದೆ ಕಾಣುತ್ತಿರುವ ಭೀಕರ ಪರಿಸ್ಥಿತಿಯಿಂದ ಜಪಾನು ಉರಿದೆದ್ದಿತು. ಚೀನಾದಲ್ಲಿ ತಮಗೊದಗುತ್ತಿರುವ ಸೋಲಿನ ಪರಂಪರೆಯನ್ನು ಕಂಡು ಜಪಾನ್ ಅಧಿಕಾರಿಗಳು ಕುದಿದರು. ಇನ್ನೇನು ಮಾಡಬೇಕು ಚೀನವನ್ನು ಹೇಗೆ ಹಣ್ಣಿಗೆ ತರಬೇಕು ಎಂಬ ವಿಷಯ ಅವರಿಗೆ ತಿಳಿಯದಾಯಿತು. ಈ ಮಧ್ಯೆ ಕ್ಯಾಂಟನ್, ಶಾಂಘಾಯಿ, ನಾನ್‌ಕಿಂಗ್ ಮೊದಲಾದ ನಗರಗಳನ್ನು ಕೈವಶಪಡಿಸಿಕೊಂಡು ಚೀನೀಯರನ್ನು ಅಲ್ಲಿಂದ ಸಾಗಹಾಕಿದರೆ ತಮ್ಮ ಕಾರ್ಯ ಕೈಗೂಡಬಹುದೆಂದು ಜಪಾನೀಯರಿಗೆನ್ನಿಸಿತು.

ಸರಿ. ಆ ವಿಚಾರವಾಗಿ ಯೋಚನೆಗಾರಂಭವಾಯಿತು. ಅದರ ಕೊನೆಯೆಂದು ವೈಮಾನಿಕ ದಾಳಿಯಿಂದ ಆ ನಗರಗಳನ್ನು ವಶಪಡಿಸಿಕೊಳ್ಳಬೇಕೆಂದು ನಿರ್ಧಾರವಾಯಿತು. ಅದರೊಂದಿಗೆ ಸಾಕಾದಷ್ಟು ಬಾಂಬುಗಳನ್ನೂ ಹಾರಿಸುವ ನಿಶ್ಚಯವಾಯಿತು.

ಬಾಂಬುಗಳ ಭೀಕರ ದಾಳಿ

ಕಳೆದ ವಾರದಾದಿಯಲ್ಲಿ ಜಪಾನಿನ ನೂರಾರು ವಿಮಾನುಗಳು ಬಾಂಬುಗಳನ್ನು ತುಂಬಿಕೊಂಡು ಬಂದು ಕ್ಯಾಂಟನ್ ನಗರದ ಮೇಲೆ ಭಯಂಕರ ದಾಳಿ ಮಾಡಿದುವು. ಶಾಲೆಯೆನ್ನದೆ ದೇಗುಲವೆನ್ನದೆ ಆಸ್ಪತ್ರೆಗಳನ್ನೂ ಲೆಕ್ಕಿಸದೆ ನಿಸ್ಸಹಾಯರಾದ ನಿರ್ಬಲರಾದ ನಿರಪರಾಧಿಗಳಾದ ಚೀನೀ ಪ್ರಜೆಗಳ ಮೇಲೆ ಬಾಂಬು ವರ್ಷಾವ ಮಾಡಲ್ಪಟ್ಟಿತು. ಸಾವಿರಾರು ಜನರು ಪಟಪಟ ಪ್ರಾಣಬಿಟ್ಟರು. ಕ್ಯಾಂಟನ್ ಬೀದಿಗಳಲ್ಲಿ ರಕ್ತದ ಕಾಲುವೆ ಹರಿಯಿತು ರೆಡ್ ಕ್ರಾಸ್ ಸೊಸಾಯಿಟಿ ಕಟ್ಟಡಗಳ ಮೇಲೂ ಬಾಂಬು ವರ್ಷಾವ! ಏನನ್ನೂ ಅರಿಯದ ಹಸುಳೆಗಳ ಪಾಠಶಾಲೆಗಳ ಮೇಲೂ ಬಾಂಬು ವರ್ಷಾವ! ಸ್ಪೇನಿನಲ್ಲಿ ಕಳೆದ ಕೆಲವು ದಿನಗಳಿಗೆ ಮೊದಲು ನಡೆದ ಭೀಕರ ಬಾಂಬುವರ್ಷಾವವನ್ನು ಹಿಂದೆಹಾಕುವ ಹಾಗೆ ಜಪಾನೀಯರು ಕ್ಯಾಂಟನ್‌ದ ಮೇಲೆ ಬಾಂಬುಗಳ ಮಳೆಗರೆದರು.

ಇಷ್ಟಕ್ಕೇ ಮುಗಿಯಲಿಲ್ಲ. ಹಾಂಗಕಾಂಗ ಶಾಂಘಾಯಿ, ನಾನ್‌ಕಿಂಗ್ ಮೊದಲಾದ ಚೀನಾದ ಇನ್ನಿತರ ನಗರಗಳ ಮೇಲೂ ಬಾಂಬು ಹಾಕುವ ಸಿದ್ಧತೆ ನಡೆದಿದೆ.

ಜಪಾನಿಗಳ ಈ ಭಯಂಕರ ಹತ್ಯಾಕಾಂಡದಿಂದ ವಿಶ್ವದ ಲಕ್ಷ್ಯವೆಲ್ಲ ಚೀನಾದ ಕಡೆ ಹೊರಳಿದೆ. ನಿರಪರಾಧಿಗಳಾದ ಚೀನೀಯರ ವಿಷಯವಾಗಿ ಎಲ್ಲರೂ ಕನಿಕರಪಡುತ್ತಿದ್ದಾರೆ. ಭಾರತವಂತೂ ಚೀನಾಕ್ಕೆ ತನ್ನ ಸಹಾಯ ಹಸ್ತವನ್ನು ನೀಡಲು ಸಿದ್ಧವಾಗಿದೆ. ಇದೇ ೧೫ ನೆಯ ತಾರೀಖಿನ ದಿನ ಭಾನುವಾರ ಭಾರತದಲ್ಲೆಲ್ಲ 'ಚೀನಾದಿನ'ವನ್ನಾಗಿ ಆಚರಿಸಲಾಯಿತು. ಚೀನಾಕ್ಕೆ ಕಳುಹಿಸಲ್ಪಡುವ ಸಹಾಯ ಸ್ವಯಂಸೇವಕ ಪಡೆಗಾಗಿಯೂ ನಿಧಿಗಾಗಿಯೂ ಭಾರತದಲ್ಲಿ ಪ್ರಚಂಡ ಸಿದ್ಧತೆ ನಡೆದಿದೆ

ರೊಚ್ಚಿಗೆದ್ದು ರಾಕ್ಷಸರಂತೆ ಕ್ರೂರಕೃತ್ಯಗಳನ್ನಾಚರಿಸುತ್ತಿರುವ ಜಪಾನಿಗಳ ಸೊಕ್ಕು ಇಂದು ನಾಳೆ ಇಷ್ಟರಲ್ಲಿಯೆ ಮುರಿದು ಹೋಗದಿರದು. ಕ್ಯಾಂಟನ್ ನಗರದಲ್ಲಿ ಜಪಾನೀಯರು ಮೊನ್ನೆ ಮೊನ್ನೆ ತೆಗೆದುಕೊಂಡ ಬಲಿ ಮುಂದಿನ ಅವರ ಸೋಲಿಗೆ ಮೂಲ.

ಹಿಟ್ಲರನ ಸುಳ್ಳು ಬೆರಳು.

ಜರ್ಮನಿಯ ಸರ್ವಾಧಿಕಾರಿ ಅಡೊಲ್ಫ್ ಹಿಟ್ಲರನ ಬಲಗೈಯಲ್ಲಿ ಒಂದು ಸುಳ್ಳು ಬೆರಳಿದೆಯೆಂಬು ಹೇಳಲಾಗುತ್ತಿದೆ. ಈ ಮೊದಲೊಮ್ಮೆ ಒಬ್ಬ ಸೈನಿಕನ ಗುಂಡು ಬಡಿಮ ನಿಜವಾದ ಬೆರಳು ಹೋಯಿತು. ಅದನ್ನು ಯಾರಿಗೂ ತೋರಗೊಡದಂತೆ ಹಿಟ್ಲರನು ಕೃತ್ರಿಮ್ಮುಬೆರಳನ್ನು ಧರಿಸಿಕೊಂಡು ಎಚ್ಚರದಿಂದಿದ್ದಾನೆ.

☆ ಮಾನವನ ಆಯುಷ್ಯದ ಅವಧಿಯೆಷ್ಟು ?

—೦೫೦— ೧೦೦ ವರ್ಷ ಮೇಲ್ಪಟ್ಟು ಬಾಳಲು ಸಾಧ್ಯವಿದೆಯೇ? ☆



೧೫೦ ವರ್ಷ ಮೀರಿದವರೂ ಇದ್ದಾರೆ.
ಅವರ ಹಲ್ಲುಗಳು ಗಟ್ಟಿಯಾಗಿವೆ.
ಕಣ್ಣಿಗೆ ಕನ್ನಡಕ ಉಪಯೋಗಿಸುತ್ತಿಲ್ಲ.
೨ ಮೈಲುಗಳವರೆಗೂ ತಿರುಗಾಡಿಬರುವರು.

ಮಾನವನ ಆಯುಷ್ಯದ ಅವಧಿ ೧೦೦ ವರ್ಷ, ಅದು ಮೇಲಕ್ಕೆ ನಂಕಲ್ಪ, ಅದಕ್ಕೂ ಮೀರಿ ಮನುಷ್ಯ ಬದುಕಿರಲಾರ ಸೃಷ್ಟಿಯ ನಿಯಮಕ್ಕೆ ವಿರೋಧವಾಗಿ ಯಾವಕಾಲಕ್ಕೂ ಸಾಧ್ಯವಿಲ್ಲ ಎಂತಾಗಿ ಜನರುಡು ವಿಕೆಯು ಯುಗ ಯುಗಾಂತರಗಳಿಂದಲೂ ಸಾಗುತ್ತಲಿಂದಿವೆ ಜಗತ್ತಿನಲ್ಲಿ ೧೦೦ ವರ್ಷ ಕ್ಕೂ ಮೀರಿ ಒಮ್ಮುಕಿರವರ ಸಂಖ್ಯೆ ಒಪ್ಪು ಕತಿನೆ ಸಿಕ್ಕಿವನೇ ಇಲ್ಲವೆಂತಲೂ ಸಲ್ಲು ತ್ತ ಇತ್ತೀಚಿಲಗಿಯಂತೂ ಈ ನೂರರ ಸಂಖ್ಯೆ ಮೀರಿಯದಾಗುತ್ತಲಿನ ಬಕ್ಕಾಮವರೆ ಇ ಂತಹ ಒಮ್ಮುಕಿಂವರನ್ನು ನಾವೂ ರಾ ಣುತ್ತೀವೆ ಬಾರತದಲ್ಲಂತೂ ಅನೇಕ ರಣ ಗಳಿಂದಾಗಿ ಮಾನವನ ಆಯುಷ್ಯದ ಅವಧಿ ತೀರಾ ಕೆಳತರಗತಿಗಿಳಿದಿದೆ ಭಾರತದಲ್ಲಿಂದು ಸಾ೦ ನರ್ಷ ಮೇಲ್ಪಟ್ಟು ಬಾಳುವವರಿಲ್ಲ ಎಂಬ ಮಾತ್ಸರ್ಯವೆ ಸಂಗತಿಯಾಗಿದೆ

೧೦೦ ವರ್ಷ ಮನುಷ್ಯ ಬಾಳಬೇಕು ಎಂಬುದು ಸೃಷ್ಟಿಯ ನಿಯಮವೇ ಎಂದು ಭಾವಿಸಿಕೊಳ್ಳೋಣ ಜಗತ್ತಿನಲ್ಲಿ ೧೦೦ ವರ್ಷವಾದರೂ ಬಾಳಿ ಬದುಕಿರುವರು ಎಷ್ಟು ಜನರು ಸಿಕ್ಕಾರು ? ಜಗತ್ತಿನಲ್ಲಿ ಜನ್ಮತಾಳಿದ ಪ್ರತಿ ಮನುಷ್ಯ ಪ್ರಾಣಿಯೂ ೧೦೦ ವರ್ಷ ಬಾಳುವಾರೇಕೆ? ಇದಕ್ಕೆ "ಒಂದೇ ಒಗೆಯ ಉತ್ತರ ಹೇಳಲು ಬರದು ಎಂಬುದು ಪಂಡಿತ ಹಲಕೆಲವು ಶ್ರವಣ ದಿಗಳು "ಮಾನವನ ಜನನ ಮರಣಗಳು ದೇವರ ಸ್ವಾಧೀನ ಆಯುಷ್ಯ ತಂಪತಿಂದರೆ ಯಾರ ಆಟವೂ ಸಾಗುವುದಿಲ್ಲ." ಮುಂತಾಗಿ ಹೇಳುವುದುಂಟು ಈ ಮಾತಿಗೆ ವಿಜ್ಞಾನಿಗಳು ಒಪ್ಪುವುದಿಲ್ಲ ಯಾವದೊಂದು ಯಂತ್ರವು ಬಹುದಿವಸ ಬಾಳಬೇಕಾದರೆ ಅದನ್ನು ಉಪಯೋಗಿಸುವವನಲ್ಲಿ ಜಾಣ್ಮೆ ತಾಂತ್ರಿಕ ಸಂಸ್ಕಾರ ರೀತಿಯ ಪ್ರಯೋಗವೂ ಬೇಕು ದಿವಸ ಬಳಿಕ್ಕೆ ಮಾನವ ಸೇವನೂ ಕರಲಕೆಯಿಂದ ರಚಿಸಲ್ಪಟ್ಟ ಒಂದು ಯಂತ್ರ ಈ ಯಂತ್ರವು ಬಹು ದಿನ ಬಾಳಬೇಕಾದರೆ ನಿಯಮಿತ ತನದಿಂದ ನಡೆಸಬೇಕು. ಸರಿಯಾದ ಆಹಾರವನ್ನು ಪೂರೈಸಬೇಕು ಅದನ್ನು ಚೆನ್ನಾಗಿ ಪಡಿಸುವುದಕ್ಕಾಗಿ ಶುದ್ಧ ಜಲ, ತಕ್ಕಷ್ಟು ವ್ಯಾಯಾಮ ಅತ್ಯಾವಶ್ಯಕ ಮುಂತಾಗಿ ಹೇಳುವರು ದುಷ್ಪಚಟಗಳು, ಅನಿಯಮಿತ ತನ ಮುಂತಾದವುಗಳೇ ಆಯುಷ್ಯವನ್ನು ಕುಗ್ಗಿಸುವುದರ ಮೂಲ ಕಾರಣಗಳು ಮಂತಾಗಿ ಅನೇಕರು ತಜ್ಞರು

ಒಟ್ಟಿನಲ್ಲಿ ಮಾನವನ ಆಯುಷ್ಯ ವೆಂಬ ಕೈಯಲ್ಲಿರದೆ ಮಾನವನ ಪ್ರಯತ್ನದಿಂದ ಕಿಸಬಹುದು ಎಂಬುದೇ ಹೆಲವು ವಿಜ್ಞಾನಿಗಳ ಮತ ಆಯುಷ್ಯವನ್ನು ವೃದ್ಧಿ ಸಡಿಸಿಕೊಳ್ಳುವದಕ್ಕಾಗಿ ಇಂಗ್ಲೆಂಡ್, ಅ ಮೇರಿಕ ಮೊದಲಾದ್ದೆ ಮುಂದುವರಿದ ರಾ ಷ್ಟ್ರಗಳಲ್ಲಿ ಹಗಲಿರುಳೂ ಪ್ರಯತ್ನಗಳು ನಡೆ ಯುತ್ತಿವೆ ಹೊಸದೊಸ ಶೋಧನೆಗಳು ನಡೆ ಯುತ್ತಿವೆ ಆದಾಗ್ಯೂ ೧೦೦ ವರ್ಷ ಮೇ ಲ್ಪಟ್ಟು ಬಾಳುವವರು ಸಿಕ್ಕುವದು ಕಠಿಣ ವಾಗುತ್ತಿದೆ. ಹೀಗೇಕಿರಬಹುದು ?

ಆದೇನೇ ಇದ್ದರೂ ಮಾನವ ಪ್ರಯತ್ನ ದಿಂದ ಆಯುಷ್ಯವನ್ನು ವೃದ್ಧಿಪಡಿಸಿಕೊ ಳ್ಳಬಹುದು ಎಂಬುದಕ್ಕೆ ನಾಕಷ್ಟುಉಧಾ ರಗಳು ಇಲ್ಲದೆ ಇಲ್ಲ ಆಂದಮೆಲೆ ಮನು ಷ್ಯನು ೧೦೦ ವರ್ಷ ಮೇಲಟ್ಟು ಬಾಳ ಬಾರದೇಕೆ? ಮಾನವನ ಪ್ರಯತ್ನದಲ್ಲಿ ಎಲ್ಲೋ ಕೊಂಚ ತಪ್ಪಾಗುತ್ತಿರಬೇಕು ಇಷ್ಟಾದರೆ ಮನುಷ್ಯನು ೧೦೦ ವರ್ಷ ಮೇ ಲ್ಪಟ್ಟು ಬಾಳಲು ಸಾಧ್ಯವೆಂಬುದನ್ನು ತೆಲ ವು ವಿಜ್ಞಾನಿಗಳು ಇತ್ತೀಚಿಗೆ ವಿಚಾರಿಸು ತ್ತಿದ್ದಾರೆ

ದೀರ್ಘಕಾಲದ ವರೆಗೆ ಜನರು ಬಾಳುತ್ತಿ ರುವ ರಾಷ್ಟ್ರಗಳಲ್ಲಿ ದಕ್ಷಿಣ ಸೈಬೇರಿಯಾ, ಒಳ್ ರಿಯಾ, ಗ್ರೀನದ ಉತ್ತರ ಭಾಗಗಳು ಮುಂದೆ ಬರುತ್ತಿವೆ ಗ್ರಿನ್‌ಲ್ಯಾಂಡಿನ ಉತ್ತರ ಪ್ರಾಂತಗಳಲ್ಲಿರುವಷ್ಟು ದೀರ್ಘಾಯುಷಿ ಗಳು ಜಗತ್ತಿನಲ್ಲಿನ್ಯಾವಭಾಗದಲ್ಲಿಯೂ ಸಿಕ್ಕುವದಿಲ್ಲ ಈ ಭಾಗದಲ್ಲಿ ೧೭೦ ರಿಂದ ೧೯೦ ವರ್ಷದವರೆಗೆ ಬಾಳಿದವರ ದೃಷ್ಟಾಂತಗಳನ್ನು ಕಾಣಬಹುದಾಗಿದೆ. ಅದರಂತೆಯೇ

☆ ಅಸ್ಟ್ರಿಯಾದ ವಿಲಿಯಮ್ ಹ್ಯಾಮಿಲ್ ೧೦೬ ನೇ ವರ್ಷದಲ್ಲಿ ತಯಸ್ಸಿನೆನ್ನಲ್ಲಿ.

ಬಲ್ಗಾನ್ ದ್ವೀಪಗಳಲ್ಲಿ ನಾಕಾಗುವಷ್ಟುದೀ ರ್ಘಾಯುಷಿಗಳನ್ನು ಕಾಣಬಹುದಾಗಿದೆ ಯುಗೋಸ್ಲೋವಿಯದ ನಾಗರಿಕರೇ ರಿಯ ಪರದಿಯ ಮೇಲಿಂದ ಆ ಭಾಗದಲ್ಲಿ ೧೦೦ ವರ್ಷಕ್ಕೆ ಮೇಲ್ಪಟ್ಟವರು ಸುಮಾರು ೧೦೦೦ ಜನ ಇದ್ದಾರೆಂದು ತಿಳಿದುಬರುತ್ತದೆ ಅದರಂತೆಯೇ ಬಾಲ್ಕನ್ ಪೆನಿನ್ಸುಲಾ ಭಾಗದಲ್ಲಿ ೧೦೦ ವರ್ಷ

☆ ವ್ಹಿಯೆನ್ನಾದ ಥಾಮಸ್ ಹೆನೆಲ್ ೧೨೦ ನೇ ವರ್ಷ ವಯಸ್ಸಿನೆನ್ನಲ್ಲಿ.

ಹಾಗೂ ಇಷ್ಟಕ್ಕೆ ಮೇಲ್ಪಟ್ಟವರು ಸುಮಾರು ೪೦೦೦ ಜನರಿದ್ದಾರೆಂದು ತಿಳಿದುಬರುತ್ತದೆ. ಇವರಲ್ಲಿ ಅನೇಕರು ಈ ವೃದ್ಧಾಪ್ಯದಲ್ಲಿ

☆ ಪ್ಲೆಟಿಟ್ ಕ್ಯಾಲಿಫೋರ್ನಿಯದ ಸಾಮ್ಯುಯೆಲ್ ಟಿ. ಲಾ. ರೋಚೋ ೧೩೮ ನೇ ವರ್ಷ ವಯಸ್ಸಿನೆನ್ನಲ್ಲಿ.

ಕೂಡಾ ತರುಣರಂತೆ ಉತ್ಸಾಹಿಗಳಾಗಿ ದ್ದಾರೆ ತರುಣರಿಗಿಂತಲೂ ಹಚ್ಚಾಗಿರುವ

ದಲೂ ತಲೆ ತಂಕ್ಕಿಲ್ಲದೆ ಈತನು ಇದುವರೆಗೆ ೧೦೦ ವರ್ಷಕ್ಕೆ ಮೇಲ್ಪಟ್ಟ ಸುಮಾರು ೧೫೦ ಜನರನ್ನು ಪರೀಕ್ಷೆ ಮಾಡಿದ ಅದಾಗ್ಯೂ ತನಗೆ ದಿರ್ಘ ಆಯುಷ್ಯದ ಗುಟ್ಟು ಗೊತ್ತಾಗಲಿಲ್ಲವೆಂದು ಒಪ್ಪಿಕೊಳ್ಳತ್ತಿದ್ದಾನೆ ಮಾತ್ರ ೧೦೦ ವರ್ಷ ಹೂಗೂ ಅದಕ್ಕೂ ಮೇಲ್ಪಟ್ಟ ಬಾಳಿದವರು ಕಾಯೆ ಸರಿಂಸ್ಯಾರಿಗೂ ಗಡ್ಡ ಗೆಣಸುಗಾಂಸ್ಯನ್ನು ಹೆಚ್ಚಾಗಿ ತಿನ್ನು ವಂತೆಯೂ ಹೇಳಿಲ್ಲವು ಗೊತ್ತಾಗಿದೆ

ನೂರು ವರ್ಷ ಮೇಲ್ಪಟ್ಟ ಬಳಿಕ ಮನುಷ್ಯನ ಬಲವು ಕುಂಠಿತಗೊಳ್ಳುವುದು ಸಹಜ ಆದರೆ ಈ ಮಾತಿನಿಂದ ಮನುಷ್ಯನ ಬುದ್ಧಿಯು ಸಹ ಮಂದವಾಗುವುದು ಎಂಬುದು ಸರಿಯಲ್ಲ ಗಟ್ಟಿಮುಟ್ಟಾಗಿರುವವರೂ ಒಬ್ಬರಿಬ್ಬರು

ವಿಲಿಯಮ್ ಕ್ಯಾಸ್ಲ್ ಎಂಬ ಗೃಹಸ್ಥರು ಪಸ್ಸಹ್ಯಾಮದವರು ೧೦೬ ನೇ ವರ್ಷ ವಯಸ್ಸಿನಲ್ಲಿಯು ಅವರ ಳ ಪಾಂಡಿತ್ಯವನ್ನು ನೋಡಿಕೊಳ್ಳಿ ಮುಖಜರ್ಯೆಯಿಂದಲೇ ಅವರು ಸವ್ಯಡತೆ ಗೊತ್ತಾಗುತ್ತೆ ಇವರು ಹೇಳುತ್ತಿರುವುದನ್ನು ಕೇಳಿ ಕೊಳ್ಳಿ

"ಬೀಡಿ ಸಿಗಾರೆಟುಗಳಿಂದ ಚಹಾ ಪಾನದಿಂದಲೂ ಸಣ್ಣಾಗಿ ಬುಳುನದೇತ ಜೀಗನೆ ಬಿದ್ದು ಹೋಗುತ್ತೆ ಎಂ

ಪಹಲವರೂ ಭಾವಿಸಿಕೊ ಇದೆಲ್ಲ ಶುದ್ಧ ಭ್ರಮೆ. ಮಿತದಿ ದುಕೊಂಡರೆ ಯಾವದೇ ಕೆಟ್ಟ ವಾದರೂ ವಿಶೂ ಪರಿಣಾಮ ರದು. ನಾನು ದಿನಕ್ಕೆ ಏಸಿ ಮೂರು ಸಲ ಚಹಾ ಕುಡಿಯುತ್ತೆ ನಕ್ಕೆ ನಾಲ್ಕು ಸಿಗರೇಟುಗಳನ್ನೆ ತ್ತೀನೆ ನನ್ನ ಪ್ರಕೃತಿ ನಿರೋ ಜೆ. ಕಾಯೆಲೆಯೆಂಬುದು ಕೆಳ ರ್ಷಗಳಿಂದಲೂ ನನಗೆ ಗೊತ್ತಿಲ್ಲ

ದಿನಾಲು ತಿಂಡಿ
ಗುಡಲುಜೊ
ತೇಷವಾಗಿ ಬೆ
ಮಾಂಸವನ್ನು

ಡ್ವಿಯೆನ್ನಾದ
೧೨೦ನರ್ಷ

ವಿಶೇಷ ಸಂಚಿಕೆ ಒಂದಾಣೆ

ಭಾರತ ಸ್ವಾತಂತ್ರ್ಯವೇ
ಸ್ವತಂತ್ರ ಭಾರತದ
ಧ್ಯೇಯ!

ಪ್ರಧಾನ ಸಂಪಾದಕ.
ಹಿ. ರಾ. ಮಲ್ಯ

ಸ್ವತಂತ್ರ ಭಾರತ

SWATANTRA BHARATH, MANGALORE.

REGISTERED NO M 3815

ಜನಜಾಗೃತಿಯೇ
ಸ್ವತಂತ್ರ ಭಾರತದ
ಗುರಿ!

ಸಂಪಾದಕ
ಕೆ. ಹೈದರ್

ಸಂಪುಟ ೧. • ಮಂಗಳವಾರ, ಮಾರ್ಚ್ ೨೯, ೧೯೩೮. • ಸಂಚಿಕೆ ೧೯.

'ಸಾಮ್ರಾಜ್ಯದೊಡೆತನವು ಬ್ರಿಟಿಷ್ ಸರಕಾರವನ್ನು ಕೆಡಿಸಿರುವುದು'

✤ ಬ್ರಿಟನ್ ಮತ್ತು ಭಾರತದ ರಾಜಕೀಯ ಭವಿಷ್ಯ ✤

ಶ್ರೀ ಸಾನ್ಯಾಟ್ ಟಾಗೋರರು

ಸನರೊಡನ ನಾನು ಸ್ಪಷ್ಟವ್ರದಾವುದೆಂದರೆ ಎಷ್ಟೇ ತನಕ ನಿಮ ಬಿಗಿತದ್ದೂ ಕೊಳ್ಳು

ವುದು ಜಪಾನು ಕೂಡಾ ಇದೇ ಶಬ್ದವನ್ನು ಚೀನಾದಲ್ಲಿ ಬಹುವಾಗಿ ಉಪಯೋಗಿಸುತ್ತಿದೆ ಆದರೆ ಇಂಗ್ಲಿಷ್ ಜನರು ಕೂಡಾ ಜಪಾನಿನ ಮಾದರಿಯನ್ನನುಸರಿಸಿ ಭಾರತದಲ್ಲಿ ಅದನ್ನು ಜಾರಿಗೆ ತರಲಾರರೆಂದು ನಾವು ಆಶಿಸೋಣ.

ಈ ಕುರಿತು ನಾನು ಸರಳವಾದೊಂದು ಸ್ಪಷ್ಟ ಪ್ರಶ್ನೆಯನ್ನು ಕೇಳಲಚ್ಚಿನುತ್ತೇನೆ ಒಂದು ರಾಷ್ಟ್ರದ ನಿಶ್ಯಸ್ತ್ರರಾದ ಜನರು, ತಮ್ಮ ರಾಷ್ಟ್ರೀಯ ನಂಪತ್ತಿನ ಐದಂತರ ಪೈಕಿ ನಾಲ್ಕರಲ್ಲಿ ಯಾವತ್ತೂ ಅನಿಕಾರವನ್ನು ಕಳಕೊಂಡವರು, ತಮಗೆ ಸಂಬಂಧಪಟ್ಟ ಎದೇಶವಿಚಾರಗಳಲ್ಲಿ ಅದಿಕಾರವಲ್ಲವಂಧವರು ಸ್ವಾಯತ್ತತೆಯನ್ನು ಹೊಂದುವುದಾದರೂ ಹೇಗೆ? ತಮ್ಮ ರಾಷ್ಟ್ರವಲ್ಲ, ಅಸಹನೀಯ ಉಪಕಾರದೃಷ್ಟಿಯಿಂದ ಸ್ವಾತಂತ್ರ್ಯದ ನರ

ಮುದರಾಕ್ಷ ಪ್ರಾಂತ್ಯ ಕಷಿ
ಕರ ಸಾಲ ನಿಯಮಾಯ ಅಥವ

ನವರಾಜ್ಯ ಘಟನೆಯ ಕುರಿತು ಕವಿ ರವೀಂದ್ರರ ಪತ್ರ

ಯುರೋಪಿನ ಪ್ರಬಲ [illegible]ಗಳು ಪರಸ್ಪರ ನಾಶಕಾರಕವಾದ ಭೀಷಣ ಉನ್ಮಾದೋತ್ಸಾಹದಲ್ಲಿ ನಿರತನಾಗಿರುವುದರಿಂದ ಮುಂಬರುವ ಉತ್ಸಾಹವನ್ನು ತಪ್ಪಿಸುವುದು ಕರಿಣವಾಗಿದೆ. ವಸ್ತುಸ್ಥಿತಿಯು ಹೀಗಿದ್ದರೂ ದೌರ್ಭಾಗ್ಯ ಕಷ್ಟಪರಂಪರೆಗಳು ಅವ್ಯಾಹತವಾಗಿದ್ದರೂ, ಅವುಗಳು ಪ್ರತೀಕಾರದ ಮೇರೆಯನ್ನು ಮೀರಿ ಸಮಗ್ರ ಐರೋಪ್ಯ ನಾಗರಿಕತೆಯನ್ನು ಪತನಗೊಳಿಸಲಿಕ್ಕಿಲ್ಲ. ಕಾರಣ—ಆ ನಾಗರಿಕತೆಯಲ್ಲಿ ಯೋಗ್ಯ ಹಾಗೂ ಉಪಯುಕ್ತ ಅಂಶಗಳು ತುಂಬಾ ಇವೆ ಅದರ ವಿಧಿಯು ಕುರುಡಾಗಿ ಹೊಸ್ತನ್ನು ಡೆಯಿಡುವುದರಿಂದ ಅದನ್ನು ನಾಗ ಕೆಣಕಿದರೆ ಆ ಮುಯ್ಯನ್ನು ಏನುಮಾಡಲಿಹುದೆಂದು ಹೇ [illegible]

ಹೋಗುಗಾ[illegible] ಪಟ್ಟಿಯನ್ನು ಮಂಡಿಟ್ಟ [illegible] ದುರಿವ್ಯರ ಅಪಿಪೆಗಿ [illegible] ಸೇವನೆಗೆ ತಿ [illegible] ಒಂದನು[illegible]

ಒಂದು ವಿಚಾರದಿಂದ ಯುರೋಪಿನ ಪ್ರಬಲ ಶಕ್ತಿಗಳು ಪರಸ್ಪರ ನಾಶಕಾರಕವಾದ ಭೀಷಣ ಉನ್ಮಾದೋತ್ಸಾಹದಲ್ಲಿ ನಿರತನಾಗಿರುವುದರಿಂದ ಮುಂಬರುವ ಉತ್ಸಾಹವನ್ನು ತಪ್ಪಿಸುವುದು ತೀರಾ ಕರಿಣವಾಗಿದೆ. ವಸ್ತುಸ್ಥಿತಿಯು ಹೀಗಿದ್ದರೂ, ದೌರ್ಭಾಗ್ಯ ಕಷ್ಟಪರಂಪರೆಗಳು ಅವ್ಯಾಹತವಾಗಿದ್ದರೂ, ಅವುಗಳು ಪ್ರತೀಕಾರದ ಮೇರೆಯನ್ನು ಮೀರಿ ಸಮಗ್ರ ಐರೋಪ್ಯ ನಾಗರಿಕತೆಯನ್ನು ಪತನಗೊಳಿಸಲಿಕ್ಕಿಲ್ಲ ಕಾರಣ—ಆ ನಾಗರಿಕತೆಯಲ್ಲಿ ಯೋಗ್ಯ ಹಾಗೂ ಉಪಯುಕ್ತ ಅಂಶಗಳು ತುಂಬಾ ಇವೆ ಆದರೆ ವಿಧಿಯು ಕುರುಡಾಗಿ ಮುನ್ನುಡಯಿಡುವುದರಿಂದ ಅದನ್ನು ಆಗಾಗ ಕೆಣಕಿದರೆ ಆ ಮುಯ್ಯನ್ನು ಎತ್ತಿ ಸಾಗುವುದು ಹೇಗೆಲಾಗುವುದಿಲ್ಲ ಭಾರತದ [illegible]

ರಷ್ಯದ ವಿದೇಶಾಂಗ ಮಂತ್ರಿಗಳಾದ ಲಿಟ್ವಿನಾಫ್‌ರು

ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಬರೆಯುತ್ತಾರೆ.

ರತದ ನವಂಬರ್ ಘಟನೆಯ"

ರಿತು ನನ್ನ ಅಭಿಪ್ರಾಯವನ್ನು ಹಲವು ಇಂಗ್ಲಿಷ್ ಮಿತ್ರರು ಕೇಳಿ ನನ್ನನ್ನು ಗೌರ ವಿಸಿದ್ದಾರೆ. ಆದರೆ ಪ್ರಾರಂಭದಲ್ಲಿಯೇ ನಾನು ಒಂದು ವಿಚಾರವನ್ನು ಹೇಳಬೇಕಾಗಿದೆ. ಕೇಂದ್ರದಲ್ಲಿ ಜ್ಯಾರಿಗೆ ಬರಲಿರುವಂತಹ ಫೆಡ ರೇಶನು ಪೂರ್ಣ ಸ್ವಾಯತ್ತತೆಯ ಹೆಚ್ಚಿನಂಶ ವನ್ನು ಹೊಂದಿಕೊಂಡಿದೆಯೆಂಬ ಅಭಿಪ್ರಾ ಯವು ಸಾರ್ವತ್ರಿಕವಾಗಿ ಬಲವತ್ತಾಗಿ ಹಬ್ಬಿರು ಭನ್ನು ಕೊಡುವುದಿದ್ದರೆ ಬ್ರಿಟಿಷರು ಕೂಡಾ ತಮ್ಮನ್ನು ತಾವೇ ದೂರಿಕೊಳ್ಳುವರೆಂಬುದ ರಲ್ಲಿ ನನಗೆ ಸಂಶಯವಿಲ್ಲ.

ಆದರೆ ನಮ್ಮ ಆಳರಸರು ಇದನ್ನು ಖಂಡಿಸ ಬಹುದು. ನಮ್ಮಲ್ಲಿ ಕರುಣೆಯಿಟ್ಟು ಪ್ರೇಮ ಭಾವದಿಂದ ಕಂಡು, ಶಾಂತತಾಭಂಗವಾಗ ದಂತೆ ಆಳುವ ಮೂಲಕ ತಮ್ಮ ಪವಿತ್ರ ಕರ್ತವ್ಯವನ್ನುಮಾಡಿ, ನಮ್ಮನ್ನಾಳುವ ಹೊಣೆ ಗಾರಿಕೆಯ ಹೊರೆಯನ್ನು ಹೊರುತ್ತಿರುವರೆಂದು ಅವರು ಹೇಳಬಹುದು. ನಮ್ಮಲ್ಲಿ ಕೆಲವರು ಅವರ ಕೃಪಾಪೂರ್ಣ ಆಳ್ವಿಕೆಯ ಲಾಭ

ಕಾರವು ನಮ್ಮ ವ್ಯಾ
ಆರೋಗ್ಯ ಹಾಗೂ ಆರ್ಥಿಕ ಅಭಿವೃದ್ಧಿ
ಎಷ್ಟು ಹಣವನ್ನು ವಿನಿಯೋ
ಸಿದೆಯೆಂಬುದನ್ನೂ, ಭಾರತದ ಜನಸಂಖ್ಯೆ
ಯನ್ನು ಅವರಿತ್ತ ಪ್ರಯೋಜನಗಳೊಂದಿ
ಹೋಲಿಸಿ, ಆ ಒಳಿಕ ಅದನ್ನು ಜಪಾ
ನೊಡನೆ ತುಲನೆ ಮಾಡಿದರೆ, ಅವರು ನಮ
ಗಿತ್ತಿರುವ ಸೌಕರ್ಯಗಳೆಷ್ಟೆಂಬುದನ್ನು ತಿ
ಯುವುದು ಯಾವತ್ತೂ ಕಷ್ಟವಾಗಿರುವುದಿ

ಬ್ರಿಟಿಷ್ ಜನರೊಡನೆ ನಾನು ಸ್ಪ
ವಾಗಿ ಹೇಳುವ ಸರಳೋಕ್ತಿಯೊಂದಿ
ಎಷ್ಟರ ತನಕ ನೀವು ನಮ್ಮನ್ನು ನಿಮ್ಮ ಬಿಗಿ
ದಲ್ಲಿಟ್ಟುಕೊಳ್ಳುವಿರೋ ಅಷ್ಟರತನಕ ನಿಮ
ವಿಶ್ವಾಸ ಅಥವಾ ಸಖ್ಯವನ್ನು ಹೊಂದ
ನಿಮಗೆ ಸಾಧ್ಯವಿಲ್ಲ. ನಿಮ್ಮ ದೇಶದಲ್ಲಿ, ನಿಮ್ಮ
ಹಲವು ಸದ್ಗುಣಗಳವೆಯೆಂಬುದನ್ನು ನಾ
ತಿಳಿದಿದ್ದೇವೆ. ನಿಮ್ಮ ನ್ಯಾಯಸಮ್ಮ
ಯೋಗ್ಯವರ್ತನೆಗಳು ಪ್ರಶಂಸನೀಯವಾ
ದೆಂಬುದನ್ನು ನಾವರಿತಿದ್ದೇವೆ. ಪ್ರಾಯ

PAY BY CHEQUE

and thus ensure a Permanent and Accurate record of your money matters. A Savings Bank Account with us will also secure for you the many and useful services offered by the bank to its customers.

Estd. 1906.

RESOURCES OF A CRORE

CANARA BANK LIMITED

ಯು. ಆರ್. ಶೆಣೈ

ಸ್ಟ್ಯಾಂಪ್:- ಕೊಡಿಯ

ಎಲ್ಲಾ ತರದ ಶಾಲಾ ಕಾಲೇಜು ಪುಸ್ತ
ಮತ್ತು ಮುದ್ರಣ ಉಪಕರಣಗಳ
ಗಳು ಮತ್ತು ಪ್ರಿಂಟಿಂಗ್ ಕಾಗದಗಳ

For all kinds of School and articles, Printing Inks, Paper

U. R. Sh

Car-Street, Mangalore.

Binding

PLEASE GIV

VIRA TAILO

LADIES & GENT'S TA

C/O THE BOM

Opp: Government C

ಸ್ತ್ರೀಪುರುಷರ ಎಲ್ಲಾ ತರದ ಉ

ವೀರಾ ಟೈಲರಿಂಗ್

(ಗವರ್ನಮೆಂಟ್

ಇವರಿಗೆನೇ ಕೊಟ್ಟು ಪೂರ್ಣ

ಯುಳ್ಳವರು ನಿಮ್ಮ
ಬಿಮ್ಮಾ ಬಂಡವಾಳವನ್ನು ಬಹಳ ಕಷ್ಟದಲ್ಲಿ
ಕೂಡಿಟ್ಟಿರುವುದು ಈಗಾಗಲೇ ಭಾವಿಸುತ್ತಿರ
ಬೇಕು. ಅವನ್ನು ಪರಿಪಾಲಿಸುವಾಗ ನಿಮ್ಮ
ಲ್ಲಿನ ಸಮ್ಮಾನವನ್ನು ಮೂಲೆಪಾಲುಮಾಡಿ,
ಬಿಪ್ಪಾ ಮಹತ್ಪಿಕೆಯನ್ನು ಕೆಡಿಸಿರಬೇಕೆಂದು
ನೀವು ಭಾವಿಸಬಹುದು. ನಿಮ್ಮ ಅತಿಶಯ
ಸಾಮ್ರಾಜ್ಯದ ದೆಸೆಯುಂದಾಗಿ, ನೀಚ ಜನಾಂ
ಗಗಳು ರಾಜಕೀಯ ತತ್ವದ ಎದೆಮೆಟ್ಟಿ,
ನಿಮ್ಮ ಗೌರವ ಹಾಗೂ ಹಿತಸಂಬಂಧಗಳನ್ನು
ಶಿಕ್ಕರಿಸುವಾಗ ನೀವು ಸುಮ್ಮನಿರುವಷ್ಟು
ಅಶಕ್ತತೆಯು ನಿಮಗೆ ಬಂದಿರುವುದು. ನಿಮ್ಮಲ್ಲಿನ
ಪ್ರಾಬಲ್ಯದ ಬಲದಿಂದ ಸಂಸ್ಥಾಪಿಸಲ್ಪಟ್ಟ
ಸಾಮ್ರಾಜ್ಯದ ಆ ವಿಚಿತ್ರ ಗೌರವವನ್ನು ಅಲ್ಲ
ಗಳೆಯುವ ಧೀರ ತಜ್ಞರು ಬಹಳ ಕಡಿಮೆಯೆನ್ನ
ಬಹುದು. ಪ್ರಾಬಲ್ಯದ ಆತ್ಮಹತ್ಯಾಕಾರಕವಾದ
ಕುರುಡು ಮುನ್ನಡೆಯನ್ನು ತಡೆಯುವಷ್ಟು
ಶಕ್ತಿಯು ಅಂಥ ಧೀರವ್ಯಕ್ತಿಗಳಿಗಿಲ್ಲ.

ನೀವು ನನ್ನ ವೈಯಕ್ತಿಕ ಅಭಿಪ್ರಾಯ
ವನ್ನು ಕೇಳುವುದಿದ್ದರೆ ಇತ್ತೀಚಿಗೆ ನಡೆದ

ಡ್ ಸನ್ಸ್, ರಥಬೀದಿ.
ಬೈಲ್, ಮಂಗಳೂರು.
ಸ್ಟೇಶನೆರಿ, ಕಟ್ಲೆರಿ, ಪ್ರಿಂಟಿಂಗ್ ಶಾಯಿ,
ನೀಕಾವ ಸುಗಂಧ ದ್ರವ್ಯ ಉಡುಗೆರೆ ವಸ್ತುಗಳ
ನಮ್ಮಲ್ಲಿ ಸುಲಭದರದಲ್ಲಿ ಸಿಗುವುವು.
llege requisites, Books, Stationary
student's everyday requisites-
y & Sons,
Branch at Kodialbail.
ir speciality.

US A TRIAL
RING HOUSE
ORS & OUT-FITTERS.
BAY AGENCY
lege. MANGALORE.
ತ್ತಮ ಹೊಲಿಗೆ ಕೆಲಸವನ್ನು
ಸ್, ಮಂಗಳೂರು.
ಲೇಜಿನ ಎದುರು)
ಸಮಾಧಾನವನ್ನು ಪಡೆಯಿರಿ.

ಪರಿವರ್ತನೆಯಾದರೆ ಅದು ಪ್ರತಿಕ್ರಿಯಾಗುವುದನ್ನು ಕಾಣಲು ನಾವು ಆಶಿಸುತ್ತೇವೆ. ನಿಮ್ಮ ಹಾಗೂ ನಮ್ಮ ಜನರಲ್ಲಿ ತಲೆದೋರುತ್ತಿರುವ ಭೀಷಣ ಹಾಗೂ ಕುರುಡು ವಿಚಾರಗಳಿಗೆ ವಿರೋಧವಾಗಿ ನೀವು ಮತ್ತು ನಾವು ಸಂಘಟಿತರಾಗಿ ನಿಲ್ಲುತ್ತೇವೆ. ಬ್ರಿಟಿಷ್ ಜನರೊಂದಿಗೆ ಭಾರತೀಯರು ಸದಾ ವೈರತ್ವದಿಂದಿಲ್ಲ. ಆದರೆ ಜಾಗೃತ ಭಾರತವು ಇತ್ತಂಡದವರಿಗೂ ಘಾತುಕವಾದ ಅಂಧ ದುಷ್ಟಶಕ್ತಿಗಳ ಪ್ರಭಾವಕ್ಕೆ ವಿರೋಧವಾಗಿದೆ. ನವರಾಜ್ಯ ಘಟನೆಯ ವಿಚಾರವಾಗಿ ಅದರ ಈಗಿನ ರೂಪವನ್ನು ನೋಡುವುದಿದ್ದರೆ ಆ ಕುರಿತು ನಾವು ಮನೋನೈರ್ಮಲ್ಯವೂ, ಕಾರ್ಪಣ್ಯದಿಂದೊಗೂಡಿದ ಅವಿಶ್ವಾಸವೂ ಅದರಲ್ಲಡಗಿರಬೇಕು.

ಅಂತಹ ಕೃತಕ ರಚನೆಯಿಂದ ನಮಗೆ ಖಂಡಿತವಾಗಿಯೂ ಯಾವ ಪೂರ್ಣಪ್ರಯೋಜನವೂ ಸಿಗುವಂತಿಲ್ಲ. ಮನುಷ್ಯರನ್ನು ಮನುಷ್ಯರು, ಜನಾಂಗಗಳನ್ನು ಜನಾಂಗಗಳು ಸುಲಿಗೆ ಮಾಡುವುದನ್ನು ನಿಲ್ಲಿಸಲು ಯತ್ನಿಸುವ [illegible] ಶಕ್ತಿಗಳೊಡನೆ ಸಖ್ಯಬೆಳೆಸಲು ಕಲಿಯುವುದರಲ್ಲಿ ನಮ್ಮ ಭವಿಷ್ಯವು ಹೊಂದಿಕೊಂಡಿದೆ.

SUPPLY AGENCY LIMITED,
UDIPI.

Authorised Capital **Rs. 1,00,000/-**
Subscribed & Paid-up Capital **,, 30,200/-**

REVISED RATES OF INTEREST
FOR FIXED DEPOSITS
FROM 1—4—1938.

3 to 6	Months	4% p. a.
7 ,, 11	,,	5% p. a.
12 ,, 18	,,	6% p. a.

ತಾಲ್ಲೂಕು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘ, ತೀರ್ಥಹಳ್ಳಿ

ಕರ್ನಾಟಕ ವೃತ್ತಪತ್ರಿಕಾ ಪ್ರದರ್ಶನ
6—1—1962.

ಪತ್ರಿಕೆ ಹೆಸರು _____
ಆರಂಭ ದಿನಾಂಕ _____
ಪ್ರಕಟನಾ ಸ್ಥಳ _____
ಸಂಪಾದಕರ ಹೆಸರು _____
ಮ್ಯಾನೇಜರ ಹೆಸರು _____
ಸೌಜನ್ಯ ಕೃಪೆ _____

ಭವಿಷ್ಯವನ್ನು ನೋಡಿ!

25 ರೂ. ಬಹುಮಾನ ಕೊಡುವ

ಕಥಾವಳಿ

1938 ಉತ್ತಮ ವರ್ಗದ ಸಚಿತ್ರ ಮಾಸ ಪತ್ರಿಕೆ

Vol. I. No. 3

September 1938

WORLD ...

Shimoga ...

KATHAVALI

PRICE 1 ANNA

ಕಥಾವಳಿ

ದೀಪಾವಳಿಯ ವಿಶೇಷ ಸಂಚಿಕೆ ೧೯೫೭

ಒಂದು ಆಂಗ್ಲ ವಿಚಾರಸರಣಿಯಿಂದ—

ದ ರ್ ಶ ನ.....!

ಒಂದು ಕಥೆ

ಳಿಂ

ಖಂಡುರಾವ ಜಾಧವ, ಧಾರವಾಡ

ಮುಂಬಯಿಯಲ್ಲಿ ಒಂದು ಭವ್ಯವಾದ ಸ್ಟೇಷನರಿ ಅಂಗಡಿ. ಗ್ರೀನ್ ಮತ್ತು ಕಂಪನಿ ಆ ಅಂಗಡಿಯ ಹೆಸರು. ಆ ಅಂಗಡಿಯಲ್ಲಿ ಎಲ್ಲಾ ತರದ ಆಟದ ಸಾಮಾನುಗಳೂ, ಸೌಂದರ್ಯ ಸಾಧನಗಳೂ ದೊರಕುವವು. ಆ ಅಂಗಡಿಯ ಷೋ-ರೂಮು ರಾತ್ರಿ ಸಮಯದಲ್ಲಿ ವಿದ್ಯುತ್ ದೀಪದ ನಾನಾ ಬಣ್ಣದ ಬೆಳಕಿನಲ್ಲಿ ಅತ್ಯಂತ ರಮಣೀಯವಾಗಿ ಕಾಣುವದು. ಬೀದಿಯಿಂದ ಬರಹೋಗುವ ಜನರು ಈ ಆಕರ್ಷಕವಾದ ವಸ್ತುಗಳನ್ನು ನೋಡಿ ಮೈಮರೆತು ಎಷ್ಟೋ ಸಮಯದವರೆಗೆ ನಿಲ್ಲುತ್ತಿದ್ದರು. ಪ್ರತಿಯೊಬ್ಬ ದಾರಿಕಾರನು ಒಮ್ಮೆಯಾದರೂ ಈ ಷೋ-ರೂಮನ್ನು ನೋಡದೆ ಮುಂದೆ ಹೆಜ್ಜೆಯಿಡುತ್ತಿರಲಿಲ್ಲ.

ಈ ಅಂಗಡಿಯಲ್ಲಿ ವಸ್ತುಗಳ ಬೇರೆ ಬೇರೆ ವಿಭಾಗಗಳಿಗೆ ಬೇರೆ ಬೇರೆ ಜನರನ್ನು ನಿಯಮಿಸಿದ್ದರು. ಸೌಂದರ್ಯ ಸಾಧನೆಗಳಾದ ಹೇರ್ ಆಯಿಲ್, ಸ್ನೋ, ಪೌಮೆಡ್ಸ್, ಕ್ರೀಮ್ಸ್ ಮುಂತಾದವುಗಳ ಮೇಲೆ ಮಿಸ್ ಹೆಲೆನ್ ಎಂಬಾಕೆಯನ್ನು ನಿಯಮಿಸಿದ್ದರು. ಮಿಸ್ ಹೆಲೆನಳ ವಿನಯಶೀಲತೆ, ಸವಿಯಾದ ಮಾತುಗಳು, ಸದಾ ಹಸಿತ ಮುಖ, ಇವೆಲ್ಲವೂ ಬಂದ ಗಿರಾಕಿಗಳಿಗೆ ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದವು. ಎಷ್ಟೋ ಗಿರಾಕಿಗಳು ತಮ್ಮ ಇಚ್ಛೆಯಿಲ್ಲದಿದ್ದರೂ ಹೆಲೆನಳ ಸಲಿಗೆಯಾದ ಆಗ್ರಹದ ಮೂಲಕ ಎಷ್ಟೋ ಸಾಮಾನುಗಳನ್ನು ಕೊಳ್ಳುತ್ತಿದ್ದರು.

ಒಂದು ದಿನ ಸಂಧ್ಯಾಕಾಲದ ಸಮಯ. ಬೀದಿಯಲ್ಲಿ ಹೋಗು ಬರುವ ಜನರ ಸಂದಣಿ. ಗ್ರೀನ್ ಮತ್ತು ಕಂಪನಿಯಲ್ಲಿ ಎಷ್ಟೋ ಗಿರಾಕಿಗಳು ಸೇರುತ್ತಲಿದ್ದರು. ಇನ್ನು ಕೆಲವರು ಸಾಮಾನಿನ ಬಂಡಲುಗಳೆನ್ನು ಹಿಡಿದುಕೊಂಡು ಅಂಗಡಿಯಿಂದ ಹೊರಬೀಳುತ್ತಿದ್ದರು. ಝಣ್ ಝಣ್ ಎಂದು ರೂಪಾಯಿ ಎಣಿಸುವ ಶಬ್ದ ಕೇಳಿಬರುತಿತ್ತು. ಅಂದು ಹೆಲೆನಳಿಗೂ ಪುರಸತ್ತು ಇರಲಿಲ್ಲ. ಮುಂಜಾನಿನಿಂದ ಜನರಿಗೆ ಇದು ತೋರಿಸು, ಅದು ತೋರಿಸು, ಅದರ ಬೆಲೆ ಇಷ್ಟು, ಇದರ ಬೆಲೆ ಇಷ್ಟು ಎಂದು ಜನರ ಕೂಡ ಒಂದೇ ಪ್ರಕಾರದ ವ್ಯವಹಾರ ನಡೆದಿತ್ತು. ಈಗ ಮಾತ್ರ ಸ್ವಲ್ಪ ಬಿಡು ದೊರಕಿತು. ಅಸ್ಥವ್ಯಸ್ಥವಾದ ತನ್ನ ಸಾಮಾನುಗಳನ್ನು ಬೇಗನೆ ಸೌವರಿಸಿದಳು. ಕಿಡಕಿಯ ಹತ್ತರಿದ್ದ ತನ್ನ ಕುರ್ಚಿಯ ಮೇಲೆ ಒಂದು ಕ್ಷಣ ಕೂಡ್ರಬೇಕೆಂದು ಹೋದಳು. ಆಕೆಯ ಕಣ್ಮುಂದೆ ಬರೇ ಕ್ರೀಮುಗಳೂ, ಸ್ನೋಗಳೂ ಇವೇ ಕಟ್ಟಿದಂತಾಗಿದ್ದವು. ಸ್ವಲ್ಪ ಹೊತ್ತಿನ ಮೇಲೆ ಜಾಗೃತಳಾದಳು. ಬೀದಿಯಲ್ಲಿ ಜನರ ಗುಂಪು ಎಂದಿನಂತೆ. ಮೋಟಾರುಗಳ ಓಡಾಟ, ಟ್ರಾಮುಗಳ ಓಡಾಟ! ಸಂಧ್ಯಾಕಾಲದ ತಂಗಾಳಿಯು ಆಕೆಯ ಮನಸ್ಸಿಗೆ ಆಹ್ಲಾದವನ್ನುಂಟು ಮಾಡಿತು. ಒಂದು ದೊಡ್ಡದಾದ ನಿಟ್ಟುಸಿರು ಬಿಟ್ಟು ಹೊರಗಿನ ದೃಶ್ಯವನ್ನು ಶೂನ್ಯಳಾಗಿ ನೋಡುತ್ತ ನಿಂತಳು.

ಹೆಲೆನಳು ಹಾಗೆ ನಿಂತಿರುವಾಗ ಬೀದಿಯ ಆಚೆ ಬದಿಯಿಂದ ಯಾರೋ ಸಿಳ್ಳುಹಾಕುವದನ್ನು ಕೇಳಿದಳು. ಕೂಡಲೆ ಆಕೆಯ ಲಕ್ಷವು ಅತ್ತಕಡೆಗೆ ಹೋಯಿತು. ಬೀದಿಯ ಆಚೆಯ ಬದಿಗಿರುವ ಒಂದು ಕಂಭಕ್ಕೆ ಆತುನಿಂತ ಒಬ್ಬ ತರುಣನು ಕಂಡನು. ಆಕೆಯ ಲಕ್ಷವು ಯಾವ ಕ್ಷಣಕ್ಕೆ ಆತನ ಕಡೆಗೆ ಹೋಯಿತೋ ಅದೇ ಕ್ಷಣಕ್ಕೆ ಆ ಯುವಕನು ಆಕೆಯ ಕಡೆಗೆ ನೋಡಿದನು. ಮೀಸೆರಹಿತವಾದ ಆತನ ಮುಖ, ವಿಶಾಲವಾದ ಹಣೆ, ನೀಟಾದ ಮೂಗು, ರಸಭರಿತವಾದ ಕಣ್ಣುಗಳು, ಬಲವಾದ ಬಾಹುಗಳು, ಅಂತೂ ನೋಡಲಿಕ್ಕೆ ಸುಂದರನಿದ್ದನು. ಆಕೆಯನ್ನು ನೋಡಿ ದೊಡನೆಯೇ ಆತನು ನಕ್ಕನು. ಏನು ಕಾರಣವೋ ಆಕೆಯೂ ನಕ್ಕಳು.....ಆ ಯುವಕನು ಕೂಡಲೆ ಚಟುವಟಿಕೆಯಿಂದ ತನ್ನ ಬಲಗೈಯನ್ನು ಬಲಜೇಬಿನಲ್ಲಿ ಹಾಕಿ ಸಿಳ್ಳು ಹಾಕುತ್ತ ಗ್ರೀನ್ ಮತ್ತು ಕಂಪನಿಯ ಬಾಗಿಲಕಡೆಗೆ ಬಂದನು. ಬಾಗಿಲ ಸೇರಿ ಸೌಂದರ್ಯವಿಭಾಗ ಅರ್ಥಾತ್ ಮಿಸ್ ಹೆಲೆನಳ ಕಡೆಗೆ ಬಂದನು. ಹೆಲೆನಳು ಕೂಡಲೆ ಆನಂದದಿಂದ ಮುಂದೆ ಬಂದು, "ಸುಸ್ವಾಗತಮ್, ಬನ್ನಿರಿ.....ಏನು ಬೇಕು ತಮಗೆ?" ಎಂದು ನಿತ್ಯರೂಢಿಯ ಪ್ರಕಾರ ಪ್ರಶ್ನಿಸಿದಳು. ಆ ತರುಣನು ಮನದಲ್ಲಿಯೇ ವಿಚಾರಿಸಿದನು, "ನನಗೆ ಬೇಕಾದದ್ದು ಏನು?..... ಹಾಂ....." ಒಂದು ಕ್ಷಣ ತಡೆದು, "ಹೌದು.....ನಿಮ್ಮಲ್ಲಿ ಫೇಸ್ ಕ್ರೀಮ್ಸ್ ಅವೆಯೋ?" ಎಂದು ಹುಬ್ಬು ಏರಿಸುತ್ತ ಗೋಣು ಕೆಂಚಿತ್ತು ಸೊಟ್ಟನಾಡುತ್ತ ಕೇಳಿದನು.

"ಓ ಎಸ್.....ನಾನಾ ಬಗೆಯವು" ಎಂದು ಅನ್ನುತ್ತ ಆತನ ಕಡೆಗೆ ಬೆನ್ನು ತಿರುವುತ್ತ ತನ್ನ ಹಿಂದಿನ ಕಪಾಟಿನಿಂದ ಹಲವು ಸೀಸೆಗಳನ್ನು ತೆಗೆದಿಟ್ಟಳು. "ನಿಮಗೆ ಯಾವದು ಬೇಕು?" ಎಂದು ಅನ್ನುತ್ತ ಆತನ ಕಡೆಗೆ ಮುಖಮಾಡುವಷ್ಟರಲ್ಲಿ ಆ ತರುಣನು ತನ್ನ ಕಡೆಗೆ ನೋಡುತ್ತಿರುವದು ಆಕೆಗೆ ಕಂಡುಬಂದಿತು.

"ಸಾರಿ, ನನಗೆ ಯಾವದೂ ಬೇಡ.....ಥ್ಯಾಂಕ್ಸ್" ಹೀಗೆ ಅನ್ನುತ್ತ ಮುಖ ತಿರುವಿ ಆತನು ಹೊರಹೊರಟನು. ಹೆಲೆನಳು ಏನೋ ಅನ್ನಬೇಕೆಂದಿದ್ದಳು. ಆದರೆ ಅಷ್ಟರಲ್ಲಿ ಆ ಯುವಕನು ಮಾಯವಾಗಿದ್ದನು. ಎಂಥ ವಿಚಿತ್ರ ನಡಿಗೆ? ಹೆಲೆನಳಿಗೆ ಅತ್ಯಂತ ಆಶ್ಚರ್ಯವಾಯಿತು. ಸ್ವಲ್ಪ ಹೊತ್ತು ವಿಚಾರಮಾಡಿ ತನ್ನಷ್ಟಕ್ಕೆ ತಾನೇ ನಕ್ಕಳು. ಕೂಡಲೆ ಸಾಮಾನುಗಳನ್ನು ವ್ಯವಸ್ಥಿತವಾಗಿಟ್ಟು ತನ್ನ ಕೆಲಸಕ್ಕೆ ಹತ್ತಿದಳು. ಆದರೆ ಆಕೆಗೆ ಸಮಾಧಾನವೆಲ್ಲಿ? ಮೇಲಿಂದ ಮೇಲೆ ಆ ವಿಚಿತ್ರ ತರುಣನ ವಿಷಯಕ್ಕೆ ಆಕೆಗೆ ವಿಚಾರಗಳು ಬರುತ್ತಿದ್ದವು. "ಈ ತರುಣನು ಹುಚ್ಚನಿರಬಹುದೋ? ಛೇ.....ಹಾಗಾದರೆ ಹೀಗೇಕೆ ಅವನ ವರ್ತನ? ಅವನು ನನ್ನನ್ನು ಏನು ಕೇಳಿದನು? ಕ್ರೀಮ್ಸ್ ಅವೆಯೋ? ಎಂದು. ನಾನು ಅವುಗಳನ್ನು ತೋರಿಸಿದಾಗ ಬೇಡೆಂದು ಏಕೆ ಹೀಗೆ ಒಮ್ಮಿಂದೊಮ್ಮೆ ಜಾರಿಹೋದನು?.... ಆಂ....ಏನು....ನಾನು ಆತನಿಗೆ ನಿಜಕಾರಣ ಕೇಳಬೇಕಾಗಿತ್ತು. ಕ್ರೀಮ್ಸ್ ಏಕೆಬೇಡೆಂದಿರಿ....ನನ್ನಿಂದ ಒಂದು ದೊಡ್ಡ ತಪ್ಪಾಯಿತು. ಮತ್ತೊಮ್ಮೆ ಆತನು ನನಗೆ ಭೇಟಿಯಾಗುವ ಸಂಭವ ಹೇಗೆ? ನಾಳೆ ಒಂದುವೇಳೆ ಅಕಸ್ಮಿತ್ ಭೇಟಿಯಾದರೆ ಆತನನ್ನು ಕೂಡಲೆ ವಿಚಾರಿಸುವೆನು....ಆಗಲಿ...." ಇದೇ ವಿಚಾರದಿಂದ ಆಕೆ ಆಫೀಸ್ ಬಿಟ್ಟಳು...ಮನೆಗೆ ಹೋದರೂ ಅದೇ ವಿಚಾರ!

ಹೆಲೆನಳ ಅಪೇಕ್ಷೆಗನುಸಾರವಾಗಿ ಮಾರನೇ ದಿನ ಆ ತರುಣನು ಅದೇ ಸ್ಥಳಕ್ಕೆ ಆ ಕಂಭಕ್ಕೆ ಆನಿಸಿ ನಿಂತುಕೊಂಡದ್ದು, ನಿಂತದ್ದು ಕಂಡಳು. ಆತನು ನಿನ್ನಿನಂತೆ ಈವತ್ತು ಷೋರೂಮಿನ ಕಡೆಗೆ ನೋಡುತ್ತ ನಿಂತಿದ್ದನು. ಆಕೆಯು ಅವನ ಕಡೆಗೆ ನೋಡಿದ ತಕ್ಷಣವೇ ಆತನೂ ಆಕೆಯ ಕಡೆಗೆ ಒಮ್ಮಿಂದೊಮ್ಮೆ ನೋಡಿದನು. ಅವನನ್ನು ಕರೆಯಬೇಕೆಂದರೆ ಬಗೆ ಹೇಗೆ. ಆದರೆ ಈ ಬಿಕ್ಕಟ್ಟು ಕೂಡಲೆ ದೂರಾಯಿತು. ಯಾಕೆಂದರೆ ಆತನು ಷೋ ರೂಮಿನ ಬಾಕಿಲಕಡೆಗೆ ನಡೆದನು. ಹೆಲೆನಳ ಕಡೆಗೆ ಬಂದನು. ಅವನನ್ನು ನೋಡಿದೊಡನೆಯೇ ತಾನು ಕೇಳಲಿರುವ ಸಹಸ್ರಾರು ಪ್ರಶ್ನೆಗಳು ಮಾಯವಾದವು ಮತ್ತು ನಿತ್ಯದಂತೆ "ಬನ್ನಿರಿ, ಏನು ಬೇಕು ತಮಗೆ?" ಎಂಬ ಸಹಜನಾದ ಪ್ರಶ್ನೆಯು ಆಕೆಯ ತುಟಿಯಿಂದ ಹೊರಬಿದ್ದಿತು.

"ನಿಮ್ಮಲ್ಲಿ ಪೌಡರ್ ಇರುವದೋ?"

"ಓ ಎಸ್" ಎಂದು ಒಮ್ಮೆಲೆ ಬದಿಯಲ್ಲಿರುವ ಕಪಾಟನ್ನು ತೆರೆಯತೊಡಗಿದಳು. ಓಹೋ, ನಿನ್ನೆ ಬಂದಾಗ್ಗೆ ಪೌಡರು ಕೇಳುವದರ ಬದಲಾಗಿ ಕ್ರೀಮ್ ಕೇಳಿರಬಹುದೆಂಬ ವಿಚಾರವು ಆಕೆಗೆ ಹೊಳೆದುಹೋಯಿತು.

"ಇಗೋ ತಕ್ಕೊಳ್ಳಿರಿ" ಎಂದು ಹಲವು ಡಬ್ಬಿಗಳನ್ನು ಮುಂದಿಟ್ಟಳು. "ಇವುಗಳ ಪೈಕಿ ಯಾವದು ಸೇರುವದು ನಿಮಗೆ?" ಹಸಿತ ಮುಖಳಾಗಿ ಪ್ರಶ್ನಿಸಿದಳು. ಆ ಯುವಕನು ಆಕೆಯ ಸುಂದರ ಮುಖವನ್ನು ಒಂದೇ ಸಮನೆ ನೋಡುತ್ತಿದ್ದನು.

"ಇವುಗಳ ಪೈಕಿ ಯಾವದು ಉತ್ತಮ?" ಆತನು ಸಾಮಾನುಗಳನ್ನು ನೋಡದೆ, ಆದರೆ ಆಕೆಯ ಮುಖವನ್ನು ನೋಡುತ್ತ ಶೂನ್ಯನಾಗಿ ಪ್ರಶ್ನಿಸಿದನು.

"ಇಗೋ ಇದು ಕಿಂಚಿತ್ತು ತುಟ್ಟಿಯಾದರೂ ಉತ್ತಮವಿರುವದು." ಮುಂದಿನ ಗುಂಪಿನೊಳಗಾದ ಒಂದನ್ನು ಬಲಗೈಯಿಂದ ಎತ್ತಿ ಹಿಡಿದು ನುಡಿದಳು.

"ಇರಲಿ, ಯಾನದೂಬೇಡ ನನಗೆ" ವಾಕ್ಯ ಪೂರ್ಣಮಾಡುವದರೊಳಗೆ ಮೋರೆ ತಿರುವಿ ಹೊರಟನು. ಬಲಗೈಯಲ್ಲಿಯ ಡಬ್ಬಿಯನ್ನು ಕೆಳಗಿಟ್ಟು ಮೇಲೆ ನೋಡುವಷ್ಟರಲ್ಲಿ ಅವನು ಮಾಯವಾಗಿದ್ದನು.

ಎಂಥ ವಿಚಿತ್ರ ಗಿರಾಕಿ ಇದು? ಈತನಿಗೆ ಬೇಕಾದದ್ದಾದರೂ ಏನು? ಸುಮ್ಮನೆ ಏಕೆ ಹೀಗೆ ಮಾಡುವನು? ಒಂದು ವೇಳೆ ಇವನ ಹತ್ತಿರ ಸಾಮಾನುಕೊಳ್ಳಲು ಹಣವಿರಲಿಕ್ಕಿಲ್ಲವೇ? ಈತನ ತಲೆಯಾದರೂ ಕೆಟ್ಟಿಲ್ಲ. ದಾರಿಹಿಡಿದು ಮಾತಾಡುವನು. ಮಾತಿನಲ್ಲಿ ವಿನಯವಿರುವದು. ಮುಖದ ಮೇಲೆ ಮೌನವಿರುವದು. ವ್ಯವಸ್ಥಿತವಾದ ಉಡುಪು. ಆದರೆ ಈ ಚಮತ್ಕಾರಿತವಾದ ರೀತಿಯಲ್ಲೇಕೆ ಆಚರಿಸುವನು? ನಾಳೆ ಆತನನ್ನು ತಪ್ಪದೆ ಈ ಎಲ್ಲವನ್ನು ವಿಚಾರಿಸುವೆನು. ನಿಶ್ಚಯ!

ಮಾರನೇ ದಿನ ಮತ್ತೆ ಆ ತರುಣನು ಅದೇ ಸ್ಥಳದಲ್ಲಿ ಎಂದಿನಂತೆ ನಿಂತಿದ್ದನು. ಆಕೆಯು ಅವನ ಕಡೆಗೆ ನೋಡಿ ನಕ್ಕಳು ಅವನೂ ಕೂಡ.....? ಈಗ ಮಾತ್ರ ಆಕೆಯಿಂದ ತಡೆಯುವದಾಗಲಿಲ್ಲ. ನಗನಗುತ್ತಲೆ ಆತನನ್ನು ಸನ್ನೆಯಿಂದ ಕರೆದಳು. ಆತನ ಮುಖದ ಮೇಲೆ ಆನಂದವೃತ್ತಿಯು ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಆತನು ಕೂಡಲೆ ಬಂದು ಆಕೆಯ ಮುಂದೆ ನಿಂತನು. ಹೆಲೆನಳು ನಗೆಯನ್ನು ಧಾರಣಮಾಡುತ್ತ, ಕಣ್ಣುಗಳನ್ನು ಮಿಂಚಿ

ಸುತ್ತ, ಗೋಣು ಅಲ್ಲಾಡಿಸುತ್ತ, ಧ್ವನಿಮೂಲಕ ಮಾಧುರ್ಯವನ್ನು ಕೆಡಹುತ್ತ, " ನಿಮ್ಮ ಹೆಸರೇನು?"

" ಯಾಕೆ?"

" ಯಾಕಿಲ್ಲ ಸಹಜವಾಗಿ."

" ನನ್ನ ಹೆಸರು ಹೆನ್ರಿ."

" ನಿಮ್ಮ ಕಡೆಗೆ ನನ್ನ ಅತ್ಯಂತ ಮಹತ್ವದ ಕೆಲಸವಿರುವದು."

" ಇರಬಹುದು, ನಾನೇನು ಮಾಡಲಿ ?"

" ನೀವು ಸ್ವಲ್ಪ ತಡೆಯಿರಿ, ನನ್ನ ಕೆಲಸವು ತೀರುತ್ತಾ ಬಂದಿರುವದು."

" ಆಗಲಿ."

" ಥ್ಯಾಂಕ್ಸ್."

ಇಡೀ ದೇಹವನ್ನೇ ಲತೆಯಂತೆ ಅಲ್ಲಾಡಿಸಿ ಹೆಲೆನಳು ಭರದಿಂದ ಕೆಲಸದಲ್ಲಿ ತೊಡಗಿದಳು. ಸ್ವಲ್ಪ ಹೊತ್ತಿನ ಮೇಲೆ ಕೆಲಸವು ಮುಗಿಯಿತು. ಹೆನ್ರಿಯ ಹತ್ತರ ಬರುತ್ತ, " ನನ್ನ ಕೆಲಸವು ಮುಗಿಯಿತು " ಎಂದು ಅಂದಳು.

" ಚನ್ನಾಯಿತು."

" ನಡೆಯಿರಿ ಹೋಗೋಣ ?"

" ಎಲ್ಲಿಗೆ?"

" ಎಲ್ಲಿಗಾದರೂ ಒಂದು ಗುಪ್ತಸ್ಥಳಕ್ಕೆ, ಒಂದು ಗುಪ್ತ ಮಾತಿಗಾಗಿ."

" ನಡೆಯಿರಿ ಹಾಗಾದರೆ."

" ಹೆನ್ರಿ, ನನ್ನ ರೂಮಿಗೆ ಹೋದರೆ ಹೇಗೆ?"

" ಹೇಗೆ " ನನಗೇನು ಕೇಳುವಿ ?"

" ಅಲ್ಲಿಗೆ ಹೋಗೋಣ ನಡೆಯಿರಿ."

" ಓಹೋ, ಆಗಲಿ ?"

ಇಬ್ಬರೂ ಒಂದು ಬಾರಿ ಮನೆ ಮುಟ್ಟಿದರು. ಹೆನ್ರಿಯು ಒಂದು ಕುರ್ಚಿಯ ಮೇಲೆ ಕೂಡ್ರುತ್ತ " ಈಗಾದರೂ ನಿಮ್ಮ ಗುಪ್ತ ಮಾತು ಹೇಳುವಿರಾ?"

" ಹೆನ್ರಿ ಆ ದಿನ ನೀವು ಕ್ರೀಮ್ಸ್ ಮತ್ತು ಪೌಡರು ಕೊಳ್ಳಲು ನಮ್ಮ ಕಂಪನಿಗೆ ಬಂದಿದ್ದಿರಿ?" ಹೆಲೆನಳು ಪ್ರಶ್ನಿಸಿದಳು.

" ಬಂದಿದ್ದೆ, ಹೌದು."

" ನೀವು ಕೇಳಿದಾಗ ನಾನು ತರತರದ ಸಾಮಾನುಗಳನ್ನು ತೋರಿಸಿದೆನು. ಆದರೆ ನೀವು ಅವುಗಳನ್ನು ಕೊಳ್ಳಲಿಲ್ಲ. ಯಾಕೆ ?"

" ನನಗೆ ಬೇಡಾಗಿದ್ದವು ಅವು. "

" ಹಾಗಾದರೆ ನಿಮಗೆ ಬೇಕಾದದ್ದಾದರೂ ಏನು ?"

" ನನಗೊಂದು ಬೇರೆ ಸಾಮಾನು ಬೇಕಾಗಿರುವದು."

" ಅದಾವದು ಹೇಳಿರಿ. ನಾಳೆ ನಾನು ನಿಮ್ಮ ಮನೆಗೆ ತಂದೊಪ್ಪಿಸುವೆನು ಅದನ್ನು " ಹೆಲೆನಳು ಆತುರತೆಯಿಂದ ಕೇಳಿದಳು.

" ಆದರೆ ಆ ವಸ್ತುವನ್ನು ನಾನು ಕಂಪನಿಯಿಂದ ಕೊಳ್ಳಬೇಕಾಗಿಲ್ಲ?"

" ಹಂ....ಹಾಗಾದರೆ ಯಾರ ಕಡೆಯಿಂದ?"

" ನಿಮ್ಮ ಕಡೆಯಿಂದ "

" ನನ್ನ ಕಡೆಯಿಂದ? ಸಾಧ್ಯವಿದ್ದಲ್ಲಿ ಈಗಲೇ ತಕ್ಕೊಳ್ಳಿರಿ.... ಯಾವದು ಆ ನಿಮ್ಮ ಸಾಮಾನು ?"

" ನಿನ್ನ ದರ್ಶನ " ಕರುಣಾಯುಕ್ತವಾದ ನಯನಗಳಿಂದ ಹೆಲೆನಳನ್ನು ನೋಡುತ್ತ ಹೆನ್ರಿಯು ನುಡಿದನು.

" ಹಂ s s s .....ತಿಳಿಯಿತು."

ಹೆಲೆನಳಿಗೆ ಆನಂದವಾಯಿತು. ಹೃದಯವು ಪ್ರೇಮದಿಂದ ಉಕ್ಕೇರಿಬರುತ್ತಿತ್ತು. ಆದರೆ ಅದನ್ನು ಹೊರಗೆ ತೋರಿಸುವದು ಬೇಡವಾಗಿತ್ತು ಆಕೆಗೆ.

" ಹೆನ್ರಿ, ನನ್ನ ದರ್ಶನ ಬೇಕಾಗಿದ್ದರೆ ನಿತ್ಯವು ಆ ಕಂಬದ ಹತ್ತಿರ ನಿಲ್ಲಿರಿ, ಅಂದರೆ ದರ್ಶನವಾಗುವದು?"

" ನಿಮ್ಮ ಆಫೀಸಿಗೆ ಬಿಡುವಾಗಿದ್ದಾಗ ಹೇಗೆ?"

" ನನ್ನ ಬೆನ್ನು ಹತ್ತಿ ಮನೆಗೆ ಬಂದು ದರ್ಶನಮಾಡಿಸಿಕೊಳ್ಳಿರಿ."

" ಆದರೆ ಅದೆಲ್ಲವೂ ...ಅದೆಲ್ಲವೂ ಕ್ಷಣಿಕವಾಗುವದಿಲ್ಲವೇ ?"

" ಚಿರಕಾಲವಾಗಬೇಕಾದರೆ ಅದಕ್ಕೆ ಬೆಲೆಯಿರುವದು."

" ಯಾವ ಬೆಲೆ ?"

" ನಿಮ್ಮ ಹೃದಯ."

" ಆಗಲಿ " ಅನ್ನುತ್ತ ಹೆಲೆನಳ ಮುಂದಿನ ಶಬ್ದಗಳನ್ನು ಬರಗೊಡಿಸದೆ ಆಕೆಯ ಮೃದುವಾದ ತುಟಿಗಳ ಮೇಲೆ ತನ್ನವುಗಳನ್ನಿಟ್ಟನು.

ಸಮಾಪ್ತಿ

ಪ್ರೇಮಜ್ವಾಲಾ

ಎಂತಹ ಕಲ್ಲೆದೆಯವನಾದರೂ ಪ್ರೇಮಜ್ವಾಲೆಗೆ ಸಿಲುಕಿದರೆ ಕರಗಿಹೋಗುವನು. ಈ ಜ್ವಾಲೆಯು ಅಗೋಚರವಾದುದು. ಆದರೆ ಅನುಭವಕ್ಕೆ ಮಾತ್ರ ಸಿಕ್ಕತಕ್ಕದ್ದು. ತನ್ನ ಪ್ರೇಮ ಪುತ್ಥಳಿಯು ಮುಂದೆ ನಿಂತರೆ ಯಾರಿಗೆ ತಾನೆ ಸಂತಸವುಕ್ಕದು?

ಈ "ಪ್ರೇಮಜ್ವಾಲೆ" ಯು ಮೂರು ತೆರನಾದ ಪ್ರೇಮ ಸ್ವರೂಪವನ್ನು ಸೂಚಿಸುತ್ತದೆ. ಮಾತಾಪಿತೃ ಪ್ರೇಮ, ಸಹೋದರ ಪ್ರೇಮ, ಕಡೆಯದಾಗಿ ಸೌಂದರ್ಯ ಪ್ರೇಮ ಈ ಕಥೆಯಲ್ಲಿನ ರೂಪಗಳನ್ನು ಪರಿಶೀಲಿಸಿರಿ. ತಮ್ಮಲ್ಲಿ ಯಾವ ವಿಧವಾದ ಪ್ರೇಮವಿದೆಯೆಂಬುದನ್ನು ಯೋಚಿಸಿರಿ. ಮೂರು ಪ್ರೇಮವೂ ಕಾಲಾನುಗುಣವಾಗಿ ಬೇಕಾಗುತ್ತದೆಯಲ್ಲವೆ?

—"ಕುಮಾರಸುಂದರ"

ಸುರೇಶನು ಕೃಪಾಕರ ಚಟರ್ಜಿಯ ಒಬ್ಬನೇ ಮಗನು. ಆದರೆ ಅವನಿಗೆ ಒಬ್ಬಳೇ ಒಬ್ಬಳು ತಂಗಿಯಿದ್ದಳು. ಅವಳೇ ಕಮಲ. ಸುರೇಶನು ಐದು ವರ್ಷದ ಬಾಲಕನಾಗಿದ್ದಾಗ ಅವನ ತಾಯಿಯು ಕಾಲವಾಗಿ ಬಿಟ್ಟಳು. ಅಂತೂ ಇಬ್ಬರು ಮಕ್ಕಳೂ, ತಂದೆಯ ಪೋಷಣೆಯಲ್ಲಿಯೇ ದೊಡ್ಡವರಾದರು.

ಎಂದಾದರೂ ಆ ಮಕ್ಕಳು ತಮ್ಮ ತಾಯಿ ಎಲ್ಲಿ ಎಂದು ಕೇಳಿದರೆ, ಕೃಪಾಕರನು ಅತ್ತುಬಿಡುತ್ತಿದ್ದನು. ಅವರ ಎದುರಿನಲ್ಲಲ್ಲ; ಆದರೆ ಏಕಾಂತದಲ್ಲಿ. ಏಕೆಂದರೆ ತಾನಳುವುದನ್ನು ಕಂಡು, ಅವರು ಮತ್ತಷ್ಟು ಉತ್ಸಾಹಿಗಳಾಗಿ ಕೇಳುತ್ತಾರೆಂಬ ಭಯವಿತ್ತು. ಹೀಗೆ ನಾನಾ ತರದಲ್ಲಿ ಸಂತವಿಸಿ ತಾಯಿಸ್ಮರಣೆಯನ್ನು ಸ್ವಲ್ಪ ಕಡಮೆ ಮಾಡಿದನು.

ಅನಂತರ ಆ ಮಕ್ಕಳನ್ನು ಈ ತೆರನಾದ ಯೋಚನೆಯು ತಪ್ಪಲೆಂಬ ಇಚ್ಛೆಯಿಂದ ಶಾಲೆಗೆ ಸೇರಿಸಿದನು. ಕ್ಷಿಪ್ರದಲ್ಲಿಯೇ ಮಾತೃಜಪವು ತಗ್ಗಿಹೋಯಿತು. ಇದರಿಂದ ಕೃಪಾಕರನಿಗೆ ಸ್ವಲ್ಪ ಶಾಂತಿ ದೊರೆಯಿತು. ಇದಲ್ಲದೆ ಅವನು ಏಕಪತ್ನೀ ವ್ರತಸ್ಥನಾಗಿದ್ದುದರಿಂದ ಮುಂದೆ ಮದುವೆಯಾಗಲಲ್ಲ. ಶಾಲೆಯಲ್ಲಿ ಕಮಲೆಯೂ, ಸುರೇಶನೂ ಬುದ್ಧಿವಂತರೆನ್ನಿಸಿಕೊಂಡರು. ಅವರ ಸೌಂದರ್ಯ ಮುಖಗಳು ತಮ್ಮ ಶೀಲತೆಯನ್ನೂ ಸರಳತೆಯನ್ನೂ ತೋರುತ್ತಿದ್ದುವು. ಇದರಿಂದ ಅವರಿಬ್ಬರೂ ಅಧ್ಯಾಪಕರಿಗೆ ಆಪ್ತರಾದರು. ಹೀಗೆ ಅವರು ಶಾಲೆಯಲ್ಲಿಯೂ, ಮನೆಯಲ್ಲಿಯೂ, ಬೇಕಾದವರಾಗಿ, ದುಃಖಪೂರಿತನಾದ ತಂದೆಯನ್ನು ಸಂತೈಸುತ್ತಿದ್ದರು. ಸುರೇಶನು ತರಗತಿಯಲ್ಲಿ ಇತರರೊಂದಿಗೆ ಹೆಚ್ಚಾಗಿ ಸೇರುತ್ತಿರಲಿಲ್ಲ. ಆಟವಾಡ ಬೇಕಾದರೆ ತನ್ನ ತಂಗಿಯೊಡನೆ ಆಡುತ್ತಿದ್ದನು. ಆದರೆ ಕಮಲೆಗೆ ಒಬ್ಬ ಸ್ನೇಹಿತಳಿದ್ದಳು. ಅವಳೇ ಪ್ರೇಮಲತ. ಪ್ರೇಮಲತೆಯ ನೃತ್ಯಗೀತಗಳೇ ಅವರ ಮೈತ್ರಿಗೆ ಕಾರಣವಾಯಿತು. ಸಂಗೀತದಲ್ಲಿಯೂ, ನೃತ್ಯದಲ್ಲಿಯೂ, ಪ್ರೇಮಲತೆಯನ್ನು ಮೀರಿಸುವವರು ಯಾರೊಬ್ಬರೂ ಇರಲಿಲ್ಲ. ಅವಳೇ ಅತಿ ಚತುರಳೆಂದು ತನ್ನ ಗುರುಗಳಿಂದ ಹೊಗಳಿಸಿಕೊಂಡಿದ್ದಳು. ಇವಳ ಅಭಿನಯವನ್ನು ನೋಡದ ಜನರೇ ಇರಲಿಲ್ಲ. ಹೀಗೆ ಅವಳು ಎಲ್ಲರ ಮನಕ್ಕೆ ಆಕರ್ಷಣೀಯವಾಗಿದ್ದಳು.

* * * *

ಪ್ರೇಮಲತೆಯು ಕಮಲೆಯನ್ನು ಬಿಟ್ಟು ಇರುತ್ತಿರಲೇ ಇಲ್ಲ. ಅವರಿಬ್ಬರೂ ಅಗಲುವ ಸನ್ನಿವೇಶವೇ ಇಲ್ಲದಂತೆ ಮೈತ್ರಿ ಬೆಳೆಯಿತು. ಆಗಾಗ್ಗೆ ಇಬ್ಬರೂ ಒಂದೇ ಮನೆಯಲ್ಲಿ ಊಟಮಾಡುತ್ತಿದ್ದರು – ಮಲಗುತ್ತಲೂ ಇದ್ದರು. ಇವರ ಜೊತೆಗೆ ಸುರೇಶನೂ ಭಾಗಿಯಾದನು. ಆನಂದಲೋಲನಾಗಿ ಆಟವಾಡತೊಡಗಿದನು. ಇಂತಹ ಆಟಪಾಟಗಳನ್ನು ಕಂಡು ತಂದೆತಾಯಿಗಳು ಮುಗ್ಧರಾಗುತ್ತಿದ್ದರು. ಕೃಪಾಕರನೂ ಪ್ರೇಮಲತೆಯ ತಾಯಿತಂದೆಗಳೂ ಕಣ್ತುಂಬ ನೋಡಿ ಮನದಣಿವಂತೆ ನಲಿಯುತ್ತಿದ್ದರು. ಇಂತಹ ಸಂತಸವಲ್ಲದೆ ಮತ್ತೇನುಬೇಕು ಇವರ ಭಾಗ್ಯಕ್ಕೆ?

ವರ್ಷಗಳು ಸಾಗಿಹೋದುವು: ಬಾಲ್ಯದಿಂದ ಯೌವನಕ್ಕೆ ಬಂದ ಕಾಲವಂತು ಬಹು ವೇಗದಿಂದ ಸಾಗಿತು. ಈ ಸಂದರ್ಭದಲ್ಲಿ ಕಮಲೆಯ ವಿವಾಹಕ್ಕಾಗಿ ಕೃಪಾಕರನು ವರಾನ್ವೇಷಣಕ್ಕಾಗಿ ಹೊರಟನು. ಒಂದು ದಿನ ಸಂಜೆ ಕೆಂಬಾರದ ಕಿರಣಗಳು ಧೂಳಿನಲ್ಲಿ ತೂರಿಬಂದು ಕಂಗೊಳಿಸುತ್ತಿದ್ದುವು. ಕುರುಬರೂ, ದನಗಾಹಿಗಳೂ ಹಾಡುತ್ತ ಹಿಂದಿರುಗುತ್ತಿದ್ದರು. ಬೇಸಾಯಗಾರರು ನೇಗಿಲುಗಳೊಂದಿಗೆ ಬರುತ್ತಿದ್ದರು. ಶಾಲಾ ಮಕ್ಕಳು ಜಗಳವಾಡುತ್ತ, ಚಿಲಿಪಿಲಿಗುಟ್ಟುತ್ತ ಮನೆಯ ಕಡೆಗೆ ಓಡುತ್ತಿದ್ದರು. ಅಂತೂ ಎಲ್ಲೆಲ್ಲಿಯೂ ಆನಂದಮಯವಾಗಿತ್ತು. ಆಗ ಈ ಮೂವರೂ ಒಂದು ಉದ್ಯಾನವನದಲ್ಲಿ (Park) ಕುಳಿತ್ತಿದ್ದರು. ಕಮಲೆಯು ಇದ್ದಕ್ಕಿದ್ದಹಾಗೆಯೇ ಮೇಲೆದ್ದಳು. ರವಿ ಕಿರಣಗಳು, ನೀಲಾಂಬರ, ಹಸುರು ಹುಲ್ಲು — ಇದೆಲ್ಲವೂ ಆನಂದವನ್ನು ಸವಿಸುತ್ತಿದ್ದುವು. ಪ್ರೇಮಲತೆಯು ಹಾಡ ತೊಡಗಿದಳು. ಸುರೇಶನೂ, ಕಮಲೆಯೂ ಕೇಳುತ್ತ ತಲ್ಲೀನರಾಗಿಹೋದರು. ಕಮಲೆಯು ಕೂಡಲೇ ಮೇಲೆದ್ದು ಹಿಂದೆ ಸರಿದಳು — ಉಳಿದಿಬ್ಬರು "ಏಕೆ" ಎಂದರು. ಆದರೆ ಅವಳು "ಸ್ವಲ್ಪ ಕೆಲಸವಿದೆ — ಮನೆಗೆ ಹೋಗಬೇಕು — ಮರೆತೇ ಹೋಗಿದ್ದೆ" ಎಂದಳು. ಹಾಗೆಯೇ ಹಿಂದೆಹೋಗಿ ಅಡಗಿಕೊಂಡಳು.

"ಏನಿದು ಹುಚ್ಚು ಕೆಲಸ? ಏಕೆ ಅವಳು ಹೋಗಿದ್ದು?" ಎಂದಳು ಆ ಪ್ರೇಮಲತಾ.

"ನನಗೆ ಗೊತ್ತಿಲ್ಲ" ಎಂದ ಆ ಸುರೇಶ್.

"ಹಾಗಾದರೆ ನಾವೂ ಹೋಗೋಣ — ಹೊತ್ತಾಗಿದೆ — ಸುರೇಶ್."

"ನಾನೇನೋ ಸಿದ್ಧನಾಗಿದ್ದೇನೆ — ಆದರೆ ಇಷ್ಟು ಜಾಗ್ರತೆ!"

"ಆದರೆ ಕಮಲ ಹೊರಟುಬಿಟ್ಟಳಲ್ಲ."

"ಆದರೇನು — ಚಿಂತಿಸಬೇಡ: ಒಂದೇ ಒಂದು ವಿಷಯ ನಿನಗೆ ತಿಳಿಸಬೇಕು."

"ಏನದು? ಅಂತಹ ಪ್ರಮಾದ!"

"ಏನೂ ಇಲ್ಲ, ಸ್ವಲ್ಪ ನೃತ್ಯ — ಆರಂಭಿಸು."

"ಇಲ್ಲ! ಛೆ — ಸರಿಯಲ್ಲ."

"ಆದರೇನು — ನಡದೇ ಹೋಗಲಿ."

ಪ್ರೇಮಲತೆಯ ನೃತ್ಯಾರಂಭವಾಯಿತು. ಸಂತೋಷ — ಉಲ್ಲಾಸಗಳೇರಿದುವು.

"ಪ್ರೇಮಾ! ನಿನಗೇನು ಬಹುಮಾನಬೇಕು?"

"ನೀನು ನನಗಾಗಿ ಏನನ್ನು ತಂದಿರುವೆ?"

"ಪವಿತ್ರ ಬಹುಮಾನದೊಂದಿಗೆ — ಶುಭ ಸೂಚಕವೆಂದು ನನ್ನ ಭಾವನೆ."

ಹೀಗೆ ಮಾತು ಕಥೆ ನಡೆಯುತ್ತಿರುವಾಗ್ಗೆ, ಕಮಲೆ ಮುಖ ಸೌಂದರ್ಯ, ನಡೆನುಡಿ, ಸುರೇಶನನ್ನು ಮುಗ್ಧನನ್ನಾಗಿ ಮಾಡಿಬಿಟ್ಟಿತು. ಕೂಡಲೇ ಪ್ರೇಮಲತಳನ್ನು ಆಲಂಗಿಸಿ — ಪ್ರೇಮ ಮುದ್ರೆಯನ್ನೊತ್ತಿದನು. "ನೋಡು ಪ್ರೇಮಾ, ಇದೇ ನನ್ನ ಬಹುಮಾನ! ಇದೇ ನಮ್ಮ ಮುಂದಿನ ಜೀವನದ ಕುರುಹು. ಇದೇ ನಮ್ಮ ವಿವಾಹ ಸೌಭಾಗ್ಯದ ಚಿಹ್ನೆ. ಇದೇ ನನ್ನ ಚಿರವಾದ ಕಾಣಿಕೆ. ಇದೇ ನನ್ನ ಹೃದಯಪೂರ್ವಕವಾದ ಬೇಡಿಕೆ — ಇದೇ ನಮ್ಮ ವೈಭವ. ಇದು ಇನ್ನು ಯಾರಿಗೂ ಸಲ್ಲತಕ್ಕುದಲ್ಲ, ನಿಮ್ಮೀರ್ವರದು ಮಾತ್ರ, ನಿಮಾಸಲಾಗಿರುವ ಪ್ರೇಮಕೃತ್ಯ (Reserved) ಈ ಸೌಭಾಗ್ಯಕ್ಕೇ ಯಾರೂ ಭಾಗಿಯಾಗಲಾರರು — ಪ್ರೇಮಾ! ಮರೆಯಬೇಡ." ಎಂದು ಚುಂಬನದ ತುಟಿಗಳಿಂದಲೇ ಮಾತುಗಳು ಹೊರಬಿದ್ದುವು.

* * * *

ಹಿಂದೆ ಅವಿತುಕೊಂಡಿದ್ದ ಕಮಲೆಯು ಎಲ್ಲವನ್ನೂ ನೋಡಿದಳು. ಅಲ್ಲದೆ ಓಡಿಬಂದಳು — ಬಂದವಳೇ "ಅಣ್ಣಾ — ಅದೇನು ಅಂತಹ ಸವಿನುಡಿ, ಅಂತಹ ಆಲಿಂಗ, ಅಂತಹ ಆನಂದ" ಎಂದು ಅಚ್ಚರಿಗೊಂಡು ಕೇಳಿದಳು. ಸುರೇಶನು ನಿರುತ್ತರನಾದನು. ಕಮಲೆಯು "ನಾನು ಅಪ್ಪನಿಗೆ ತಿಳಿಸಲೇನು? ಎಂದಳು. ಸುರೇಶನು "ಬೇಡ, ಎಂದಿದ್ದರೂ ಪ್ರೇಮಲತೆಯು ನನ್ನನಳೇ! ಇಂದೇ ನಾನು ವಾಗ್ದಾನವನ್ನು ಕೊಟ್ಟಬಿಟ್ಟಿದ್ದೇನೆ, ಇನ್ನೇನುಭಯ! ಹೇಳು ನನಗೇನೂ ಭಯವಿಲ್ಲ. ಅನ್ಯರಾಗಿದ್ದಲ್ಲಿ ಭಯ, ನನ್ನವಳೇ ಆಗಿರುವಾಗ ಇನ್ನೇಕೆ ಭಯ?" ಎಂದನು.

ಪ್ರೇಮಲತೆಯು ತಲೆಬಗ್ಗಿಸಿ ಕಮಲೆಯೊಂದಿಗೆ "ಕಮಲಾ! ನೀನೂ ಅಷ್ಟೆ, ನಿನಗೆ ಸರಿಯಾದ ಮಿತ್ರನೊಬ್ಬ, ಅಥವಾ.... ದೊರೆತರೆ ಹಾಗೆಯೇ ಮಾಡುವೆ. ಪ್ರೇಮ–ಸುಂದರ–ಕಮಲ– ಈ ಪದಗಳು ಇಂತಹ ಸನ್ನಿವೇಶದಲ್ಲಿ ಬರಬೇಕಾದ ಪದಗಳಲ್ಲವೆ? ನೋಡು ಕಮಲ, ಹೇಗೆಂದರೆ ನಾನೇ ಪ್ರೇಮಲತೆ– ಸುರೇಶನೇ ಸುಂದರ– ನೀನೇ ಕಮಲಮುಖಿ. ಪುರುಷರಿಗೆ ಸುಂದರನೆಂಬ ಪದ ವಾಡಿಕೆ. ಹೆಂಗಸರಿಗೆ ಕಮಲದಂತೆ ಇರುವವಳು ಎನ್ನುವುದು ಕವಿರೂಢಿ. ಹೀಗೆ ಸೌಂದರ್ಯ ಶಬ್ದಗಳು ಬೆರೆಯುವಾಗ್ಯೆ — ನಾನೂ ಸುರೇಶನೂ .....ರಲ್ಲಿ ಏನಾಶ್ಚರ್ಯ. ಕಮಲಾ ನಿನಗೆ ಸುಂದರನಾದರೆ — ನನಗೆ ಸುರೇಶನಾಗಿರಲಿ: ಅಂದರೆ ಸುರೇಶ ಪ್ರೇಮಲತಾ ಒಂದು ಕಡೆ —

ಸುಂದರ ಕಮಲ ಇನ್ನೊಂದು ಕಡೆ. ಯಾವ ಕಾವ್ಯವನ್ನೇ ನೋಡು, ಯಾವ ಕವಿತೆಯನ್ನೇ ನೋಡು, ಪ್ರೇಮವಿಲ್ಲದ ಪ್ರಕರಣವೇ ಇಲ್ಲ. ಕಮಲವಿಲ್ಲದೆ ಹೋಲಿಕೆಯೇ ಇಲ್ಲ. ಸುಂದರನಿಲ್ಲದೆ ವರ್ಣನೆಯೇ ಇಲ್ಲ. ತಿಳಿಯಿತೇ ಕಮಲಾ! ಎಲ್ಲೆಲ್ಲಿಯೂ ನಾವು ಇರುತ್ತೇವೆ. ಉಳಿದವರು ಅದಕ್ಕೇ ಅಷ್ಟು ಮುಖ್ಯವಲ್ಲ" ಎಂದು ಉಪನ್ಯಾಸವನ್ನೇ ಮಾಡಿಬಿಟ್ಟಳು. ಕಮಲೆಯು ಮರುಮಾತನಾಡಲಿಲ್ಲ. ಸುರೇಶನು ಎಲ್ಲವನ್ನೂ ಮನಸಾರ ಕೇಳಿ, ತೃಪ್ತನಾಗಿ, ಸಂಪೂರ್ಣ ಪ್ರೇಮವು ನನ್ನಲ್ಲಿದೆಯೆಂದು ನಿಶ್ಚಯಿಸಿಕೊಂಡು ಮುಂದೆ ಸರಿದನು. ಎಲ್ಲರೂ ಹಿಂಬಾಲಿಸಿದರು.

ಮನೆಗೆ ಬರುವಾಗ್ಯೆ, ಅಪರಿಚಿತರೆಲ್ಲರೂ ಬಂದಿದ್ದರು. ಈ ಮೂವರೂ ಅತ್ತಲೇ ನೋಡುತ್ತ ಬಾಗಿಲಲ್ಲಿ ನುಸುಳಿದರು. ತಕ್ಷಣವೇ ಕೃಪಾಕರನು "ಕಮಲಾ" ಎಂದು ಕೂಗಿದನು. ಕಮಲೆ ಗಾಬರಿಗೊಂಡು ಓಡಿಬಂದಳು. ಬಂದಿದ್ದವರಿಗೆ ಹುಡುಗಿಯನ್ನೇ ತೋರಿಸಿದನು. "ಇನ್ನು ಹೊರಡು" ಎಂದು ಹೇಳುವಷ್ಟರಲ್ಲಿ ಕಮಲೆಯೂ ಜಿಂಕೆಯಂತೆ ಓಡಿಬಿಟ್ಟಳು. ಒಳಗೆ ಪ್ರೇಮಲತಾ, ಸುರೇಶ್ ಇಬ್ಬರೂ ಹೊಸ ವ್ಯಕ್ತಿಗಳನ್ನು ನೋಡುತ್ತಾ, ಒಬ್ಬಾತನನ್ನು ಕಂಡು ಅನುಮಾನಗೊಂಡರು. "ಆ ವ್ಯಕ್ತಿಯೇ ಯುವಕ: ಕಮಲೇಯ ಭಾವೀವರ" ಎಂಬುದು ಅವರ ಮನಸ್ಸಿಗೆ ಹೊಳೆದುಹೋಯಿತು. ಕಮಲೆಯು ಒಳಕ್ಕೆ ಬಂದೊಡನೆಯೇ "ಕಮಲಾ, ನಿನ್ನ.....ಹೇಗಿದ್ದಾನೆ" ಎಂದರು. ಕಮಲೆಗೆ ಅರ್ಥವಾಗಲಿಲ್ಲ. ಮತ್ತೊಮ್ಮೆ ಕೇಳಿದರು. ಆಗ ಕಮಲೆಯು ಅರ್ಥ ಮಾಡಿಕೊಂಡು, ಆ ಯುವಕನ ಕಡೆಗೆ ತನ್ನ ದೃಷ್ಟಿಯನ್ನು ಚಾಚಿದಳು. ಸುರೇಶನು ಅವಳನ್ನೇ ನೋಡುತ್ತಾ "ಸುಂದರನಾಗಿಯೇ ಇದ್ದಾನೆ – ಅಲ್ಲವೆ?" ಎಂದನು. ಪ್ರೇಮಲತೆಯು ಹಾಸ್ಯ ಮಾಡತೊಡಗಿದಳು. ಇದೇ ಸಮಯವೆಂದು ಕಮಲೆಯು ತಾನು ಮಾಡಿದ ತಮಾಷೆಯನ್ನು ಈಗ ಹೇಳಿ, ಅವರಿಬ್ಬರನ್ನೂ ವಿನೋದಗೊಳಿಸಿದಳು. ಆಗ ಅವರಿಬ್ಬರಿಗೂ ಮಲೆಯೂ ಬಲು ಘಾಟಿ ಹುಡುಗಿ ಎಂದು ತಿಳಿಯಿತು. "ಹೋಗಲಿ. ನಿನ್ನ.....ಹೇಗಿದ್ದಾನೆ? ನಿನಗೊಪ್ಪಿಸಿಕೆಯೇ?" ಎಂದು ಇಬ್ಬರೂ ಕೇಳಿದರು. ಮರುತ್ತರವೇ ಇಲ್ಲ. (ಮೌನಂ ಸಮ್ಮತಿ ಲಕ್ಷಣಂ.)

* * * *

"ನಾನು ಹೇಳಿದ ಮಾತುಗಳು ಸಹಾ ನೆನಪಿರಲಿ. ಮರೆಯಬೇಡ. ಪತಿಯೇ ಪತಿಗೆ ದೈವ — ಪತಿಯ ಮನೆಯಲ್ಲಿ ಹೇಗಿರಬೇಕೋ ಹಾಗಿರಬೇಕು.... ...ಎಳು, ಹೊತ್ತಾಯಿತು, ಹೊರಗೆ ಕಾರು ಕಾದಿದೆ" ಎಂದು ಕೃಪಾಕರನು ಕಮಲೆಯೊಂದಿಗೆ ಹೇಳಿದನು. ಅದಕ್ಕವಳು ಅಳುತ್ತಾ "ಆಗಲಿ" ಎಂದು ಹೇಳಿ, ಸುರೇಶನನ್ನು ಹುಡುಕಲಾರಂಭಿಸಿದಳು. ಎಲ್ಲೆಲ್ಲಿಯೂ ಕಾಣಲಿಲ್ಲ, ಮನೆಯವರೆಲ್ಲರೂ ಹುಡುಕಾಡಿದರು, ಕಾಣಲಿಲ್ಲ. ರೂಮಿನಲ್ಲಿದ್ದ ಮಂಚದ ಕೆಳಗೆ ಬಿದ್ದು ಬಿಟ್ಟಿದ್ದಾನೆ, ಕಣ್ತುಂಬ ಕಾಲುವೆ, ಮುಗುಡ ಮೊಗ.

ಅಂದು ಕಮಲೆಯೂ ಮನೆಯನ್ನು ಬಿಟ್ಟು, ಪತಿಸಾನ್ನಿಧ್ಯವನ್ನು ಪಡೆಯುವ ದಿನ. ಅದಕ್ಕಾಗಿಯೇ ಸುರೇಶನಿಗೆ ಅಷ್ಟು ದುಃಖ. ಸಹೋದರೀ ಅಗಲಿಕೆಯು ಅವನನ್ನು ಚಿಂತಾಕ್ರಾಂತನನ್ನಾಗಿ ಮಾಡಿಬಿಟ್ಟಿತು. ಸಹೋದರೀ ಪ್ರೇಮವು ಇಂದು ಬದಲಾಯಿಸಿತು. ಸುರೇಶನೂ ಯಾವ ಮಾತನ್ನೂ ಆಡದೆ ಕಂಬನಿಗರೆದನು. ಸಮಾಧಾನವಾದ ಬಳಿಕ "ಕಮಲಾ, ಹೋಗಿ ಬರುವೆಯಾ" ಎಂದು ಹೇಳಿ ಮತ್ತೆ ಮಲಗಿಬಿಟ್ಟನು. ಈ ಕಮಲೆಯು "ನಮಸ್ಕಾರ" **(Good bye)** ಹೇಳುತ್ತಾ ಹೆಜ್ಜೆ ಹಾಕಿದಳು. ಕಾರು ಹೊರಟಿತು. ಕಾಶಿ ಸೇರಿತು. ಕಾಶಿಯಿಂದ ಕಾಗದ ಪತ್ರಗಳೂ ಓಡಾಡಿದುವು.

ಕಲ್ಕತ್ತೆಯಲ್ಲಿದ್ದ ಸುರೇಶನು ನಾಗಪುರದಲ್ಲಿ ಒಂದು ಡಾಕ್ಟರ್ ಕೆಲಸವನ್ನು ಸಂಪಾದಿಸಿಕೊಂಡನು. ಈ ವೃತ್ತಿಯನ್ನು ತನ್ನ ವಿದ್ಯೆಯೇ ಸಂಪಾದಿಸಿಕೊಟ್ಟಿತು. **(Rank student)** ಒಂದು ದಿನ ಸುರೇಶನು ಕಾಗದವನ್ನು ಬರೆಯುತ್ತಲಿದ್ದನು. ಅಷ್ಟು ಹೊತ್ತಿಗೆ ಸರಿಯಾಗಿ ಜವಾನನು ಒಂದು ಟೆಲಿಗ್ರಾಂ ತಂದು ಕೊಟ್ಟನು. ಅದು ಈ ರೀತಿ ಇತ್ತು "ಸುರೇಶ್! ಪ್ರೇಮಳ ಮದುವೆಯು ಮೋಹನನೊಂದಿಗೆ ನಿಶ್ಚಿತವಾಗಿದೆ. ನೀನು ಕೂಡಲೇ ಬರಬೇಕು — ಇತಿ ಕೃಪಾಕರ್."

ಸುರೇಶನು ಪ್ರೇಮಜ್ವಾಲೆಯಲ್ಲಿ ಸಿಕ್ಕಿಬಿಟ್ಟನು

ಸುರೇಶನು ಕುರ್ಚಿಯನ್ನು ಬಿಟ್ಟು, ನೆಲಕ್ಕುರುಳಿದನು. ಎಚ್ಚೆತ್ತ ಬಳಿಕ, ರಜಾ ಅರ್ಜಿಯನ್ನು ಹಾಕಿಬಿಟ್ಟನು. ಯೋಚನಾ ತರಂಗಗಳು ತಲ್ಲಣಿಸಿ ತತ್ತರಿಸಿ, ತನ್ನ ತನುವನ್ನೇ ಮರೆಯುವಂತೆ ಮಾಡಿದುವು. ಶೈಶವದ ಸ್ಥಿತಿ ನೆನಪಿಲ್ಲದಿದ್ದರೂ, ಬಾಲ್ಯ ಕಾಲದ ಆಟಗಳೂ ಪ್ರೇಮಲತೆಯ ಬೆಳೆವಣಿಗೆಯು ತನ್ನನಾವರಿಸಿದುದೂ, ದೃಶ್ಯಗಳಾಗಿ ಗೋಚರಿಸಿದುವು. ಯೋಚಿಸಿದಷ್ಟೂ ಕೃಶನಾಗಿ, ಚಿಂತಾಗ್ನಿಯಲ್ಲಿ ಬೆಂದುಹೋದನು. ಹೀಗೆ ಆ ಪ್ರೇಮಜ್ವಾಲೆಯೂ ಧಗಧಗನೆ ಉರಿಯಲಾರಂಭಿಸಿತು. ಅದಕ್ಕೆ ಅನುಮತಿಯೇ ಇಲ್ಲ — ಉರಿಮುರಿದು ಪ್ರಬಲವಾಗುತ್ತ ಬಂತು. ಪ್ರೇಮಲತೆಯೊಬ್ಬಳೇ ಇದಕ್ಕೆ ಆಹುತಿ. ಮತ್ತಾರಿಂದಲೂ

ಅದನ್ನಾರಿಸಲು ಅಸಾಧ್ಯ. ಅಂತಹ ಜ್ವಾಲೆಯು ಮೊದಲಾಗಿ ಜ್ವಾಲೆಯು ಅಳಿಯಲೇ ಇಲ್ಲ. ಕಣ್ಮುಂದೆ ನಾನಾ ತರಂಗಗಳು ಬಂದುವು. ಪ್ರೇಮಲತೆಯ ನೃತ್ಯವೊಂದು ಹಾಗೆಯೇ ನಿಂತಿತು. ಕಂಬನಿಗರೆಯುತ್ತಾ ಆ ನೋಟವನ್ನು ನೋಡಿ — ಮುಗ್ಧನಾದನು. ಅಷ್ಟು ಹೊತ್ತಿಗೊಂದು ಧ್ವನಿ ಕೇಳಬಂದಿತು. ಪ್ರೇಮಲತೆಯ ಧ್ವನಿಯಂತೆಯೇ ಇದ್ದಿತು. ಸುರೇಶನು ಕಣ್ತೆರೆದನು; ಭ್ರಾಂತನಾದನು! ವ್ಯಕ್ತಿಯೊಂದು ಕಾಣಿಸಿತು. ಅದೇ ಪ್ರೇಮಲತ. ಹಿಡಿಯಲು ಹೊರಟನು, ಇಹದೃಷ್ಟಿ ಬಂತು, ಆದರೆ ಪ್ರೇಮಳಲ್ಲ! ಆಸ್ಪತ್ರೆಯ ದಾದಿ.

"ಪ್ರೇಮಾ! ಆಟವಾಡಿಸುತ್ತೀಯಾ, ಇದೇನು ನಿನ್ನ ರೂಪ ವಿಲಕ್ಷಣ" ಎನ್ನುತ್ತಾ ಹತ್ತಿರಕ್ಕೆ ಬಂದನು. ದಾದಿಯು ಗಾಬರಿಗೊಂಡಳು. ಡಾಕ್ಟರರಿಗೆ ಕೋಪಬಂತು. ಅವಳನ್ನು ಹೊರಕ್ಕೆ ಅಟ್ಟಿಬಿಟ್ಟರು. ಯಾರೂ ಬರಕೂಡದೆಂದು ಆಜ್ಞೆ ಮಾಡಿ ಮತ್ತೆ ಹಾಸಿಗೆಯನ್ನು ಹಿಡಿದನು. ಈ ಹೃದಯ ಯಾತನೆಯು ನಿಲ್ಲಲೇ ಇಲ್ಲ. ತನ್ನ ದೇಹದಲ್ಲಿ ನೂರಾರು ರೈಲುಗಳು ಓಡಾಡುವಂತೆ ಭಾಸವಾಯಿತು. ಈ ಜ್ವಾಲಾ ಮಹತ್ವವು ಹೆಚ್ಚಾಯಿತು. ಜ್ವಾಲೆಯ ಕಿರಣಗಳು ಚುಚ್ಚಿದುವು. ತಡೆಯಲಸಾಧ್ಯನಾಯಿತು, ಸುರೇಶನ ತಲೆ ಗಿರ್ರನೆ ತಿರುಗಲಾರಂಭಿಸಿತು. ತಡವರಿಸಿ — ಬೇಸತ್ತು, ಹೊರಕ್ಕೆ ಬಂದ.

* * * *

"ಮೋಟಾರ್ ಡಿಕ್ಕಿ (Accident) ಬನ್ನಿ, ಬನ್ನಿ" ಎಂದು ಜನರ ಗುಲ್ಲೋಗುಲ್ಲು. ಪೋಲಿಸರು ಬಂದರು — ಯಾರ ಮೇಲೆ ಹಾರಿದೆ ಕಾರು – ಎಂದು ನೋಡಿದರೆ, ಅತನು ಸುರೇಶನೇ! ಮತ್ತಾರೂ ಅಲ್ಲ. ಅದೇ ಕಾರಿನಲ್ಲಿ ಕುಳ್ಳಿರಿಸಿ, ಆಸ್ಪತ್ರೆಗೆ ತೆಗೆದುಕೊಂಡುಹೋದರು. ಆಗಲೂ ಸಹ ಸುರೇಶನು "ಪ್ರೇಂ, ಪ್ರೇಮಾ" ಎನ್ನುತ್ತಿದ್ದನು.

ಕೃಪಾಕರನು ಸುದ್ದಿಯನ್ನರಿತನು — ಆಸ್ಪತ್ರೆಗೆ ಬಂದು, ಸುರೇಶನೊಂದಿಗೆ ಮಾತನಾಡಿ, ಸಂತೈಸಿದನು. ಸುರೇಶನು "ಅಪ್ಪಾ! ನಾನಿನ್ನು ಬದುಕಲಾರೆ — ಪ್ರೇಮಜ್ವಾಲೆಯಲ್ಲಿ ಬಿದ್ದಿದ್ದೇನೆ. ಯಾತನೆಯ ಕಾಟ ಹೇಳತೀರದು. ಈಗಲಾದರೂ ಹೇಳಿಬಿಡು. ಆ ಪ್ರೇಮಲತಾ ನನ್ನ..... ಇಲ್ಲದಿದ್ದರೆ ಇದೋ ಸತ್ತೆ....." ಎನ್ನುತ್ತಾ ಹೊರಳಾಡಿದನು. ಕೃಪಾಕರನು "ಆಗಲಿ, ಅದಕ್ಕೆ ತಕ್ಕ ಪ್ರಯತ್ನ ಮಾಡುತ್ತೇನೆ. ಅಕಸ್ಮಾತ್ ಪ್ರೇಮಳ ವಿವಾಹವು ಇನ್ನೂ ನಡೆದಿಲ್ಲ — ಕಾರಣಾಂತರದಿಂದ ನಿಲ್ಲಿಸಿದೆ. ನಿನಗೆ ದೊರಕುವಂತೆ ಮಾಡುತ್ತೇನೆ" ಎಂದನು.

ಜ್ವಾಲೆಯು ತಗ್ಗುತ್ತಾ ಬಂದಿತು. "ಮೋಹನನು ಐರವತ್ತು ವರ್ಷದ ಮುದುಕ — ಪ್ರೇಮಳು ಹದಿನೈದು ವರ್ಷದ ಯುವತಿ, ಎಂತಹ ಜೊತೆ" ಎಂದು ಸುರೇಶನು ಹೇಳಿದನು. ಕೃಪಾಕರನು ಹಿಂದಿರುಗಿದನು. ಸ್ವಲ್ಪ ದಿನಗಳಲ್ಲಿಯೇ ವಾಸಿಯಾಗಿ, ಸುರೇಶನು ಮನೆಯನ್ನು ಸೇರಿದನು.

ಮೋಹನನ ದಾದಾ ಕಾಲವಾದನೆಂಬ ವಾರ್ತೆಯು ಕಿವಿಗೆ ಬಿತ್ತು. ಲಗ್ನವು ಇನ್ನೂ ಮುಂದರಿಸಲ್ಪಟ್ಟಿತು. ಸುರೇಶ್ ಪ್ರೇಮಲತಾ ವಿವಾಹ ಮಂಟಪವನ್ನು ಕಟ್ಟಲಾರಂಭ ಮಾಡಿದರು. ಅಂತೂ ವಿವಾಹ ವೈಭವವನ್ನು ನಾವು ಹೇಳಲೇ ಲಾರೆವು, ನೋಡಿದವರಿಗೆ ಗೊತ್ತು ಅದರ ರುಚಿ. (ಬಲ್ಲವನೇ ಬಲ್ಲ, ಬೆಲ್ಲದ ಸವಿಯ.)

ಮತ್ತೆ ಸುರೇಶ್, ಕಮಲಾ, ಪ್ರೇಮಲತಾ ಮೂವರೂ ಅದೇ ಪಾರ್ಕಿನಲ್ಲಿ ಸೇರಿದರು. ಸಂಜೆಯ ಸಮಯ — ಪ್ರೇಮಲತೆಯು ಕಿವಿಗಿಂಪಾಗಿ ಹಾಡಿದಳು. ಮತ್ತೆ ಕಮಲೆಯು ತಮಾಷೆಗಾಗಿ ಹಿಂದೆ ಸರಿದು ಅವಿತುಕೊಂಡಳು. ಸುರೇಶನೂ ಪ್ರೇಮಲತೆಯೂ ಸಂಗೀತದಲ್ಲಿ ಮಗ್ನರಾಗಿ, ಒಬ್ಬರ ಕೈಯನ್ನು ಒಬ್ಬರು ಕುಲುಕುತ್ತಾ ನಲಿದಾಡಿದರು. ಪ್ರೇಮಲತೆಯು "ನನಗೆ ಬಹುಮಾನವೆಲ್ಲಿ?" ಎಂದಳು.

"ಬಹುಮಾನ ಬೇಕೆ — ಎಂತಹದು?"

"ಎಂದಿಗೂ ಇರತಕ್ಕದ್ದು — ಅಲ್ಲ ನಾನಿರುವ ತನಕ ಇರತಕ್ಕದ್ದು."

"ಹಾಗಾದರೆ — ಇದೋ" ಎನ್ನುತ್ತಾ ಆ ಮೃದುವಾದ ಚಲುವ ಕಪೋಲಗಳ ಮೇಲೆ.....ಇಟ್ಟು ಆನಂದ ಪರವಶನಾದನು. ಕಮಲೆಯು ಓಡಿಬಂದಳು. "ನೀವಿಬ್ಬರೂ..... ತಿಳಿಯಿತು. ನವ ದಂಪತಿಗಳು."

ಸುರೇಶನು "ಅಂದು ಅಪ್ಪನೊಂದಿಗೆ ಹೇಳುತ್ತೇನೆ" ಎಂದು ಹೇಳಿದೆ — ಇಂದು ಯಾರೊಡನೆಯಾದರೂ ಹೇಳಿಕೋ ಹೋಗು" ಎನ್ನುತ್ತಾ ಪ್ರೇಮಲತೆಗೆ ಒಂದು ಏಟು ಕೊಟ್ಟು ಕಮಲೆಯನ್ನು ತೋರಿಸಿ ನಕ್ಕನು. ಪ್ರೇಮಲತೆಯು ಕಮಲಾ ನಾನು ಹೇಳಿದುದು ನೆನಪಿದೆಯೇ! ನಿನ್ನ ಪತಿ ಯಾರು? ಸುಂದರಲಾಲ್! ಅಲ್ಲವೇ? ನೋಡಿದೆಯಾ "ಪ್ರೇಮ ಸುಂದರ ಕಮಲ" ಎಷ್ಟು ಚೆನ್ನಾಗಿ ಶೋಭಿಸುತ್ತಾರೆ ಎಂದಳು. ಮತ್ತೆ ಸಂಗೀತವನ್ನು ಸವಿದರು. ಅದರರ್ಥವು "ಜಗವೆಂಬ ಸರಸ್ಸಿನಲ್ಲಿ ಪ್ರೇಮಸುಂದರ ಕಮಲವು ಅರಳಿತು" ಎಂದಾಗಿತ್ತು.

ಸೂರ್ಯಾಸ್ತ ಮಂದಿರ

ಸೆಪ್ಟಂಬರ್ ತಿಂಗಳ ಸಂಪೂರ್ಣ ಭವಿಷ್ಯ

ಲೇಖಕರು: ಜ್ಯೋತಿರ್ವಿದ್ಯಾಭೂಷಣ ಪಂಡಿತ **ಶ್ರೀ. ವೀರನಗೌಡರು ಪಾಟೀಲ ಮೆಣಸಿಗಿ**

ಭಾಗ್ಯೋದಯ ಪಂಚಾಂಗ ಕರ್ತೃ, ಗದಗ.

ಮೇಷರಾಶಿ

ಅಡಿಕೆಗೆ ಹೋದಮಾನ, ಆನೇಕೊಟ್ಟರೂ ಬಾರದು ಎಂಬಂತೆ, ಈ ತಿಂಗಳು ನಿಮ್ಮ ಯೋಗವಿದೆ. ಮುಂದೆ ಸ್ತುತಿ-ಹಿಂದೆ ನಿಂದೆ, ನಡೆಯುವದು. ಸ್ವಪರಜನರು, ನಿಮ್ಮನ್ನು ಹಳಿಯುವರು ಕಾರಣ ಈ ತಿಂಗಳು ತಾವು ಶಕ್ತಿಗಿಂತಲೂ ಯುಕ್ತಿಯೇ ಮೇಲೆಂದು ಭಾವಿಸಿ ಜಾಣತನದಿಂದಲೆ ಕಾರ್ಯಸಾಧಿಸಿಕೊಳ್ಳಿರಿ. ಪ್ರಕೃತಿ, ಜ್ವರಾತಿ, ಸಾರದಿಂದಾಗಲಿ, ಪಿತ್ತ ವಿಕಾರದಿಂದಾಗಲಿ, ಆಪಚನದಿಂದಾಗಲಿ, ತಲೆಶೂಲಿ, ಎದೆನೋವು ಇತ್ಯಾದಿ ರೋಗಗಳಿಂದ ಕೆಡುವ ಸಂಭವವಿರುವದು. ಅಕಸ್ಮಾತ್ ಪ್ರವಾಸದಲ್ಲಿ ತೊಂದರೆಯಾಗುವದು. ಮಾನಸೀಕ ಸುಖ ಬಿಲ್ಕುಲ ದೊರೆಯಲಾರದು. ಪ್ರಯುಕ್ತ ಶಾಂತತೆಯಿಂದಲೇ ಇರತಕ್ಕದ್ದು. ಗೃಹದಲ್ಲಿ ಅಶಾಂತತೆ, ಆರ್ಥಿಕ ಅಡಚಣಿ, ಸ್ವಪರ ಜನಗಳಿಂದಲೂ, ಸಾಹುಕಾರ-ಸರಕಾರ, ಶತ್ರುಗಳಿಂದಲೂ, ತ್ರಾಸಾಧಿಕ್ಯವಾಗುವದು. ಆದರೂ ಸಹಿಸಿಕೊಳ್ಳತಕ್ಕದ್ದು. ಪ್ರತ್ಯಕ್ಷ ಹಾನಿಯಾಗಲಿಕ್ಕಿಲ್ಲ. ಹೋದತಿಂಗಳು ಕೋರ್ಟು ಕಛೇರಿವರೆಗೆ ಹೋಗಬೇಕಾಗಿತ್ತು. ಹಾಗಾಗದಿದ್ದಲ್ಲಿ ಈ ತಿಂಗಳು ಕೋರ್ಟನವರೆಗೂ ಹೋಗತಕ್ಕ ಪ್ರಸಂಗ ಬರುವದು. ನೌಕರಿ, ದಂಧೆ, ಉದ್ಯೋಗ, ವ್ಯವಸಾಯದವರು ಒಳ್ಳೇ ಜಾಣತನದಿಂದಿರತಕ್ಕದ್ದು. ಸಿಕ್ಕ ಸಿಕ್ಕಹಾಗೆ ಪ್ರವೃತ್ತರಾಗಬಾರದು. ಹುಷಾರಿ. ಆಯ ಒಂದು ಪಾಲು, ವ್ಯಯ ನೂರು ಪಾಲು ಹೀಗೆ ಕಂಡುಬರುವದು. ತಾರೀಖು ೪-೫-೧೪-೧೫-೧೬-೨೩-೨೪-೨೭ ತೊಂದರೆ, ದುರ್ವಾರ್ತಾಶ್ರವಣ. ವಿಶ್ಲ-ಚಿಂತೆ.

ವೃಷಭರಾಶಿ

ಆಟಕ್ಕೆ ತಕ್ಕನೇಪ, ನೇಪಕ್ಕೆ ತಕ್ಕಭಾಪೆ? ಎಂಬಂತೆ ಹೇಗೆ ಸಂಧೀ ಬರುವದೋ ಹಾಗೆ ಚತುರೋಪಾಯಗಳಿಂದ ನಡಿಯಿರಿ. ಖಂಡಿತವಾಗಿಯೂ ನೀವು ಜಯಶೀಲರಾಗುವಿರಿ, ಸಂಶಯವಿಲ್ಲ. ಪ್ರಕೃತಿ ಸುತ್ತು ಪ್ರಾಪಂಚಿಕ ಸುಖ, ಮಾನೀಕಸುಖ, ಸ್ತ್ರೀಸುಖ ದೊರೆಯುವದು. ಸಾಂಪತ್ತಿಕಸ್ಥಿತಿ ಸುಧಾರಿಸುವದು. ಆರ್ಥಿಕ ಅಡಚಣಿ ದೂರಾಗುವದು, ಮಹತ್ವಾಕಾಂಕ್ಷೆ ಈಡೇರುವದು. ಕೋರ್ಟು, ಕಛೇರಿ, ಕೆಲ್ಸಗಳಲ್ಲಿ ಜಯಪ್ರದ ದೊರೆತು ಶತ್ರುಗಳ ಮುಖವು ಮ್ಲಾನವಾಗುವದು. ಉತ್ಸಾಹ, ಕಾರ್ಯ, ಧೈರ್ಯ ಗಳಿಂದಲೂ ನೀವು ಮುಂಬೆಬರುವ ಯೋಗವಿರುವದು, ನೌಕರಿ, ದಂಧೆ ಉದ್ಯೋಗಗಳಲ್ಲಿ ಲಾಭ, ಯಶ, ಮಾನಮಾನ್ಯತೆ ಉಂಟಾಗುವದು. ಸ್ವಪರಜನಗಳಿಂದ ಸಹಾಯ ಮತ್ತು ಪ್ರವಾಸದಲ್ಲಿ ಸುಖ, ಮಾನಮಾನ್ಯತೆ ದೊರೆಯುವದು. ದಾನ, ಧರ್ಮ, ಪರೋಪಕಾರ ಕೃತಿಗಳುಂಟಾಗುವವು, ಸತ್ಸಮಾಗಮ, ಮನಸ್ಸಿನಂತೆ ಮಹಾದೇವ ಎಂಬಂತೆ ಸ್ವೇಚ್ಛಾಪ್ರಕಾರ ದಿಗ್ವಿಜಯವಾಗುವದು. ತಾರೀಖು ೩-೪-೧೬-೧೭-೨೫-೨೬-೩೦ ಖರ್ಚು.

ಮಿಥುನರಾಶಿ

ದುಡ್ಡು-ಮುಡ್ಡಿಂದು, ಮುಡ್ಡಿನ ದೆಪ್ಪಬಂತು. ಹಣವಂತನೇ ಬಲವಂತ ನಯ್ಯಾ, ಹಣವಿಲ್ಲದಾಗ ಆಪ್ತ ಇಷ್ಟ ಪ್ರಿಯವಸ್ತು, ಸರಕಾರ, ಸಾಹುಕಾರರೆಂಬುವರು ವಕ್ರದೃಷ್ಟಿಯಿಂದಲೇ ನೋಡುವರೆಂಬ ದೃಷ್ಟಾಂತವಾದ ತಮಗೆ ಈ ತಿಂಗಳು ಆಗಲಿದ್ದ ಆಪ್ತ ಇಷ್ಟ ಮಿತ್ರರೂ ಒಲಿದು ನಿಮ್ಮಲ್ಲಿಗೆ ಬರುವರು. ಕೋರ್ಟು, ಕಛೇರಿ ಕೆಲ್ಸಗಳೂ ನಿಮ್ಮಂತೆಯಾಗುವವು. ಸ್ವೀಕೃತ ಕೆಲ್ಸಗಳಲ್ಲಿ ಯಶಪ್ರದ ದೊರೆಯುವದು. ಮನೋಗತ ವಿಚಾರಗಳು ಕೊನೆಗಾಣುವವು. ನೌಕರಿ, ದಂಧೆ, ಉದ್ಯೋಗಗಳಲ್ಲಿ ಲಾಭದ ಮಾರ್ಗ ಕಂಡುಬರುವದು. ಅಡಚಣಿಯಂತೂ ಬಾರದು. ಪ್ರವಾಸದಲ್ಲಿ ಸುಖವೂ ದೊರೆಯುವದು. ಉತ್ಸಾಹ, ಆನಂದ, ಕೀರ್ತಿ, ಸ್ಫೂರ್ತಿಯೋಗವಿರುವದು. ತಾರೀಖು ೧-೯-೧೦-೧೧-೧೯-೨೦-೨೬-೨೮ ಚಿಂತೆ.

ಕರ್ಕರಾಶಿ

ವಿನಾಶಕಾಲಕ್ಕೆ ವಿಪರೀತಬುದ್ಧಿಯುಂಟಾದೀತು ಎಂಬಂತೆ ಪ್ರಕೃತಿ ಕೆಡುತ್ತೆ. ಪಿತ್ತವಿಕಾರ, ಮಲಬದ್ಧತೆ, ತಲೆಶೂಲಿ, ರೋಗೋಪ್ರದಯೋಗವಿರುವದು. ಪ್ರಾಪಂಚಿಕ ಸುಖ ದೊರೆಯದೆ ಗೃಹದಲ್ಲಿ ಅಶಾಂತತೆಯೇ ಕಂಡುಬರುವದು. ನಿಮ್ಮ ಸ್ವಭಾವವಂತೂ ಕ್ಷಣಕ್ಷಣಕ್ಕೆ ಬದ್ಲಾಬದ್ಲಿಯಾಗುವದು. ಇದರಿಂದಲೇ ಹಾನೀ, ಮಾನಭಂಗ, ವಿಘ್ನಯೋಗಗಳನ್ನು ತಂದುಕೊಳ್ಳುವಿರಿ. ಹುಷಾರಿ! ಕೈಗೊಂಡ ಸಕಲ ಕಾರ್ಯಗಳಲ್ಲಿಯೂ ವಿಘ್ನವಿರುವದು. ಅಲಸ್ಯ, ಮರುವು ಈ ಯೋಗವಿರುವದು. ಸಾಂಪತ್ತಿಕ ಸ್ಥಿತಿ ಕಷ್ಟತರದ್ದಾಗಿಯೇ ಇದ್ದು ಹಣದ ಅಡಚಣಿ ವಿಶೇಷವಾಗುವದು. ಸ್ತ್ರೀಸೌಖ್ಯ ಮನಸ್ಸಿನಂತೆ ದೊರೆಯಲಾರದು. ಪ್ರವಾಸದಲ್ಲಿ ತೊಂದರೆಯಾಗುವದು. ತಾರೀಖು ೨-೫-೭-೮-೧೦-೧೩-೨೧-೨೨-೨೪-೨೫-೩೦ ಅನಾರೋಗ್ಯ, ಹಾನಿ, ಮಾನಭಂಗ, ಖರ್ಚಾಧಿಕ್ಯ ಲಾಭವಿಲ್ಲ.

ಸಿಂಹರಾಶಿ

ಭಾವೀನೀ ತಿಗೆಯಲಿಕ್ಕೆ ಹೋದರಿ, ಬೀತಾಳ ಹೊರಟಂತೆ! ಈ ಪ್ರಕಾರ ನಿಮ್ಮ ಯೋಗವಿದೆ. ಗುಪ್ತ ಶತ್ರುಗಳಿಂದ ತೊಂದರೆ, ಧನಹಾನಿ, ಮಾನಭಂಗ, ಕಾರ್ಯಭಂಗ, ಕಷ್ಟ, ಚಿಂತಾಧಿಕ್ಯಯೋಗವಿದೆ. ಗೃಹದ ವೆಚ್ಚದಿಂದ ಸಾಕುಸಾಕಾಗುವದು. ಲಾಭವಂತೂ ಇಲ್ಲವೇ ಇಲ್ಲ? ಬರುವದ್ದು ಬಾರ

ದಿರುವಿಕೆ, ಕೊಡುವದರಿಂದ ತ್ರಾಸಾಗುವಿಕೆ, ಇದರಿಂದ ವಿಚಾರ ಮಾಡಿ ಮಾಡಿ ತಲೆಕಾಯ್ದು ನಿದ್ರಾಭಂಗವಾಗುತ್ತೆ. ಆಪ್ತ ಇಷ್ಟಮಿತ್ರರಿಂದ, ವರಿಷ್ಠರಿಂದ ಮನಸ್ಸಿಗೆ ಪರಿಣಾಮವಾಗುವಂಥ ಕೃತಿಗಳಾಗುತ್ತವೆ. ಕೋರ್ಟು, ಕಛೇರಿ ಕೆಲ್ಸಗಳಲ್ಲಿ ನಿರಾಶಾಯೋಗವಿದೆ. ಪ್ರವಾಸದಲ್ಲಿ ತೊಂದರೆಯಾಗುತ್ತೆ. ನೌಕರಿ, ದಂಧೆ, ಉದ್ಯೋಗಗಳಲ್ಲಿ ಅಸಮಾಧಾನ. ತಾರೀಖು ೪-೫-೬-೯-೧೦-೧೪-೧೫-೨೩-೨೪-೨೫ ಕಷ್ಟ.

ಕನ್ಯಾರಾಶಿ

ಉದಯಕಾಲ ಏನು, ಉದಯ ಕಷ್ಟವೆಂಬ ಕಗ್ಗತ್ತಲೆಯು ನಾಶವಾಗಿ, ಸುಯೋಗವೆಂಬ ಸೂರ್ಯನುದಯಾ. ಈ ತಿಂಗಳು ನಿಮ್ಮ ಪ್ರಕೃತಿ ಮತ್ತು ಪ್ರಾಪಂಚಿಕಸುಖ, ಮಾನಸಿಕಸುಖ, ಸ್ತ್ರೀ ಸುಖದೊರೆಯುವದು. ಸಾಂಪತ್ತಿಕಸ್ಥಿತಿ ಸುಧಾರಿಸುವದಲ್ಲದೆ ಆಡಚಣೆಯೆಂಬ ದುದ್ದಿನ ಪ್ರಶ್ನೆಯೇ ಬಾರದು. ನೌಕರಿ, ದಂಧೆ, ಉದ್ಯೋಗಗಳಲ್ಲಿ ಲಾಭ, ಯಶ, ಮಾನ ಮಾನ್ಯತೆ, ಸಂತೋಷವಾರ್ತೆ ಈ ಯೋಗವಿರುವದು. ಕೋರ್ಟು, ಕಛೇರಿ ಕೆಲ್ಸಗಳಲ್ಲಿ ನಿಜಯ ದೊರೆಯುವದು. ಸ್ವೀಕೃತ ಕೆಲ್ಸಗಳು ಮನಸ್ಸಿನಂತೆ ಕೊನೆಗಾಣುವವು. ಉತ್ಸಾಹ, ಧೈರ್ಯ, ಶೌರ್ಯ, ಸಗುಣಿಗಳಿಂದ ಸ್ವಪರಜನಗಳ ಆದರ ಸತ್ಕಾರವಾಗುವದು. ಈ ತಿಂಗಳು ನೀವು ಜನಗಳಿಗೆ ಬೆಲ್ಲದಂತೆ ಕಾಣುವಿರಿ. ಹೇಗೆಂದರೆ ಬೆಲ್ಲವನ್ನು ಎತ್ತ ಕಡಿದರೂ ಸೀಯಲ್ಲವೇ ತದ್ವತ್ ನೀವು ಸೀ. ತಾರೀಖು ೭-೮-೧೨-೧೩-೧೬-೧೭-೨೫-೨೬ ಆಕಸ್ಮಾತ್ ಸ್ವಲ್ಪ ಚಿಂತೆ, ವ್ಯಯ, ವಿಘ್ನ.

ತುಲಾರಾಶಿ

ಲೋಕಾಪವಾದವನ್ನು ಹೊತ್ತರೂ, ಲೋಕೋದ್ಧಾರ ಕೆಲ್ಸಮಾಡುವಿರಿ. ಅಂತೆ ನಿಂದೆ, ವಿಘ್ನ, ತೊಂದರೆ ಇತ್ಯಾದಿಗಳಿಗೆ ತಾವು ಎದೆಗೊಟ್ಟು ನಿಲ್ಲಬಹುದು. ನಿಶ್ಚಯವಾಗಿ ಕೋರ್ಟು, ಕಛೇರಿ ಕೆಲ್ಸಗಳಲ್ಲಿ ಧಾರ್ಮಿಕ ಹಾಗೂ ಸಾರ್ವಜನಿಕ ಕೆಲ್ಸಗಳಲ್ಲಿ ಕೈಗೊಂಡ ಸಕಲ ಕಾರ್ಯಗಳಲ್ಲಿ ಯಶ ಪ್ರಾಪ್ತಿಯಾಗಿ, ಮಾನ ಸನ್ಮಾನ ದೊರೆಯುವದು. ಕೀರ್ತಿ ಸ್ಫೂರ್ತಿ ಉತ್ಸಾಹವುಂಟಾಗುವದು. ಹೆದರಬೇಡಿ! ಸ್ವಪರ ಜನಗಳ ಪ್ರೀತಿಯೂ ವರಿಷ್ಠರಿಂದ ಸಹಾಯವೂ ನೌಕರಿ, ದಂಧೆ ಉದ್ಯೋಗಗಳಲ್ಲಿ ತುಂಬಾ ಲಾಭವೂ ಮಹತ್ವಾಕಾಂಕ್ಷೆ ಈಡೇರುವಿಕೆಯೂ ಕಂಡುಬರುತ್ತೆ. ಪ್ರವಾಸದಲ್ಲಿ ಸುಖ ದೊರೆಯುತ್ತೆ. ತಾರೀಖು ೧-೯-೧೦-೧೯-೨೦-೨೩-೨೮ ಖರ್ಚಿನ ಪ್ರಸಂಗ ಅಷ್ಟೆ!

ವೃಶ್ಚಿಕರಾಶಿ

ಈ ತಿಂಗಳು ಹೊತ್ತುಬಂದಂತೆ, ಕೊಡೆ ಹಿಡಿಯಿರಿ. ಸಕಲ ಕಾರ್ಯಗಳಲ್ಲಿ ಜಯಪ್ರದ ದೊರೆಯುವದು. ಸಂಶಯವಿಲ್ಲ! ಪ್ರಕೃತಿ ಮತ್ತು ಪ್ರಾಪಂಚಿಕಸುಖ, ಮಾನಸೀಕಸುಖ ದೊರೆಯುವದು. ನೌಕರಿ, ದಂಧೆ, ಉದ್ಯೋಗಗಳಲ್ಲಿ ಲಾಭವೂ ಸಾಧಾರಣ ದೊರೆಯುವದು. ಪ್ರವಾಸದಲ್ಲಿ ಸುಖವಿರುವದು. ಸ್ವಪರ ಜನಗಳ ಪ್ರೀತಿ ವೃದ್ಧಿಯಾಗುವದು. ನೌಕರಿ, ದಂಧೆ, ಉದ್ಯೋಗಗಳಲ್ಲಿ ಜಾಣತನದಿಂದಲೇ ಕಾರ್ಯ ಸಾಧಿಸಿಕೊಳ್ಳಿ, ಅನುಕೂಲ ಲಾಭವಾಗುವದು. ಕೋರ್ಟು, ಕಛೇರಿ ಕೆಲ್ಸಗಳಲ್ಲಿ ಕೈಗೊಂಡ ಸಕಲ ಕಾರ್ಯಗಳಲ್ಲಿ ಸಮಾಧಾನದಿಂದ ಕೈಹಾಕಿರಿ. ಅನುಕೂಲವಾಗುತ್ತೆ. ೨-೩-೧೨-೧೩-೨೦-೨೧-೨೨-೨೩-೨೦ ಆನಾರೋಗ್ಯ, ಚಿಂತೆ, ಖರ್ಚು.

ಧನುರ್ರಾಶಿ

ಈ ತಿಂಗಳು ಸಂಸಾರವೆಂಬ ಮಹಾನೂರದಲ್ಲಿ ಪ್ರಪಂಚವೆಂಬ ಹಡಗನ್ನು ಸಾಗಿಸಲು, ತೊಂದರೆಯಿನಿಸುತ್ತದೆ. ಯಾಕೆಂದರೆ ಶತ್ರಗಳೆಂಬ ಮೀನುಗಳಿಂದಲೂ, ಪ್ರತಿಕೂಲವೆಂಬ ಗ್ರಹಗಳಿಂದಲೂ, ಆರ್ಥಿಕ ಅಡಚಣೆಯೆಂಬ ಬಿರುಗಾಳಿಯು, ವಿಘ್ನವೆಂಬ ತೆರೆಗಳಿಂದಲೂ ಅಕಸ್ಮಾತ್ ಅಪಘಾತಯೋಗವಿದೆ. ಆಗಲಿ ಧೈರ್ಯಶಾಲಿಗಳಾಗಿರಿ, ಕೊನೆಯಲ್ಲಿ ಯಾವ ದಾದರೊಂದು ದಂಡಿಗೆ ಮುಟ್ಟೇಮುಟ್ಟುವಿರಿ. ಖಂಡಿತ ಪ್ರಕೃತಿ ಮತ್ತು ಪ್ರಾಪಂಚಿಕಸುಖ ಸಾಧಾರಣ ದೊರೆತರೂ ಮ್ಹಾನಸೀಕಸುಖ ಬಿಲ್ಕೂಲು ದೊರೆಯುವದಿಲ್ಲ. ಶತ್ರಗಳಿಂದ ವಿಘ್ನ ಬಿಟ್ಟುದಲ್ಲ, ಪ್ರವಾಸದಲ್ಲಿ ಕಷ್ಟವಾಗುವ ಸಂಭವ ಹುಷಾರಿ. ನೌಕರಿ, ದಂಧೆ, ಉದ್ಯೋಗಗಳಲ್ಲಿ ಸಾವಧಾನ, ಕೋರ್ಟು, ಕಛೇರಿ ಕೆಲ್ಸಗಳನ್ನು ವಿಶ್ವಪ್ರಯತ್ನ ಮಾಡಿ, ಅನುಕೂಲ ಮಾಡಿಕೊಳ್ಳಿ, ತೊಂದರೆಯ ಕಾಲವಾಗಿದೆ. ಸ್ವಪರಜನರನ್ನೂ, ಆಪ್ತ ಇಷ್ಟರನ್ನೂ ನೀವೇ ತುಚ್ಛಮಾಡಿ, ತೊರೆದಿರುವಿರಿ. ಅವರೆತ್ತ ನೀವೆತ್ತ ತಾರೀಖು ೪-೫-೬-೧೪-೧೫-೨೩-೨೪-೨೫ ಬಹುಕಷ್ಟ, ಅನಾರೋಗ್ಯ, ಮಾನಹಾನಿ, ಖರ್ಚಾಧಿಕ್ಯ.

ಮಕರರಾಶಿ

ಛಿದೊಂದು ತಿಂಗಳು ಸರಕಾರದಿಂದೆ ಹಾಯಬೇಕು, ಸಾಹುಕಾರರ ಮುಂದೆ ಹಾಯಬೇಕು. ನಯ, ನುಡಿ, ಭಯ, ಭಕ್ತಿ, ಪ್ರೇಮ, ಬುದ್ಧಿ, ವಿಶ್ವಾಸದಿಂದಲೂ, ಶಾಂತತೆಯಿಂದಲೂ ನಡೆಯತಕ್ಕದ್ದು. ಸಾವಧಾನ! ಸಾ....ನ! ಪ್ರಕೃತಿ ಮತ್ತು ಪ್ರಾಪಂಚಿಕಸುಖ ಸಾಧಾರಣ ದೊರೆಯುವದು. ಸ್ವೀಕೃತ ಕೆಲ್ಸಗಳಲ್ಲಿ ಸ್ವಲ್ಪ ಮಾರ್ಗದರ್ಶಿಯೋಗವಿದ್ದರೂ, ಕೋರ್ಟು ಕಛೇರಿ ಕೆಲ್ಸಗಳಲ್ಲಿ ಮಾತ್ರ ಸಂಶಯ. ನೌಕರಿ, ದಂಧೆ, ಉದ್ಯೋಗಗಳಲ್ಲಿ ಲಾಭವಾದಾಗ್ಯೂ ಖರ್ಚಿನ ಪ್ರಸಂಗವೇ ಅಧಿಕ. ಸ್ವಪರಜನರ ನಿಂದೆಗೆ ಪಾತ್ರರಾಗುವಯೋಗ. ಧಾರ್ಮಿಕ ಹಾಗೂ ಸಾರ್ವಜನಿಕ ಕೆಲ್ಸಗಳಲ್ಲಿ ಮನಸ್ಸಾಗದೆ ಮನಸ್ಸು ಒಂದು ಪ್ರಕಾರದ ಗಡಿಬಿಡಿಯಲ್ಲೇ ಉಳಿಯುವದು. ಆಕಸ್ಮಾತ್ ದೇಹಾಲಸ್ಯ ಉಂಟಾಗುವದು. ಸಕಲ ಕಾರ್ಯಗಳಲ್ಲೂ ವಿಘ್ನವಂತೂ ಹೇಳಲಸಾಧ್ಯವಾಗಿರುವದು. ಶತ್ರಗಳ ಗುಪ್ತಕಾರಸ್ಥಾನದಿಂದ ಸಾಕುಸಾಕಾಗುವದು, ತಾಳಿರಿ. ಸುಖದ ಮುಂದೆ ದುಃಖಕ್ಕೆ, ದುಃಖದ ಮುಂದೆ ಸುಖ. ತಾರೀಖು ೭-೮-೯-೧೦-೧೬-೧೭-೧೮-೨೫-೨೬ ಮಾನಹಾನಿ, ಖರ್ಚಾಧಿಕ್ಯ, ನಿರಾಶಾ.

ಕುಂಭರಾಶಿ

ವಿಜಯಧ್ವಜ ಹಾರಾಡುವದೆಂದು ಹೇಳಲು, ಅಭ್ಯಂತರವಿಲ್ಲ. ಈ ತಿಂಗಳು ಪ್ರಕೃತಿ ಮತ್ತು ಪ್ರಾಪಂಚಿಕಸುಖ, ಮಾನಸೀಕಸುಖ, ಸ್ತ್ರೀಸುಖ ದೊರೆಯುವದು. ಸಾಂಪತ್ತಿಕಸ್ಥಿತಿ ಸುಧಾರಿಸುವದಲ್ಲದೆ ಛಡದ ಅಡಚಣೆ ದೂರಾಗುವದಿಲ್ಲ. ಸ್ವಪರಜನಗಳಿಂದಲೂ, ಸಾಹುಕಾರ, ಸರಕಾರದಿಂದಲೂ

ಸಹಾಯ ಮನ್ನಣೆಯಾಗುವದು. ಸ್ವಿಕೃತ ಕೆಲ್ಸಗಳಲ್ಲಿ ಕೋರ್ಟು ಕಛೇರಿ ಕೆಲ್ಸಗಳಲ್ಲಿ ಜಯದೊರೆಯುವದು. ಸತ್ಸಮಾಗಮವಾಗುವದು, ಪ್ರವಾಸ ದಲ್ಲಿ ಸುಖದೊರೆಯುವದು. ನೌಕರಿ, ದಂಧೆ, ಉದ್ಯೋಗಗಳಲ್ಲಿ ಲಾಭ, ಯಶ, ಮಾನ, ಮಾನ್ಯತೆ ಉಂಟಾಗುವದು. ಶತ್ರುಗಳು ಮಿತ್ರರಾಗುವರು, ಅಕಸ್ಮಾತ್ ದರ್ಬಾರಿ ಕೆಲ್ಸದಲ್ಲಾಗಲೀ, ವಾದದಲ್ಲಾಗಲೀ, ಆರ್ಸ್ಥಿತ ಯೋಗಬರುವದು. ಹಾಗೆ ನೂಡಿಕೊಳ್ಳಿ. ತಾರೀಖು ೧೯-೧೦-೧೧-೧೯-೨೩-೨೬ ಮಿರ್ಚು.

ಮೀನರಾಶಿ

ಜಗತ್ತಿನಲ್ಲಿ ದುಡ್ಡಿನ ಮುಂದೆ ಯಾವ ಸೋಗೂ ಚಂದಕಾಣುವದಿಲ್ಲ. ಆದರೆ ಈ ತಿಂಗಳು ಪ್ರಕೃತಿ ಮತ್ತು ಪ್ರಾಪಂಚಿಕಸುಖ ದೊರೆತರೂ ಮಾನ ಸೀಕಸುಖ ಇರಲಾರದು. ಅಂದರೆ ಹಣದ ಅಡಚಣೆಯಿಂದ ಸಾಕುಸಾಕಾ ಗುವದು. ಸ್ವೀಕೃತ ಕೆಲ್ಸಗಳಲ್ಲಿ, ದರ್ಬಾರಿ ಕೆಲ್ಸಗಳಲ್ಲಿ ಪ್ರತಿಯೊಂದು ಕಾರ್ಯದಲ್ಲಿ ದುಡ್ಡಿನ ಸೋಗು ಮುಂದೇ ಬರುವದು. ನೌಕರಿ, ದಂಧೆ, ಉದ್ಯೋಗಗಳಲ್ಲಿ ವ್ಯಸನವುಂಟಾಗುವದು. ಸಾಂಪತ್ತಿಕಸ್ಥಿತಿಯೇ ಸಾಧಾರಣ ಸುಖದಲ್ಲಿದ್ದು ಕೈಬಾಯಿ ಆಡಲು ಕೊನೆಯ ವಾರದಲ್ಲಿ ಅನುಕೂಲ ವಿರುವದು. ಪತ್ನಿಪುತ್ರರ ಆರೋಗ್ಯ ಕೆಡುವದು. ಪ್ರವಾಸದಲ್ಲಿ ಸುಖ ವಿರುವದು. ಅಂತೂ ಇಂತೂ ಸತ್ಸಮಾಗಮದಿಂದಲೂ, ಗುರುಹಿರಿಯರ ಸೇವೆಯಿಂದಲೂ ನಿಮಗೊಳ್ಳೆಯದೆಂದು ಭಾವಿಸಬಹುದು. ತಾರೀಖು ೨-೩-೧೨-೧೩-೨೧-೨೨-೨೫-೨೬-೨೯-೩೦ ಮಿರ್ಚಿನ ಪ್ರಸಂಗ, ಚಿಂತಾಧಿಕ್ಯ, ಕಡುತರಕಷ್ಟ, ಕಾರ್ಯಭಂಗ.

ಸಾದರ ಸ್ವೀಕಾರ

ಚಿತ್ರಾ :—(ಮಹಿಳೆಯರ ಕನ್ನಡ ಸಚಿತ್ರ ಮಾಸ ಪತ್ರಿಕೆ) ಇದರ ಪ್ರಕಾಶಕರು ಬೆಂಗಳೂರು ಸಿಟಿ ನ್ಯೂ ಮಾರ್ಕೆಟ್ಟಿನಲ್ಲಿರುವ ಶಾರದಾ ಎಂಬ್ರಾಯಿಡರಿ ಸ್ಟೋರ್ಸ್‌ನವರು. ಸಂಪಾದಕರು: ಶ್ರೀಮತಿ ದ್ವಾರಕಾಬಾಯಿ ವಿ. ಮತ್ತು ಶ್ರೀ ಗುರುನಾಥ ಜೋಶಿ ರವರು. ಇವರ ಆಗಸ್ಟ್ ತಿಂಗಳ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಇದರಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ಅನೇಕ ಉಪಯುಕ್ತ ಕಥೆಗಳು, ಲೇಖನಗಳು, ಕಸೂತಿ ಚಿತ್ರಗಳು ಕರ್ನಾಟಕದಲ್ಲಿ ಹೆಸರ್ಗೊಂಡ ಲೇಖಕ, ಲೇಖಕಿಯರಿಂದ ಬರೆಯಲ್ಪಟ್ಟಿವೆ. ಆದುದರಿಂದ ಮಹಿಳೆಯರೆಲ್ಲರೂ ಈ ಪತ್ರಿಕೆಗೆ ಸಾಕಾದಷ್ಟು ಪ್ರೋತ್ಸಾಹವನ್ನಿತ್ತು, ದೀರ್ಘಕಾಲ ಬಾಳಲು ಅವಕಾಶ ಕಲ್ಪಿಸಿಕೊಡುವಿರೆಂದು ನಾವು ನಂಬಿದ್ದೇವೆ. ವಾರ್ಷಿಕ ಚಂದಾ ರೂ. ೧—೮—೦. ಬಿಡಿ ಪತ್ರಿಕೆ ೦—೨—೦.

ಕಥಾಕುಂಜ :—(ಬೆಳಗಾವಿನಿಂದ ಹೊರಡುತ್ತಿರುವ ಕನ್ನಡ ಮಾಸ ಪತ್ರಿಕೆ) ಇದರ ನಾಲ್ಕನೇ ವರ್ಷದ ಆರನೇ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿರುತ್ತೇವೆ. ಪ್ರಕಾಶಕರು ಮತ್ತು ಸಂಪಾದಕರು: ಶ್ರೀವ್ಯಾಟಿ ಶಾಮರಾಯರು. ೪೮ ಪುಟಗಳು ಕ್ರೌ ೧/೪. ವಾರ್ಷಿಕ ಚಂದಾ ರೂ. ೧—೦—೦, ಬಿಡಿ ಸಂಚಿಕೆ ೦—೧—೦.

ಧಂಕಾ :—(ತೆಲುಗು ಮಾಸ ಪತ್ರಿಕೆ) ಇದು ೪ನೇ ಸಂಪುಟದಿಂದ ಪುನಹ ಪ್ರಾರಂಭವಾಗಿದೆ. ಇದರ ಆಗಸ್ಟ್ ತಿಂಗಳ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಆಂಧ್ರ ದೇಶದ ಪ್ರಮುಖ ಬರಹಗಾರರಿಂದ ಬರೆಯಲ್ಪಟ್ಟಿರುವ ರಾಜಕೀಯ, ಸಾಂಘಿಕ, ಸಾಮಾಜಿಕ, ವಿನೋದ ಮುಂತಾದ ಉಪಯುಕ್ತ ಲೇಖನಗಳು, ಕಥೆಗಳು ತುಂಬಿವೆ. ಕ್ರೌ ೧/೪, ಪುಟಗಳು ೬೦. ಬಿಡಿ ಪತ್ರಿಕೆ ಬೆಲೆ ೦—೨—೦. ಪ್ರಕಾಶಕರು ಮತ್ತು ಸಂಪಾದಕರು: ಶ್ರೀ. ಬಿ. ಟಿ. ನರಸಿಂಹಾಚಾರ್, ನಂ. ೬, ಸುಂಕುರಾಮಚೆಟ್ಟಿ ಸ್ಟ್ರೀಟ್, ಜಿ. ಟಿ. ಮದ್ರಾಸು.

ಇದಲ್ಲದೆ **ಚಿತ್ರ ಸಮಾಚಾರ, ಸುಬೋಧ, ಕಥೆಗಾರ, ವಿಕಟ ವಿನೋದಿನಿ, ನವ ಸಂದೇಶ, ಅಧುನಿಕ ಭಾರತ, ಕನ್ನಡ ಜ್ಯೋತಿ** ಮುಂತಾದ ಪತ್ರಿಕೆಗಳನ್ನು ಆದರದಿಂದ ಸ್ವೀಕರಿಸಿರುತ್ತೇವೆ.

ಚ ಲ ನ ಚಿ ತ್ರ ಪ್ರ ಪ ಂ ಚ

ಚಿಂತಾಮಣಿ ಪಿಕ್ಚರ್ಸ್ ಲಿಮಿಟೆಡ್‌ರವರ '**ಭಕ್ತ-ಮೀರಾ**' ಎಂಬ ತಮಿಳು ವಾಕ್ಚಲನ ಚಿತ್ರವನ್ನು
ಮೆಜಸ್ಟಿಕ್ ಟಾಕೀ ಮಂದಿರದಲ್ಲಿ ನೋಡಲು ತಪ್ಪಬೇಡಿ!

ಪಾತ್ರಧಾರಿಗಳು.

ಶ್ರೀ ವೈ. ವಿ. ರಾವ್ — ಶ್ರೀ ಕೃಷ್ಣ ಮತ್ತು ಮಾನಸಿಂಗ್
ಶ್ರೀಮತಿ ವಸುಂಧರಾದೇವಿ — ಭಕ್ತ ಮೀರಾಬಾಯಿ
ಶ್ರೀ ಎ. ನಾರಾಯಣರಾವ್ — ಮಣಿ ಅಯ್ಯರ್ (ನಕಲಿ)
ಶ್ರೀ ಎ. ಎ. ಸೋಮಯಾಜುಲು, ಬಿ.ಎ., — ಪ್ರಧಾನ ಅಮಾತ್ಯ

ಕಥಾವಸ್ತು :—ಮೇವಾಡದ ಕುಂಭರಾಣನು ಮೊಗಲರ ವೈರಿಗಳಲ್ಲಿ ಒಬ್ಬನು. ಮೀರಾಬಾಯಿಯು ಆತನ ಸೌಂದರ್ಯವತಿಯಾದ ಹೆಂಡತಿ. ಇವಳು ಶ್ರೀ ಕೃಷ್ಣನಲ್ಲಿ ಸಂಪೂರ್ಣ ಭಕ್ತಿಯುಳ್ಳವಳಾಗಿ, ಸದಾಕಾಲದಲ್ಲಿ ಆತನ ನಾಮಸ್ಮರಣೆಯಲ್ಲಿಯೂ ಭಜನೆಯಲ್ಲಿಯೂ ಕಾಲಕಳೆಯುತ್ತಿದ್ದಳು ದಿನೇದಿನೇ ಮೀರಳು ತನ್ನ ಭಕ್ತಿ ಭಜನೆಗಳಲ್ಲಿ ನಿರತಳಾಗಿರುವುದನ್ನು ಕಂಡು ಕುಂಭರಾಣನು ಅವಳನ್ನು ಒಂದು ಕಿರುಮನೆಯಲ್ಲಿರಿಸುವನು

ಮೀರಾಬಾಯಿಯ ಭಜನೆ ಹಾಡುಗಳು ಮೊಗಲರ ಆಸ್ಥಾನಕ್ಕೂ ಮುಟ್ಟಿತು ಅಲ್ಲಿ ರಾಜಾಮಾನ್‌ಸಿಂಗನು ತಾನಸೇನನೊಡಗೂಡಿ, ಮೀರಳ ಸಂದರ್ಶನಕ್ಕಾಗಿ ಮೇವಾಡಕ್ಕೆ ವೈದ್ಯರ ವೇಷದಲ್ಲಿ ಬರುವರು ಮೀರಳ ಅಂತಃಪುರವನ್ನು ಪ್ರವೇಶಿಸಿದರೂ, ದೇವರ ಧ್ಯಾನದಲ್ಲಿ ಮಗ್ನಳಾಗಿದ್ದ ಮೀರಳು ಗಮನಿಸಲಿಲ್ಲ ಮೀರಳು ಪೂಜಮಾಡುತ್ತಿದ್ದ ಕೃಷ್ಣನ ವಿಗ್ರಹಕ್ಕೆ ಒಂದು ವಜ್ರದ ಹಾರವನ್ನು ಹಾಕಿ, ಮಾನ್‌ಸಿಂಗನು ಹೊರಕ್ಕೆ ಬರುವನು ಈ ವಜ್ರಹಾರವನ್ನು ಅಲ್ಲಿದ್ದ ಒಬ್ಬ ದಾದಿಯು ಅಪಹರಿಸಿ, ಅವಳಿಂದ ರಾಜನ ಕಿವಿನರಿಗೂ ಮುಟ್ಟುವುದು ಇಂತಹ ಅಪೂರ್ವವಾದ ವಜ್ರಾಹಾರವು ಅಕ್ಬರ್ ಚಕ್ರವರ್ತಿಯಲ್ಲಿ ಮಾತ್ರ ಇರುವುದೆಂದೂ, ಅರಮನೆಗೆ ಬಂದವರಲ್ಲಿ ಓರ್ವನು ಅಕ್ಬರನೇ ಇರಬೇಕೆಂದು ತೀರ್ಮಾನಿಸಿದನು

ಇಂತಹ ದುರಾಚಾರಕ್ಕೆ ಮೀರಳಿಗೆ ತಕ್ಕ ಪ್ರತೀಕಾರ ಮೃತ್ಯುವಲ್ಲದೆ ಬೇರೊಂದಿಲ್ಲವೆಂದು, ಮೀರಳಿಗೆ ಮರಣದಂಡನೆಯನ್ನು ವಿಧಿಸುವನು ಇಂತಹ ಅನ್ಯಾಯವನ್ನು ಮಂತ್ರಿಗಳು ಸಹಿಸಲಾರದೆ ತಮ್ಮ ರಾಜೀನಾಮೆಗಳನ್ನು ಒಪ್ಪಿಸಿದರು ಅರಮನೆಯ ಇತರ ಕೆಲಸಗಾರರು ಕೆಲಸವನ್ನು ಬಿಟ್ಟರು ಯಾರೂ ಮೀರಳನ್ನು ಕೊಲ್ಲಲು ಮುಂದುಬಾರದೆ ಹೋದರು ಆಗ ಮೀರಳನ್ನು ಕೊಲ್ಲಲು ಯಾರೂ ಇಲ್ಲದಿದ್ದುದರಿಂದ ಕುಂಭರಾಣನು,ತನಗೆ ತಾನೇ ಮೃತ್ಯುವಶಳಾಗೆಂದು ಮೀರಳಿಗೆ ಆಜ್ಞಾಪಿಸುವನು

ಪತಿಯಾಜ್ಞೆಯನ್ನು ಶಿರಸಾವಹಿಸಿದ ಮೀರಳು ಶ್ರೀ ಕೃಷ್ಣನ ಸಾನ್ನಿಧ್ಯವನ್ನು ಸೇರಲು ಯಮುನಾತೀರಕ್ಕೆ ನಡೆದಳು

ರಾಣನ ಆಪ್ತಸೇವಕನಾದ ಅಜಿತನು ಇವಳನ್ನು ಹಿಂಬಾಲಿಸಿ, ಇವಳೊಡನೆ ಯಾರೋ ಈರ್ವರುಬಂದು ಮಾತನಾಡಿದೆಂದು ರಾಣನಲ್ಲಿ ಬಂದು ಹೇಳಿದನು ಆ ಈರ್ವರಲ್ಲಿ ಓರ್ವನು ಅಕ್ಬರನೇ ಆಗಿರುವನೆಂದು ಸಂದೇಹಗೊಂಡ ರಾಣನು ಅಕ್ಬರನನ್ನು ಕೊಲ್ಲುವಂತೆ ಅಜಿತನಿಗೆ ಹೇಳಿಕಳುಹಿಸಿದನು ಮತ್ತು ಸ್ವತಃ ಅಕ್ಬರನನ್ನು ಕೊಲ್ಲಲು ಹೊರಟುಬರುವನು ರಾಜನ ಆಜ್ಞೆಯಂತೆ ಹೊರಟ ಅಜಿತನು ರಾಣನನ್ನೇ ಅಕ್ಬರನೆಂದು ಅರಿಯದೇ ಖಡ್ಗವನ್ನು ಪ್ರಯೋಗಿಸಿ ರಾಣನೆಂದರಿತು ಅವನಲ್ಲಿ ಕ್ಷಮೆಬೇಡುವನು ಅವಸಾನಕಾಲದಲ್ಲಿದ್ದ ರಾಣನು, ಅಜಿತ್ ಮತ್ತು ಮಾನಸಿಂಗರ ಮೂಲಕ ಮೀರಳು ನಿರಪರಾಧಿ ಎಂದರಿತುಮನುಷ್ಯನಿಗೆ ಪ್ರಯತ್ನಿಸಿದುದಕ್ಕಾಗಿ ಬಹುವಾಗಿ ಚಿಂತಿಸಿ ತೆರಳಿದನು ಪರಲೋಕಕ್ಕೆ

ಮೀರಳು ಯಮುನಾನದಿಯ ಮೂಲಕ ಶ್ರೀ ಕೃಷ್ಣನ ಪಾದಾರವಿಂದವನ್ನು ಸೇರಿದಳು

ಸಂಪೂರ್ಣ

ಪೋಕ್ ಸುಂದರಂ ಹಳ್ಳಿಪ್ರಯಾಣ ಎಂಬ ಚಿತ್ರದಲ್ಲಿನ ಒಂದು ದೃಶ್ಯ

ಆಗಸ್ಟ್ ೨೦ನೇ ತಾರೀಖಿನಿಂದ ಪ್ರದರ್ಶಿಸಲ್ಪಡುತ್ತಿರುವುದು

ಚಲನಚಿತ್ರ ಸುದ್ದಿ

ಮೋಹನ ಪಿಕ್ಚರ್ಸ್—

ಇವರ **ಬೇದಿ ತ್ರಿಶೂಲ್** ಎಂಬ ವಾಕ್ಚಿತ್ರವು ಬೊಂಬಾಯಿಯಲ್ಲಿ ಪ್ರದರ್ಶಿಸಲ್ಪಡುತ್ತಿರುವುದು. ಇದರಲ್ಲಿ ಜೋಹ್ರಾ, ಸಿರಾಜ್, ಅಮಿನಾ, ಕಮಲ, ಖಾರ್ಟೂ, ಅಟ್ಟಾ ಅಹ್ಮದ್, ಎಸ್. ಆಲಮ್, ಮೂಸಾ, ಹರೂ, ರಫಿಕ್ ಮತ್ತು ಅನ್ಸಾರಿ ಮುಂತಾದವರು ಪಾತ್ರವಹಿಸಿರುವರು. ಇವರ ಮುಂದಿನ ಚಿತ್ರಗಳು: **ಮಿಡ್ ನೈಟ್ ವಾಲಿ** ಮತ್ತು **ಸೈಕಲ್ ವಾಲಿ.**

★

ಶ್ರೀ ವಿಷ್ಣು ಸಿನೇಟೋನ್ ಕಂಪನಿ—

ಇವರ **ಫೇಷನಬಲ್ ವೈಫ್** ಎಂಬ ಚಿತ್ರವು ಬೊಂಬಾಯಿಯಲ್ಲಿ ಪ್ರದರ್ಶಿಸಲ್ಪಡುತ್ತಿರುವುದು. ಇದರಲ್ಲಿ ಅನಿಲ್ ಕುಮಾರ್, ಸುವರ್ಣ, ಎಂ. ಸುಲ್ತಾನ, ಊರ್ಮಿಳಾಗುಪ್ತಾ, ಎಸ್. ನಾಜೀರ್, ಶಾಮ್ಸ್ ಮುಂತಾದ ತಾರತಾರೆಯರು ಪಾತ್ರವಹಿಸಿರುವರು. ಇದರ ಡೈರೆಕ್ಟರು: ಧೀರೂಭಾಯಿ ದೇಶಾಯಿಯರು. ಇವರ ಮುಂದಿನ ಚಿತ್ರ: **ರಾಯಲ್ ಕಮ್ಯಾಂಡರ್.**

★

ಹಂಸ ಪಿಕ್ಚರ್ಸ್—

ಇವರ **ಬ್ರಮ್ಹಚಾರಿ** ಎಂಬ ವಾಕ್ಚಲನ ಚಿತ್ರವು ಶೀಘ್ರದಲ್ಲಿಯೇ ಬೊಂಬಾಯಿಯಲ್ಲಿ ಪ್ರದರ್ಶಿಸಲ್ಪಡುವುದು. ಇದರ ಕಥೆಯನ್ನು ಬರೆದವರು: ಪ್ರಿನಿಪಾಲ್ ಪಿ. ಕೆ. ಅತ್ರೆರವರು. ಇದರಲ್ಲಿ ಪ್ರೇಮವೀರ್ ಮತ್ತು ಧರ್ಮವೀರ್ ಮುಂತಾದುವುಗಳಲ್ಲಿ ಖ್ಯಾತಿಪಡೆದ ಮಾಸ್ಟರ್ ವಿನಾಯಕ್‌ರವರು ಪಾತ್ರವಹಿಸಿರುವರು ಮತ್ತು ಮೀನಾಕ್ಷಿ, ದಾಮೂನಾ ಮಾಲ್ವಾಕರ್, ಜೋಗ್, ಸಾಲ್ವಿ, ನೂರ್‌ಜಹಾ, ಬಾಬೂರಾವ್ ಪವಾರ್, ಜಾವ್ಡೇಕರ್ ಮುಂತಾದ ತಾರತಾರೆಯರು ಪಾತ್ರವಹಿಸಿರುವರು.

★

ಪ್ರಕಾಶ್ ಪಿಕ್ಚರ್ಸ್—

ಶ್ರೀಮತಿ ರಾಜೇಶ್ವರಿ ಮತ್ತು ಲಜ್ಜಾವತಿರವರು ಪಾತ್ರಧರಿಸಿರುವ **ಪೂರ್ಣಿಮಾ** ಎಂಬ ವಾಕ್ಚಲನ ಚಿತ್ರವು ಶೀಘ್ರದಲ್ಲಿ ಬೊಂಬಾಯಿಯ ಕೃಷ್ಣಾ ಟಾಕೀ ಮಂದಿರದಲ್ಲಿ ಪ್ರದರ್ಶಿಸಲ್ಪಡುವುದು. ಇವರ ಮುಂದಿನ ಚಿತ್ರ **ಟೂರ್ಫ ಕ್ವೀನ್** ಎಂಬ ತಮಿಳು ಚಿತ್ರ.

★

ಪ್ಯಾರಾಮೌಂಟ್ ಇಂಡಿಯನ್ ಲಿಬರ್ಟೀಸ್—

ಡೈರೆಕ್ಟರ್: ನಾನೂಭಾಯಿ ವಕೀಲ್‌ರವರ **ವ್ಯಾಗಬಾಂಡ್ ಲೌವರ್** ಎಂಬ ಚಿತ್ರವು ಶೀಘ್ರದಲ್ಲಿಯೇ ಬೊಂಬಾಯಿಯಲ್ಲಿ ಪ್ರದರ್ಶಿಸಲ್ಪಡುವುದು. ಇದರಲ್ಲಿ ನವೀನಚಂದ್ರ, ಪತ್ಸಲ, ಕುನ್ಟೇಕರ್, ಯಾಸ್ಮಿನ್ ನಾರುತೀರಾವ್ ಮುಂತಾದವರು ಪಾತ್ರವಹಿಸಿರುವರು.

★

ಫಿಲ್ಮ್ ಕಾರ್ಪೊರೇಷನ್ ಆಫ್ ಇಂಡಿಯಾ—

ಇವರ **ಆಷಾ** ಎಂಬ ವಾಕ್ಚಲನ ಚಿತ್ರದಲ್ಲಿ ಕಮಲೇಶ ಕುಮಾರಿ, ವಿಜಯ ಕುಮಾರ್, ಆರ್. ಪಿ. ಕಪೂರ್, ಪೂರ್ಣ ಚೌಧರಿ, ಕಮರನ್, ನಟವರ್, ದೇವಬಾಲ, ತುಲ್ಸೀ ಲಹಿರಿ, ರಹಿಮಾ ಮುಂತಾದ ನಟನಟಿಯರು ಪಾತ್ರವಹಿಸಿರುವರು. ಇದರ ಡೈರೆಕ್ಟರರು: ಪಿ. ಎಂ. ಪ್ಯಾರಿಡೇನಿಸ್‌ರವರು.

★

ಶ್ರೀ ಭಾರತ ಲಕ್ಷ್ಮೀ ಸ್ಟುಡಿಯೋ—

ಇವರ **ದಿಲ್ ಕಿ ಛೋಟೇ** ಅಥವಾ **ಕುನ್ವಾರಿ** ಎಂಬ ವಾಕ್ಚಲನ ಚಿತ್ರವು ಶೀಘ್ರದಲ್ಲಿಯೇ ಬೊಂಬಾಯಿಯಲ್ಲಿ ಪ್ರದರ್ಶಿಸಲ್ಪಡುವುದು. ಇದರಲ್ಲಿ ಮಿಸ್ ಕಮಲ, ಜರೀನಾ ಖಾರ್ಟೂ, ಮಾಯಾದೇವಿ ಮುಂತಾದ ತಾರತಾರೆಯರು ಪಾತ್ರಧರಿಸಿರುವರು. ಇದರ ಡೈರೆಕ್ಟರರು: ಪ್ರಫುಲ್ಲರಾಯ್‌ರವರು.

★

ಸುಂದರ್ ಮೂವಿಟೋನ್—

ಇವರ **ಚೋಟೇ ಸರ್ಕಾರ್** ಎಂಬ ವಾಕ್ಚಲನ ಚಿತ್ರವು ಬೊಂಬಾಯಿಯ ಎಡ್ವರ್ಡ್ ಮತ್ತು ಲಾಮಿಂಗ್ಟ್ ಟಾಕೀ ಮಂದಿರಗಳಲ್ಲಿ ಪ್ರದರ್ಶಿಸಲ್ಪಡುತ್ತಿರುವುದು. ಇದರಲ್ಲಿ ಲೀಲಾ ಚಿಟ್ನೀಸ್ ಮತ್ತು ಜಾಲ್‌ಮರ್ಚಂಟ್‌ರವರು ಪಾತ್ರವಹಿಸಿರುವರು.

★

ಸರಸ್ವತೀ ಸಿನೇಟೋನ್—

ಇವರ **ರಾಜಾ ಗೋಪೀಚಂದ್** ಎಂಬ ವಾಕ್ಚಲನ ಚಿತ್ರವು ಬೊಂಬಾಯಿಯ ರಾಯಲ್ ಅಪೆರಾ ಟಾಕೀ ಮಂದಿರದಲ್ಲಿ ಇನ್ನೂ ತೋರಿಸುತ್ತಿರುವರು. ಇದರಲ್ಲಿ ಲೀಲಾ, ಚಂದ್ರ

ಕಾಂತ್, ರತ್ನಪ್ರಭಾ, ಉಷಾ, ಲೋಂಧೇ, ದಿನಕರ್ ಮುಂತಾದ ನಟನಟಿಯರು ಪಾತ್ರವಹಿಸಿರುವರು.

★

ಪ್ರಭಾತ್ ಫಿಲ್ಮ್ ಕಂಪೆನಿ—

ಇವರ ರಾಮಚಂದ್ರಮರಾಠೆ, ಪರಶುರಾಂ ಮತ್ತು ಶಾಂತಾ ಅಪ್ಟೆ ಪಾತ್ರವಹಿಸಿರುವ **ಗೋಪಾಲ ಕೃಷ್ಣ** ಎಂಬ ವಾಕ್ಚಲನ ಚಿತ್ರವು ಕಳೆದ ೧೭ ವಾರಗಳಿಂದಲೂ ಬೊಂಬಾಯಿಯ ಸೆಂಟ್ರಲ್ ಟಾಕೀಮಂದಿರದಲ್ಲಿ ಪ್ರದರ್ಶಿಸಲ್ಪಡುತ್ತಿರುವದು. ಇದರ ಹಾಡುಗಳನ್ನು ಎಂಗ್‌ಇಂಡಿಯಾ ರಿಕಾರ್ಡುಗಳಲ್ಲಿ ತೆಗೆದಿರುವರು.

★

ಸಾಗರ್ ಫಿಲ್ಮ್ ಕಂಪನಿ—

ಇವರ **ಗ್ರಾಮೋಫೋನ್ ಸಿಂಗರ್** ಎಂಬ ವಾಕ್ಚಲನ ಚಿತ್ರವು ಶೀಘ್ರವಲ್ಲಿಯೇ ಬೊಂಬಾಯಿಯ ಇಂಪೀರಿಯಲ್ ಟಾಕೀಮಂದಿರದಲ್ಲಿ ಪ್ರದರ್ಶಿಸಲ್ಪಡುವುದು. ಇದರಲ್ಲಿ ಖ್ಯಾತಿ ಪಡೆದ ಸುರೇಂದ್ರ, ಬಿಬ್ಬೂ, ಪ್ರಭಾ, ಬುಧೂ ಅದ್ವಾನಿ ಮತ್ತು ಇತರರು ಪಾತ್ರವಹಿಸಿರುವರು.

ಬಾಂಬೆ ಟಾಕೀಸ್ ಲಿಮಿಟೆಡ್—

ಇವರ **ನರ್ಚ** ಎಂಬ ವಾಕ್ಚಲನ ಚಿತ್ರದಲ್ಲಿ ಅಶೋಕ ಕುಮಾರ್ ಮತ್ತು ದೇವಿಕಾರಾಣಿ ಮುಂತಾದವರು ಪಾತ್ರವಹಿಸಿರುವರು. ಈ ಚಿತ್ರವು ಆಗಸ್ಟ್ ೧೯ ರಿಂದ ಬೊಂಬಾಯಿಯ ರಾಕ್ಸೀ ಟಾಕೀಮಂದಿರದಲ್ಲಿ ಪ್ರದರ್ಶಿಸಲ್ಪಡುತ್ತಿರುವುದು.

★

ನ್ಯೂ ಥಿಯೇಟರ್ಸ್ ಲಿಮಿಟೆಡ್—

ಇವರ **ಅಭಾಗಿನ್** ಎಂಬ ವಾಕ್ಚಲನ ಚಿತ್ರದಲ್ಲಿ ಮೊಲಿನ, ಪೃಥ್ವಿರಾಜ್, ಬಿ.ಎ., ವಿಜಯಕುಮಾರ್, ದೇವಬಾಲ, ನೇಮೋ, ಬಿಕ್ರಮ್. ಕಪೂರ್ ಮುಂತಾದವರು ಪಾತ್ರವಹಿಸಿರುವರು.

★

ಇಂದ್ರ ಮೂವೀಟೋನ್—

ಇವರ **ಇಂಪಾಸಿಬಲ್** ಅಥವಾ (ನಹೋನೇವಾಲಿ ಬಾತ್) ಎಂಬ ಚಿತ್ರದಲ್ಲಿ ಬುಲ್‌ಬುಲೇ, ಶಾಮ್ಸು, ಮಿಸ್ ಗುಪ್ತಾ ಮತ್ತು ಬಾಬೂರಾವ್ ಪೈಲ್ವಾ ಮುಂತಾದವರು ಪಾತ್ರವಹಿಸಿರುವರು. ಡೈರೆಕ್ಟರರು: ಆರ್. ಎನ್. ವೈದ್ಯರವರು.

Read

FILMINDIA

EVERY MONTH

MOTION PICTURE MAGAZINE FOR MODERN PEOPLE

REGULAR FEATURES

"Bombay Calling," "Editorial Comments," "Howlers of the Month," "Editors Mail," Latest Indian Studio News, Innumerable One and Tri Coloured Art Plates, Impartial Reviews, etc., etc.

BELIEVE IT OR NOT
OVER 1,50,000 READERS EVERY MONTH

The Magazine with a Rare Kick and the Largest Circulation all over India

SINGLE COPY AS. 6 ONLY

Bangalore Agent—

OLETY VENKATANARAYANA GUPTA

BALEPET, BANGALORE CITY

"ಕಥಾವಳಿ"ಯ ಸವಿನಯ ವಿನಂತಿ

ಚಂದಾದಾರರೇ

"ಕಥಾವಳಿ"ಯು ಪ್ರತಿ ತಿಂಗಳ ಮೊದಲನೆಯ ತಾರೀಖಿಗೆ ಹೊರಬೀಳುವುದು. ಬೇಕಾದ ಸಂಚಿಕೆಯಿಂದ ಚಂದಾದಾರರಾಗಬಹುದು. ಪೂರ್ತಾ ಚಂದಾಹಣವನ್ನು ಮುಂಚಿತವಾಗಿಯೇ ಕಳುಹಿಸಬೇಕು. ವಿ. ಪಿ. ಯಿಂದ ಕಳುಹಿಸಲಾಗುವುದಿಲ್ಲ.

ಜಾಹಿರಾತುದಾರರೇ

ಇಡೀ ಕರ್ನಾಟಕದಲ್ಲೆಲ್ಲಾ ಸಂಚರಿಸುವ "ಕಥಾವಳಿ"ಯೇ ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ಉತ್ತಮ ಪ್ರಚಾರ ಪತ್ರಿಕೆ. ಜಾಹಿರಾತುದಾರರು ಪೂರ್ತಾ ಹಣವನ್ನು ಮುಂಗಡ ಕಳುಹಿಸಬೇಕು ಮತ್ತು ಪ್ರತಿ ತಿಂಗಳ ೧೦ನೇ ತಾರೀಖಿನ ಒಳಗಾಗಿ ಜಾಹಿರಾತು ಕಾರ್ಯಾಲಯಕ್ಕೆ ತಲುಪಬೇಕು.

ಜಾಹಿರಾತಿನ ದರಗಳು :

ಒಂದೇ ಸಲ—1 ಪುಟಕ್ಕೆ ರೂ. 10/- ½ ಪುಟಕ್ಕೆ ರೂ. 6/- ¼ ಪುಟಕ್ಕೆ ರೂ. 4/-

ಮುಖಪತ್ರದ ಒಳಭಾಗಕ್ಕೆ ರೂ. 15/- ಮುಖಪತ್ರದ ಹಿಂಭಾಗಕ್ಕೆ ರೂ. 20/-

ವಿಶೇಷ ಸ್ಥಳ ಮತ್ತು ಹೆಚ್ಚು ಕಾಲ ಬೇಕಾದಲ್ಲಿ ಬರೆದು ತಿಳಿದುಕೊಳ್ಳಬಹುದು. ಜಾಹಿರಾತುಗಳು ಸ್ಪುಟವಾಗಿ ಶಾಯಿಯಲ್ಲಿ ಬರೆದು ಕಳುಹಿಸಬೇಕು.

ಲೇಖಕರೇ

೧. ಪ್ರತಿಯೊಂದು ಲೇಖನವೂ ಎಲ್ಲರ ಮನಸ್ಸನ್ನೂ ಆಕರ್ಷಿಸುವ ವಿಷಯಗೌರವದಿಂದ ಕೂಡಿರುವ ಮತ್ತು ಜನಸಾಮಾನ್ಯಕ್ಕೆ ತಿಳಿಯುವಂತಿರಬೇಕು.

೨. ಪ್ರತಿ ಲೇಖನವೂ "ಕಥಾವಳಿ"ಯ ೨–೩ ಪುಟಕ್ಕೆ ಮೀರಿರಬಾರದು ಮತ್ತು ಲೇಖನವು ಸ್ಪುಟವಾದ ಅಕ್ಷರಗಳಿಂದ ಹಾಳೆಯ ಒಂದೇ ಭಾಗದಲ್ಲಿ ಸರಿಯಾದ ಮಾರ್ಜಿನ್ ಬಿಟ್ಟು ಶಾಯಿಯಲ್ಲಿ ಬರೆದಿರಬೇಕು.

೩. ಲೇಖನವು ಅನುವಾದ ಇಲ್ಲವೇ ಭಾಷಾಂತರವಾಗಿದ್ದ ಪಕ್ಷದಲ್ಲಿ ಅದನ್ನು ತಿಳಿಸಬೇಕು ಮತ್ತು "ಕಥಾವಳಿ"ಗೆಂದು ಬರುವ ಲೇಖನಗಳು ಅದರ ದಿಂದ ಸ್ವೀಕರಿಸಲಾಗುವುದು. ಆದರೆ ಈ ಮೊದಲು ಇನ್ನೆಲ್ಲಿಯೂ ಅಚ್ಚಾಗಿರಬಾರದು. ಮುಂದೆ ಅಚ್ಚಾಗಬೇಕಾದಲ್ಲಿ ನಮ್ಮ ಸಮ್ಮತಿ ಬೇಕು.

೪. ತಮ್ಮ ಲೇಖನಗಳಿಗೆ ಚಿತ್ರಗಳನ್ನು ಬಯಸುವವರು ಸಾಧ್ಯವಿದ್ದಲ್ಲಿ ಯುಕ್ತವಾದ ಚಿತ್ರಗಳನ್ನು ಬರೆದು ಲೇಖನದ ಜೊತೆಯಲ್ಲಿ ಕಳುಹಿಸಿದರೆ, ಅದು ನಮಗೆ ಸರಿದೋರಿದರೆ ಅದರ ಬ್ಲಾಕುಗಳನ್ನು ನಾವೇ ಮಾಡಿಸುತ್ತೇವೆ.

೫. ತಮ್ಮ ಲೇಖನಗಳು ಸ್ವೀಕೃತ/ಅಸ್ವೀಕೃತ ಎಂಬುದನ್ನು ತಿಳಿಯಲಪೇಕ್ಷಿಸುವವರು ಲೇಖನದ ಜೊತೆಯಲ್ಲಿ ಮುಕ್ಕಾಲಾಣೆ ಸ್ಟಾಂಪು ಕಳುಹಿಸ ಬೇಕು. ಮತ್ತು ಅಸ್ವೀಕೃತ ಲೇಖನಗಳನ್ನು ಮತ್ತೆ ಬಯಸುವವರು ಅದಕ್ಕೆ ತಗಲುವ ಅಂಚೆ ಹಾಸಲು ಕಳುಹಿಸಿದರೆ ಪಡೆಯಬಹುದು.

೬. ಲೇಖನಗಳು ಪ್ರತಿ ತಿಂಗಳು ೧೦ನೇ ತಾರೀಖಿನ ಒಳಗಾಗಿ ಸೇರುವಂತೆ ಕಳುಹಿಸಬೇಕು.

ಹೆಚ್ಚಿನ ವಿಚಾರಗಳಿಗೆ—

ಕಥಾವಳಿ ಕಾರ್ಯಾಲಯ, ಬಳೇಪೇಟೆ, ಬೆಂಗಳೂರು ನಗರ

ನಿಯಮಗಳಿಗೆ ಮತ್ತು ಕೂಪನ್ನುಗಳಿಗೆ ಅಕ್ಟೋಬರ್ ತಿಂಗಳ ಕಥಾವಳಿಯನ್ನು ನೋಡಿ! ನಿಮ್ಮ ಏಜಂಟರಲ್ಲಿ ಮುಂಗಡವಾಗಿ ಹಣವನ್ನು ಕೊಟ್ಟು ನಿಮ್ಮ ಪತ್ರಿಕೆಗಳನ್ನು ಭದ್ರಪಡಿಸಿಕೊಳ್ಳಿರಿ!

ಮುಂದಿನ ತಿಂಗಳಲ್ಲಿ 'ಕಥಾವಳಿ' ಸ್ಪರ್ಧೆ ನಂ. ೨

	ವಾಕ್ಯಗಳು	ಸರಿದೋರುವ ಉತ್ತರಗಳು
1	"ಕಥಾವಳಿ" ಮಾಸಪತ್ರಿಕೆಗೆ ಕನ್ನಡಿಗರ.....ಇಲ್ಲ	ಬೆಂಬಲ
	ದಿದ್ದರೆ ಯಶಶ್ವಿಯಾಗಿ ಬಾಳುವುದೇ ಇಲ್ಲ	ಪ್ರೋತ್ಸಾಹ
2	ಕೆಲವರಿಗೆ ಇಂಥಾ ಹೆಂಡತಿಯನ್ನು ಪಡೆಯ	ವಿದ್ಯಾವತಿ
	ಬೇಕೆಂದು ಬಹು ಇಷ್ಟ	ಗುಣವತಿ
3	ಸೂರ್ಯನ ಕಿರಣಗಳು ಇದರಿಂದ ಕೂಡಿರುತ್ತವೆ	ಪ್ರಕಾಶ, ಬೆಳಕು
4	ಪುಣ್ಯ ಕಾರ್ಯಗಳನ್ನು ಮಾಡಿದವರು ಈ ಲೋ	ಸತ್ಯಲೋಕ
	ಕಕ್ಕೆ ತೆರಳುವರು.	ಊರ್ಧ್ವಲೋಕ
5	ಮಕ್ಕಳು ತಮಗೆ ಬೇಕಾದ ವಸ್ತುವಿಗಾಗಿ ಹಿರಿಯ	ಪೀಡಿಸು
	ರನ್ನು ತುಬಾ.....ತ್ತಾರೆ	ಕಾಡಿಸು
6	ಜಗತ್ತಿನಲ್ಲಿ ಇದರ ಬಲೆಗೆ ಬೀಳದವರು ಬಹಳ	ಹೊನ್ನು
	ಅಪರೂಪ	ಹೆಣ್ಣು

ವರಶುಲ್ಕದ ಫಲ

ಲೇಖಕರು :
ಶ್ರೀ ಎಲ್. ಜಿ. ಜೋಷಿ, ಬೆಂಗಳೂರು

ಮಧ್ಯಾಹ್ನ ಹನ್ನೆರಡು ಘಂಟೆಯಾಗಿರಬಹುದು. ಮೋಹನನು ಮನೆಗೆ ಬಂದನು. ಹೆಂಡತಿಯಾದ ನೀಲಾಂಬೆಯು ಎಂದಿನಂತೆ ಅಡಿಗೆ ಮಾಡಿರಲಿಲ್ಲ. ಏನೋ ಒಂದು ಅಗಾಧವಾದ ಚಿಂತೆಯಿಂದ ಕೂಡಿದ್ದಳು. ಎಂದೂ ಹೀಗಿರದೆ ತನ್ನ ಸೇವೆಯನ್ನು ಮಾಡಿಕೊಂಡು ಸಂತೋಷದಿಂದ ಕಾಲ ಕಳೆಯುತ್ತಿದ್ದವಳು ಈ ದಿವಸ ಹೀಗೆ ವ್ಯಾಕುಲಚಿತ್ತಳಾಗಿ ಅಡಿಗೆಯನ್ನೂ ಮಾಡದೆ, ಮಕ್ಕಳನ್ನೂ ಸಹ ಉಪವಾಸ ಇರಿಸಿರುವುದನ್ನು ನೋಡಿ ಮೋಹನನಿಗೆ ಮನಸ್ಸು ಕಳವಳಗೊಂಡಿತು. ಕೊಠಡಿಯೊಳಗೆ ಪ್ರವೇಶಮಾಡಿ ಮಂಚದಮೇಲೆ ಕುಳಿತನು. ಇದನ್ನು ನೋಡಿ ಆ ಸಾಧ್ವಿಯು ಥಟ್ಟನೆ ಮೇಲಕ್ಕೆದ್ದು ಸ್ವಲ್ಪ ದೂರದಲ್ಲಿ ಸರಿದು ನಿಂತು ಅಧೋವದನೆಯಾಗಿ ಮೌನದಿಂದಿದ್ದಳು. ಬಳಿಕ ಅವರಿಬ್ಬರಿಗೂ ಈ ರೀತಿಯಾದ ಸಂಭಾಷಣೆಯು ನಡೆಯಿತು.

ಪ್ರಿಯೆ! ಇದೇನು! ಚಿಂತೆಯೆಂಬುದೇ ಕಂಡರಿಯದ ನಿನಗೆ ಈ ದಿವಸ ಉಂಟಾಗಿರುವ ವ್ಯಾಕುಲಕ್ಕೆ ಕಾರಣವೇನು?

ಕಾಂತಾ! ತಮ್ಮ ಕೈ ಹಿಡಿದಂದಿನಿಂದಲೂ ನಾನು ಯಾವ ದುಃಖವನ್ನೂ ಕಾಣೆನು. ಹಾಳು ಮಕ್ಕಳು ಹುಟ್ಟಿ ನಾನು ಈ ವ್ಯಥೆಗೆ ಈಡಾಗಬೇಕಾಯಿತು.

ನಿನಗೆ ಮಕ್ಕಳೇನು ಮಾಡಿದರು? ಮಕ್ಕಳಿಲ್ಲದಿದ್ದರೆ ಸಂಸಾರದಲ್ಲಿ ಸಾರವೆಲ್ಲಿಯದು? ಅದನ್ನು ನಾನೂ ಅರಿತಿರುವೆನು. ಗಂಡು ಮಕ್ಕಳು ಎಷ್ಟು ಹುಟ್ಟಿದರೂ ವ್ಯಥೆಯಿಲ್ಲ. ಲೋಕದಲ್ಲಿ ಹೆಣ್ಣು ಮಕ್ಕಳನ್ನು ಮಾತ್ರ ಪಡೆಯಬಾರದು. ಹಾಗೆಂದರೇನು? ಪ್ರಿಯೆ!

ಅದೇನೆಂದು ಕೇಳುವಿರಿ! ನಿಮ್ಮ ಮಗಳು ನೀಲವೇಣಿಗೆ ಮದುವೆ ಮಾಡಬೇಕೆಂಬ ವಿಷಯವನ್ನು ಮರೆತು ಹೋದಂತಿರುವುದು.

ಮರೆಯುವುದೆಲ್ಲಿ? ಅದಕ್ಕಾಗಿ ಅಹರ್ನಿಶಿಯಲ್ಲಿಯೂ ಚಿಂತಿಸುತ್ತಿರುವೆನು. ಈ ಕಾಲದಲ್ಲಿ ಅನುರೂಪನಾದ ವರನು ಸಿಕ್ಕುವುದೇ ಕಷ್ಟ, ಹಾಗೆ ಸಿಕ್ಕಿದರೆ ೫೦೦ ರೂ. ಗಳು ಅಥವಾ ೧೦೦೦ ರೂ. ಗಳನ್ನು ಕೊಡುತ್ತೀರಾ ಎಂದು ಕೇಳುವರು. ಅದೂ ಇಲ್ಲವಾದರೆ ವರನು ಎರಡನೇ, ಮೂರನೇ ಮದುವೆಯವನೋ ಷಷ್ಟಿಪೂರ್ತಿ ಶಾಂತಿಯಾದವನೋ ಅಥವಾ ತರುಣನಾದರೆ ವಜ್ರ ಶುಂಠ ಶಿಖಾಮಣಿಯೋ, ಸಂಪಾದಿಸಲು ಚೈತನ್ಯವಿಲ್ಲದವನೋ ಆಗಿರುವನು. ಉತ್ತಮವಾದ ವರನಿಗೆ ೧೦೦೦ ರೂಪಾಯಿಗಳನ್ನು ಎಲ್ಲಿಂದ ತಂದುಕೊಡಲಿ? ಅಥವಾ ನಿರಕ್ಷರ ಕುಕ್ಷಿಯಾದವನಿಗೆ ನನ್ನ ಏಕ ಪುತ್ರಿಯನ್ನು ಕೊಟ್ಟು ಹೇಗೆ ನೋಡಲಿ? ಈ ಕಾಲದಲ್ಲಿ ಸಂಸಾರ ನಡೆಯುವುದೇ ಕಷ್ಟವಾಗಿದೆ. ಯಾವುದಾದರೂ ಜಮೀನ್ದಾರಿ ವರದಕ್ಷಿಣೆಯನ್ನು ಕೊಡೋಣವೆಂದರೆ ಅದು ಮೊದಲೇ ಇಲ್ಲ. ಇದನ್ನೆಲ್ಲಾ ಚಿಂತಿಸುತ್ತಾ ನಾನು ಕಾಲ ಕಳೆಯುತ್ತಿರುವೆನು.

ಹೇಗಾದರೂ ಮಾಡಿ ಮಗಳಿಗೆ ಮದುವೆ ಇಲ್ಲದಿದ್ದರೆ ನಾನು ತಲೆಯೆತ್ತಿಕೊಂಡು ತಿರುಗಲಾರೆನು. ಎಲ್ಲೆಲ್ಲಿಯೂ ಇದೇ ವಿಚಾರ. ಇದೇ ಕುಸಕುಸ. ಎದಿರುನಲ್ಲಿಯೇ ಶೂಲವನ್ನು ತಿವಿದುಕೊಳ್ಳುವಂಥಾ ಮಾತುಗಳನ್ನು ಆಡುವರು. ಇದೂ ಅಲ್ಲದೆ ಪ್ರಾಪ್ತವಯಸ್ಕಳಾದ ಹೆಣ್ಣು ಹುಡುಗಿಯನ್ನು ಹೀಗೆ ಇಟ್ಟುಕೊಂಡಿರುವುದು ತಪ್ಪಲ್ಲವೇ?

ಆಗಲಿ ಏಳು. ನಾನು ಕಚೇರಿಗೆ ಹೋಗಬೇಕು. ಜಾಗ್ರತೆ ಅಡಿಗೆಯನ್ನು ಮಾಡು. ನೀವು ಈ ಭಾದ್ರಪದ ಮಾಸದೊಳಗಾಗಿ ಮದುವೆ ಮಾಡುತ್ತೇನೆಂದು ಮಾತುಕೊಡಿ.

ಆಗಲಿ. ಈ ದಿವಸವೇ ಇದಕ್ಕಾಗಿ ನಾಲ್ಕು ತಿಂಗಳು ರಜವನ್ನು ಪಡೆಯುವೆನು.

ಹೆಂಡತಿಯು ಎದ್ದು ಅಡಿಗೆಯ ಮನೆ ಕಡೆಗೆ ತಿರಳಿದಳು.

ಮೋಹನನು ನಾಲ್ಕು ತಿಂಗಳು ರಜಾ ಪಡೆದು ವರಾನ್ವೇಷಣಕ್ಕಾಗಿ ಹೊರಟನು. ಅನೇಕ ಊರುಗಳನ್ನೂ ಪಟ್ಟಣಗಳನ್ನೂ ತಿರುಗಿ ಬಂದನು. ಸ್ವಜಾತಿಯಲ್ಲಿ ವರನು ಸಿಕ್ಕುವುದೇ ದುರ್ಲಭವಾಯಿತು. ಒಬ್ಬಿಬ್ಬರು ಸಿಕ್ಕಿದರೆ ಅವರು ಹೊಣಭಾಷಾದ್ಯಾಯಿಗಳು. ಅವರಿಗೆ ಸಾವಿರ ರೂಪಾಯಿ ಕೊಡಬೇಕು. ಇಲ್ಲವಾದರೆ ಅವರು ಸಕಲ ಕಲಾಶಾಲೆಯ ಪದವೀಧರರಾಗುವವರೆಗೂ ಓದಿಸಬೇಕು. ಇದರಲ್ಲಿ ಯಾವುದನ್ನು ಕೈಗೊಳ್ಳಲೂ ಈ ವರಾನ್ವೇಷಕನು ಸಮರ್ಥನಾಗಿಲ್ಲ. ಇನ್ನು ಮಗಳಿಗೆ ಮದುವೆಯಾಗುವ ಬಗೆ ಹೇಗೆ?

ಬ್ರಾಹ್ಮಣ ಕುಟುಂಬದಲ್ಲಿ ಬಹಳ ದಿವಸ ಹೆಣ್ಣು ಹುಡುಗಿಗೆ ಮದುವೆ ಮಾಡದೆ ಇರುವುದಿಕ್ಕಿಲ್ಲ. ಈ ವಿಷಯದಲ್ಲಿ ಸಂಘದ ಕಟ್ಟುಪಾಡುಗಳು ಕುತಾರ ಪ್ರಾಯವಾಗಿರುವುವು. ಈ ವರಾನ್ವೇಷಣದಲ್ಲಿಯೇ ಒಂದೂವರೆ ತಿಂಗಳು ಕಳೆದುಹೋಯಿತು. ಆದರೆ ಕಾರ್ಯಸಾಫಲ್ಯವೇನೂ ಆಗಲಿಲ್ಲ. ಪ್ರಯಾಣದಲ್ಲಿ ನೂರಾರು ರೂಪಾಯಿಗಳು ವೆಚ್ಚವಾದವು. ಇನ್ನೂ ವಿವಾಹವಿಲ್ಲ. ಮಗಳನ್ನು ಕಣ್ಣುಕಟ್ಟಿ ಕಾಡಿಗೆ ಕಳುಹಿಸುವುದೊಂದುಳಿಯಿತು. ಹತಾಶನಾಗಿ ಊರಿಗೆ ಬಂದುಬಿಟ್ಟನು. ನೀಲಾಂಬೆಯು ಈ ಸಾರಿ ಹೇಗಾದರೂ ವಿವಾಹವಾಗುವುದೆಂದು ತಿಳಿದುಕೊಂಡು ಅಲ್ಪ ಸ್ವಲ್ಪ ಸಾಲಸೋಲಗಳನ್ನು ಮಾಡಿ ಮದುವೆ ಪದಾರ್ಥಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದಳು.

ಒಂಭತ್ತೂವರೆ ಘಂಟೆಗೆ ರೈಲು ಬಂದಿತು. ಗಂಡನು ಮನೆಗೆ ಬಂದನು. ಇವನನ್ನು ನೋಡಿದೊಡನೆಯೇ ತನ್ನ ಮನದೆಣಿಕೆಯು ಈಡೇರಿತೆಂದು ಹೆಂಡತಿಯು ಸಂತೋಷಿಸಿದಳು. ಮೋಹನನು ಹುಸ್ಸೆಂದು ನಡುಮನೆಯಲ್ಲಿ ಹಾಕಿದ್ದ ಕುರ್ಚಿಯ ಮೇಲೆ ಬಂದು ಕುಳಿತನು. ಸ್ವಲ್ಪ ಹೊತ್ತಾದನಂತರ ನೀಲಾಂಬೆಯು "ಏನು ಮಾಡಿಕೊಂಡು ಬಂದಿರಿ?" ಎಂಬುದಾಗಿ ಪತಿಯನ್ನು ಪ್ರಶ್ನಿಸಿದಳು. "ಮಾಡಿಕೊಂಡು ಬರುವುದೇನು? ನಿನ್ನ ಮಗಳಿಗೆ ಮದುವೆ ಹಣೆಯಲ್ಲಿ ಬರೆಯಲಿಲ್ಲ" ಎಂಬ ಉತ್ತರವಿತ್ತನು. ಈ ಮಾತನ್ನು ಕೇಳುತ್ತಲೇ ನೀಲಾಂಬೆಗೆ ಆಕಾಶವೇ ಕಳಚಿ ತಲೆಯಮೇಲೆ ಬಿದ್ದಂತೆ ಆಗಿ ಮನದೊಳಗೇ ದುಃಖಿಸುತ್ತಾ ಹತಾಶಳಾಗಿ ಕುಳಿತುಬಿಟ್ಟಳು.

ದಂಪತಿಗಳಿಗೆ ದಿಕ್ಕೇ ತೋಚಲಿಲ್ಲ. ಮಕ್ಕಳಾಗುವಿಕೆಯನ್ನು ನಿಂದಿಸಿದರು. ಬಡತನವನ್ನು ಶಪಿಸಿದರು. ಸಾಂಘಿಕ ಪದ್ಧತಿಯನ್ನು ಹಳಿದರು. ಏನು ಮಾಡಿದರೂ ಬಗೆ ಹರಿಯಲಿಲ್ಲ. ಈ ರೀತಿಯಾಗಿ ನಿಮಿಷಗಳೂ, ಘಂಟೆಗಳೂ, ದಿನಗಳೂ ಕಳೆಯುತ್ತಾ ಬಂದುವು. ಹೀಗೆಯೇ ಇರಲಾಗಿ ಊರಿನಲ್ಲಿ ಹೇಳ ನತಿರಸ್ಕಾರಗಳಿಗೆ ತುದಿ ಮೊದಲೇ ಇಲ್ಲವಾಯಿತು. ಅದರಲ್ಲೂ ಮಹಿಳಾ ಸಮೂಹದಲ್ಲಿ ಈ ನಿಂದನೆಯು ನಾನಾ ಪ್ರವಾಹ ರೂಪವಾಗಿ ಹರಿಯುತ್ತಿದ್ದಿತು. ಈ ಪ್ರವಾಹವನ್ನು ತಡೆಯಲು ಯಾರಿಗೂ ಸಾಧ್ಯವಾಗಲಿಲ್ಲ. ಕಡೆಗೆ ದಂಪತಿಗಳು ಬೀದಿಯಲ್ಲಿ ಹಗಲು ಹೊತ್ತು ಸಂಚಾರವನ್ನೇ ನಿಲ್ಲಿಸಿಬಿಟ್ಟರು. ಮೋಹನನು ಈ ಚಿಂತೆಯಿಂದ ಪುನಃ ನಾಲ್ಕುತಿಂಗಳು ರಜಾ ಪಡೆದನು.

ಈತನೊಬ್ಬ ಸಾಮಾನ್ಯನಾದ ಗುಮಾಸ್ತನಾಗಿದ್ದನು. ತಿಂಗಳಿಗೆ ೫೫ ರೂಪಾಯಿಗಳು ಹಾಗೂ ಹೀಗೂ ಸಂಬಳ ಬರುತ್ತಿತ್ತು. ಇದರಿಂದ ಸಂಸಾರವು ನಡೆಯುವುದೇ ಕಷ್ಟವಾಗಿದ್ದಿತು. ಪ್ರಯಾಣದ ಖರ್ಚಿಗೆ ಮಾಡಿದ್ದ ಸಾಲಕ್ಕೂ ಮತ್ತು ಮದುವೆಯ ಪದಾರ್ಥಕ್ಕೆ ಮಾಡಿದ್ದ ಸಾಲಕ್ಕೂ ತಗಾದೆ ಹೆಚ್ಚಾಯಿತು. ಈ ಮಧ್ಯೆ ನೀಲವೇಣಿಯು ಪುಷ್ಪವತಿಯಾದಳೆಂಬ ಸಮಾಚಾರವು ಊರಿನಲ್ಲೆಲ್ಲಾ ಹಬ್ಬಿಬಿಟ್ಟಿತು. ಇನ್ನು ಮಗಳಿಗೆ ಮದುವೆಯಾಗುವ ಆಸೆಯು ಸಂಪೂರ್ಣವಾಗಿ ಬಿಟ್ಟುಬಿಡುವ ಸಂಭವ ಉಂಟಾಯಿತು. ಈ ರೀತಿಯಾಗಿ ಋತುಮತಿಯಾದ ಕನ್ನಿಕೆಯನ್ನು ಇಟ್ಟುಕೊಂಡಿರುವುದಕ್ಕಾಗಿ ಕುಲದವರು ಮನೆಗೆ ಹವ್ಯಕವ್ಯಗಳಿಗೆ ಬರುವುದನ್ನು ನಿಷೇಧಿಸಿದರು. ಈ ಮಧ್ಯೆ ಮೋಹನನ ತಂದೆಯವರ ವೈದೀಕವೂ ಬಂದಿತು. ಮನೆಗೆ ಒಬ್ಬರೂ ಬರಲಿಲ್ಲ. ಈ ಸಮಾಚಾರವು ಹತ್ತು ಇಪ್ಪತ್ತು ಮೈಲಿಯವರೆಗೂ ವ್ಯಾಪಿಸಿತು. ಆ ದಿನ ಆತನು ಪಟ್ಟ ಕಷ್ಟವು ವರ್ಣನಾತೀತವಾಗಿದ್ದಿತು. ಬ್ರಾಹ್ಮಣರನ್ನು ಸೆರಗೊಡ್ಡಿ ಬೇಡಿಕೊಂಡು ಕಣ್ಣೀರು ಸುರಿಸಿದರೂ ಅವರಿಗೆ ಕರುಣವಿಲ್ಲವಾಯಿತು. ಆ ದಿನ ಉಪವಾಸವಿದ್ದು ಮರುದಿನ ಒಂದು ಪಟ್ಟಣಕ್ಕೆ ಹೋಗಿ ಪಾಯಶ್ಚಿತ್ತ ಮಾಡಿಕ್ಕೊಂಡು ಕರ್ಮವನ್ನು ನೆರವೇರಿಸಿಕ್ಕೊಂಡುಬಂದನು. ಸರ್ವವಿಧದಲ್ಲಿಯೂ ಕಷ್ಟಗಳು ವೃದ್ಧಿಯಾಗುತ್ತ ಬಂದುವು. ಎಲ್ಲರೂ ಹೇಳಿದ ತಿರಸ್ಕಾರಗಳಿಂದ ಇವರನ್ನು ದೂರಮಾಡುತ್ತಾ ಬಂದರು.

ನೀಲವೇಣಿಯು ಈ ದಂಪತಿಗಳಿಗೆ ಏಕಮಾತ್ರ ಪುತ್ರಿ ಎಂದು ಹಿಂದೆಯೇ ತಿಳಿಸಿದ್ದೆ. ಈ ಮಗಳನ್ನು ಅತ್ಯಂತ ಮಮತೆಯಿಂದ ಸಾಕುತ್ತಿದ್ದರು. ಬ್ರಹ್ಮನು ಸ್ತ್ರೀಜಾತಿಯ ಸೌಂದರ್ಯವನ್ನೆಲ್ಲಾ ಒಂದುಗೂಡಿಸಿ ಈ ಬಾಲೆಯನ್ನು ನಿರ್ಮಾಣಮಾಡಿ ಭೂಲೋಕಕ್ಕೆ ಕಳುಹಿಸಿರುವನೋ ಎಂಬಂತಿರುತ್ತಿದ್ದಳು. ಇದರ ಜೊತೆಗೆ ವಿದ್ಯಾವತಿಯಾಗಿ ವಿನಯ ಸದ್ಗುಣಗಳಿಂದ ರಾಜಿಸುತ್ತಿದ್ದಳು. ಹಾ ವಿಧಾತನೇ! ಈ ಸೌಂದರ್ಯರಾಶಿಯನ್ನು ಈ ಬಡ ಸಂಸಾರಕ್ಕೆ ಅನುಗ್ರಹಿಸಿ ಮಾತಾಪಿತೃಗಳಿಗೆ ಕಂಟಕಪ್ರಾಯನಾದೆ. ಇಂಥಾ ಮಕ್ಕಳನ್ನು ಪಡೆದ ಮಾತಾಪಿತೃಗಳು ಕಡುಶೋಕಕ್ಕೆ ಈಡಾದರು. ನೀಲವೇಣಿಯು, ತಾಯಿ ತಂದೆಗಳು ತನಗಾಗಿ ಪಡುತ್ತಿರುವ ಕಷ್ಟಗಳನ್ನೆಲ್ಲಾ ತಿಳಿದುಕೊಂಡಳು. ತನಗೆ ಇನ್ನು ವಿವಾಹವು ಅಸಂಭವವೆಂದೂ, ತಾನಿನ್ನು ಗೃಹಿಣಿಯಾಗಿ ಇಹಲೋಕದ ಭೋಗ ಭಾಗ್ಯಗಳನ್ನು ಅನುಭವಿಸುವುದು, ಒಂದು ವೇಳೆ ಅದಕ್ಕೆ ಆಸೆಪಟ್ಟರೆ ಇಹಲೋಕದಲ್ಲಿ ಸಹಿಸಲಶಕ್ಯವಾದ ಲೋಕನಿಂದೆಗೆ ಗುರಿಯಾಗುವೆನೆಂದು ನಿರ್ಧರಿಸಿಕ್ಕೊಂಡಳು. ತನಗೆ ಇನ್ನು ಈ ಲೋಕದಿಂದ ಪಾರಾಗುವ ವಿನಃ ಬೇರೆ ಮಾರ್ಗವಿಲ್ಲವೆಂದೇ ನಿಶ್ಚಯಿಸಿದಳು. ತನ್ನ ಪಾಡು ಹೇಗಾದರೂ ಇರಲಿ. ತನ್ನ ಜನನೀ ಜನಕರು ತನ್ನಿಂದ ಅಪಾರವಾದ ಕಷ್ಟ, ಅಪವಾದ,

ನಷ್ಟಗಳಿಗೆ ಗುರಿಯಾದರೆಂದೂ, ತಾನು ಇರುವವರೆಗೂ ಅವರಿಗೆ ಅದು ತಪ್ಪಲಾರದೆಂದೂ ಯೋಚಿಸಿ, ಒಂದು ರಾತ್ರಿ ಹನ್ನೆರಡು ಘಂಟೆ ವೇಳೆಯಲ್ಲಿ ಏಕಾಂಗಿಯಾಗಿ ಹೊರಟು ಸಮೀಪದಲ್ಲಿದ್ದ ಒಂದು ಪುಷ್ಕರಿಣಿಯಲ್ಲಿ ಪ್ರವೇಶಿಸಿ, ಗಂಗಾದೇವಿಯ ಮನೆಗೆ ಅತಿಥಿಯಾಗಿ ಹೊರಟುಹೋದಳು.

ಮಾರನೆಯ ದಿವಸ ಬೆಳಗಾಯಿತು. ತಾಯಿಯು, ಏಕೋ ಇನ್ನೂ ಮಗಳು ಏಳಲಿಲ್ಲವೆಂದು ಹಾಸಿಗೆಯನ್ನು ನೋಡಿದಳು. ಮಗಳು ಇರಲಿಲ್ಲ. ಎಲ್ಲಿಯೋ ಹೊರಗೆ ಹೋಗಿರಬಹುದೆಂದು ಊಹಿಸಿದಳು. ನೀಲವೇಣಿಯ ಸುಳಿವೇ ಕಾಣಿಸಲಿಲ್ಲ. ಈ ಸಮಾಚಾರವನ್ನು ಗಂಡನಿಗೆ ಅರುಹಿದಳು. ಆತನು ಎಲ್ಲಾ ಕಡೆಯಲ್ಲಿಯೂ ಹುಡುಕಿದನು. ಹೀಗೆ ಹುಡುಕುವುದರೊಳಗಾಗಿ ಸಾಯಂಕಾಲವಾಯಿತು. ಕಡೆಗೆ ಮಗಳಾದ ನೀಲವೇಣಿಯು ವಾಯುಸೇವೆಗಾಗಿ ಪುಷ್ಕರಣಿಯೊಳಗೆ ವಿಹರಿಸುತ್ತಿರುವಳೆಂದು ತಿಳಿದುಬಂದಿತು. ಮಾತಾಪಿತೃಗಳು ಅಲ್ಲಿಗೆ ಹೋಗಿ ನೋಡಿದರು. ಆ ಮೃತದೇಹದ ಮಗಳನ್ನು ನೋಡಿದಾಗ ಆ ತಂದೆ ತಾಯಿಗಳು ಪಟ್ಟ ವ್ಯಥೆಗೆ ಕಲ್ಲಾದರೂ ಕರಗಿಹೋಗುವಂತಿತ್ತು. ಊರಿನ ಜನರೆಲ್ಲಾ ಅಲ್ಲಿಗೆ ಹೋಗಿ ನೋಡಿದರು. ನೀಲವೇಣಿಯು ಈ ಲೋಕದಿಂದ ಪಾರಾದರೂ "ಏನೋ ಕೆಟ್ಟ ಕೆಲಸ ಮಾಡಿ ಆತ್ಮಹತ್ಯ ಮಾಡಿಕೊಂಡಳು" ಎಂಬ ಜನ ನಿಂದೆಯು ಮಾತ್ರ ತಪ್ಪಲಿಲ್ಲ. ಆದರೆ ಎಲ್ಲರೂ ಹಾಗೆ ಭಾವಿಸಲಿಲ್ಲ. ಜನಗಳು ಮೂಷಣೆಭೂಷಣೆಗಳೆರಡನ್ನೂ ಮಾಡಿದರು. ಇಂಥಾ ಸುಂದರಾಂಗಿಯಾದ ಮಗಳನ್ನು ಅಗಲಿ ಇರಲಾರದೆ, ತಾಯಿಯೂ ಅವಳ ಜೊತೆಯನ್ನು ಸೇರಿದಳು. ಈ ಕೋಮಲಾಂಗಿಯರಿಬ್ಬರನ್ನೇ ರಕ್ಷಕರಿಲ್ಲದೆ ಪರಲೋಕಕ್ಕೆ ಕಳುಹಿಸುವುದು ಧರ್ಮವಲ್ಲವೆಂದೆಣಿಸಿ ಮೋಹನನೂ ಅವರೊಡನೆ ಪ್ರಯಾಣ ಬೆಳೆಸಿದನು.

ಪ್ರಿಯ ಅವಿವಾಹಿತ ಯುವಕರೇ! ನೋಡಿದಿರಾ! ಸ್ವಲ್ಪ ದಿವಸಗಳ ಹಿಂದೆ ಈ ಲೋಕದಲ್ಲಿ ಭೂತಲ ಸ್ವರ್ಗದಂತಿದ್ದ ಸಂಸಾರವು ಹೇಗೆ ನಾಶಕ್ಕೆ ಕಾರಣವಾಯಿತು. ಇದಕ್ಕೆ ನೀವು ಜವಾಬ್ದಾರರಲ್ಲದೆ ಮತ್ತೆ ಯಾರು? ಇದೇ ನಿಮ್ಮ ವಿದ್ಯಾಭ್ಯಾಸದ ಫಲ. ಸತ್ಯವಾಗಿಯೂ ನೀವು "ವರಶುಲ್ಕ" ಎಂಬ ಈ ಘೋರ ಪಿಶಾಚನನ್ನು ಓಡಿಸಲು ಪ್ರಯತ್ನಿಸಬೇಕು. ಇಲ್ಲವಾದರೆ ನಿಮ್ಮ ವಿದ್ಯಾಭ್ಯಾಸವು ನಿರರ್ಥಕವೇ ಸರಿ.

ಜೋತಿರ್ವಿದ್ಯಾಭೂಷಣ ಪಂಡಿತ ಶ್ರೀ. ವೀರನಗೌಡರು ಮೆಣಶಿಗಿ, ಭಾಗ್ಯೋದಯ ಸಂಜ್ಞಾಂಗಶಕ್ಯ ಗದಗ. ಇವರು ರಚಿಸಿದ ಪುಸ್ತಕಗಳು—

ಲೈಫ್-ರೀಡಿಂಗ್ ಅಥವಾ ದೈವದರ್ಪಣ—ಜನನ ತಾರೀಖು ನೆನಪಿದ್ದರೆ ಸಾಕು. ಈ ಗ್ರಂಥದಿಂದ ನಿಮ್ಮ ಇಡೀ ಜನ್ಮದ ಭವಿಷ್ಯ ನೀವೇ ನೋಡಿಕೊಳ್ಳಬಹುದು. — — — — ಬೆಲೆ ೧೨ ಆಣೆ.

ಸ್ತ್ರೀ ಜಾತಕ ಫಲ-ದರ್ಪಣ—ಸ್ತ್ರೀಯರ ಜನನ ನಕ್ಷತ್ರ ನೆನಪಿದ್ದರೆ ಸಾಕು. ಈ ಗ್ರಂಥದಿಂದ ಸಂಪೂರ್ಣ ಜಾತಕ ನೀವೇ ನೋಡಿಕೊಳ್ಳಬಹುದು. ಪಠ್ಯಪುಸ್ತಕ (Text-Book) ಅಂತಾ ಮಂಜೂರಾಗಿದೆ. — ಬೆಲೆ ೧ ರೂಪಾಯಿ.

ಪ್ರಶ್ನ ಫಲ-ದರ್ಪಣ—ಮನೋಗತ ವಿಚಾರ ಪ್ರಶ್ನಗಳನ್ನೊಳಗೊಂಡ ಸಕಲ ವಿಧವಾದ ಪ್ರಶ್ನಗಳನ್ನು ಹೇಳಲಿಕ್ಕೆ ಬರುವಂಥ ಗ್ರಂಥವಾಗಿದೆ. ಪಠ್ಯಪುಸ್ತಕ (Text-Book) ಅಂತಾ ಮಂಜೂರಾಗಿದೆ. — — — ಬೆಲೆ ೪ ಆಣೆ.

ಸ್ವಪ್ನ ಫಲ-ದರ್ಪಣ—ಈ ಪುಸ್ತಕದಿಂದ ರಾತ್ರಿ ಕಂಡ ಸುಸ್ವಪ್ನ—ದುಸ್ವಪ್ನ ವಿಚಾರಗಳು ಗೊತ್ತಾಗುತ್ತದೆ. ಬುದ್ಧಿವಂತರನ್ನು ಕಂಡು ಕೇಳಬೇಕೆಂಬ ಕಾರಣವಿಲ್ಲ. — — — — — — ಬೆಲೆ ೫ ಆಣೆ.

ಸೋಲ್ ಏಜಂಟರು:— **ವಿದ್ಯಾವಿಲಾಸ ಬುಕ್ ಡಿಪೋ, ಗದಗ.**

ಮೇಲ್ಕಾಣಿಸಿದ ಗ್ರಂಥಗಳು ದೊರೆಯುವ ಸ್ಥಳ:—

ಹೆಚ್. ಶಿವರಾಮಭಟ್ಟರು, ಕ್ಲಾತ್ ಮರ್ಚೆಂಟ್, ಶಿವಮೊಗ್ಗಾ.

ಕ್ಯಾನರಾ ಅಡ್ವರ್ಟೈಸಿಂಗ್ ಸರ್ವಿಸ್ ಕಂಪನಿ, (ಹಂಪನಕಟ್ಟಾ) ಮಂಗಳೂರು.

ಯಜಮಾನ್ ಅಂಡ್ ಬ್ರದರ್ಸ್, ಬುಕ್‌ಸೆಲ್ಲರ್ಸ್, ಬಳ್ಳಾರಿ.

ಬಿ. ಎಸ್. ಕುರವತ್ತಿ, ನ್ಯೂಸ್ ಏಜಂಟ್, ದಾವಣಗೆರೆ.

ಜಲ್ಲದೆ "ಕಥಾವಳಿ" ಏಜಂಟರಲ್ಲಿಯೂ ದೊರೆಯುತ್ತವೆ.

ಬಿ. ಸುಬ್ಬಣ್ಣಾ "ಜನವಾಣಿ" ಬ್ರಾಂಚ್ ಆಫೀಸ್, (ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್) ಮೈಸೂರು.

ಡಿ. ಆರ್. ರಾವ್ ಅಂಡ್ ಬ್ರದರ್ಸ್, C/o ದಿ ಮಾಡರ್ನ ಕಾಫಿ ಕಂಪನಿ, ನ್ಯೂ ಮಾರ್ಕೆಟ್, ಬೆಂಗಳೂರು ಸಿಟಿ.

ಇದೇ ಗತಿ

ರಾಮು ಬಿ. ಎ.—ಥು! ನಾನು ಇನ್ಮೇಲೆ, ಈ ಆನಂದ ಭವನಕ್ಕೆ ಕಾಲಿಕ್ಕೋದಿಲ್ಲಪ್ಪ ಸಾಕ್‌ಸಾಕು.

ಕೃಷ್ಣ—ಅಲ್ಲಿ ಎಷ್ಟು ಕೊಡ್ತಾರಂತೆ?

ರಾಮು—ಏನ್ನ?

ಕೃಷ್ಣ—ಅದೇ ಸರ್ವ್ ಮಾಡಿದರೆ ಸಂಬಳವನ್ನ.

† † †

ಬಹಳ ಚುರುಕು

ಅಪ್ಪ—ಅಲ್ನೋಡು. ಅವನು ಸತ್ತೋಗ್ಬಿಟ್ಟದ್ದಾನಂತೆ. ಅಯ್ಯೋ ಪಾಪ!

ಪಕ್ಕದಲ್ಲಿದ್ದ ಎಳೆಯ ಮಗು—ಯಾರಪ್ಪ? ಅಗೋ ಅಲ್ಲಿ ನಿಂತಿದ್ದಾನಲ್ಲ, ಅವನೇನಪ್ಪ?

† †

ಉಪಾಧ್ಯಾಯ–ಈ ಹತ್ತು ಪ್ರಶ್ನೆಗಳಲ್ಲಿ ೧ ತಪ್ಪು ಬರೆದರೆ ೯ ನಂಬರು, ೨ ತಪ್ಪು ಬರೆದರೆ....

ಹುಡುಗ—(ಅಷ್ಟು ಹೊತ್ತಿಗೆ) ೫ ತಪ್ಪು ಬರೆದರೆ ೪೫ ನಂಬರು ಕೊಡ್ತೀರೇನ್ಸಾರ್?

† †

ಹಲ್ಲು ಕಂಡೀತು

★

ಸದುತ್ತರ

ಗೋಪಿ—(ಮಾವಿನ ಹಣ್ಣು ತಿಂದು ಕೈ ನೆಕ್ಕುತ್ತಿರುವ ಸಣ್ಣ ಮಗುವನ್ನು ನೋಡಿ.) ಏ! ನನಗೆಲ್ಲೋ ಮಾವಿನ ಹಣ್ಣು. ಇಲ್ನೋಡು ನಿನ್ನ ಮೂತಿಗೆಲ್ಲಾ ಮಾವಿನ ಹಣ್ಣು ಮೆತ್ತಿಕೊಂಡಿದೆ.

ಮಗು—ಹಾಗಾದರೆ, ನನ್ನ ಮೂತಿನ ನೆಕ್ಕು, ಮಾವಿನ ಹಣ್ಣು ಸಿಕ್ಕುತ್ತೆ.

—ಬಿ. ಆರ್. ನಾರಾಯಣರಾವ್, ತುಮಕೂರು.

ರಾಮು—ಲೋ ಕಿಟ್ಟು! ನೆನ್ನೆ ಆ ತಿಮ್ಮ ರಿಕಾರ್ಡ್ ಬ್ರೇಕ್ ಮಾಡಿದನಲ್ಲಾ ಗೊತ್ತೇನೋ.

ಕಿಟ್ಟು—ಯಾವ ಗೇಮ್‌ನಲ್ಲೋ.

ರಾಮು—ಯಾವ ಗೇಮ್‌ನಲ್ಲೂ ಅಲ್ಲ. ಗ್ರಾಮೋಫೋನ್ ರಿಕಾರ್ಡನ್ನ.

—ಕೆ. ಎಸ್. ಶೇಷಾದ್ರಿ, ಬೆಂಗಳೂರು.

† † †

ನ್ಯಾಯಾಧೀಶ–ಏನೋ, ಅವನು ಬಳೆಯನ್ನು ರಿಪೇರಿ ಮಾಡಲು ಕೊಟ್ಟನೆ, ಹಾಗೆ ಮಾಡದೆ ಅದನ್ನು ಮಾರಿಬಿಟ್ಟದ್ದೀಯಂತೆ ಹೌದೋ?

ಅಪರಾಧಿ— ಅದನ್ನು ರಿಪೇರಿ ಮಾಡಿಯೇ ಮಾರಿದೆ ಸ್ವಾಮಿ! ಇಲ್ಲದಿದ್ದರೆ ಅದಕ್ಕಾರು ಕೊಡುತ್ತಿದ್ದರು ೩೦ ರೂಪಾಯಿ.

† †

ಉಪಾಧ್ಯಾಯ—ಲೋಪ ಸಂಧಿ ಎಲ್ಲಿ ಉಂಟಾಗುವುದು?

ಶೀನು—ಮನೆಯಲ್ಲಿ ಸಾರ್.

ಉಪಾಧ್ಯಾಯ—ಅದು ಹೇಗೋ ಶೀನು?

ಶೀನು—ಮನೆಗೆ ನಾನು ಹೋದಾಗ ಒಬ್ಬರು ಆಬ್ಸೆಂಟ್ ಆಗಿದ್ದರು.

† †

ಲಿಂಗ—(ಅಣ್ಣನನ್ನು ಕುರಿತು) ಅಲ್ಲ, ಬ್ರಾಂದಿ ಕುಡೀತೀಯಾ, ಇರಲಿ ಅಪ್ಪನಿಗೆ ಹೇಳ್ತೀನೀ.

ಅಣ್ಣ–ಹೇಳಿದರೆ ಹೇಕ್ಕೋ ಅಪ್ಪನ ಮೇಜಿನಿಂದಲೇ ತಂದದ್ದು.

† † †

ಗಿರಾಕಿ–ನಿಮ್ಮಲ್ಲಿ ತೆಗೆದುಕೊಂಡುಹೋದ ಸೋಪು ಒಳ್ಳೇದಲ್ರೀ.

ಅಂಗಡಿಯವ—ಅದ್ಹೇಗ್ರೀ?

ಗಿರಾಕಿ—ನಮ್ಮ ಬೀದಿ ಬಾಗಿಲಲ್ಲಿ ಬಿದ್ದೋಗಿತ್ತು. ಮೂರು ದಿವ್ಸವಾದರೂ ಅಲ್ಲೇ ಇತ್ತು.

ಬರೆದವರು:

ಬಲಿ

ಶ್ರೀ ಹೆಚ್. ಎಸ್. ಕೃಷ್ಣಮೂರ್ತಿ.

೧

ಚಿನ್ನಾ !

ಏನ್‌ದೇವ್ರು.

ನೋಡು ಚಿನ್ನಾ ! ನಾನು ಒಂದು ಮಾತನ್ನು ಕೇಳುತ್ತೇನೆ ನೀನು ನಡೆಸಿಕೊಡಬೇಕು.

ಏನದು ಸ್ವಾಮಿ.

ಚಿನ್ನಾ ! ಹೇಳಿದರೆ ಏನಾದರೂ ತಿಳಿದುಕೊಳ್ಳುವೆಯೋ ಏನೋ ?

ಇಲ್ಲಾ ದೇವ್ರು ಹೇಳಿ.

ನಾನು ನಿನ್ನನ್ನು ಪ್ರೀತಿಸುತ್ತೇನೆ. ಚಿನ್ನಾ ! ನಿನ್ನನ್ನು ಎಷ್ಟು ನೋಡಿದರೂ ಇನ್ನೂ ನೋಡಬೇಕೆನ್ನಿಸುತ್ತದೆ. ನಿನ್ನ ರೂಪವು ನನ್ನನ್ನು ಮುಗ್ಧನನ್ನಾಗಿ ಮಾಡಿದೆ. ನೀನು ನಮ್ಮ ಜಾತಿಯಲ್ಲಿ ಹುಟ್ಟಬೇಕಾಗಿದ್ದವಳು ಹೇಗೋ ಬೇರೆ ಜಾತಿಯಲ್ಲಿ ಹುಟ್ಟಿರುವೆ. ಆದರೂ ಚಿಂತೆಯಿಲ್ಲ. ಪ್ರೇಮಕ್ಕೆ ಜಾತಿಭೇದವೇನೂ ಇಲ್ಲ.

ಏನಿದು ಪ್ರಭುವೆ ! ನೀವು ಹೇಳುವುದು ನನಗೆ ಅರ್ಥವೇ ಆಗಲಿಲ್ಲ. ಒಂದು ವೇಳೆ ನೀವು ಕೀಳುಜಾತಿಯವಳಾದ ನನ್ನನ್ನು ಮದುವೆಯಾದರೆ -- ನಿಮ್ಮ ತಾಯಿತಂದೆಯರೇನನ್ನುವರು ? ಜನರೇನನ್ನುವರು ? ನಿಮಗೆಷ್ಟು ಅಪಕೀರ್ತಿ.

ಜನರಿಗೇನು ಅನ್ನುವುದಕ್ಕೆ " ಜನರನ್ನು ಮೆಚ್ಚಿಸುವುದಕ್ಕೆ ಜನಾರ್ಧನನಿಗೂ ಸಾಧ್ಯವಿಲ್ಲ." ಚಿನ್ನಾ ! ಅವರು ಒಬ್ಬರನ್ನು ನೋಡಿ ಸಹಿಸುವುದಿಲ್ಲ. ನೀವು ಈ ರೀತಿ ಮಾಡಬಾರದೆಂದು ಹೇಳುವರು, ತಾವು ಮಾತ್ರ ತಮ್ಮ ಮೂಗಿನ ನೇರಕ್ಕೆ ನಡೆಯುವರು. ಪುರಾಣೀಕರು, " ದೇವರು ಎಲ್ಲರಿಗೂ ಒಂದೆ, ಎಲ್ಲರಲ್ಲಿಯೂ ಇರುವನು " ಎಂದು ಸಾರುವರು. " ನನ್ನ ದೇವರು ಹೆಚ್ಚು - ತನ್ನ ದೇವರು ಹೆಚ್ಚು " ಎಂದು ಪೀಠಾಧಿಪತಿಗಳು ಕಚ್ಚಾಡುವರು. " ನನ್ನ ತೀರ್ಥ ಹೆಚ್ಚು, ತನ್ನ ತೀರ್ಥ ಹೆಚ್ಚು " ಎಂದು ಮಠಾಧಿಪತಿಗಳು ನ್ಯಾಯಸ್ಥಾನದಲ್ಲಿ ವ್ಯಾಜ್ಯ ಹೂಡುವರು. " ಪರಸ್ತ್ರೀಯರನ್ನು ತಾಯಿಯಂತೆ ಕಾಣು " ಎಂದು ದಾಸರುಗಳು ಕಂಠಶೋಷಣೆ ಮಾಡಿಕೊಳ್ಳುವರು. ತಾವು ಮಾತ್ರ ಪರಸ್ತ್ರೀಯರಿಗೆ ಅನುಗ್ರಹ ಮಾಡಲು ಸಿದ್ಧರಾಗಿರುವರು. ಚಿನ್ನಾ ! ಇನ್ನೂ ಎಷ್ಟೆಷ್ಟೋ ಇವೆ ಈ ಹಾಳು ಸಮಾಜದಲ್ಲಿ. ತಮ್ಮ ತಮ್ಮ ಕೃತ್ಯಗಳನ್ನು ಗೋಪ್ಯವಾಗಿಟ್ಟುಕೊಂಡು ಇತರರಿಗೆ ಬೋಧಿಸುವುದಕ್ಕೆ ಹೋಗುವರು. ಚಿನ್ನಾ ! ಇದು ಎಂಥಾ ಸಮಾಜ ನೋಡು.

ಪ್ರಭುವೇ, ಅದೆಲ್ಲ ನನಗೆ ತಿಳಿಯದ ವಿಚಾರ.

ಹುಚ್ಚಿ ! ನೋಡು, ಇಲ್ಲೆಲ್ಲಾ ಕಾಣುವುದೇನು ಹೇಳು ?

ದೇವರ ಸೃಷ್ಟಿ, ದೇವರೆ.

ನೋಡು, ಅವುಗಳಲ್ಲಿ ದ್ವೇಷಾಗ್ನಿಯೇನಾದರೂ ಇರುವುದೆ ?

ಇಲ್ಲಾ.

ಚಿನ್ನಾ ! ಸೂರ್ಯನು - ಇದು ಬಡವರ ಮನೆ - ಇದು ಐಶ್ವರ್ಯವಂತರ ಮನೆ - ಇದು ಚಂಡಾಲರ ಮನೆ - ಇದು ಬ್ರಾಹ್ಮಣರ ಮನೆ ಎಂಬ ಬೇಧವನ್ನು ಕಲ್ಪಿಸಿಕೊಂಡು ತನ್ನ ಕಾಂತಿಯನ್ನು ಅವರವರ ಯೋಗ್ಯತೆಗೆ ತಕ್ಕಂತೆ ಬೀರುವನೆ ?

ಇಲ್ಲಾ.

ನೋಡು, ಪರಮಾತ್ಮನು ಎಲ್ಲವನ್ನೂ - ಎಲ್ಲರನ್ನೂ ಸೃಷ್ಟಿಸಿ, ಅವುಗಳಲ್ಲಿ - ಅವರಲ್ಲಿ ಬೇಧಬುದ್ಧಿಯನ್ನು ತೋರಿಸುವನೆ ? ಹೇಳು ಚಿನ್ನಾ !

ಇಲ್ಲಾ ದೇವರೇ.

ಹಾಗೆಯೇ ಪ್ರೇಮಕ್ಕೆ - ನಿಶ್ಚಲ ಪ್ರೇಮಕ್ಕೆ, ಕೇಳು - ಮೇಲು ಎಂಬ ನಶ್ವರವಾದ ದುರಭಿಮಾನಗಳು ಇರುವುದಿಲ್ಲ. ಚಿನ್ನಾ ! ಪ್ರೇಮವು ನದಿಯ ಘೋಷದಂತೆ ಹೃದಯದಿಂದ ಹರಿದು ಬರುವ ವೀಣಾಧ್ವನಿ. ಇದು ಬಾಹ್ಯಾಡಂಬರದಿಂದ ದೂರವಾದುದು. ಬ್ರಾಹ್ಮಣ ಹುಡುಗಿಯಾದರೇನು - ಶೂದ್ರಹುಡುಗಿಯಾದರೇನು ಪ್ರೇಮವು ಪ್ರೇಮವೇ ! ಹೇಳು ನನ್ನ ಮೇಲೆ ನಿನಗೆ ಪ್ರೀತಿಯು ಇದೆಯೋ ಇಲ್ಲವೋ ?

ಪ್ರೀತಿಯೇನೋ ಇದೆ. ಆದರೆ . . .

ಆದರೆ ಏನು ಚಿನ್ನಾ.

ಖಂಡಿತವಾಗಿಯೂ ಇದು ನಡೆಯದ ಮಾತು.

ಯಾಕೆ ನಡೆಯದು ?

ಯಜಮಾನರು ನಿಮ್ಮನ್ನು ಮನೆಯಿಂದ ಹೊರಡಿಸುವರು. ಜಾತಿ ಸಂಕ್ರಮಣಕ್ಕೆ ಎಂದಿಗೂ ಒಪ್ಪಲಾರರು.

ಚಿನ್ನಾ ! ಅವರಗೊಡವೆ ನಿನಗೇಕೆ ? ಇವರಿಗೆಲ್ಲಾ ಹೆದರಿ ನಡೆದರೆ ಯಾವ ಕೆಲಸ ತಾನೇ ಆಗುತ್ತೆ. ಎಷ್ಟು ದಿನ ಇವರ ಮಾತನ್ನು ಕೇಳುವುದು. ವೇದಗಳನ್ನೂ, ಪುರಾಣಗಳನ್ನೂ

ತಿರುವಿಹಾಕಿ ಎಲ್ಲರಲ್ಲಿಯೂ ಸಮತಾಭಾವನವನ್ನು ತೋರಿಸ ಬೇಕೆಂದು, ಎಲ್ಲರಲ್ಲಿಯೂ ಪ್ರೀತಿಯಿಂದ ವರ್ತಿಸಬೇಕೆಂದು ಹೇಳುವರು. ಆದರೇನು "ಎಷ್ಟಾದರೂ ನಾಯಿಯ ಬಾಲ ಡೊಂಕೇ" ಎಂಬಂತೆ ಇವರು ನುಡಿದಂತೆ ನಡಿಯುವುದಿಲ್ಲ.

ಒಡೆಯಾ, ನಿಮ್ಮ ಜನ, ನಿಮ್ಮ ಬಂಧುಬಳಗಗಳನ್ನು ಬಿಟ್ಟು ನನ್ನನ್ನು ಪ್ರೀತಿಸುವುದು ನಿಶ್ಚಯವೇ ?

ಚಿನ್ನಾ ! ಅದರಲ್ಲಿ ನಿನಗಿನ್ನೂ ಸಂಶಯವೇ. ನನ್ನನ್ನೂ ತಾಯಿತಂದೆಗಳು ತಿರಸ್ಕರಿದರೂ, ಹೆಚ್ಚೇಕೆ, ಸಮಾಜವೇ ಬಹಿಷ್ಕರಿಸಿದರೂ, ಯಾರ ಹಂಗಿಗೂ ಯಾರ ಕುಹಕ ಮಾತು ಗಳಿಗೂ ಆಸ್ಪದ ಕೊಡದಂತೆ ಈ ಹಾಳು ಸಮಾಜವನ್ನೇ ಬಿಟ್ಟು ಹೋಗೋಣ.

ದೇವ್ರು, ನನಗೋಸ್ಕರ ಕೇವಲ ಒಬ್ಬ ಕೀಳುಜಾತಿಯ ಹುಡುಗಿಗೋಸ್ಕರ, ನಿಮ್ಮ ಮಾನಮರ್ಯಾದೆಗಳನ್ನು ಕಳೆದು ಕೊಳ್ಳುವುದೆ ? ನಿಮ್ಮ ಜಾತಿಯಲ್ಲಿ ನನಗಿಂತಲೂ ರೂಪು ವಂತಳೂ, ಬುದ್ಧಿವಂತಳೂ ನಿಮಗೆ ಸಿಗುವುದಿಲ್ಲವೆ. ಇದು ನನಗಂತೂ ಸರಿತೋರುವುದಿಲ್ಲ. ಹಾಗೆಂದರೆ ನನಗೆ ನಿಮ್ಮಲ್ಲಿ ಪ್ರೀತಿಯಿಲ್ಲವೆಂದಲ್ಲ. ನೀವು ಒಳ್ಳೆ ಸುಗುಣಿಯಾದ ಹೆಂಡತಿ ಯನ್ನು ಪಡೆದು ಸುಖವಾಗಿರುವುದನ್ನು ನಾನು ನೋಡಬೇಕು. ನಾನು ಮಾತ್ರ ನಿಮ್ಮನ್ನು ನನ್ನ ಹೃದಯದಲ್ಲಿ ದೇವರೆಂದು ಭಾವಿಸಿ ಪೂಜಿಸುತ್ತೇನೆ. ಈ ಜನ್ಮದಲ್ಲಿ ನನ್ನ ನಿಮ್ಮ ದೇಹ ಗಳು ಬೇರೆಯಾದರೂ ಮನಸ್ಸು ಒಂದೇ. ಮುಂದಿನ ಜನ್ಮ ದಲ್ಲಿ ನಮ್ಮಿಬ್ಬರನ್ನು ಕೂಡುವಂತೆ ದೇವರನ್ನು ಪ್ರಾರ್ಥಿಸುತ್ತಿರು ತ್ತೇನೆ.

ಅಷ್ಟಲ್ಲದೇ ಏನು ಚಿನ್ನಾ ! ಯಾರ ಹಿತಚಿಂತನೆಯನ್ನೂ ಮಾಡದೆ ಸುಮ್ಮನೆ ಎಲ್ಲರನ್ನು ಧಿಕ್ಕರಿಸುವುದೋ ಅಂಥಾ ಸಮಾಜದಲ್ಲಿ ಇದ್ದರೇನು ಬಿಟ್ಟರೇನು ?

ಹೋಗಲಿ ಬಿಡಿ, ಯಜಮಾನರು ಬರುವ ಹೊತ್ತಾಯಿತು. ಬರುತ್ತೇನೆ.

ಆಗಲಿ, ಚಿನ್ನಾ ! ಹೋಗುವಿಯಂತೆ ಬಾ ! ಮೊದಲು ನಮ್ಮಿಬ್ಬರಿಗೂ ಪ್ರೀತಿಯ ಗುರುತಾಗಲಿ. ಹತ್ತಿರ ಬಾ ! ಇಬ್ಬರ ಅಧರಗಳೂ ಒಂದಾದವು.

೨

ಶ್ರೀಪತಿರಾಯರು ಬೆಂಗಳೂರಿನಲ್ಲಿ ಭಾರಿ ಉದ್ಯೋಗಸ್ಥರು. ತಿಂಗಳಿಗೆ ಇನ್ನೂರು ರೂಪಾಯಿ ಸಂಬಳ ಬರುತ್ತಿತ್ತು. ಮನೆ ಯಲ್ಲಿ ಇವರ ಸಹಧರ್ಮಿಣಿಯೇ ಎಲ್ಲಾ ಆಡಳಿತಗಳನ್ನೂ ನಡೆ ಸುತ್ತಿದ್ದರು. ರಾಮುವು ಒಬ್ಬನೇ ಮಗ. ರಾಮುವು B.Sc., ವರೆಗೂ ಓದಿದ್ದನು ಅಲ್ಲದೆ ಈಗಿನ ಕಾಲದವನೂ ಆಗಿದ್ದನು. ಸಮಾಜದ ಕುಂದುಕೊರತೆಗಳನ್ನು ಹೊರಗೆಡಹುವುದರಲ್ಲಿ ಅದೊಂದು ಸಂತೋಷ ಇವನಿಗೆ. ಇವರ ತಾಯಿತಂದೆಗಳಾ ದರೋ ಪೂರ್ವಾಚಾರ ಸಂಪನ್ನರು. ಆಗಾಗ ರಾಮುವಿಗೂ ಇವರಿಗೂ ಜಗಳವಾಗುತ್ತಲೇ ಇತ್ತು. ಹುಡುಗನ ಓದು ಮುಗಿ ದಿತ್ತಾದ್ದರಿಂದ ಮಗನಿಗೆ ಮದುವೆ ಮಾಡಬೇಕೆಂದು ಶ್ರೀಪತಿ ರಾಯರು ಹಂಬಲಿಸುತ್ತಿದ್ದರು. ಎರಡುಮೂರು ಬಾರಿ ಮಗ ನೊಡನೆ ಪ್ರಸ್ತಾಪವನ್ನೂ ಸಹ ಮಾಡಿದ್ದರು. ಆದರೆ ರಾಮು ವಿಗೆ ಚಿನ್ನಮ್ಮನನ್ನು ಬಿಟ್ಟು ಬೇರೆಯವರನ್ನು ಮದುವೆ ಯಾಗಲು ಇಷ್ಟವಿರಲಿಲ್ಲ. ರಾಮೂಗೆ ಈಗ ೨೩-೨೪ ವರ್ಷ.

ಚಿನ್ನಳು ಆಗಾಗ್ಗೆ ರಾಯರ ಮನೆಗೆ ತನ್ನ ತಾಯಿಯ ಜೊತೆ ಯಲ್ಲಿ ಕೆಲಸಕ್ಕೆ ಬರುತ್ತಿದ್ದಳು. ಚಿನ್ನಳ ತಾಯಿಯು ರಾಯರ ಮನೆಯ ಒಕ್ಕಲಗಿತ್ತಿ. ಚಿನ್ನಳು ರೂಪವತಿ ಮತ್ತು ಜಾಣೆ. ಕಮಲವು ಕೆಸರಿನಲ್ಲಿ ಹುಟ್ಟುವಂತೆ ಶೂದ್ರ ಜಾತಿಯಲ್ಲಿ ಚಿನ್ನಳ ಜನನವಾಗಿತ್ತು. ಪಟ್ಟಣದಲ್ಲಿಯೇ ಹುಟ್ಟಿ ಬೆಳೆದವಳಾದ್ದರಿಂದ ಪಟ್ಟಣದ ಬೆಡಗು ಬಿನ್ನಾಣಗಳೆಲ್ಲಾ ಬಲ್ಲವಳಾಗಿದ್ದಳು. ರಾಮುವು ಚಿನ್ನಳನ್ನು ಪ್ರೀತಿಸುತ್ತಿದ್ದ. ಅವಳು ತಮ್ಮ ಮನೆಗೆ ಬಂದರೆ ಬಹಳ ಸಲಿಗೆಯಿಂದ ಇರುತ್ತಿದ್ದ. ಚಿನ್ನಳನ್ನು ನೋಡದ ದಿವಸ ಅವನಿಗೆ ಬಹಳ ಬೇಸರವಾಗುತ್ತಿತ್ತು. ಚಿನ್ನಳಿಗೆ ೧೬ ವರ್ಷ. ಅವರು ಒಕ್ಕಲಮಕ್ಕಳಾದರೂ ರಾಯರ ಸಹಾಯದಿಂದ ಚಿನ್ನಳು ಪಾಠಶಾಲೆಗೆಹೋಗಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಓದುತ್ತಿದ್ದಳು. ಚಿನ್ನಳಿಗೂ ರಾಮುವನ್ನು ಕಂಡರೆ ಪ್ರೀತಿ. ಇವರ ಪ್ರೀತಿಯು ಬರುಬರುತ್ತಾ ಬೆಳೆಯುತ್ತಾ ಬಂತು. ಆದರೇನು ಇವರಿಬ್ಬರಿಗೂ ಮಧ್ಯೆ ಕೀಳುಜಾತಿಯೆಂಬ ಭೂತವು ನಿಂತಿದೆಯಲ್ಲ. ಅದನ್ನು ಓಡಿಸುವ ಬಗೆಯಾದರೂ ಹೇಗೆ. ಶ್ರೀಪತಿರಾಯರಿಗೆ ಮಗನ ನಡವಳಿಕೆಗಳು ತಿಳಿದಿದ್ದಿಲ್ಲ ವೆಂತಲ್ಲ. ಆದರೆ ಅದೇಕೋ ಸುಮ್ಮನಿದ್ದರು. ಜನಗಳೇನು ಸುಮ್ಮನಿರುವರೇ ! ಬೇಕಾದವರು ಬೇಕಾದ ಹಾಗೆ ಆಡಿಕೊಂಡರು. ಅದು ಬರುಬರುತ್ತಾ ರಾಮುವಿನ ತಾಯಿಯಾದ ಲಕ್ಷ್ಮೀಬಾಯಿ ಯವರ ಕಿವಿಗೂ ಬಿತ್ತು. ಆಕೆಯು ಸಹಿಸಲಾರದೆ ಗಂಡನಿಗೆ ಹೇಳಿದರು. ಇಬ್ಬರೂ ಸೇರಿ ಅವರಿಬ್ಬರನ್ನೂ ಹೇಗಾದರೂ ಮಾಡಿ ಅಗಲಿಸಬೇಕೆಂದು ಯೋಚಿಸಿಕೊಂಡರು. ಶ್ರೀಪತಿರಾಯರು ಮಗನನ್ನು ಕರೆದು ಮದುವೆಯ ಪ್ರಸ್ತಾಪಮಾಡಿದರು. ರಾಮುವು ತನಗೊಪ್ಪಿದವರನ್ನು ತಂದು ಮದುವೆ ಮಾಡುವ ಹಾಗಿದ್ದರೆ ಮಾಡಿ ಇಲ್ಲದಿದ್ದರೆ ಬಿಡಿ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿಬಿಟ್ಟ.

ನಿನಗಿಷ್ಟ ಬಂದವಳನ್ನು ಮದುವೆಯಾಗು. ಅದು ನಮಗೂ ಸಂತೋಷ - ನಿನಗೂ ಸಂತೋಷ. ಆದರೆ ನಮ್ಮ ಗೌರವಕ್ಕೆ ಕುಂದು ಬರದಿದ್ದರೆ ಸರಿ.

ರಾಮುವು ಸ್ವಲ್ಪ ಭಯದಿಂದಲೇ ಧೈರ್ಯಮಾಡಿ ಚಿನ್ನಳನ್ನು ಮದುವೆಯಾಗುವೆನೆಂದು ಹೇಳಿಯೇ ಬಿಟ್ಟ. ಮೈ ಜುಂ ಎನ್ನುತ್ತಿತ್ತು ಭಯದ ಭರದಲ್ಲಿ ಅವನಿಗೆ.

ಏನು? ಶೂದ್ರಳನ್ನು ಮದುವೆಯಾಗಬೇಕೆ! ಚೆನ್ನಾಯಿತು. ನಮ್ಮ ಮನೆತನವು ಪಾವನವಾಯ್ತು. ನನ್ನ ಸಂಶಯವು ಕೊನೆಗೂ ದೃಢವೇ ಆಯಿತು. ಮುಠ್ಠಾಳ! ಇನ್ನು ಮುಂದೆ ಇಂಥಾ ಮಾತನ್ನು ನನ್ನ ಮುಂದೆ ಆಡುವೆಯಾದರೆ ಮನೆಯಿಂದ ಓಡಿಸಿಬಿಡುತ್ತೇನೆ. ಏನೋ ಒಬ್ಬನೇ ಮಗನೆಂತ ಬಹಳ ಮುದ್ದಿನಿಂದ ಸಾಕಿದೆವು. ನಮ್ಮ ವಂಶವನ್ನು ಉದ್ಧಾರ ಮಾಡುವೆಯೆಂದು ನಂಬಿದ್ದೆವು. ಎಲ್ಲಾ ಹಾಳಾಯ್ತು ಎಂದು ಕೋಪದಿಂದ ನುಡಿದರು.

ಅಪ್ಪಾ! ಯಾರ ವಂಶವೂ ಕಳಂಕವಾಗುವುದಿಲ್ಲ. ಇಬ್ಬರ ಪ್ರೇಮವು ಎಲ್ಲಿ ಸೇರುವುದೋ ಅದಲ್ಲವೇ ಮದುವೆ. ಮದುವೆಯೆಂದರೆ ಇಬ್ಬರು ಪ್ರೇಮಿಗಳನ್ನು ಬಂಧಿಸುವ ಒಂದು ಹಗ್ಗ ಎಂದು ಹೆದರದೆ ಹೇಳಿದ. ಇದೆಲ್ಲವನ್ನು ಮೊದಲೇ ನಿರ್ಧರಿಸಿ ಕೊಂಡಿದ್ದ ರಾಮು.

ಸಾಕು, ಬಾಯಿಮುಚ್ಚು, ಕಲಿತಿದ್ದೆಲ್ಲಾ ಹರಟಬೇಡ. ಚಿಕ್ಕಂದಿನಿಂದ ಸಾಕಿ ಸಲಹಿದ್ದಕ್ಕೆ ಈಗ ಮುಖಕ್ಕೆ ಮಸಿ ಬಳಿಯಬೇಕೆಂದಿರುವೆ. ಇನ್ನು ಮುಂದೆ ನೀನು ಚಿನ್ನಳೊಡನೆ ಸೇರಿದ್ದೇ ಆದರೆ ಮುಂದೆ ನಿನಗೆ ತೊಂದರೆಯಾದೀತು ಎಂದು ಹೇಳಿ ಪೇಟೆಯಲ್ಲಿ ಕೆಲಸವಿದ್ದುದರಿಂದ ಪೇಟೆಗೆ ಹೊರಟುಹೋದರು.

ರಾಮುವಿಗೆ ಬಹಳ ಸೇಚಾಟಕ್ಕೆ ಬಂತು. ಏನಾದರಾಗಲಿ ಚಿನ್ನಳನ್ನೇ ಮದುವೆಯಾಗಬೇಕು ಇಲ್ಲದಿದ್ದರೆ ಬ್ರಹ್ಮಚಾರಿಯಾಗಿಯೇ ಇರಬೇಕು ಎಂದು ನಿರ್ಧರಿಸಿದ. ರಾಯರಿಗೆ ಮಗನ ದೃಢಮನಸ್ಸು ಗೊತ್ತು. ಅವನು ಹಿಡಿದ ಕೆಲಸವನ್ನು ಮಾಡುವವರೆಗೂ ಬಿಡುತ್ತಿದ್ದಿಲ್ಲವೆಂದು ರಾಯರಿಗೆ ಚೆನ್ನಾಗಿ ಗೊತ್ತು. ಆದ್ದರಿಂದ ರಾಯರು ಅದಕ್ಕೂ ಒಂದು ಉಪಾಯವನ್ನು ಹುಡುಕಿ ಇಬ್ಬರನ್ನೂ ಅಗಲಿಸುವ ಯೋಚನೆ ಮಾಡಿದ್ದರು.

೩

ಅಂದು ರಾಯರ ಮನೆಯಲ್ಲಿ ವಿಜಯದಶಮಿ ಹಬ್ಬ. ನವರಾತ್ರಿಯೆಂದರೆ ರಾಯರ ಮನೆಯಲ್ಲಿ ಬಹಳ ಸಂಭ್ರಮ. ರಾಜರುಗಳು ಎಷ್ಟು ಸಂಭ್ರಮದಿಂದ ದಿಗ್ವಿಜಯಕ್ಕೆ ಹೊರಡುವರೋ ಅದಕ್ಕಿಂತಲೂ ಮಿಗಿಲಾದ ಸಂಭ್ರಮ ರಾಯರಿಗೂ ಅವರ ಪತ್ನಿ ಲಕ್ಷ್ಮಿಬಾಯಿಯವರಿಗೂ. ಮನೆಯಲ್ಲಿ ಬೇಕು ಬೇಕಾದ ಹಾಗೆ ಭಕ್ಷ್ಯಭೋಜ್ಯಗಳು ತಯಾರಾಗಿನೆ. ಹೊಸದರಲ್ಲಿ ಮಗಳು ಗಂಡನ ಮನೆಯಿಂದ ತೌರೂರಿಗೆ ಬಂದರೆ ಎಷ್ಟು ಸಂತೋಷವೋ ಅಷ್ಟು ಸಂತೋಷ ಸಂಭ್ರಮಗಳು ತುಂಬಿತ್ತು. ರಾಮುವು ಆಗತಾನೇ ಮನೆಯ ಹಿಂದಿನ ತೋಟದಲ್ಲಿ ಚಿನ್ನಳೊಡನೆ ಸರಸಸಲ್ಲಾಪಗಳನ್ನಾಡಿಕೊಂಡು ಮನೆಗೆ ಬಂದಿದ್ದಾನೆ. ಎಲ್ಲರೂ ಜೊತೆಯಲ್ಲಿಯೇ ಊಟಮಾಡಿದರು. ಆಗಲೇ ಒಂದು ಘಂಟೆಯಾಗಿತ್ತು. ಎಲ್ಲರ ಊಟವಾದ ಮೇಲೆ ಮನೆಯ ಒಕ್ಕಲಗಿತ್ತಿಗೆ ಅಲ್ಲಿಯೇ ಊಟಕ್ಕಿಟ್ಟು, ಚಿನ್ನಮ್ಮನಿಗೆ ಅವರ ತಾಯಿಯ ಕೈಲಿ ಸ್ವಲ್ಪ ಭಕ್ಷ್ಯಗಳನ್ನು ಕಳುಹಿಸಿಕೊಟ್ಟರು.

ಇದನ್ನು ಕಂಡ ರಾಮುವಿಗೆ ಬಹಳ ಸಂತೋಷವಾಯಿತು. ಚಿನ್ನಳೊಡನೆ ಬೇರೆ ಊರಿಗೆ ಹೋಗಿ ಹೇಗೆ ಸಂಸಾರಮಾಡಬೇಕೆಂಬುದನ್ನು ಕನಸನ್ನು ಕಾಣುತ್ತಿದ್ದಾನೆ. ಪಾಪ! ಅವನಿಗೇನುಗೊತ್ತು. "ತಾನೊಂದು ನೆನೆದರೆ ದೈವವು ಬೇರೊಂದು ಬಗೆವುದು" ಎಂದು.

ಇದ್ದಕ್ಕಿದ್ದಹಾಗೆಯೇ ಚಿನ್ನಳ ತಾಯಿಯು ಕೂಗಿಡುತ್ತ ರಾಯರ ಮನೆಗೆ ಓಡಿಬಂದಳು. ರಾಮುವಿಗೆ ಗಾಬರಿಯಾಯಿತು. ಏಕೆಂದು ವಿಚಾರಿಸಿದನು. ಅವಳಿಗೆ ಮಾತನಾಡುವುದಕ್ಕೆ ತ್ರಾಣವಿಲ್ಲ. ಚಿನ್ನಳು ತಮ್ಮನ್ನು ಬರಹೇಳಿದಳು ಎಂದು ರಾಮುವಿಗೆ ಹೇಳಿದಳು. ರಾಮುವಿಗೆ ಏನೂ ತೋಚಲಿಲ್ಲ. ಒಂದೇ ಓಟಕ್ಕೆ ಓಡಿದ ಚಿನ್ನಳ ಛತ್ರಿರಕ್ಕೆ. ಹೋದವನೇ ಚಿನ್ನಾ! ಚಿನ್ನಾ! ಎಂದು ಕೂಗುತ್ತಾ ಒಳಕ್ಕೆ ನುಗ್ಗಿದ.

ಸ್ವಾಮಿ, ಒಡೆಯಾ! ಬಂದಿರಾ ಎಂದು ಚಿನ್ನಳು ಕಣ್ಣಿನಲ್ಲಿ ಸುರಿಯುತ್ತಿರುವ ನೀರಿನೊಡನೆ ಬಹಳ ಕುಗ್ಗಿದ ಸ್ವರದಿಂದ ಕೇಳಿದಳು. ರಾಮುವಿಗೂ ಅಳು ಬರುವ ಹಾಗಾಯ್ತು ಚಿನ್ನಳ ಅವಸ್ಥೆಯನ್ನು ನೋಡಿ.

ಚಿನ್ನಾ! ಏನಾಗಿದೆ ಹೇಳು, ಬೆಳಿಗ್ಗೆ ನಾನೂ ನೀನೂ ಎಷ್ಟು ಹೊತ್ತು ಮಾತನಾಡಿದೆವು. ಈಗ ಏಕೆ ಹೀಗಾಯಿತು. ಬೇಗ ಹೇಳು ವೈದ್ಯರನ್ನು ಕರೆತರುತ್ತೇನೆ.

ಬೇಡ, ವೈದ್ಯರ ಸಹಾಯವೇನೂ ಬೇಕಾಗಿಲ್ಲ. ನಿಮ್ಮನ್ನು ನೋಡಬೇಕೆಂಬ ಆಸೆಯಿತ್ತು, ನೋಡಾಯ್ತು ಆಸೆಯೂ ತೀರಿತು. ಅಪ್ಪಣೆಯನ್ನು ಕೊಡಿರಿ. ಹೋಗಿಬರುವೆನು. ಅಯ್ಯೋ! ಸಂಕಟ ಪ್ರಾಣಸಂಕಟ! ಹಾ! ಸ್ವಾಮಿ! ಇನ್ನು ಬಹಳ ಹೊತ್ತು ಬದುಕಲಾರೆ. ಅಯ್ಯೋ, ತಮ್ಮನ್ನು ನೋಡುವುದಕ್ಕೂ ಆಗುವುದಿಲ್ಲ. ಕಣ್ಣುಗಳು ಕತ್ತಲೆ ಕವಿಯುತ್ತಿವೆ.

ದೇವಾ! ಸ್ವಾಮಿಾ! ಹೋಗಿ ಬರುವೆನು. ತಾವು ಬೇರೆ ಮು...ದು....ವೆ.

ರಾಮುವಿಗೆ ಇದೆಲ್ಲವೂ ಕವಿಯ ಮೇಲೆ ಬೀಳಲೇ ಇಲ್ಲ. ಅವನ ಮೈಮೇಲೆ ಪ್ರಜ್ಞೆಯೇ ಇಲ್ಲ. ಕೈಯನ್ನು ಮುಟ್ಟಿ ನೋಡಿದ, ತಣ್ಣಗಾಗಿದೆ. ಅಯ್ಯೋ! ನನ್ನ ಪ್ರೇಮ ಪುತ್ಥಳಿಯು ನನ್ನನ್ನು ಬಿಟ್ಟುಹೋದಳಲ್ಲಾ ಎಂದು ಅವಳ ಮೇಲೆ ತಲೆಯನ್ನಿರಿಸಿಕೊಂಡು ಸಣ್ಣ ಮಗುವಿನಂತೆ ಅಳಲು ಪ್ರಾರಂಭಿಸಿದ. ಅವಳ ತಾಯಿಯೂ ಅಳಲು ಪ್ರಾರಂಭಿಸಿದಳು. ರಾಮುವು ಸ್ವಲ್ಪ ಹೊತ್ತಿನಲ್ಲಿ ಸಮಾಧಾನಕ್ಕೆ ಬಂದ. ಅವಳಿಗೆ ಏನಾಗಿತ್ತೆಂದು ಅವಳ ತಾಯಿಯನ್ನು ವಿಚಾರಿಸಿದ.

ದೇವ್ರು, ತಮ್ಮ ಮನೆಯಿಂದ ಬರುವಾಗ ರಾಯರು ಸ್ವಲ್ಪ ಭಕ್ಷ್ಯಗಳನ್ನು ನನ್ನ ಹುಡುಗಿಗೋಸ್ಕರ ಕಳುಹಿಸಿದ್ದರು. ಅದು ದೇವರ ಪ್ರಸಾದವೆಂದು ಬಹಳ ಸಂತೋಷದಿಂದ ಆ ಭಕ್ಷ್ಯಗಳನ್ನು ತಿಂದುಬಿಟ್ಟಳು. ಅದೇನಾಯಿತೋ ಏನೋ ದೇವರೇ ಬಲ್ಲ. ಸ್ವಲ್ಪ ಹೊತ್ತಿನಲ್ಲಿಯೇ ಕೂಗಾಡುವುದಕ್ಕೆ ಪ್ರಾರಂಭಿಸಿದಳು. ಮೇಲಕ್ಕೆ ಏಳಲೂ ಸಹ ತ್ರಾಣವಿರಲಿಲ್ಲ. ಅವಳನ್ನು ಹಾಗೆಯೇ ಹಾಸಿಗೆಯ ಮೇಲೆ ಮಲಗಿಸಿದೆ. ಅನಂತರ ಅವಳು ಅವರನ್ನು ಕರೆತರುವಂತೆ ಹೇಳಿದಳು. "ಅವರು ಅಂದರೆ ಯಾರೆಂದು" ಕೇಳಿದೆ. "ರಾಯರ ಮಕ್ಕಳು" ಅಂದಳು. ತಕ್ಷಣ ನಿಮ್ಮ ಬಳಿಗೆ ಬಂದೆ. ಮುಂದೆ ನಡೆದ ಸಂಗತಿಗಳು ನಿಮಗೆ ತಿಳಿದೇ ಇದೆ.

ರಾಮುವು ಅಧೀರನಾದ. "ತನ್ನ ಪ್ರೇಮದ ಪುತ್ಥಳಿಯನ್ನು ತನ್ನಿಂದ ಅಗಲಿಸಬೇಕೆಂದು ತಂದೆಯು ಮಾಡಿದ ತಂತ್ರ" ಎಂದು ನಿಟ್ಟುಸಿರುಬಿಟ್ಟ. ಇದನ್ನು ನೆನೆಸಿಕೊಂಡಷ್ಟು ರಾಮುವು ಕ್ರೋಧ ಸಂತಪ್ತನಾದ. ತನ್ನ ತಂದೆತಾಯಿಯರನ್ನು ಈಗಲೇ ಕೀಳಿಬಿಡಲೇ ಎನ್ನಿಸುವಷ್ಟು ಕೋಪಬಂತು. ಹಾಗೇಯೇ ತನ್ನಷ್ಟಕ್ಕೆ ತಾನೇ ಶಾಂತಿಯನ್ನು ತಂದುಕೊಂಡು ಈ ಸಮಾಜದ ಸ್ವಾರ್ಥದೃಷ್ಟಿಗೆ ಕಳಂಕರಹಿತಳಾದ ಚಿನ್ನಳ ಬಲಿಯೇ. ಹಾ! ಹಾಳು ಈ ಜಗತ್ತೇ ದೂಷ್ಯಮಯವಾದುದು. ಜಗತ್ತಿನಲ್ಲಿ ನಿಷ್ಕಳಂಕಪ್ರೇಮಕ್ಕೆ ಸ್ಥಾನವಿಲ್ಲ - ಮಾನವಿಲ್ಲ. ಸ್ವಾರ್ಥಮಯಜಗತ್ತು! ತಾನು ತನ್ನ ಚಿನ್ನಳ ಹಾದಿಯನ್ನೇ ಹಿಡಿಯಬೇಕೆಂದುಕೊಂಡ. ಅದರಂತೆಯೇ ಚಿನ್ನಳು ತಿಂದುಳಿದಿದ್ದ ಭಕ್ಷ್ಯಗಳನ್ನು ಚಿನ್ನಳ ತಾಯಿಯು ಎಷ್ಟು ನಿಷೇಧಿಸಿದರೂ ಬಿಡದೆ ತಿಂದುಬಿಟ್ಟ. ಕೆಲವು ನಿಮಿಷಗಳಲ್ಲಿಯೇ ರಾಮುವೂ ಚಿನ್ನಳ ಹತ್ತಿರ ಮಲಗಿ, ಕೊನೆಯಬಾರಿ, ಬಾಡಿಹೋಗಿದ್ದ ಚಿನ್ನಳ ಅಧರಾಮೃತವನ್ನು ಪಾನಮಾಡಿದನು. ಮುಗಿಯಿತು. ಸಮಾಜವೆಂಬ ಸ್ವಾರ್ಥದ ವಿಷಕ್ಕೆ ಎರಡು ನಿಷ್ಕಳಂಕಪ್ರೇಮ ಪುತ್ಥಳಿಗಳು ಬಲಿಯಾಯಿತು.

ಭಾರತದಲ್ಲಿನ ಒಟ್ಟು ೭೦೮ ಸಂಸ್ಥಾನೀ ಪ್ರಜೆಗಳಿಗಾಗಿ

— ರಾಮದುರ್ಗ ಸಂಸ್ಥಾನದ —

"ಶಾಂತಿ-ಯುದ್ಧ" ಬಾಲಬೋಧೆ

ಬಿಕರಿಗೆ ಸಿದ್ಧವಾಗಿದೆ

ರಾಮದುರ್ಗ ಪ್ರಜೆಗಳ ಆಂದೋಲನದ ಸಮಗ್ರ ವೃತ್ತಾಂತ, ಕರ್ನಾಟಕದ ಸಂಸ್ಥಾನೀ ಪ್ರಜೆಗಳಿಗೆಲ್ಲ ಸ್ವಾತಂತ್ರ್ಯ ಪಡೆಯುವ ರೀತಿ-ನೀತಿಗಳನ್ನು ಕಲಿಸಿಕೊಡುತ್ತೆ.

ಸಂಸ್ಥಾನೀ ಪ್ರಜೆಗಳು ಅತ್ಯವಶ್ಯವಾಗಿ ಓದಲೇಬೇಕಾದ ಪುಸ್ತಕ

ಬೆಲೆ: ೨ ಆಣೆ ವಿ. ಪಿ. ಯಿಂದ ಕಳಿಸಲಾಗುವದಿಲ್ಲ. ಏಜಂಟರಿಗೆ ಧಾರಾಳವಾದ ಕಮಿಷನ್

ದೊರೆಯುವ ವಿಳಾಸ:—

ಭಾಗ್ಯೋದಯ ಪಂಚಾಂಗ ಕರ್ತೃ, ಗದಗ

WORLD PROSPECTS

IN 1939 & 1940 A. D.

— BY —

B. V. RAMAN

Editor, Astrological Magazine

Contains Predictions Regarding

- Trade and Finance
- Rains
- Weather
- Destiny of Nations
- International Politics and Events
- General Forecasts for all

— AND HOROSCOPE ANALYSIS OF —

Gandhi, Mussolini, Hitler, Chiang Kai Shek, Roosevelt, Stalin and other Notables

PRICE ANNAS 8 (Postage Extra)

Publishers : **RAMAN PUBLICATIONS, P.O., Malleswaram, Bangalore**

Agent : **O. V. GUPTA.** BALEPET. BANGALORE CITY

ನಿಮಗೆ ಆಕಾರ ಬೇಕೋ?

ಹಾಗಾದರೆ ಸವರ್ಣ ಚಿನ್ನಕ್ಕೆ ಸಮಾನವಾಗಿರುವ

"ಪಾರ್ಲಿಸ್"

ರೋಲ್ಡ್ ಗೋಲ್ಡ್ ಲೋಹದಿಂದ ತಯಾರಿಸಲ್ಪಟ್ಟಿರುವ

ಗ್ಲಾಸ್ ಚೈನುಗಳು, ಕೈ ಬಳೆಗಳು, ಮಣಿಮಾಲೆಗಳು, ಡಾಬುಗಳು, ಓಲೆಗಳು, ಲೋಲಕ್ಕುಗಳು, ಇನ್ನೂ ಇತರೆ ತರಹೇವಾರಿ ಒಡವೆ ವಸ್ತುಗಳು ಬಡವರಿಗೂ ಭಾಗ್ಯವಂತರಿಗೂ ತಕ್ಕಂತೆ ನಮ್ಮಲ್ಲಿ ಸದಾ ಸಿದ್ಧವಾಗಿರುತ್ತವೆ.

ಬೆಲೆ: ಗ್ಲಾಸ್ ಚೈನು 1 ಕ್ಕೆ 1—8—0

ಕೈ ಬಳೆ ಜೊತೆ 1 ಕ್ಕೆ 2—0—0

ಒಂದು ಸಲ ಪರೀಕ್ಷಿಸಿ ನೋಡಿದಲ್ಲಿ ತಮಗೇ ತಿಳಿಯುವುದು.

ಆರ್ಡರ್ ಜೊತೆಯಲ್ಲಿ ಅಡ್ವಾನ್ಸು ಹಣವನ್ನು ಶೇಕಡ 25ರಷ್ಟು ಮುಂಗಡ ಕಳುಹಿಸಬೇಕು. **ಪೋಸ್ಟೇಜು, ರೈಲ್ವೆ ಛಾರ್ಜು ಮಾಫಿ.**

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ವಿವರಗಳಿಗೆ :—

"ಪಾರ್ಲಿಸ್" ರೋಲ್ಡ್ ಗೋಲ್ಡ್ ಜ್ಯೂಯಲರಿ ಮಾರ್ಟ್,

ನಂ. 267/1, ಚಿಕ್ಕಪೇಟೆ, ಬೆಂಗಳೂರು ಸಿಟಿ.

"ಕಥಾವಳಿ" ★ ಸ್ಪರ್ಧೆ ನಂ. ೧

ಗ್ಯಾರಂಟಿಯಾದ ನಗದು ಬಹುಮಾನ ರೂ. ೨೫

ಮೊದಲನೇ ಬಹುಮಾನ ರೂ. ೧೫ **ಇತರ ಬಹುಮಾನ ರೂ. ೧೦**

ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಮೊದಲು ಸ್ಪರ್ಧೆಯ ನಿಯಮಗಳನ್ನು ಗಮನವಿಟ್ಟು ಓದಿರಿ!

1. ಸ್ಪರ್ಧೆಯ ಉತ್ತರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ: **"ಕಥಾವಳಿ" ಸ್ಪರ್ಧೆ ನಂ. ೧, ಬಳೇಪೇಟೆ, ಬೆಂಗಳೂರು ಸಿಟಿ.**

2. ಪ್ರತಿ ಉತ್ತರಕ್ಕೂ ಪ್ರವೇಶಧನ **ಎರಡಾಣೆ.** ನಾಲ್ಕು ಉತ್ತರಗಳಿಗಿಂತ ಕಡಿಮೆ ಅಂಗೀಕರಿಸುವುದಿಲ್ಲ.

3. ಉತ್ತರಗಳನ್ನು "ಕಥಾವಳಿ" ಪತ್ರಿಕೆಯಲ್ಲಿ ಪ್ರಕಟವಾದ ಕೂಪನ್‌ಗಳಲ್ಲಿಯೇ ಕಳುಹಿಸಬೇಕು. ಬರೀ ಕಾಗದದ ಮೇಲೆ ಬರೆದ ಉತ್ತರಗಳನ್ನು ನಿರಾಕರಿಸಲಾಗುವುದು.

4. ಪ್ರವೇಶಧನವನ್ನು ಮನಿಯಾರ್ಡರು ಮೂಲಕವಾಗಿಯಾಗಲೀ ಅಥವಾ ಇಂಡಿಯ್ ಪೋಸ್ಟಲ್ ಆರ್ಡರು ಮೂಲಕವಾಗಿಯಾಗಲೀ ಕಳುಹಿಸಬೇಕು. ಪೋಸ್ಟೇಜು ಸ್ಟ್ಯಾಂಪುಗಳನ್ನು ಪ್ರವೇಶಧನವನ್ನಾಗಿ ಅಂಗೀಕರಿಸುವುದಿಲ್ಲ.

5. ಮನಿಯಾರ್ಡರುಗಳನ್ನು **"ಕಥಾವಳಿ" ಸ್ಪರ್ಧೆ ನಂ. ೧, ಬಳೇಪೇಟೆ, ಬೆಂಗಳೂರು ಸಿಟಿ** ಎಂಬುದಾಗಿಯೂ, ಇಂಡಿಯ್ ಪೋಸ್ಟಲ್ ಆರ್ಡರುಗಳನ್ನು **"ಕಥಾವಳಿ" ಸ್ಪರ್ಧೆ ನಂ. ೧** ಎಂಬುದಾಗಿಯೂ ಬರೆದು, ಎಡಗಡೆ ಮೇಲ್ಭಾಗದಲ್ಲಿ ಕ್ರಾಸ್ ಮಾಡಿ ಕಳುಹಿಸಬೇಕು ಮತ್ತು ಮನಿಯಾರ್ಡರು ರಶೀದಿಯನ್ನು ಉತ್ತರಗಳ ಜೊತೆಯಲ್ಲಿ ಕಳುಹಿಸಬೇಕು.

6. ಉತ್ತರಗಳನ್ನು ಶಾಯಿಯಲ್ಲಿ ಬರೆದು ಕಳುಹಿಸಬೇಕು. ಚಿತ್ತಾದ ಉತ್ತರಗಳನ್ನೂ, ಹೊಡೆದು ಬರೆದಿರುವ ಅಥವಾ ಅಳಿಸಿ ಬರೆದಿರುವ ಉತ್ತರಗಳನ್ನೂ ಖಂಡಿತವಾಗಿ ನಿರಾಕರಿಸಲಾಗುವುದು.

7. ಮೊದಲನೇ ಬಹುಮಾನವನ್ನು ದಿ ಕೆನರಾ ಇಂಡಸ್ಟ್ರಿಯಲ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್‌ರವರಲ್ಲಿ ಮೊಹರುಮಾಡಿ ಇಟ್ಟಿರುವ ಪ್ರತಿ ಅಕ್ಷರಕ್ಕೆ ಸರಿಹೋಗತಕ್ಕ ಉತ್ತರಕ್ಕೆ ಕೊಡಲಾಗುವುದು. ಎರಡನೇ ಬಹುಮಾನವನ್ನು ಒಂದು ಮತ್ತು ಎರಡು ತಪ್ಪುಗಳುಳ್ಳ ಉತ್ತರಗಳಿಗೆ ಕೊಡಲಾಗುವುದು. ಬಹುಮಾನ ಪಡೆದವರು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಬಹುಮಾನದ ಹಣವನ್ನು ಸ್ಪರ್ಧೆಯ ಮೇನೇಜರ್‌ರವರ ಇಷ್ಟದಂತೆ ವಿಭಾಗಿಸಲಾಗುವುದು. ಈ ಸ್ಪರ್ಧೆಯಲ್ಲಿ ಒಬ್ಬರಿಗೆ ಒಂದಕ್ಕಿಂತ ಹೆಚ್ಚು ಭಾಗವನ್ನು ಕೊಡಲಾಗುವುದಿಲ್ಲ.

8. ಈ ಸ್ಪರ್ಧೆಯ ಉತ್ತರಗಳು "ಕಥಾವಳಿ" ಕಾರ್ಯಾಲಯಕ್ಕೆ **೧೯೩೮ ಅಕ್ಟೋಬರ್ ಲನೇ ತಾರೀಖು** ಒಳಗಾಗಿ ತಲುಪಬೇಕು. ಆಮೇಲೆ ಬರುವ ಉತ್ತರಗಳನ್ನು ಖಂಡಿತವಾಗಿಯೂ ನಿರಾಕರಿಸಲಾಗುವುದು.

9. ಟಪಾಲು ಮೂಲಕ ಬರುವ ಉತ್ತರಗಳು ಕಾರಣಾಂತರಗಳಿಂದ ಕಳೆದುಹೋದರೆ ಮತ್ತು ನಿಧಾನವಾಗಿ ಬಂದರೆ ಅದಕ್ಕೆ ನಾವು ಜವಾಬ್ದಾರರಲ್ಲ.

10. ಮೊಹರುಮಾಡಿ ಇಟ್ಟಿರುವ ಸರಿಯಾದ ಉತ್ತರವನ್ನೂ ಮತ್ತು ಬಹುಮಾನ ಪಡೆದವರ ಹೆಸರುಗಳನ್ನೂ **ನವಂಬರ್** ತಿಂಗಳ ಕಥಾವಳಿಯಲ್ಲಿ ಪುನರ್ವಿಮರ್ಶನಾಪತ್ರದೊಂದಿಗೆ ಪ್ರಕಟಿಸಲಾಗುವುದು.

11. ಕವರಿನ ಹಿಂದೆ ಕಳುಹಿಸಿರುವ ಉತ್ತರಗಳ ಸಂಖ್ಯೆ ಮತ್ತು ಹೆಸರನ್ನು ಮಾತ್ರ ಬರೆಯಬೇಕು.

12. ಸ್ಪರ್ಧೆಯ ವಿಚಾರವಾಗಿ ಯಾವ ಸಂಭಾಷಣೆಗಾಗಲೀ ಪತ್ರವ್ಯವಹಾರಕ್ಕಾಗಲೀ ಅವಕಾಶವಿಲ್ಲ. ಮತ್ತು ಎಲ್ಲಾ ವಿಷಯಗಳಲ್ಲೂ ಸ್ಪರ್ಧೆಯ ಮೇನೇಜರ್‌ರವರ ತೀರ್ಪೇ ಕಡೆಯ ತೀರ್ಪು.

13. ಈ ನಿಯಮಗಳಿಗೆ ಒಳಪಟ್ಟವರು ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಬೇಕು.

ಸ್ಪರ್ಧೆಗಾರರಲ್ಲಿ ಸವಿನಯ ವಿನಂತಿ

ನಾವು ಕೇವಲ ರೂ. 25/- ನ್ನು ಬಹುಮಾನವಾಗಿಟ್ಟು, ಕಥಾವಳಿ ಸ್ಪರ್ಧೆ ನಂ. ೧ ರ ಮೂಲಕ ಸ್ಪರ್ಧೆಗಳ ರಂಗಕ್ಕೆ ಅಡಿ ಇಟ್ಟಿರುತ್ತೇವೆ. ಪ್ರಾರಂಭದಲ್ಲಿಯೇ ನೂರಾರು ರೂಪಾಯಿಗಳನ್ನು ಬಹುಮಾನವಾಗಿಟ್ಟು ಅದರಿಂದ ಜಯಶೀಲರಾಗದೇ ತಮಗೆ ಆಶಾಭಂಗವನ್ನುಂಟುಮಾಡಲು ನಮಗೆ ಇಷ್ಟವಿಲ್ಲ. ನಾವು ಇಟ್ಟಿರುವ ಬಹುಮಾನವು ಎಷ್ಟೇ ಸ್ವಲ್ಪವಾದರೂ ತಮ್ಮ ಉದಾರವಾದ ಪ್ರೋತ್ಸಾಹದಿಂದ ಶೀಘ್ರದಲ್ಲಿಯೇ ನೂರಾರು ರೂಪಾಯಿಗಳ ಬಹುಮಾನವನ್ನು ಕೊಡುವಷ್ಟು ಶಕ್ತರಾಗುವೆವೆಂದು ಮಾತ್ರ ಹೇಳಬಲ್ಲೆವು. ಕಥಾವಳಿ ಸ್ಪರ್ಧೆಗಳು ಯಾವ ನಿಷ್ಠುರಗಳನ್ನೂ ನೋಡದೆ ಮಾಡುವಷ್ಟು ಸುಲಭವಾಗಿರುವುದರಿಂದ ತಾವೆಲ್ಲರೂ ಇದರಲ್ಲಿ ಭಾಗವಹಿಸಿ, ಉದಾರವಾದ ಪ್ರೋತ್ಸಾಹವನ್ನು ನೀಡುವಿರೆಂದು ನಂಬಿದ್ದೇವೆ. —ಸಂ.

"ಕಥಾವಳಿ" ★ ಸ್ಪರ್ಧೆ ನಂ. ೧

ಸ್ಪರ್ಧೆಯನ್ನು ಹೂಡುವ ವಿಧಾನ

ಇಲ್ಲಿ ಆರು ವಾಕ್ಯಗಳನ್ನು ಕೊಟ್ಟಿದ್ದೇವೆ. ಪ್ರತಿವಾಕ್ಯದ ಎದುರಿನಲ್ಲಿ ಎರಡೆರಡು ಉತ್ತರಗಳಿವೆ. ಈ ವಾಕ್ಯಗಳನ್ನು ಚೆನ್ನಾಗಿ ಓದಿ ಇವಕ್ಕೆ ಯಾವ ಉತ್ತರ ಸರಿದೋರುವುದೋ ಅದನ್ನು ಕೆಳಗೆ ಕೊಟ್ಟಿರುವ ಕೂಪನ್ನಿನಲ್ಲಿ ಚಿತ್ತಿಲ್ಲದಂತೆ ಸರಿಯಾಗಿ ಬರೆಯಬೇಕು. ಈ ಸ್ಪರ್ಧೆಯು ಬಹಳ ಸುಲಭವಾಗಿರುವುದು. ತಾವುಗಳೆಲ್ಲರೂ ಮನಸ್ಸಿಟ್ಟು ಪ್ರಯತ್ನ ಮಾಡಿದಲ್ಲಿ ನಿಮಿಷಮಾತ್ರದಲ್ಲಿ ಮೊದಲನೇ ಬಹುಮಾನವು ನಿಮ್ಮ ಕೈಸೇರುವುದರಲ್ಲಿ ಸಂಶಯವಿಲ್ಲ.

ಎಲ್ಲಿ? ಸ್ವಲ್ಪ ಪ್ರಯತ್ನಮಾಡಿ, ನೋಡೋಣ
ಜಯಶೀಲರಾಗುವಿರೋ ಅಥವಾ.....?

	ವಾಕ್ಯಗಳು	ಸರಿದೋರುವ ಉತ್ತರಗಳು
1	ಸಹೋದ್ಯೋಗಿಗಳು "ಕಥಾವಳಿ"ಯನ್ನು ಚಿರಂಜೀವಿಯಾಗಿ ಬಾಳು ಎಂದು....	ಆಶೀರ್ವದಿಸಿದರು / ಹಾರೈಸಿದರು
2	ಕೆಲವರು ಬಿಕ್ಷುಕರಲ್ಲಿ ಇದನ್ನು ಅತಿಯಾಗಿ ತೋರಿಸುವರು	ದೀನತೆ / ಕೃಪಣತೆ
3	ಪ್ರತಾಪಸಿಂಹನು ಮಾನಸಿಂಹನ ಸಂಗಡ ಯುದ್ಧಮಾಡಬೇಕೆಂದು ಬಹಳ....	ಹವಣಿಸಿದನು / ಅವಣಿಸಿದನು
4	ಈಗಿನ ಕಾಲದವರಿಗೆ ಇಂಥಾ ಕಥೆಗಳು ರುಚಿಸುವುದಿಲ್ಲ	ಪೂರ್ವ ಕಥೆ / ಪುರಾಣ ಕಥೆ
5	ಅಲ್ಪನಿಗೆ ಐಶ್ವರ್ಯ ಬಂದರೆ ....ಯಲ್ಲಿ ಕೊಡೆ ಹಿಡಿಸಿಕೊಂಡ	ಮಧ್ಯರಾತ್ರಿ / ಅರ್ಧರಾತ್ರಿ
6	ಭೂಪಾಲಕರು ಇದನ್ನು ನವರಾತ್ರಿಯಲ್ಲಿ ಪೂಜಿಸುವರು	ಅಷ್ಟರಾಜ / ಅಷ್ಟಪತಿ

ಇಲ್ಲಿ ಕತ್ತರಿಸಿ

ಕೂಪನ್ ನಂ. ೧

1	
2	
3	
4	
5	
6	

ಕೂಪನ್ ನಂ. ೨

1	
2	
3	
4	
5	
6	

ಕೂಪನ್ ನಂ. ೩

1	
2	
3	
4	
5	
6	

ಕೂಪನ್ ನಂ. ೪

1	
2	
3	
4	
5	
6	

ಈ ಸ್ಪರ್ಧೆಯ ನಿಯಮಗಳಿಗೆ ಒಪ್ಪಿ ಇದರಲ್ಲಿ ಭಾಗವಹಿಸಿದ್ದೇನೆ.

೧

M.O. No.....

P. O. No.....

ಹೆಸರು.....

ವಿಳಾಸ.....

ಊರು.....

ಇಲ್ಲಿ ಕತ್ತರಿಸಿ

ಇಲ್ಲಿ ಕತ್ತರಿಸಿ

ಉತ್ತರಗಳು ಸೇರಲು ಕೊನೆಯ ತಾರೀಖು **8-10-1938**

ಸ್ಪರ್ಧೆ ಬಿಡಿಸಿದವರಿಗೆ ೬೮ ಪ್ರಶಸ್ತಿಗಳನ್ನು ಕೊಡಲಾಗುವುದು

ANNOUNCING

"THE MYSORE DASARA SOUVENIR"

BEAUTIFUL SECOND ANNUAL NUMBER IN ENGLISH

TO BE PUBLISHED EARLY IN OCTOBER 1938

• THOUSANDS HAVE ALREADY

RESERVED THEIR COPIES

WHY NOT YOU ?

Only a few advertisement pages are available for Booking

Send immediately ANNAS EIGHT only by M.O., (Post free)
and be sure of your Copy

Manager :

THE MYSORE DASARA SOUVENIR

"Ramamandira" 5th. CHAMARAJAPET. BANGALORE CITY

Bangalore Agent

O. V. GUPTA, BALEPET, BANGALORE CITY

Printed by V. B. Rangamma Mur
Mr. Office, Mys.

To be Continued
in
NEXT ROLL.

END

END

END

END